ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಶಾಸ್ತ್ರ ಸಾಹಿತ್ಯ

ಎಂ. ವಿ. ಸೀತಾರಾಮಯ್ಯ

3

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

V Gayatri Devi MA

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ : ಸಂಪುಟ 3

ವಿ. ಗಾಯತ್ರಿದೇವಿ
ಎಂ.ಎ.
ರಾಷ್ಟ್ರೀಯ ವಿದ್ಯಾಲಯ
ಬೆಂಗಳೂರು.

ಶಾಸ್ತ್ರ ಸಾಹಿತ್ಯ

ಎಂ. ವಿ. ಸೀತಾರಾಮಯ್ಯ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

Shastra Sahithya by M. V. Seetharamaiah, Vol. 3 in the ten-volume series entitled "History of Kannada Literature for the Common Man". Published by the Bangalore University, Bangalore. Pp. 310 + viii, 1975

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲೆಯ ಯೋಜನೆ

ಸಂಪಾದಕರು
ಡಾ॥ ಜಿ. ಎಸ್. ಶಿವರುದ್ರಪ್ಪ
ಡಾ॥ ಎಂ. ಚಿದಾನಂದ ಮೂರ್ತಿ

ಸಂಚಾಲಕರು
ಕೆ. ಸಿ. ಶಿವಪ್ಪ

ನೆರವು
ಎ. ಶೋಭ

ಪ್ರಕಾಶಕರು :
ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ
ಬೆಂಗಳೂರು

ಬೆಲೆ : ರೂ. 4-00

ಮುನ್ನುಡಿ

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಬೆಂಗಳೂರು ವಿಶ್ವವಿದ್ಯಾಲಯವು ಸಿದ್ಧಪಡಿಸಿ ಪ್ರಕಟಿಸುತ್ತಿರುವ ಹತ್ತು ಕಿರು ಸಂಪುಟಗಳ ಒಂದು ಯೋಜನೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರೌಢವರ್ಗದ ಓದುಗರಿಗಾಗಿ ರಚಿಸುವ ಹಲವಾರು ಪ್ರಯತ್ನಗಳು ನಡೆಯುತ್ತಿರುವ ಇಂದಿನ ಪರಿಸರದಲ್ಲಿ, ಸಾಹಿತ್ಯದ ಬಗೆಗೆ ತಕ್ಕಮಟ್ಟಿನ ಆಸಕ್ತಿಯನ್ನು ರೂಢಿಸಿಕೊಂಡ ವರ್ಗದ ಓದುಗರಿಗೆ ಕನ್ನಡ ಸಾಹಿತ್ಯದ ಇತಿಹಾಸವನ್ನು ಪರಿಚಯ ಮಾಡಿಕೊಡಬೇಕಾದದ್ದು ಅತ್ಯಗತ್ಯವಾದ ಕೆಲಸವಾಗಿದೆ. ವಿಶ್ವವಿದ್ಯಾಲಯ ಉನ್ನತಮಟ್ಟದ ಶಿಕ್ಷಣ ಕೇಂದ್ರವಾದರೂ, ಅದು ತನ್ನ ಸುತ್ತಣ ಜನಸಾಮಾನ್ಯಕ್ಕೂ, ಪರಿಣತರ ಸಹಕಾರದಿಂದ ತಿಳಿವನ್ನು ವಿಸ್ತರಿಸುವ ಮತ್ತು ಒಯ್ದು ಮುಟ್ಟಿಸುವ ಜವಾಬ್ದಾರಿಯಿಂದ ಬದ್ಧವಾಗಿದೆ. 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಅಂತಹ ಜವಾಬ್ದಾರಿಯಿಂದ ಪ್ರೇರಿತವಾದ ಹಲವಾರು ಕಾರ್ಯಗಳಲ್ಲಿ ಒಂದು.

'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಈ ಯೋಜನೆಗೆ ಮುಖ್ಯ ಪ್ರೇರಕರಾದವರು ಜನ್ಮಭೂಮಿ ಪ್ರೆಸ್ ಟ್ರಸ್ಟ್‌ನ ಶ್ರೀ ಬಿ. ಎನ್. ಗುಪ್ತ ಅವರು. ಶ್ರೀ ಗುಪ್ತ ಅವರ ಬಹುಮುಖವಾದ ಕೊಡುಗೆಯನ್ನು ಕುರಿತು ನಾನು ಹೊಸದಾಗಿ ಪ್ರಶಂಸಿಸಬೇಕಾದ ಅಗತ್ಯವೇನೂ ಇಲ್ಲ. ಸಾಮಾನ್ಯ ಜನಕ್ಕೆ ಸರಳವಾದ ರೀತಿಯಲ್ಲಿ ಸಾಹಿತ್ಯ ಚರಿತ್ರೆಯನ್ನು ಹಲವಾರು ಕಿರು ಸಂಪುಟಗಳಲ್ಲಿ ಒದಗಿಸಬೇಕೆಂಬುದು ಅವರ ಬಹುದಿನದ ಅಪೇಕ್ಷೆ. ಅದನ್ನು ಅವರಿಗೆ ಮಾತು ಕೊಟ್ಟಂತೆ, ಒಂದು ವರ್ಷದ ಅವಧಿಯೊಳಗಾಗಿ ಪೂರೈಸಿಕೊಡಲು ಸಾಧ್ಯವಾದದ್ದು ನನಗೆ ತುಂಬ ಸಮಾಧಾನದ ಸಂಗತಿಯಾಗಿದೆ. ಈ ಯೋಜನೆಯ ಕನಸನ್ನು ನನಸನ್ನಾಗಿಸಲು ವಿಶ್ವವಿದ್ಯಾಲಯಕ್ಕೆ ನಿಧಿಯನ್ನು ಕೊಟ್ಟ ಶ್ರೀ ಬಿ. ಎನ್. ಗುಪ್ತ ಅವರಿಗೆ ನನ್ನ ಅನಂತ ವಂದನೆಗಳು.

ಹೀಗೆ ನಿಯಮಿತ ಅವಧಿಯೊಳಗಾಗಿ ಈ ಹತ್ತು ಕಿರು ಸಂಪುಟಗಳನ್ನು ವಿವಿಧ ಲೇಖಕರ ಸಹಕಾರದಿಂದ ಸಿದ್ಧಪಡಿಸಿಕೊಟ್ಟ ಸಂಪಾದಕರಾದ

ಡಾ॥ ಜಿ. ಎಸ್. ಶಿವರುದ್ರಪ್ಪ ಮತ್ತು ಡಾ॥ ಎಂ. ಚಿದಾನಂದ ಮೂರ್ತಿ ಅವರಿಗೆ, ಈ ಸಂಪುಟಗಳನ್ನು ಶ್ರಮವಹಿಸಿ ಬರೆದುಕೊಟ್ಟ ಲೇಖಕರಿಗೆ, ಅತ್ಯಲ್ಪ ಕಾಲದಲ್ಲಿ ಅಂದವಾಗಿ ಅಚ್ಚು ಮಾಡಿ ಪ್ರಕಟಿಸಲು ಹಗಲಿರುಳೂ ಶ್ರಮಿಸಿದ ಪ್ರಕಟಣ ವಿಭಾಗದ ಉಪನಿರ್ದೇಶಕ ಶ್ರೀ ಕೆ. ಸಿ. ಶಿವಪ್ಪನವರಿಗೆ ಮತ್ತು ವಿಶ್ವವಿದ್ಯಾಲಯದ ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ನನ್ನ ಹಾರ್ದಿಕವಾದ ಅಭಿನಂದನೆಗಳು.

ಈ ಹತ್ತು ಕಿರು ಸಂಪುಟಗಳು, ಸಾಹಿತ್ಯದ ಬಗ್ಗೆ ಅಭಿರುಚಿಯುಳ್ಳ ಸಾಮಾನ್ಯರಿಗೆ, ಕನ್ನಡ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವುದರ ಜತೆಗೆ, ತಮ್ಮ ಸಾಹಿತ್ಯ ಪರಂಪರೆಯ ಬಗೆಗೆ ಎಚ್ಚರವನ್ನೂ ಅಭಿಮಾನವನ್ನೂ ಪ್ರೇರಿಸಬಲ್ಲವೆಂದು ನಾನು ನಂಬಿದ್ದೇನೆ.

ಎಚ್. ನರಸಿಂಹಯ್ಯ
ಉಪಕುಲಪತಿ

ನವೆಂಬರ್ 26, 1975

ಸಂಪಾದಕರ ಮಾತು

ಇದು ಸಾಹಿತ್ಯಚರಿತ್ರೆಗಳ ಸುಗ್ಗಿಯ ಕಾಲ ; ಕನ್ನಡ ಸಾಹಿತ್ಯ ಸಂಪತ್ತನ್ನು ಅಳೆದು-ಸುರಿದು ಪರಿಚಯ ಮಾಡಿಕೊಡುವ ಕೆಲಸ ಎಂದಿಗಿಂತ ಮಿಗಿಲಾಗಿ ಇಂದು ನಡೆಯುತೊಡಗಿದೆ. ಕರ್ನಾಟಕದ ಏಕೀಕರಣವಾದ ಮೇಲಂತೂ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪರಿಚಯವನ್ನು ಬಹುಮುಖವಾಗಿ ಮಾಡಿಕೊಡುವ ಪ್ರಯತ್ನಗಳು ರಭಸದಿಂದ ನಡೆಯುತ್ತಿರುವುದು ಅತ್ಯಂತ ಸಹಜವೂ, ಉಚಿತವೂ, ಅಗತ್ಯವೂ ಆಗಿದೆ. ಈ ಕಾರ್ಯ ಪರಂಪರೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯವು, ಜನ್ಮಭೂಮಿ ಪ್ರೆಸ್ ಟ್ರಸ್ಟ್‌ನ ಶ್ರೀ ಬಿ. ಎನ್. ಗುಪ್ತ ಅವರ ಉದಾರವಾದ ಕೊಡುಗೆಯ ನೆರವಿನಿಂದ, ಹತ್ತು ಕಿರು ಸಂಪುಟಗಳಲ್ಲಿ ಸಿದ್ಧಪಡಿಸಿ ಪ್ರಕಟಿಸುತ್ತಿರುವ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಯೋಜನೆಯೂ ಒಂದು.

ಈ ಯೋಜನೆಯ ಹೆಸರೇ ಸೂಚಿಸುವಂತೆ, ಇದು ಸಾಮಾನ್ಯರಿಗಾಗಿ ಬರೆದ ಸಾಹಿತ್ಯ ಚರಿತ್ರೆ. ಸಾಹಿತ್ಯ ಚರಿತ್ರೆಯನ್ನು ಕುರಿತು ಇತ್ತೀಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಕೆಲಸಗಳೆಲ್ಲ ಬಹುಮಟ್ಟಿಗೆ, ವಿದ್ವಾಂಸರನ್ನೋ, ಸಾಹಿತ್ಯವನ್ನು ವಿಶೇಷವಾದ ರೀತಿಯಲ್ಲಿ ಅಧ್ಯಯನ ಮಾಡುವವರನ್ನೋ ಉದ್ದೇಶಿಸಿದವುಗಳು. ಆದರೆ ಈ ಪ್ರೌಢ ಪರಿಮಿತ ವರ್ಗದ ಆಚೆ ಇರುವ, ಸಾಹಿತ್ಯಾಸಕ್ತರಾದ ಸಾಮಾನ್ಯರಿಗೆ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಮುಟ್ಟಿಸುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲವೆಂದೇ ಹೇಳಬೇಕು. ಈ ದಿಕ್ಕಿನಲ್ಲಿ ಈಗ ಸಿದ್ಧವಾಗಿರುವ ಈ ಹತ್ತು ಕಿರು ಸಂಪುಟಗಳು ಮೊದಲ ಪ್ರಯತ್ನವೆನ್ನಬಹುದು.

ಒಂದು ಸಾವಿರ ವರ್ಷಕ್ಕೂ ಮೀರಿದ ಕನ್ನಡ ಸಾಹಿತ್ಯದ ಇತಿಹಾಸವನ್ನು ಸರಳವಾಗಿ, ನಿರ್ದುಷ್ಟವಾಗಿ ಮತ್ತು ಆಕರ್ಷಕವಾಗಿ ಸಾಮಾನ್ಯರಿಗೆ ಪರಿಚಯ ಮಾಡಿಕೊಡಬೇಕೆಂಬುದೇ ಈ ಸಂಪುಟಗಳ ಉದ್ದೇಶ. ಇಲ್ಲಿ 'ಸಾಮಾನ್ಯರು' ಎಂದರೆ, ವಿದ್ವಾಂಸರಲ್ಲದ, ಆದರೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಬಗೆಗೆ ತಕ್ಕಮಟ್ಟಿಗೆ ಆಸಕ್ತಿ-ಅಭಿರುಚಿಯುಳ್ಳ ಓದುಗರು ಎಂದು ಅರ್ಥ.

ಇಂಥವರಿಗೆ, ವಿಸ್ತಾರವಾದ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಕೊಡಬೇಕಾದರೆ ಬರವಣಿಗೆ ಮುಖ್ಯವಾಗಿ ತಿಳಿಯಾಗಿರಬೇಕು ; ವಿದ್ವತ್‌ಪ್ರಿಯವಾದ ಚರ್ಚೆಗಳನ್ನು ಬದಿಗಿರಿಸಿ, ಮುಖ್ಯ ವಿಷಯಗಳ ಸಾರಾಂಶವನ್ನು ಕೊಡಬೇಕು ; ನಿರೂಪಣೆ ವರ್ಣನಾತ್ಮಕವೂ ಕಥನಾತ್ಮಕವೂ ಆಗಿರಬೇಕು ; ಪ್ರಾತಿನಿಧಿಕವಾದ ಪ್ರಮುಖ ಕವಿಗಳನ್ನು ಕೇಂದ್ರದಲ್ಲಿರಿಸಿಕೊಂಡು ಅವರಿಗೆ ಹಿನ್ನೆಲೆಯಾದ ಯುಗಧರ್ಮದಲ್ಲಿ ಅಂದಂದಿನ ಸಾಹಿತ್ಯಕ್ಕೆ ಒದಗಿದ ಪ್ರೇರಣೆಗಳನ್ನೂ, ಅಂದಂದಿನ ಸಾಹಿತ್ಯಕ ಸಾಧನೆಗಳನ್ನೂ ಪರಿಚಯ ಮಾಡಿಕೊಡುವಂತಿರಬೇಕು ; ಬರವಣಿಗೆ ಪರಿಚಯಾತ್ಮಕವಾಗಿರಬೇಕು ಎಂದರೆ, ಅದು ತಕ್ಕಮಟ್ಟಿನ ವಿಮರ್ಶನ ಪ್ರಯತ್ನಗಳಿಂದಾಗಲಿ, ಮೌಲ್ಯಮಾಪನ ದೃಷ್ಟಿಯಿಂದಾಗಲಿ ಹೊರತಾಗಿರಬೇಕೆಂದು ಅರ್ಥವಲ್ಲ ; ಬರವಣಿಗೆ ಸರಳವಾಗಿರಬೇಕು ಎಂದರೆ ವಿಷಯವನ್ನು ತೀರಾ ಸರಳಗೊಳಿಸಬೇಕೆಂದಲ್ಲ, ಹೇಳುವ ಭಾಷೆ ಸರಳವಾಗಿರಬೇಕು. ಒಟ್ಟಿನಲ್ಲಿ ಓದುಗರಿಗೆ ಸಮಗ್ರ ಕನ್ನಡ ಸಾಹಿತ್ಯದ ತಕ್ಕಮಟ್ಟಿನ ಪರಿಚಯವಾಗುವುದರ ಜತೆಗೆ, ಕನ್ನಡ ಕವಿ-ಕೃತಿಗಳನ್ನು ಮೂಲದಲ್ಲಿಯೇ ಓದಬೇಕೆನ್ನುವ ಒಂದು ರುಚಿಯನ್ನು ಹುಟ್ಟಿಸುವಂತಿರಬೇಕು. ಈ ಕೆಲವು ಉದ್ದೇಶಗಳನ್ನು ಈ ಸಂಪುಟಗಳ ರಚನೆಯು ಹಿನ್ನೆಲೆಗೆ ಇರಿಸಿಕೊಳ್ಳಲಾಗಿದೆ. ಈ ಉದ್ದೇಶ ಎಷ್ಟರಮಟ್ಟಿಗೆ ಸಫಲವಾಗಿದೆ ಎನ್ನುವುದನ್ನು ಓದುಗರೇ ಹೇಳಬೇಕು.

ಈ ಹತ್ತು ಸಂಪುಟಗಳ ವಿಶೇಷವೆಂದರೆ, ಇಡೀ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಚಂಪೂ, ಶಾಸ್ತ್ರ ಸಾಹಿತ್ಯ, ವಚನ, ಷಟ್ಪದಿ ಹೀಗೆ ಪ್ರಮುಖವಾದ ಸಾಹಿತ್ಯ ರೂಪಗಳನ್ನು ಮೂಲಮಾನವನ್ನಾಗಿ ಮಾಡಿಕೊಂಡು ಬರೆದದ್ದು ಇದೇ ಮೊದಲು. ಮತ್ತು ಈ ಬರವಣಿಗೆ ಸಾಧ್ಯವಾದ ಮಟ್ಟಿಗೆ ಇದುವರೆಗೂ ಉಪಲಬ್ಧವಾದ ಸಾಮಗ್ರಿಯನ್ನು ಬಳಸಿಕೊಳ್ಳುವುದಲ್ಲದೆ, ಕೆಲವು ಸಂಪುಟಗಳಲ್ಲಿ ಹೊಸ ದೃಷ್ಟಿಕೋನವನ್ನೂ ಪ್ರತಿಪಾದಿಸುವಂತೆ ರಚಿತವಾಗಿದೆ. ಈ ಹತ್ತು ಕಿರು ಸಂಪುಟಗಳನ್ನು ಓದಿದ ಯಾರಿಗಾದರೂ, ಕನ್ನಡ ಸಾಹಿತ್ಯದ ಸಾಧನೆಯ ಪರಿಚಯ ತಕ್ಕಮಟ್ಟಿಗೆ ಆಗುವುದೆಂಬುದರಲ್ಲಿ ಅನುಮಾನವಿಲ್ಲ.

ಈ ಯೋಜನೆಯಲ್ಲಿ ವಿಶ್ವಾಸದಿಂದ ಸಹಕರಿಸಿದ ಎಲ್ಲರಿಗೂ ನಮ್ಮ ಅನಂತ ವಂದನೆಗಳು.

ಸಂಪಾದಕರು

ಪರಿವಿಡಿ

ಸೂಚನೆ

ಈ ಸಂಪುಟಗಳ ಒಬ್ಬೊಬ್ಬ ಲೇಖಕರೂ, ತಾವು ವಿವೇಚಿಸುವ ಸಾಹಿತ್ಯ ಪ್ರಕಾರದಲ್ಲಿ ರಚಿತವಾದ ಒಟ್ಟು ಕೃತಿಗಳ ಸಂಖ್ಯೆಯ ಬಗ್ಗೆ ಕೊಡುವ ಅಂಕಿ-ಅಂಶಗಳಲ್ಲಿ ವ್ಯತ್ಯಾಸಗಳಿರುವ ಸಂಭವವಿದೆ. ಆದುದರಿಂದ ಮೊದಲ ಸಂಪುಟದ ಅನುಬಂಧವಾಗಿ, ಶ್ರೀ ಎಸ್. ಶಿವಣ್ಣ ಅವರು ಸಿದ್ಧಪಡಿಸಿರುವ 'ಗ್ರಂಥ ಸಂಖ್ಯಾ ವಿವರಸೂಚಿ'ಯು, ಈ ಎಲ್ಲ ವ್ಯತ್ಯಾಸಗಳಿಗೆ ಒಂದು ತಿದ್ದುಪಡಿಯೂ ಮತ್ತು ಸದ್ಯಕ್ಕೆ ಅಧಿಕೃತವೂ ಆದದ್ದಾಗಿದೆ. ಓದುಗರು ದಯಮಾಡಿ ಅದನ್ನು ಗಮನಿಸಬೇಕು.

ಹಿನ್ನೆಲೆ

ಕಾವ್ಯಕವಿತ್ವ–ಶಾಸ್ತ್ರಕವಿತ್ವ–ಶಾಸ್ತ್ರಸಾಹಿತ್ಯ

'ಶಾಸ್ತ್ರ ಸಾಹಿತ್ಯ' ಎಂಬ ಸಮಾಸಪದದಲ್ಲಿ 'ಶಾಸ್ತ್ರ' ಮತ್ತು 'ಸಾಹಿತ್ಯ' ಎಂಬ ಎರಡು ಪದಗಳಿವೆ. ಈ ಗ್ರಂಥದ ಉದ್ದೇಶಕ್ಕೆ ಅನುಗುಣವಾಗಿ ಈ ಸಮಾಸಪದಕ್ಕೆ ಅರ್ಥಮಾಡಿದರೆ, ಶಾಸ್ತ್ರ ವಿಚಾರಗಳನ್ನು ತಿಳಿಸುವ ಬರವಣಿಗೆ ಅಥವಾ ವಾಙ್ಮಯ ಅಥವಾ ಗ್ರಂಥರಾಶಿ ಎಂದು ಅರ್ಥಮಾಡಬೇಕಾಗುತ್ತದೆ.

ಆದರೆ, ನಮ್ಮ ಪ್ರಾಚೀನ ಶಾಸ್ತ್ರಕಾರರೂ ಕವಿಗಳೂ 'ಸಾಹಿತ್ಯ' ಎಂಬ ಶಬ್ದವನ್ನು 'ಕಾವ್ಯ' ಎಂಬ ಅರ್ಥದಲ್ಲಿಯೇ ಬಳಸುತ್ತ ಬಂದಿದ್ದಾರೆ. ಈಗಲೂ ಕೂಡ, ಕವಿತೆ ಕಾದಂಬರಿ ಕಥೆ ನಾಟಕ ಮುಂತಾದ ಮನೋರಂಜಕ ರಚನೆಗಳನ್ನು ಒಟ್ಟುಗೂಡಿಸಿ ಹೇಳುವಾಗ 'ಸಾಹಿತ್ಯ' ಎಂಬ ಶಬ್ದವನ್ನು ಕಾವ್ಯಾರ್ಥದಲ್ಲಿ ಬಳಸುತ್ತೇವೆ. 'ಪದ್ಯ ಕಾವ್ಯ' ವನ್ನು ಮಾತ್ರ 'ಕಾವ್ಯ' ಎಂದು ಹೇಳುತ್ತೇವೆ.

ಕನ್ನಡದ ಮೊಟ್ಟಮೊದಲಿನ ಗ್ರಂಥವಾದ ಕವಿರಾಜಮಾರ್ಗದ ಕರ್ತೃ ಶ್ರೀವಿಜಯನು ಸ್ವವಿಷಯವನ್ನು ಹೇಳಿಕೊಳ್ಳುವಾಗ – "ಉಕ್ತಿ ಕಲಾಕಲಾಪಕಂ ಉಪಾಹಿತ ಸಾಹಿತ (=ಸಾಹಿತ್ಯ) ವಿದ್ಯೆಯೊಳ್"* (3-218) ಎಂದಿದ್ದಾನೆ. ಇಲ್ಲಿ ಸಾಹಿತ್ಯವಿದ್ಯೆ ಎಂದರೆ ಕಾವ್ಯಲಕ್ಷಣ, ಕಾವ್ಯವಿದ್ಯೆ, ಕಾವ್ಯಶಾಸ್ತ್ರ ಎಂದು ಅರ್ಥಮಾಡಿಕೊಳ್ಳಬೇಕು. ಅಭಿನವ ಪಂಪನೆಂದು ಪ್ರಸಿದ್ಧನಾದ ನಾಗಚಂದ್ರನ ಬಿರುದುಗಳಲ್ಲಿ 'ಸಾಹಿತ್ಯ ವಿದ್ಯಾಧರ' ಎಂಬುದೂ ಒಂದು.

---

* ಈ ವಾಕ್ಯದ ತಾತ್ಪರ್ಯ : "ತನ್ನಲ್ಲಿರುವ ಸಾಹಿತ್ಯ ವಿದ್ಯೆಯಲ್ಲಿ ಚೆನ್ನಾಗಿ ಹೇಳುವ ವಿಧಾನಗಳನ್ನು ಬಲ್ಲವನು". ನಾನು ಬಲ್ಲಮಟ್ಟಿಗೆ, ಭಾರತೀಯ ಕಾವ್ಯಮೀಮಾಂಸೆಯಲ್ಲಿ, 'ಕಾವ್ಯ' ಎಂಬ ಅರ್ಥದಲ್ಲಿ 'ಸಾಹಿತ್ಯ' ಎಂಬ ಮಾತು ಮೊದಲಿಗೆ ಪ್ರಯೋಗವಾಗಿರುವುದು ಇಲ್ಲಿಯೆ ಎಂದು ಕಾಣುತ್ತದೆ.

ಕಾವ್ಯಲಕ್ಷಣವನ್ನು ವಿವರಿಸುವ ಅನೇಕ ಸಂಸ್ಕೃತ ಗ್ರಂಥಗಳು ಸಾಹಿತ್ಯ ಮೀಮಾಂಸಾ, ಸಾಹಿತ್ಯ ದರ್ಪಣ, ಸಾಹಿತ್ಯಸಾರ, ಸಾಹಿತ್ಯರತ್ನಾಕರ ಎಂಬ ಹೆಸರುಗಳಿಂದಲೇ ಪ್ರಸಿದ್ಧವಾಗಿವೆ.

ಆದ್ದರಿಂದ ಶಾಸ್ತ್ರ, ಸಾಹಿತ್ಯ, ಕಾವ್ಯ ಎಂಬ ಪದಗಳ ಅರ್ಥದ ಹರಹನ್ನು ವಿಚಾರಮಾಡಿ, ಶಾಸ್ತ್ರಕ್ಕೂ ಕಾವ್ಯಕ್ಕೂ ಇರುವ ಪರಸ್ಪರ ಸಂಬಂಧವನ್ನೂ ವ್ಯತ್ಯಾಸವನ್ನೂ ತಿಳಿದುಕೊಳ್ಳಬೇಕಾದದ್ದು ಅಗತ್ಯ.

ನಾವು ಬಲ್ಲಮಟ್ಟಿಗೆ ಸಂಸ್ಕೃತದ ಶಾಸ್ತ್ರ ಗ್ರಂಥಗಳೆಲ್ಲವೂ ಸಾಧಾರಣವಾಗಿ ಪದ್ಯರೂಪದಲ್ಲಿಯೇ ಇವೆ. ಬಹುಶಃ ಸಂಸ್ಕೃತದ ಮಾದರಿಯನ್ನು ಅನುಸರಿಸಿ, ಪ್ರಾಚೀನ ಕನ್ನಡ ಶಾಸ್ತ್ರ ಗ್ರಂಥಗಳು ಕೂಡ ಪದ್ಯರೂಪದಲ್ಲಿಯೇ ರಚಿತವಾಗಿವೆ. ಕಾವ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಆದರೆ ಶಾಸ್ತ್ರಗಳ ವಿಷಯ ಹಾಗಲ್ಲ. ಮುದ್ರಣ ಸೌಕರ್ಯವಿಲ್ಲದಿದ್ದ ಹಿಂದಿನ ಕಾಲದಲ್ಲಿ ಶಿಷ್ಯರು ಶಾಸ್ತ್ರಜ್ಞಾನವನ್ನು ಗುರುಮುಖದಿಂದ ಕಲಿತು, ಬಾಯಿಪಾಠಮಾಡಿ ನೆನಪಿನಲ್ಲಿ ಉಳಿಸಿಕೊಳ್ಳಬೇಕಾದ ಅಗತ್ಯವಿದ್ದಿತು. ಆದ್ದರಿಂದ ಶಾಸ್ತ್ರ ವಿಷಯಗಳನ್ನು ಕೂಡಿದಮಟ್ಟಿಗೂ ಅಡಕವಾಗಿ, ಸಂದೇಹಕ್ಕೆ ಎಡೆಯಿಲ್ಲದಂತೆ, ಬಳಸಿಲ್ಲದಂತೆ, ನೇರವಾಗಿ ಶ್ಲೋಕಗಳಲ್ಲಿ ರಚಿಸುವ ಪದ್ಧತಿಯನ್ನು ಶಾಸ್ತ್ರಕಾರರು ಅನುಸರಿಸುತ್ತ ಬಂದರು. ಕನ್ನಡದಲ್ಲಿಯೂ ಇದೇ ಪದ್ಧತಿ ನಡೆದುಬಂದಿತು.

ಕಾವ್ಯಗಳು ಗದ್ಯರೂಪದಲ್ಲಿರಬಹುದಾದರೂ, ಸಾಧಾರಣವಾಗಿ ಅವು ಪದ್ಯರೂಪದಲ್ಲಿರುವುದೇ ಹೆಚ್ಚು. 'ಕವಿ' ಎಂದರೆ ಪದ್ಯರೂಪದ ಕಾವ್ಯ ಬರೆಯುವವನು ಎಂಬ ಭಾವನೆಯೇ ಬೆಳೆದು ಬಂದಿತು. ಹೀಗಾಗಿ, ಕಾವ್ಯ ಬರೆಯುವವನೂ ಶಾಸ್ತ್ರಗ್ರಂಥ ರಚನೆ ಮಾಡುವವನೂ ಪದ್ಯರಚನೆಗೆ ಅಗತ್ಯವಾದ ಶಬ್ದಸಂಪತ್ತು, ವ್ಯಾಕರಣ, ಛಂದಸ್ಸು – ಇವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಬೇಕಾಗಿದ್ದಿತು. ಶಾಸ್ತ್ರಕಾರರು ತಾವು ಹೇಳಬೇಕಾದ ವಿಷಯಗಳನ್ನು ಆಕರ್ಷಕವಾಗಿ ಹೇಳಿದರೆ ವಿಷಯವು ಮುಂದಟ್ಟಾಗುವುದೆಂದೂ, ಆದ್ದರಿಂದ ನೆನಪಿನಲ್ಲಿ ಉಳಿಯಲು ಹೆಚ್ಚು ಅನುಕೂಲವೆಂದೂ ಎಣಿಸಿ, ಸಾಧ್ಯವಾದ ಕಡೆಗಳಲ್ಲಿ ಅಲಂಕಾರದಿಂದ ಕೂಡಿದ ಭಾಷಾಶೈಲಿಯಲ್ಲಿ ಗ್ರಂಥ ರಚನೆ ಮಾಡುತ್ತಿದ್ದರು. 'ಕವಿ' ಎಂಬ ಪದಕ್ಕೆ 'ಕಾವ್ಯ ನಿರ್ಮಾಣ ಮಾಡುವವನು' ಎಂಬ ಅರ್ಥವಲ್ಲದೆ, 'ವಿದ್ವಾಂಸ' ಎಂಬ ಅರ್ಥವೂ ಉಂಟು. ಈ

ಕಾರಣದಿಂದಲೇ, ರಾಜಶೇಖರನೆಂಬ ಆಲಂಕಾರಿಕನು ಕವಿಜನವನ್ನು ಬೇರೆಬೇರೆ ದೃಷ್ಟಿಗಳಿಂದ ವಿಂಗಡಿಸುವಲ್ಲಿ 'ಶಾಸ್ತ್ರಕವಿ' ಎಂಬ ಒಂದು ವರ್ಗವನ್ನೂ ಕಲ್ಪಿಸಿದನು. 'ಚಂದ್ರಪ್ರಭಚರಿತ' ವೆಂಬ ಕಾವ್ಯವನ್ನೂ 'ಜಾತಕತಿಲಕ' ವೆಂಬ ಜ್ಯೋತಿಷ್ಯಶಾಸ್ತ್ರದ ಗ್ರಂಥವನ್ನೂ ಬರೆದಿರುವ ಶ್ರೀಧರಾಚಾರ್ಯ ಕವಿ (1049) ಕವಿತ್ವವನ್ನು 'ಕಾವ್ಯ ಕವಿತ್ವ', 'ಶಾಸ್ತ್ರ ಕವಿತ್ವ' ಎಂದು ವಿಭಾಗಮಾಡಿ ಅವುಗಳ ಸ್ವರೂಪವನ್ನು ಸ್ಪಷ್ಟಪಡಿಸಿರುವುದನ್ನು ಈ ಸಂದರ್ಭದಲ್ಲಿ ಗಮನಿಸತಕ್ಕದ್ದಾಗಿದೆ:

ಸುಭಗ ವಚಂ ಕಾವ್ಯಕವಿ-
ತ್ವಭೂಷಣಂ ಶ್ರೀಧರಾರ್ಯರಚಿತಂ ಚಂದ್ರ-
ಪ್ರಭಚರಿತಂ ; ಶಾಸ್ತ್ರಕವಿ-
ತ್ವಭೂಷಣಂ ಧರೆಗೆ ನೆಗಳ್ದ ಜಾತಕ ತಿಲಕಂ.

ಅದಿದೆನ್ನದೆ ಜಾತಕ ತಿಲ-
ಕದೊಳರಿವುದು ಗಣಿತ ಧರ್ಮಮಂ ; ಸಕಳ ಜಗ-
ದ್ವಿದಿತಂ ಚಂದ್ರಪ್ರಭ ಚರಿತ-
ದೊಳರಿವುದು ಕಾವ್ಯ ಧರ್ಮಮಂ ಬುಧನಿವಹಂ.

[ಶ್ರೀಧರಾರ್ಯನು ರಚಿಸಿದ ಚಂದ್ರಪ್ರಭ ಚರಿತವು ಸುಂದರವಾದ ಮಾತುಗಾರಿಕೆಯಿಂದ ಹೇಳಿದ ಕಾವ್ಯ ಕವಿತ್ವಕ್ಕೆ ಒಡವೆಯಂತಿದೆ ; ಲೋಕ ಪ್ರಸಿದ್ಧವಾದ ಜಾತಕ ತಿಲಕವು ಶಾಸ್ತ್ರಕವಿತ್ವಕ್ಕೆ ಒಡವೆ. ಜಾತಕ ತಿಲಕದಲ್ಲಿ ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಎಲ್ಲ ಬಗೆಯ ಗಣಿತ ಸ್ವರೂಪವನ್ನೂ ತಿಳಿಯ ಬಹುದು ; ವಿದ್ವಾಂಸರು ಜಗತ್ಪ್ರಸಿದ್ಧವಾದ ಚಂದ್ರಪ್ರಭ ಚರಿತದಲ್ಲಿ ಕಾವ್ಯಧರ್ಮವನ್ನು ತಿಳಿಯಬಹುದು.]

ಜಾತಕ ತಿಲಕದಲ್ಲಿ ದೊರೆಯತಕ್ಕದ್ದು ಜ್ಯೋತಿಷ್ಯದ ಜ್ಞಾನ ; ಚಂದ್ರಪ್ರಭಚರಿತದಲ್ಲಿ ಕಾವ್ಯದ ರಸ. ಎರಡಕ್ಕೂ ವಿಷಯದಲ್ಲಿ, ದೊರೆಯುವ ಫಲದಲ್ಲಿ ಅಜಗಜಾಂತರದಷ್ಟು ವ್ಯತ್ಯಾಸವಿದ್ದರೂ ಎರಡೂ ಕವಿತ್ವವೆ.

ಶಾಸ್ತ್ರಗ್ರಂಥವನ್ನು ಸಾರ್ಥಕವಾಗಿ ಆಕರ್ಷಕವಾಗಿ ಪದ್ಯರೂಪದಲ್ಲಿ ಬರೆಯಬೇಕಾದರೆ ಶ್ರೀಧರಾಚಾರ್ಯನಂಥ ಸಹಜಕವಿಗಲ್ಲದೆ ಬೇರೆಯವರಿಗೆ ಸಾಧ್ಯವಾಗದು ಎಂಬ ಸಂಗತಿ ತನ್ನ 'ಜಾತಕ ತಿಲಕ'ದ ವಿಶೇಷ ಗುಣದ ಬಗೆಗೆ ಅವನು ಹೇಳಿಕೊಂಡಿರುವ ಮಾತಿನಿಂದ ತಿಳಿದುಬರುತ್ತದೆ :

ಪದ ಪೂರಣಮಂ ಅಣಂ ಪುಗಿ-
ಸದೆ, ಕುದಿದು ವೃಥಾಕ್ಷರಂಗಳಂ ಪ್ರಾಸದೊಳಿ-

ಕ್ಕದೆ, ಶಾಸ್ತ್ರದರ್ಥಮಂ ಬಿಸು-
ಡದೆ, ಪ್ರಾಕ್ಕೆಯಿಂ ಓದುವೇಳ್ಪೊಡೆ, ಆರ್ ಮೆಚ್ಚರ್ ಇದಂ.

[ಪದ್ಯದ ಪಾದಗಳನ್ನು ಭರ್ತಿ ಮಾಡುವುದಕ್ಕೆಂದೇ ಪದಗಳನ್ನು ತುಂಬದೆ, ಯೋಚನೆ ಮಾಡಿಮಾಡಿ ಪ್ರಾಸಸ್ಥಾನಗಳಲ್ಲಿ ವ್ಯರ್ಥವಾಗಿ ಅಕ್ಷರಗಳನ್ನು ಇಡದೆ, ಶಾಸ್ತ್ರದ ಅರ್ಥವನ್ನು ತೊರೆಯದೆ, 'ಪರೀಕ್ಷೆ ಮಾಡಿ ನೋಡಿ' ಎಂದು ಪ್ರತಿಜ್ಞೆ ಮಾಡಿ ಹೇಳಿದರೆ ಯಾರು ತಾನೆ ಈ ಕೃತಿಯನ್ನು ಮೆಚ್ಚುವುದಿಲ್ಲ ?]

ಪದ್ಯರೂಪದಲ್ಲಿ ರಚಿತವಾಗಿರುವ ಪ್ರಾಚೀನ ಕನ್ನಡ ಶಾಸ್ತ್ರ ಗ್ರಂಥಗಳೆಲ್ಲವೂ ಸಮರ್ಥರಾದ ಕವಿಗಳಿಂದ ರಚಿತವಾಗಿಲ್ಲದಿರಬಹುದು ; ಅವುಗಳಲ್ಲಿ ಹಲಕೆಲವಾದರೂ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ವಿದ್ವಾಂಸರಾದವರೂ ಪದ್ಯ ರಚನೆಯಲ್ಲಿ ಕೈ ಪಳಗಿದವರೂ ಆದ ಶಾಸ್ತ್ರಕಾರರಿಂದ ಒಳ್ಳೆಯ ಕಾವ್ಯ ಶೈಲಿಯಲ್ಲಿ ರಚಿತವಾಗಿವೆ. ಇಂತಹ ಮುಖ್ಯವಾದ ಆಯ್ದ ಗ್ರಂಥಗಳ ಹಾಗೂ ಅವುಗಳನ್ನು ಬರೆದವರ ಪರಿಚಯವನ್ನು ಮುಂದಿನ ಪ್ರಕರಣಗಳಲ್ಲಿ ಮಾಡಿಕೊಟ್ಟಿದೆ.

ಆದ್ದರಿಂದ, ಇಂತಹ ಶಾಸ್ತ್ರ ಗ್ರಂಥಕರ್ತರನ್ನು ಒಂದು ಮಿತವಾದ ಅರ್ಥದಲ್ಲಿ ಕವಿಗಳೆಂದು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ. ದಿವಂಗತ ಆರ್. ನರಸಿಂಹಾಚಾರ್ಯರು ಶಾಸ್ತ್ರ ಗ್ರಂಥಗಳನ್ನು ರಚಿಸಿರುವ ಎಲ್ಲ ಕೃತಿಕಾರರನ್ನೂ ತಮ್ಮ ಕವಿ ಚರಿತೆಯ ಮೂರು ಸಂಪುಟಗಳಲ್ಲಿ ಸೇರಿಸಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದು. ದಿವಂಗತ ಬಿ. ಎಂ. ಶ್ರೀಕಂಠಯ್ಯನವರು ಕೂಡ 'ಕನ್ನಡ ಕೈಪಿಡಿ'ಯ ಒಂದು ಭಾಗವಾಗಿ ತಾವು ರಚಿಸಿರುವ (ಪೂರ್ಣವಾಗಿಲ್ಲದ) ಸಾಹಿತ್ಯ ಚರಿತ್ರೆಯಲ್ಲಿ ಈ ಜಾತಿಯ ಗ್ರಂಥಗಳನ್ನೂ ಪರಿಚಯ ಮಾಡಿಕೊಡುವ ಔಚಿತ್ಯದ ಬಗೆಗೆ ಹೀಗೆ ಹೇಳಿದ್ದಾರೆ :

"...ಈ ಸಣ್ಣ ಉಪನ್ಯಾಸದಲ್ಲಿ ಕಾವ್ಯಜಾತಿಗೆ ಸೇರಿದ ಸಾರವತ್ತಾದ ಪ್ರಧಾನ ಕವಿಗಳ ಕಾವ್ಯಗಳಿಗಲ್ಲದೆ ಮಿಕ್ಕುವಕ್ಕೆ ಅವಕಾಶವಿಲ್ಲ... ಇಂಥಾ ಗ್ರಂಥಗಳಲ್ಲದೆ, ಕನ್ನಡದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಶಬ್ದಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ಕಾವ್ಯಲಕ್ಷಣ ಮುಂತಾದ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥಗಳು ಎಷ್ಟೋ ಇವೆ. ಇವು ನ್ಯಾಯವಾಗಿ ಸಾಹಿತ್ಯಕ್ಕೆ ಸೇರುವುದಿಲ್ಲವಾದರೂ, ಸಾಹಿತ್ಯಕ್ಕೆ ಮುಖ್ಯವಾದ ಅಂಗಗಳಾಗಿರುವುದರಿಂದ ಇವುಗಳಲ್ಲಿ ಪ್ರಸಿದ್ಧವಾದುವನ್ನು ಇಲ್ಲಿ ಹೇಳಬೇಕಾಗಿದೆ. ಇವಲ್ಲದೆ,

ಸಾಹಿತ್ಯಕ್ಕೆ ಸಂಬಂಧವೇ ಇಲ್ಲದೆ, ಕೇವಲ ಶಾಸ್ತ್ರ ವಿಷಯಗಳನ್ನು ಪ್ರೌಢವಾದ ಪದ್ಯಗದ್ಯ ಶೈಲಿಯಲ್ಲಿ ತಿಳಿಸುವ ಅನೇಕ ಶಾಸ್ತ್ರ ಗ್ರಂಥಗಳಿರುತ್ತವೆ,...ದಿಕ್ ಪ್ರದರ್ಶನಾರ್ಥವಾಗಿ, ಈ ಚರಿತ್ರೆಯ ಒಂದು ಭಾಗದಲ್ಲಿ, ಈ ಲಕ್ಷಣ ಗ್ರಂಥಗಳು, ಶಾಸ್ತ್ರಗ್ರಂಥಗಳು, ಶಾಸನಗಳು ಇವುಗಳ ವಿಷಯವಾಗಿ ಸ್ವಲ್ಪ ಮಟ್ಟಿಗೆ ಹೇಳಿರುತ್ತದೆ.''*

ಶಾಸ್ತ್ರಗ್ರಂಥ ಕಾವ್ಯವಲ್ಲದಿದ್ದರೂ ವಿಶಾಲವಾದ ಅರ್ಥವನ್ನು ಹೊಂದಿರುವ 'ಸಾಹಿತ್ಯ' ಎಂದು ಕರೆಯಿಸಿಕೊಳ್ಳಲು ಅರ್ಹವಾಗುತ್ತದೆ. ಇದು ಹೇಗೆಂಬುದು ವಿಚಾರಯೋಗ್ಯವಾಗಿದೆ.

ಶಾಸ್ತ್ರ-ಸಾಹಿತ್ಯಗಳ ಪರಸ್ಪರ ಸಂಬಂಧ

"ಆಹಾರ ನಿದ್ರೆ ಭಯ ಮೈಥುನ ಇವು ಪಶುಗಳಿಗೂ ಮನುಷ್ಯನಿಗೂ ಸಾಮಾನ್ಯ ಲಕ್ಷಣಗಳು; ಮನುಷ್ಯನಲ್ಲಿ ಇರುವ ಹೆಚ್ಚಿನ ಲಕ್ಷಣವೆಂದರೆ ಜ್ಞಾನ. ಜ್ಞಾನಹೀನನು ಪಶುವಿಗೆ ಸಮಾನ" ಎಂದು ತಿಳಿಸುತ್ತದೆ ಒಂದು ಪ್ರಸಿದ್ಧ ಸುಭಾಷಿತ. ಭಯವೊಂದನ್ನು ಬಿಟ್ಟರೆ ಉಳಿದ ಮೂರೂ ಇಂದ್ರಿಯ ಅಥವಾ ವಿಷಯ ಸುಖವನ್ನು ಒದಗಿಸುತ್ತವೆ. ಈ ಸುಖ ಸಾಧನೆ, ಸುಖಾನುಭವ, ಎರಡೂ ಇಂದ್ರಿಯಗಳ ಮೂಲಕವೇ ಸಾಗಬೇಕು. ಭಯವೂ ಒಂದು ವಿಧದಲ್ಲಿ ಸುಖ ಸಾಧಕವೇ: ರೋಗಭಯವಿರುವುದರಿಂದಲೇ ಆರೋಗ್ಯದ ಕಡೆಗೆ ಗಮನ; ರೋಗ ತಡೆಯುವ ಪ್ರಯತ್ನ — ಆರೋಗ್ಯ ಒಂದು ಭಾಗ್ಯ, ಸಹಜವಾದ ಸುಖಸ್ಥಿತಿ ಎಂದು ಗೊತ್ತಿರುವುದರಿಂದ. ಪಶುವಿನ ಸುಖಕ್ಕೆ ಸಮಾನವಾದ ಸುಖಕ್ಕಿಂತ ನೂರು ಮಡಿ ಮಿಗಿಲಾದ, ಬಗೆ ಬಗೆಯಾದ, ಸುಖಸಾಧನೆ – ಸಿದ್ಧಿಗಳ ಕಥೆಯೇ ಮಾನವನ ನಾಗರಿಕತೆ ಮತ್ತು ಸಂಸ್ಕೃತಿಗಳ ಚರಿತ್ರೆ ಎನ್ನಬಹುದು. ಈ ಸುಖದ ಕಲ್ಪನೆಯನ್ನು ನಮ್ಮವರು 'ಪುರುಷಾರ್ಥ' ಎಂದರು. ಅದು ನಾಲ್ಕು ಬಗೆ: ಧರ್ಮ, ಅರ್ಥ, ಕಾಮ, ಮೋಕ್ಷ. ಧರ್ಮವನ್ನು ಬಿಟ್ಟ ಅರ್ಥ (=ಪ್ರಯೋಜನಕರ ವಸ್ತುಗಳು, ದ್ರವ್ಯ) ಕಾಮಗಳು (=ಸ್ತ್ರೀಪುರುಷ ಸಂಗದ ಅಪೇಕ್ಷೆ ಮಾತ್ರವಲ್ಲದೆ,

---

*'ಕನ್ನಡ ಕೈಪಿಡಿ'ಯ ಸಾಹಿತ್ಯ ಚರಿತ್ರೆಯನ್ನು ಬಿ. ಎಂ. ಶ್ರೀ.ಯವರು ಪೂರ್ತಿಯಾಗಿ ಬರೆದಿದ್ದರೆ ಶಾಸ್ತ್ರ ವಿಭಾಗವೂ ಅದರಲ್ಲಿ ಸೇರುತ್ತಿತ್ತು. ಅವರು ಅದನ್ನು ಬರೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಅವನ್ನೂ ಒಳಗೊಂಡ, ಮಾನವ ಸಹಜವಾದ ಎಲ್ಲ ಬಗೆಯ ಇಷ್ಟಗಳು) ಐಹಿಕ ಸುಖಸಾಧಕಗಳೇ ಹೊರತು, ಮೋಕ್ಷ ಸಾಧಕಗಳಲ್ಲ; ಮೋಕ್ಷವೊಂದೇ ತುತ್ತತುದಿಯ ಪರಮ ಸುಖ. ಹಾಗೆಂದು, ಅರ್ಥ ಕಾಮಗಳು ಬಿಡತಕ್ಕವಲ್ಲ. ಧರ್ಮಕ್ಕೆ ವಿರುದ್ಧವಾಗದಂತೆ ಅರ್ಥಕಾಮಗಳ ಪ್ರಾರ್ಥನೆಯೂ ಮೋಕ್ಷ ಸಾಧಕ ವಾಗಬಲ್ಲವು. ಸತ್ಯದ ಬದುಕಿಗಾಗಿ ಹಣದ ಗಳಿಕೆ ಅಧರ್ಮವಲ್ಲ; ಕನ್ನಹಾಕಿ ಕಳವು ಮಾಡುವುದು ಅಧರ್ಮ; ಕಳ್ಳನ ಹೆಂಡತಿ ಎಂದಿದ್ದರೂ ವಿಧವೆ. ಈ ಅನುಭವ ಸತ್ಯವನ್ನು ತಿಳಿಸಲು ದೃಷ್ಟಾಂತ ಕಥೆಗಳನ್ನು ಕಟ್ಟಬಹುದು, ನಡೆದ ಸಂಗತಿಯನ್ನೇ ರಂಜಕವಾಗಿ ತಿಳಿಸಿ, ಸುಲಭ ಮಾರ್ಗದಲ್ಲಿ ಸುಖಜೀವನ ನಡಸ ಬಯಸುವ ಮನೋವೃತ್ತಿಯನ್ನು ನೇರ ನಡತೆಯ ಕಡೆಗೆ ತಿರುಗುವಂತೆ– ಸೂಚ್ಯವಾಗಿ ಪರಿಣಾಮ ಬೀರಬಹುದು; ಹಾಗೆ ನಡೆದರೆ ಸುಖ, ಹೀಗೆ ನಡೆದರೆ ದುಃಖ ಎಂದು ತಿಳಿಯಹೇಳಬಹುದು, ಕಾಂತೆಯು ಹಾಗೆ, ಕಿವಿ ಸವಿ ಯಾಗುವಂತೆ, ಹೀಗೆ ಹೇಳುವ ಕೆಲಸ ಸಾಹಿತ್ಯ ಪ್ರಪಂಚಕ್ಕೆ, ಕಾವ್ಯ ಪ್ರಪಂಚಕ್ಕೆ, ಸೇರಿದ್ದು. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ"* ಎಂದು ನೇರ ವಾಗಿಯೇ ನೀತಿ ಹೇಳಬಹುದು. ಇದು ಶಾಸ್ತ್ರದ ಮಾರ್ಗ; ವಿಧಿಸುವ ಬಗೆ: ಒಡೆಯ ಆಳಿಗೆ ಹೇಳುವ, ದೊರೆ ಪ್ರಜೆಗಳಿಗೆ ಶಾಸನ ಮಾಡುವ, ಅಧಿಕಾರದ ವಿಧಾನ. ಹೀಗೆ, ಶಾಸ್ತ್ರ ಗ್ರಂಥಗಳ ಗುರಿಯೂ ಸಾಹಿತ್ಯ ಗ್ರಂಥಗಳ ಗುರಿಯೂ ಒಂದೇ; ವಿಧಾನ ಮಾತ್ರ ಬೇರೆ ಬೇರೆ. ಈ ವಿಷಯ ವನ್ನು ಶಾಸ್ತ್ರದ ಪರಿಭಾಷೆಯಲ್ಲಿ ಹೀಗೆ ತಿಳಿಸಬಹುದು:

"ಆಲಂಕಾರಿಕರು ಗ್ರಂಥರಾಶಿಯನ್ನು ಉಪದೇಶ ದೃಷ್ಟಿಯಿಂದ ಪ್ರಭು ಸಮ್ಮಿತ ಮಿತ್ರಸಮ್ಮಿತ ಕಾಂತಾಸಮ್ಮಿತ ಎಂದು ಮೂರು ಭಾಗ ಮಾಡುವರು. 'ಹೀಗೆ ಮಾಡಬೇಕು, ಹೀಗೆ ಮಾಡಕೂಡದು' ಎಂದು ಕರ್ತವ್ಯಾಕರ್ತವ್ಯ ಗಳನ್ನು* ವಿಧಿಸುವ ಮತ್ತು ನಿಷೇಧಿಸುವ ವೇದಶಾಸ್ತ್ರಾದಿಗಳು 'ಪ್ರಭು ಸಮ್ಮಿತ'. ಅವು ನಮಗೆ ಪ್ರಿಯವಾಗಿರಲಿ ಇಲ್ಲದಿರಲಿ, ರಾಜಶಾಸನದಂತೆ. ಅವುಗಳನ್ನು ಅನುಸರಿಸಿ ನಡೆಯಬೇಕು. ಇವು 'ಶಬ್ದಪ್ರಧಾನ'. ನಮ್ಮ

---

* 'ಸತ್ಯಂ ವದ, ಧರ್ಮಂ ಚರ' ಎಂದು ವಿಧಿಸುವ ಶಾಸ್ತ್ರವಾಕ್ಯದಂತೆಯೇ ಇದ್ದರೂ ಬಸವಣ್ಣನವರ ವಚನದಲ್ಲಿ ಪದಬಂಧದ ಅಂದವಿದೆ; ಇದು ಕಾವ್ಯದ ಒಂದು 'ಗುಣ'.

ಕರ್ತವ್ಯಾಕರ್ತವ್ಯಗಳಿಗೆ ಸಾಧಕಬಾಧಕಗಳು ಕಂಡುಬರುವಂಥ ಕಥೆಗಳನ್ನು ರಸಪ್ರಾಧಾನ್ಯವಿಲ್ಲದೆ ಹೇಳಿ ನೀತಿಯನ್ನು ಸೂಚಿಸುವ ಪುರಾಣಾದಿಗಳು 'ಮಿತ್ರ ಸಮ್ಮಿತ'. ಇವು 'ಅರ್ಥಪ್ರಧಾನ'. ಮನಸ್ಸಿಗೆ ಸಂತೋಷವಾಗುವ ವಿಷಯಗಳನ್ನು ರಮಣೀಯವಾದ ರೀತಿಯಲ್ಲಿ ಹೇಳುತ್ತ ನಮ್ಮ ಮನಸ್ಸನ್ನು ಸೆಳೆದುಕೊಂಡು ಕರ್ತವ್ಯಾಕರ್ತವ್ಯಗಳ ಸತ್ಫಲ ದುಷ್ಫಲಗಳು ನಮ್ಮ ನಮ್ಮ ಮನಸ್ಸಿಗೇ ತಾವಾಗಿಯೇ ಅಂಟುವಂತೆ ಪ್ರತಿಪಾದಿಸುವ ಕಾವ್ಯ ನಾಟಕಾದಿಗಳು 'ಕಾಂತಾಸಮ್ಮಿತ'. ಇವು ರಸಪ್ರಧಾನ".[1]

ಈ ಕಾರಣದಿಂದ, ನಮ್ಮ ಪ್ರಾಚೀನ ಲಾಕ್ಷಣಿಕರು ವೇದ ಪುರಾಣ ಕಾವ್ಯಗಳೆಲ್ಲವನ್ನೂ 'ಸಾಹಿತ್ಯ' ಎಂದೇ ಗೊತ್ತುಮಾಡಿದರು. ಈ ಸಂದರ್ಭಕ್ಕೆ ಹೊಂದುವಂತೆ ಸಾಹಿತ್ಯ ಶಬ್ದದ ನಿರ್ವಚನವನ್ನು* ವಿದ್ವಾಂಸರು ಹೀಗೆ ವಿವರಿಸಿದ್ದಾರೆ :

"ಗ್ರಂಥಗಳಲ್ಲಿ – ವರ್ಣನೆಗಾಗಲಿ, ವಿವರಣೆಗಾಗಲಿ, ಪ್ರಾಸ್ತವಿಕವಾಗಿ ಯಾಗಲಿ, ದೃಷ್ಟಾಂತಕ್ಕಾಗಿಯಾಗಲಿ, ಮುಖ್ಯ ವಿಷಯದ ಉಪಾಂಗವಾಗಿ ಯಾಗಲಿ, ಉಪಕರಣವಾಗಿಯಾಗಲಿ,–ಎಲ್ಲ ವಿದ್ಯೆ, ಎಲ್ಲ ಕಲೆ, ಎಲ್ಲ ಶಾಸ್ತ್ರಗಳ ಅಂಶಗಳೂ ಸೇರಿರುವುದಾದುದರಿಂದ ಅವುಗಳೆಲ್ಲವುಗಳ 'ಸಹಿತತ್ವ'ವಿರು ವುದರಿಂದ ಗ್ರಂಥರಾಶಿಗೆ ಸಾಹಿತ್ಯವೆಂಬ ಹೆಸರು ರೂಢಿಯಾಗಿದೆ. ಅಥವಾ ಜಗತ್ತಿನ ನಾನಾ ವಸ್ತು, ನಾನಾ ಜೀವ, ನಾನಾ ವ್ಯಾಪಾರಗಳ ಛಾಯಾನು ಕರಣೆಗಳೂ ವರ್ಣನೆ ವಿವರಣೆಗಳೂ ಗ್ರಂಥಗಳಲ್ಲಿ ಒಟ್ಟುಗೂಡಿರುವುದರಿಂದ– 'ಸಹಿತ'ವಾಗಿರುವುದರಿಂದ – ಕಾವ್ಯ ಸಾಮಾನ್ಯಕ್ಕೆ ಸಾಹಿತ್ಯವೆಂಬ ಹೆಸರು ಹೀಗೆಯೂ ಅನ್ವರ್ಥವಾಗಿದೆ. ನಾನಾ ವಿಧದ ಗ್ರಂಥರಾಶಿಯನ್ನು ವಾಙ್ಮಯ‡ ವೆಂದೂ ಕರೆಯುವುದುಂಟು."[2]

ಪ್ರಾಚೀನ ಲಕ್ಷಣಕಾರರು ಉಪದೇಶ ದೃಷ್ಟಿಯಿಂದ ಗ್ರಂಥರಾಶಿಯನ್ನು ಮೂರು ವಿಭಾಗಗಳಾಗಿ ಮಾಡಿರುವುದನ್ನು ಮೇಲೆ ವಿವರಿಸಿದೆ. ಗ್ರಂಥ ವಿಷಯ ಶಾಸ್ತ್ರವಾಗಲಿ ರಸವತ್ತಾದುದಾಗಿರಲಿ, ಅದು ಉಪದೇಶವನ್ನು

---

* ಕರ್ತವ್ಯಾಕರ್ತವ್ಯ (ಕರ್ತವ್ಯ + ಅಕರ್ತವ್ಯ) = ಮಾಡಬೇಕಾದದ್ದು ಮತ್ತು ಮಾಡ ಬಾರದ್ದು. ನಿರ್ವಚನ = ಅರ್ಥವಿವರಣೆ.

‡ ವಾಙ್ಮಯ : ವಾಕ್ + ಮಯ, ಎಂದರೆ ಮಾತುಗಳಿಂದ ಕೂಡಿರುವುದು, ತುಂಬಿರುವುದು.

ಮಾಡಲೇಬೇಕೆಂದು ಎಲ್ಲ ಜಾತಿಯ ಗ್ರಂಥಕ್ಕೂ ಅನ್ವಯಿಸುವುದು ತಪ್ಪಾಗುತ್ತದೆ. ಈ ಉಪದೇಶದ ಗುರಿ ಮಾನವನ ಹಿತಸಾಧನೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡರೆ, ನೇರವಾಗಿ ಉಪದೇಶ ಮಾಡದಿದ್ದರೂ ಎಲ್ಲ ಸದ್ಗ್ರಂಥಗಳೂ ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ (ಎಂದರೆ ಗೊತ್ತಾಗದಹಾಗೆ) ಮಾನವ ಹಿತಸಾಧನೆಗೆ ಸಾಧಕಗಳಾಗಬಲ್ಲವು ಎಂಬುದನ್ನು ಒಪ್ಪಬೇಕಾಗುತ್ತದೆ. ಕೆಲವು ಉದಾಹರಣೆಗಳಿಂದ ಈ ದೃಷ್ಟಿಯನ್ನು ಪರಿಶೀಲಿಸಬೇಕಾದದ್ದು ಅಗತ್ಯ. ವ್ಯಾಕರಣದಿಂದ ಏನು ಪ್ರಯೋಜನ? "ಭಜಗೋವಿಂದಂ ಭಜಗೋವಿಂದಂ ಭಜಗೋವಿಂದಂ ಮೂಢಮತೇ! ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಙ್ ಕರಣೇ" *ಎಂದು ಹೇಳಿ, ವ್ಯಾಕರಣ ಶಾಸ್ತ್ರದಿಂದ ಮೋಕ್ಷ ಪ್ರಾಪ್ತಿಯಾಗದೆಂದು ಶಂಕರಾಚಾರ್ಯರು ಸಾರಿದ್ದಾರೆ. ವೇದಶಾಸ್ತ್ರಗಳ ಮುಖ್ಯ ಗುರಿಯನ್ನು ಮರೆತು, ಅವುಗಳ ಶುಷ್ಕ ಶಬ್ದ ಪಾಂಡಿತ್ಯದ ಕಡೆಗೆ ಲಕ್ಷ್ಯವಿರಿಸುತ್ತಿದ್ದ ವೇದಾಭ್ಯಾಸಜಡರನ್ನು ಕುರಿತು ಹೇಳಿದ ಸಂದರ್ಭದಲ್ಲಿ ಶಂಕರಾಚಾರ್ಯರ ಮಾತು ಯುಕ್ತವಾಗಿಯೆ ಇದೆ. ಸಂಸ್ಕೃತ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯವಿಲ್ಲದೆ ಅವರು ರಚಿಸಿರುವ 'ಬ್ರಹ್ಮಸೂತ್ರಗಳ ಭಾಷ್ಯ'ವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಹಳಗನ್ನಡ ವ್ಯಾಕರಣ ಮರ್ಯಾದೆಯನ್ನು ಅಭ್ಯಾಸ ಮಾಡದೆ ಜೈನ ಧರ್ಮದ ಸಾರಸತ್ವವನ್ನು ಹಿಡಿದಿಟ್ಟಿರುವ ಪಂಪರನ್ನರ 'ಆದಿಪುರಾಣ' 'ಅಜಿತಪುರಾಣ'ಗಳನ್ನು ಅರ್ಥಮಾಡಿಕೊಳ್ಳುವುದು ಅಷ್ಟೇ ಕಷ್ಟ. ಹೀಗಿರುವುದರಿಂದ, ಪ್ರಸಿದ್ಧ ಕನ್ನಡ ವ್ಯಾಕರಣಕರ್ತನಾದ ಕೇಶಿರಾಜನು :

ವ್ಯಾಕರಣದಿಂದೆ ಪದಂ, ಆ
ವ್ಯಾಕರಣದ ಪದದಿಂ ಅರ್ಥಂ, ಅರ್ಥದೆ ತತ್ವಾ
ಲೋಕಂ, ತತ್ವಾಲೋಕದಿಂ
ಆಕಾಂಕ್ಷಿಪ ಮುಕ್ತಿಯಕ್ಕುಂ–ಇದೆ ಬುಧರ್ಗೆ ಫಲಂ. (ಪೀಠಿಕೆ–10)

[ವ್ಯಾಕರಣದಿಂದ ಪದಗಳ ತಿಳಿವಳಿಕೆ; ಪದಗಳ ತಿಳಿವಳಿಕೆಯಿಂದ ಅರ್ಥಜ್ಞಾನ; ಅರ್ಥಜ್ಞಾನದಿಂದ ತತ್ವವಿಚಾರ; ತತ್ವಜ್ಞಾನದಿಂದ ಮೋಕ್ಷ; ಆದ್ದರಿಂದ ವಿದ್ವಾಂಸರಿಗೆ ವ್ಯಾಕರಣ ಮೋಕ್ಷ ಫಲವನ್ನು ಕೊಡಬಲ್ಲದು.]

---

* "ಮಂದ ಬುದ್ಧಿಯುಳ್ಳ ಮಾನವನೇ, ಮರಣ ಕಾಲವು ಹತ್ತಿರವಾಗಿರುವಾಗ 'ಡುಕೃಞ್ ಕರಣೇ' ಎಂಬ ವ್ಯಾಕರಣ ಶಾಸ್ತ್ರದ ಸೂತ್ರವನ್ನು ಪಠಿಸಿದರೆ ಅದು ನಿನ್ನನ್ನು ರಕ್ಷಿಸುವುದಿಲ್ಲ. ಆದ್ದರಿಂದ ಗೋವಿಂದನನ್ನು ಭಜಿಸು, ಗೋವಿಂದನನ್ನು ಭಜಿಸು".

ವೈದ್ಯಶಾಸ್ತ್ರವನ್ನು ನಮ್ಮವರು 'ಆಯುರ್ವೇದ' ಎಂದು ಕರೆದಿದ್ದಾರೆ, ನಾವು ಆರೋಗ್ಯದಿಂದರಬೇಕಾದರೆ ಔಷಧೋಪಚಾರಗಳ ಅಗತ್ಯದ ವಿಷಯ ವಾಗಿ ಇಲ್ಲಿ ವಿವರಣೆ ಅನಾವಶ್ಯಕ. ಔಷಧೋಪಚಾರಕ್ಕಿಂತ ಮುಖ್ಯವಾದದ್ದು ನಮ್ಮ ನಿತ್ಯದ ಆಹಾರ. ಇದಕ್ಕೆ ಸಂಬಂಧಪಟ್ಟ ಶಾಸ್ತ್ರಗಳು-ಈಗಿನ ಕಾಲದ ಕೃಷಿವಿಜ್ಞಾನ (Agricultural Science), ಆಹಾರ ವಿಜ್ಞಾನ (Dietetics), ಪ್ರಾಚೀನಪದ್ಧತಿಯ ಮತ್ತು ಇಂದಿನ ಪದ್ಧತಿಯ ಪಾಕಶಾಸ್ತ್ರ, ಮುಂತಾದುವು. ನಮ್ಮ ದೇಹ ಗಟ್ಟಿಮುಟ್ಟಾಗಿದ್ದು ಸ್ವಸ್ಥವಾಗಿಲ್ಲದಿದ್ದರೆ, ಮೋಕ್ಷಸಂಪಾದ ನೆಯ ಮಾತು ದೂರವೇ ಉಳಿಯಿತು. ಕಾಳಿದಾಸನ ಉಕ್ತಿ ಶರೀರಸ್ವಾಸ್ಥ್ಯದ ಮಹತ್ವವನ್ನು ಚೆನ್ನಾಗಿ ಕನ್ನಡಿಸುತ್ತದೆ: "ಶರೀರಂ ಆದ್ಯಂ ಖಲು ಧರ್ಮ ಸಾಧನಂ"—"ಧರ್ಮವನ್ನು ಗಳಿಸಬೇಕೆನ್ನುವವರು ದೇಹ ಸೌಖ್ಯಕ್ಕೆ ಮೊತ್ತ ಮೊದಲು ಗಮನಕೊಡಬೇಕು".

ಈ ರೀತಿಯಲ್ಲಿ, ಅದು ಪ್ರಾಚೀನಶಾಸ್ತ್ರವಾಗಲಿ ಆಧುನಿಕ ಶಾಸ್ತ್ರವಾಗಲಿ, ಅದು ನಮಗೆ ಒದಗಿಸುವ ಜ್ಞಾನಭಂಡಾರದಿಂದ ಮನುಷ್ಯನ ಇಹಲೋಕದ ಜೀವನವು ಸುಖಮಯವಾಗುವುದರಲ್ಲಿ ಸಂದೇಹವಿಲ್ಲ. ಒಟ್ಟಿನಮೇಲೆ, ಇಹ-ಪರ ಸೌಖ್ಯಕ್ಕೆ ಸಾಧನವಾದ ಸರ್ವವಿಷಯಗಳನ್ನೂ ಒಳಗೊಂಡು, ಅವುಗಳನ್ನು ತಿಳಿಯ ಹೇಳುವ-ಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ-ಚತುರ್ವಿಧ ಪುರುಷಾರ್ಥ ಬೋಧಕವಾದ-ಜ್ಞಾನವನ್ನು ನೀಡುವ ಶಾಸ್ತ್ರಗ್ರಂಥಗಳನ್ನು 'ಸಾಹಿತ್ಯ' ಎಂದು ಕರೆಯಲು ಅಡ್ಡಿಯಿಲ್ಲ.

'ಸಾಹಿತ್ಯ' ಶಬ್ದಕ್ಕೆ ಇನ್ನೊಂದು ರೀತಿಯಲ್ಲೂ ಅರ್ಥವನ್ನು ಹೇಳ ಲಾಗುತ್ತದೆ: "ಹಿತೇನ ಯುಕ್ತಂ-ಸಹಿತಂ, ತಸ್ಯ ಭಾವಃ ಸಾಹಿತ್ಯಂ"-ಎಂದರೆ, ಮಾನವನಿಗೆ ಯಾವುದು ಹಿತವೋ ಅಂಥ ಹಿತದಿಂದ ಕೂಡಿರುವುದೇ ಸಾಹಿತ್ಯ. ಈ ದೃಷ್ಟಿಯಿಂದ ಶಾಸ್ತ್ರಗ್ರಂಥಗಳು ಹೇಗೆ ಹಿತಕಾರಿಗಳು ಎಂಬು ದನ್ನು ಈಗಾಗಲೇ ವಿವೇಚಿಸಿದೆ.

ಕವಿಗಳು ರಚಿಸುವ ಕೃತಿಗಳು 'ರಸಪ್ರಧಾನ'ವಾದರೂ ಮಾನವ ಹಿತವನ್ನೂ ಕಾಂತಾ ಸಮ್ಮಿತ ಮಾರ್ಗದಲ್ಲಿ ಸೂಚ್ಯವಾಗಿ ಉಪದೇಶಮಾಡುವುದ ರಿಂದ ಅವೂ 'ಸಾಹಿತ್ಯ' ಎಂಬ ಹೆಸರಿಗೆ ಪಾತ್ರವಾಗಿವೆ. ಕಾವ್ಯಶಾಸ್ತ್ರ ಗ್ರಂಥ ಗಳಲ್ಲಿ ಕಾವ್ಯಸ್ವರೂಪವನ್ನು ವಿವರಿಸುವಾಗ ಲಾಕ್ಷಣಿಕರು ಕಾವ್ಯವೂ ಚತುರ್ವಿಧ ಪುರುಷಾರ್ಥಗಳನ್ನು ದೊರಕಿಸಿಕೊಡುತ್ತದೆ ಎಂದು ಹೇಳಿದ್ದಾರೆ. ಈ ವಿಷಯ

ವನ್ನು 'ಕವಿರಾಜಮಾರ್ಗ'ದ ಈ ಕೆಳಗಿನ ಪದ್ಯಗಳು ಬಹು ಚೆನ್ನಾಗಿ ತಿಳಿಸುತ್ತವೆ :

ಪಾಪಮಿದು ಪುಣ್ಯಮಿದು, ಹಿತ-
ರೂಪಮಿದು ಅಹಿತ ಪ್ರಕಾರಮಿದು, ಸುಖಮಿದು ದುಃ-
ಖೋಪಾತ್ತ ಮಿದು, ಎಂದು ಅರಿಪ್ರಗುಂ,
ಆ ಪರಮ ಕವಿಪ್ರಧಾನರಾ ಕಾವ್ಯಂಗಳ್. (i-18)
ಅಧಿಕೃತ ಸತ್ಪುರುಷಾರ್ಥ
ಪ್ರಧಾನ ಧರ್ಮಾರ್ಥ ಕಾಮಮೋಕ್ಷಂಗಳ್ ಅಪ್ಪ, ಆ
ಬುಧಜನ ವಿವಿಕ್ತ ಕಾವ್ಯ-
ಪ್ರಧಾರಿತ ಅರ್ಥಂಗಳ್, ಅಖಿಳ ಭುವನ ಹಿತಂಗಳ್. (i-20)

[ಕವಿಶ್ರೇಷ್ಠರ ಕಾವ್ಯಗಳು ಇದು ಪಾಪ, ಇದು ಪುಣ್ಯ, ಇದು ಹಿತಕರ ಇದು ಅಹಿತಕರ ಇದು ಸುಖಕರ ಇದು ದುಃಖಕರ ಎಂದು ತಿಳಿಸುತ್ತವೆ (i-18). ವಿದ್ವಾಂಸರು ವಿವೇಚನೆ, ಮಾಡಿರುವಂತೆ, ಸಕಲ ಲೋಕಕ್ಕೂ ಹಿತವನ್ನುಂಟುಮಾಡುವ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಮುಖ್ಯ ಪುರುಷಾರ್ಥಗಳು ಕಾವ್ಯದ ಪ್ರಯೋಜನಗಳಲ್ಲಿ ಅಡಕವಾಗಿವೆ (i-20).]

ಹೀಗಿದ್ದರೂ, ರಸಾನುಭವದಿಂದ ದೊರಕುವ ಅಲೌಕಿಕ ಆನಂದವೆ ಕಾವ್ಯದ ಪರಮ ಪ್ರಯೋಜನ ಎಂಬುದು ಅಲಂಕಾರ ಶಾಸ್ತ್ರಜ್ಞರ ಅಭಿಪ್ರಾಯ. ಈ ಕಾವ್ಯಾನಂದ ಬ್ರಹ್ಮಾನುಭವದಿಂದ ದೊರಕುವ ಆನಂದಕ್ಕೆ ಸಮವೆಂದೂ ಅವರು ಹೇಳುತ್ತಾರೆ. ಎಲ್ಲ ಮತಧರ್ಮಗಳು ಬೋಧಿಸುವ ಮೋಕ್ಷವೂ ನಿತ್ಯವಾದ ಆನಂದ ಸ್ಥಿತಿಯನ್ನೇ ಕುರಿತಿದೆ.

ಹೇಗೆ ವಿಚಾರಮಾಡಿದರೂ ಶಾಸ್ತ್ರಗ್ರಂಥಗಳೂ ಕಾವ್ಯಗಳೂ ಕೂಡಿಯೇ 'ಸಾಹಿತ್ಯ' ಎಂಬ ವಿಶೇಷಾರ್ಥದ ಹಾಗೂ ವಿಶಾಲಾರ್ಥದ ವ್ಯಾಪ್ತಿಗೆ ಒಳಪಡ ತಕ್ಕವಾಗಿವೆ.

ಶಾಸ್ತ್ರ ಗ್ರಂಥಗಳ ಬೆಳವಣಿಗೆ, ಧಾರ್ಮಿಕ ಶಾಸ್ತ್ರಗ್ರಂಥಗಳು

'ಸಾಹಿತ್ಯ' ಎನ್ನುವ ಮಾತಿಗಿಂತ 'ವಾಙ್ಮಯ' ಎಂಬ ಮಾತು ಎಲ್ಲ ಬಗೆಯ ಗ್ರಂಥಗಳಿಗೂ ಅತಿವ್ಯಾಪ್ತಿ ಅವ್ಯಾಪ್ತಿ ದೋಷಗಳಿಗೆ ಅವಕಾಶ ವಿಲ್ಲದಂತೆ ಅನ್ವಯಿಸತಕ್ಕದ್ದಾಗಿದೆ. (ಒಂದು ಗುಂಪಿಗೆ ಸೇರತಕ್ಕವಲ್ಲವನ್ನು ಸೇರಿಸಿಕೊಂಡರೆ ಅತಿವ್ಯಾಪ್ತಿಯೂ ಸೇರತಕ್ಕವನ್ನು ಸೇರಿಸಿಕೊಳ್ಳದೆ ಬಿಡು ವಂತಿದ್ದರೆ ಅವ್ಯಾಪ್ತಿ ದೋಷವೂ ಉಂಟಾಗುತ್ತವೆ.) ಶಾಸ್ತ್ರ ವಿಷಯವಾಗಲಿ

ಕಾವ್ಯ ವಿಷಯವಾಗಲಿ, ಅಭಿವ್ಯಕ್ತಿಯು (ಎಂದರೆ ಹೊರಗಾಣಿಸುವ) ಮಾಧ್ಯಮ (=ಮುಟ್ಟಿಸುವ ಬಗೆ, ಸಾಧನ) ಒಂದೇ : ವಾಕ್ ಅಥವಾ ಮಾತು.

ಪಶುವಿಗೂ ಮಾನವನಿಗೂ ಇರುವ ಮುಖ್ಯ ವ್ಯತ್ಯಾಸ ಮಾನವನ ಜ್ಞಾನ ಎಂದು ಹೇಳಿತಷ್ಟೆ. ಈ ಜ್ಞಾನಲಾಭ ಮನುಷ್ಯನಿಗೆ ಅವನ ಜ್ಞಾನೇಂದ್ರಿಯಗಳ ಮೂಲಕ, ವಿಶೇಷವಾಗಿ ಕಣ್ಣಿನ ಎಂದರೆ ದರ್ಶನೇಂದ್ರಿಯದ ಮೂಲಕ ಉಂಟಾಗತಕ್ಕದ್ದು. ಪ್ರಾಚೀನ ಋಷಿಗಳು ಬಾಹ್ಯಪ್ರಪಂಚವನ್ನು ಹೊರಗಣ್ಣಿನಿಂದ (ಬಾಹ್ಯಚಕ್ಷುಸ್ಸು) ನೋಡಿ ('ದರ್ಶನ' ಮಾಡಿ) ವಿಚಾರ ಶಕ್ತಿಯಿಂದ (ಎಂದರೆ ಬುದ್ಧಿ ಶಕ್ತಿಯಿಂದ) ಅದರ ರಹಸ್ಯವನ್ನು ಭೇದಿಸಿ, ಒಳಗಣ್ಣಿನಿಂದ (ಧ್ಯಾನಲಭ್ಯವಾದ ಅಂತರ್ ದೃಷ್ಟಿಯಿಂದ) 'ಸತ್ಯದರ್ಶನ' ಮಾಡಿದರು. ಹೀಗೆ, ಸತ್ಯವನ್ನು ನೋಡಿ ಕಂಡು(ಕಾಣ್)ಕೊಂಡವರಾದ್ದರಿಂದ ಅವರು ದಾರ್ಶನಿಕರು, ದ್ರಷ್ಟಾರರು (ನೋಡಿದವರು, ನೋಡಿ ತಿಳಿದವರು, ಜ್ಞಾನಿಗಳು) ಎನ್ನಿಸಿಕೊಂಡರು ; ಅವರು ಕಂಡ ಸತ್ಯಸ್ವರೂಪದ ವಿವಿಧ ಮುಖಗಳ ಸಮಷ್ಟಿಯೆ ದರ್ಶನ (ಕಾಣ್ಕೆ, ನೋಟ). ಬಹು ದೀರ್ಘಕಾಲದ ಕಾಣ್ಕೆಯು, ವಿಚಾರ ಮಥನದ, ಪರಿಣಾಮಫಲ ಈ 'ದರ್ಶನ'. ಸಾರಭೂತವಾದ ಜ್ಞಾನನಿಧಿಯಾದ ಈ ದರ್ಶನ ವೇದ (ತಿಳಿವಳಿಕೆ, ಜ್ಞಾನ <ವಿದ್ = ತಿಳಿ). ಈ ವೇದಗಳನ್ನು ಯಾರೂ ಬರೆದಿಡಲಿಲ್ಲ, ಯಾರೊಬ್ಬರ ರಚನೆಯಲ್ಲ; ಯಾವ ಒಬ್ಬ ಪುರುಷ ಇವರ ಪ್ರತಿಪಾದಕನಲ್ಲ. ಆದ್ದರಿಂದ, ಅಪೌರುಷೇಯ*. ಗುರು ಶಿಷ್ಯ ಪರಂಪರೆಯಿಂದ–(ಗುರು ಬೋಧಿಸುವುದು, ತಿಳಿಯಹೇಳುವುದು ; ಶಿಷ್ಯ ಕೇಳುವುದು)–ಕಿವಿಯಿಂದ ಕಿವಿಗೆ ಸಾಗಿಬಂತು. ಈ ಸಾಗಣೆಗೆ ಸಹಾಯಕವಾದ ಕರಣ' (=ಸಾಧನ)ವಾಕ್–ಬಾಯಿಮಾತು. ವೇದಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯವಾಗಿ ಶಿಕ್ಷಾ (ಉಚ್ಚಾರಣಾ ಶಾಸ್ತ್ರ), ವ್ಯಾಕರಣ, ಛಂದಸ್ಸು, ನಿರುಕ್ತ (ಶಬ್ದಗಳ ಅರ್ಥವನ್ನು ಕುರಿತ ಶಾಸ್ತ್ರ), ಜ್ಯೋತಿಷ, ಕಲ್ಪ (ಆಚರಣೆಯ ಕ್ರಮ) ಎಂಬ ಆರು ಶಾಸ್ತ್ರಗಳು ಬೆಳೆದುಬಂದುವು. ಒಟ್ಟಿನಲ್ಲಿ

---

* ನಮ್ಮವರ ನಂಬಿಕೆಯ ಪ್ರಕಾರ ವೇದಗಳು (ವೇದತ್ರಯೀ: ಋಗ್ವೇದ, ಯಜುರ್ವೇದ, ಸಾಮವೇದ; ಆಮೇಲೆ ಸೇರಿದ್ದು, ಅಥರ್ವಣವೇದ) ಸೃಷ್ಟಿಕರ್ತನಾದ ಬ್ರಹ್ಮನಿಂದ ಪ್ರಕಟವಾಗಿ, ಋಷಿಗಳಿಗೆ ಕೇಳಿಬಂದವು. ಆದ್ದರಿಂದ ಇವುಗಳಿಗೆ ಶ್ರುತಿ ಎಂದು ಹೆಸರು. ಋಷಿಗಳು ದ್ರಷ್ಟಾರರೇ ಹೊರತು ಸ್ರಷ್ಟಾರರು(ಸೃಷ್ಟಿಮಾಡಿದವರು) ಅಲ್ಲ; ಕರ್ತಾರರಲ್ಲ.

ಇವು 'ವೇದಶಾಸ್ತ್ರ' ಎಂದೇ ಪ್ರಸಿದ್ಧ. 'ಶಾಸ್ತ್ರ' ಎನ್ನುವ ಮಾತಿನ ಅರ್ಥ–ಶಾಸನ ಮಾಡುವುದು, ವಿಧಿಸುವುದು, ಕಟ್ಟಳೆ ಮಾಡುವುದು. ಅಪ್ಪಣೆ ಮಾಡುವುದರಲ್ಲಿ ಎರಡು ವಿಧ : 'ಹೀಗೆ ಮಾಡಬೇಕು' ಎನ್ನುವುದು ವಿಧಿ ; 'ಹೀಗೆ ಮಾಡಬಾರದು' ಎನ್ನುವುದು ನಿಷೇಧ; ಶಾಸ್ತ್ರಗಳು ವಿಧಿ ನಿಷೇಧಗಳೆರಡನ್ನೂ ಒಳಗೊಂಡಿರುತ್ತವೆ. ಉದಾಹರಣೆಗೆ, ಶಿಕ್ಷಾ ಶಾಸ್ತ್ರವು ವೇದವಾಕ್ಯಗಳನ್ನು ಹೇಗೆ ಉಚ್ಚಾರಮಾಡಿದರೆ ಸರಿ, ಹೇಗೆ ಉಚ್ಚಾರ ಮಾಡಿದರೆ ತಪ್ಪು ಎನ್ನುವುದನ್ನು ತಿಳಿಸುತ್ತದೆ. ಛಂದಸ್ಸು (ಛಂದಶ್ಶಾಸ್ತ್ರ) ವೇದಗಳಲ್ಲಿ ಉಪಯೋಗಿಸಿರುವ ಪದ್ಯಗಳ ರಚನೆಗಳ ಸ್ವರೂಪವನ್ನು ವಿವರಿಸುತ್ತದೆ. ವೇದಗಳಲ್ಲಿ ಉಪಯೋಗಿಸಿರುವ ಛಂದಸ್ಸು 'ವೈದಿಕ ಛಂದಸ್ಸು' ಎಂದು ಪ್ರಸಿದ್ಧವಾಗಿದೆ. ಈ ವೈದಿಕ ಛಂದಸ್ಸಿನ ಆಧಾರದ ಮೇಲೆ ಸಂಸ್ಕೃತ ಕಾವ್ಯಗಳಲ್ಲಿಯೂ ಇತರ ಗ್ರಂಥಗಳಲ್ಲಿಯೂ ಉಪಯೋಗಿಸುವ 'ಲೌಕಿಕ' ಛಂದಸ್ಸು ಬೆಳೆಯಿತು. ಸಂಸ್ಕೃತದಲ್ಲಿ, ರಚನೆ ಮಾಡುವುದಕ್ಕೂ ಹಾಡುವುದಕ್ಕೂ ಅತ್ಯಂತ ಸುಲಭವಾದ ಪದ್ಯರೂಪ 'ಶ್ಲೋಕ'. ರಾಮಾಯಣ ಮಹಾಭಾರತ ಕಾವ್ಯಗಳೂ, (ಭಾರತದಲ್ಲಿ ಸೇರಿರುವ) ಭಗವದ್ಗೀತೆಯೂ ಶ್ಲೋಕ ಛಂದಸ್ಸಿನಲ್ಲಿಯೇ ಇವೆ. ಭಗವದ್ಗೀತೆ ಮೋಕ್ಷ ಶಾಸ್ತ್ರವೆಂದೂ ಪ್ರಸಿದ್ಧವಾಗಿದೆ. ವೈದಿಕ ಸಂಸ್ಕೃತಿ ಬೆಳೆದಂತೆ ಶಾಸ್ತ್ರ ಪ್ರಪಂಚವೂ ವಿಸ್ತಾರವಾಯಿತು; ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ನಾಟ್ಯಶಾಸ್ತ್ರ, ಗಣಿತಶಾಸ್ತ್ರ, ಮುಂತಾಗಿ ಹಲವಾರು ಶಾಸ್ತ್ರಗಳು ಬೆಳೆದುವು. ವೇದದ ಜ್ಞಾನವೇ ನಿಜವಾದ ಜ್ಞಾನವೆಂದೂ, ಇನ್ನುಳಿದ ಶಾಸ್ತ್ರಗಳ ಜ್ಞಾನ 'ವಿಜ್ಞಾನ' ಎಂದರೆ ವಿಶೇಷ ರೀತಿಯ ಜ್ಞಾನವೆಂದೂ ತಿಳಿಯಲಾಯಿತು.* ಸಂಸ್ಕೃತ ಭಾಷೆಯಲ್ಲಿರುವ ಶಾಸ್ತ್ರಗ್ರಂಥಗಳೆಲ್ಲವೂ ಬಹುಮಟ್ಟಿಗೆ ಶ್ಲೋಕ ರೂಪದಲ್ಲಿಯೇ ರಚಿತವಾಗಿವೆ.

ಭಾರತದ ಜನಜೀವನದಲ್ಲಿ ಬಹಳ ಕಾಲದವರೆಗೆ ವೇದಗಳ ಪ್ರಾಬಲ್ಯವೇ ನೆಲಸಿತ್ತು. ಕಾಲಕ್ರಮದಲ್ಲಿ ವೇದಗಳ ಜ್ಞಾನಭಾಗಕ್ಕೆ ಬೆಲೆ ಕಡಮೆಯಾಗಿ,

---

*ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ ಬೆಳೆದು, ಈಗ ನಮ್ಮ ದೇಶದಲ್ಲಿಯೂ ವಿದ್ಯಾಭ್ಯಾಸದ ಒಂದು ಪ್ರಧಾನಭಾಗವಾಗಿ ಬೆಳೆಯುತ್ತಿರುವ ಭೌತಶಾಸ್ತ್ರ, ರಸಾಯನಶಾಸ್ತ್ರ, ಯಂತ್ರಶಾಸ್ತ್ರ ಮುಂತಾದ ಶಾಸ್ತ್ರಗಳನ್ನು ಒಟ್ಟಿನಲ್ಲಿ 'ಸೈನ್ಸ್' (Science) ಅಥವಾ 'ವಿಜ್ಞಾನ' ಎಂದು ಕರೆಯುತ್ತೇವೆ. 'ಸೈನ್ಸ್' ಪದದ ಮೂಲಾರ್ಥ ಜ್ಞಾನ. ಅದರ ಬೇರೆಬೇರೆ ವಿಭಾಗಗಳನ್ನು ವಿಜ್ಞಾನ ಎಂದು ಕರೆಯುವುದು ಸರಿಯಾಗಿಯೇ ಇದೆ, ಶಾಸ್ತ್ರ ಎಂದರೂ ತಪ್ಪಿಲ್ಲ.

ಅದು ವಿಧಿಸಿದ ಯಜ್ಞಯಾಗಾದಿ ಕರ್ಮಗಳಿಗೇ ಹೆಚ್ಚು ಬೆಲೆ ಕೊಡುವುದು ರೂಢಿಯಾಯಿತು. ದೇವತೆಗಳ ಸಂಖ್ಯೆಯೂ, ಅವರ ಆರಾಧನೆಯೂ, ಅದರ ಪರಿಣಾಮವಾಗಿ ನಿಷ್ಪ್ರಯೋಜಕವಾದ ಆಚಾರಗಳೂ ಮೂಢ ಭಕ್ತಿಯೂ ಬೆಳೆಯತೊಡಗಿದವು. ಯಜ್ಞದ ಹೆಸರಿನಲ್ಲಿ ಪ್ರಾಣಿಹಿಂಸೆ ನಡೆಯತೊಡಗಿತು. ಹೀಗೆ, ವೈದಿಕಸಂಸ್ಕೃತಿಯ ತತ್ತ್ವದ ನೆಲೆಗಟ್ಟು ಸಡಿಲ ವಾಗಿ ಅದರ ಕಟ್ಟಡ ಶಿಥಿಲವಾಗತೊಡಗಿತು. ವೈದಿಕ ಸಂಸ್ಕೃತಿಯನ್ನು ಪ್ರತಿಭಟಿಸಿ ಬುದ್ಧನು ಬೌದ್ಧಮತವನ್ನೂ ವರ್ಧಮಾನ ಮಹಾವೀರನು ಜೈನ ಮತವನ್ನೂ ಪ್ರಚಾರಮಾಡಿದರು. ತಮ್ಮ ಪ್ರಚಾರ ಕಾರ್ಯದಲ್ಲಿ ಅವರು ಸಾಮಾನ್ಯ ಜನರ ಭಾಷೆಗಳಾಗಿದ್ದ ಪ್ರಾಕೃತ, ಅಪಭ್ರಂಶ, ಪಾಳಿ– ಇವನ್ನು ಬಳಸಿದರು. ಅವರು ಪ್ರಚಾರಮಾಡಿದ ತತ್ತ್ವವಿಚಾರಗಳು ಕಾಲ ಕ್ರಮದಲ್ಲಿ ಸಾಮಾನ್ಯವಾಗಿ ಮೇಲೆ ಹೇಳಿದ ಜನಭಾಷೆಗಳಲ್ಲಿ ಆಯಾ ಮತದ 'ಶಾಸ್ತ್ರ' ಗ್ರಂಥಗಳಾಗಿ ರೂಪುಗೊಂಡುವು; ಸಂಸ್ಕೃತದಲ್ಲೂ ಶಾಸ್ತ್ರಗ್ರಂಥಗಳು ರಚಿತವಾದುವು.

ಜೈನ ಬೌದ್ಧ ಧರ್ಮಗಳು ಭಾರತದಲ್ಲೆಲ್ಲಾ ಹರಡಿ, ವೈದಿಕ ಧರ್ಮವು ಖಿಲವಾಗುತ್ತಿದ್ದ ಕಾಲದಲ್ಲಿ ಅದರ ಅವನತಿಯನ್ನು ತಡೆಗಟ್ಟಿದವರು ಶಂಕರಾ-ಚಾರ್ಯರು. ಪ್ರಸ್ಥಾನತ್ರಯ ಎಂದು ಪ್ರಸಿದ್ಧವಾದ ಬ್ರಹ್ಮಸೂತ್ರಗಳು, ಉಪನಿಷತ್ತು, ಭಗವದ್ಗೀತೆ– ಇವುಗಳಿಗೆ ಸಂಸ್ಕೃತದಲ್ಲಿ ಅದ್ವೈತ ಪರವಾಗಿ ಭಾಷ್ಯ (ಎಂದರೆ ವಿವರಣೆ) ಬರೆದರು. ಅವರ ತರುವಾಯ ಅದ್ವೈತ ವೇದಾಂತವನ್ನು ವಿವರಿಸುವ ಶಾಸ್ತ್ರಗ್ರಂಥಗಳ ಪರಂಪರೆ ನಿರ್ಮಾಣ ವಾಯಿತು. ವೈದಿಕ ಧರ್ಮದ ಚೌಕಟ್ಟಿನಲ್ಲಿಯೇ ಅದ್ವೈತದ ನಿಲುವನ್ನು ಒಪ್ಪದ ದ್ವೈತ ವಿಶಿಷ್ಟಾದ್ವೈತ ಪಂಥಗಳು ಹುಟ್ಟಿಕೊಂಡುವು. ಈ ಪಂಥಗಳ ಧಾರ್ಮಿಕ ಗ್ರಂಥಗಳೂ ಸಂಸ್ಕೃತದಲ್ಲಿಯೇ ರಚಿತವಾದುವು.

ಕನ್ನಡ ನಾಡಿನಲ್ಲಿ ಕ್ರಿ.ಶ. 5ನೆಯ ಶತಕಕ್ಕೂ ಹಿಂದಿನಿಂದಲೇ ಜೈನ ಧರ್ಮ ಪ್ರಚಾರವಾಗತೊಡಗಿತು. ಕನ್ನಡ ನಾಡಿನ ಜೈನ ವಿದ್ವಾಂಸರು ಮೊದಮೊದಲಿನಲ್ಲಿ ಸಂಸ್ಕೃತಪ್ರಾಕೃತಗಳಲ್ಲಿ ಧಾರ್ಮಿಕ ಗ್ರಂಥಗಳನ್ನು ರಚಿಸ ತೊಡಗಿದರೂ, ಧರ್ಮ ಪ್ರಸಾರಕ್ಕೆ ಜನರ ಭಾಷೆಯಾದ ಕನ್ನಡವನ್ನು ಬಳಸಿ ಕೊಳ್ಳುವ ಅಗತ್ಯ ಅವರಿಗೆ ಕಂಡುಬಂದಿತು. ಅವರು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿದ್ದ ಜೈನ ಧರ್ಮಗ್ರಂಥಗಳನ್ನೂ ಇತರ ಶಾಸ್ತ್ರಗ್ರಂಥಗಳನ್ನೂ

ಪುರಾಣಗಳನ್ನೂ ಆಧಾರವಾಗಿಟ್ಟುಕೊಂಡು, ಜೈನ ಧರ್ಮ ಪ್ರಚಾರವನ್ನೇ ಮುಖ್ಯಗುರಿಯಾಗಿಟ್ಟುಕೊಂಡು, ಕನ್ನಡದಲ್ಲಿ ಶಾಸ್ತ್ರಗ್ರಂಥಗಳನ್ನೂ ಕಾವ್ಯಗಳನ್ನೂ ರಚಿಸುತ್ತ ಬಂದರು. ಹೀಗೆ ಕನ್ನಡದಲ್ಲಿ ಶಾಸ್ತ್ರಗ್ರಂಥ ರಚನೆಯನ್ನು ಪ್ರಾರಂಭಿಸಿ, ಬೆಳಸಿದವರು ಜೈನರು. ನಮಗೆ ಈವರೆಗೆ ದೊರಕಿರುವ ಕನ್ನಡ ಗ್ರಂಥರಾಶಿಯಲ್ಲಿ ಮೊದಲನೆಯ ಗ್ರಂಥಮಾತ್ರವಲ್ಲದೆ ಮೊದಲನೆಯ ಶಾಸ್ತ್ರಗ್ರಂಥವೆಂದು ಸಾಹಿತ್ಯ ಚರಿತ್ರೆಯಲ್ಲಿ ಪ್ರಖ್ಯಾತವಾಗಿರುವ 'ಕವಿರಾಜಮಾರ್ಗ' ವನ್ನು ಬರೆದವನು ಜೈನಮತೀಯನಾದ ಶ್ರೀವಿಜಯ.

12ನೆಯ ಶತಮಾನದಲ್ಲಿ ಬಸವಣ್ಣನವರ ಕಣ್ಣೆಟ್ಟಿನಲ್ಲಿ ವೀರಶೈವ ಧರ್ಮದ ಉದಯವಾಗಿ, ಅವರ ತತ್ತ್ವಗಳ ಪ್ರಚಾರಕಾರ್ಯ ಬಿರುಸಿನಿಂದ ಸಾಗತೊಡಗಿತು. ವೇದೋಪನಿಷತ್ತುಗಳ ಜ್ಞಾನಕಾಂಡದಿಂದ ಜೀವಸತ್ತ್ವವನ್ನು ಪಡೆದುಕೊಂಡಿದ್ದರೂ, ತನ್ನದೇ ಆದ ನೆಲೆಯನ್ನೂ ಬೆಲೆಯನ್ನೂ ಹೊಂದಿದ್ದ ವೀರಶೈವಧರ್ಮ ಹೊಸ ಬಗೆಯ ಸಾಹಿತ್ಯಸೃಷ್ಟಿಗೆ ದಾರಿಮಾಡಿಕೊಟ್ಟಿತು. ಹೆಣ್ಣು ಗಂಡು ಎಂಬ ಲಿಂಗ ಭೇದ, ಹಾರುವ ಹೊಲೆಯ ಕಮ್ಮಾರ ಬಡಗಿ ಎಂಬಿವೇ ಮುಂತಾದ ಹುಟ್ಟು, ಕಸಬುಗಳಿಗೆ ಸಂಬಂಧಿಸಿದ ಭೇದಗಳು-ಇವೆಲ್ಲವನ್ನೂ ತೊಡೆದುಹಾಕಿ, ಎಲ್ಲರೂ ಸಮಾನರು ಎಂಬ ತತ್ತ್ವದ ಆಧಾರದ ಮೇಲೆ ತನ್ನ ಅಂತರಂಗದಲ್ಲಿಯೇ ಶಿವನಲ್ಲಿ ಒಂದಾಗುವ ಶಿವಯೋಗ ಅಥವಾ ಶಿವಾನುಭವದ ಹಾದಿಯನ್ನು ತೋರಿಸುವುದೇ ಈ ಹೊಸ ಧರ್ಮದ ಮುಂದಾಳುಗಳಾದ ಶಿವಶರಣರ ಗುರಿಯಾಗಿತ್ತು. ವೇದ ಉಪನಿಷತ್ತುಗಳು ಬೋಧಿಸಿದ್ದ, ಎಲ್ಲ ಕಾಲಕ್ಕೂ ಎಲ್ಲರೂ ಒಪ್ಪಿಕೊಂಡು ತಮ್ಮ ಇಹಪರ ಸುಖವನ್ನು ಸಾಧಿಸಬಹುದಾದಂತಹ ನಿತ್ಯಸತ್ಯಗಳನ್ನು ತಮ್ಮ ಅನುಭವದ ಒರೆಗಲ್ಲಿನಲ್ಲಿ ಪರೀಕ್ಷೆಮಾಡಿ, ಅನುಭವಕ್ಕೆ ಬಂದ ವಿಚಾರಗಳನ್ನು ಸಾಮಾನ್ಯ ಜನಕ್ಕೆ ಅರ್ಥವಾಗುವಂತಹ ತಿಳಿಯಾದ ಚೆನ್ನುಡಿಗಳಲ್ಲಿ ಅವರು ತಿಳಿಯ ಹೇಳಿದರು. ಜ್ಞಾನ ಮತ್ತು ಅನುಭವಗಳ ಜೇನನ್ನು ತುಂಬಿಕೊಂಡು ಹಾಡಿನಂತೆ ಇಂಪಾದ ಶಿವಶರಣರ ನುಡಿತುಂಬಿಗಳು ಅವರು. ವೇದಕಾಲದ ಋಷಿಗಳಂತೆ, ಬರೆದಿಡದೆ ಬಾಯಿಮಾತಾಗಿ ಹೇಳಿದ್ದರಿಂದ, ಹಾಡಿದ್ದರಿಂದ, 'ವಚನ' ಗಳು ಎಂದು ಪ್ರಸಿದ್ಧವಾದವು. ಹೇಗೆ ನುಡಿದರೆ ನಡೆದರೆ ಇಹಕ್ಕೆ ಪರಕ್ಕೆ ಒಳಿತು ಎಂದು ಈ ವಚನಗಳು ಹೃದಯಂಗಮವಾಗಿ ಬೋಧೆ ಮಾಡುವುದರಿಂದ 'ಸಾಹಿತ್ಯ'ದ ಗುಣವನ್ನು ಹೊಂದಿ 'ವಚನ ಧರ್ಮ', 'ವಚನ ಶಾಸ್ತ್ರ' ಎಂದು ಹೆಸರಾದುವು.

ಕರ್ನಾಟಕದಲ್ಲಿ ಮಧ್ವಾಚಾರ್ಯರೂ ತಮಿಳುನಾಡಿನಲ್ಲಿ ಶ್ರೀ ರಾಮಾನುಜಾಚಾರ್ಯರೂ ತಮ್ಮ ತಮ್ಮ ಮತಸಿದ್ಧಾಂತಗಳನ್ನು ಸ್ಥಾಪಿಸಿದ ಮೇಲೆ, ಬಹಳ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದ್ದ ಭಾಗವತ ಧರ್ಮದ ವೈಷ್ಣವ ಭಕ್ತಿಗೆ ಪುಟವೇರಿತು. ಇದರ ಪರಿಣಾಮವಾಗಿ, ವೈಷ್ಣವ ಭಕ್ತಿಪ್ರಧಾನವಾದ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸುವ, ಪ್ರಚಾರಮಾಡುವ ದೃಷ್ಟಿ ವೈದಿಕ ಮತ ಪಂಥಗಳ ಜನರಲ್ಲಿಯೂ ಉಂಟಾಯಿತು. ಭಕ್ತಿಪ್ರಧಾನವಾದ ಕೀರ್ತನೆಗಳೂ ಕಾವ್ಯಗಳೂ ರಚಿತವಾಗ ತೊಡಗಿದುವು. ಇವುಗಳನ್ನು ರಚಿಸಿದವರೆಲ್ಲಾ ಸಾಧಾರಣವಾಗಿ ಬ್ರಾಹ್ಮಣರು. ಈ ಬ್ರಾಹ್ಮಣ ಸಾಹಿತ್ಯದಲ್ಲಿ ಮತತತ್ತ್ವಗಳನ್ನು ನೇರವಾಗಿ ವಿವರಿಸುವ ಗ್ರಂಥಗಳ ಸಂಖ್ಯೆ ಕಡಮೆಯೆಂದೇ ಹೇಳಬೇಕು. ಮಾಧ್ವಮತತತ್ತ್ವಗಳನ್ನು ವಿವರಿಸುವ ಗ್ರಂಥಗಳು ಬಹುಮಟ್ಟಿಗೆ ಸಂಸ್ಕೃತದಲ್ಲಿ ರಚಿತವಾಗುತ್ತಿದ್ದುವು. ವ್ಯಾಸರಾಯರ (16ನೆಯ ಶತಮಾನ) ಕಾಲದಲ್ಲಿ ಈ ಬಗೆಯ ಧಾರ್ಮಿಕ ಸಾಹಿತ್ಯಕ್ಕೆ ಬೆಂಬಲ ಕೊಡುತ್ತಿದ್ದ ಪಂಗಡ 'ವ್ಯಾಸಕೂಟ' ವೆಂದು ಪ್ರಸಿದ್ಧವಾಯಿತು. ಮಾಧ್ವಮತ ತತ್ತ್ವಗಳನ್ನೂ ಹರಿಭಕ್ತಿಯನ್ನೂ ಸಾಮಾನ್ಯ ಜನಕ್ಕೆ ಕನ್ನಡದಲ್ಲಿ ಪ್ರಚಾರ ಮಾಡುವುದಕ್ಕೆಂದೇ 'ದಾಸ ಕೂಟ' ವ್ಯಾಸರಾಯರ ಕಾಲದಲ್ಲಿ ರೂಪಗೊಂಡಿತು. ಹರಿದಾಸರು ಹಿಂದೆಯೂ ಇದ್ದರೂ, ವ್ಯಾಸರಾಯರ ಶಿಷ್ಯರಾದ ಪುರಂದರದಾಸರ ಕಾಲದಿಂದ ಹರಿದಾಸ ಸಾಹಿತ್ಯ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಬೆಳೆಯತೊಡಗಿತು. ವಚನಸಾಹಿತ್ಯದಲ್ಲಿ ಹಾಡಿನ ಛಾಯೆ ಕಂಡುಬಂದರೂ ಅವು ಹಾಡುಗಳಲ್ಲ; ಪುರಂದರದಾಸರು ರೂಢಿಯಲ್ಲಿದ್ದ ಕೀರ್ತನೆಯ ಪ್ರಕಾರಕ್ಕೆ ಲಕ್ಷಣಬದ್ಧವಾದ ಸಂಗೀತ ಶಾಸ್ತ್ರದ ಚೌಕಟ್ಟನ್ನು ಒದಗಿಸಿ, ಕರ್ನಾಟಕ ಸಂಗೀತ ಪಿತಾಮಹರೆಂದು ಪ್ರಖ್ಯಾತರಾಗಿದ್ದಾರೆ. ಉಪನಿಷತ್ತಿನ ಸಾರವನ್ನು ಒಳಗೊಂಡ ಅವರ ರಚನೆಗಳು 'ಪುರಂದರೋಪನಿಷತ್ತು' ಎಂದು ಮನ್ನಣೆಪಡೆದಿವೆ. ಹರಿದಾಸ ಸಾಹಿತ್ಯ ಸಂಗೀತ ಶಾಸ್ತ್ರಕ್ಕೆ ಒತ್ತಾಸೆ ಕೊಟ್ಟ ಪರಿಣಾಮವಾಗಿ, ಸಂಗೀತ ಶಾಸ್ತ್ರಗ್ರಂಥಗಳು ರಚನೆಯಾದುವು. ಇವು ಸಂಸ್ಕೃತದಲ್ಲಿ ಇರುವುದೇ ಹೆಚ್ಚು; ಕನ್ನಡದಲ್ಲಿ ವಿರಳ. ಆದರೆ, ಗ್ರಂಥಕಾರರಲ್ಲಿ ಅನೇಕ ಮಂದಿ ಕನ್ನಡಿಗರಾಗಿದ್ದುದು ಗಮನಿಸಬೇಕಾದ ಸಂಗತಿ.

ವೈದಿಕಧರ್ಮದ ಪ್ರಧಾನಶಾಖೆಗಳಾದ ಅದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಬಗೆಗೆ ಎರಡು ಮಾತು ಹೇಳಬೇಕಾದದ್ದು ಅಗತ್ಯ.

ಅದ್ವೈತದಲ್ಲಿ ಸಗುಣೋಪಾಸನೆ (ಎಂದರೆ ಆಕಾರವುಳ್ಳ ಪರಮಾತ್ಮನ ಆರಾಧನೆ) ನಿರ್ಗುಣೋಪಾಸನೆಗೆ (ಎಂದರೆ ನಿರಾಕಾರ ಪರಮಾತ್ಮನ ಅನುಭವ ಸಾಧನೆಗೆ) ಒಂದು ಮಾರ್ಗವೇ ಹೊರತು, ಅದೇ ಗುರಿಯಲ್ಲ; ಭಕ್ತಿಗಿಂತ ಜ್ಞಾನಕ್ಕೇ ಪ್ರಾಧಾನ್ಯ; ಹರಿಹರರಲ್ಲಿ ಅಭೇದ ಭಾವನೆಯಿರುವುದರಿಂದ 'ವೀರವೈಷ್ಣವ'ಕ್ಕಾಗಲಿ 'ವೀರಶೈವ'ಕ್ಕಾಗಲೀ ಎಡೆಯಿಲ್ಲ. ಹೀಗಿರುವುದರಿಂದ, ಅದರಲ್ಲಿ ಪ್ರಚಾರದೃಷ್ಟಿ ಕಡಿಮೆ. ಅದ್ವೈತ ಮತದಲ್ಲಿ ಭಕ್ತಿಗೆ ಪ್ರಾಧಾನ್ಯಕೊಟ್ಟ ಭಾಗವತ ಪಂಥದವರು (ಉದಾ: 'ಜಗನ್ನಾಥ ವಿಜಯ'ದ ರುದ್ರಭಟ್ಟ, ಕುಮಾರವ್ಯಾಸ) ಭಕ್ತಿರಸ ಪ್ರಧಾನವಾದ ಕಾವ್ಯಗಳನ್ನು ರಚಿಸಿದರು; ಹರಿದಾಸರ ಮಾದರಿಯಲ್ಲಿ ಕೀರ್ತನೆಗಳನ್ನು ಬರೆದರು; ಅದ್ವೈತವೇದಾಂತವನ್ನು ನೇರವಾಗಿ ಬೋಧಿಸುವ ಗ್ರಂಥಗಳೂ ಹುಟ್ಟಿಕೊಂಡುವು. ವಿಶಿಷ್ಟಾದ್ವೈತವು ತಮಿಳುನಾಡಿನಲ್ಲಿ ಹುಟ್ಟಿ ಅಲ್ಲಿ ವಿಶೇಷವಾಗಿ ಪ್ರಚಾರಕ್ಕೆ ಬಂದ ಕಾರಣ, ಕನ್ನಡ ಭಾಷೆಯ ಮೇಲೆ ಅದರ ಪ್ರಭಾವ ಬಹುಕಾಲದವರೆಗೆ ಗಮನಾರ್ಹವಾಗಿ ಆಗಲಿಲ್ಲ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ವಿಶಿಷ್ಟಾದ್ವೈತ ಮತಕ್ಕೆ ರಾಜಾಶ್ರಯ ದೊರೆತದ್ದರಿಂದ ಅದರ ಪ್ರಭಾವಕ್ಕೆ ಒಳಗಾದ ಗ್ರಂಥಗಳು ಕನ್ನಡದಲ್ಲಿ ಕಾಣಿಸಿಕೊಂಡವು.

ಈ ಸಂದರ್ಭದಲ್ಲಿ, ಮತಧರ್ಮಗ್ರಂಥಗಳ ರಚನೆಗೂ ರಾಜಾಶ್ರಯಕ್ಕೂ ಬೇರ್ಪಡಿಸಲಾಗದಂಥ ಸಂಬಂಧವೇನೂ ಇಲ್ಲವೆಂಬುದನ್ನು ಗಮನಿಸುವುದು ಉಚಿತ. ರಾಷ್ಟ್ರಕೂಟವಂಶದ ದೊರೆಗಳು ನೃಪತುಂಗನ ಕಾಲದವರೆಗೂ ವೈದಿಕಮತಾನುಯಾಯಿಗಳಾಗಿದ್ದರೂ, ಜೈನಗ್ರಂಥಕಾರರಿಗೆ ಪ್ರೋತ್ಸಾಹವಿತ್ತರು. ಹೊಯ್ಸಳರ ಕಾಲದಲ್ಲಿ ಎಲ್ಲ ಮತಧರ್ಮಗಳವರೂ ಗ್ರಂಥರಚನೆ ಮಾಡಿದ್ದಾರೆ. ವಿಜಯನಗರದರಸರು ವೈದಿಕ ಮತಾವಲಂಬಿಗಳಾಗಿದ್ದರೂ, 15-16ನೆಯ ಶತಮಾನಗಳಲ್ಲಿ ವೀರಶೈವಮತ ಸಂಬಂಧವಾದ ಶಾಸ್ತ್ರಗ್ರಂಥಗಳು ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಯಾದುವು. ಈ ನಿದರ್ಶನಗಳು, ಕರ್ನಾಟಕದ ರಾಜವಂಶಗಳವರ ಉದಾರವಾದ ಧಾರ್ಮಿಕ ದೃಷ್ಟಿಯನ್ನು ಎತ್ತಿಹಿಡಿಯುತ್ತವೆ. "ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ" ('ಇತರರ ವಿಚಾರಗಳನ್ನೂ ಧರ್ಮವನ್ನೂ ಸಹಿಸಿಕೊಳ್ಳುವುದು ಸಾಧ್ಯವಾದರೆ ಅಂಥ ನಡತೆ ಚಿನ್ನ').

ಚೆನ್ನದಂಥ ಈ ಮಾತನ್ನು ಹೇಳಿದವನು ನೃಪತುಂಗನ ಆಶ್ರಯದಲ್ಲಿ 'ಕವಿರಾಜಮಾರ್ಗ'ವನ್ನು ರಚಿಸಿದ ಶ್ರೀವಿಜಯ.

ಲೌಕಿಕ ಶಾಸ್ತ್ರ ಗ್ರಂಥಗಳು

ಇದುವರೆಗೆ, ಧಾರ್ಮಿಕ ಹಿನ್ನೆಲೆಯನ್ನು ಸ್ವಲ್ಪ ವಿಸ್ತಾರವಾಗಿಯೇ ವಿವರಿಸಿದ್ದಕ್ಕೆ ಮುಖ್ಯ ಕಾರಣವೇನೆಂದರೆ, ನಮ್ಮ ದೇಶದ ಜನಜೀವನದಲ್ಲಿ ಮತಧರ್ಮ ಅತ್ಯಂತ ಪ್ರಭಾವಶಾಲಿಯಾದ ಪಾತ್ರವನ್ನು ವಹಿಸಿದೆ. ಪಂಪ ಪೊನ್ನ ರನ್ನ ಹರಿಹರ ರಾಘವಾಂಕ ಕುಮಾರವ್ಯಾಸ ಚಾಮರಸ ರತ್ನಾಕರ ಷಡಕ್ಷರಿ ಮುಂತಾದ ಶ್ರೇಷ್ಠ ಕನ್ನಡ ಕವಿಗಳ ಕಾವ್ಯಗಳಿಗೆ ಧರ್ಮವೇ ಸ್ಫೂರ್ತಿಯ ಸೆಲೆ; ಅವರ ಕೃತಿಗಳಲ್ಲಿ–ಪುರಾಣ ಕಾವ್ಯಗಳಲ್ಲಿ–ಕವಿತೆಯೂ ಮತಧರ್ಮಕ್ಕೆ ಸಂಬಂಧಪಟ್ಟ ಶಾಸ್ತ್ರ ವಿಚಾರಗಳೂ ಹಾಸುಹೊಕ್ಕಾಗಿ ನೆಯ್ದು ಕೊಂಡಿವೆ. ನಮ್ಮ ಕವಿಗಳ ಈ ದೃಷ್ಟಿಯನ್ನು 'ಅರಿವುದಿಲ್ಲಿ ಕಾವ್ಯಧರ್ಮಮುಂ ಧರ್ಮಮುಮಂ' ಎಂದು ಪಂಪ ತನ್ನ ಆದಿಪುರಾಣದಲ್ಲಿ ಹೇಳಿರುವ ಮಾತು ಚೆನ್ನಾಗಿ ಪ್ರತಿಬಿಂಬಿಸುತ್ತದೆ. 'ಕಾವ್ಯವನ್ನು ನೆಪವಾಗಿಟ್ಟುಕೊಂಡು ಉಪದೇಶಮಾಡಬೇಕು' ಎಂಬುದು, ಪಂಪರಾಮಾಯಣದ ಕವಿಯಾದ ನಾಗಚಂದ್ರನ ನಂಬಿಕೆ. ಕನ್ನಡ ಭಾರತ 'ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರ ತತ್ತ್ವ ವಿಚಾರ, ಮಂತ್ರಿಜನಕ್ಕೆ ಬುದ್ಧಿ ಗುಣ' ಎಂದು ಕುಮಾರವ್ಯಾಸ ಘೋಷಿಸಿದ್ದಾನೆ; ವೇದಶಾಸ್ತ್ರ, ಯೋಗಶಾಸ್ತ್ರ, ರಾಜನೀತಿಶಾಸ್ತ್ರ-ಇವುಗಳ ಬೆರಕೆಯನ್ನು ಕಾವ್ಯದುದ್ದಕ್ಕೂ ಗುರುತಿಸಬಹುದು. 'ಅಕ್ಕರವನರಿಯದ ಒಕ್ಕಲಿಗರಿಗೂ, ವೇದಾಂತ ತತ್ತ್ವಗಳನ್ನು ತಿಳಿಯಹೇಳಬೇಕೆಂಬುದು ಚಿಕ್ಕದೇವರಾಜ ಒಡೆಯರ 'ಬಿನ್ನಪ'ದ ಗುರಿ. ಈ ಬಗೆಯ ಗ್ರಂಥಗಳನ್ನು ಧಾರ್ಮಿಕ ಕಾವ್ಯಗಳು ಎಂದು ಕರೆಯಬಹುದು. ಪ್ರತಿಭೆಯುಳ್ಳ ಕವಿಗಳು ಬರೆದ ಇಂಥ ಕಾವ್ಯಗಳಲ್ಲಿ ಕಾವ್ಯಾಂಶವೇ ಹೆಚ್ಚಾಗಿದ್ದು, ಧಾರ್ಮಿಕ ವಿಚಾರಗಳು ಕಾವ್ಯದ ಭಾಗವಾಗಿ ಬಂದಿರುತ್ತವೆ. ಈ ಧಾರ್ಮಿಕ ಕಾವ್ಯಗಳಿಂದ ಬೇರೆಯಾಗಿ ನಿಲ್ಲುವ, ಸಂತೋಷಕೊಡುವುದನ್ನೆ ಗುರಿಯಾಗುಳ್ಳ ಲೌಕಿಕ ಕಾವ್ಯಗಳೂ ಉಂಟು. ಕಾವ್ಯ ಧಾರ್ಮಿಕವಾಗಲಿ ಲೌಕಿಕವಾಗಲಿ, ''ಸಾಹಿತ್ಯಕ್ಕೆ ಸಂಬಂಧಪಟ್ಟ ಶಬ್ದಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ಕಾವ್ಯಲಕ್ಷಣ ಮುಂತಾದ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥಗಳು ಎಷ್ಟೋ ಇವೆ. ಇವು ನ್ಯಾಯವಾಗಿ ಸಾಹಿತ್ಯಕ್ಕೆ ಸೇರುವುದಿಲ್ಲವಾದರೂ, ಸಾಹಿತ್ಯಕ್ಕೆ ಮುಖ್ಯವಾದ ಅಂಗ

ಗಳಾಗಿರುವುದರಿಂದ'' ಇವುಗಳ ವಿಚಾರವಾಗಿ ತಮ್ಮ ಸಾಹಿತ್ಯ ಚರಿತ್ರೆಯಲ್ಲಿ ಹೇಳಲಾಗುವುದೆಂದು ಬಿ. ಎಂ. ಶ್ರೀಕಂಠಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಇವುಗಳನ್ನು ಒಟ್ಟಿನಲ್ಲಿ 'ಸಾಹಿತ್ಯಶಾಸ್ತ್ರ' ಗ್ರಂಥಗಳೆಂದೂ, ಕಾವ್ಯಾಂಗಗಳೆಂದೂ ವರ್ಗಮಾಡಬಹುದು. ಸಾಹಿತ್ಯಕ್ಕೆ ಸ್ವಲ್ಪವೂ ಸಂಬಂಧಪಡದೆ, ಬಾಹ್ಯ ಪ್ರಪಂಚದ ವಿಚಾರವಾಗಿಯೂ ಮನುಷ್ಯ ಜೀವನದ ವಿವಿಧ ಕಾರ್ಯಕ್ಷೇತ್ರಗಳ ವಿಚಾರವಾಗಿಯೂ ತಿಳಿವಳಿಕೆಯನ್ನು ಕೊಡುವ ಗ್ರಂಥಗಳೂ ಇರುತ್ತವೆ. ಆಧುನಿಕ ವಿಜ್ಞಾನದ ಗ್ರಂಥಗಳೆಲ್ಲವೂ ಈ ಗುಂಪಿಗೆ ಸೇರುತ್ತವೆ. ಇವನ್ನು ಲೌಕಿಕ ಅಥವಾ ವ್ಯಾವಹಾರಿಕ ಶಾಸ್ತ್ರಗ್ರಂಥಗಳೆಂದು ಗುರುತಿಸಬಹುದು. ಕಾವ್ಯದ ಮೂಲಕವಾಗಿಯಲ್ಲದೆ ನೇರವಾಗಿ ಮತಧರ್ಮ ವಿಚಾರಗಳನ್ನು ತಿಳಿಸುವ ಗ್ರಂಥಗಳನ್ನು ಪಾರಮಾರ್ಥಿಕ ಶಾಸ್ತ್ರಗ್ರಂಥಗಳೆಂದು ವಿಂಗಡಿಸ ಬಹುದು. ಶಾಸ್ತ್ರವಾಗಲಿ ಕಾವ್ಯವಾಗಲಿ, ಎಲ್ಲ ಶ್ರೇಷ್ಠ ಗ್ರಂಥಗಳೂ ಮನುಷ್ಯನ 'ಹಿತ'ವನ್ನೇ ಸಾಧಿಸುವುದರಿಂದ 'ಸಾಹಿತ್ಯ' ಎಂಬ ಮಾತಿಗೆ ಹೇಗೆ ಅರ್ಹ ವಾಗುತ್ತವೆ ಎಂಬುದನ್ನು ಹಿಂದೆಯೇ ನೋಡಿದ್ದೇವೆ.

ಕಾವ್ಯದಂತೆ ಆನಂದವನ್ನು ಕೊಡುವ ಬೇರೆಯ ಕಲೆಗಳೂ ಇವೆ. ಅವುಗಳ ನಿರ್ಮಾಣ ಕಾರ್ಯದಲ್ಲಿ ಮಾತು (ವಾಕ್) ಉಪಯೋಗವಾಗುವು ದಿಲ್ಲ. ಚಿತ್ರಕಲೆಯಾದರೆ ರೇಖೆ, ಬಣ್ಣ; ನಾಟ್ಯ ನೃತ್ಯಗಳಾದರೆ ಅಭಿನಯ; ಸಂಗೀತವಾದರೆ ಸ್ವರಗಳು. ಇವು ಸಾಹಿತ್ಯದಂತೆಯೇ ಮನುಷ್ಯನ ಭಾವಗಳನ್ನು ಪ್ರಕಾಶಪಡಿಸುವ ಕಲೆಗಳು ; ಸಾಹಿತ್ಯಗ್ರಂಥಗಳಂತೆ ತಿಳಿವಳಿಕೆಯನ್ನು ನೀಡ ಲಾರವು. ಇವುಗಳ ಸ್ವರೂಪವನ್ನೂ ಲಕ್ಷಣವನ್ನು ನಿಯಮಗಳನ್ನೂ ತಿಳಿಸುವ ಗ್ರಂಥಗಳೂ ಉಂಟು. ಈ ಗ್ರಂಥಗಳೂ ಶಾಸ್ತ್ರಗ್ರಂಥಗಳೆ.

ನಿತ್ಯದ ಬದುಕಿಗೆ ಉಪಯುಕ್ತವಾದ ಎಷ್ಟೋ ಕಲೆಗಳಿವೆ. ಇವುಗಳಲ್ಲಿ ಹಲಕೆಲವು ಹೆಚ್ಚಾಗಿಯೋ ಕಡಮೆಯಾಗಿಯೋ ಮನಸ್ಸಿಗೆ ಸಂತೋಷವನ್ನು ಕೊಡತಕ್ಕವು. ಉಪಯುಕ್ತತೆಯ ಅಂಶದಲ್ಲಿಯೂ ಹೆಚ್ಚು ಕಡಮೆಗಳುಂಟು. ನಮ್ಮ ಪೂರ್ವಿಕರು ಇವುಗಳನ್ನು ವಿದ್ಯೆಗಳೆಂದೂ ಕರೆದರು ; ಇವುಗಳನ್ನು 64 ಎಂದು ಪಟ್ಟಿಮಾಡಿದರು ; ಚತುಷ್ಟಷ್ಟಿ ಕಲೆಗಳು ಎಂದರು. ಉದಾ ಹರಣೆಗೆ, ಬಟ್ಟೆ ಹೊಲಿಯುವ ಕಲೆ ; ಪುಸ್ತಕ ವಾಚನ ಕಲೆ. ಇವುಗಳಲ್ಲಿ, ಕೆಲವು ಕಲೆಗಳ ಸಂಬಂಧವಾಗಿ ಶಾಸ್ತ್ರ ಗ್ರಂಥಗಳು ಹುಟ್ಟಿದ್ದರೂ, ಒಟ್ಟಿನ ಮೇಲೆ ಇವೆಲ್ಲವೂ ಪ್ರಯೋಗ ಪ್ರಧಾನವಾದವು. ಎಂದರೆ, ಮಾಡಿದ್ದನ್ನು

ನೋಡಿ, ಮಾಡಿ ಮಾಡಿ, ಕಲಿಯಬೇಕಾದವು. ಕಲೆಗಳಲ್ಲಿ ಈ 'ಮಾಡುವುದು' ಎಂದರೆ ಸೃಷ್ಟಿಕಾರ್ಯ ಮುಖ್ಯ. ಈ ಮಾಡುವುದರಲ್ಲಿ ಮಾಡುವವನ ಹಾಗೂ ಮಾಡಿದ್ದನ್ನು ನೋಡುವವನ ಅಥವಾ ಕೇಳುವವನ ಆನಂದಾನುಭವವೇ ಮುಖ್ಯವಾದರೆ, ಈ ಲಕ್ಷಣವುಳ್ಳ ಕಲೆಗಳನ್ನು ಕುಶಲಕಲೆ ಅಥವಾ ಲಲಿತಕಲೆ (Fine Art) ಎಂದು ಕರೆಯಬಹುದು ; ಪ್ರಯೋಜನ ಭಾಗ ಹೆಚ್ಚಾಗಿರುವ ಕಲೆಗಳನ್ನು ಉಪಯುಕ್ತ ಕಲೆ (Useful Art) ಎಂದು ಕರೆಯಬಹುದು. ಈ ದೃಷ್ಟಿಯಿಂದ, ಸೃಷ್ಟಿಕಾರ್ಯವುಳ್ಳ ಕಾವ್ಯ ಒಂದು ಲಲಿತಕಲೆ. ಸೃಷ್ಟಿಕಾರ್ಯವಿಲ್ಲದ ಶಾಸ್ತ್ರಗಳು ಕಲೆಯಲ್ಲ. ಸೃಷ್ಟಿಕಾರ್ಯವುಳ್ಳ ಕಲೆಗಳಿಗೆ ಮಾತು, ಬಣ್ಣ, ನಾದ (ಸ್ವರ) ಮತ್ತು ಅನೇಕ ಪದಾರ್ಥಗಳು ಉಪಯೋಗವಾಗುತ್ತವೆ. ಶಾಸ್ತ್ರಗಳ ನಿರೂಪಣೆಗೆ ಮಾತೊಂದೇ ಉಪಯೋಗಕ್ಕೆ ಬರತಕ್ಕದ್ದು. ಜ್ಞಾನೇಂದ್ರಿಯಗಳ ಮೂಲಕ ಪಡೆದ ಅನುಭವವನ್ನು ಶಾಸ್ತ್ರಗಳು ಮಾತಿನ ಮೂಲಕ ತಿಳಿಸುತ್ತವೆ, ಅಥವಾ ಬೋಧಿಸುತ್ತವೆ. ಬುದ್ಧಿಪೂರ್ವಕ ವಿಚಾರದೃಷ್ಟಿಯಿಂದ ನೋಡುವುದು (ದರ್ಶನ) ಮತ್ತು ಅದರ ಫಲವಾದ ವಸ್ತುಜ್ಞಾನವನ್ನೋ ಅಧ್ಯಾತ್ಮ ಜ್ಞಾನವನ್ನೊ ಹೇಳುವುದು (ಜ್ಞಾನಪ್ರಕಾಶ) – ಇದು ಶಾಸ್ತ್ರದ ಪ್ರಪಂಚ ; ಭಾವಪರವಶನಾಗಿ ನೋಡುವುದು, ನೋಡಿದ್ದನ್ನು 'ಅನುಕರಣ' ದ ಮೂಲಕ ತನ್ನ ಭಾವ ಪ್ರಕಾಶವಾಗುವಂತೆ ('ಅನುಸೃಷ್ಟಿ') ಮಾಡುವುದು – ಇದು ಕಲೆಯ ಪ್ರಪಂಚ. ತನ್ನ ಹೃದಯದ ಅನುಭವವನ್ನು ಮಾತಿನ ರೂಪದಲ್ಲಿ ಪ್ರಕಾಶಪಡಿಸತಕ್ಕದ್ದು ಕಾವ್ಯ.

ಕಲೆ – ಶಾಸ್ತ್ರ ; ವ್ಯತ್ಯಾಸ ಮತ್ತು ಸಂಬಂಧ

ಕಾವ್ಯವೂ ಒಂದು ಕಲೆಯಷ್ಟೆ. ಎಲ್ಲ ಕಲೆಗಳಿಗೂ ಸಾಮಾನ್ಯವಾದ ಲಕ್ಷಣ ಏನೆಂದರೆ, ಅವು ಮನಗಾಣಿಸುವ ಸೌಂದರ್ಯ ವಿಶೇಷ. ಪ್ರತಿಯೊಂದು ಕಲೆಯೂ ತನ್ನ ತನ್ನ ರೀತಿಯಲ್ಲಿ ಸೌಂದರ್ಯವನ್ನು ಪ್ರಕಟಪಡಿಸುವುದರಿಂದಲೂ, ಅಲ್ಲದೆ ಪ್ರತಿಯೊಬ್ಬ ಕಲೆಗಾರನೂ ಹೊರಗಣ ಪ್ರಪಂಚದ ಸೌಂದರ್ಯವನ್ನು ನೋಡಿ ಗ್ರಹಿಸುವುದರಲ್ಲಿಯೂ ಅದನ್ನು ಪ್ರಕಾಶಪಡಿಸುವುದರಲ್ಲಿಯೂ ತನ್ನತನವನ್ನು ಹೊಂದಿರುವುದರಿಂದ, ಒಂದು ಕಲಾಕೃತಿ ಇದ್ದಂತೆ ಇನ್ನೊಂದು ಕಲಾಕೃತಿ ಇರುವುದು ಸಾಧ್ಯವಿಲ್ಲ. ಒಂದೇ ವಿಷಯವನ್ನು ಕುರಿತು ಇಬ್ಬರು ಕವಿಗಳು ಮಾಡುವ ವರ್ಣನೆಯಲ್ಲಿ ವ್ಯತ್ಯಾಸವಿರುತ್ತದೆ.

ಕಲಾಕೃತಿಯ ಸೌಂದರ್ಯವನ್ನು ಸವಿಯುವುದರಲ್ಲಿಯೂ ಭೇದವುಂಟು; ಒಬ್ಬನಿಗೆ ಹಿಡಿಸಿದ್ದು ಇನ್ನೊಬ್ಬನಿಗೆ ಹಿಡಿಸುವುದಿಲ್ಲ. ಶಾಸ್ತ್ರದ ವಿಷಯ ಹಾಗಲ್ಲ. ಗಣಿತ ಶಾಸ್ತ್ರದಲ್ಲಿ, 2+2 ಒಬ್ಬನಿಗೆ 4 ಆದರೆ, ಇನ್ನೊಬ್ಬನಿಗೆ 3 ಆಗುವುದು ಸಾಧ್ಯವಿಲ್ಲ; ಒಂದು ಲೆಕ್ಕ ಸರಿಯಾಗಿದ್ದರೆ, ಹತ್ತು ಮಂದಿ ಪರೀಕ್ಷೆ ಮಾಡಿದರೂ ಅದು ಸರಿಯಾಗಿರುತ್ತದೆ; ಒಬ್ಬನಿಗೆ ತಪ್ಪು, ಇನ್ನೊಬ್ಬನಿಗೆ ಸರಿ, ಎನ್ನುವಂತಿಲ್ಲ. ಒಟ್ಟಿನಲ್ಲಿ ಕಲೆಗಳ ಸೌಂದರ್ಯ ಹಿಡಿತಕ್ಕೆ ಸಿಕ್ಕುವ ವಿಷಯವಲ್ಲ; ಶಾಸ್ತ್ರದ ವಿಷಯ ಖಚಿತವಾದದ್ದು, ಎಲ್ಲರಿಗೂ ಒಂದೇ ವಿಧವಾದ ಸತ್ಯವನ್ನು ತಿಳಿಸತಕ್ಕದ್ದು.

ಹೀಗೆ, ಕಲೆಗಳೂ ಶಾಸ್ತ್ರಗಳೂ ಬೇರೆ ಬೇರೆಯಾಗಿ ಕಂಡರೂ ಎಲ್ಲಕ್ಕೂ ಮೂಲ ಒಂದೇ. ಶಾಸ್ತ್ರ – ಕಾವ್ಯ ಕಲೆ – ಇತರ ಕಲೆಗಳು, ಇವುಗಳಿಗಿರುವ ಪರಸ್ಪರ ಸಂಬಂಧವನ್ನು ರೇಖಾಚಿತ್ರಗಳ ಮೂಲಕ ಸ್ಪಷ್ಟಪಡಿಸಬಹುದು. (ಅನುಬಂಧವನ್ನು ನೋಡಿ : ಚಿತ್ರ 1, 2) ಆ ಚಿತ್ರಗಳಲ್ಲಿ ತೋರಿಸಿರುವಂತೆ ಕಂಡುಬರುವ ಮಾನುಷ ಕಾರ್ಯಕಲಾಪಗಳನ್ನು ಸ್ಥೂಲವಾಗಿ ವಿಭಾಗ ಮಾಡ ಬಹುದಾದ ಹೆಗ್ಗುರುತುಗಳನ್ನು ಅಲ್ಲಿ ಕಾಣಿಸಿದೆ. ಅಷ್ಟೆ. ಆ ಕಾರ್ಯಕಲಾಪ ಗಳು ಒಂದಕ್ಕೊಂದು ವಿರುದ್ಧ, ಸಂಬಂಧವನ್ನೇ ಹೊಂದಿಲ್ಲ, ಎಂದು ತಿಳಿಯ ಬಾರದು. ಇಂದ್ರಿಯಾನುಭವವೆಂಬ ಒಂದೇ ಮೂಲದಿಂದ ಎಲ್ಲವೂ ಹುಟ್ಟಿರುವುದಲ್ಲದೆ, ಕಾರ್ಯನಿರ್ವಹಣೆಯ ಕಾಲದಲ್ಲಿ ಒಂದರ ಪ್ರಭಾವ ಇನ್ನೊಂದರ ಮೇಲೆ ಉಂಟಾಗಿ, ಇದರ ಲಕ್ಷಣ ಅದರ ಸ್ವರೂಪದ ಮೇಲೂ ಅದರ ಲಕ್ಷಣ ಇದರ ಸ್ವರೂಪದ ಮೇಲೂ ಕಾಣಿಸಿಕೊಳ್ಳಬಹುದು.

ಶಾಸ್ತ್ರ – ಕಾವ್ಯ

ಶಾಸ್ತ್ರಗಳೂ–ಕಾವ್ಯಗಳೂ ಒಂದೇ ಮಾಧ್ಯಮವಾದ ಮಾತನ್ನು ಬಳಸಿ ಕೊಳ್ಳುವುದರಿಂದಲೂ, ಶಾಸ್ತ್ರಕಾರನಲ್ಲಿ ಕವಿಯ ಸಾಮರ್ಥ್ಯವೂ ಕವಿಯಲ್ಲಿ ಶಾಸ್ತ್ರ ಜ್ಞಾನವೂ ಇರಬಹುದಾದ್ದರಿಂದಲೂ, ಎರಡೂ ಒಂದಕ್ಕೊಂದು ಹೊಂದಿಕೊಂಡು ಮಾನವನ ಕಲ್ಯಾಣವನ್ನು ಸಾಧಿಸಬಲ್ಲವಾಗಿವೆ.

ಈ ಚರ್ಚೆಯ ಸಾರಾಂಶವೆಲ್ಲವೂ ಡಿ. ವಿ. ಗುಂಡಪ್ಪನವರು ಹೇಳಿರುವ ಕೆಲವು ವಾಕ್ಯಗಳಲ್ಲಿ ಬಹು ಚೆನ್ನಾಗಿ ಅಡಕವಾಗಿರುವುದರಿಂದ, ಅವುಗಳನ್ನು ಇಲ್ಲಿ ಎತ್ತಿ ಕೊಡಬಹುದು.

" ವಾಙ್ಮಯದಲ್ಲಿ ಕಾವ್ಯವೆಂದೂ ಶಾಸ್ತ್ರವೆಂದೂ ಸ್ಥೂಲವಾಗಿ ಎರಡು ಜಾತಿಗಳು ಕಾಣಬರುತ್ತವೆ. ಯಾವ ಗ್ರಂಥಗಳು ವಾಚಕರಿಗೆ ಚಿತ್ತಸಮುನ್ನತಿಯನ್ನುಂಟುಮಾಡಿ ಧರ್ಮಾಧರ್ಮಜ್ಞಾನ ಪ್ರವೇಶಕ್ಕೆ ದಾರಿಬಿಡಿಸುವುವೋ ಅವುಗಳನ್ನು ಕಾವ್ಯವರ್ಗಕ್ಕೆ ಸೇರಿಸಬಹುದು. ಯಾವ ಗ್ರಂಥಗಳು ವಾಚಕರ ವಸ್ತುಜ್ಞಾನವನ್ನು ಹೆಚ್ಚು ಮಾಡಿ ಅವರ ಬಹಿರಂಗದ ಆಚಾರ ವ್ಯವಹಾರಗಳಿಗೆ ಸಾಕ್ಷಾತ್ತಾಗಿ ಉಪಯುಕ್ತವಾಗುವ ತಿಳಿವಳಿಕೆಯನ್ನು ಉಂಟು ಮಾಡಿಕೊಡುವುವೋ ಅವುಗಳನ್ನು ಶಾಸ್ತ್ರವರ್ಗಕ್ಕೆ ಸೇರಿಸಬಹುದು. ಕಾವ್ಯದ ಕಾರ್ಯಕ್ಷೇತ್ರವು ಮನಸ್ಸು ; ಶಾಸ್ತ್ರದ ಕಾರ್ಯಕ್ಷೇತ್ರವು ಬುದ್ಧಿ. ಮನೋಬುದ್ಧಿಗಳೆರಡನ್ನೂ ಸಂಪೂರ್ಣವಾಗಿ ಪ್ರತ್ಯೇಕಗೊಳಿಸಲು ಕೆಲವು ಸಂದರ್ಭಗಳಲ್ಲಿ ಆಗುವುದಿಲ್ಲ. ಅಂತಹ ಸಂದರ್ಭಗಳಿಗೆ ಸಂಬಂಧಪಡುವ ಗ್ರಂಥಗಳು ಕಾವ್ಯವರ್ಗಕ್ಕೆ ಸೇರತಕ್ಕವಾಗಿಯೂ ಇರಬಹುದು. ಅಥವಾ ಶಾಸ್ತ್ರವರ್ಗಕ್ಕೆ ಸೇರತಕ್ಕವಾಗಿಯೂ ಇರುಬಹುದು ; ಆದಕಾರಣ ಕಾವ್ಯವನ್ನು (1) ಶುದ್ಧ ಕಾವ್ಯ (2) ಮಿಶ್ರ ಕಾವ್ಯ ಎಂದು ಎರಡು ಬಗೆಯಾಗಿಯೂ, ಶಾಸ್ತ್ರವನ್ನು (3) ಲೌಕಿಕ ಶಾಸ್ತ್ರ (4) ಆಧ್ಯಾತ್ಮಿಕ ಶಾಸ್ತ್ರ ಎಂದು ಎರಡು ಬಗೆಯಾಗಿಯೂ ವಿಂಗಡಿಸಬಹುದು. (1) ಶುದ್ಧ ಕಾವ್ಯವು ರಾಮಾಯಣ ಶಾಕುಂತಲಗಳಂತೆ ರಸಪ್ರಧಾನವಾದುದು ; (2) ಮಿಶ್ರ ಕಾವ್ಯವು* ಭಾರತ ಹಿತೋಪದೇಶಗಳಂತೆ ಪ್ರಾಸ್ತಾವಿಕವಾಗಿ ಆಧ್ಯಾತ್ಮವಿಷಯ ನೀತಿ ವಿಷಯಗಳನ್ನೂ ಸಹ ಸರಸ ರೀತಿಯಲ್ಲಿ ಬೋಧಿಸುವುದು. (3) ಲೌಕಿಕ ಶಾಸ್ತ್ರಗಳೆಂಬುವು ಭೌತ ರಾಸಾಯನಿಕ ಖಗೋಳೀಯ ಮೊದಲಾದವುಗಳಂತೆ ಬಾಹ್ಯ ಪ್ರಪಂಚದ ವಸ್ತುಗಳನ್ನು ಕುರಿತು ವಿಚಾರ ಮಾಡತಕ್ಕವು. ಅಥವಾ ಅರ್ಥಶಾಸ್ತ್ರ ವ್ಯವಹಾರಶಾಸ್ತ್ರ ರಾಜ್ಯಮೀಮಾಂಸೆ ಮೊದಲಾದವುಗಳಂತೆ ಸಮಾಜವ್ಯವಸ್ಥೆಗಳನ್ನು ಕುರಿತು ವಿಚಾರ ಮಾಡತಕ್ಕವು .... (4) ಆಧ್ಯಾತ್ಮಿಕ ಶಾಸ್ತ್ರಗಳಾದರೋ ಧರ್ಮಾಧರ್ಮಗಳು, ಭಗವದುಪಾಸನಾ ಕ್ರಮಗಳು, ಜೀವನ ಊರ್ಧ್ವಗತಿ ಅಧೋಗತಿಗಳು – ಇವುಗಳನ್ನೆ ಕುರಿತವು. ವೇದ ವೇದಾಂತಗಳೂ ಸ್ಮೃತಿಪುರಾಣಗಳೂ ಈ ಭಾಗಕ್ಕೆ ಸೇರತಕ್ಕವು. ಈ

---

* ಕಾವ್ಯಶಾಸ್ತ್ರದಲ್ಲಿ ಕಾವ್ಯವನ್ನು ಗದ್ಯಕಾವ್ಯ, ಪದ್ಯಕಾವ್ಯ, ಮಿಶ್ರಕಾವ್ಯ – ಎಂದು ಸಾಧಾರಣವಾಗಿ ವಿಂಗಡಿಸಲಾಗುತ್ತದೆ. ಗದ್ಯಪದ್ಯಗಳ ಮಿಶ್ರಣವುಳ್ಳದ್ದು ಮಿಶ್ರಕಾವ್ಯ. ಇದನ್ನು 'ಚಂಪೂ' ಎಂದು ಕರೆಯಲಾಗಿದೆ. ಗದ್ಯಪದ್ಯಗಳುಳ್ಳ ದೃಶ್ಯ ಕಾವ್ಯಗಳೂ (ನಾಟಕಗಳು) ಮಿಶ್ರಕಾವ್ಯಗಳೆನಿಸುತ್ತವೆ.

ಅಧ್ಯಾತ್ಮ ಶಾಸ್ತ್ರಕ್ಕೂ ಸಾಹಿತ್ಯ ಅಥವಾ ಕಾವ್ಯಕ್ಕೂ ಗಾಢವಾದ ಸಂಬಂಧ ವಿರುವುದು ; ಏಕೆಂದರೆ, ಅವೆರಡೂ ಮಾನವನ ಆಶಯಗಳನ್ನೂ ಗುಣ ಗಳನ್ನೂ ನಡತೆಯನ್ನೂ ತಿದ್ದಲು ಬೇರೆ ಬೇರೆ ವಿಧಗಳಲ್ಲಿ ಪ್ರಯತ್ನಿಸುತ್ತವೆ. ಯಾವ ಗ್ರಂಥವು ಕಾವ್ಯದ ಸಾಧನ ಸಾಮಗ್ರಿಗಳಿಂದ ಮನಸ್ಸಿನಲ್ಲಿ ರಸೋತ್ಪಾದನೆ ಮಾಡಿ ಆ ಮೂಲಕ ಬುದ್ಧಿಯನ್ನೆಚ್ಚರಿಸಿ, ಅನಂತರ ಧರ್ಮ ವಿಷಯ ಭಗವದ್ವಿಷಯಗಳನ್ನು ಬೋಧಿಸುವುದೋ ಅದನ್ನು ಮಿಶ್ರಕಾವ್ಯ ವೆನ್ನಬಹುದು. "4

ಅಡಿ ಟಿಪ್ಪಣಿಗಳು

1 ಕನ್ನಡ ಕೈಪಿಡಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ, 2ನೆಯ ಮುದ್ರಣ, 1936 ; 3ನೆಯ ಭಾಗ-ಅಲಂಕಾರ, ಪು. 199-200ರಲ್ಲಿ ಅಡಿ ಟಿಪ್ಪಣಿ 2

2 ಡಿ. ವಿ. ಗುಂಡಪ್ಪ : 'ಜೀವನ ಸೌಂದರ್ಯ ಮತ್ತು ಸಾಹಿತ್ಯ,' 4ನೆಯ ಆವೃತ್ತಿ (ಕಾವ್ಯಾಲಯ, ಮೈಸೂರು), 1967 ; ಪು. 180

3 ಬಿ. ಎಂ. ಶ್ರೀಕಂಠಯ್ಯ : 'ಕನ್ನಡ ಕೈಪಿಡಿ,' ಮೈ.ವಿ.ವಿ.ನಿ., ಸಂಪುಟ 2, 1947 ; ಪು. 456

4 ಡಿ. ವಿ. ಗುಂಡಪ್ಪ : 'ಜೀವನ ಸೌಂದರ್ಯ ಮತ್ತು ಸಾಹಿತ್ಯ,' 1967 ; ಪು. 180-182

ಅಲಂಕಾರ ಶಾಸ್ತ್ರ

ಪೂರ್ವ ಪೀಠಿಕೆ

ಸಾಹಿತ್ಯ ಮತ್ತು ಕಾವ್ಯ–ಈ ಶಬ್ದಗಳು ಹೊಂದಿರುವ ಅರ್ಥದ ವಿಚಾರವಾಗಿ ಹಿಂದಿನ ಅಧ್ಯಾಯದಲ್ಲಿ ವಿಚಾರ ಮಾಡಿದೆಯಷ್ಟೆ. ಪೂರ್ವಿಕರು ಕವಿಗಳು ಬರೆದ ಕೃತಿಗಳಿಗೆ ಮಾತ್ರ ಕಾವ್ಯ ಎಂಬ ಪದವನ್ನು ಉಪಯೋಗಿಸುತ್ತಿದ್ದರು. ಓದುಗರಿಗೆ ಆನಂದವುಂಟುಮಾಡುವುದೇ ಮುಖ್ಯ ಗುರಿಯಾಗುಳ್ಳ ಗ್ರಂಥ ಗದ್ಯದಲ್ಲಿದ್ದರೂ ಅದನ್ನು ಕಾವ್ಯ ಎಂದೇ ಎಣಿಸುತ್ತಿದ್ದರು. ಈಗ, ಈ ಜಾತಿಯ ಗ್ರಂಥಗಳು ಪದ್ಯದಲ್ಲಿದ್ದರೆ ಮಾತ್ರ ಕಾವ್ಯ, ಕವಿತೆ, ಎಂಬ ಮಾತುಗಳನ್ನು ಬಳಸುವುದು ರೂಢಿಯಾಗಿದೆ; ಈ ಪದ್ಯ ಕೃತಿಗಳನ್ನೂ ಕಥೆ, ಕಾದಂಬರಿ, ನಾಟಕ, ಮುಂತಾದ ಗದ್ಯ ಕೃತಿಗಳನ್ನೂ ಒಟ್ಟುಗೂಡಿಸಿ ಸಾಹಿತ್ಯ ಎನ್ನುತ್ತೇವೆ. ಅಲಂಕಾರ ಶಾಸ್ತ್ರ ಎಂಬ ಮಾತನ್ನು ಪ್ರಾಚೀನ ಗದ್ಯ ಪದ್ಯ ಮತ್ತು ಮಿಶ್ರ ಕಾವ್ಯಗಳಿಗೆ ಮಾತ್ರ ಸಂಬಂಧಪಟ್ಟಂತೆ ಬಳಸುವುದು ರೂಢಿ.

ಅಲಂಕಾರ ಶಾಸ್ತ್ರಕ್ಕೆ ಸಂಬಂಧಪಟ್ಟ ಕನ್ನಡ ಲಕ್ಷಣ ಗ್ರಂಥಗಳ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಮೊದಲು ಅಲಂಕಾರ ಶಾಸ್ತ್ರದ ಕೆಲವು ಮುಖ್ಯ ತತ್ತ್ವಗಳ ವಿಷಯವಾಗಿ ಸ್ವಲ್ಪ ತಿಳಿವಳಿಕೆ ಅಗತ್ಯ.

ಅಲಂಕಾರಶಾಸ್ತ್ರ ಎಂದರೇನು ?

"ಕನ್ನಡಿಗರಾದ ಅಲಂಕಾರ ವಿದ್ಯಾರ್ಥಿಗಳು ಅಲಂಕಾರ ವಿದ್ಯಾರ್ಥಿಗಳೇ ಆದರಲ್ಲಾ" ಎಂದು ಒಬ್ಬರು ಅಲಂಕಾರಶಾಸ್ತ್ರ ಪ್ರೇಮಿಗಳು ಆಡಿದ ಮಾತು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ.[1] ಅವರು 'ಅಲಂಕಾರ' ಎಂಬ ಮಾತನ್ನು ಎರಡು ಅರ್ಥಗಳಲ್ಲಿ (ಇದಕ್ಕೆ ಶ್ಲೇಷೆ ಎನ್ನುತ್ತಾರೆ) ಚಮತ್ಕಾರವಾಗಿ ಬಳಸಿದ್ದರು. "ಅಲಂಕಾರ ಶಾಸ್ತ್ರವನ್ನು ಕಲಿಯಬೇಕಾದ ವಿದ್ಯಾರ್ಥಿಗಳು

ಅವರ ಕಡೆಗೆ ಸಾಕಷ್ಟು ಗಮನ ಕೊಡದೆ ಸೊಗಸಾದ ಉಡುಪು ತೊಡವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳುವುದರಲ್ಲೇ, ಎಂದರೆ ಸಿಂಗರಿಸಿಕೊಳ್ಳುವುದರಲ್ಲೇ ಕಾಲ ಕಳೆಯುವರಲ್ಲಾ” ಎಂಬುದು ಅವರ ಮಾತಿನ ಅಭಿಪ್ರಾಯ. ಅಲಂಕಾರ ಶಾಸ್ತ್ರದ ಸಂಬಂಧದಲ್ಲಿ ‘ಅಲಂಕಾರ’ ಎಂಬ ಮಾತಿನ ಅರ್ಥವೂ ಕಾವ್ಯವನ್ನು ‘ಅಲಂಕರಿಸುವುದು’ (= ಅಲಂಕರಣ) ಅಥವಾ ಅಂದಗೊಳಿಸುವುದು, ಚಂದಗೊಳಿಸುವುದು, ಎಂದೇ ಆಗುತ್ತದೆ. ಪ್ರಾಚೀನ ಕಾಲದಿಂದಲೂ ಮನುಷ್ಯರಿಗೆ ತಾವು ಇರುವುದಕ್ಕಿಂತಲೂ ಚೆನ್ನಾಗಿ ಕಾಣಬೇಕೆಂದು ಆಸೆ. ಅದರಲ್ಲಿ, ಹೆಂಗಸಿಗೆ ಈ ಬಯಕೆ ಹೆಚ್ಚು. ಉಡುಪು ತೊಡವು, ಕೂದಲನ್ನು ಒಪ್ಪ ಓರಣ ಮಾಡಿಕೊಳ್ಳುವುದು, ಇವು ಗಂಡಸರಿಗೂ ಹೆಂಗಸರಿಗೂ ಸಮಾನವಾದ ಅಲಂಕಾರ ವಿಧಾನಗಳು. ಆದರೆ, ಹೆಂಗಸರು ಬಳಸುವ ಅಲಂಕಾರ ವಸ್ತುಗಳಿಗೆ ಕೊನೆಮೊದಲೇ ಇಲ್ಲ. ಅವುಗಳಲ್ಲಿ ಮುಖ್ಯವಾದುವು ಕೆಲವು : ಮೂಗುತಿ, ಓಲೆ, ಸರ, ತೋಳಬಂದಿ, ಕೈಬಳೆ, ಮುಂತಾದುವು. ಕಾವ್ಯವನ್ನು ಮದುಮಗಳಿಗೆ ಹೋಲಿಸಿ, ಕಾವ್ಯದಲ್ಲಿ ಅದರ ಅಂದಚಂದಕ್ಕಾಗಿ ಉಪಯೋಗಿಸುವ ಅಲಂಕಾರಗಳು ಅವಳಿಗೆ ಹಾಕುವ ಒಡವೆಗಳಂತೆ ಎಂದು ಆಲಂಕಾರಿಕರು, ಎಂದರೆ ಅಲಂಕಾರ ಶಾಸ್ತ್ರಕಾರರು, ಹೇಳಿದ್ದಾರೆ. (ಕಾವ್ಯದ ಅಲಂಕಾರಗಳನ್ನು ಕನ್ಯೆಯ ಒಡವೆಗಳಿಗೆ ಹೋಲಿಸಿರುವುದೇ ಒಂದು ‘ಅಲಂಕಾರ’ – ಉಪಮಾಲಂಕಾರ ; ಉಪಮೆ ಎಂದರೆ ಹೋಲಿಕೆ.) ಭರತಮುನಿ (ಕ್ರಿ.ಶ.ಸು. 1 ನೆಯ ಶ.ಮಾ.) ತನ್ನ ನಾಟ್ಯಶಾಸ್ತ್ರದಲ್ಲಿ ನಾಟ್ಯಕ್ಕೆ (ಎಂದರೆ ಅಭಿನಯಕ್ಕೆ) ಸಂಬಂಧಪಟ್ಟಂತೆ ‘ರಸ’ದ ವಿಚಾರವನ್ನು ವಿಸ್ತಾರವಾಗಿ ಹೇಳಿದ್ದನು ; ಕಾವ್ಯದಲ್ಲಿ ರಸವು ಮುಖ್ಯವೆಂದೂ ಹೇಳಿದ್ದನು.* ಆದರೆ ಕಾವ್ಯದ ಲಕ್ಷಣವನ್ನು ಕುರಿತು ಏನನ್ನೂ ಹೇಳಿರಲಿಲ್ಲ. ಅವನ ತರುವಾಯ ಬಂದ ಭಾಮಹ, ದಂಡಿ, ಮುಂತಾದವರು (ಕ್ರಿ. ಶ. 7 ಮತ್ತು 8 ನೆಯ ಶ. ಮಾ.) ಕಾವ್ಯದಲ್ಲಿ ಅಲಂಕಾರಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟರು ; ಹಿಂದಿನ ಕಾವ್ಯಗಳಲ್ಲಿ ಕಂಡುಬಂದ 35 ಅಲಂಕಾರಗಳನ್ನು ಗುರುತಿಸಿ, ಅವುಗಳನ್ನು ತಮ್ಮ ಗ್ರಂಥಗಳಲ್ಲಿ

---

* ಊಟ ಷಟ್ (ಆರು) ರಸಗಳಿಂದ ಕೂಡಿರುತ್ತದೆ ಎಂದು ಹೇಳುವುದು ರೂಢಿ. ಸಿಹಿ, ಹುಳಿ, ಕಾರ, ಉಪ್ಪು, ಕಹಿ, ಒಗರು–ಇವೇ ಆ ಷಡ್ರಸಗಳು (ಕಟು, ಅಮ್ಲ, ಮಧುರ, ಲವಣ, ತಿಕ್ತ, ಕಷಾಯ). ಇವು ನಾಲಗೆಗೆ ಬಿದ್ದು ಸವಿದಾಗಲೇ ಅನುಭವಕ್ಕೆ ಬರುವುದು. ಕಾವ್ಯದ ಭಾವಗಳನ್ನು ನಾವು ಅನುಭವಿಸಿ ಆನಂದಪಟ್ಟಾಗ ಅವು ‘ರಸ’ದ ಸ್ಥಿತಿಯನ್ನು ಪಡೆಯುತ್ತವೆ. ಈ ವಿಚಾರ ಮುಂದೆ ಬರುತ್ತದೆ.

ವಿವರಿಸಿದರು. ಒಟ್ಟಿನ ಮೇಲೆ, 'ಕಾವ್ಯಕ್ಕೆ ಶೋಭೆ ಅಥವಾ ಸೊಗಸು ಕೊಡತಕ್ಕದ್ದೇ ಅಲಂಕಾರ'[2] ಎಂಬುದು ಅವರ ಅಭಿಪ್ರಾಯವಾಗಿತ್ತು.

ಹೆಂಗಸರಾಗಲಿ ಗಂಡಸರಾಗಲಿ, ಹುಟ್ಟು ಚೆಲುವು ಉಳ್ಳವರಿಗೆ ಒಡವೆಗಳೇ ಬೇಕಿಲ್ಲ; ಒಡವೆಗಳೇನಿದ್ದರೂ ಅವರ ಚೆಲುವನ್ನು ಹೆಚ್ಚಿಸಬಲ್ಲುವು. ಕುರೂಪಿಗಳು ಎಷ್ಟು ಒಡವೆಗಳನ್ನು ಹೇರಿಕೊಂಡರೂ ಅವರ ಚೆಲುವೇನೂ ಹೆಚ್ಚುವುದಿಲ್ಲ. ಹಾಗೆಯೇ ಕಾವ್ಯಗಳ ವಿಚಾರ. ಅವಕ್ಕೆ ಅಲಂಕಾರಗಳು ಆವಶ್ಯಕವೇನಲ್ಲ. ಅವು ಇಲ್ಲದೆಯೇ ಕಾವ್ಯ ಸುಂದರವಾಗಿರಬಹುದು. ಈ 'ಸೌಂದರ್ಯವೇ ಅಲಂಕಾರ' ಎಂದು ಹೇಳಿ,[3] ಅಲಂಕಾರ ಶಬ್ದದ ಅರ್ಥವನ್ನು ಹಿಗ್ಗಿಸಿದರು.

[ಹೀಗೆ, ಕಾವ್ಯದ ಹೊರ ರೂಪ, ಒಳ ತಿರುಳು—ಎರಡಕ್ಕೂ ಅಲಂಕಾರ ಎಂಬ ಮಾತನ್ನು ಅನ್ವಯಿಸಬಹುದು. ಕಾವ್ಯದ ಈ ಲಕ್ಷಣವನ್ನು ವಿವರಿಸುವ ಶಾಸ್ತ್ರಕ್ಕೆ 'ಅಲಂಕಾರಶಾಸ್ತ್ರ' ಎಂಬ ಹೆಸರು ರೂಢಿಗೆ ಬಂದಿತು. ಈ ಶಾಸ್ತ್ರಕ್ಕೆ 'ಕಾವ್ಯಮೀಮಾಂಸೆ' ಎಂಬ ಹೆಸರೂ ಬಳಕೆಯಲ್ಲಿದೆ. 'ಮೀಮಾಂಸೆ' ಎಂಬ ಶಬ್ದಕ್ಕೆ 'ತಿಳಿಯಬೇಕೆಂಬ ಇಚ್ಛೆ' ಎಂದು ಅರ್ಥ. 'ಕಾವ್ಯ ಮೀಮಾಂಸೆ' ಎಂದರೆ, 'ಕಾವ್ಯ ವಿಚಾರವನ್ನು ತಿಳಿಯುವ ಪ್ರಯತ್ನ' ಎಂದು ಹೇಳಬಹುದು. ಕಾವ್ಯಶಾಸ್ತ್ರ, ಸಾಹಿತ್ಯಶಾಸ್ತ್ರ ಎಂಬ ಹೆಸರುಗಳೂ ರೂಢಿಯಲ್ಲಿವೆ.]

ಮೇಲೆ ವಿವರಿಸಿದ ಅಲಂಕಾರ ಶಬ್ದದ ಎರಡು ಅರ್ಥಗಳಿಗೂ ಜನಪದ ಸಾಹಿತ್ಯದಿಂದ ಸೊಗಸಾದ ಉದಾಹರಣೆಗಳನ್ನು ಎತ್ತಿಕೊಡಬಹುದು :

ಅಳುವ ಕಂದನ ತುಟಿ ಹವಳದ ಕುಡಿಯಂತೆ
ಕುಡಿಹುಬ್ಬು ಬೇವಿನೆಸಳಂತೆ – ಕಣ್ನೋಟ
ಶಿವನ ಕೈಯಲಗು ಹೊಳೆವಂತೆ

ಈ ಪದ್ಯದ ಹೆಚ್ಚಿನ ಸೊಗಸನ್ನು ವಿವರಿಸುವ ಗೋಜಿಗೆ ಹೋಗದೆ, ಈ ತ್ರಿಪದಿಯ ಅಲಂಕಾರವನ್ನು ಮಾತ್ರ ಗಮನಿಸೋಣ. ಅಳುತ್ತಿರುವ ಮಗುವಿನ ಕೆಂಪು ತುಟಿಯನ್ನು ಕೆಂಪಾದ ಹವಳದ ಕುಡಿಗೂ, ಬಾಗಿದ ಹುಬ್ಬನ್ನು ಬೇವಿನೆಲೆಗೂ, ಕಣ್ಣೀರು ತುಂಬಿ ಫಳಫಳನೆ ಹೊಳೆಯುವ ಕಣ್ಣಿನ ನೋಟವನ್ನು ಈಶ್ವರನ ಕೈಯ ಕತ್ತಿಯ ಹೊಳಪಿಗೂ ಹೋಲಿಸಿದೆ. ಉಚಿತವಾದ ಹೋಲಿಕೆಗಳಿಂದ ಪದ್ಯಕ್ಕೆ ಸೊಗಸುಂಟಾಗಿದೆ. ಮಗುವಿನ

ಹುಟ್ಟು ಚೆಲುವಿನ ಅಂಶಗಳು ಆಳುವ ಕಾಲದಲ್ಲಿ ಹೆಚ್ಚಿರುವುದನ್ನು ಹೋಲಿಕೆಗಳು ಸ್ಪಷ್ಟಪಡಿಸುತ್ತವೆ.

ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕೆ
ಕೂಸು ಕಂದಯ್ಯ ಒಳಹೊರಗೆ– ಆಡಿದರೆ
ಬೀಸಣಿಗೆ ಗಾಳಿ ಸುಳಿದಾವು

"ಕಾಲು ಬಂದ ಮಗು ಮನೆಯ ತುಂಬ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸುಳಿದಾಡುತ್ತಿದ್ದರೆ ಬೀಸಣಿಗೆಯಿಂದ ಗಾಳಿ ಹಾಕಿದಂತೆ ಮನೆಯೊಳಗೆಲ್ಲ ಗಾಳಿ ಹರಿದಾಡುತ್ತದೆ. ಕವಿಯ ಪ್ರತಿಭೆ ಮಗುವಿನ ಚರ್ಯೆಯನ್ನು ಇಲ್ಲಿ ಎಷ್ಟು ಚೆನ್ನಾಗಿ ರೂಪಿಸಿದೆ! ಮಗು ಸಂತತವಾಗಿ ಹಿಂದಕ್ಕೂ ಮುಂದಕ್ಕೂ ಸುಳಿದಾಡುವುದರ ಸೊಗಸೂ, ಇದರಿಂದ ಮನೆಯವರಿಗೆ ಒದಗುವ ಸುಖಾನುಭವವೂ ಇಲ್ಲಿ ಸುವ್ಯಕ್ತವಾಗುತ್ತವೆ."[4] ಇಲ್ಲಿ ಸ್ಪಷ್ಟವಾಗಿ ಕಾಣುವ ಅಲಂಕಾರ ಇಲ್ಲ. ಬೀಸಣಿಗೆಗಾಳಿಗೂ ಮಗುವಿನ ಹರಿದಾಟದಿಂದ ಹೊರಡುವ ಗಾಳಿಗೂ ತುಂಬ ವ್ಯತ್ಯಾಸವುಂಟು. ನಿಜವಾಗಿ ಬೀಸಣಿಗೆ ಗಾಳಿಯೇ ಹೆಚ್ಚು, ಮೈಗೆ ಹಿತ, ತಂಪು. ಮಗುವಿನ ಓಡಾಟದ ಗಾಳಿ ಕಡಮೆಯಾದರೂ ತಾಯಿಯ ಕಣ್ಣಿಗೆ ಮಗುವಿನ ಹರಿದಾಟ ಸೊಗಸುವುದರಿಂದ ತುಸುಗಾಳಿಯೇ ಆಕೆಯ ಮನಸ್ಸಿಗೆ ಅತಿಶಯವೆನಿಸಿ ಬೀಸಣಿಗೆಯ ಗಾಳಿಗೆ ಸಮವಾಗಿ ಕಾಣುತ್ತದೆ. ಇಲ್ಲಿ ಆಲಂಕಾರಿಕರು ಹೇಳುವ 'ಅತಿಶಯೋಪಮೆ' ಎಂಬ ಅಲಂಕಾರವನ್ನು ನಾವು ಗುರುತಿಸಬಹುದು.

ತವರುಮನೆಯಿಂದ ಗಂಡನ ಮನೆಗೆ ಪ್ರಯಾಣ ಮಾಡುತ್ತಿರುವ ಹೆಣ್ಣುಮಗಳ ಅಗಲಿಕೆಯ ನೋವು ಎಷ್ಟು ಮನಮುಟ್ಟುವಂತೆ ಹೊರಪಟ್ಟಿದೆ ನೋಡಿ, ಈ ಕೆಳಗಿನ ಪದ್ಯದಲ್ಲಿ:

ತೊಟ್ಟಿಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು– ತಂಗ್ಯಮ್ಮ
ತಿಟ್ಹತ್ತಿ ತಿರುಗಿ ನೋಡ್ಯಾಳು

ಬಹುಶಃ ಚೊಚ್ಚಲು ಹೆರಿಗೆಗೆ ಬಂದಿದ್ದ ಮಗಳನ್ನು ತವರುಮನೆಯವರು ಉಡುಗೊರೆ ಬಳಿವಳಿ ಕೊಟ್ಟು ವಾತ್ಸಲ್ಯದಿಂದ ಕಳಿಸಿಕೊಟ್ಟಿರುವುದು, ಬಿಟ್ಟು ಬಂದ ತವರನ್ನು ಕೊನೆಯಬಾರಿಗೆ ನೋಡುವುದರಲ್ಲಿ ಅವಳ ತವರಿನ ಒಲವು– ಈ ಸಂಗತಿ ಅಣ್ಣನ ಮಾತಿನಲ್ಲಿ ಸೂಚಿತವಾಗಿದೆ, ಅಷ್ಟೆ. ಎಷ್ಟೋ ವೇಳೆ ಕವಿ

ತನ್ನ ಮನಸ್ಸಿನಲ್ಲಿರುವ ಭಾವವನ್ನು ಉಪಯೋಗಿಸುವ ಮಾತಿನಲ್ಲಾಗಲಿ ಅದರ ಸಾಮಾನ್ಯವಾದ ಅರ್ಥದಲ್ಲಾಗಲಿ ನೇರವಾಗಿ ತಿಳಿಸದೆ ಓದುಗರಿಗೆ ಆ ಭಾವ ಹೊಳೆಯುವಂತೆ ಮಾಡಿಬಿಡುತ್ತಾನೆ. ಹೀಗೆ ಹೇಳುವುದನ್ನು ಅಲಂಕಾರ ಶಾಸ್ತ್ರದಲ್ಲಿ 'ವ್ಯಂಗ್ಯ' ಅಥವಾ 'ಧ್ವನಿ' ಎಂದು ಕರೆದಿದೆ. ಮೊದಲಿನ ಎರಡು ಪದ್ಯಗಳಲ್ಲಿ ಮಗುವಿನ ಎರಡು ಚಿತ್ರಗಳು 'ಅಲಂಕಾರ'ಗಳ ಸಹಾಯ ದಿಂದ ಸುಂದರವೆನಿಸಿ ನಮ್ಮ ಒಳಗಣ್ಣಿಗೆ ಕಾಣುವಂತಾಗಿವೆ; ಆ ಚಿತ್ರಗಳ ಪರಿಭಾವನೆಯಲ್ಲಿ ಮನಸ್ಸು ನಿಲ್ಲುತ್ತದೆ, ನಲಿಯುತ್ತದೆ, ಲೀನವಾಗುತ್ತದೆ. ಚಿತ್ರ ಕಣ್ಣಿಗೆ ಕಟ್ಟುವುದಕ್ಕಿಂತ ಮುಂದೆಹೋಗಿ, ನಮ್ಮ ಮನಸ್ಸು-ಹೃದಯ ಚಲಿಸಿ, ಕರಗುವುದಿಲ್ಲ. ಮೂರನೆಯ ಪದ್ಯದಲ್ಲಿ, ಮಗಳ ಅಗಲಿಕೆಯ ನೋವು ನಮ್ಮ ಮನಸನ್ನು ಕರಗಿಸಿ, ಹೃದಯವನ್ನು ಕಲಕಿ, ಅವಳ ನೋವಿನಲ್ಲಿ ಭಾಗಿಯಾಗಿಯೂ ಒಂದು ಬಗೆಯ ಆನಂದವನ್ನೂ ನಾವು ಪಡೆಯುವಂತಾಗಿದೆ. ಇದನ್ನೇ ಕಾವ್ಯದ 'ರಸ', 'ರಸಾನುಭವ' ಎನ್ನುವುದು. ರಸಕ್ಕೆ ನಮ್ಮ ಮನಸ್ಸನ್ನು ಆರ್ದ್ರಮಾಡುವ ಅಥವಾ ಕರಗಿಸುವ ಶಕ್ತಿ ಇದೆ. ಈ ಕರಗಿಸುವ ಶಕ್ತಿಯೂ ಸೌಂದರ್ಯವೇ. 'ಸೌಂದರ್ಯ' ಎನ್ನುವ ಸಂಸ್ಕೃತ ಪದಕ್ಕೆ ಅದೇ ಅರ್ಥ.[5] ಮನುಷ್ಯನ ಸೊಗಸಾದ ವಸ್ತ್ರಾಲಂಕಾರ, ಒಡವೆ, ಒಳ್ಳೆಯ ಮೈಕಟ್ಟು, ಬಣ್ಣ ಇವು ಇತರರನ್ನು ಆಕರ್ಷಿಸುವಂತೆ ಅವನ ಒಳ್ಳೆಯ ಶೀಲ (ನಡತೆ), ಸದ್ಗುಣ, ಮುಂತಾದ ಕಣ್ಣಿಗೆ ಕಾಣದ ವಿಷಯಗಳೂ ಆಕರ್ಷಿಸುತ್ತವೆ. ಮೇಲಿನ ಮೊದಲೆರಡು ಉದಾಹರಣೆಗಳಲ್ಲಿ ಹೋಲಿಕೆಗಳು (ಉಪಮೆಗಳು) ಅರ್ಥಕ್ಕೆ ಸಂಬಂಧಪಟ್ಟಿವೆ; ಅರ್ಥಕ್ಕೆ ಸಂಬಂಧಪಟ್ಟ ಅಥವಾ ಅರ್ಥದ ಸೊಗಸನ್ನು ಹೆಚ್ಚಿಸುವ ಅಲಂಕಾರಗಳು ಅರ್ಥಾಲಂಕಾರಗಳು. ಎರಡನೆಯ ಪದ್ಯದಲ್ಲಿ ಕೂಸು, ಬೀಸು ಎಂಬ ಪದಗಳಲ್ಲಿ 'ಸ'ಕಾರ ಒಂದು ಗೊತ್ತಾದ ಕಡೆ ಮತ್ತೆ ಮತ್ತೆ ಬರುವುದು, ಮೂರನೆಯ ಪದ್ಯದಲ್ಲಿ 'ತ'ಕಾರ ಕೆಲವು ಪದಗಳ ಮೊದಲಕ್ಷರವಾಗಿ ಬರುವುದು—ಇವು ಪದ್ಯದ ನಡೆಯಲ್ಲಿ ಅಲ್ಲಲ್ಲೇ ನಿಲುಗಡೆಯನ್ನು ಸೂಚಿಸುತ್ತವೆ; ಒಂದು ಬಗೆಯ ಅಂದವನ್ನು ಸಾಧಿಸುತ್ತವೆ. ಇವುಗಳಿಂದ ಅರ್ಥಕ್ಕೆ ಯಾವ ಹೆಚ್ಚಿನ ಪ್ರಯೋಜನವಾಗಲಿ ಸೊಗಸಾಗಲಿ ಉಂಟಾಗಿಲ್ಲ. ಇವು ಕಿವಿಗೆ ಹಿತ. ಶಬ್ದಕ್ಕೆ ಮಾತ್ರ ಸಂಬಂಧ ಪಟ್ಟ ಶಬ್ದಾಲಂಕಾರಗಳು. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನಡೆದರೆ, ಕುಣಿದರೆ, ವ್ಯಕ್ತಿಯ ಸೌಂದರ್ಯ ಹೆಚ್ಚುವುದಿಲ್ಲ. ಪ್ರಾಸ, ಅನುಪ್ರಾಸ, ಯಮಕ ಎಂದು ಅಲಂಕಾರ ಶಾಸ್ತ್ರದಲ್ಲಿ ವಿಂಗಡಿಸಿರುವ ಈ ಶಬ್ದಾಲಂಕಾರಗಳು

ಕಾವ್ಯಕ್ಕೆ ಅಗತ್ಯವೇನಲ್ಲ. ಶಬ್ದ ಮತ್ತು ಅರ್ಥಗಳನ್ನು ಕಾವ್ಯದ ಶರೀರವೆನ್ನಬಹುದು; ಅವಿಲ್ಲದೆ ಕಾವ್ಯವೇ ಆಗದು. ಆದ್ದರಿಂದಲೇ, 'ಶಬ್ದಾರ್ಥಗಳು ಹೊಂದಿಕೊಂಡು ಒಂದಿಗಿರುವುದು ಕಾವ್ಯ' ('ಶಬ್ದಾರ್ಥೌಸಹಿತೌ ಕಾವ್ಯಂ')[6] ಎಂಬ ಕಾವ್ಯಲಕ್ಷಣ ಸೂತ್ರ ಪ್ರಸಿದ್ಧವಾಯಿತು. (ಇಲ್ಲಿ ಕೂಡ, ಕವಿ ಮನಸ್ಸಿನಲ್ಲಿ ಕುರಿತಿರುವ ಅರ್ಥ ಎಂದು ತಿಳಿಯಬೇಕು). ಶರೀರಕ್ಕೆ ಒಡವೆಗಳು ಅಗತ್ಯವೇನಲ್ಲ; ಹಾಕಿಕೊಂಡರೆ ಹಾಕಿಕೊಳ್ಳಬಹುದು, ಬಿಟ್ಟರೆ ಬಿಡಬಹುದು. ಶರೀರ ಸೌಂದರ್ಯವನ್ನು ಅವು ಹೆಚ್ಚಿಸಬಲ್ಲವೇ ಹೊರತು ಅವೇ ಶರೀರ ಸೌಂದರ್ಯವಲ್ಲ. ಸುಂದರವಾಗಿರುವ ಸ್ತ್ರೀಪುರುಷರಿಗೆ ಅಲಂಕಾರವೇಕೆ? ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡರೆ ಬಾಧಕವೇನಿಲ್ಲ.

ಕಾವ್ಯವಧುವಿನ ಶರೀರ ಸೌಂದರ್ಯವೆಂದರೆ ಶಬ್ದಾರ್ಥಗಳ ಸೌಂದರ್ಯ. ಅಕ್ಷರಗಳನ್ನೂ ಪದಗಳನ್ನೂ ಸ್ಥೂಲವಾಗಿ ಕಿವಿಗೆ ಹಿತಕರವಾದವು, ಅಷ್ಟು ಹಿತಕರವಲ್ಲದವು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಇವುಗಳ ನಡುವಣ ಪ್ರಭೇದಗಳು ಎಷ್ಟೋ ಇವೆ. ಪದಗಳನ್ನು ಜೊತೆಗೂಡಿಸಿ ಎಂದರೆ ಸಮಾಸ ಮಾಡಿಯೂ ಪ್ರಯೋಗಿಸಬಹುದು. ಅಕ್ಷರ, ಪದ, ಪದಬಂಧ, ಸಮಾಸ ಇವುಗಳ ಬೇರೆಬೇರೆ ರೀತಿಯ ಪ್ರಯೋಗಗಳ ಜೊತೆಗೆ ಅಲಂಕಾರವೂ ಸೇರಿಬಿಟ್ಟರೆ, ಕಾವ್ಯವನ್ನು ಬರೆಯುವ 'ಮಾತಿನ ಬಗೆ' ಅಥವಾ 'ಉಕ್ತಿರೀತಿ' ಅನೇಕ ಬಗೆಯಾಗುತ್ತದೆ. ಬಹುಶಃ ಮೊತ್ತಮೊದಲಿಗನಾದ ಅಲಂಕಾರಿಕ ಎನ್ನಬಹುದಾದ ಭಾಮಹನೆಂಬವನು* ಈ ಅನೇಕ ಪ್ರಕಾರಗಳನ್ನು ಗುರುತಿಸುವ ಗೋಜಿಗೆ ಹೋಗದೆ, ಎರಡು ಪ್ರಕಾರಗಳನ್ನು ಮಾತ್ರ ಹೇಳಿದ. ಅವನ ಅಭಿಪ್ರಾಯದಂತೆ, "ಲೋಕೋತ್ತರವಾದ ಚಮತ್ಕಾರವು ಕಂಡು ಬರುವ ಕಾವ್ಯಮಾರ್ಗಗಳು ಮಾತ್ರ ಅಲಂಕೃತವೆನ್ನಬಹುದು. ಈ ಲೋಕೋತ್ತರವಾದ ಚಮತ್ಕಾರವನ್ನೇ ಭಾಮಹನು ಸಾಮಾನ್ಯವಾಗಿ 'ವಕ್ರೋಕ್ತಿ'ಯೆನ್ನುತ್ತಾನೆ. ಆದ್ದರಿಂದ ವಕ್ರೋಕ್ತಿ ಅಥವಾ ಅತಿಶಯೋಕ್ತಿ ಭಾಮಹನ ಪ್ರಕಾರ ಅಲಂಕಾರಗಳೆಲ್ಲಕ್ಕೂ ಅನ್ವಯಿಸುವ ಸಾಮಾನ್ಯ ಲಕ್ಷಣ. ಲೋಕ

---

* ಸಂಸ್ಕೃತ ಅಲಂಕಾರ ಶಾಸ್ತ್ರದ ಚರಿತ್ರೆಯಲ್ಲಿ ಭಾಮಹ ಮತ್ತು ದಂಡಿ ಸು. 6-7 ನೆಯ ಶತಮಾನಗಳಲ್ಲಿ ಇದ್ದವರು. ಇವರಲ್ಲಿ ಯಾರು ಮೊದಲು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಈ ವಿಚಾರದ ಚರ್ಚೆ ಇಲ್ಲಿ ಬೇಕಿಲ್ಲ. ಭಾಮಹ ಮೊದಲಿನವನು ಎಂದು ಇಲ್ಲಿ ಭಾವಿಸಲಾಗಿದೆ, ಅಷ್ಟೆ.

ವಲ್ಲಿದ್ದಂತೆಯೇ ವಸ್ತುವನ್ನು ವಿವರವಾಗಿ ವರ್ಣಿಸುವುದರಿಂದ ಚಮತ್ಕಾರ ಬಂದರೆ ಸ್ವಭಾವೋಕ್ತಿಯೆನಿಸುತ್ತದೆ".[7] ದಂಡಿಯೂ ಈ ಎರಡು ಭೇದಗಳನ್ನು ಗಮನಿಸಿದ; ಅವುಗಳನ್ನು 'ಮಾರ್ಗ'ಗಳೆಂದು ಹೇಳಿದ; ಸಾಲಂಕೃತ ಮಾರ್ಗ ವನ್ನು (ಉತ್ತರದ) 'ಗೌಡ' ಮಾರ್ಗವೆಂದೂ ಸ್ವಾಭಾವಿಕವಾಗಿ ನಿರೂಪಿಸುವ ಮಾರ್ಗವನ್ನು (ದಕ್ಷಿಣದ) 'ವೈದರ್ಭ' ಮಾರ್ಗವೆಂದೂ ಕರೆದ; ಈ ಹಿಂದೆ ಸೂಚಿಸಿದಂತೆ, ಅಕ್ಷರ ಮತ್ತು ಪದಗಳು ಒಂದು ಗೊತ್ತಾದ ರೀತಿಯಲ್ಲಿ ಸೇರ್ಪಡೆಯಾಗುವುದರಿಂದ (ಪದಬಂಧದಿಂದ) ಉಂಟಾಗುವ ಪರಿಣಾಮವನ್ನು 'ಗುಣ' ಎಂದು ಗುರುತಿಸಿ, ಅಂಥ ಹತ್ತು ಗುಣಗಳು ವೈದರ್ಭಮಾರ್ಗದ ಹತ್ತು ಪ್ರಾಣಗಳು ಎಂದ. ('ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ'). ಇದರಿಂದ, ಮುಖ್ಯ ಕಾವ್ಯತತ್ತ್ವವನ್ನು ನಿಶ್ಚಯಿಸುವುದರಲ್ಲಿ ದಂಡಿ ಒಂದು ಹೆಜ್ಜೆ ಮುಂದೆ ಇಟ್ಟಂತಾಯಿತು. ಕನ್ನಡದ ಪ್ರಥಮ ಅಲಂಕಾರ ಗ್ರಂಥ ಕರ್ತನಾದ ಶ್ರೀವಿಜಯನು ಭಾಮಹನ ವಿಂಗಡನೆಯನ್ನು ಒಪ್ಪಿಕೊಂಡರೂ ಅವನು ದಂಡಿಯನ್ನು ಅನುಸರಿಸಿ, ಹತ್ತು ಶಬ್ದಗುಣಗಳು ಮತ್ತು ದಕ್ಷಿಣೋತ್ತರ ಮಾರ್ಗಗಳ ವಿಚಾರವನ್ನು ತನ್ನ 'ಕವಿರಾಜಮಾರ್ಗ' ದಲ್ಲಿ ವಿಸ್ತಾರವಾಗಿ ವಿವರಿಸಿದ್ದಾನೆ.

ಕಾವ್ಯಶರೀರಕ್ಕೆ ಸೇರದ—ಎಂದರೆ ಅದರ ಅಂಗವಲ್ಲದ—ಅಲಂಕಾರಕ್ಕಿಂತ ಬೇರೆಯಾಗಿ ಶರೀರವನ್ನೆಲ್ಲ (ಎಂದರೆ ಶಬ್ದಾರ್ಥಗಳನ್ನು) ವ್ಯಾಪಿಸಿರುವ ಗುಣವೇ ಕಾವ್ಯದ ಪ್ರಾಣ ಎಂಬುದನ್ನು ಒಪ್ಪಿಕೊಳ್ಳಬೇಕು.* ದಂಡಿ ಶಬ್ದಕ್ಕೆ ಸಂಬಂಧಪಟ್ಟಂತೆ ಮಾತ್ರ ಗುಣಗಳ ವಿಶ್ಲೇಷಣೆ ಮಾಡಿದ್ದ. ಅವನ ತರುವಾಯದ ಆಲಂಕಾರಿಕನಾದ ವಾಮನ ಶಬ್ದಗುಣಗಳು ಹತ್ತು, ಅರ್ಥ ಗುಣಗಳು ಹತ್ತು ಎಂದು ವಿಭಜನೆ ಮಾಡಿದನು. "ವಾಮನನು ಗುಣಗಳಿಗೆ ದಂಡಿಯ ಗ್ರಂಥದಲ್ಲಿ ದೊರೆತಿದ್ದ ಸ್ಥಾನವನ್ನು... ಇನ್ನೂ ದೃಢಪಡಿಸಿ,

---

* ಇಲ್ಲಿ ಒಂದು ಸಂಗತಿಯನ್ನು ಗಮನಿಸಬೇಕು : ಒಡವೆಗಳನ್ನು ಮೈಮೇಲೆ ಹಾಕಿ ಕೊಂಡು ಕಳಚಿಡುವಂತೆ, ಕವಿ ಅಲಂಕಾರಗಳನ್ನು ಪ್ರತ್ಯೇಕವಾಗಿ ರಚಿಸಿ ಕಾವ್ಯಕ್ಕೆ ಸೇರಿಸು ತ್ತಾನೆ ಎಂದು ತಿಳಿಯಬಾರದು. ಕರ್ಣನು ಹುಟ್ಟುವಾಗಲೇ ಕವಚಕುಂಡಲಗಳನ್ನು ಧರಿಸಿಕೊಂಡು ಹುಟ್ಟಿದಂತೆ, ಕಾವ್ಯನಿರ್ಮಾಣ ಕಾಲದಲ್ಲಿ ಅಲಂಕಾರಗಳು ಕಾವ್ಯಶರೀರದ ಒಂದು ಜೀವಂತ ಭಾಗವಾಗಿ ಅದರೊಂದಿಗೆ ರೂಪಗೊಂಡಿರುತ್ತವೆ. ಹೂವು ಗಿಡದಲ್ಲಿಯೆ ಬಿಟ್ಟು ಗಿಡಕ್ಕೆ ಅಲಂಕಾರವಾಗಿರುವಂತೆ ; ಅರಳುವಾಗ ಹೂವಿನ ಜೊತೆಯೇ ಅದರ ಬಣ್ಣ ಇರುವಂತೆ. ಕಾವ್ಯದ ಅಲಂಕಾರ ಗಿಡಕ್ಕೆ ಸಿಕ್ಕಿಸಿದ ಬಣ್ಣದ ಕಾಗದದ ಹೂವಲ್ಲ.

ಅಲಂಕಾರಗಳ ಪ್ರಾಶಸ್ತ್ಯವನ್ನು ತಗ್ಗಿಸಿದನು. 'ಕಾವ್ಯ ಸೌಂದರ್ಯವನ್ನು ಉಂಟುಮಾಡತಕ್ಕ ಧರ್ಮಗಳು ಗುಣಗಳು; ಅದನ್ನು ಹೆಚ್ಚಿಸತಕ್ಕವು ಮಾತ್ರ ಅಲಂಕಾರಗಳು. ಮೊದಲಿನವು ಇರಲೇಬೇಕಾದವು' ಎಂಬ ವಾಮನನ ಸೂತ್ರಗಳು ಪ್ರಸಿದ್ಧವಾಗಿವೆ....ದಂಡಿ 'ಮಾರ್ಗವೆನ್ನುವುದನ್ನು ವಾಮನನು 'ರೀತಿ' ಎಂಬ ಹೊಸ ಪದದಿಂದ ಕರೆದಿರುವುದನ್ನೂ ಇಲ್ಲಿ ಗಮನಿಸಬೇಕು. ಪದವೊಂದೇಅಲ್ಲ; ಅದರ ಪದವಿಯೂ ಹೊಸದು: "ರೀತಿರಾತ್ಮಾ ಕಾವ್ಯಸ್ಯ" ("ರೀತಿಯೇ ಕಾವ್ಯದ ಆತ್ಮ"). ವಾಮನನಿಗೆ ಹಿಂದಿನ ಯಾವ ಆಲಂಕಾರಿಕನೂ ಹೀಗೆ ಕಾವ್ಯದ 'ಆತ್ಮ'ವನ್ನೂ ವಿಚಾರಮಾಡಲು ಹೊರಟಿರಲಿಲ್ಲ. ರೀತಿ ಯೆಂದರೆ ಗುಣಾತ್ಮಕವಾದ ಪದರಚನೆ".[8] ಇಂದಿನ ಸಾಹಿತ್ಯ ವಿಮರ್ಶೆಯಲ್ಲಿ ಯಾವುದನ್ನು 'ಶೈಲಿ' ಯೆನ್ನುತ್ತೇವೆಯೋ ಅದಕ್ಕೂ ಈಗ ಪ್ರಸ್ತಾಪಮಾಡಿದ ರೀತಿಗೂ ಸ್ವಲ್ಪ ವ್ಯತ್ಯಾಸವಿದೆ. ಅದರ ವಿವರಣೆ ಸದ್ಯಕ್ಕೆ ಬೇಡ.

ಕಾವ್ಯದ ಆತ್ಮದ ವಿಚಾರವಾಗಿ ಒಂದು ಹೊಸ ದೃಷ್ಟಿಯಿಂದ ವಿಚಾರ ಮಾಡಿ, 'ಧ್ವನಿ'ಯೇ ಕಾವ್ಯದ ಆತ್ಮವೆಂದು ಹೇಳಿ, ಕಾವ್ಯದಲ್ಲಿ ಗುಣ ಅಲಂಕಾರ ರಸಗಳಿಗೆ ಉಚಿತವಾದ ಸ್ಥಾನವನ್ನು ಕಲ್ಪಿಸಿದವನು ಸಂಸ್ಕೃತ ಆಲಂಕಾರಿಕ ಆನಂದವರ್ಧನಾಚಾರ್ಯ. 'ಧ್ವನಿ' ಎಂಬ ಕಾವ್ಯತತ್ತ್ವದ ಮಾತು ತನಗಿಂತಲೂ ಹಿಂದೆ ಇದ್ದುದೇ ಎಂದು ಆತನೇ ಹೇಳಿದ್ದಾನೆ. ಧ್ವನಿ ತತ್ತ್ವವನ್ನು ವಿರೋಧಿಸುವವರೂ ಇದ್ದರು. ಕವಿರಾಜಮಾರ್ಗದಲ್ಲಿಯೇ 'ಧ್ವನಿಯೆಂಬುದಲಂಕಾರಂ' (iii-208) ಎಂಬ ಮಾತು ಬಂದಿದೆ. ಈ ಧ್ವನಿವಾದ ರಸದ ಪ್ರಾಶಸ್ತ್ಯವನ್ನು ಕುಗ್ಗಿಸಲಿಲ್ಲ. ಕಾವ್ಯದಲ್ಲಿ ಒಂದು ವಿಷಯ(ವಸ್ತು)ವೇ ಆಗಲಿ, ಹೋಲಿಕೆ ಮುಂತಾದ ಅಲಂಕಾರಗಳೇ ಆಗಲಿ, ಶೃಂಗಾರಾದಿ ರಸಗಳೇ ಆಗಲಿ-ಯಾವುದನ್ನೂ ಬಿಡಿಸಿ ಹೇಳದೆ, ಓದುಗನ ಊಹೆಗೇ ಬಿಟ್ಟು ಅದು ಸೂಚಿತವಾಗುವಂತೆ ಹೇಳುವುದೇ 'ಧ್ವನಿ'ಮಾರ್ಗ. ಈ ಮೊದಲೇ ಉದಾಹರಿಸಿರುವ ಮೂರನೆಯ ಪದ್ಯದಲ್ಲಿ ಹೆಣ್ಣು ಮಗಳ ತವರಿನ ಅಗಲಿಕೆಯ ನೋವನ್ನು ಬಿಡಿಸಿ ತಿಳಿಸಿಲ್ಲ; ಆದರೂ ನಮ್ಮ ಅನುಭವಕ್ಕೆ ಬರುತ್ತದೆ, ಅವಳ ವೇದನೆಯಲ್ಲಿ ನಾವೂ ಭಾಗಿಯಾಗುತ್ತೇವೆ. ಕೊನೆಗೂ, ನಾವು ಅನುಭವಿಸುವುದು ರಸವೇ. ಅದಕ್ಕೇ ಕಾವ್ಯದಲ್ಲಿ ಪಟ್ಟ. ಹೀಗಿರು ವುದರಿಂದ, ಧ್ವನಿ ತತ್ತ್ವವನ್ನು ಅಲ್ಲಗಳೆಯದಿದ್ದರೂ 'ವಾಕ್ಯಂ ರಸಾತ್ಮಕಂ

ಕಾವ್ಯಂ' (ರಸವತ್ತಾಗಿರುವ ವಾಕ್ಯ ಕಾವ್ಯ) ಎಂಬ ಪ್ರಸಿದ್ಧವಾದ ಹೇಳಿಕೆಯೂ ಮುಂದೆ ಬಂದಿತು.[9]

ಕೆಲವು ವೇಳೆ, ಯಾವ ರಸದ ಸೋಂಕೂ ಇಲ್ಲದ, ಧ್ವನಿಯೂ ಇಲ್ಲದ, ಕಣ್ಣಿಗೆ ಕಟ್ಟುವಂಥ ಸುಂದರವಾದ ವರ್ಣನೆ ಇರಬಹುದು. ನಮ್ಮ ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯೇ ಇಂಥ ವರ್ಣನೆಗಳು ಲೆಕ್ಕವಿಲ್ಲದಷ್ಟು ಇವೆ. ಇವುಗಳ ಗತಿಯೇನು ? ಇವು ಕಾವ್ಯವಲ್ಲವೆ ? ಎಂಬ ಪ್ರಶ್ನೆಗೆ ಉತ್ತರವಾಗಿ ಎಂಬಂತೆ ಒಬ್ಬ ಆಲಂಕಾರಿಕ-'ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದವೂ ಕಾವ್ಯ' ಎಂಬ ಸಿದ್ಧಾಂತವನ್ನು ಮುಂದಿಟ್ಟನು.[10]

ಕಾವ್ಯದಲ್ಲಿ ಎಲ್ಲವೂ ಮುಖ್ಯವೇ. ಆತ್ಮಕ್ಕೆ ಶರೀರವೇ ವಾಸಸ್ಥಾನ. ಶಬ್ದಾರ್ಥಗಳನ್ನು ಬಿಟ್ಟು ರಸವೂ ಇಲ್ಲ, ಧ್ವನಿಯೂ ಇಲ್ಲ. ಅಲಂಕಾರ ಅಗತ್ಯವಲ್ಲದಿದ್ದರೂ ಅದಕ್ಕೂ ಸ್ಥಾನವಿದೆ. ಎಲ್ಲವೂ ಉಚಿತವಾದ ರೀತಿಯಲ್ಲಿ ಬಂದಿರಬೇಕು, ಅಷ್ಟೆ. ಈವರೆಗೆ ವಿವರಿಸಿದ ಮುಖ್ಯ ಕಾವ್ಯ ಲಕ್ಷಣಗಳನ್ನು ಪರಸ್ಪರ ಹೊಂದಾಣಿಕೆ ಮಾಡಿ, ಹೀಗೆ ಹೇಳಬಹುದು :

"...ಅರ್ಥಾಲಂಕಾರಗಳು ರಸಪುಷ್ಟಿಯನ್ನುಂಟುಮಾಡುವ ಕಡೆಗಳಲ್ಲಿ ಮಾತ್ರ ಅವುಗಳಿಂದ ಕಾವ್ಯಾನಂದವು ಉಂಟಾಗುತ್ತದೆ. ಗುಣಗಳೂ ಅಷ್ಟೆ... ಪ್ರಾಚೀನರು ಪ್ರಾಶಸ್ತ್ಯಕೊಡುವ ರೀತಿ ಗುಣಾಲಂಕಾರಗಳು ಬೊಂಬೆಗೆ ಮಾಡುವ ಶೃಂಗಾರಗಳ ಹಾಗೆ ! ಆದ್ದರಿಂದ ರೀತಿ ಗುಣಾಲಂಕಾರಗಳಿಂದ ಮಾತ್ರ ಕೂಡಿದ ಶಬ್ದಾರ್ಥಗಳು ಒಂದು ವೇಳೆ ಕಾವ್ಯವಾದರೂ 'ಚಿತ್ರ ಕಾವ್ಯ' ವಾಗಬಹುದೇ* ಹೊರತು ಉತ್ತಮ ಕಾವ್ಯವಾಗಲಾರವು. ಉತ್ತಮ ಕಾವ್ಯದಲ್ಲಿ ರಸವತ್ತಾದ ಅರ್ಥವಿರಬೇಕು. ಕಾವ್ಯದಲ್ಲಿ 'ರಸ'ವೇ ರಮಣೀಯ ವೆಂದೂ, ಅದಿದ್ದರೇ ಅರ್ಥವು 'ಇಷ್ಟ'ವಾಗುವುದೆಂದೂ ರಸವು ಯಾವಾಗಲೂ 'ವ್ಯಂಗ್ಯ' ಅಥವಾ 'ಧ್ವನಿತ'ವಾಗುವುದೆಂದೂ ಹೇಳಿಬಿಟ್ಟರೆ ಕಾವ್ಯಾತ್ಮ ವಿಚಾರವಾಗಿ ಇರತಕ್ಕ ಪರಸ್ಪರ ಭಿನ್ನಾಭಿಪ್ರಾಯಗಳು ಹೋದಂತಾಗು ತ್ತದೆ."[11] ಆದರೂ, "ನಮ್ಮ ಕಾವ್ಯಮೀಮಾಂಸೆಯ ತಿರುಳೆಲ್ಲ ರಸ–ಧ್ವನಿ–ಔಚಿತ್ಯ ಎಂಬ ಮಾತುಗಳಲ್ಲಿ ಅಡಗಿದೆ"[12] ಎಂಬುದನ್ನು ಮರೆಯುವಂತಿಲ್ಲ.

---

* 'ಚಿತ್ರಕಾವ್ಯ' ಎಂದರೆ ಚಮತ್ಕಾರವಾದ ಅಲಂಕಾರಗಳು ಮುಖ್ಯವಾಗಿರುವ ಸಾಧಾರಣ ಕಾವ್ಯ, ಮೂರನೆಯ ದರ್ಜೆಯದು.

ಅಲಂಕಾರ ಶಾಸ್ತ್ರದಲ್ಲಿ, ಅಲಂಕಾರ ಪ್ರಸ್ಥಾನ, ರೀತಿ ಪ್ರಸ್ಥಾನ, ಧ್ವನಿ ಪ್ರಸ್ಥಾನ ಎಂದು ಮೂರು ಪ್ರಸ್ಥಾನಗಳನ್ನು ಹೇಳಿದೆ. ಕೆಲವರು 'ರಸ ಪ್ರಸ್ಥಾನ'ವನ್ನೂ ಸೇರಿಸುತ್ತಾರೆ. ಪ್ರಸ್ಥಾನ ಎಂದರೆ ಒಂದು ನಿಶ್ಚಿತ ಸ್ಥಳದಿಂದ ಇನ್ನೊಂದು ನಿಶ್ಚಿತ ಸ್ಥಳಕ್ಕೆ ಪ್ರಯಾಣ ಹೊರಡುವುದು ಎಂದು ಅರ್ಥ. ಕಾವ್ಯದ ಸ್ವರೂಪವನ್ನು ನಿರ್ಣಯಿಸಲು ಹೊರಟಾಗ ಕೆಲವರು ಅಲಂಕಾರದ ನೆಲೆಯನ್ನು ತಲುಪಿ, ಅದಕ್ಕೇ ಪ್ರಾಶಸ್ತ್ಯಕೊಟ್ಟರು. ಇದೇ ಅಲಂಕಾರ ಪ್ರಸ್ಥಾನ, ಹೀಗೆಯೇ ಇತರ ಪ್ರಸ್ಥಾನಗಳನ್ನೂ ಅರ್ಥಮಾಡಿಕೊಳ್ಳಬೇಕು. ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಈ ಪ್ರಸ್ಥಾನದ ವಿಷಯವನ್ನೇ ಮುಖ್ಯವಾಗಿಟ್ಟುಕೊಂಡು ಗ್ರಂಥಗಳು ಹುಟ್ಟಿವೆ. ಕೆಲವು ಪ್ರಸಿದ್ಧ ಅಲಂಕಾರ ಗ್ರಂಥಗಳಲ್ಲಿ ಕಾವ್ಯಲಕ್ಷಣ ಸಂಬಂಧವಾದ ಎಲ್ಲ ವಿಚಾರಗಳನ್ನೂ ಚರ್ಚಿಸಿದೆ. ಕನ್ನಡದಲ್ಲಿ ಅಲಂಕಾರ ಶಾಸ್ತ್ರದ ವಿಚಾರಗಳನ್ನು ಕುರಿತು ಗ್ರಂಥ ರಚನೆ ಮಾಡಿರುವವರೆಲ್ಲ ಬಹುಮಟ್ಟಿಗೆ ಸಂಸ್ಕೃತ ಮೂಲ ಗ್ರಂಥಗಳಲ್ಲಿ ಹೇಳಿರುವ ವಿಚಾರಗಳನ್ನು ಸಂಪೂರ್ಣವಾಗಿ ಸ್ವೀಕರಿಸಿ ಕನ್ನಡದಲ್ಲಿ ನಿರೂಪಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಪ್ರಾಚೀನ ಕನ್ನಡ ಕವಿಗಳು ಸಂಸ್ಕೃತ ಕಾವ್ಯಗಳನ್ನೇ ಮಾದರಿಯಾಗಿಟ್ಟುಕೊಂಡು ಕಾವ್ಯಗಳನ್ನು ರಚಿಸಿದರು. ಅಲ್ಲದೆ, ಅವರು ತಮ್ಮ ತಮ್ಮ ಕಾಲದವರೆಗೆ ಬೆಳೆದು ಬಂದಿದ್ದ ಸಂಸ್ಕೃತ ಅಲಂಕಾರ ಶಾಸ್ತ್ರದಲ್ಲಿ ಪಾಂಡಿತ್ಯ ಹೊಂದಿದ್ದರು. ಹೀಗೆ ಕನ್ನಡದ 'ಲಕ್ಷ್ಯ'ಗಳು (ಲಕ್ಷಣಕ್ಕೆ ಮಾದರಿಯಾದ ಕಾವ್ಯಗಳು) ಸಂಸ್ಕೃತ ಕಾವ್ಯಲಕ್ಷಣವನ್ನೇ ಅನುಸರಿಸಿ ರಚಿತವಾದವು. ಲಕ್ಷ್ಯಗಳನ್ನು ಅವಲಂಬಿಸಿ ಲಕ್ಷಣ ಗ್ರಂಥಗಳು ಹುಟ್ಟಬೇಕಾದದ್ದು ಒಂದು ಸ್ವಾಭಾವಿಕ ಬೆಳವಣಿಗೆ. ಕನ್ನಡ ಲಕ್ಷಣ ಗ್ರಂಥಕಾರರು ಕನ್ನಡ ಲಕ್ಷ್ಯಗಳನ್ನೂ ಗಮನದಲ್ಲಿರಿಸಿಕೊಂಡಿದ್ದರೂ, ಬಹುಮಟ್ಟಿಗೆ ಸಂಸ್ಕೃತ ಲಕ್ಷಣ ಗ್ರಂಥಗಳ ಜಾಡನ್ನೇ ಹಿಡಿದು ನಡೆದರು. ಕಾವ್ಯ ಲಕ್ಷಣ ಸಂಸ್ಕೃತದ್ದೇ ಆದರೂ ಕನ್ನಡದ ಎರಕಕ್ಕೆ ಬಿದ್ದು, ಕನ್ನಡದಲ್ಲೇ ಸ್ವತಂತ್ರವಾಗಿ ಸೃಷ್ಟಿಯಾಯಿತೋ ಏನೋ ಎಂಬಂತೆ ಸ್ವಂತ ಕಳೆಯಿಂದ ಕೂಡಿ ಒಂದು ಪುನರ್ನಿರ್ಮಾಣ ಕಾರ್ಯವೇ ನಡೆಯಿತು. ಇದು ಸಂತೋಷದ ಸಂಗತಿ. ಕನ್ನಡ ಲಕ್ಷಣ ಗ್ರಂಥಗಳನ್ನು ಸಂಪಾದನೆ ಮಾಡಿ ಪ್ರಕಟಿಸಿದ ವಿದ್ವಾಂಸರು ಅವು ಎಷ್ಟರಮಟ್ಟಿಗೆ ಸಂಸ್ಕೃತ ಮೂಲಗಳಿಗೆ ಋಣಿಯಾಗಿವೆ ಎಂಬುದನ್ನು ತಮ್ಮ ಪೀಠಿಕೆಗಳಲ್ಲಿ ಸೂಚಿಸುತ್ತ ಬಂದಿದ್ದಾರೆ. ಈಚೆಗೆ ಕೆ. ಕೃಷ್ಣಮೂರ್ತಿಗಳಂಥ ಸಂಸ್ಕೃತ ವಿದ್ವಾಂಸರು ಅನೇಕ ಮೂಲ

ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಮಾಡಿ ಮಹೋಪಕಾರ ಮಾಡಿದ್ದಾರೆ. ಇದರಿಂದ, ಕನ್ನಡ ಗ್ರಂಥಗಳನ್ನು ಸಂಸ್ಕೃತ ಮೂಲಗಳೊಡನೆ ಹೋಲಿಸಿ, ಅವುಗಳ ಬೆಲೆ ಕಟ್ಟಲು ಸಾಧ್ಯವಾಗುತ್ತದೆ. ಈ ಕೆಲಸಕ್ಕೆ ಪ್ರತ್ಯೇಕವಾದ, ಆಳವಾದ, ಅಧ್ಯಯನಗಳು ನಡೆಯಬೇಕು. ಈ ಗ್ರಂಥದ ಇತಿಮಿತಿಯಲ್ಲಿ ಅದು ಸಾಧ್ಯವಿಲ್ಲ; ಅದು ಈ ಗ್ರಂಥದ ಉದ್ದೇಶವೂ ಅಲ್ಲ. ಮುಂದೆ, ಕನ್ನಡ ಕಾವ್ಯಲಕ್ಷಣ ಗ್ರಂಥಗಳ ಒಂದು ಸಂಕ್ಷೇಪವಾದ ಪರಿಚಯವನ್ನು ಮಾಡಿ ಕೊಟ್ಟಿದೆ. ಅಗತ್ಯವಾದ ಕಡೆಗಳಲ್ಲಿ ಅವುಗಳ ವಿಶೇಷ ಗುಣಗಳನ್ನು ತೋರಿಸ ಲಾಗಿದೆ. ಪ್ರಾಚೀನ ಕನ್ನಡ ಕಾವ್ಯಗಳ ಸ್ವಾರಸ್ಯವನ್ನು ಪೂರ್ತಿಯಾಗಿ ಸವಿಯಬೇಕಾದರೆ, ಈ ಲಕ್ಷಣ ಗ್ರಂಥಗಳ ವ್ಯಾಸಂಗ ಅಗತ್ಯ ಎಂದು ಬೇರೆ ಹೇಳಬೇಕಾಗಿಲ್ಲ.

ಸಂಸ್ಕೃತ ಅಲಂಕಾರ ಶಾಸ್ತ್ರಗ್ರಂಥಗಳ ಮತ್ತು ಅವುಗಳ ಕರ್ತೃಗಳ ಪಟ್ಟಿಯನ್ನು ಅನುಬಂಧವಾಗಿ ಕೊಟ್ಟಿದೆ.

ಕನ್ನಡ ಲಕ್ಷಣ ಗ್ರಂಥಗಳು

ಶ್ರೀವಿಜಯನ ಕವಿರಾಜಮಾರ್ಗ

ಈಗ ತಿಳಿದುಬಂದಿರುವ ಮಟ್ಟಿಗೆ ಕವಿರಾಜಮಾರ್ಗವೇ ಕನ್ನಡದಲ್ಲಿ ಮೊತ್ತ ಮೊದಲನೆಯ ಕೃತಿ, ಹಾಗೂ ಮೊತ್ತ ಮೊದಲನೆಯ ಲಕ್ಷಣ ಗ್ರಂಥ. ಇದು ರಾಷ್ಟ್ರಕೂಟವಂಶದ ಒಂದನೆಯ ಅಮೋಘವರ್ಷ ನೃಪತುಂಗನ ಕಾಲದಲ್ಲಿ (ಕ್ರಿ.ಶ. 814-877) ರಚಿತವಾಯಿತು. ಇದನ್ನು ರಚಿಸಿದವನು ನೃಪತುಂಗನೇ, ಅಥವಾ ಅವನ ಆಸ್ಥಾನದಲ್ಲಿದ್ದ ಶ್ರೀವಿಜಯನೇ, ಎಂಬ ವಿಷಯದಲ್ಲಿ ಬಹಳ ಚರ್ಚೆ ನಡೆದಿದೆ. ಗ್ರಂಥದ ಪ್ರತಿ ಅಧ್ಯಾಯದ ಕೊನೆಯಲ್ಲೂ 'ನೃಪತುಂಗ ದೇವನ ಒಪ್ಪಿಗೆ ಪಡೆದ ಕವಿರಾಜಮಾರ್ಗದಲ್ಲಿ' ('ನೃಪತುಂಗದೇವಾನುಮತ ಮಪ್ಪ ಕವಿರಾಜಮಾರ್ಗದೊಳ್') ಎಂಬ ಮಾತು ಬರುತ್ತದೆ. ಅಲ್ಲದೆ, ಅಲಂ ಕಾರ ಶಾಸ್ತ್ರದ ಕೆಲವು ವಿಚಾರಗಳನ್ನು ತಿಳಿಸುವಾಗ 'ಇದು ನೃಪತುಂಗದೇವನ ಅಭಿಪ್ರಾಯ', 'ನೃಪತುಂಗದೇವನ ಮಾರ್ಗ', 'ಅತಿಶಯಧವಳನ ಕ್ರಮ', ಎಂದುಮುಂತಾಗಿ ಹತ್ತಿಪ್ಪತ್ತು ಸಲ ನೃಪತುಂಗನ ಹೆಸರು ಹೇಳಿದೆ. ಮುಖ್ಯ ವಾಗಿ ಈ ಹೇಳಿಕೆಗಳ ಆಧಾರದ ಮೇಲೆ ಕವಿರಾಜಮಾರ್ಗವನ್ನು ಮೊದಲು ಸಂಪಾದಿಸಿ ಪ್ರಕಟಿಸಿದ ಕೆ. ಬಿ. ಪಾಠಕ ಎಂಬ ವಿದ್ವಾಂಸರು ನೃಪತುಂಗನೇ

ಗ್ರಂಥಕರ್ತ ಎಂದು ತೀರ್ಮಾನಿಸಿದರು. ಪ್ರತಿ ಅಧ್ಯಾಯದ ಕಡೆಯ ಪದ್ಯದಲ್ಲಿಯೂ 'ಶ್ರೀವಿಜಯನಿಂದ ಪ್ರಭೂತವಾದದ್ದು' (ಎಂದರೆ ಉಂಟಾದದ್ದು) ಎಂಬ ಮಾತೂ ಇದೆ. ದುರ್ಗಸಿಂಹನೆಂಬ ಕವಿ (ಕ್ರಿ.ಶ. 1031) 'ಶ್ರೀವಿಜಯರ ಕವಿಮಾರ್ಗವು, ಕವಿಜನಕ್ಕೆ ಕನ್ನಡಿಯೂ ಕೈದೀವಿಗೆಯೂ ಆಯಿತು' ಎಂದು ಕೊಂಡಾಡಿದ್ದಾನೆ. ಕವಿರಾಜಮಾರ್ಗದ ಕಡೆಯ ಹತ್ತಾರು ಪದ್ಯಗಳಲ್ಲಿ ನೃಪತುಂಗನ ಸಭಾಸದನ ವರ್ಣನೆಯೂ ಬರುತ್ತದೆ. ಇನ್ನೂ ಅನೇಕ ಸಾಕ್ಷ್ಯಗಳನ್ನು ಚೆನ್ನಾಗಿ ಪರೀಕ್ಷೆಮಾಡಿ ಟಿ. ಎಸ್. ವೆಂಕಣ್ಣಯ್ಯನವರೇ ಮುಂತಾದ ಈಚಿನ ಹಲವು ವಿದ್ವಾಂಸರು ಶ್ರೀವಿಜಯನೇ ಗ್ರಂಥಕರ್ತ ಎಂದು ಸ್ಥಾಪಿಸಿದ್ದಾರೆ.

ಕವಿರಾಜಮಾರ್ಗವು ಮೊತ್ತಮೊದಲನೆಯ ಅಲಂಕಾರ ಗ್ರಂಥ ಎಂಬ ಕಾರಣದಿಂದ ಮಾತ್ರವಲ್ಲದೆ, ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಲೂ, ಆ ಕಾಲದ ಕನ್ನಡ ನಾಡು ನುಡಿ ಜನಗಳ ವಿಚಾರವಾಗಿ ತುಂಬ ಉಪಯುಕ್ತವಾದ ತಿಳಿವಳಿಕೆಯನ್ನು ಕೊಡತಕ್ಕದ್ದು ಎಂಬ ಕಾರಣದಿಂದಲೂ, ಒಂದು ಮಹತ್ವದ ಗ್ರಂಥವೆನಿಸಿದೆ. ಛಂದಸ್ಸು ಮತ್ತು ವ್ಯಾಕರಣಗಳ ವಿಚಾರವಾಗಿಯೂ ಕೆಲವು ಮುಖ್ಯ ಸಂಗತಿಗಳು ತಿಳಿದು ಬರುತ್ತವೆ.

ದುರ್ಗಸಿಂಹನೆಂಬ ಕವಿ ಹೇಳಿರುವಂತೆ, ಕಾವ್ಯರಚನೆ ಮಾಡಬೇಕೆನ್ನುವವರಿಗೆ ಕವಿರಾಜಮಾರ್ಗ ಒಂದು ಕನ್ನಡಿ, ದಾರಿದೀಪ. ಶ್ರೀವಿಜಯನು ಲಕ್ಷಣ ವಿಚಾರಗಳನ್ನು ವಿವರಿಸುವುದಕ್ಕೆ ಮುಂಚೆ ಕವಿಗಳಾಗಬೇಕೆನ್ನುವವರಿಗೆ ಒಂದು ಉನ್ನತ ಆದರ್ಶವನ್ನು ಮುಂದಿಡಬೇಕೆಂಬ ಉದ್ದೇಶದಿಂದ, ಸಂಸ್ಕೃತ ಗದ್ಯದಲ್ಲಿ ಬಾಣನ ಹರ್ಷಚರಿತ ಕಾದಂಬರಿಗಳನ್ನು ಸ್ಮರಿಸುತ್ತಾನೆ; ಪದ್ಯಕವಿಗಳಾದ ಗುಣಸೂರಿ, ನಾರಾಯಣ, ಭಾರವಿ, ಕಾಳಿದಾಸ, ಮಾಘ, ಇವರನ್ನು ನೆನೆಯುತ್ತಾನೆ. ಕನ್ನಡದಲ್ಲಿಯೂ ಶ್ರೇಷ್ಠರಾದ ಗದ್ಯಕವಿಗಳಿದ್ದರು; ಅವರು ಗದ್ಯ ಪದ್ಯ ಮಿಶ್ರವಾದ ಕಾವ್ಯಗಳನ್ನು ರಚಿಸುತ್ತಿದ್ದರು; ಅವು 'ಗದ್ಯಕಥೆ'* ಎಂದು ಪ್ರಸಿದ್ಧವಾಗಿದ್ದುವು. ಈ

* ಗದ್ಯ ಪದ್ಯ ಮಿಶ್ರಕಾವ್ಯವನ್ನು ದಂಡಿ 'ಚಂಪೂ' ಎಂದು ಕರೆದಿದ್ದಾನೆ. ಶ್ರೀವಿಜಯ ಅದನ್ನು ಗದ್ಯಕಥೆ ಎಂದು ಕರೆದಿರುವುದನ್ನು ನೋಡಿದರೆ, ಇದರಲ್ಲಿ ಗದ್ಯದ ಭಾಗ ಬಹಳ ಹೆಚ್ಚಾಗಿತ್ತೆಂದು ಕಾಣುತ್ತದೆ. ಈ ಗದ್ಯ ಕಥೆಯ ಪ್ರಕಾರಕ್ಕೆ ಚತ್ತಾಣ ಬೆದಂಡೆಗಳು ಬೆರೆತು, ಬಹು ಕಾಲವಾದ ಮೇಲೆ ಈ ವಿಶೇಷ ಕನ್ನಡ ಕಾವ್ಯಪ್ರಕಾರಕ್ಕೆ 'ಚಂಪು' ಎಂಬ ಹೆಸರು ಕನ್ನಡದಲ್ಲಿ ಬಳಕೆಗೆ ಬಂದಂತೆ ಕಾಣುತ್ತದೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ.

ಶ್ರೇಷ್ಠರಾದ ಗದ್ಯಕವಿಗಳಲ್ಲಿ ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ, ಮುಂತಾದವರು ಮುಖ್ಯರು. ಕನ್ನಡದ ಪದ್ಯಕವಿಗಳಲ್ಲಿ ಶ್ರೀವಿಜಯ ಕವೀಶ್ವರ, (ಪಂಡಿತ) ಚಂದ್ರ, ಲೋಕಪಾಲ, ಮುಂತಾದವರು ಘನವಾದ ಪುರಾಣ ವಸ್ತುಗಳನ್ನು ನಿರೂಪಿಸುವ ಕಾವ್ಯಗಳನ್ನು ಬರೆದಿದ್ದರು. ಶ್ರೇಷ್ಠ ಕಾವ್ಯಕ್ಕೆ ಇವರ ಕೃತಿಗಳೇ ಲಕ್ಷ್ಯ, ಮಾದರಿ. ಈ ಪುರಾತನ ಕವಿಗಳು ಸಂಸ್ಕೃತ ಕಾವ್ಯಮಾರ್ಗವನ್ನು ಅನುಸರಿಸಿ ರಚಿಸಿದ ತಮ್ಮ ಕಾವ್ಯಗಳಲ್ಲಿ 'ಚತ್ತಾಣ' ಮತ್ತು 'ಬೆದಂಡೆ' ಎಂಬ, ಬಹುಶಃ 'ಹಾಡುಗಬ್ಬ' ಎಂದು ಕನ್ನಡದಲ್ಲಿ ಹೆಚ್ಚುಗಾರಿಕೆ ಪಡೆದಿದ್ದ ಕಾವ್ಯಜಾತಿಗಳನ್ನು ಸೇರ್ಪಡೆ ಮಾಡಿದರು. ಶ್ರೀವಿಜಯನ ಹೇಳಿಕೆಯಂತೆ, ಕಂದವೂ (ಅಕ್ಷರ)ವೃತ್ತವೂ ಒಂದಾದಮೇಲೆ ಒಂದರಂತೆ ಕ್ರಮವಾಗಿ ಬಂದಿದ್ದು, ಇವುಗಳ ಜೊತೆಗೆ ಮಾತ್ರಾ ಛಂದಸ್ಸಿನ ಪದ್ಯ('ಜಾತಿ')ಗಳೂ ಕೂಡಿಕೊಂಡಿದ್ದರೆ, 'ಸುಂದರ ರೂಪದ' ಬೆದಂಡೆ-ಗಬ್ಬವಾಗುವುದು. ಕಂದಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, (ಅಕ್ಷರ) ವೃತ್ತಗಳೂ, ಅಕ್ಕರ ಚೌಪದಿ ಗೀತಿಕೆ ತ್ರಿಪದಿ - ಈ ಅಚ್ಚಗನ್ನಡದ ಪದ್ಯ ಜಾತಿಗಳೂ ಇರುವ ಕಾವ್ಯ ಚತ್ತಾಣ ಎನ್ನಿಸಿಕೊಳ್ಳುವುದು. ಈ ಜಾತಿಯ ಕಾವ್ಯಗಳು ಯಾವುವೂ ಈವರೆಗೆ ಸಿಕ್ಕಿಲ್ಲ. ಅನೇಕ ಕವಿಗಳು ಇವುಗಳ ಪ್ರಸ್ತಾಪವನ್ನೇನೋ ಮಾಡಿದ್ದಾರೆ.

ಈ ವಿಷಯಗಳನ್ನು ತಿಳಿಸುವುದಕ್ಕೆ ಮುಂಚೆ ಕಾವ್ಯದ ಸ್ವರೂಪವನ್ನು ಕುರಿತು ಶ್ರೀವಿಜಯನು ಹೇಳಿರುವ ಮಾತುಗಳು ತುಂಬ ಗಮನಾರ್ಹವಾಗಿವೆ. ಇವನಿಗೆ ಹಿಂದಿನ ಯಾವ ಸಂಸ್ಕೃತ ಲಕ್ಷಣ ಗ್ರಂಥದಲ್ಲಿಯೂ ಈ ವಿಚಾರ ಸರಣಿ ಕಂಡುಬರುವುದಿಲ್ಲ. ಕಾವ್ಯಸೃಷ್ಟಿಗೆ ಮಾತೇ ಮೂಲವಷ್ಟೆ. ಮೃಗ ಪಕ್ಷಿಗಳ 'ಭಾಷೆ'ಗೂ ಮನುಷ್ಯರ ವಚನ ಪ್ರವೃತ್ತಿಗೂ ಇರುವ ವ್ಯತ್ಯಾಸವನ್ನು ಸೂಚಿಸಿ, ಮೆಟ್ಟಿಲುಮೆಟ್ಟಿಲಾಗಿ 'ನುಡಿಬಲ್ಮೆ'ಯನ್ನು ವಿವರಿಸಿ :

ಕುರಿತಂತು ಪೆರರ ಬಗೆಯಂ
ತೆರೆದಿರೆ ಪೆರರ್ಗೆ ಅರಿಪಲಾರ್ಪವಂ ಮಾತರಿವಂ ;
ಕಿರಿದರೊಳೆ ಪಿರಿದುಂ ಅರ್ಥಮಂ
ಅರಿಪಲ್ ನೆರೆವಾತನ್ ಆತನಿಂದಂ ನಿಪುಣಂ (i-15)

ನುಡಿಯಂ ಛಂದದೊಳ್ ಒಂದಿರೆ
ತೊಡರ್ಚಲ್ ಅರಿವಾತನ್ ಆತನಿಂದಂ ಜಾಣಂ ;
ತಡೆಯದೆ ಮಹಾಧ್ವಕೃತಿಗಳಂ
ಒಡರಿಸಲ್ ಆರ್ಪಾತನ್ ಎಲ್ಲರಿಂದಂ ಬಲ್ಲಂ (i-16)

[ತಾನು ಹೇಳಬೇಕೆಂದಿರುವುದನ್ನು ಇತರರ ಮನಸ್ಸಿಗೆ ಹಿಡಿಸುವ ರೀತಿಯಲ್ಲಿ ತಿಳಿಸ ಬಲ್ಲವನು ಮಾತುಬಲ್ಲವನು ; ಹಿರಿದಾದ ಅರ್ಥವನ್ನು ಕೆಲವೇ ಮಾತುಗಳಲ್ಲಿ ತಿಳಿಸಲು ಸಮರ್ಥನಾದವನು ಆತನಿಗಿಂತ ನಿಪುಣ. ಇವನಿಗಿಂತಲೂ ಜಾಣನಾದವನೆಂದರೆ, ನುಡಿ ಗಳನ್ನು ಛಂದಸ್ಸಿನಲ್ಲಿ ಕೂಡಿಸಿ ಹೇಳಬಲ್ಲವನು (ಎಂದರೆ, ಪದ್ಯರಚನೆ ಮಾಡಬಲ್ಲವನು). ಮಹಾಮಾರ್ಗಕಾವ್ಯಗಳನ್ನು ರಚಿಸಬಲ್ಲವನು ಎಲ್ಲರಿಗಿಂತಲೂ ಸಮರ್ಥ.]

–ಎಲ್ಲರಿಗಿಂತಲೂ ಮಹಾಕವಿ ಶ್ರೇಷ್ಠನೆನ್ನುತ್ತಾನೆ. ಅನಂತರ ಉತ್ತಮ ಕಾವ್ಯದ ಕಾರ್ಯವನ್ನೂ ಪ್ರಯೋಜನವನ್ನೂ ಮನಮುಟ್ಟುವಂತೆ ತಿಳಿಸಿ ದ್ದಾನೆ (ಪುಟ 6 ನ್ನು ನೋಡಿ).

ಇಂಥ 'ನುಡಿಬಲ್ಮೆ' ಯಾರಿಗೆ ಕೂಡಿಬರುತ್ತದೆ ? ದಂಡಿಯನ್ನು ಅನುಸರಿಸಿ ಶ್ರೀವಿಜಯ ಹೀಗೆ ಹೇಳುತ್ತಾನೆ : "ಪ್ರತಿಭೆ, ಸ್ವಾಭಾವಿಕವಾದ ಚತುರತೆ, ವಿದ್ವಾಂಸರ ಸೇವೆ (ಎಂದರೆ ಅವರ ಬಳಿ ಶಿಷ್ಯತ್ವ), ಶಾಸ್ತ್ರ ವಿದ್ಯೆಗಳ ಪರಿಚಯ–ಇವು ಮಾತಿನ ಬಲ್ಮೆಯನ್ನೂ ನಿಪುಣತೆಯನ್ನೂ ತಂದು ಕೊಡುತ್ತವೆ". (1-11)

ಕಾವ್ಯದ ಸ್ವರೂಪವನ್ನು (ಎಂದರೆ ಅದರ ಲಕ್ಷಣವನ್ನು) ಕುರಿತು ಭಾಮಹನೂ ದಂಡಿಯೂ ಸಂಕ್ಷೇಪವಾಗಿ ಸೂತ್ರರೂಪದಲ್ಲಿ ಹೇಳಿರುವುದನ್ನೇ ಶ್ರೀವಿಜಯನು ವಿಶದಪಡಿಸಿ ಇನ್ನೂ ಚೆನ್ನಾಗಿ ಹೇಳಿದ್ದಾನೆ. "ಶಬ್ದ, ಅರ್ಥ ಎರಡೂ ಕೂಡಿ ಕಾವ್ಯ" ಎಂಬುದು ಭಾಮಹನ ಸೂತ್ರವಾದರೆ, "ಕಾವ್ಯದ ಶರೀರ, ಅದರ ಅಲಂಕಾರಗಳು–ಇವು ಯಾವುವೆಂಬುದನ್ನು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ. 'ಇಷ್ಟ'ವಾದ ಅರ್ಥದಿಂದ ಕೂಡಿರುವ ಪದಗಳ ಸಮೂಹವೇ ಆ ಶರೀರ" ಎಂಬುದು ದಂಡಿಯ ವಿವರಣೆ.[13] ಶ್ರೀವಿಜಯನು, "ಕಾವ್ಯವು ಕವಿಭಾವದಿಂದ ನಿರ್ಮಿತವಾದದ್ದು ; ಬೇರೆ ಬೇರೆ ವಿಧಾನಗಳಲ್ಲಿ ಚೆನ್ನಾಗಿ ಹೇಳಿದ ವಚೋಮಾರ್ಗ (ಮಾತಿನ ರೀತಿ); ಅದು ಒಂದು ವಿಶೇಷ ರೀತಿಯ ಶಬ್ದರಚನೆ; ನಾನಾ ಬಗೆಯ ಅರ್ಥಗಳಿಂದ ರೂಪಗೊಂಡ ಅಲಂಕಾರ," (1-22) ಎಂದು ಹೇಳಿರುವುದು ಸೂತ್ರರೂಪದಲ್ಲಿ ಸಂಕ್ಷೇಪ ವಾಗಿಲ್ಲದಿದ್ದರೂ ಬಹುಮಟ್ಟಿಗೆ ಪರಿಪೂರ್ಣವಾಗಿದೆ. ಕಾವ್ಯದ ಎಲ್ಲ ಅಂಗಗಳಿಗೂ ಕವಿಯ ಭಾವವೇ ಮೂಲವೆಂಬುದನ್ನು ಗಮನಿಸತಕ್ಕದಾಗಿದೆ. ಹಾಗೆಯೇ, ಇಡಿಯ ಕಾವ್ಯವನ್ನೇ ಒಂದು 'ಅಲಂಕಾರ' ಎಂದಿರುವುದರಿಂದ, ಕಾವ್ಯದ ಸೌಂದರ್ಯ ಅದರ ಹೊರಭಾಗ (ಶಬ್ದ, ಅರ್ಥ, ಅಲಂಕಾರ, ಗುಣ,

ರೀತಿ) ಮತ್ತು ಒಳಭಾಗ(ರಸ)ಗಳೆರಡನ್ನೂ ವ್ಯಾಪಿಸಿರತಕ್ಕದ್ದು ಎಂಬ ಆಶಯವನ್ನು ನಾವು ಗ್ರಹಿಸಬಹುದು.

ಈ ವಿಷಯಗಳನ್ನು ಹೇಳಿ, ಶ್ರೀವಿಜಯನು ಕನ್ನಡ ನಾಡಿನ ವಿಸ್ತಾರವನ್ನು ಈ ಕೆಳಗಿನ ಪದ್ಯದಲ್ಲಿ ಹೆಮ್ಮೆಯಿಂದಲೇ ತಿಳಿಸಿದ್ದಾನೆ :

ಕಾವೇರಿಯಿಂದಂ ಆ ಗೋ
ದಾವರಿವರಂ ಇರ್ಪ ನಾಡದು ಆ ಕನ್ನಡದೊಳ್
ಭಾವಿಸಿದ ಜನಪದಂ, ವಸು-
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ (i-36)

[ಕಾವೇರಿಯಿಂದ ಗೋದಾವರಿಯ ವರೆಗೆ ಇರುವ ಆ ನಾಡು ಕನ್ನಡದ್ದೆಂದು ಮಾನ್ಯವಾದ ದೇಶ; ಭೂಮಂಡಲದಲ್ಲಿ ಸೇರಿಕೊಂಡು, ತನ್ನ ವಿಶೇಷತೆಯಿಂದ ಪ್ರಸಿದ್ಧವಾಗಿರುವ ದೇಶ.]

ಇಲ್ಲಿ 'ಕನ್ನಡ' ಎಂಬ ಮಾತು 'ಕನ್ನಡನಾಡು' ಎಂಬ ಅರ್ಥದಲ್ಲಿಯೇ ಬಂದಿದೆ. ಆಂಡಯ್ಯನೆಂಬ ಕವಿ ಇದೇ ಅರ್ಥದಲ್ಲಿ 'ಕನ್ನಡವೆನಿಪ್ಪಾ ನಾಡು ಚೆಲ್ವಾಯ್ತು' ಎಂದು ಹೇಳಿರುವುದನ್ನೂ ಇಲ್ಲಿ ನೆನೆಯಬಹುದು. ಮೇಲಿನ ಪದ್ಯದ "ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಂ" ಎಂಬ ಮಾತಿಗೆ ಒಂದು ಹೊಸ ಅರ್ಥವನ್ನು ಕಲ್ಪಿಸಿ, ಅದು "ಈಗ ನಾವು ಫೆಡರಲ್ (Federal) ಎನ್ನುವ ರಾಜ್ಯಘಟನೆಯ ತತ್ತ್ವವನ್ನು ಸೂಚಿಸತಕ್ಕದ್ದಾಗಿದೆ" ಎಂದು ವಿದ್ವಾಂಸರೊಬ್ಬರು ವಿವರಿಸಿರುವುದು ಹೊಸ ಬೆಳಕನ್ನು ಚೆಲ್ಲಿದೆ.[14] ನೃಪತುಂಗನ ಕಾಲದಲ್ಲಿ ಕರ್ನಾಟಕ ಸಾಮ್ರಾಜ್ಯ ಬೇರೆ ಬೇರೆ ಅಧೀನ ರಾಜ್ಯಗಳನ್ನು ಒಳಗೊಂಡಿತ್ತಷ್ಟೆ. ಬೇರೆಬೇರೆ ದೇಶಭಾಷೆಗಳನ್ನು ಮಾತಾಡುವ ಜನವರ್ಗಗಳೂ ಸಾಮ್ರಾಜ್ಯದಲ್ಲಿ ಇದ್ದಿರಬೇಕು. ಕನ್ನಡ ಜನ ಇತರರೊಂದಿಗೆ ಹೊಂದಿಕೊಂಡು ಬಾಳುತ್ತಿದ್ದಿರಬೇಕು. ಈ ಹೊಂದಿಕೊಳ್ಳುವ ಗುಣವಲ್ಲದೆ, ಕನ್ನಡ ಜನಸಾಮಾನ್ಯದಲ್ಲಿ ಕೂಡ ಕಾವ್ಯಗಳ ಜ್ಞಾನ, ಭಾಷಾಜ್ಞಾನ, ಕಾವ್ಯಗಳನ್ನು ವಿಮರ್ಶೆಮಾಡುವ ಶಕ್ತಿ—ಇವು ನೆಲಸಿದ್ದುವು ಎಂಬುದನ್ನು ಈ ಪದ್ಯಗಳು ಸಾರಿಹೇಳುತ್ತವೆ :

ಪದನರಿದು ನುಡಿಯಲುಂ, ನುಡಿ
ದುದನ್ ಅರಿದು ಆರಯಲುಂ ಆರ್ಪರ್ ಆ ನಾಡವರ್ಗಳ್ ;
ಚದುರರ್ ನಿಜದಿಂ ; ಕುರಿತು ಓ-
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ (i-38)

ಕುರಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್,
ಕಿರುವಕ್ಕಳುಂ ಆ ಮೂಗರುಂ
ಅರಿಪಲ್ಕೆ ಅರಿವರ್ ವಿವೇಕಮಂ ಮಾತುಗಳಂ (i·39)

ಜಾಣರ್ಕಳಲ್ಲದವರುಂ
ಪೂಣ್ಗರ್ ; ಅರಿಯದೆಯುಂ ಅರಿವಪೋಲ್ ಅವಗುಣದಾ
ತಾಣಮನ್ ಇನಿಸು ಎಡೆವೆತ್ತೊಡೆ,
ಮಾಣದೆ. ಪಿಡಿದದನೆ, ಕೃತಿಗಳಂ ಕೆಡೆನುಡಿವರ್, (i-40)

[ಆ ನಾಡಿನ ಜನ (ಹೆಚ್ಚು ಕಡಮೆಗಳಾಗದಂತೆ ಸಂದರ್ಭಕ್ಕೆ ತಕ್ಕಹಾಗೆ) ಹದವರಿತು ಮಾತಾಡುವುದಕ್ಕೂ. (ಇತರರು) ಆಡಿದ್ದನ್ನು ಅರ್ಥಮಾಡಿಕೊಂಡು ವಿಚಾರಮಾಡುವುದಕ್ಕೂ, ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶ ಪೂರ್ವಕವಾಗಿ ಓದಿ ಅಭ್ಯಾಸಮಾಡದಿದ್ದರೂ, ಕವಿಗಳು ಉಪಯೋಗಿಸಿದ್ದ (ಸ್ವಾರಸ್ಯವಾಗಿದ್ದ) ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು.* (ಎಂದರೆ, ಅವುಗಳನ್ನು ಕೇಳಿ ಅವುಗಳ ಸಾರವತ್ತಾದ ಭಾಗಗಳನ್ನು ಬಲ್ಲವರಾಗಿದ್ದರು ಎಂದು ಅರ್ಥ). (i-38)

ಮೇಲೆ ಕುರಿತು ಹೇಳಿದಂಥವರಲ್ಲದೆ ಉಳಿದವರೂ ಕೂಡ ತಾವು ಆಡುವ ಮಾತಿನಲ್ಲಿ ಬಹು ಜಾಣರು. ಚಿಕ್ಕ ಮಕ್ಕಳು ಹಾಗೂ ಮೂಗರು ಕೂಡ ಬುದ್ಧಿವಾದ ಹೇಳುವುದಕ್ಕೂ ಸರಿಯಾಗಿ ಮಾತಾಡುವುದನ್ನು ಹೇಳಿಕೊಡುವುದಕ್ಕೂ ಶಕ್ತಿಯುಳ್ಳವರಾಗಿದ್ದರು. (i-39)

ಹಾಗೆ ಜಾಣರಲ್ಲದವರೂ ಕೂಡ ಗಟ್ಟಿಗರೇ ; ಕಾವ್ಯದ ಗುಣದೋಷಗಳ ವಿಚಾರವಾಗಿ (ಕಾವ್ಯ ಶಾಸ್ತ್ರವನ್ನು ಬಲ್ಲವರಂತೆ) ತಿಳಿವಳಿಕೆಯಿಲ್ಲದಿದ್ದರೂ ತಿಳಿದವರಂತೆ, ಕಾವ್ಯಗಳಲ್ಲಿ ಎಲ್ಲಿಯಾದರೂ ನಡುವೆ ಅಲ್ಪಸ್ವಲ್ಪ ದೋಷ ಕಂಡುಬಂದರೂ ಬಿಡದೆ ಅದನ್ನು ಎತ್ತಿ ತೋರಿಸಿ ಕಾವ್ಯಗಳನ್ನು ಟೀಕಿಸುತ್ತಿದ್ದರು. (i-40)]

ಇದಿಷ್ಟು ಕನ್ನಡ ಜನರ ಮಾತುಗಾರಿಕೆ, ಕಾವ್ಯವಿಚಾರದಲ್ಲಿ ಅವರಿಗಿದ್ದ ಅಭಿರುಚಿ, ಸಾಮರ್ಥ್ಯ—ಇವುಗಳ ವಿಷಯವಾಯಿತು. ಇನ್ನೂ ಅನೇಕ ಬಗೆಯಲ್ಲಿ ಅವರು ಅನೇಕ ಗುಣಗಳ ಗಣಿಯಾಗಿದ್ದರು. ಈ ಪದ್ಯದಲ್ಲಿ ಅವರ ಗುಣಸಂಪನ್ನತೆಯನ್ನು ವರ್ಣಿಸಿದೆ :

---

* 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ವಾಕ್ಯಕ್ಕೆ, 'ವಿದ್ಯಾವಂತರಲ್ಲದಿದ್ದರೂ ಕಾವ್ಯರಚನೆ ಮಾಡಬಲ್ಲವರಾಗಿದ್ದರು' ಎಂದೂ ವಿದ್ವಾಂಸರು ಅರ್ಥಹೇಳುತ್ತಾ ಬಂದಿದ್ದಾರೆ.

ಸುಭಟರ್ಕಳ್ ಕವಿಗಳ್ ಸು-
ಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗಳ್
ಅಭಿಮಾನಿಗಳ್ ಅತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್-ನಾಡವರ್ಗಳ್ (ii–28)

[ಕನ್ನಡ ನಾಡಿನ ಜನ ಯುದ್ಧವೀರರು, ಕವಿಗಳು, ಒಳ್ಳೆಯ ಒಡೆತನ ಮಾಡಬಲ್ಲವರು, ಚೆಲುವರು, ಮೇಲುಮಟ್ಟದ ಜನ, ಗುಣವಂತರು, ಮಾನಿಷ್ಠರು, ಭಯಂಕರರು, ಗಂಭೀರ ವಾದ ಮನಸ್ಸುಳ್ಳವರು, ವಿವೇಕವುಳ್ಳವರು. (ii–28)]

ಮೇಲಿನ ವರ್ಣನೆಗಳಲ್ಲಿ ಸ್ವಲ್ಪ ಉತ್ಪ್ರೇಕ್ಷೆಯಿರಬಹುದು. ಆದರೆ, ಒಟ್ಟಿನಲ್ಲಿ ಅಂದಿನ ಕನ್ನಡಿಗರು ಸುಸಂಸ್ಕೃತರು, ಬುದ್ಧಿವಂತರು, ಗುಣಸಂಪನ್ನರು ಸಾಹಸಿಗಳು. ಇಂದಿನ ಸಾಮಾನ್ಯಜನ ಅಂದಿನ ಜನರಂತೆ ಇರುವರೆ ? ಪ್ರತಿ ಯೊಬ್ಬನೂ ತನ್ನನ್ನು ತಾನು ಪರೀಕ್ಷೆಮಾಡಿಕೊಂಡು ಆ ಗುಣಮಟ್ಟದಲ್ಲಿದ್ದರೆ ಸಂತೋಷಪಡಬೇಕು ; ಇಲ್ಲದಿದ್ದರೆ, ಆ ಮಟ್ಟಕ್ಕೇರಲು ಪ್ರಯತ್ನಪಡಬೇಕು. ಇದು, ಕವಿರಾಜಮಾರ್ಗ ಎಲ್ಲ ಕಾಲದ ಕನ್ನಡಿಗರಿಗೂ ಹಾಕಿಕೊಟ್ಟಿರುವ ನಡೆ ನುಡಿಗಳ ಪೇಲ್ಪಂಕ್ತಿ.

ಶಾಸ್ತ್ರಗ್ರಂಥದಲ್ಲಿ ಕನ್ನಡ ಜನದ ಶೀಲಸಂಪತ್ತಿನ ವರ್ಣನೆ ಯಾಕೆ ? ಎಂಬ ಸಂದೇಹ ಯಾರಿಗಾದರೂ ಹುಟ್ಟಬಹುದು. ಅದಕ್ಕೆ ಈ ರೀತಿ ಸಮಾ ಧಾನ ಹೇಳಬಹುದು : ನೃಪತುಂಗನ ಕಾಲದ ಕನ್ನಡ ನುಡಿಯ ಪರಿಸ್ಥಿತಿಯೇ ಕವಿರಾಜಮಾರ್ಗದ ರಚನೆಗೆ ಕಾರಣ. ಕನ್ನಡದಲ್ಲಿ ಕಾವ್ಯಲಕ್ಷಣವನ್ನು ತಿಳಿಯ ಹೇಳುವ ಗ್ರಂಥವೇ ಇರಲಿಲ್ಲ. ಹಿಂದೆ ರಚಿತವಾದ ಗ್ರಂಥಗಳನ್ನೇ ಮಾದರಿ ಯಾಗಿಟ್ಟುಕೊಂಡು ಕವಿಗಳು ಕಾವ್ಯರಚನೆಮಾಡುತ್ತಿದ್ದಂತೆ ಕಾಣುತ್ತದೆ. ಈ ಹಿಂದಿನ ಕಾವ್ಯಗಳು (ಅಂದಿನ) 'ಹಳಗನ್ನಡ'ದಲ್ಲಿದ್ದುವು ; ಶಾಸ್ತ್ರಜ್ಞಾನ ವಿಲ್ಲದವರು, ಹಳಗನ್ನಡದ ಪರಿಚಯವಿಲ್ಲದವರು, ಆ ಕಾವ್ಯಗಳನ್ನು ಅನುಕರಣ ಮಾಡಿ ಬರೆದಾಗ ಬೇಕಾದಷ್ಟು ದೋಷಗಳು ಕಾಣಿಸಿಕೊಳ್ಳುತ್ತಿದ್ದುವು. ಜೊತೆಗೆ, ಕನ್ನಡದ ಆಡುಮಾತಿನಲ್ಲಿ ಕೂಡ ಹಲವು ಪ್ರಾಂತ ಭೇದಗಳಿದ್ದುವು. ಈಗಲೂ ಮೈಸೂರು ಕನ್ನಡ, ಧಾರವಾಡದ ಕನ್ನಡ, ಮಂಗಳೂರು ಕನ್ನಡ, ಕೊಡಗಿನ ಕನ್ನಡ, ಕೊಯಮುತ್ತೂರು ಕನ್ನಡ, ಹಳ್ಳಿಗಾಡಿನವರ ಕನ್ನಡ, ಪಟ್ಟಣವಾಸದವರ ಕನ್ನಡ, ಇಂಗ್ಲಿಷು ಓದಿದವರ ಕನ್ನಡ ಎಂದು ಮುಂತಾಗಿ ಭೇದಗಳು ಉಳಿದುಕೊಂಡು ಬಂದಿರುವಂತೆ. ಇಂತಹ ಪರಿಸ್ಥಿತಿಯನ್ನು ಶ್ರೀವಿಜಯ ಬಹು ಚೆನ್ನಾಗಿ ನಿರೂಪಿಸಿದ್ದಾನೆ :

ದೋಸಂ ಇನಿತೆಂದು ಬಗೆದು ಉದ್-
ಭಾಸಿಸಿ ತರಿಸಂದು ಕನ್ನಡಂಗಳೊಳ್ ಎಂದುಂ
ವಾಸುಗಿಯುಂ ಅರಿಯಲಾರದೆ
ಬೇಸರುಗುಂ, ದೇಶಿ ಬೇರೆವೇರಪುದರಿಂ (i-46)

[ದೇಶಿ (ಎಂದರೆ ಆಡುಮಾತು) ಬೇರೆ ಬೇರೆಯಾಗಿರುವುದರಿಂದ, ಕನ್ನಡಗಳಲ್ಲಿ ಎಂದರೆ, ಹಲವು ಪ್ರಕಾರಗಳಲ್ಲಿರುವ ಕನ್ನಡದಲ್ಲಿ, ದೋಷದ ಪ್ರಮಾಣ ಇಷ್ಟಿಷ್ಟೆಂದು ವಿಚಾರಮಾಡಿ, ಸ್ಪಷ್ಟವಾಗಿ ಎತ್ತಿತೋರಿಸಿ, ನಿರ್ಣಯಮಾಡಿ, ತಿಳಿಯಲಾರದವನಾಗಿ, ಸಾವಿರ ನಾಲಗೆಯುಳ್ಳ ಆದಿಶೇಷ ಕೂಡ ತಿಳಿಯಹೇಳಲು ಬೇಸರಪಡುವನು. (ಎಂದರೆ, ಕನ್ನಡ ಭಾಷೆಯಲ್ಲಿ ದೋಷ ಅಪಾರವಾಗಿತ್ತು ಎಂದು ಭಾವ).]

ಈ ಪರಿಸ್ಥಿತಿಯಲ್ಲಿ, ಸಂಸ್ಕೃತ ಮಹಾಕಾವ್ಯಗಳಂತಹ ಕೃತಿಗಳು ಕನ್ನಡದಲ್ಲಿಯೂ ರಚಿತವಾಗಬೇಕಾದರೆ ಏನುಮಾಡಬೇಕೆಂಬ ಚಿಂತೆ ಕನ್ನಡದ ಅಭಿಮಾನಿಯೂ ಸ್ವತಃ ವಿದ್ವಾಂಸನೂ ಆಗಿದ್ದ ನೃಪತುಂಗ ಚಕ್ರವರ್ತಿಯನ್ನು ಬಾಧಿಸಿರಬೇಕು. ಕವಿಶ್ರೇಷ್ಠರಾಗಬಯಸುವವರಿಗೆ ಮಾರ್ಗದರ್ಶನಮಾಡಲು ಒಂದು ಲಕ್ಷಣಗ್ರಂಥದ ರಚನೆಯ ಕಾರ್ಯಭಾರವನ್ನು ಆತ ತನ್ನ ಸಭಾಸದನೂ ಅಲಂಕಾರಶಾಸ್ತ್ರ ಪಂಡಿತನೂ ಆಗಿದ್ದ ಶ್ರೀ ವಿಜಯನಿಗೆ ವಹಿಸಿದನು ; ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ಮಾಡಿದನು. ಹೀಗೆ ರಚಿತವಾಯಿತು 'ಕವಿರಾಜಮಾರ್ಗ.'

ಕವಿರಾಜಮಾರ್ಗದಲ್ಲಿ ದೋಷ-ಅದೋಷಗಳ ವರ್ಣನ ನಿರ್ಣಯ, ಶಬ್ದಾಲಂಕಾರ ವರ್ಣನ ನಿರ್ಣಯ, ಅರ್ಥಾಲಂಕಾರ ಪ್ರಕರಣ-ಎಂಬ ಮೂರು ಪರಿಚ್ಛೇದಗಳಿವೆ. ಕಾವ್ಯದೋಷಗಳನ್ನು ವಿವರಿಸುವಲ್ಲಿ ವಿಶೇಷವಾಗಿ ಭಾಮಹನನ್ನೂ, ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ನಿರೂಪಿಸುವ ಪ್ರಕರಣಗಳಲ್ಲಿ ಸಾಮಾನ್ಯವಾಗಿ ದಂಡಿಯನ್ನೂ ಶ್ರೀವಿಜಯನು ಅನುಸರಿಸಿದ್ದಾನೆ. ಗುಣದೋಷಗಳನ್ನು ವಿವರಿಸುವ ಸಂದರ್ಭಗಳಲ್ಲಿ ಕನ್ನಡ ನುಡಿಯ ಜಾಯಮಾನವನ್ನೂ ಕನ್ನಡ ಕಾವ್ಯರಚನೆಯನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಸಂಸ್ಕೃತ ಆಲಂಕಾರಿಕರು ಹೇಳಿರುವ ಲಕ್ಷಣಗಳನ್ನು ಕನ್ನಡಕ್ಕೆ ಹೊಂದಿಸಿ ಹೇಳಿದ್ದಾನೆ; ಕೆಲವು ಸಂದರ್ಭಗಳಲ್ಲಿ ಸ್ವತಂತ್ರವಾಗಿ ಆಲೋಚನೆಮಾಡಿ ಲಕ್ಷಣಗಳನ್ನು ಹೇಳಿದ್ದಾನೆ. ತಾನು ತಿಳಿಸುವ ವಿಚಾರಗಳು ಓದುಗರ ಮನಸ್ಸಿಗೆ ಚೆನ್ನಾಗಿ ನಾಟಬೇಕೆಂಬ ಉದ್ದೇಶದಿಂದ ಅವುಗಳನ್ನು ದೃಷ್ಟಾಂತ ಮತ್ತು ಹೋಲಿಕೆಗಳ ಮೂಲಕ ವಿಶದಪಡಿಸುತ್ತಾನೆ; ಸೊಗಸುಗೊಳಿಸುತ್ತಾನೆ.

ಅಲಂಕಾರಗಳ ಉದಾಹರಣೆಗಳು ಅವು ಸಂಸ್ಕೃತ ಮೂಲಗಳ ಭಾಷಾಂತರವಾಗಿರಲಿ, ಸ್ವಂತವವಾಗಿರಲಿ–ಸಾಧಾರಣವಾಗಿ ಕಾವ್ಯಗಳಲ್ಲಿ ಬರುವಂಥ ವರ್ಣನಾ ಪದ್ಯಗಳಂತೆ ಸುಂದರವಾಗಿಯೇ ಇರುತ್ತವೆ. ಕವಿರಾಜಮಾರ್ಗದ ಶೈಲಿ ಸಾಧಾರಣವಾಗಿ ಸೊಗಸಾಗಿಯೇ ಇದೆ ಎಂಬುದಕ್ಕೆ ಇಲ್ಲಿ ನಾವು ಆಯ್ದು ಕೊಡುತ್ತಿರುವ ಪದ್ಯಗಳೇ ಸಾಕ್ಷಿ. ಕೆಲವು ಸಂದರ್ಭಗಳಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿರಬಹುದು. ಈ ಮಾತು ಪೂರ್ವದ ಎಲ್ಲ ಕನ್ನಡ ಕವಿಗಳಿಗೂ ಅನ್ವಯಿಸುತ್ತದೆ. ಒಟ್ಟಿನ ಮೇಲೆ, ಕವಿರಾಜಮಾರ್ಗ ಲಕ್ಷಣ ಗ್ರಂಥವಾದರೂ ಅಲ್ಲಲ್ಲಿ ಕಾವ್ಯ ಗುಣದಿಂದಲೂ ಕೂಡಿದೆ.

ಚಾರಿತ್ರಿಕವಾಗಿ ಕವಿರಾಜಮಾರ್ಗದ ಪ್ರಾಮುಖ್ಯ ಏನು ಎಂಬುದನ್ನು ಸ್ವಲ್ಪಮಟ್ಟಿಗೆ ಹೇಳಿದ್ದಾಯಿತು. ಶಾಸ್ತ್ರ ವಿಚಾರವನ್ನು ಹೇಳುವಾಗ ಶ್ರೀವಿಜಯ ಮುಖ್ಯವಾಗಿ ದಂಡಿ ಭಾಮಹರನ್ನು ಅನುಸರಿಸುತ್ತಿದ್ದರೂ, ಕನ್ನಡವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸ್ವತಂತ್ರವಾಗಿ ವಿಚಾರಮಾಡಿ, ಕೆಲವು ಹೊಸ ವಿಷಯಗಳನ್ನೂ ತಿಳಿಸುತ್ತಾನೆ. ಇಲ್ಲಿ ಒಂದೆರಡು ಉದಾಹರಣೆಗಳನ್ನು ಮಾತ್ರ ಗಮನಿಸಲು ಸಾಧ್ಯ :

ಸಂಸ್ಕೃತ ಛಂದಸ್ಸಿನಿಂದ ಕನ್ನಡಕ್ಕೆ ಬಂದ ಅಕ್ಷರ ವೃತ್ತಗಳು, ಆರ್ಯಾ ಎಂಬ ವೃತ್ತದಿಂದ ಹುಟ್ಟಿದ ಕಂದಪದ್ಯ, ಇವುಗಳಲ್ಲಿ 'ಯತಿ' ನಿಯಮವನ್ನು ಪಾಲಿಸಬೇಕು. ಯತಿ ಎಂದರೆ, ಶ್ರೀವಿಜಯ ಹೇಳುವ ಪ್ರಕಾರ 'ಉಸಿರ್ದಾಣ' ; ಎಂದರೆ, ಪದ್ಯದ ಸಾಲುಗಳನ್ನು ಉಚ್ಚಾರಣೆ ಮಾಡುವಾಗ ಉಸಿರು ಸಹಜವಾಗಿ ನಿಲ್ಲುವ ಸ್ಥಳ. ಯತಿಯನ್ನು ಪಾಲಿಸದಿದ್ದರೆ 'ಯತಿಭಂಗ' ಎಂಬ ದೋಷವುಂಟಾಗುತ್ತದೆ. ಕವಿರಾಜಮಾರ್ಗಕ್ಕಿಂತಲೂ ಹಿಂದಿನ 'ಪೂರ್ವಾಚಾರ್ಯರು' (ಲಕ್ಷಣವನ್ನು ಬಲ್ಲ ಕವಿಗಳು) ಕನ್ನಡದಲ್ಲಿ ಬಳಕೆಗೆ ಬಂದಿದ್ದ, ಸಂಸ್ಕೃತದಲ್ಲಿ ಇಲ್ಲದಿದ್ದ, ಆದಿಪ್ರಾಸವನ್ನು ಇಟ್ಟುಕೊಂಡು, ಯತಿ ನಿಯಮ ಪಾಲನೆಯನ್ನು ಮೀರಿದ್ದರು. ಶ್ರೀವಿಜಯನೂ ಈ ಪದ್ಧತಿಯನ್ನು ಒಪ್ಪಿಕೊಂಡು, ಈ ರೀತಿ ಹೇಳಿದ್ದಾನೆ :

ಗೀತಿಕೆ :

ದೋಸಮನೆ ಗುಣದವೋಲ್ ಉ-
ದ್ಭಾಸಿಸಿ, ಕನ್ನಡದೊಳ್ ಒಲ್ದು, ಪೂರ್ವಾಚಾರ್ಯರ್
ದೇಸಿಯನೆ ನಿರಿಸಿ ಖಂಡ-
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್. (i–75)

ಭಾಮಹನು ಹೇಳಿರುವ–ಶ್ರುತಿದುಷ್ಟ (ಉಪಯೋಗಿಸಿರುವ ಮಾತು ಸರಿಯಾಗಿದ್ದರೂ ಕೇಳಿದಾಗ ಅಸಭ್ಯವಾದಂಥ ಅರ್ಥವನ್ನು ಕೊಡುವ ಪದ್ಯ ರಚನೆ), ಅರ್ಥದುಷ್ಟ (ಕೆಟ್ಟ ಅರ್ಥವನ್ನೂ ಕೊಡುವ ಪದಗಳ ಬಳಕೆ), ಶ್ರುತಿಕಷ್ಟ (ಕೇಳುವುದಕ್ಕೆ ಕರ್ಕಶವಾದ ಪದಗಳ ಬಳಕೆ), ಕಲ್ಪನೋಕ್ತಿಕಷ್ಟ (ಕವಿಯ ಅಭಿಪ್ರಾಯ ಏನು ಎಂಬುದೇ ಗೊತ್ತಾಗದಂಥ ಪದ್ಯರಚನೆ), ಎಂಬ ನಾಲ್ಕು ಸಾಮಾನ್ಯ ದೋಷಗಳನ್ನೂ ; ಯತಿಭಂಗ, ಅರ್ಥಶೂನ್ಯ, ವಿರುದ್ಧಾರ್ಥ, ಪುನರುಕ್ತ(ಕ್ತಿ), ಚ್ಯುತ ಯಥಾಸಂಖ್ಯೆ (ಕ್ರಮಭಂಗ), ವ್ಯವಹಿತ (ಅನ್ವಯದ ತೊಡಕಿನಿಂದ ಅಪಾರ್ಥವಾಗುವುದು), ಅಚ್ಛಂದ (ಛಂದಸ್ಸಿನ ದೋಷ), ವಿಸಂಧಿ (ಸಂಧಿಮಾಡಬೇಕಾದಲ್ಲಿ ಸಂಧಿಮಾಡದಿರುವುದು), ನೇಯಾರ್ಥ (ಹೇಳಬೇಕಾದ ಮುಖ್ಯಪದವನ್ನು ಹೇಳದೆ ಇರುವುದರಿಂದ ಅದನ್ನು ಅಧ್ಯಾಹಾರ ಮಾಡಿಕೊಂಡು ಅರ್ಥವನ್ನು ಎಳೆದು ತಂದು ಹೇಳಬೇಕಾದಂಥ ರಚನೆ), ಆಗಮವಿರುದ್ಧ (ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿರುವುದು), ಸಮಯವಿರುದ್ಧ (ಜೈನ, ಬೌದ್ಧ, ವೈದಿಕ, ಮುಂತಾದ ಮತದರ್ಶನಗಳಿಗೆ ವಿರುದ್ಧವಾಗಿರುವುದು), ನ್ಯಾಯ ವಿರುದ್ಧ (ನ್ಯಾಯಶಾಸ್ತ್ರದ ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ ಎಂಬ ಪ್ರಮಾಣಗಳಿಗೆ ವಿರುದ್ಧವಾಗಿರುವುದು), ಕಲಾವಿರುದ್ಧ (ಪ್ರಸಿದ್ಧವಾದ ಸಂಗೀತ, ನಾಟ್ಯ, ಶಿಲ್ಪ, ಮುಂತಾದ ಕಲೆಗಳ ಸರಿಯಾದ ಜ್ಞಾನವಿಲ್ಲದೆ ಅವುಗಳ ವಿಚಾರವಾಗಿ ತಪ್ಪು ತಿಳಿವಳಿಕೆಯಾಗುವಂತೆ ಹೇಳುವುದು), ಕಾಲವಿರುದ್ಧ (ಹಗಲು ಇರುಳು, ಆರು ಋತು, ಮುಂತಾದ ಕಾಲ ವಿಷಯಕ್ಕೆ ಹೊಂದದಂತೆ ವರ್ಣಿಸುವುದು), ಲೋಕವಿರುದ್ಧ (ಮೂರು ಲೋಕಗಳಿಗೆ ವಿರುದ್ಧವಾದ ಸಂಗತಿಗಳನ್ನು ವರ್ಣಿಸುವುದು), ದೇಶವಿರುದ್ಧ (ವರ್ಣಿಸುತ್ತಿರುವ ದೇಶಕ್ಕೆ ಹೊಂದದ ಸಂಗತಿಗಳನ್ನು ಹೇಳುವುದು)–ಎಂಬ 16 ವಿಶೇಷ ಕಾವ್ಯದೋಷಗಳನ್ನೂ ಉದಾಹರಣೆಗಳ ಸಮೇತ ಶ್ರೀವಿಜಯನು ವಿವರಿಸಿದ್ದಾನೆ. ಇವಲ್ಲದೆ, ಕಾರಕ ದೋಷ, ವಚನ ದೋಷ, ಗುರು ದೋಷ, ಲಘು ದೋಷ, ಸಮುಚ್ಚಯ ದೋಷ, ವಿಕಲ್ಪ ದೋಷ ಅವಧಾರಣಾದೋಷ, ವಿಶಂಕಾದೋಷ–ಎಂಬಿವನ್ನು ವಿಶೇಷವಾಗಿ ಕನ್ನಡ ಭಾಷೆಗೆ ಅನ್ವಯವಾಗುವಂತೆ ಉಚಿತ ಉದಾಹರಣೆಗಳೊಂದಿಗೆ ವಿವರಿಸಿದ್ದಾನೆ. ಇಲ್ಲಿ ಕನ್ನಡದ ಜೀವಾಳವನ್ನು ಹಿಡಿದು ಮಿಡಿದಿದ್ದಾನೆ. ಈ ದೋಷಗಳಲ್ಲಿ ಹಲವು ಎಲ್ಲ ಕಾಲಕ್ಕೂ ಅನ್ವಯವಾಗತಕ್ಕವು. ಆದ್ದರಿಂದ, ಇಂದು ಕಾವ್ಯರಚನೆ ಮಾಡುವವರು ಕೂಡ ಈ ದೋಷಪ್ರಕರಣವನ್ನು

ಅಧ್ಯಯನ ಮಾಡುವುದರಿಂದ ಲಾಭವುಂಟು. ಶ್ರೀವಿಜಯ ಮಾತ್ರವಲ್ಲ, ಎಲ್ಲ ಲಾಕ್ಷಣಿಕರೂ ಕಾವ್ಯದಲ್ಲಿ ಸ್ವಲ್ಪವೂ ದೋಷವಿರಕೂಡದೆಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀವಿಜಯ ಹೇಳಿರುವ ರೀತಿ ಸುಂದರವಾಗಿದೆ, ಅರ್ಥವತ್ತಾಗಿದೆ :

ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿರ್ಕುಂ ಅಣಂ ಕೃತಿವಧುವಂ
ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುವವೋಲ್ ಒಪ್ಪುವ ಕುಲವಧುವಂ

[ಒಳ್ಳೆಯ ವಂಶದಲ್ಲಿ ಹುಟ್ಟಿದ ಹೆಣ್ಣುಮಗಳು ಎಷ್ಟೇ ಗುಣವತಿಯಾಗಿದ್ದರೂ ಕೆಟ್ಟ ಜನ ಪರಿಚಯವಾದರೆ ಅವಳ ಹೆಸರು ಕೆಡುವಂತೆ, ದೋಷ ಎಷ್ಟೇ ಸ್ವಲ್ಪವಾದರೂ ಕೃತಿ ಎಂಬ ಹೆಣ್ಣಿನ ಹೆಸರನ್ನು ಮಾಸಿಸಿಬಿಡುತ್ತದೆ.]

ಮಹಾಕವಿ ಕೂಡ ದೋಷ ಮಾಡಬಹುದು. ಮಹಾಕವಿಯಾಗ ಬೇಕೆಂಬ ಬಯಕೆ ಸಾಮಾನ್ಯ ಕವಿಗೂ ಉಂಟು. ಅವನು ಮಾಡಿದ ತಪ್ಪು ಅವನ ಗಮನಕ್ಕೆ ಬರುವುದಿಲ್ಲ. ಅವನು ಏನು ಮಾಡಬೇಕು ? ಶ್ರೀವಿಜಯ ಹೇಳುತ್ತಾನೆ :

ಗೀತಿಕೆ :

ಕಾಣನ್ ಏಗೆಯ್ದುಂ ಏಗೆಯ್ದುಂ ತನ್ನ ದೋಷಮಂ
ಕಾಣದಂತೆ ಎಂದುಂ ಕಣ್ಗಳ್ ತಮ್ಮ ಕಾಡಿಗೆಯುಂ
ಪೂಣೆಗನ್ ಆದುದರಿಂ ಪೆರರಿಂ
ಜಾಣರಿಂ ಓದಿಸಿ ಪೇಳ್ವುದು ಕಬ್ಬಮಂ.

[ಕಣ್ಣುಗಳಿಗೆ ಹಚ್ಚಿದ ಕಾಡಿಗೆ ಅದಕ್ಕೆ ಕಾಣಿಸುವುದಿಲ್ಲ. (ಆದರೆ, ಇತರರಿಗೆ ಕಾಣಿಸುತ್ತದೆ). ಅದೇ ರೀತಿ, ಕವಿ ಏನು ಮಾಡಿದರೂ ತನ್ನ ಕಾವ್ಯದ ದೋಷವನ್ನು ತಾನು ಅರಿಯಲಾರ. ಆದ್ದರಿಂದ, ತನ್ನ ಕಾವ್ಯ ದೋಷವನ್ನು ಹೊಂದಿರಕೂಡದು, ಉತ್ತಮವಾಗಿರಬೇಕು, ಎಂದು ಬಯಸುವ ಕವಿ ಇತರ 'ಜಾಣ'ರಿಂದ (ಎಂದರೆ ಕಾವ್ಯಲಕ್ಷಣ ಬಲ್ಲವರಿಂದ) ಓದಿಸಿ, ತಪ್ಪುಗಳನ್ನು ಅವರಿಂದ ಅರಿತು ತಿದ್ದಿಕೊಂಡು, ಕಾವ್ಯವನ್ನು ರಚಿಸಬೇಕು.]

ಕವಿರಾಜಮಾರ್ಗದ ಎರಡನೆಯ ಪರಿಚ್ಛೇದದಲ್ಲಿ ಶಬ್ದಗುಣಗಳನ್ನೂ ಅಕ್ಷರ ಮತ್ತು ಪದಗಳ ಕೂಡಿಕೆಯ ಬಗೆಯಿಂದ ಅವು ಉಂಟಾಗುವ ರೀತಿಯನ್ನೂ, ಈ ಗುಣಗಳಿಂದ ಏರ್ಪಡುವ ಗೌಡ (ಉತ್ತರ) ಮತ್ತು ವೈದರ್ಭ ಎಂಬ ಎರಡು ಕಾವ್ಯಮಾರ್ಗಗಳನ್ನೂ ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿ ಬಹಳ ವಿವರಪೂರ್ಣವಾಗಿ, ತಕ್ಕ ಉದಾಹರಣೆಗಳೊಡನೆ, ಬಹು ತೃಪ್ತಿ

ಕರವಾಗಿ ನಿರೂಪಣೆ ಮಾಡಿದ್ದಾನೆ, ಶ್ರೀವಿಜಯ. ಗುಣಗಳು ಹತ್ತು ಬಗೆ: ಸಮ, ಮಧುರ, ನಿಬಿಡ, ಕಾಂತ, ಸುಕುಮಾರ, ಸಮಾಹಿತ, ಪ್ರಸನ್ನ, ಉದಾರ, ಪ್ರಮಿತಗ್ರಾಮ್ಯ, ಓಜಸ್ವಿ. ಈ ಹತ್ತು ಗುಣಗಳು, ದಂಡಿಯ ಪ್ರಕಾರ, ವೈದರ್ಭ ಮಾರ್ಗದ ಪ್ರಾಣಗಳು. ಶ್ರೀವಿಜಯನು ವೈದರ್ಭಮಾರ್ಗವನ್ನು ದಕ್ಷಿಣ ಮಾರ್ಗ ಎಂದೂ, ಗೌಡಮಾರ್ಗವನ್ನು ಉತ್ತರ ಮಾರ್ಗ ಎಂದೂ ಕರೆದಿದ್ದಾನೆ. ದಕ್ಷಿಣ ಮಾರ್ಗಕ್ಕೆ ವ್ಯತಿರಿಕ್ತವಾದ ಮಾರ್ಗ ಅಥವಾ ರಚನಾ ರೀತಿಯೇ ಉತ್ತರ ಮಾರ್ಗ. ಈ ದಕ್ಷಿಣೋತ್ತರ ಮಾರ್ಗಗಳ ವಿಚಾರವನ್ನು ಮುಂದಿನ ಯಾವ ಕನ್ನಡ ಲಕ್ಷಣಗ್ರಂಥವೂ ವಿವರಿಸಿಲ್ಲ; ಇದು ಕವಿರಾಜ ಮಾರ್ಗದ ಒಂದು ಹೆಚ್ಚುಗಾರಿಕೆ.

ದಕ್ಷಿಣೋತ್ತರ ಮಾರ್ಗಗಳ ಭೇದಕ್ಕೆ ಒಂದು ಉದಾಹರಣೆ :

ಶರದಮಲಾಂಬರದೊಳ್ ಹಿಮ-
ಕರನೆಸೆದತ್ತು, ಎಂಬುದು, ಆ ಪ್ರಸನ್ನಂ ಇದು ಅಕ್ಕುಂ

[ಶರತ್ಕಾಲದ ತಿಳಿಯಾದ ಆಕಾಶದಲ್ಲಿ ಚಂದ್ರ ಮೆರೆಯಿತು. ಇದು ಪ್ರಸನ್ನ ಗುಣ. (ಕೇಳಿದ ಕೂಡಲೆ ಅರ್ಥವಾಗುವುದು ಪ್ರಸನ್ನ ಅಥವಾ ಪ್ರಸಾದ ಗುಣ)].

ಮೇಲ್ಕಂಡ ರೀತಿಯ ಬರವಣಿಗೆ ದಕ್ಷಿಣ ಮಾರ್ಗದ್ದು; ಲೋಕ ಪ್ರಸಿದ್ಧವಾದ ಸಂಗತಿಯನ್ನು ಇಲ್ಲಿ ಅರ್ಥವಾಗುವಂತೆ ನೇರವಾಗಿ ತಿಳಿಸಿದೆ. ಅದೇ ವಿಷಯವನ್ನು ಕಷ್ಟವಾದ ಪದಗಳಿಂದ ತಿಳಿಸಿದ್ದು ಉತ್ತರ ಮಾರ್ಗ. ಅದು ಹೀಗೆ :

ಕರಮೊಪ್ಪಿತ್ತು ಉಷ್ಣೇತರ
ಕಿರಣಂ ವರ್ಷಾಂತ ಸಮಯದೊಳ್ ಜಳಧರ ಪಥದೊಳ್.

[ಉಷ್ಣೇತರ ಕಿರಣ = ತಂಪಾದ ಕಿರಣವುಳ್ಳವನು, ಚಂದ್ರ. ವರ್ಷಾಂತ ಸಮಯ = ಮಳೆಗಾಲದ ಕೊನೆ, ಎಂದರೆ ಶರತ್ಕಾಲದ ಮೊದಲು, ಜಳಧರ ಪಥ = ಮೋಡಗಳ ದಾರಿ, ಎಂದರೆ ಆಕಾಶ. ಕರಂ = ಹೆಚ್ಚಾಗಿ.]

ಕವಿರಾಜಮಾರ್ಗದಲ್ಲಿ ಗುಣ ಮತ್ತು ಮಾರ್ಗ ವಿಚಾರಗಳನ್ನು ಶಬ್ದಾಲಂಕಾರ ಪ್ರಕರಣದಲ್ಲಿಯೇ ಸೇರಿಸಿದೆ. ಈ ಪರಿಚ್ಛೇದದಲ್ಲಿ ಹೇಳಿರುವ ಇತರ ಶಬ್ದಾಲಂಕಾರಗಳು ಇವು : ಗತಪ್ರತ್ಯಾಗತ, ಗೂಢಚತುರ್ಥ, ಏಕಾಕ್ಷರ, ದ್ವ್ಯಕ್ಷರ, ಅತಾಲವ್ಯ, ನಿರೋಷ್ಠ್ಯ, ಸರ್ವತೋಭದ್ರ, ನಿರುತ್ತರ, ಗೋಮೂತ್ರಿಕೆ, ಯಮಕ, ಅರ್ಧಭ್ರಮಣ, ಮುರಜ ಬಂಧ, ಕ್ರಿಯಾಗೋಪಕ,

ಚಕ್ರಬಂಧ, ಭಾವೆ, ನುಸುಳ್, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ ಬಿಂದುಚ್ಯುತಕ, ಒನರ್ಗಡಿ, ವರ್ಣಚ್ಯುತಕ, ಸುಮಂತಿ, ಇವುಗಳಲ್ಲಿ ಹಲಕೆಲವನ್ನು ಕಾವ್ಯಾವಲೋಕನ ಮುಂತಾದ ಆಮೇಲಿನ ಲಕ್ಷಣ ಗ್ರಂಥಗಳಲ್ಲೂ ಹೇಳಲಾಗಿದೆ. ರಚಿಸಲು ಕಷ್ಟವಾದ ಇವನ್ನು 'ದುಷ್ಕರಕಾವ್ಯ' ಎಂದು ಕರೆಯಲಾಗಿದೆ ; ಚಕ್ರ, ಮುರಜ, ಮುಂತಾದ ಚಿತ್ರಾಕೃತಿಗಳಲ್ಲಿ ಅಳವಡಿಸಬಹುದಾದುವನ್ನು 'ಚಿತ್ರಬಂಧ' ಎಂದೂ ಹೆಸರಿಸಬಹುದು.

ಮೂರನೆಯ ಪರಿಚ್ಛೇದದಲ್ಲಿ, ದಂಡಿಯನ್ನು ಅನುಸರಿಸಿ 35 ಅರ್ಥಾಲಂಕಾರಗಳನ್ನು ನಿರೂಪಿಸಿದೆ. ಅವು ಯಾವುವೆಂದರೆ,—ಜಾತಿ (ಇದರಲ್ಲಿ ನಾಲ್ಕು ಬಗೆ ; ಇದನ್ನು ಸ್ವಭಾವಾಖ್ಯಾನ ಅಥವಾ ಸ್ವಭಾವೋಕ್ತಿ ಎಂದೂ ಕರೆಯುವುದುಂಟು); ರೂಪಕ (ಇದರಲ್ಲಿ 14 ಬಗೆ); ಅರ್ಥಾಂತರನ್ಯಾಸ (ಇದರಲ್ಲಿ 8 ಬಗೆ); ವ್ಯತಿರೇಕ (ಎರಡು ಬಗೆ) ; ಯಥಾ ಸಂಖ್ಯ (ಎರಡು ಬಗೆ) ; ದೀಪಕ (ನಾಲ್ಕು ಬಗೆ) ; ಉಪಮೆ (26 ಬಗೆ) ; ಅತಿಶಯೋಕ್ತಿ ; ಸದೃಶಯೋಗಿತಾ; ಆಕ್ಷೇಪ (6 ಬಗೆ) ; ಶ್ಲೇಷೆ ; ಉತ್ಪ್ರೇಕ್ಷೆ ; ಸೂಕ್ಷ್ಮ ; ವಿಶೇಷ ; ಸಮಾಹಿತ ; ಸಮಾಸೋಕ್ತಿ ; ಪರ್ಯಾಯೋಕ್ತ ; ವಿರೋಧ ; ಅಪ್ರಸ್ತುತ (ಪ್ರಶಂಸೆ) ; ನಿದರ್ಶನ ; ಸಹೋಕ್ತಿ ; ಸಂಕೀರ್ಣ ; ಪರಿವೃತ್ತಿ ; ವ್ಯಾಜಸ್ತುತಿ ; ಹೇತೂಕ್ತಿ; ವಿಭಾವನಾ , ಲೇಶ; ಉದಾತ್ತ; ಅಪಹ್ನುತಿ (ಮೂರು ಬಗೆ) ; ರಸವದಲಂಕಾರ (9 ರಸಗಳ ಸಂಬಂಧವಾಗಿ 9 ಬಗೆ) : ಊರ್ಜಿತ ; ವ್ಯಾವೃತ್ತಿ ; ಪ್ರಿಯತರ ; ಆಶೀರಲಂಕಾರ ; ಭಾವಿಕಾಲಂಕಾರ.

ರಸವದಲಂಕಾರ ಸಂಬಂಧದಲ್ಲಿ ದಂಡಿ ಎಂಟೇ ರಸಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾನೆ. ರಸವಿಚಾರವನ್ನು ವಿಸ್ತಾರವಾಗಿ ಹೇಳಿರುವ ಭರತನೂ ನಾಟ್ಯಶಾಸ್ತ್ರದಲ್ಲಿ ಹೇಳಿರುವುದು ಎಂಟೇ ರಸಗಳನ್ನು. ಕವಿರಾಜಮಾರ್ಗಕಾರನಿಗಿಂತ ಹಿಂದಿನವರಾದ ಉದ್ಭಟ ರುದ್ರಟರೇನೋ ಶಾಂತರಸದ ಪ್ರಸ್ತಾಪ ಮಾಡಿದ್ದಾರೆ. ಕಾಳಿದಾಸನ ಗಮನದಲ್ಲಿರುವುದೂ ಅಷ್ಟರಸಗಳೇ. ಇದು ಹೇಗಿದ್ದರೂ, ಕನ್ನಡ ಸಾಹಿತ್ಯದಲ್ಲಿ 'ನವರಸ'ಗಳ ಪ್ರಸ್ತಾಪಕ್ಕೆ ಶ್ರೀವಿಜಯನದೇ ಶ್ರೀಕಾರ.

'ಧ್ವನಿ' ಕಾವ್ಯದ ಆತ್ಮ ಎಂಬ ಮಾತು ಹಿಂದೆಯೇ ಬಂದಿದೆ. ಅದು ಆತ್ಮವಲ್ಲ, ಅದೂ ಒಂದು ಅಲಂಕಾರವೇ ಎಂಬ ದೃಷ್ಟಿ ಶ್ರೀವಿಜಯನದ್ದು ಎಂದು ಕಾಣುತ್ತದೆ. 'ಧ್ವನಿಯೆಂಬುದಲಂಕಾರಂ' ಎಂದು ಹೇಳಿ, ಧ್ವನ್ಯಲಂ

ಕಾರವನ್ನು ಅಲಂಕಾರಗಳ ಪಟ್ಟಿಗೆ ಅವನು ಸೇರಿಸಿದ. ಇದು ಒಂದು ಗಮನಿಸ ಬೇಕಾದ ಸಂಗತಿ. ಆದರೆ, ತರುವಾಯದ ಕನ್ನಡ ಆಲಂಕಾರಿಕರು ಯಾರೂ ಈ ಅಲಂಕಾರವನ್ನು ಪುರಸ್ಕರಿಸಿಲ್ಲ ಎಂಬುದೂ ಅಷ್ಟೇ ಗಮನಾರ್ಹ.

ಅಲಂಕಾರ ಲಕ್ಷಣಗಳಿಗೆ ಲಕ್ಷ್ಯಗಳನ್ನು (ಉದಾಹರಣೆಗಳನ್ನು) ಕೊಡು ವಾಗ ಶ್ರೀವಿಜಯ ಅನೇಕವನ್ನು ದಂಡಿಯ ಗ್ರಂಥದಿಂದ ತೆಗೆದುಕೊಂಡು ಕನ್ನಡಿಸಿದ್ದಾನೆ. ಸ್ವಂತ ಲಕ್ಷ್ಯಪದ್ಯಗಳೂ ಇವೆ. ಇವುಗಳ ಪೈಕಿ ಹಲಕೆಲವು ರಾಮಾಯಣದ ಕಥೆಗೆ ಸಂಬಂಧಪಟ್ಟವು. ಈಚೆಗೆ ದೊರೆತ ನಾಗವರ್ಮನ ವರ್ಧಮಾನ ಪುರಾಣದಿಂದ ಶ್ರೀವಿಜಯ 'ರಘುವಂಶ ಮಹಾ ಪುರಾಣ'ವನ್ನು ಬರೆದಿರುವುದಾಗಿ ತಿಳಿದುಬಂದಿದೆ; ಈತ ಕವಿರಾಜಮಾರ್ಗವನ್ನು ಬರದವನೇ ಇರಬಹುದು. ಕವಿರಾಜಮಾರ್ಗದ ರಾಮಾಯಣಪದ್ಯಗಳು 'ರಘುವಂಶ ಮಹಾಪುರಾಣ'ದಿಂದ ಆಯ್ದುಕೊಂಡವಾಗಿರಬಹುದು. ಈ ರಾಮಯಣ ಪದ್ಯಗಳಲ್ಲಿ ಕೆಲವು ಶ್ಲೋಕ ಛಂದಸ್ಸಿನಲ್ಲಿರುವುದೂ ಗಮನಿಸತಕ್ಕ ಸಂಗತಿ.

ಒಂದು ಉದಾಹರಣೆ :

ತಾರಾ ಜಾನಕಿಯಂ ಪೋಗಿ ತಾರಾ ತರಳನೇತ್ರೆಯಂ
ತಾರಾಧಿಪತಿ ತೇಜಸ್ವಿ ತಾರಾದಿ ವಿಜಯೋದಯಾ

(ಇದು ಬಹುಶಃ ಸುಗ್ರೀವಾದಿಗಳು ರಾಮನಿಗೆ ಹೇಳಿದ ಮಾತು.)

ನಿದರ್ಶನಾಲಂಕಾರದ ಲಕ್ಷ :

ತಲೆಸೂಡಿ ಮುನ್ನೆ, ಕಜ್ಜದ
ಫಲಮಂ ಬೆಸಗೊಂಡಂ ಏವನ್ ಅಲ್ಲಿಂ ಬಳಿಯಂ ?
ತಲೆಯಂ ಕಿರಿಯಿಸಿ, ದಿವಸಮಂ
ಅಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ.

[(ಕಾರ್ಯಕ್ಕೆ) ಮೊದಲೇ ತಲೆಕೊಟ್ಟು, ಆಮೇಲೆ ಕಾರ್ಯದ ಫಲವನ್ನು ಕುರಿತು ಕೇಳಿದರೆ ಏನು ಪ್ರಯೋಜನ? ತಲೆಯನ್ನು ಕೆರೆಸಿಕೊಂಡು (ಕ್ಷೌರಮಾಡಿಸಿಕೊಂಡು), ಆಮೇಲೆ ಅಲಸಿಕೆಯಿಲ್ಲದೆ (ಎಂದರೆ, ಆಸಕ್ತಿಗೊಂಡು) ಅಂದಿನ ತಿಥಿ ಏನು ಎಂದು ಪ್ರಶ್ನಿಸುವವನ ಹಾಗೆ ದಡ್ಡನಾಗುತ್ತಾನೆ.]

ಗ್ರಂಥದ ಕೊನೆಯಲ್ಲಿ, ಶ್ರೀವಿಜಯ ಮಹಾಕಾವ್ಯದ ಲಕ್ಷಣಗಳನ್ನು ತಿಳಿಸಿ, ತನ್ನ ಗುಣಶೀಲಗಳನ್ನು ಹೇಳಿ, ಗ್ರಂಥವನ್ನು ಸಮಾಪ್ತಿಗೊಳಿಸಿದ್ದಾನೆ.

(ಎರಡನೆಯ) ನಾಗವರ್ಮನ ಕಾವ್ಯಾವಲೋಕನ

ಬಹು ಈಚಿನ ಕಾಲದವರೆಗೂ 'ನಾಗವರ್ಮ' ಎಂಬ ಹೆಸರಿನಲ್ಲಿ 8 ಕೃತಿಗಳ ಹೆಸರುಗಳು ಪ್ರಸಿದ್ಧವಾಗಿದ್ದುವು. ಅವು ಯಾವುವೆಂದರೆ : (1) ಕಾದಂಬರಿ (ಪ್ರಣಯ ಕಾವ್ಯ), (2) ಛಂದೋಂಬುಧಿ (ಛಂದಸ್ಸು), (3) ಕಾವ್ಯಾವಲೋಕನ (ಕಾವ್ಯ ಲಕ್ಷಣ), (4) ಛಂದೋವಿಚಿತಿ (ಛಂದಸ್ಸು), (5) ಅಭಿಧಾನ ವಸ್ತುಕೋಶ (ನಿಘಂಟು), (6) ಕರ್ಣಾಟಕ ಭಾಷಾಭೂಷಣ (ವ್ಯಾಕರಣ), (7) ಅಭಿಧಾನ ರತ್ನಮಾಲಾ (ಟೀಕು), (8) ಚಂದ್ರಚೂಡಾಮಣಿ ಶತಕ (ಅದ್ವೈತ ವೇದಾಂತ). ಇವುಗಳ ಪೈಕಿ ಮೊದಲನೆಯ ಎರಡು ಗ್ರಂಥಗಳನ್ನು ಬ್ರಾಹ್ಮಣ ಕವಿಯಾದ ನಾಗವರ್ಮನೆಂಬವನು ಬರೆದಿರುವನೆಂದೂ, ಇವನ ಕಾಲ ಸು. 990 ಎಂದೂ ಬಹುಜನ ವಿದ್ವಾಂಸರು ಒಪ್ಪಿಕೊಂಡು ಬಂದಿದ್ದಾರೆ. ಕಾದಂಬರಿಯ ನಾಗವರ್ಮನೇ ಬೇರೆ, ಛಂದೋಂಬುಧಿಯ ನಾಗವರ್ಮನೇ ಬೇರೆ ಇದ್ದರೂ ಇರಬಹುದು ಎಂಬ ಸಂದೇಹವನ್ನು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರೇ ವ್ಯಕ್ತಪಡಿಸಿದ್ದರು. ಈ ವಿಚಾರದಲ್ಲಿ ನಿಶ್ಚಿತವಾಗಿ ತೀರ್ಮಾನಮಾಡಲು ಹೊಸ ಆಧಾರಗಳು ಸಿಕ್ಕಿಲ್ಲ. ಕಾವ್ಯಾವಲೋಕನದ ನಾಗವರ್ಮನು — "ಛಂದೋವಿಚಿತಿ, ಅಲಂಕೃತಿ, ಸಂದ ಅಭಿಧಾನ ವಸ್ತುಕೋಶಂ, ನಾಗವರ್ಮನ ಕೃತಿಗಳ್, ವಾಕ್‌ಶ್ರೀ ಸುಂದರಿಗೆ ರತ್ನಮಂಡನದಂದದೊಳ್ ಇರ್ದಪುವು" ಎಂದು ತಾನೇ ಹೇಳಿಕೊಂಡಿರುವುದರಿಂದ, ಈ ಮೂರು ಕೃತಿಗಳನ್ನು ಬರೆದವನು ಅವನೇ ಎಂಬುದು ಖಂಡಿತ. ಇವುಗಳಲ್ಲಿ 'ಛಂದೋವಿಚಿತಿ' ಸಿಕ್ಕಿಲ್ಲ. 'ಅಲಂಕೃತಿ' (= ಅಲಂಕಾರ ಗ್ರಂಥ) ಎಂಬುದೇ ಕಾವ್ಯವಲೋಕನ. ಕರ್ಣಾಟಕ ಭಾಷಾಭೂಷಣದ ಮೊದಲಿನಲ್ಲಿ ಕಾವ್ಯಾವಲೋಕನದಲ್ಲಿರುವಂತೆ ಜಿನಸ್ತುತಿ ಇರುವುದರಿಂದಲೂ, ಕೊನೆಯಲ್ಲಿ 'ಕರ್ಣಾಟ ಶಬ್ದ ಸೂತ್ರಗಳ ಕೃತಿ ನಾಗವರ್ಮನಿಂದ ರಚಿತವಾದದ್ದು' ಎಂದು ಹೇಳಿರುವುದರಿಂದಲೂ 'ಭಾಷಾಭೂಷಣ'ವೂ ಈ ನಾಗವರ್ಮನದ್ದೇ ಎಂಬುದು ಸ್ಪಷ್ಟ. ಹಲಾಯುಧನ 'ಅಭಿಧಾನ ರತ್ನಮಾಲೆ' ಎಂಬ ಸಂಸ್ಕೃತದ ಕೃತಿಯ ಕನ್ನಡ ಟೀಕು ಒಬ್ಬ ನಾಗವರ್ಮನಿಂದ ರಚಿತವಾಗಿದೆ. ಇವನು ಯಾರು ಎಂದು ಖಂಡಿತವಾಗಿ ಹೇಳಲು ಸಾಧ್ಯವಿಲ್ಲ. 'ಚಂದ್ರಚೂಡಾಮಣಿ ಶತಕ' ನಾಗವರ್ಮಾಚಾರ್ಯ ಎಂಬ ಬ್ರಾಹ್ಮಣ ಕವಿಯಿಂದ (1070ರ ಸುಮಾರಿನಲ್ಲಿ) ರಚಿತವಾಗಿದೆ. ಒಟ್ಟಿನಮೇಲೆ,

ಕಾದಂಬರಿ – ಛಂದೋಂಬುಧಿಗಳನ್ನು ಬರೆದವನು ಒಬ್ಬ ನಾಗವರ್ಮ (ಒಂದನೆಯವನು); ಭಾಷಾಭೂಷಣ, ಕಾವ್ಯಾವಲೋಕನ, ಛಂದೋವಿಚಿತಿ, ವಸ್ತುಕೋಶ – ಈ ನಾಲ್ಕನ್ನು ಬರೆದವನು ಇನ್ನೊಬ್ಬ ನಾಗವರ್ಮ (ಎರಡನೆಯವನು); ಇವನ ಕಾಲ ಸು. 1150 ಎಂಬ ಆರ್. ನರಸಿಂಹಾಚಾರ್ಯರ ತೀರ್ಮಾನವನ್ನು ಸಾಧಾರಣವಾಗಿ ಎಲ್ಲ ವಿದ್ವಾಂಸರೂ ಒಪ್ಪಿಕೊಂಡು ಬಂದಿದ್ದರು.*

ಯಶೋಧರ ಚರಿತ್ರೆಯನ್ನೂ ಅನಂತನಾಥ ಪುರಾಣವನ್ನೂ ಬರೆದಿರುವ ಜನ್ನ ಕವಿ (1209) ತನ್ನ ಪುರಾಣ ಕಾವ್ಯದಲ್ಲಿ ತನಗಿಂತ ಹಿಂದೆ ಜಿನೇಂದ್ರ ಪುರಾಣಗಳನ್ನು ಬರೆದಿರುವ ಪುರಾಣ ಕವಿಗಳ ಹೆಸರುಗಳನ್ನು ಹೇಳಿದ್ದಾನೆ. ನಾಗವರ್ಮನ ಹೆಸರನ್ನೂ ಅವನು ಹೇಳಿರುವುದರಿಂದ, ನಾಗವರ್ಮನೆಂಬ ಕವಿ ಒಂದು ಜೈನ ಪುರಾಣವನ್ನೂ ಬರೆದಿದ್ದನೆಂಬ ಸಂಗತಿ ಮಾತ್ರ ತಿಳಿದು ಬಂದಿತ್ತು. ಆದರೆ, ಅದನ್ನು ಬರೆದವನು ಯಾವ ನಾಗವರ್ಮ, ಪುರಾಣ ಯಾವುದು, ಎಂಬ ಸಂಗತಿಗಳನ್ನು ತಿಳಿಯಲು ಆಧಾರಗಳಿರಲಿಲ್ಲ. ಕೇವಲ ಎರಡು ವರ್ಷಗಳ ಹಿಂದೆ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಸಂಪಾದನಾ ವಿಭಾಗದ ವಿದ್ವಾಂಸರಾದ ಶ್ರೀ ಬಿ. ಎಸ್. ಸಣ್ಣಯ್ಯನವರು 'ವರ್ಧಮಾನ ಪುರಾಣ' ಎಂಬ ಚಂಪೂ ಕಾವ್ಯವನ್ನು ಕಂಡುಹಿಡಿದು, ಬೆಳಕಿಗೆ ತಂದರು. ಕಾವ್ಯಾವಲೋಕನ ಮುಂತಾದ ಕೃತಿಗಳನ್ನು ಬರೆದವನೇ ವರ್ಧಮಾನ ಪುರಾಣದ ಕರ್ತೃ, ಇದರ ರಚನೆಯ ಕಾಲ ಕ್ರಿ. ಶ. 1042–ಎಂದು ಸಂದೇಹಕ್ಕೆ ಎಡೆಯೇ ಇಲ್ಲದಂತೆ ತೀರ್ಮಾನ ಮಾಡಿದ್ದಾರೆ. ವರ್ಧಮಾನ ಪುರಾಣದಲ್ಲಿಯೇ ನಾಗವರ್ಮನು ಶ್ರೀ ವಿಜಯ ಮುಂತಾದ ಹಿಂದಿನ ಕವಿಗಳನ್ನು ನೆನೆಯುವ ಸಂದರ್ಭದಲ್ಲಿ 'ವತ್ಸರಾಜಚರಿತಾಗಮ'ವನ್ನು ಬರೆದ ಒಬ್ಬ ನಾಗವರ್ಮನನ್ನು ಹೆಸರಿಸಿದ್ದಾನೆ. ಈ ನಾಗವರ್ಮ ಯಾರು ಎಂಬುದು ನಿರ್ಧಾರವಾಗಬೇಕಾಗಿದೆ.

---

* ಡಾ॥ ಎ. ವೆಂಕಟಸುಬ್ಬಯ್ಯ ಎಂಬ ಪ್ರಸಿದ್ಧ ವಿದ್ವಾಂಸರು, ದೊರಕಿಲ್ಲದ ಛಂದೋವಿಚಿತಿಯನ್ನು ಬಿಟ್ಟು ಉಳಿದ ಐದು ಕೃತಿಗಳನ್ನೂ ಒಬ್ಬನೇ ನಾಗವರ್ಮ ರಚಿಸಿರುವನೆಂದೂ ಅವನ ಕಾಲ "ಕ್ರಿ.ಶ. 1015–1042 ವರೆಗೆ ಆಳಿದ (ಜಯಸಿಂಹ) ಜಗದೇಕಮಲ್ಲನೆಂಬ ಚಾಲುಕ್ಯಚಕ್ರವರ್ತಿಯ" ಕಾಲ ಎಂದೂ ಅಭಿಪ್ರಾಯಪಟ್ಟರು.

ಕವಿರಾಜಮಾರ್ಗಕ್ಕೂ ಕಾವ್ಯಾವಲೋಕನಕ್ಕೂ ನಡುವೆ 200 ವರ್ಷಗಳ ಅಂತರವಿದೆ. ಈ ನಡುವಣ ಕಾಲದಲ್ಲಿ, ಪಂಪ ರನ್ನ ಪೊನ್ನ ಈ ಕವಿರತ್ನತ್ರಯರ ಕಾವ್ಯಗಳು ರಚಿತವಾಗಿದ್ದುವು. ಲಕ್ಷಣ ಸೂತ್ರಗಳಿಗೆ ಉದಾಹರಣೆಗಳನ್ನು ಕೊಡಲು ಅವನು ಸಂಸ್ಕೃತ ಲಕ್ಷಣಗ್ರಂಥಗಳ ಉದಾಹರಣ ಪದ್ಯಗಳನ್ನು ಅನುವಾದ ಮಾಡುವ, ಇಲ್ಲವೆ ಸ್ವಂತವಾಗಿ ಅವುಗಳನ್ನು ರಚಿಸಬೇಕಾದ ಅಗತ್ಯ ನಾಗವರ್ಮನಿಗೆ ಇರಲಿಲ್ಲ. ಆದ್ದರಿಂದ, ನಾಗವರ್ಮನು ಮೇಲೆ ಹೇಳಿದ ಮತ್ತು ಇತರ ಪೂರ್ವಕವಿಗಳ ಕಾವ್ಯಗಳಿಂದ ಧಾರಾಳವಾಗಿ ಉದಾಹರಣ ಪದ್ಯಗಳನ್ನು ತೆಗೆದುಕೊಂಡಿದ್ದಾನೆ; ಎಂಟೊಂಬತ್ತು ಪದ್ಯಗಳು ಅವನ ವರ್ಧಮಾನ ಪುರಾಣದಿಂದಲೇ ಆಯ್ದುವಾಗಿವೆ. ಇದರಿಂದ ವರ್ಧಮಾನ ಪುರಾಣವನ್ನು ಬರೆದಮೇಲೆ ಕಾವ್ಯಾನುಭವ ಒಂದು ಹದಕ್ಕೆ ಬಂದಿದ್ದಾಗ, ಕಾವ್ಯಾವಲೋಕನವನ್ನು ಬರೆದನೆಂದು ಹೇಳಬಹುದು. ಈ ಕಾರಣದಿಂದ, ಕಾವ್ಯಾವಲೋಕನದಲ್ಲಿ ಉತ್ತಮವಾದ ನೂರಾರು ಪದ್ಯಗಳ ಒಂದು ಕೋಶವೇ (ಆ್ಯಂಥಾಲಜಿ, ಸಂಕಲನ) ಅಡಕವಾಗಿದೆ ಎನ್ನಬಹುದು. ಇದು ಕಾವ್ಯಾವಲೋಕನದ ಹೆಚ್ಚುಗಾರಿಕೆ; ಇವನ ತರುವಾಯ ಬಂದ ಲಕ್ಷಣಕಾರರು ಇವನ ಮೇಲುಪಂಕ್ತಿಯನ್ನು ಅನುಸರಿಸಿದರು.

ನಾಗವರ್ಮನ ಕೃತಿಗಳಿಂದ ಅವನ ವಿಚಾರವಾಗಿ ನಮಗೆ ಈ ಅಂಶಗಳು ತಿಳಿದುಬರುತ್ತವೆ: ಕಾವ್ಯಾವಲೋಕನದಿಂದ ಇವನು ದ್ವಿಜವಂಶಕ್ಕೆ ಸೇರಿದವನು, ದಾಮೋದರನ ಮಗ ಎಂದಿಷ್ಟೇ ತಿಳಿಯುತ್ತದೆ. ವರ್ಧಮಾನ ಪುರಾಣದ ಈ ಕೆಳಗಿನ ಪದ್ಯ ಕವಿಯ ವಿಷಯವಾಗಿ ಇನ್ನಷ್ಟು ಬೆಳಕು ಚೆಲ್ಲುತ್ತದೆ.

ಜನಕಂ ವಿಪ್ರಕುಳಪ್ರದೀಪಂ ಅನಘಂ ದಾಮೋದರಂ; ಪೆತ್ತ ತಾಯ್
ವಿನಯಾಳಂಕೃತೆ ವೀರಕಬ್ಬೆ; ವರಣಂ ಶ್ರೀ ವೀರಭಟ್ಟಾರಕಂ;
ತನಯಂ ಸದ್ಗುಣಮಂಡನಂ ಮಧು ವಲಂ ತಾನ್—ಎಂದೊಡೆ।
ಆದೊಂದು ಸೈ
ಪಿನ ಮಾನೋನ್ನತಿಗಿಂತು ನೋಂತ ನರಂ ಆರ್ ಈ ನಾಗವರ್ಮಂಬರಂ.

ನಾಗವರ್ಮನ ಇಷ್ಟದೈವ ವೀರಭಟ್ಟಾರಕ (ಮಹಾವೀರ ಜಿನ); ಆದ್ದರಿಂದಲೇ ಅವನು ತೀರ್ಥಂಕರರಲ್ಲಿ ಮಹಾವೀರಸ್ವಾಮಿಯನ್ನು ಕುರಿತ ವರ್ಧಮಾನಪುರಾಣವನ್ನು ರಚಿಸಿದ್ದು. ಕವಿ ಜನ್ನನು ತನ್ನ ಅನಂತನಾಥಪುರಾಣ

ವಲ್ಲಿ ಜಿನೇಂದ್ರ ಪುರಾಣ ಕರ್ತೃಗಳ ಪಂಕ್ತಿಯಲ್ಲಿ ನಾಗವರ್ಮನನ್ನು ಸೇರಿಸಿ, 'ನಾಗವರ್ಮನ ಬಹುಜ್ಞತೆ'ಯನ್ನು ಎತ್ತಿ ಹೇಳಿದ್ದಾನೆ. ನಾಗವರ್ಮನ ಶಾಸ್ತ್ರಗ್ರಂಥಗಳನ್ನು ಗಮನಿಸಿಯೇ ಜನ್ನ ಈ ಮಾತನ್ನು ಹೇಳಿರುವುದು ಸ್ಪಷ್ಟ. ಇದೇ ಜನ್ನನು, 'ನಾಗವರ್ಮನು ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದನು' ಎಂದೂ ಹೇಳಿದ್ದಾನೆ. ಈ ಜಗದೇಕ ಪಶ್ಚಿಮ ಚಾಳುಕ್ಯರಾಜ್ಯದ ಚಕ್ರವರ್ತಿ ಎರಡನೆಯ ಜಗದೇಕಮಲ್ಲ (1138-1150) ಎಂದು ಆರ್. ನರಸಿಂಹಾಚಾರ್ಯರು ಊಹಿಸಿದ್ದರು. ಈಗ ನಾಗವರ್ಮನ ವರ್ಧಮಾನ ಪುರಾಣದಿಂದ ಅದರ ರಚನಾಕಾಲ 1042 ಎಂದು ಖಚಿತವಾಗಿ ತಿಳಿದು ಬಂದಿರುವುದರಿಂದ, ನಾಗವರ್ಮನು ಚಾಲುಕ್ಯಚಕ್ರವರ್ತಿ ಜಗದೇಕಮಲ್ಲ 2ನೆಯ ಜಯಸಿಂಹನ ಬಳಿ ಕಟಕೋಪಾಧ್ಯಾಯನಾಗಿದ್ದನು* ಎಂದು ಹೇಳಬೇಕಾಗುತ್ತದೆ. ತನ್ನ ವರ್ಧಮಾನ ಪುರಾಣವನ್ನು ವಾದಿರಾಜ ಪಂಡಿತರು ಶೋಧಿಸಿದರು ಎಂದು ನಾಗವರ್ಮ ಹೇಳಿದ್ದಾನೆ. ಈ ವಾದಿರಾಜರು ಜಯಸಿಂಹನ ಆಸ್ಥಾನದ ವಿದ್ವಾಂಸರು ; ಸಂಸ್ಕೃತ ಯಶೋಧರ ಚರಿತೆಯನ್ನು ಬರೆದ ಕವಿ.

ಇನ್ನು, ಕಾವ್ಯಾವಲೋಕನದ ಪರಿಚಯಕ್ಕೆ ತೊಡಗಬಹುದು. ನಾಗವರ್ಮನೇ ಅದರ ಬಗೆಗೆ ಹೀಗೆ ಹೇಳಿದ್ದಾನೆ :

ಕವಿಗಳ್ಗೆ ಇದು ಕೈಗನ್ನಡಿ,
ಕವಿತೆಗೆ ಬಾಳ್ಮೊದಲ್, ವಾಗ್ದೇವತೆಗೆ ಉದ್-
ಭವವೇತು ಕೋಶಗೃಹಂ...

ಸಮುಚಿತ ಶಬ್ದಸ್ಮೃತಿ, ಕಾ-
ವ್ಯಮಲವ್ಯಾವೃತ್ತಿ, ಗುಣವಿವೇಕಂ, ರೀತಿ
ಕ್ರಮ ರಸನಿರೂಪಣಂ, ಕವಿ-
ಸಮಯಂ, ಇವು ಇಂತು ಅಯ್ದುಂ ಇವರೊಳ್
ಅಧಿಕರಣಂಗಳ್.

* 'ಕಟಕ' ಎಂದರೆ 'ಸೈನ್ಯ', 'ರಾಜಧಾನಿ' ಎಂಬ ಎರಡು ಮುಖ್ಯವಾದ ಅರ್ಥಗಳು ಸಂದರ್ಭಕ್ಕೆ ಹೊಂದುತ್ತದೆ. ಕಟಕಾಚಾರ್ಯ = ಸೈನ್ಯಕ್ಕೆ ವಿದ್ಯಾಭ್ಯಾಸಮಾಡಿಸುವವನು ರಾಜಧಾನಿಯ ಮುಖ್ಯೋಪಾಧ್ಯಾಯ, ಮಹಾ ಮಹೋಪಾಧ್ಯಾಯ ಎಂದು ಅರ್ಥಮಾಡಬಹುದು.

['ಕವಿಗಳಿಗೆ ಇದು ಕೈಗನ್ನಡಿ; ಕವಿತೆಗೆ ಜನ್ಮಸ್ಥಾನ; ಸರಸ್ವತಿಯ ಅವತಾರಕ್ಕೆ (ಹುಟ್ಟಿಗೆ) ಕಾರಣ; (ಕಾವ್ಯಸಂಪತ್ತಿನ) ಕೋಶಾಗಾರ, ಎಂದರೆ, ಭಂಡಾರ. (ಕಾವ್ಯಾವಲೋಕನ ಪೇಗೆ ಕಾವ್ಯಕೋಶ ಎಂಬ ಅಂಶವನ್ನು ಹಿಂದೆಯೇ ಹೇಳಿದೆ.)

ಶಬ್ದಸ್ಮೃತಿ, ಕಾವ್ಯದೋಷ ವಿವರಣೆ, ಗುಣವಿವೇಚನೆ, ರೀತಿ ಮತ್ತು ರಸನಿರೂಪಣೆ, ಕವಿಸಮಯ ಇವು ಈ ಗ್ರಂಥದ ಐದು ಅಧಿಕರಣಗಳು ಅಥವಾ ಅಧ್ಯಾಯಗಳು.]

ಮೊದಲ ಅಧಿಕರಣವಾದ 'ಶಬ್ದಸ್ಮೃತಿ'ಯಲ್ಲಿ ಕನ್ನಡ ವ್ಯಾಕರಣವನ್ನು ಸಂಗ್ರಹವಾಗಿ ನಾಗವರ್ಮ ನಿರೂಪಿಸಿದ್ದಾನೆ. ಇದರ ವಿಚಾರವಾಗಿ ವ್ಯಾಕರಣ ವಿಭಾಗದಲ್ಲಿ ನಾಲ್ಕುಮಾತನ್ನು ಹೇಳಲಾಗುವುದು.

ಉಳಿದ ನಾಲ್ಕು ಅಧಿಕರಣಗಳು ಕಾವ್ಯಮೀಮಾಂಸೆಗೆ ಸಂಬಂಧಪಟ್ಟಿವೆ. ಗ್ರಂಥದ ಕೊನೆಯಲ್ಲಿ :

ವಾಮನನುಂ ರುದ್ರಟನುಂ
ಭಾಮಹನುಂ ದಂಡಿಯುಂ ಮನಂಗೊಳೆ ಪೇಳ್ದಂ
ತೀಮಹಿಗೆ ನೆಗೆಳೆ ಪೇಳ್ದಂ
ದಾಮೋದರ ತನಯನೀ ವಚೋಲಂಕೃತಿಯಂ,

—ಎಂದು ಅಲಂಕಾರ ಶಾಸ್ತ್ರರಚನೆಯಲ್ಲಿ ತಾನು ಯಾರುಯಾರಿಗೆ ಋಣಿ ಎಂಬುದನ್ನು ನಾಗವರ್ಮ ತಿಳಿಸಿದ್ದಾನೆ. ಐದನೆಯ ಅಧಿಕರಣದಲ್ಲಿ ನಿರೂಪಿಸಿರುವ 'ಕವಿಸಮಯ' ಎಂಬ ವಿಚಾರಕ್ಕೆ ಇವನು ಸುಮಾರು 10ನೆಯ ಶತಮಾನದಲ್ಲಿ ಇದ್ದ ಅಮರಚಂದ್ರ ('ಕಾವ್ಯಕಲ್ಪಲತಾ' ಎಂಬ ಅಲಂಕಾರ ಗ್ರಂಥದ ಕರ್ತೃ) ಹಾಗೂ ರಾಜಶೇಖರ ('ಕಾವ್ಯಮೀಮಾಂಸೆ'ಯ ಕರ್ತೃ), ಇವರಿಗೆ ಋಣಿಯಾಗಿದ್ದಾನೆ. ಆದರೂ, ಈ ಇಬ್ಬರ ಹೆಸರುಗಳನ್ನು ನೆನೆಯದಿರುವುದು ಸೋಜಿಗದ ಸಂಗತಿ. ಭರತಮುನಿಯ ನಾಟ್ಯಶಾಸ್ತ್ರವನ್ನೂ ಅನುಸರಿಸಿದ್ದಾನೆ; ಮೇಲಿನ ಪದ್ಯದಲ್ಲಿ ಅವನ ಹೆಸರಿಲ್ಲದಿದ್ದರೂ, ರಸದ ನಿಷ್ಪತ್ತಿಯ ವಿಚಾರವನ್ನು ಹೇಳುವಾಗ 'ಭರತಶಾಸ್ತ್ರಕ್ರಮದಿಂ' ಎಂದು ಹೇಳಿರುವುದರಿಂದ, ರಸತತ್ತ್ವ ನಿರೂಪಣೆಯಲ್ಲಿ ಭರತನ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಧ್ವನಿಸಿದ್ಧಾಂತವನ್ನು ಸ್ಥಾಪಿಸಿದ ಆನಂದವರ್ಧನನು 9ನೆಯ ಶತಮಾನದಷ್ಟು ಪೂರ್ವದವನಾದರೂ, "ಧ್ವನಿತತ್ತ್ವವೂ ಅವನನ್ನು ಸೋಂಕಲಿಲ್ಲ; ಧ್ವನಿಯನ್ನು ಒಂದು ಅಲಂಕಾರವೆಂದಾದರೂ

ಗಣಿಸಿ ಹೆಸರಿಸುವಷ್ಟು ದೂರಕೂಡ ಅವನು ಹೋಗಲಿಲ್ಲ.* ಧ್ವನಿಪ್ರತಿಪಾದನೆ ಮಾಡುವ ಗ್ರಂಥಗಳನ್ನು ಅವನು ನೋಡಿಯೇ ಇರಲಿಲ್ಲವೆಂದು ತೋರುತ್ತವೆ."[13] ನಾಗವರ್ಮನು ಅನುಸರಿಸಿರುವುದು ಮೇಲೆ ಹೇಳಿದ ಪ್ರಾಚೀನ ಅಲಂಕಾರಿಕರನ್ನು ಮಾತ್ರ. ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿರುವರಂತೆ-"ಮೇಲೆ ಹೇಳಿರುವ ಸಂಸ್ಕೃತ ಲೇಖಕರಲ್ಲಿ ಪ್ರತಿಯೊಬ್ಬನಿಗೂ ನಾಗವರ್ಮನು ಹೆಚ್ಚಾಗಿಯೋ ಕಡಮೆಯಾಗಿಯೋ ಋಣಿಯಾಗಿದ್ದರೂ, ಕಾವ್ಯಾವಲೋಕನವನ್ನು ಬರಿಯ ಸಂಕಲನಗ್ರಂಥ ಎಂದು ಭಾವಿಸುವುದು ತಪ್ಪು. ಗ್ರಂಥದ ಬಹುಪಾಲಿನ ಭಾಗ ಕೃತಿಕಾರನ ಮುದ್ರೆಯನ್ನು ತಳೆದಿದೆ; ಗ್ರಂಥದ ವಿಷಯಗಳನ್ನು ಜೋಡಿಸಿರುವ ಕ್ರಮವೂ ನಿರೂಪಣೆಯ ವಿಧಾನವೂ ಅವನ ಸ್ವಂತದ್ದಾಗಿವೆ."[14]

ಕಾವ್ಯದೋಷಗಳನ್ನು ವಿವರಿಸುವ 2ನೆಯ ಅಧಿಕರಣದ ಪ್ರಾರಂಭದಲ್ಲಿ, ಕವಿತಾರಚನೆಗೆ ಅಗತ್ಯವಾದ ಸಂದರ್ಭಗಳು ಯಾವುವು ಎಂಬುದನ್ನು ವಿವರಿಸುವ ಈ ಕೆಳಗಿನ ಪದ್ಯ ತುಂಬ ಪ್ರಸಿದ್ಧವಾಗಿದೆ:

> ಪ್ರತಿಭಾಸಂ ಕಾವ್ಯವಿದ್ಯಾಪ್ರಚಯಪರಿಚಯಂ, ವೃದ್ಧಸೇವಾನುರಾಗಂ,
> ಸತತಾಭ್ಯಾಸಪ್ರಯತ್ನಂ - ಕವಿತೆಗೆ ನಿಯತಂ ಕಾರಣಂ; ಪೇಳ್ವೊಡೆ ಅಂತಾ
> ಪ್ರತಿಭಾಸಂ ಶಕ್ತಿ, ಲೋಕಾಗಮ ಸಕಲ ಕಲಾವೇದನಂ ವಿದ್ಯೆ. ಶಾಸ್ತ್ರಾ
> ನ್ವಿತಂ ಅಪ್ಪಂ ವೃದ್ಧಂ; ಆಲಸ್ಯಮನುಳಿದೆಸಪುದ್ಯೋಗಂ ಅಭ್ಯಾಸಕರ್ಮಳಿಂ.
>
> (ಪ. 424)

[ಪ್ರತಿಭೆ, ಕಾವ್ಯರಚನೆಗೆ ಅಗತ್ಯವಾದ ವಿದ್ಯೆಗಳ ಪರಿಚಯ, ವೃದ್ಧರ ಸೇವೆಯಲ್ಲಿ ಪ್ರೀತಿ, ಕಾವ್ಯರಚನೆಯಲ್ಲಿ ಎಡೆಬಿಡದೆ ಅಭ್ಯಾಸ ಮತ್ತು ಪ್ರಯತ್ನ - ಇವು ಕವಿತಾ ಸೃಷ್ಟಿಗೆ ಇದ್ದೇತೀರಬೇಕಾದ ಕಾರಣಗಳು. ಪ್ರತಿಭೆ ಎಂದರೆ ಒಂದು ವಿಶೇಷ ಶಕ್ತಿ; ಲೋಕಾನುಭವ, ಧಾರ್ಮಿಕಶಾಸ್ತ್ರ, ಸಕಲ ಕಲೆಗಳು (ಇವು 64), ಇವುಗಳ ತಿಳಿವಳಿಕೆಯೇ ವಿದ್ಯೆ; ವೃದ್ಧನೆಂದರೆ ಶಾಸ್ತ್ರಜ್ಞಾನವುಳ್ಳವನು (ವಯಸ್ಸಿನಿಂದ ಹಿರಿಯನಾದವನಲ್ಲ); ಬೇಸರಪಡದೆ ಯಾವಾಗಲೂ ಕಾವ್ಯಕರ್ಮದಲ್ಲಿ ತೊಡಗಿರುವುದು ಅಭ್ಯಾಸ ಪ್ರಯತ್ನ.]

ಇದರ ಮುಂದಿನ 5 ಪದ್ಯಗಳಲ್ಲಿ–ಕವಿತಾರತ್ನ ದೊರಕುವುದು ಪುಣ್ಯಶಾಲಿಗೆ; ಕವಿತೆಯಿಲ್ಲದ ಪಾಂಡಿತ್ಯ ಮನೋಹರವೆನಿಸದು; ಇಹಲೋಕದ

---

* ಕವಿರಾಜಮಾರ್ಗದಲ್ಲಿ 'ಧ್ವನಿ' ಯನ್ನು ಒಂದು ಅಲಂಕಾರ ಎಂದು ಹೇಳಿರುವುದನ್ನು ಹಿಂದೆಯೇ ಪ್ರಸ್ತಾವಿಸಿದೆ. ನಾಗವರ್ಮನು ಬಹುಶಃ ಕವಿರಾಜಮಾರ್ಗವನ್ನೂ ನೋಡಿದ್ದಿರಲಾರ.

ಇಷ್ಟಾರ್ಥಗಳನ್ನೂ ಶಾಶ್ವತವಾದ ಕೀರ್ತಿಯನ್ನೂ ದೊರಕಿಸಿಕೊಡುವುದಾದ್ದರಿಂದ, ಇಹಪರ ಸುಖಗಳೆರಡಕ್ಕೂ ಕಾವ್ಯಕ್ಕಿಂತ ಹಿತಕರವಾದದ್ದು ಬೇರೆ ಯಾವುದೂ ಇಲ್ಲ; ಕಾವ್ಯವಧುವಿನ ಮೈಯಲ್ಲಿ ಸ್ವಲ್ಪ ದೋಷವಿದ್ದರೂ ಕೀರ್ತಿಗೆ ಕುಂದು; ಆದ್ದರಿಂದ, ಕೀರ್ತಿಯನ್ನು ಬಯಸುವ ಕವಿ ಉಪೇಕ್ಷೆಮಾಡದೆ ಕಾವ್ಯದ ಶಬ್ದದೋಷ ವಾಕ್ಯದೋಷಗಳನ್ನು ಹೋಗಲಾಡಿಸಬೇಕು– ಎಂಬ ಅಂಶಗಳನ್ನು ನಾಗವರ್ಮನು ಮನಮುಟ್ಟುವಂತೆ ತಿಳಿಸಿ, ಈ ಎರಡನೆಯ ಅಧಿಕರಣದಲ್ಲಿ ಆ ಕಾವ್ಯದೋಷಗಳನ್ನು ವಿವರಿಸಿದ್ದಾನೆ.

ಕೆಲವು ದೋಷಗಳ ವಿಚಾರ :

ನ್ಯಾಯ, ಆಗಮ, ನೃಪ ವಿದ್ಯಾ, ಆ-
ಮ್ನಾಯ, ಕಲಾ, ಕಾಮತಂತ್ರ ವಿಷಯ ವಿರೋಧ–
ಪ್ರಾಯಂ ಶಾಸ್ತ್ರವಿರುದ್ಧಂ ;
ಶ್ರೇಯಂ ಅದಂತು ಎಲ್ಲಿಯಾನುಂ ಉಕ್ತಿಕ್ರಮದಿಂ. (ಸೂತ್ರ 112)

[ನ್ಯಾಯ, ಆಗಮ, ಮುಂತಾದ ಶಾಸ್ತ್ರಗಳಲ್ಲಿ ಹೇಳಿರುವ ವಿಷಯಕ್ಕೆ ವಿರುದ್ಧವಾಗಿದ್ದರೆ, ಅದು ಶಾಸ್ತ್ರವಿರುದ್ಧವೆಂಬ ದೋಷ. ಆದರೆ, ಎಲ್ಲಿಯಾದರೂ ಹೇಳತಕ್ಕ ರೀತಿಯಿಂದ ಅದು ದೋಷವಾಗದೆ ಇರಬಹುದು.]

ನಾಗವರ್ಮನು ಕೆಳಗಿನ ಉದಾಹರಣೆಯನ್ನು ತನ್ನ ವರ್ಧಮಾನ ಪುರಾಣದಿಂದಲೇ ಆಯ್ದುಕೊಟ್ಟಿದ್ದಾನೆ :

ಉಪನಯನಂ ಗೆಯ್ಯದೆಯುಂ
ಸ್ವಪೂರ್ವಜನ್ಮವಾಸನೆಯ ಬಲದಿಂ ಇಂತು ಈತಂ ವೇ–
ದ ಪುರಾಣ ವೇದಿಯಾದಂ ;
ವ್ಯಪೇಕ್ಷೆಗೆಯ್ಗುಮೆ ವಿಶುದ್ಧಮಣಿ ಸಂಸ್ಕೃತಿಯಂ.

[ವೇದಾಧ್ಯಯನ ಮಾಡುವುದಕ್ಕೆ 16 ಸಂಸ್ಕಾರ ಕರ್ಮಗಳಲ್ಲಿ ಒಂದಾದ ಉಪನಯನ ಸಂಸ್ಕಾರವಾಗಿರಬೇಕು. 'ಈ ಸಂಸ್ಕಾರವಿಲ್ಲದೆಯೇ ಈತ ವೇದ ಪುರಾಣಗಳನ್ನು ಬಲ್ಲವನಾದನು'–ಎಂದು ಹೇಳಿದ್ದರೆ, 'ಶಾಸ್ತ್ರ ವಿರುದ್ಧ' ದೊಷ ಸಂಭವಿಸುತ್ತಿತ್ತು. ಆದರೆ, ಪೂರ್ವಜನ್ಮದ ಸಂಸ್ಕಾರ ಬಲದಿಂದ ವೇದಪಾರಂಗತನಾದ ಎಂದು ಹೇಳಿರುವುದರಿಂದಲೂ, ಈ ಹೇಳಿಕೆಯನ್ನು 'ಸಹಜವಾಗಿಯೆ ಶುದ್ಧವಾಗಿರುವ ರತ್ನ ಸಂಸ್ಕಾರವನ್ನು (ಸಾಣೆ ಹಿಡಿಯುವುದರ ಮೂಲಕ ಶುದ್ಧಗೊಳಿಸುವುದನ್ನು) ಅಪೇಕ್ಷಿಸುತ್ತದೆಯೇ ? (ಇಲ್ಲ)'–

ಎಂಬ ಹೇಳಿಕೆಯಿಂದ ಸಮರ್ಥನೆ ಮಾಡಿರುವುದರಿಂದಲೂ, ದೋಷವುಂಟಾಗಿಲ್ಲ.]

ಮೂರನೆಯ ಗುಣ ವಿವೇಕಾಧಿಕರಣದಲ್ಲಿ, 'ಮಾರ್ಗ ವಿಭಾಗ ದರ್ಶನ' ಮತ್ತು 'ಶಬ್ದಾಲಂಕಾರನಿರ್ಣಯ', 'ಅರ್ಥಾಲಂಕಾರ' ಎಂಬ ಮೂರು ವಿಭಾಗಗಳಿವೆ. 'ಕಾವ್ಯಕ್ಕೆ ಶೋಭೆ (ಮೆರುಗು, ಸೊಬಗು) ಕೊಡುವ ಧರ್ಮವೇ ಗುಣ' ಎಂದು ಹೇಳಿ,—ಸಮ, ಸಂಶ್ಲಿಷ್ಟ, ಅರ್ಥವ್ಯಕ್ತಿ, ಮಧುರ ಪ್ರಸನ್ನ, ಕಾಂತ, ಸುಕುಮಾರ, ಓಜಸ್ಸು, ಉದಾರ, ಸಮಾಧಿ—ಎಂಬ ಹತ್ತು ಕಾವ್ಯಗುಣಗಳನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾನೆ. ಇವುಗಳ ವಿವರಣೆ ಒಟ್ಟಿನಲ್ಲಿ ದಂಡಿಯನ್ನು ಅನುಸರಿಸಿದೆ. ಈ ಗುಣಗಳು ದಕ್ಷಿಣ ದೇಶದ (= ವಿದರ್ಭ) ಕವಿಮಾರ್ಗದಲ್ಲಿ ರೂಢಿಯಾಗಿವೆ; ಇವುಗಳ ವಿಪರ್ಯಯ (ವ್ಯತ್ಯಸ್ತವಾದ) ಕ್ರಮ ಉತ್ತರ ಮಾರ್ಗದ್ದು—ಎಂದಿರುವುದೂ ದಂಡಿಯ ಮಾತೇ. ಭಾಮಹನ ಅಭಿಪ್ರಾಯವನ್ನು ಅನುಮೋದಿಸಿ, 'ವೈದರ್ಭ ಗೌಡ ಎಂಬ ಮಾರ್ಗ ಭೇದಗಳು ಗತಾನುಗತಿಕ' (ಎಂದರೆ, ಹಿಂದಿನವರು ತುಳಿದ ದಾರಿಯನ್ನು ಕಣ್ಣುಮುಚ್ಚಿ ತುಳಿಯುವುದು) ಎಂದು ಈ ಪ್ರಕರಣವನ್ನು ಮುಗಿಸುತ್ತಾನೆ. ಎರಡನೆಯದು ಶಬ್ದಾಲಂಕಾರದ ಪ್ರಕರಣ—ಇದರಲ್ಲಿ, ಯಮಕ, ಅನುಪ್ರಾಸ, ಚಿತ್ರ, ವಕ್ರೋಕ್ತಿ ಎಂಬ ನಾಲ್ಕನ್ನು ಹೆಸರಿಸಿ, ಅವುಗಳ ಒಳಭೇದಗಳನ್ನು ತಿಳಿಸಿದ್ದಾನೆ. ಚಿತ್ರಾಲಂಕಾರದಲ್ಲಿ ಪದಗಳನ್ನು ಒಂದು ಗೊತ್ತಾದ ಕ್ರಮದಲ್ಲಿ ಜೋಡಿಸುವುದರಿಂದ ಶರ (ಬಾಣ), ಶೂಲ, ಚಾಪ (ಬಿಲ್ಲು), ಚಕ್ರ, ಖಡ್ಗ, ಮುಂತಾದ ಚಿತ್ರಗಳ ಆಕಾರಗಳು ಮೂಡಿ ನಿಲ್ಲುತ್ತವೆ.

ಅರ್ಥಾಲಂಕಾರಗಳನ್ನು—ವಾಸ್ತವ, ಉಪಮೆ, ಅತಿಶಯ, ಶ್ಲೇಷ ಎಂದು ಸ್ಥೂಲವಾಗಿ ನಾಲ್ಕು ಗುಂಪುಗಳಾಗಿ ವಿಂಗಡಿಸಿದೆ. ಪ್ರತಿ ಗುಂಪಿನಲ್ಲೂ ಆಯಾ ಗುಂಪಿನ ಸಾಮಾನ್ಯ ಲಕ್ಷಣವನ್ನುಳ್ಳ ಅಲಂಕಾರಗಳನ್ನು ಉದಾಹರಣೆಗಳ ಸಮೇತ ವಿವರಿಸಲಾಗಿದೆ. ಉದಾಹರಣೆಗೆ, 'ಅತಿಶಯ'ದ ಗುಂಪಿನಲ್ಲಿ—ವಿರೋಧ, ಉತ್ಪ್ರೇಕ್ಷೆ, ವಿಭಾವನೆ, ತಿರೋಹಿತ, ಪೂರ್ವಕ, ಅಹೇತು, ತದ್ಗುಣ, ಪರಸ್ಪರಾಸಂಗತಿಕ, ವಿಶೇಷ, ಎಂಬ ಒಂಬತ್ತು ಅಲಂಕಾರಗಳು ಸೇರಿವೆ. ಹೀಗೆ ಒಂದು ತತ್ತ್ವಕ್ಕೆ ಅನುಗುಣವಾಗಿ ಅಲಂಕಾರಗಳನ್ನು ವಿಭಜನೆ ಮಾಡುವಲ್ಲಿ ನಾಗವರ್ಮನು ರುದ್ರಟನನ್ನು ಅನುಸರಿಸಿದ್ದಾನೆ. ಈ ನಾಲ್ಕು ಗುಂಪು

ಗಳಿಗೂ ಸೇರದ ಪ್ರೇಯಸ್, ಊರ್ಜಸ್ವಿ, ಆಶೀ, ಭಾವಿಕ, ಎಂಬ ನಾಲ್ಕು ಹೆಚ್ಚಿನ ಅಲಂಕಾರಗಳನ್ನು ಪ್ರತ್ಯೇಕವಾಗಿ ವಿವರಿಸಿದ್ದಾನೆ. ಕವಿರಾಜಮಾರ್ಗ ದಲ್ಲಿ ಹೇಳಿರುವುದು 36 ಅಲಂಕಾರಗಳು ; ಇಲ್ಲಿ ಅಲಂಕಾರಗಳ ಸಂಖ್ಯೆ 58ಕ್ಕೆ ಏರಿದೆ.

(i) 'ವಾಸ್ತವ'ದ ಗುಂಪಿಗೆ ಸೇರಿದ 'ಪರಿವೃತ್ತಿ' ಎಂಬ ಅಲಂಕಾರ. 'ಒಂದನ್ನು ಕೊಟ್ಟು ಪ್ರತಿಯಾಗಿ ಇನ್ನೊಂದನ್ನು ಪಡೆಯುವುದು' ಈ ಅಲಂಕಾರದ ಲಕ್ಷಣ. ('ಪರಿವೃತ್ತಿ' ಎಂಬ ಮಾತಿಗೆ 'ವಿನಿಮಯ', 'ಅದಲು ಬದಲು ಮಾಡುವುದು' ಎಂಬ ಅರ್ಥವೂ ಉಂಟು.)

ಬಿಳಿಯಲರ್ಗಣ್ಗಳ್ ಬೆಳ್ಪಂ
ಲಲನಾಜನದ ಅಧರ ಮಣಿಗೆ ಕೊಟ್ಟು, ಅದರ ಪುದುಂ-
ಗೊಳಿಸಿದ ಕೆಂಪಂ ನೀರ್ವೋ
ಕುಳಿಯೊಳ್ ಮಾರಾಡಿಕೊಂಡ ತೆರದಿಂ ತೋರ್ಕುಂ.

[ಇದು ಜಲಕ್ರೀಡೆಯಾಡುತ್ತಿರುವ ಸ್ತ್ರೀಯರ ವರ್ಣನೆ : ಅವರ ಕಣ್ಣುಗಳು ಅರಳಿದ ಬಿಳಿಯ ಹೂವಿನಂತಿವೆ ; ತುಟಿ ಕೆಂಪುಮಣಿ, ಮಾಣಿಕ್ಯ (= ಅಧರಮಣಿ). ನೀರಾಟದಲ್ಲಿ ಕಣ್ಣು ತುಸು ಕೆಂಪಾಗಿವೆ ; ತುಟಿ ತುಸ ಬಿಳಿಚಿಕೊಂಡಿವೆ. ಇದು ವಾಸ್ತವ ಸಂಗತಿ. ಇದನ್ನು ನೋಡಿದರೆ, ಕಣ್ಣುಗಳು ತಮ್ಮ ಬಿಳುಪನ್ನು ತುಟಿಗೆ ಕೊಟ್ಟು ಅದರ ಕೆಂಪನ್ನು ತಾವು ಪಡೆದುಕೊಂಡಿರುವಂತೆ ಕಾಣುತ್ತದೆ.]

(ii) 'ಉಪಮಾ' ಮೂಲವಾದ ಅಲಂಕಾರ ವರ್ಗದಲ್ಲಿ 'ವಿಪರ್ಯಾ ಸೋಪಮೆ'ಗೆ ಲಕ್ಷ್ಯ ; ಇದು ಪಂಪನ ಆದಿಪುರಾಣದಿಂದ (6–85) ಆಯ್ದ ಪದ್ಯ :

ಮೊಗಮುಂ ತಾವರೆ, ಕಣ್ಣಂ ಉತ್ಪಲದಳಂ, ಧಮ್ಮಿಲ್ಲಮಂ ಸೋಗೆ, ಸೆ-
ಳ್ಗುಗುರಂ ಕೇದಗೆ, ಪುರ್ಬುಂ ಅಂಗಜನ ಬಿಲ್, ದಂತಾಳಿಯಂಮುತ್ತು ಕೈ-
ಮುಗಿದು ಆರಾಧಿಸಿ ಪೋಲ್ತುವು ಎನ್ನದೆ, ಸರೋಜಾತಾದಿ ನಿಸ್ಸಾರ
ವಸ್ತುಗಳೊಳ್ ಪೋಲಿಪರ್, ಅಂತು ಆದೇಂ ಮರುಳರೋ, ರೂಪಂ
ವಿಚಿತ್ರಾಂಗಿಯಾ

[ಆಶ್ಚರ್ಯಕರವಾದ ದೇಹವುಳ್ಳವಳ ಮುಖವನ್ನು ತಾವರೆ, ಕಣ್ಣನ್ನು ನೈದಿಲೆಯ ಎಸಳು, ಮುಡಿಯನ್ನು ನವಿಲ ತೋಕೆ, ಚೂಪಾದ ಉಗುರನ್ನು ತಾಳೆಯ ಹೂವು, ಹುಬ್ಬನ್ನು ಮನ್ಮಥನ ಬಿಲ್ಲು, ಹಲ್ಲುಗಳನ್ನು ಮುತ್ತು, ಕೈಮುಗಿದು ಪೂಜಿಸಿ, (ಅವುಗಳ ಗುಣಗಳನ್ನು ತಾವು ಪಡೆದು) ಹೋಲಿಕೆಗೊಂಡವು ಎನ್ನಬೇಕು ; ಹಾಗೆನ್ನದೆ, ಅವಳ

ರೂಪನ್ನು ಆ ರೀತಿ ಕೆಲಸಕ್ಕೆ ಬಾರದ ಕಮಲ ಮುಂತಾದ ವಸ್ತುಗಳಿಗೆ ಹೋಲಿಸುವವರು ಅದೇನು ಮರುಳರೋ!]

ಇದಿಷ್ಟು ಪದ್ಯದ ಅರ್ಥ. ಮುಖಕ್ಕೂ ತಾವರೆಗೂ, ಕಣ್ಣಿಗೂ ನೈದಿಲೆಗೂ, ಮುಂತಾಗಿ ಪರಸ್ಪರ ಹೋಲಿಕೆ ಇರುವುದರಿಂದ ಇದು ಉಪಮಾಲಂಕಾರ. ಆದರೆ, 'ಮುಖ ತಾವರೆಯನ್ನು ಹೋಲುತ್ತದೆ' ಎಂದರೆ ತಾವರೆಗೆ ಪ್ರಾಧಾನ್ಯ ಕೊಟ್ಟಹಾಗಾಯಿತು. ವರ್ಣಿಸುತ್ತಿರುವ ವಿಷಯಕ್ಕೆ ಪ್ರಾಧಾನ್ಯ ಕೊಡಬೇಕಾದರೆ, ತಾವರೆ ಮುಖವನ್ನು ಸೇವಿಸಿ ಅದರ ಚೆಲುವಿಕೆಯನ್ನು ಪಡೆಯಿತು ಎನ್ನಬೇಕು. ಮೊದಲ ರೀತಿಯಲ್ಲಿ ಹೇಳುವುದು ವಿಪರ್ಯಾಸವಾದ, ಎಂದರೆ ವ್ಯತ್ಯಾಸಗೊಂಡ, ಹೋಲಿಕೆಯ ಕ್ರಮ. ಇದನ್ನು ಸೂತ್ರರೂಪದಲ್ಲಿ ಹೇಳುವುದಾದರೆ, ಉಪಮಾನಕ್ಕೆ ಉಪಮೇಯದಿಂದಲೇ ಹೋಲಿಕೆಯನ್ನು ತಿಳಿಸುವುದು. ಉಪಮಾನ ಎಂದರೆ ಹೋಲಿಸುವ ವಸ್ತು ; ಉಪಮೇಯ ಎಂದರೆ ಹೋಲಿಸಲ್ಪಡುವ ವಸ್ತು.

(iii) 'ಅತಿಶಯ' ದಿಂದ ಹುಟ್ಟುವ ಅಲಂಕಾರಗಳ ಸಾಮಾನ್ಯಲಕ್ಷಣ : 'ಸಾಮಾನ್ಯನಿಗೂ ತಿಳಿಯುವ ಹಾಗೆ ಮಾಡಿದ ವಸ್ತುವಿನ ವರ್ಣನೆ ವಿಸ್ಮಯವನ್ನು (ಸೋಜಿಗವನ್ನು) ಉಂಟುಮಾಡುವಂತಿದ್ದರೆ, ಅದು ಅತಿಶಯ. ಈ ಅತಿಶಯಮಾಡಿ ಹೇಳುವುದರಿಂದ ಯಾವ ವರ್ಣನೆಯೂ ಬಹಳ ಆಕರ್ಷಕವಾಗಿರುತ್ತದೆ.' (ಸೂತ್ರ 169).

ಈ ಗುಂಪಿನ ಅಲಂಕಾರಗಳಲ್ಲಿ ಒಂದಾದ 'ಪೂರ್ವ' ಎಂಬ ಅಲಂಕಾರ : "ಜನಕಕ್ಕಿಂತ (ಕಾರಣಕ್ಕಿಂತ) ಮೊದಲೇ ಜನ್ಯವು (ಕಾರ್ಯ) ಉಂಟಾಯಿತೆಂದು ಹೇಳಿದರೆ 'ಪೂರ್ವ' ಎಂಬ ಅಲಂಕಾರವಾಗುತ್ತದೆ." (ಸೂತ್ರ 173).

ಸ್ಮರನ ಶರಂಗಳ್ ಇವು ಎನೆ, ತರ–
ತರದಿಂ ಪೊರಸೆಗೆದು, ಮೆಲ್ಲ ಮೆಲ್ಲನೆ ಬಳಿಯಂ
ಬಿರಿದುವು ಮಲ್ಲಿಗೆ ; ಮುನ್ನಮೆ
ಬಿರಿದುವು ಬಿಬ್ಬಿರನೆ ಬಿರಯಿಜನದ ಅಳ್ಳೆರ್ದೆಗಳ್.

[ಇವು ಮನ್ಮಥನ ಬಾಣಗಳೋ ಎನ್ನುವಂತೆ, ಮಲ್ಲಿಗೆ ಮೊಗ್ಗುಗಳು ತರ ತರವಾಗಿ ಹೊರಕ್ಕೆ ಹೊಮ್ಮಿ, ಮೆಲ್ಲಮೆಲ್ಲನೆ ಆಮೇಲೆ ಅರಳಿದುವು ; ಅದಕ್ಕೂ ಮೊದಲೇ (ತಮ್ಮ ಪ್ರಿಯರಿಂದ ಅಗಲಿದ) ವಿರಹಿ ಜನರ ಅಂಜಿದ ಎದೆಗಳು ಬಿರಿದು ಬಿಟ್ಟಿದ್ದವು. – ಮನ್ಮಥನ ಹೂಬಾಣಗಳು ವಿರಹಿಗಳ ಅಗಲಿಕೆಯ ನೋವಿಗೆ ಕಾರಣವಷ್ಟೆ ; ಅವು ಅವರ ಹೃದಯಂಗಳನ್ನು ಭೇದಿಸುವುವು. ಮನ್ಮಥನ ಐದು ಹೂಬಾಣಗಳಲ್ಲಿ ಮಲ್ಲಿಗೆಯದೂ ಒಂದು.

ಅರಳಿದ ಮಲ್ಲಿಗೆಯನ್ನು ಕಂಡಮೇಲೆ ವಿರಹಿಗಳ ಎದೆ ಬಿರಿಯುವುದು ಸಹಜ; ಅದಕ್ಕೆ ಮೊದಲೇ ಎದೆ ಬಿರಿದುವು ಎಂದು ಹೇಳಿರುವುದು ವಿಸ್ಮಯಕರ, ಅತಿಶಯವಾದ ಸಂಗತಿ. ಕಾರಣಕ್ಕೂ ಮೊದಲೇ ಕಾರ್ಯವಾಗಿದೆ.]

(iv) ಶ್ಲೇಷ ಮೂಲಕವಾದ ಅಲಂಕಾರಗಳು: ಇವುಗಳಲ್ಲಿ ಅರ್ಥ ಶ್ಲೇಷ; ಶಬ್ದಶ್ಲೇಷ ಎಂದು ಎರಡು ಬಗೆ. 'ಒಂದೇ ಪದವನ್ನು ಒಡೆಯದೆ ಎರಡು ಅರ್ಥ ಹೊರಡುವಂತೆ ಹೇಳುವುದು ಅರ್ಥಶ್ಲೇಷ; ಪದವನ್ನು ಒಡೆದು, ಅದರ ಅವಯುವಗಳಿಂದ ಎರಡು ಅರ್ಥ ಹೊರಡುವಂತಿದ್ದರೆ ಶಬ್ದ ಶ್ಲೇಷ'. (ಸೂತ್ರ 176). ಈ ಎರಡು ಪ್ರಕಾರಗಳಲ್ಲಿ ಮತ್ತೆ ಒಳಭೇದಗಳಿವೆ. ಪ್ರಸಿದ್ಧವಾದ ವ್ಯಾಜಸ್ತುತಿ, ವಿರೋಧಾಭಾಸ, ಇವು ಅರ್ಥಶ್ಲೇಷಗಳು.

'ವಿರೋಧಾಭಾಸ'ಕ್ಕೆ ಉದಾಹರಣೆ:

ಅನುಗತಕರ್ಣಂ, ಕೃಷ್ಣಾ–
ರ್ಜುನಾನುರಕ್ತಂ ವಿಲೋಚನಂ; ದೋರ್ದಂಡಂ
ಘನದೃಢಬಲಂ ಪ್ರಲಂಬಂ
ತನಗೆನೆ, ಪಿರಿದುಂ ವಿರುದ್ಧಮಿ ನೃಪನ ಅಂದಂ.

ಈ ಪದ್ಯದಲ್ಲಿ ರಾಜನೊಬ್ಬನ ಅಂದವನ್ನು (ಸ್ವರೂಪವನ್ನು) ವರ್ಣಿಸಿದೆ: ಕರ್ಣನನ್ನು ಹಿಂಬಾಲಿಸುತ್ತ (=ಅನುಗತಕರ್ಣಂ), ಪರಮ ಮಿತ್ರರಾದ ಕೃಷ್ಣಾರ್ಜುನರಲ್ಲಿ ಅನುರಕ್ತವಾದ (ಎಂದರೆ ಪ್ರೀತಿಯುಳ್ಳ) ಕಣ್ಣು; ಬಾಹುದಂಡವು ಬಹಳ ಬಲಿಷ್ಠವಾಗಿ ನೀಳವಾಗಿತ್ತು. ಹೀಗೆ, ರಾಜನ ಅಂದ ಪರಸ್ಪರ ವಿರೊಧ ಗುಣಗಳಿಂದ ಕೂಡಿತ್ತು. ಕರ್ಣ ಮತ್ತು ಅರ್ಜುನ ಕೃಷ್ಣರು ವೈರಿಗಳು; ಏಕಕಾಲದಲ್ಲಿ ಇವರಲ್ಲಿ ಸಂಬಂಧವಿಟ್ಟುಕೊಳ್ಳುವುದರಲ್ಲಿ ವಿರೋಧ ಆಭಾಸವಾಗುತ್ತದೆ (=ತೋರಿ ಬರುತ್ತದೆ). ಈ ವಿರೋಧ ಕೇವಲ ತೋರಿಕೆಯದು. ಕರ್ಣ ಮುಂತಾದ ಪದಗಳಿಗೆ ಬೇರೆಯಾಗಿ ಅರ್ಥ ಮಾಡಿದರೆ ವಿರೋಧವು ಪರಿಹಾರವಾಗುತ್ತದೆ. ಕಣ್ಣು ಕಿವಿಯುವರೆಗೆ ಚಾಚಿತ್ತು (=ಅನುಗತಕರ್ಣ); ಕೃಷ್ಣ=ಕಪ್ಪಾಗಿಯೂ, ಅರ್ಜುನ=ಬೆಳ್ಳಗೂ, ಅನುರಕ್ತಂ=ಕೆಂಪಾಗಿಯೂ ಇದ್ದಿತು, ಎಂದರೆ ಬೇರೆಯ ಅರ್ಥ ಹೇಳುವುದರ ಮೂಲಕ ನಿಜಸ್ಥಿತಿಯನ್ನು ತಿಳಿಸಿದ ಹಾಗಾಯಿತು. (ಶ್ಲೇಷ ಎಂದರೆ ಒಡಗೂಡಿರುವುದು ಎಂದು ಪದದ ಅರ್ಥ; ಇಲ್ಲಿ ಎರಡು ಅರ್ಥಗಳು ಒಟ್ಟಿಗೆ ಕೂಡಿಕೊಂಡಿವೆ; ವಿರುದ್ಧವಾದ ಅರ್ಥ ತೋರುವಂತೆ ಪದಗಳನ್ನು ಉಪಯೋಗಿಸಿದೆ.)

ನಾಲ್ಕನೆಯದು 'ರೀತಿ ಕ್ರಮ ರಸ ನಿರೂಪಣಾಧಿಕರಣ'. ನಾಗವರ್ಮನ ಪ್ರಕಾರ 'ರೀತಿ'ಯೆಂದರೆ, 'ಪದರಚನೆಯಲ್ಲಿ ಅತಿಶಯ' ('ಪದರಚನಾತಿಶಯಂ ರೀತಿ'). ಗೊತ್ತಾದ ರೀತಿಯಲ್ಲಿ ಅಕ್ಷರಗಳ ವಿನ್ಯಾಸ, ಗುಣ ಕೂಡಿ ಬರುವುದು, ಸಮಾಸಗಳು ಬರುವುದು — ಇವುಗಳನ್ನು ಅನುಸರಿಸಿ ವೈದರ್ಭ, ಗೌಡೀಯ, ಪಾಂಚಾಲೀ ಎಂದು ರೀತಿಗಳು ಮೂರು ತೆರನಾಗಿವೆ. (ಪದ್ಯ 781). ಅರ್ಥಾಲಂಕಾರ ಪ್ರಕರಣದಲ್ಲಿ ನಾಗವರ್ಮ ವಿಶೇಷವಾಗಿ ರುದ್ರಟನನ್ನು ಅನುಸರಿಸಿದ್ದರೂ ಅವನು ಹೇಳುವ 'ಲಾಟೀಯಾ' (ಲಾಟ ದೇಶದ ರೀತಿ) ಎಂಬ ರೀತಿಯನ್ನು ಹೇಳಿಲ್ಲ. ರೀತಿಗಳಲ್ಲಿ ಸಮಾಸಸ್ವರೂಪ, ಪದರಚನೆಯ ಬಗೆ, ರಸದೃಷ್ಟಿ ಹೇಗೆ ಒಂದನ್ನೊಂದು ಹೊಂದಿಕೊಂಡಿರುತ್ತವೆ ಎಂದು ಹೇಳಿರುವುದೂ ಗಮನಿಸಬೇಕಾದ ಸಂಗತಿ. ಇವನ ಅಭಿಪ್ರಾಯದಂತೆ, ಗೌಡ ರೀತಿಯಲ್ಲಿ ಅತಿ ದೀರ್ಘಸಮಾಸಗಳು, ಶಬ್ದಾಡಂಬರ, ಇವು ಎದ್ದು ಕಾಣುತ್ತವೆ; ಅದ್ಭುತ, ರೌದ್ರ, ವೀರರಸಗಳಿಗೆ ಇದು ಸಂಗತವಾಗಿರುತ್ತದೆ, ಎಂದರೆ ಹೊಂದಿಕೆಯಾಗುತ್ತದೆ. ಒಟ್ಟಿನಲ್ಲಿ ರಚನೆ ಕಿವಿಗೆ 'ಪರುಷಪ್ರಾಯ' (ಕರ್ಕಶ).

ಈ ಲಕ್ಷಣ ಅವನು ಕೊಡುವ ಉದಾಹರಣೆಯಲ್ಲಿ ಹೇಗೆ ನಿದರ್ಶನಕ್ಕೆ ಬಂದಿದೆ ಎಂಬುದನ್ನು ನೋಡಿ :

ವಂಗಾಂಗಾಂಧ್ರ ಕಳಿಂಗ ಕೊಂಗ ವಿಸರತ್ ಪಾದಾತ ಪಾಠೀನಮು-
ದ್ರಂಗತ್ತುಂಗ ತುರಂಗ ಭಂಗುರ ತರಂಗಾಕೀರ್ಣಂ ಉಚ್ಚೃಂಖಳೋ
ತ್ತುಂಗೋನ್ಮತ್ತ ಮತಂಗಜ ಪ್ರಕರ ಯಾದಸ್ಸಂಕುಳಂ ಕೂಡೆ ನೋ-
ಳ್ಪಂಗಮದ್ಭುತವಾಗಿ ತೋರಿ ಮಸಗಿತ್ತುರ್ವೀಶ ಸೈನ್ಯಾರ್ಣವಂ

(ಪದ್ಯ 787)

[ಇದು ಒಬ್ಬ 'ರಾಜನ ಸೇನಾ ಸಮುದ್ರ ಅದ್ಭುತವಾಗಿ ಕಾಣಿಸಿಕೊಂಡು ವಿಜೃಂಭಿಸಿತ್ತು' ಎಂಬುದರ ವರ್ಣನೆ. ಪದ್ಯ ಕಿವಿಗೆ ಬಿದ್ದ ಕೂಡಲೆ ಅದು ಅರ್ಥವಾಗದಿದ್ದರೂ ಅದ್ಭುತರಸವು ಹೇಗೆ ಬೋಧೆಯಾಗುತ್ತದೆ ಎಂಬುದನ್ನು ಗಮನಿಸಬಹುದು.]

ಹೀಗೆಯೇ, ಉಳಿದ ಎರಡು ರೀತಿಗಳ ವಿಚಾರ.

ಈ ಪ್ರಕರಣದಲ್ಲಿಯೇ ನಾಗವರ್ಮನು ರಸ ತತ್ವದ ವಿಚಾರವನ್ನು ಭರತ ಮುನಿಯನ್ನು ಅನುಸರಿಸಿ ಸಂಕ್ಷೇಪವಾಗಿ ವಿಚಾರ ಮಾಡಿದ್ದಾನೆ. ಎಂಟೇ ರಸಗಳೆಂಬುದು ಅವನ ಅಭಿಪ್ರಾಯ. ಶಾಂತ ರಸವನ್ನು ಕುರಿತ

ಪದ್ಯವನ್ನು ಈಚೆಗೆ ಯಾರಾದರೂ ಸೇರಿಸಿರಬಹುದೇ ಎಂಬ ಅನುಮಾನ ವುಂಟಾಗುತ್ತದೆ.

ಈ ಅಧಿಕರಣದ ಮೊದಲ ಪದ್ಯ ಕಾವ್ಯಾವಲೋಕನದಲ್ಲಿ ಅತ್ಯಂತ ಗಮನಾರ್ಹವಾದ ಪದ್ಯ :

ರೀತಿ ವಿನೂತನವಸ್ತು ಕೃತಿಗೊಪ್ಪುವ ಮೈ ; ರಸಭಾವ ವೃತ್ತಿ ನಿ-
ರ್ಣೀತಿಯೆ ಜೀವಂ : ಅಂತದರಿಂ ಅನ್ವಿತನಪ್ಪ ಕವೀಶ್ವರಂ ಬುಧ-
ವ್ರಾತಂ ಒರಲ್ದು ಬಿಚ್ಚಳಿಸಿ ನಚ್ಚುವಳಂಕೃತಿ ಕೂಡದಿರ್ದೊಡಂ
ರೀತಿಯೊಳೊಂದೆ ಪೇಳ್ವುದು ರಸಂಬಿಡೆ ಬಂಧುರ ಕಾವ್ಯಬಂಧಮಂ

(ಪದ್ಯ 780)

[ರೀತಿಯೇ ವಸ್ತು ಪ್ರಧಾನವಾದ (ಧಾರ್ಮಿಕಪುರಾಣ ?) ಕಾವ್ಯಕ್ಕೆ ಒಪ್ಪುವ ಶರೀರ; ರಸಭಾವ ವೃತ್ತಿ ಅದರ ಜೀವ; ಆದಕಾರಣ, ವಿದ್ವಾಂಸರು ತುಂಬ ಮೆಚ್ಚಿಕೊಂಡು ನೆಚ್ಚಿಕೊಂಡಿರುವ ಶಬ್ದಾರ್ಥಾಲಂಕಾರಗಳನ್ನು ಉಪಯೋಗಿಸಲಾಗದಿದ್ದರೂ, ರೀತಿ ಸಿದ್ಧಿಸುವಂತೆ ರಸದಿಂದ ಕೂಡಿರುವಂತೆ, ಲಕ್ಷಣವನ್ನು ಬಲ್ಲ ಕವಿ ಸುಂದರವಾದ ಕಾವ್ಯವನ್ನು ರಚಿಸಬೇಕು.]*

ಈ "ಪದ್ಯವು ಕಾವ್ಯಾವಲೋಕನದ ಉಪದೇಶಸಾರ. ರೀತಿ ಕಾವ್ಯದ ಶರೀರ, ರಸ ಅದರ ಜೀವ—ಇದೇ ಈ ಉಕ್ತಿಯ ತಿರುಳು. 'ರೀತಿ', 'ರಸ' ಎಂಬ ಮಾತುಗಳನ್ನು ವಿಶಾಲಾರ್ಥದಲ್ಲಿ ಗ್ರಹಿಸಿದರೆ ಆಧುನಿಕರು ಕೂಡ ನಾಗವರ್ಮನ ಅಭಿಪ್ರಾಯವನ್ನು ಒಪ್ಪಬಹುದು. ವಾಮನನು 'ರೀತಿ ಕಾವ್ಯದ ಆತ್ಮ' ಎಂದು ಹೇಳಿದ್ದನ್ನು ನಾಗವರ್ಮನು ಅಂಗೀಕರಿಸದೆ, ಅದು ಕಾವ್ಯದ ಶರೀರ ಎಂದು ಹೇಳಿ ಅದಕ್ಕೆ ಸಮಂಜಸವಾದ ಸ್ಥಾನವನ್ನು ಕೊಟ್ಟದ್ದು ಭಾರತೀಯ ಕಾವ್ಯಮೀಮಾಂಸೆಗೇ ಅವನ ಕಾಣಿಕೆಯೆನ್ನಬಹುದು; ಅವನಿಗಿಂತ ಹಿಂದೆ ಸಂಸ್ಕೃತದಲ್ಲಿ ಕೂಡ ಯಾರೂ ಹೀಗೆ ಹೇಳಿಲ್ಲ. ಪಂಡಿತರಿಗೆ ಅಲಂಕಾರಗಳು ಪರಮಪ್ರಿಯವೆಂದೂ ಅವುಗಳನ್ನೇ ಅವರು ಮೆಚ್ಚಿ ಕೊಂಡಾ

---

* ಪದರಚನೆಯಿಂದ ರೂಪಿತವಾಗುವ 'ಮಾರ್ಗ' ಅಥವಾ 'ರೀತಿ' ('=ಇಂದಿನ ಶೈಲಿ) ಹಳಗನ್ನಡಕ್ಕೆ ಮಾತ್ರವಲ್ಲದೆ ಹೊಸಗನ್ನಡದ 'ಸಾಹಿತ್ಯ' ಸೃಷ್ಟಿಗೂ ಅನ್ವಯಿಸುವ ಕಾವ್ಯ ತತ್ತ್ವ. ಇಂದು ಕಥೆ, ಕಾದಂಬರಿ, ಕವಿತೆ, ನಾಟಕ, ಮುಂತಾದ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಈ 'ರೀತಿ'ಯ ಪಾತ್ರ ಕುಗ್ಗುತ್ತಿರುವುದು ಸಾಹಿತ್ಯ ಶರೀರದ ಬಲವನ್ನೂ ಅದರ ಅಂಗ–ಉಪಾಂಗಗಳ ಚೆಲುವನ್ನೂ ಕುಗ್ಗಿಸುತ್ತಿದೆ ಎಂದು ತೋರುತ್ತದೆ. ವೈಜ್ಞಾನಿಕ ಅಥವಾ ವಿಚಾರ ಸಾಹಿತ್ಯಕ್ಕೆ ಈ ಮಾತು ಅನ್ವಯಿಸುವುದಿಲ್ಲ.

ಮವರೆಂದೂ ನಾಗವರ್ಮನು ಬಲ್ಲನು ; ಅವರ ಆ ಪ್ರವೃತ್ತಿಯನ್ನು ಅವನ ಇಲ್ಲಿ ಟೀಕಿಸಿಯೂ ಇದ್ದಾನೆ. ಇಂಥ ಅಲಂಕಾರಗಳಿಗೆ ಹೆಚ್ಚು ಗಮನ ಕೊಡದೆ, ರೀತಿಯ ಮೇಲೆ ಕಣ್ಣಿಟ್ಟು ರಸವುಕ್ಕುವಂತೆ ಕಾವ್ಯರಚನೆ ಮಾಡ ಬೇಕೆಂಬುದು ನಾಗವರ್ಮನ ಸದುಪದೇಶ"[15].

ಕಾವ್ಯಾವಲೋಕನದ ಐದನೆಯ ಅಧಿಕರಣ 'ಕವಿಸಮಯ'ಕ್ಕೆ ಬಹು ಮಟ್ಟಿಗೆ ಮೀಸಲಾಗಿದೆ. ಈ ಅಧ್ಯಾಯದಲ್ಲಿ, ಈ ಹಿಂದೆಯೆ ತಿಳಿಸಿದಂತೆ, ಸಂಸ್ಕೃತ ಆಲಂಕಾರಿಕ ರಾಜಶೇಖರನ ಕಾವ್ಯಮೀಮಾಂಸೆಯ ಸ್ಪಷ್ಟವಾದ ಪ್ರಭಾವವನ್ನು ಕಾಣಬಹುದು.

ಕವಿಸಮಯ ಎಂದರೇನು ? ನಾಗವರ್ಮ ಹೀಗೆ ವಿವರಿಸಿದ್ದಾನೆ :

ಅವುದು ಅಶೇಷ ಲೋಕ ವಿಷಯಸ್ಥಿತಿ ಅಲ್ದು. ಅಖಿಳ ಆಗಮಾರ್ಥಮುಂ
ಭಾವಿಪೊಡೆ ಅಲ್ತು, ಸತ್ಕವಿಪರಂಪರೆಯಿಂ ಪರಿಗೀತವಾಗಿ ನಿ-
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದು ಇಡಲ್ತೆ ಶಿಷ್ಟಸಂ-
ಭಾವಿತಮಪ್ಪ ಕಾವ್ಯ ಸಮಯಂ ಭುವನತ್ರಯವಸ್ತು ಗೋಚರಂ

(ಪದ್ಯ 844)

[ಯಾವುದು ಸಮಸ್ತಲೋಕದಲ್ಲಿಯೂ ವಾಸ್ತವವಾಗಿ ಇಲ್ಲವೋ. ಯಾವುದನ್ನು ಯಾವ ಶಾಸ್ತ್ರದಲ್ಲಿಯೂ ಹೇಳಿಲ್ಲವೋ, ಯಾವುದನ್ನು ಒಳ್ಳೆಯ ಕವಿಗಳು ಎಂದಿನಿಂದಲೂ ಕೇವಲ ರೂಢಿಯಿಂದ ಹೇಳಿಕೊಂಡು ಬಂದಿದ್ದಾರೋ, ಯಾವುದನ್ನು ಲಾಕ್ಷಣಿಕರು ಮನ್ನಿಸಿ ದ್ದಾರೆಯೋ, ಯಾವುದು ಮೂರು ಲೋಕಗಳ ವಸ್ತುಗಳಲ್ಲಿ ಕಂಡುಬಂದೀತೋ ಅದು ಕವಿಸಮಯ ಅಥವಾ ಕಾವ್ಯಸಮಯ.]

ನಾಗವರ್ಮನು ವಿವರಿಸಿರುವಂತೆ, ಕವಿಸಮಯವು ಅಸದಾಖ್ಯಾತಿ, ಸದಕೀರ್ತನ, ನಿಯಮ, ಐಕ್ಯ ಎಂದು ನಾಲ್ಕು ಬಗೆ. ಈ ಪ್ರತಿಯೊಂದು ಬಗೆಯಲ್ಲೂ ಜಾತಿ, ದ್ರವ್ಯ, ಕ್ರಿಯಾ, ಗುಣ ಎಂದು ನಾಲ್ಕು ಒಳಭೇದಗಳಿವೆ.

ಅಸದಾಖ್ಯಾತಿ ಎಂದರೆ, ಇಲ್ಲದಿರುವುದನ್ನು ಹೇಳುವುದು. ಉದಾ ಹರಣೆಗೆ, 'ಅಸದಾಖ್ಯಾತಿ' ಯಲ್ಲಿ 'ದ್ರವ್ಯ' ಎಂಬ ಭೇದ : ಕತ್ತಲೆಯ ಮೊತ್ತವನ್ನು ಹಿಡಿಯಲ್ಲಿ ಹಿಡಿಯಬಹುದು, ಸೂಜಿಯಿಂದ ಕೂಡ ಭೇದಿಸ ಲಾಗದ್ದು, ಎಂದು ವರ್ಣಿಸುವುದು ; ಬೆಳುದಿಂಗಳನ್ನು ನಾವೆಯಲ್ಲಿ ದಾಟ ಬಹುದು, ಬೊಗಸೆಯಿಂದ ಮೊಗೆಯಬಹುದು, ಎಂದು ಹೇಳುವುದು. ಸದಕೀರ್ತನ ಎಂದರೆ, ಲೋಕದಲ್ಲಿ ಜಾತಿ ದ್ರವ್ಯ ಕ್ರಿಯೆ ಗುಣಗಳ ರೂಪದಲ್ಲಿ

ಇದ್ದರೂ ಇಲ್ಲವೆಂದು ವರ್ಣಿಸುವುದು. (ಉದಾ. ವಸಂತ ಮಾಸದಲ್ಲಿ ಜಾಜಿಯು ಹೂ ಅರಳುವುದಿದ್ದರೂ ಅರಳುವುದಿಲ್ಲ, ಎಂದು ವರ್ಣಿಸುವುದು.) ಲೋಕದಲ್ಲಿ ಅನೇಕ ಕಡೆಗಳಲ್ಲಿ ಇರಬಹುದಾದರೂ ಒಂದೇ ಕಡೆ ಇರತಕ್ಕದ್ದು, ಎಂದು ಹೇಳುವುದು ನಿಯಮಾರ್ಥ. (ಉದಾ., ಮುತ್ತು ತಾಮ್ರಪರ್ಣಿ ನದಿಯಲ್ಲಿ ಮಾತ್ರ ದೊರಕುತ್ತದೆ ಎಂದು ಹೇಳುವುದು). ವಾಸ್ತವವಾಗಿ ಭಿನ್ನ ಭಿನ್ನವಾಗಿರುವ ವಸ್ತುಗಳನ್ನು ಒಂದೇ ಎಂದು ಭಾವಿಸಿ ವರ್ಣಿಸುವುದು ಐಕ್ಯ. (ಉದಾ., ಮೊಲವೂ ಜಿಂಕೆಯೂ ಬೇರೆ ಬೇರೆ ಪ್ರಾಣಿಗಳು. ಚಂದ್ರಮಂಡಲದ ಕಪ್ಪು ಗುರುತನ್ನು ಒಮ್ಮೆ ಮೊಲವೆಂದೂ, ಇನ್ನೊಮ್ಮೆ ಜಿಂಕೆಯೆಂದೂ ವರ್ಣಿಸುವುದು). ಸತ್ಕೀರ್ತಿ ಬಿಳುಪು, ಅಪಕೀರ್ತಿ ಕಪ್ಪು ; ಹಾವಿನ ಹೆಡೆಯಲ್ಲಿ ರತ್ನವಿರುತ್ತದೆ ; ಚಾತಕ ಪಕ್ಷಿ ಮಳೆಯ ನೀರನ್ನು ಕುಡಿಯುತ್ತದೆ ; ಚಕೋರ ಪಕ್ಷಿಗೆ ಬೆಳುದಿಂಗಳು ಇಷ್ಟ – ಇವು ಕೆಲವು ಕವಿಸಮಯದ ಇತರ ಉದಾಹರಣೆಗಳು. ಕವಿಸಮಯದಲ್ಲಿ ವರ್ಣಿತವಾಗುವ ವಿಷಯಗಳು ಸತ್ಯವೇ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಕವಿಸಮಯದ ಕೆಲವು ಕಲ್ಪನೆಗಳ ಹಿಂದೆ ಸತ್ಯಾಂಶವು ಬೀಜರೂಪದಲ್ಲಿ ಇರುವ ಸಂಭವವೂ ಉಂಟು. ಕವಿಸಮಯದ ವಿಷಯ ಒಂದೇ ಆದರೂ ಪ್ರತಿಭಾಶಾಲಿಗಳಾದ ಕವಿಗಳು ಅದನ್ನು ತಮ್ಮದೇ ಆದ ರೀತಿಯಲ್ಲಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ. ಒಟ್ಟಿನಮೇಲೆ, ಕಾವ್ಯ ಪ್ರೇಮಿಗಳು ಕವಿಸಮಯದ ವಿವರಗಳನ್ನು ಚೆನ್ನಾಗಿ ಅರಿತುಕೊಂಡರೆ, ಪ್ರಾಚೀನ ಕಾವ್ಯಗಳ ಚೆಲುವಿನ ಒಂದು ಮುಖವನ್ನು ಅರ್ಥಮಾಡಿಕೊಂಡು, ಆ ಚೆಲುವನ್ನು ಸವಿಯಲು ಸಹಾಯವಾಗುವುದು. ಈ ದೃಷ್ಟಿಯಿಂದ ನೋಡಿದಾಗ, ನಾಗವರ್ಮನು ಕನ್ನಡದಲ್ಲಿ ಅಲಂಕಾರ ಶಾಸ್ತ್ರವನ್ನು ಒಂದು ಮಜಲು ಮುಂದಕ್ಕೆ ಒಯ್ದನು ಎಂದು ಧಾರಾಳವಾಗಿ ಹೇಳಬಹುದು.

ನಾಗವರ್ಮನು ಕವಿಸಮಯ ಪ್ರಕರಣದಲ್ಲಿಯೇ ಬಗೆಬಗೆಯ ಕಾವ್ಯಗಳ ಸ್ವರೂಪಗಳನ್ನೂ ವಿವರಿಸಿದ್ದಾನೆ. ದಂಡಿಯನ್ನು ಅನುಸರಿಸಿ, ಕಾವ್ಯವನ್ನು ಗದ್ಯ, ಪದ್ಯ, ಮಿಶ್ರ ಎಂದು ಮೂರಾಗಿ ವಿಂಗಡಿಸಿದ್ದಾನೆ. ಕಥೆ, ಆಖ್ಯಾಯಿಕೆಗಳು ಗದ್ಯವಲ್ಲಿರುತ್ತವೆ. ಪದ್ಯದಿಂದ ಆದದ್ದು 'ಸರ್ಗಬಂಧ' (ಎಂದರೆ ಸರ್ಗಗಳನ್ನು ಅಥವಾ ಅಧ್ಯಾಯಗಳನ್ನು ಉಳ್ಳದ್ದು) ಕಾವ್ಯ. ಗದ್ಯಪದ್ಯ ಮಿಶ್ರವಾದ ಪ್ರಬಂಧವನ್ನು ಶ್ರೀವಿಜಯ ಗದ್ಯಕಥೆ ಎಂದು ಕರೆದರೆ, ಇವನು ಮೊತ್ತಮೊದಲಿಗೆ ಚಂಪೂ ಎಂಬ ಹೆಸರಿನಿಂದ ಕರೆದಿದ್ದಾನೆ. ತನ್ನ ಮಟ್ಟಿಗೆ

ತಾನು ಪೂರ್ಣವಾದ ಬಿಡಿ ಪದ್ಯವನ್ನು ಸಂಸ್ಕೃತದಲ್ಲಿ ಮುಕ್ತಕ ಎನ್ನುತ್ತಾರೆ. ನಾಗವರ್ಮನು ಇದನ್ನು ಕನ್ನಡದಲ್ಲಿ ಇಡುಕುಂಗಬ್ಬ ಎಂದು ಹೆಸರಿಸಿರುವುದು ಒಂದು ವಿಶೇಷ. ಇಂಥ ಹಲವು ಮುಕ್ತಕಗಳು ಒಂದೇ 'ಕ್ರಿಯೆ' ಯನ್ನು ಒಳಗೊಂಡಿದ್ದರೆ ಅದಕ್ಕೆ ಕುಳಕವೆಂದೂ, ಅನೇಕ ವಿಷಯಗಳನ್ನು ಒಳಕೊಂಡ ಬಿಡಿ ಪದ್ಯಗಳ ಸಂಕಲನಕ್ಕೆ ಕೋಶವೆಂದೂ (anthology ಆ್ಯಂಥಾಲಜಿ) ಹೆಸರು.

ಕನ್ನಡಕ್ಕೆ ವಿಶಿಷ್ಟವಾದ ಕೆಲವು ಕಾವ್ಯ ಜಾತಿಗಳನ್ನೂ ನಾಗವರ್ಮನು ವಿವರಿಸಿದ್ದಾನೆ: ಒಂದು ಕಂದಪದ್ಯ, ಮತ್ತೊಂದು ಪ್ರಸಿದ್ಧವಾದ ವೃತ್ತ ಇದ್ದರೆ ಪದ; 12 'ಪದ'ಗಳು ಕೂಡಿ ಒಂದು ಮೆಲ್ವಾಡು; 15 ಅಥವಾ 25 'ಪದ'ಗಳು ಒಟ್ಟುಗೂಡಿ ಕಾವ್ಯದಲ್ಲಿ ಅಳವಟ್ಟಿದ್ದರೆ, ಅದು ಪಾಡು; ಈ ಪಾಡುಗಳಿಂದ ಆದದ್ದು ಪಾಡುಗಬ್ಬ. ಇದರಿಂದ ಮೆಲ್ವಾಡದ, ರೂಢಿಯಲ್ಲಿರುವ ಬೆದಂಡೆಗಬ್ಬವೂ ಆಗುತ್ತದೆ. ಹಲವು ತೆರೆದ ಪದ್ಯಗಳು, ಪದ್ಧತಿಕೆಗಳು (ಎಂದರೆ, ರಗಳೆಗಳು), ಸಮಸ್ತ ವರ್ಣನೆಗಳು ಇವುಗಳಿಂದ ಕೂಡಿದ್ದು ಬಾಜನೆಗಬ್ಬ. [ಈ ಬಾಜನೆಗಬ್ಬವೇ ಶ್ರೀವಿಜಯ ಕವಿರಾಜಮಾರ್ಗದಲ್ಲಿ ಹೇಳುವ ಚತ್ತಾಣ ಇದ್ದರೂ ಇರಬಹುದು. ಬಾಜನೆಗಬ್ಬ ಎಂದರೆ ವಾದ್ಯ ಸಮೇತಹಾಡುವ ಕಾವ್ಯವೆಂದೂ, ವಾಜಿಸ (=ಬಾಜನೆ) ಮಾಡುವ 'ಓದುಗಬ್ಬ' ಎಂದೂ ಬೇರೆ ಬೇರೆ ಅಭಿಪ್ರಾಯಗಳಿವೆ.]

ಈ ಕಾವ್ಯಪ್ರಕಾರಗಳನ್ನು ವಿವರಿಸಿದಾದ ಮೇಲೆ, ಮಹಾಕಾವ್ಯದಲ್ಲಿ ಬರುವ (ಹದಿನೆಂಟು) ವರ್ಣನೆಗಳ ವಿಷಯವನ್ನು ಹೇಳಿ, ಸಾಮಾನ್ಯವಾಗಿ ದೃಶ್ಯಕಾವ್ಯಗಳ ಸಂದರ್ಭದಲ್ಲಿ ಹೇಳುವ ಐದು 'ಸಂಧಿ' ಗಳನ್ನೂ, ಐದು 'ಸಂಧ್ಯಂಗ' ಗಳನ್ನೂ ಹೆಸರಿಸಿ, ನಾಗವರ್ಮನು ಕಾವ್ಯಾವಲೋಕನವನ್ನು ಮುಗಿಸಿದ್ದಾನೆ.

ಉದಾಯಾದಿತ್ಯಾಲಂಕಾರ

ಇದು ಒಂದು ಚಿಕ್ಕ ಅಲಂಕಾರ ಗ್ರಂಥ. ಇದರಲ್ಲಿ ಕೇವಲ 72 ಪದ್ಯಗಳು ಮಾತ್ರ ಇವೆ. ಕಂದ ಪದ್ಯಗಳೇ ಹೆಚ್ಚು; ಕೆಲವು ವೃತ್ತಗಳೂ ಉಂಟು. ಕವಿರಾಜಮಾರ್ಗ ಮತ್ತು ಕಾವ್ಯಾವಲೋಕನಗಳಲ್ಲಿ ಕಂಡುಬರುವ ವಿಷಯದ ಹರಹು,ಉದಾಹರಣೆಗಳ ಸೊಬಗು ಮತ್ತು ಹೆಚ್ಚಳ, ಸ್ವತಂತ್ರವಾದ

ವಿಚಾರವೃಷ್ಟಿ—ಈ ಗುಣಗಳು ಯಾವುವೂ ಕಂಡುಬರುವುದಿಲ್ಲ. "ಕಿರಿದರಿಂ ತಿಳಿಸಿದಪೆಂ ಶ್ರೀಭರಿತ ಬಾಲಕರ್ ಕವಿತಾಭಣಿತೆಯೊಳ್ ಅಮರ್ದು ನಿಮಿರ್ದು ನೆರೆ ಮೆರೆವಿನೆಗಂ" ["ಕಾವ್ಯ ವಿಚಾರದಲ್ಲಿ ಬಾಲಕರಾಗಿರುವವರು ಕಾವ್ಯ ಹೇಳುವ ಕಲೆಯಲ್ಲಿ ನಿಪುಣರಾಗಿ ಮೆರೆಯುವಂತೆ (ಅಲಂಕಾರ ಶಾಸ್ತ್ರವನ್ನು) ತಿಳಿಸುತ್ತೇನೆ"] ಎಂದು ಕವಿ ತನ್ನ ಕೃತಿ ರಚನೆಯ ಉದ್ದೇಶವನ್ನು ಮೊದಲೇ ತಿಳಿಸಿದ್ದಾನೆ. ಅವನ ಉದ್ದೇಶ ಚೆನ್ನಾಗಿ ಕೈಗೂಡಿದೆ. ಅಲಂಕಾರಗಳನ್ನೂ ಇತರ ವಿಚಾರಗಳನ್ನೂ ತಿಳಿಸುವ ಪದ್ಯಗಳು ತಿಳಿಯಾದ ಭಾಷೆಯಲ್ಲಿಯೇ ಇವೆ. ಆದ್ದರಿಂದ, ಇದನ್ನು ಅಲಂಕಾರಶಾಸ್ತ್ರದ ಪ್ರಥಮ ಪಾಠ ಪುಸ್ತಕ ಎಂದು ಎಣಿಸಬಹುದು ; ಹಾಗೆ ಉಪಯೋಗ ಮಾಡಿಕೊಳ್ಳಬಹುದು.

ಗ್ರಂಥದಲ್ಲಿನ ಈ ಪದ್ಯ ಗ್ರಂಥಕರ್ತನ ಬಗೆಗೆ ಕೆಲವು ಸಂಗತಿಗಳನ್ನು ತಿಳಿಸುತ್ತದೆ:

> ಎಸೆವ ಈ ಕಾವ್ಯಶರೀರಮಂ ಪೊಸಯಿಸಿರ್ದ ಅಷ್ಟಾದಶಾಂಗಂಗಳಂ,
> ರಸರೀತಿ ಕ್ರಮದಿಂದಂ ಒಂದಿದ ದಶಪ್ರಾಣಂಗಳ ಒಂದಂದಮಂ,
> ವಸುಧಾನಾಥನ ಸೋಮನಾಥನ ಸುತಂ ಚೋಳೋದಯಾದಿತ್ಯಂ ಇಂ-
> ತುಸಿರ್ದಂ; ಪೇಳ್ದಪಂ ಇನ್ ಅಲಂಕೃತಿಗಳಂ ಸಾಹಿತ್ಯರತ್ನಾಕರಂ.

(ಪದ್ಯ 24)

ಈ ಪದ್ಯದ ಆಧಾರದಮೇಲೆ, "ಈತನು ಆವನೋ ಒಬ್ಬ ಸೋಮನಾಥನೆಂಬ ಚೋಳರಾಜನ ಮಗನೆಂದು ತಿಳಿಯುತ್ತದೆ ... ಈತನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದಂತೆ ತೋರುತ್ತದೆ. ತನ್ನ ಹೆಸರನ್ನು ಉದಯ, ಉದೆಗ, ಎಂದೂ ಹೇಳಿಕೊಂಡಿದ್ದಾನೆ. ಈತನಿಗೆ ಕವಿರತ್ನಶೇಖರ, ಸಾಹಿತ್ಯ ವಿದ್ಯಾಧರ, ರಾಜಸುಕವಿರತ್ನಾಭರಣ, ಕವಿರಾಜಶೇಖರ, ಸಾಹಿತ್ಯ ರತ್ನಾಕರ ಎಂಬ ಬಿರುದುಗಳು ಇದ್ದಂತೆ ತಿಳಿಯುತ್ತದೆ. ಒದವಿದ ಮುಂಜನ ಭೋಜನ ವಿದಿತ ಶ್ರೀಹರ್ಷನ ಉದಯ ಮತ್ಕೃತಿಯೊಳ್, ಎಂಬ ಪದ್ಯದಲ್ಲಿ ಭೋಜನ ಹೆಸರನ್ನು ಹೇಳುತ್ತಾನೆ. ಭೋಜನು 997 ರಿಂದ 1053 ರ ವರೆಗೆ ಆಳಿದುದಾಗಿ ತಿಳಿವುದರಿಂದ ಕವಿ ಆ ಕಾಲಕ್ಕೆ ಈಚೆಯವನಾಗಿರಬೇಕು. ಅಲ್ಲದೆ, ಮಲ್ಲಿಕಾರ್ಜುನನು (ಸು. 1245) 'ಸೂಕ್ತಿಸುಧಾರ್ಣವ'ದಲ್ಲಿ ಮಹಾಕಾವ್ಯದ ಹದಿನೆಂಟಂಗವನ್ನು ಹೇಳುವ:

ಉದಧಿ, ಪುರಾಧಿಪ, ಸುತ, ಮಂ-
ತ್ರ, ದೂತ, ಗಮನ, ಆಜಿ, ವಿರಹ, ಪರಿಣಯ ಸುರತ ಋ-
ತು, ದಿನೇಶ, ಚಂದ್ರ, ಮಧು, ಕುಭೃ-
ತ್, ಉದಕ, ವನಸ್ಪತಿಯೆ - ಕೃತಿಗೆ ಪದಿನೆಂಟಂಗಂ-

[ಉಧದಿ = ಸಮುದ್ರ: ಪುರಾಧಿಪ = ರಾಜ; ಸುತ = (ರಾಜ) ಕುಮಾರ; ಮಂತ್ರ = ಮಂತ್ರಾಲೋಚನೆ; ದೂತ = ಪರಿಕಾರ; ಗಮನ = ಪ್ರಯಾಣ; ಆಜಿ = ಯುದ್ಧ; ವಿರಹ = ನಾಯಕ ನಾಯಿಕೆಯರ ಅಗಲಿಕೆ (ವಿಪ್ರಲಂಭ ಶೃಂಗಾರ); ಪರಿಣಯ = ವಿವಾಹ; ಸುರತ = (ನಾಯಕ ನಾಯಿಕೆಯರ) ದಾಪಂತ್ಯ ಸುಖ (ಸಂಭೋಗ ಶೃಂಗಾರ); ಋತು = ಆರು ಋತುಗಳು; ದಿನೇಶ = ಸೂರ್ಯ (ಎಂದರೆ, ಸೂರ್ಯೋದಯ ಸೂರ್ಯಾಸ್ತಗಳು); ಚಂದ್ರ (ಚಂದ್ರೋದಯ, ಬೆಳುದಿಂಗಳು); ಮಧು = ಮಧುಪಾನ; ಕುಭೃತ್ = ಪರ್ವತ; ಉದಕ = ನೀರು (ಎಂದರೆ, ನೀರಾಟ, ಜಲಕ್ರೀಡೆ); ವನಸ್ಪತಿ = ಉದ್ಯಾನ, ವನ (ಕಾಡು).]

—ಎಂಬೀಪದ್ಯವನ್ನು ಈ ಕವಿಯು ಗ್ರಂಥದಿಂದ ಉದ್ಧರಿಸಿ ಬರೆದಿರುವುದರಿಂದ ಈತನು 1245 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ. ಕರ್ನಾಟಕ ದೇಶದಲ್ಲಿ ಚೋಳರ ಪ್ರಾಬಲ್ಯವು 12 ನೆಯ ಶತಮಾನಕ್ಕೆ ಹಿಂದೆಯೇ ಕ್ಷೀಣದೆಶೆಗೆ ಬಂದಂತೆ ಶಾಸನಗಳಿಂದ ತಿಳಿವುದರಿಂದ ಈತನು ಸ್ವತಂತ್ರ ರಾಜನಾಗಿದ್ದಿರಲಾರನು. ಆವ ದೊರೆಯಲ್ಲಿಯೋ ಸಾಮಂತ ರಾಜನಾಗಿದ್ದಿರ ಬೇಕು. ಇವನು ಸುಮಾರು 1150 ರಲ್ಲಿ ಇದ್ದಿರಬಹುದೆಂದು ಊಹಿಸು ತ್ತೇವೆ"[16] ಎಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.

ಆದರೆ, "ನಿನ್ನ ಉದಯದಿಂದಂ, ಉದಯ ಧರಿ ಶ್ರೀಕಾಂತ, ದಿನಕಾಂತ ಕುಲ, ಕೇಳ್, ಈ ಲೋಕಮೆ ಕೃತಾರ್ಥಂ," "ಕಾವ್ಯಕನ್ಯೆಗೆ ನಿನ್ನಂಪ್ರಿಯನಂ ಪಡೆದೆಂ," ಎಂಬಂತಹ ಕೆಲವು ಮಾತುಗಳು ಬೇರೊಬ್ಬ ವ್ಯಕ್ತಿ (ಕವಿ) ಉದಯಾದಿತ್ಯರಾಜನನ್ನು ಕುರಿತು ಹೇಳಿದಂತೆ ಇವೆ. ಆದ್ದರಿಂದ, ಉದಯಾ ದಿತ್ಯನ ಹೆಸರಿನಲ್ಲಿ ಅವನ ಆಸ್ಥಾನದ ಕವಿಯೊಬ್ಬನು ಈ ಅಲಂಕಾರ ಗ್ರಂಥವನ್ನು ಬರೆದಿರಬಹುದೆಂದು ಊಹಿಸಲು ಅವಕಾಶವಿದೆ.

---

* ದಂಡಿಯನ್ನು ಅನುಸರಿಸಿ ಹೇಳಿರುವ ಈ ಪದ್ಯದಲ್ಲಿ 17 ಅಂಗಗಳನ್ನು ಮಾತ್ರ ಹೇಳಿದೆ ; ಅವನು ಹೇಳಿರುವ 'ನಾಯಕಾಭ್ಯುದಯ' ಇದರಲ್ಲಿ ಬಿಟ್ಟುಹೋಗಿದೆ. ಕವಿರಾಜ-ಮಾರ್ಗದಲ್ಲಿಯೂ ಹೀಗೆಯೇ ಆಗಿದೆ. ನಾಗವರ್ಮನು ನಗರ, ಅರ್ಣವ (ಸಮುದ್ರ), ಸರಿತ್ (ನದಿ), ಅಟವೀ (ಕಾಡು), ನಗ (ಪರ್ವತ), ಚಂದ್ರೋದಯ, ಸೂರ್ಯೋದಯ, ಋತು, ಸಲಿಲ(ಜಲ)ಕ್ರೀಡೆ,-ಇಷ್ಟನ್ನು ಹೇಳಿ, ಇವೇ ಮುಂತಾಗಿ 'ವರ್ಣಕ' (ವರ್ಣನೆ) ಗಳನ್ನು ಅದರಲ್ಲಿ ವರ್ಣಿಸಬೇಕು ಎಂದು ಹೇಳಿದ್ದಾನೆ.

ಕರ್ನಾಟಕದ ಹಾಗೂ ದಕ್ಷಿಣದೇಶದ ಚರಿತ್ರೆಯಲ್ಲಿ ಅನೇಕ ಉದಯಾದಿತ್ಯರುಗಳು ಆಗಿಹೋಗಿದ್ದಾರೆ. ಆದರೆ 'ಚೋಳೋದಯಾದಿತ್ಯ' ಎಂಬ ಹೆಸರಿನ ದೊರೆ ಯಾರೂ ಇಲ್ಲ. ಚೋಳರು ಕರ್ನಾಟಕದ ಹಾಗೂ ಆಂಧ್ರದ ಕೆಲವು ಭಾಗಗಳನ್ನು 12 ನೆಯ ಶತಮಾನದವರೆಗೂ ತಮ್ಮ ಅಧೀನದಲ್ಲಿ ಇಟ್ಟುಕೊಂಡಿದ್ದರು. ಕೆಲವು ತೆಲುಗು ಸಾಮಂತ ದೊರೆಗಳು ಚೋಳರೊಡನೆ ವಿವಾಹ ಸಂಬಂಧ ಬೆಳಸಿ, ತಮ್ಮ ಹೆಸರಿನ ಹಿಂದೆ 'ಚೋಡ(ಳ)' ಎಂಬ ಉಪನಾಮವನ್ನೂ ಸೇರಿಸಿಕೊಳ್ಳುತ್ತಿದ್ದರು. ತೆಲುಗು ಸೀಮೆಯ ಒಂದು ಶಾಸನದಲ್ಲಿ ಒಬ್ಬ ಚೋಡೋ(ಳೋ)ದಯನ ಹೆಸರು ಕಂಡು ಬರುತ್ತದೆ. ಈತನ ಕಾಲ ಸು. 1100-1160. ಇವನೇ ಈ ಅಲಂಕಾರ ಗ್ರಂಥದಲ್ಲಿ ಹೇಳಿರುವ ಚೋಳೋದಯಾದಿತ್ಯ ಎಂದು ಸದ್ಯದವುಟ್ಟಿಗೆ ಇಟ್ಟುಕೊಳ್ಳಬಹುದು. ಹೇಗೂ, ಈ ಗ್ರಂಥದ ಕಾಲವನ್ನು 1150 ಎಂದು ಕವಿಚರಿತೆಕಾರರು ಊಹಿಸಿರುವುದು ಸರಿಯಾಗಿದೆ ಎನ್ನಬಹುದು.

ಅಲಂಕಾರ ಮತ್ತು ಗುಣಗಳ ನಿರೂಪಣೆಯಲ್ಲಿ ಈ ಗ್ರಂಥದ ಕವಿ ಬಹುಮಟ್ಟಿಗೆ ದಂಡಿಯನ್ನೆ ಅನುಸರಿಸಿದ್ದಾನೆ. ಕವಿರಾಜಮಾರ್ಗ ಮತ್ತು ಕಾವ್ಯಾವಲೋಕನಗಳ ಸಮೀಕ್ಷೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರುವುದರಿಂದ, ಆ ಬಗೆಗೆ ಹೆಚ್ಚಿನ ವಿವರಣೆ ಇಲ್ಲಿ ಅನಗತ್ಯ. 'ರೀತಿ'ಗಳ ವಿಷಯದಲ್ಲಿ ಇವನು ರುದ್ರಟನ ಮತವನ್ನು ಅನುಸರಿಸಿ, ಯಾವ ಯಾವ ರೀತಿಗಳಲ್ಲಿ ಯಾವಯಾವ ರಸಗಳು ಪ್ರಕಟವಾಗುವುವು ಎಂದು ಹೇಳಿದ್ದಾನೆ; ವಾಮನ ಮತ್ತು ನಾಗವರ್ಮರಂತೆ ವೈದರ್ಭೀ, ಗೌಡೀಯ, ಪಾಂಚಾಲೀ ಎಂದು ಮೂರು ರೀತಿಗಳನ್ನು ಒಪ್ಪಿದ್ದಾನೆ. ಉದಯಾದಿತ್ಯಾಲಂಕಾರದ ಕವಿಯೂ ಚಂಪೂ, ಚತ್ತಾಣ ಮತ್ತು ಬೆದಂಡೆ ಎಂಬ ಕಾವ್ಯ ಪ್ರಕಾರಗಳನ್ನು ಹೆಸರಿಸಿದ್ದಾನೆ; ಹೆಚ್ಚಿನ ವಿವರಣೆಯನ್ನು ಕೊಟ್ಟಿಲ್ಲ; ಅವನ ಅಭಿಪ್ರಾಯದಂತೆ ಚಂಪೂಕೃತಿ ಎಂದರೆ ವಚನಕಾವ್ಯ; ಎಂದರೆ, ಬಹುಶಃ, 'ಓದುಗಬ್ಬ'. ಚತ್ತಾಣ ಬೆದಂಡೆಗಳನ್ನು 'ಸರ್ಗಬಂಧಕೃತಿ' ಎಂದು ಹೇಳಿರುವುದರಿಂದ, ಇವು ಪದ್ಯಕಾವ್ಯಗಳು. ಉದಯಾದಿತ್ಯಾಲಂಕಾರದ ಕಾಲದವೇಳೆಗೆ ಕನ್ನಡದಲ್ಲಿ ಚಂಪೂ ಕಾವ್ಯಜಾತಿ ಪ್ರಸಿದ್ಧವಾಗಿ ನೆಲಸಿಬಿಟ್ಟಿತ್ತು.

'ಉದಯಾದಿತ್ಯಾಲಂಕಾರ'ದಲ್ಲಿ ಸಾಧಾರಣವಾಗಿ ಒಂದೇ ಪದ್ಯದಲ್ಲಿ ಲಕ್ಷಣವನ್ನೂ ಉದಾಹರಣೆಯನ್ನೂ ಹೇಳಿರುವುದರಿಂದಲೂ, ಪದ್ಯರಚನೆ

ಬಿಗಿಯಾಗಿ ಸೂತ್ರಪ್ರಾಯವಾಗಿದ್ದು ಹೆಚ್ಚು ಕಷ್ಟಕರವಾಗಿಲ್ಲದಿರುವುದರಿಂದಲೂ ನೆನಪಿಟ್ಟುಕೊಳ್ಳಲು ಲಕ್ಷಣ ಪದ್ಯಗಳು ಸುಲಭವಾಗಿವೆ.

'ಅರ್ಥಾಂತರನ್ಯಾಸ' ಎಂಬ ಅಲಂಕಾರದ ಈ ಪದ್ಯವನ್ನು ನೋಡಿ:

ಪುರುಳ್ ಒಂದಂ ಆಡಿ ನೆರಪುವ
ಪುರುಳಂ ಬೇರೊಂದಂ ಒಪ್ಪಲ್ ಆಡುವುದು ಅರ್ಥಾಂ-
ತರವಿನ್ಯಾಸಂ–ನಿಜಧನಂ
ಎರೆವರ್ಗೆ ಎಸೆ, ತಮಗೆ ಪಡೆವರೇ ಸತ್ಪುರುಷರ್.

[ಒಂದು ಅರ್ಥವನ್ನು ಕೊಡುವ ವಾಕ್ಯವನ್ನು ಹೇಳಿ, ಅದನ್ನು ಸಮರ್ಥಿಸುವ ಅರ್ಥವುಳ್ಳ ಇನ್ನೊಂದನ್ನು ಹೇಳುವುದು, ಅರ್ಥಾಂತರನ್ಯಾಸ. 'ತನ್ನ ಐಶ್ವರ್ಯ ಬೇಡಿದವರಿಗೆ (ವಿನಾಸಲಾಗಿದೆ)'ಎಂದಮೇಲೆ,'ಸತ್ಪುರುಷರು ತಮಗಾಗಿ ಧನವನ್ನು ಹೊಂದಿರುತ್ತಾರೆಯೇ?' (ಎಂದಿಗೂ ಇಲ್ಲ, ದಾನಮಾಡುವುದೇ ಸತ್ಪುರುಷರ ಸ್ವಭಾವ ಎಂದು ಭಾವ).]

ಕೂಡಿದ ಮಟ್ಟಿಗೂ ಅರ್ಥವಾಗುವಂತೆ ಅಡಕವಾಗಿ ಹೇಳುವುದೇ ಈ ಗ್ರಂಥದ ವಿಶೇಷ ಗುಣ.

ಈ ಗ್ರಂಥದಲ್ಲಿಯೂ ಚಂಪೂಕೃತಿ, ಚತ್ತಾಣ, ವೈದಂಡಿಕ ಎಂಬ ಕಾವ್ಯಜಾತಿಗಳ ಹೆಸರುಗಳನ್ನು ಹೇಳಿ, ಚಂಪೂಕಾವ್ಯವನ್ನು ವಚನಕಾವ್ಯ ಎಂದು ವಿಶೇಷಿಸಿ ಹೇಳಿದೆ. ಗದ್ಯಪದ್ಯ ಮಿಶ್ರವಾದ ಚಂಪೂಕಾವ್ಯವನ್ನು ವಸ್ತುಕ ಅಥವಾ ಓದುಗಬ್ಬ ಎಂದೂ, ವಿಶೇಷವಾಗಿ ಷಟ್ಪದಿ ಸಾಂಗತ್ಯ ತ್ರಿಪದಿ ಛಂದಸ್ಸುಗಳಲ್ಲಿ ರಚಿತವಾದ ಪದ್ಯಕಾವ್ಯಗಳನ್ನು ವರ್ಣಕ ಅಥವಾ ಹಾಡುಗಬ್ಬ ಎಂದು ಗುರುತಿಸುವುದು ಕಾಲಕ್ರಮದಲ್ಲಿ ರೂಢಿಗೆ ಬಂದಿತು. ಉದಯಾದಿತ್ಯಾಲಂಕಾರದಲ್ಲಿ 'ವಚನಕಾವ್ಯ' ಎನ್ನುವ ಮಾತನ್ನು 'ಓದುಗಬ್ಬ' ಎಂಬ ಅರ್ಥದಲ್ಲಿ ಬಳಸಿರುವಂತೆ ಕಾಣುತ್ತದೆ.

ಉದಯಾದಿತ್ಯಾಲಂಕಾರದಲ್ಲಿ ಕವಿ ಸ್ವಂತವಾಗಿ ಹೇಳಿರುವ ವಿಚಾರಗಳು ಏನೂ ಇಲ್ಲವೆಂದರೂ ಸಲ್ಲುತ್ತದೆ; ಆದರೆ, ಕಾವ್ಯಾದರ್ಶದಲ್ಲಿ ಹೇಳಿರುವ 35 ಅಲಂಕಾರಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬೇಕೆಂದು ಬಯಸುವವರಿಗೆ, ಗ್ರಂಥಕರ್ತನೇ ಹೇಳಿರುವ ಹಾಗೆ, ಇವೊತ್ತಿಗೂ (ಇಲ್ಲಿನ 35) 'ಅಲಂಕಾರಗಳ ಪ್ರಥಮ ಪಾಠ ಪುಸ್ತಕ'ವಾಗಿ ಪ್ರಯೋಜನಕ್ಕೆ ಬರುವಂತಿದೆ.

ಮಾಧವಾಲಂಕಾರ

ಕವಿರಾಜಮಾರ್ಗ, ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ–ಈ ಗ್ರಂಥಗಳಲ್ಲಿ ಕಾವ್ಯದೋಷ, ಗುಣ, ಮಾರ್ಗ (ಅಥವಾ ರೀತಿ), ಕೆಲವು ಕಾವ್ಯ ಜಾತಿಗಳು, ಮುಂತಾದ ಕಾವ್ಯಶಾಸ್ತ್ರ ವಿಚಾರಗಳನ್ನು ಕುರಿತು ತಿಳಿಯ ಹೇಳಿದ್ದರೂ, ಶಬ್ದಾಲಂಕಾರ ಅರ್ಥಾಲಂಕಾರಗಳ ನಿರೂಪಣೆಯೇ ಆ ಗ್ರಂಥ ಗಳಲ್ಲಿ ಮುಖ್ಯವಾಗಿದೆ ಎನ್ನಬಹುದು. ಆದ್ದರಿಂದ, ವಿಶೇಷವಾಗಿ ಅಲಂಕಾರಗಳ ವಿವರಣೆಗೇ ಮೀಸಲಾದ ಗ್ರಂಥಗಳ ವಿಚಾರವಾಗಿ ಸಂಕ್ಷೇಪವಾಗಿ ಪರಿಶೀಲನೆ ಮಾಡಿ, ಅನಂತರ ರಸ ಮತ್ತು ಧ್ವನಿ ತತ್ತ್ವಗಳನ್ನು ವಿವರಿಸುವ ಗ್ರಂಥಗಳ ಸಮೀಕ್ಷೆ ಮಾಡುವುದು ಉಚಿತವಾಗಿ ಕಾಣುತ್ತದೆ.

ಉದಯಾದಿತ್ಯಾಲಂಕಾರವಾದ ಮೇಲೆ ಕಾಲಕ್ರಮದಲ್ಲಿ ಅಲಂಕಾರ ವಿಷಯಕವಾಗಿ ಮೊದಲು ನಮ್ಮ ಕಣ್ಣಿಗೆ ಬೀಳುವ ಗ್ರಂಥ,'ಮಾಧವಾಲಂಕಾರ'. ಇದು ದಂಡಿಯ ಕಾವ್ಯಾದರ್ಶದ ಭಾಷಾಂತರ; ಇದರಲ್ಲಿ ಮೂರು ಪರಿಚ್ಛೇದ ಗಳಿವೆ. ಪ್ರತಿ ಪರಿಚ್ಛೇದದ ಕಡೆಯ ಗದ್ಯ ಭಾಗದಲ್ಲಿ, 'ಶ್ರೀ ಯದುಗಿರಿ ಸದನ ನಾರಾಯಣ ಚರಣ ಕಮಲ ಭ್ರಮರಾಯಮಾಣ ಸುಕವಿ ಮಾಧವ ಪ್ರಣೀತಾ-ಲಂಕಾರ' ಎಂದಿರುವುದರಿಂದ ಈ ಮಾಧವನು ಮೇಲುಕೋಟೆಯ ಚೆಲುವ ನಾರಾಯಣನ ಭಕ್ತನೆಂದು ಊಹಿಸಬಹುದು; ಅಲ್ಲಿನ ನಿವಾಸಿಯಾಗಿದ್ದರೂ ಇರಬಹುದು. ಗ್ರಂಥದ ಮೊದಲಿನಲ್ಲಿ ಈಶ್ವರ, ಗಣೇಶ, ಸರಸ್ವತಿ ಇವರು ಗಳನ್ನು ಸ್ತುತಿಸಿರುವುದರಿಂದ ಇವನು ಸ್ಮಾರ್ತಬ್ರಾಹ್ಮಣನೆಂದೂ ಊಹಿಸ ಬಹುದು. ದಂಡಿಯ ಅಲಂಕಾರ ಗ್ರಂಥವನ್ನು ತನ್ನ ಕಾಂತೆಗೆ ಕನ್ನಡದಲ್ಲಿ ವಿವರಿಸಿದಂತೆ ಅವನು ಒಂದು ಪದ್ಯದಲ್ಲಿ ಹೇಳಿಕೊಂಡಿದ್ದಾನೆ (ಪ. 15). 'ಕವಿಕುಲ ತಿಲಕ', 'ಶಾರದಾ ಕರ್ಣಪೂರ' ಎಂದು ತನ್ನ ಬಿರುದುಗಳನ್ನು ತಿಳಿಸಿ ದ್ದಾನೆ. 'ಕುಂತಳ ದೇಶದ ಹರಗಟನಾಡ ಹಿರಿಯೂರ ಪ್ರಭು'ಗಳ ವಂಶಕ್ಕೆ ಸೇರಿದ ಇವನೂ ಆ ಊರಿನ 'ಪ್ರಭು' ಎಂದು ತಿಳಿದುಬರುತ್ತದೆ. 'ಪ್ರಭು' ಎಂದರೆ ಗ್ರಾಮದ ಮುಖಂಡ ಅಥವಾ ಹೆಗ್ಗಡೆ ಇರಬಹುದು. 'ರಿಪುಸೈನ್ಯ ಶೈಲಸುರಪ' (ಶತ್ರುಸೈನ್ಯವೆಂಬ ಪರ್ವತಕ್ಕೆ ಇಂದ್ರ) ಎಂಬ ಒಂದು ವಿಶೇಷಣ ದಿಂದ, ಇವನು ಯುದ್ಧಮಾಡಿದ ವೀರನೆಂದೂ ಗೊತ್ತಾಗುತ್ತದೆ. ಇವನ ಕಾಲವನ್ನು 1500 ಎಂದು ಕವಿಚರಿತೆಕಾರರು ಊಹಿಸಿದ್ದಾರೆ.

ಮಾಧವನು ದಂಡಿಯ ಕಾವ್ಯಾದರ್ಶದ ಶ್ಲೋಕಗಳನ್ನು ಬಹುಮಟ್ಟಿಗೆ ಅವು ಹೇಗಿವೆಯೋ ಹಾಗೆ ಪ್ರೌಢವಾದ ಭಾಷೆಯಲ್ಲಿ ಭಾಷಾಂತರಮಾಡಿದ್ದಾನೆ. ಉದಾಹರಣೆಗೆ, 'ಕಾವ್ಯಶೋಭಕಾರನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೇ' (ಕಾವ್ಯಾದರ್ಶ : 2–1) ('ಕಾವ್ಯಕ್ಕೆ ಶೋಭೆಯನ್ನುಂಟುಮಾಡುವ ಧರ್ಮಗಳನ್ನು ಅಲಂಕಾರಗಳು ಎಂದು ಹೇಳುವರು') ಎಂಬ ದಂಡಿಯ ವಾಕ್ಯವನ್ನು ಮಾಧವನು ಒಂದು ಕಂದ ಪದ್ಯದಲ್ಲಿ ಹೀಗೆ ಭಾಷಾಂತರ ಮಾಡಿದ್ದಾನೆ :

ನಿರುಪಮ ಕಾವ್ಯಶರೀರ-
ಕ್ಕುರುತರ ಶೋಭಾಕರಂಗಳೆನಿಸುವ ಧರ್ಮೋ-
ತ್ಕರಮೆಲ್ಲವಳಂಕೃತಿ ಪರಿ-
ಕರಮೆನಿಸುಗೆ ಸಕಳ ವಿಬುಧಜನಮತದಿಂದಂ.

[ಎಲ್ಲಾ ವಿದ್ವಾಂಸ ಜನರ ಅಭಿಪ್ರಾಯದಂತೆ, ಎಣೆಯಿಲ್ಲದ ಕಾವ್ಯದ ಮೈಗೆ ಹೆಚ್ಚಿನ ಸೊಬಗನ್ನುಂಟುಮಾಡುವ ಧರ್ಮಗಳು ಅಲಂಕಾರಸಾಮಗ್ರಿ ಎನ್ನಿಸುತ್ತವೆ.]

ಅಪ್ರತಿಮ ವೀರಚರಿತೆ

ಮೈಸೂರು ರಾಜ್ಯವನ್ನು 1672 ರಿಂದ 1704 ರ ವರೆಗೆ ಆಳಿದ ಚಿಕ್ಕದೇವರಾಜನ ಕಾಲದಲ್ಲಿ ಆತನ ಮಾರ್ಗದರ್ಶನ ಮತ್ತು ಪ್ರೋತ್ಸಾಹಗಳಿಂದ ಹಳಗನ್ನಡ ಶೈಲಿಯ ಪ್ರೌಢ ಗ್ರಂಥರಚನೆ ಹೊಸ ಹುರುಪಿನಿಂದ ನಡೆಯಿತು. ಅರಸನು ಸ್ವತಃ ಕವಿಯಾಗಿದ್ದುದಲ್ಲದೆ ವಿದ್ವಾಂಸರಿಗೂ ಕವಿಗಳಿಗೂ ಆಶ್ರಯ ಕೊಟ್ಟಿದ್ದನು. ಇವನ ಆಸ್ಥಾನದಲ್ಲಿದ್ದುಕೊಂಡು ಸಿಂಗರಾರ್ಯನು 'ಮಿತ್ರವಿಂದಾ ಗೋವಿಂದ' ಎಂಬ ಕನ್ನಡದ ಮೊದಲ ನಾಟಕವನ್ನೂ, ರಾಣಿಯ ಊಳಿಗದಲ್ಲಿದ್ದ ಸಂಚಿಯ ಹೊನ್ನಮ್ಮನು 'ಹದಿಬದೆಯ ಧರ್ಮ'ವನ್ನೂ ಬರೆದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿದ್ದಾರೆ. ಅದೇ ರೀತಿ, ಚಿಕ್ಕದೇವರಾಜನ ಆಪ್ತಮಿತ್ರನೂ ಮಂತ್ರಿಯೂ ಆಗಿದ್ದ ತಿರುಮಲಾರ್ಯನು 'ಅಪ್ರತಿಮ ವೀರಚರಿತೆ'ಯನ್ನಲ್ಲದೆ 'ಚಿಕ್ಕದೇವರಾಜ ವಿಜಯ' ಎಂಬ ಚಂಪೂ ಕಾವ್ಯವನ್ನೂ 'ಚಿಕ್ಕದೇವರಾಯ ವಂಶಾವಳಿ' ಎಂಬ ಗದ್ಯ ಗ್ರಂಥವನ್ನೂ ಹಳಗನ್ನಡ ಭಾಷೆಯಲ್ಲಿ ಬರೆದಿದ್ದಾನೆ. ಸಂಸ್ಕೃತದಲ್ಲಿಯೂ ಅನೇಕ ಸ್ತೋತ್ರಗಳನ್ನು ರಚಿಸಿ, 'ಉಭಯ ಭಾಷಾ ಕವಿ' ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಚಿಕ್ಕದೇವರಾಜನು ಬರೆದನೆಂದು ಪ್ರಸಿದ್ಧವಾಗಿರುವ 'ಗೀತಗೋಪಾಲ', 'ಚಿಕದೇವರಾಜ ಬಿನ್ನಪ' ಎಂಬ ಗ್ರಂಥಗಳನ್ನೂ ಈತನೇ

ಬರೆದಿರುವನೆಂಬ ಹೇಳಿಕೆಯೂ ಇದೆ. ಈತ ಶ್ರೀ ವೈಷ್ಣವ ಮತಕ್ಕೆ ಸೇರಿದವನು. ಈತನು 1645 ರಲ್ಲಿ ಶ್ರೀರಂಗ ಪಟ್ಟಣದಲ್ಲಿ ಹುಟ್ಟಿ, 1706 ರಲ್ಲಿ ಕಾಲವಾದನೆಂದು ತಿಳಿದುಬರುತ್ತದೆ.

ಚಿಕದೇವೇಂದ್ರನು ತಿರುಮಲಾರ್ಯನನ್ನು ಕರೆದು "ನಿರವಿಸು ನೀಂ ಕಬ್ಬದ ನುಡಿವುರುಳ್ಗಳ ಒಳ್ದೊಡವಿನ ಇರವಂ" ('ಕಾವ್ಯದ ಶಬ್ದ ಮತ್ತು ಅರ್ಥಗಳ ಒಳ್ಳೆಯ ಅಲಂಕಾರದ ಬಗೆಯನ್ನು ನೀನು ವಿವರಿಸು') ಎಂದು ಪ್ರೀತಿಯಿಂದ ಅಪ್ಪಣೆ ಮಾಡಲು, ತಾನು ಅದರಂತೆ ಈ ಗ್ರಂಥವನ್ನು ಬರೆದುದಾಗಿ ಹೇಳಿಕೊಂಡಿದ್ದಾನೆ. ಮತ್ತು, "ವಿದ್ವಾಂಸರ ಮನಸ್ಸಿಗೆ ಸಂತೋಷವಾಗಲಿ ಎಂದು, 'ಅಪ್ರತಿಮವೀರ ಚರಿತ್ರೆ' ಎಂಬ ಹೆಸರಿನಿಂದ ಸಂಸ್ಕೃತ ಭಾಷೆಯಲ್ಲಿ ಲಕ್ಷಣವನ್ನೂ 'ಒಳ್ಗನ್ನಡಂಗಳಿಂ' (ಎಂದರೆ, ಅಚ್ಚಗನ್ನಡ ನುಡಿಯಲ್ಲಿ) ಲಕ್ಷ್ಯವನ್ನೂ ವಿವರಿಸಿದ್ದೇನೆ" ಎಂದು ತಾನು ಗ್ರಂಥವನ್ನು ಬರೆದಿರುವ ರೀತಿಯನ್ನು ತಿಳಿಸಿದ್ದಾನೆ. ಸಂಸ್ಕೃತದಲ್ಲಿರುವ ಲಕ್ಷಣ ಸೂತ್ರಗಳೆಲ್ಲವೂ ಮಮ್ಮಟನ 'ಕಾವ್ಯಪ್ರಕಾಶ', ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ', ವಿದ್ಯಾನಾಥನ 'ಪ್ರತಾಪರುದ್ರ ಯಶೋಭೂಷಣ', ಅಪ್ಪಯ್ಯ ದೀಕ್ಷಿತನ 'ಕುವಲಯಾನಂದ'-ಇವುಗಳಿಂದ ತೆಗೆದುಕೊಂಡವಾಗಿವೆ. ಈ ಸೂತ್ರವಾಕ್ಯಗಳಿಗೆ ಬರೆದಿರುವ ವೃತ್ತಿಗಳು (ಎಂದರೆ ವಿವರಣೆಗಳು), ಮತ್ತು ಲಕ್ಷ್ಯಗಳು (ಎಂದರೆ ಉದಾಹರಣ ಪದ್ಯಗಳು) ತಿರುಮಲಾರ್ಯನು ಸ್ವಂತವಾಗಿ ಕನ್ನಡದಲ್ಲಿ ಬರೆದಿದ್ದಾನೆ. ಇವನ ಕನ್ನಡ 'ಪಕ್ಕಾ' ಹಳಗನ್ನಡವಾದ್ದರಿಂದ ಸಾಮಾನ್ಯರಿಗೆ ಅರ್ಥವಾಗುವುದು ಕಷ್ಟ.

ಈ ಗ್ರಂಥದಲ್ಲಿ ನಾಲ್ಕು ಪ್ರಕರಣಗಳಿವೆ. ಅವುಗಳಲ್ಲಿ ವಿವರಿಸಿರುವ ವಿಷಯದ ಹಂಚಿಕೆ ಹೀಗಿದೆ: (1) ಕಾವ್ಯದ ಲಕ್ಷಣ, ಉತ್ತಮಕಾವ್ಯ ಮಧ್ಯಮಕಾವ್ಯ ಸಾಧಾರಣಕಾವ್ಯ ಎಂಬ ಕಾವ್ಯಭೇದಗಳು ; ಕಾವ್ಯದ ಶಬ್ದ ಗುಣಗಳು ಹತ್ತು ಮತ್ತು ಅರ್ಥಗುಣಗಳು ಹತ್ತು ; (2) ಪಾಂಚಾಲಿ, ವೈದರ್ಭಿ, ಗೌಡೀ ಎಂಬ ರೀತಿಗಳು ; ಶಯ್ಯೆ ; ದ್ರಾಕ್ಷಾಪಾಕ, ನಾಳಿಕೇರ ಪಾಕ ; ಕೈಶಿಕೀ, ಆರಭಟೀ, ಸಾತ್ವತೀ, ಭಾರತೀ, ಎಂಬ ವೃತ್ತಿಗಳು ; ಛೇಕಾನುಪ್ರಾಸ, ವೃತ್ತ್ಯನುಪ್ರಾಸ ಎಂಬ ಅನುಪ್ರಾಸಗಳು ; ಯಮಕ ; (3) ನೂರು ಬೇರೆ ಬೇರೆ ಅರ್ಥಾಲಂಕಾರಗಳು ; (4) 'ಹೊಸಬರು' ವಿವರಿಸಿರುವ ಹದಿ

ನ್ನೆರಡು ಚಿತ್ರದ ಅಲಂಕಾರಗಳು, ಮತ್ತು ಐದು 'ಬೆರಿಕೆ'ಯ (ಸಂಕರ ಅಥವಾ ಮಿಶ್ರ) ಅಲಂಕಾರಗಳು.*

ವಿಷಯ ನಿರೂಪಣೆಯಲ್ಲಿ ತಿರುಮಲಾರ್ಯನು ಮಮ್ಮಟನನ್ನು ಅನುಸರಿಸಿ ಕಾವ್ಯಲಕ್ಷಣವನ್ನೂ, ವಾಮನನನ್ನು ಅನುಸರಿಸಿ ಶಬ್ದಾರ್ಥಗುಣಗಳನ್ನೂ, ವಿದ್ಯಾನಾಥನ ಪ್ರಕಾರ ರೀತಿ ಶಯ್ಯೆಪಾಕ ಮುಂತಾದ ವಿಚಾರಗಳನ್ನೂ, ಅಪ್ಪಯ್ಯ ದೀಕ್ಷಿತನನ್ನು ಅನುಸರಿಸಿ ಅರ್ಥಾಲಂಕಾರಗಳನ್ನೂ ವಿವರಿಸಿದ್ದಾನೆ.

ಅಪ್ರತಿಮವೀರಚರಿತೆಯಲ್ಲಿ ವಿಷಯ ನಿರೂಪಣೆಯ ಭಾಷೆ ಕ್ಲಿಷ್ಟವಾಗಿದೆ ಎಂಬ ಅಂಶವನ್ನು ಬಿಟ್ಟರೆ, ನಿರೂಪಣೆ ಬಹಳ ಅಡಕವಾಗಿ ಅಚ್ಚುಕಟ್ಟಾಗಿ ಶಾಸ್ತ್ರೀಯವಾಗಿದೆ. ಮೊದಲು ಸಂಸ್ಕೃತ ಲಕ್ಷಣ ಗ್ರಂಥಗಳಿಂದ ಸೂತ್ರಗಳನ್ನು ಎತ್ತಿಕೊಡುವುದು, ಅದಕ್ಕೆ ಕನ್ನಡದಲ್ಲಿ ವೃತ್ತಿ, ಅನಂತರ ಲಕ್ಷಣಕ್ಕೆ ಸ್ವಂತ ಲಕ್ಷ್ಯವನ್ನು ಕೊಡುವುದು, ಕಡೆಯಲ್ಲಿ (ಅಗತ್ಯವಾದ ಸಂದರ್ಭಗಳಲ್ಲಿ) ಲಕ್ಷ್ಯಲಕ್ಷಣ ಸಮನ್ವಯ (—ಎಂದರೆ, ಉದಾಹರಣೆ ಹೇಗೆ ಲಕ್ಷಣಕ್ಕೆ ಅನುಗುಣವಾಗಿದೆ ಎಂದು ತೋರಿಸಿಕೊಡುವುದು)—ಇದು ತಿರುಮಲಾರ್ಯನ ವಿಷಯ ನಿರೂಪಣೆಯ ಕ್ರಮ.

ಒಂದು ಉದಾಹರಣೆಯಿಂದ ಈ ಕ್ರಮವನ್ನು ಪರಿಚಯಮಾಡಿ ಕೊಳ್ಳಬಹುದು :

82. ಅನ್ಯೋನ್ಯಾಲಂಕಾರ ಮೆಂಬುದು ;—

ಸೂ॥ ''ಅನ್ಯೋನ್ಯಂ ನಾಮ ಯತ್ರ ಸ್ಯಾದುಪಕಾರಃ ಪರಸ್ಪರಂ''.

ವೃತ್ತಿ—ಎರಡುಂ ವಸ್ತುಗಳ್ಗೊಂದೊಂದರ ಕಜ್ಜಂ ಒಂದರ್ಕುಪಕಾರಮಾಗೆ ಅದು ಅನ್ಯೋನ್ಯಾಲಂಕಾರಂ".

[ಎರಡು ವಸ್ತುಗಳಿಗೂ ಒಂದೊಂದರ ಕಾರ್ಯ ಒಂದಕ್ಕೆ ಉಪಕಾರವಾಗಲು ಅದು ಅನ್ಯೋನ್ಯಾಲಂಕಾರ].

''ಬನದೊಳ್ ಕೃಷ್ಣಪ ನಾಯಕ-
ನಿನಿಯಳ್, ಪಸುಗೂಸು ಪಸಿಯೆ. ಕಣ್ಣೀರ್‌ಗರೆದಳ್ ;
ಪೊನಲಿಡೆ ಚೂಚುಕದಿಂ, ಅದಂ
ತನಿವಾಲ್‌ಗೆತ್ತು, ಈಂಟಿ, ತೆಪ್ಪನಿರ್ದುದು ಮಗುವುಂ".

---

* ಒಟ್ಟು ಅಲಂಕಾರಗಳ ಸಂಖ್ಯೆ 120 ಆದರೂ, ಇದರಲ್ಲಿ ಒಳಭೇದಗಳೂ ಸೇರುತ್ತವೆ. ಉದಾಹರಣೆಗೆ, ಉಪಮಾಲಂಕಾರದಲ್ಲಿ ಪೂರ್ಣೋಪಮೆ, ಲುಪ್ತೋಪಮೆ ಎಂದು ಎರಡು ವಿಧ. ಲುಪ್ತೋಪಮೆಯಲ್ಲಿ ಮತ್ತೆ ಎಂಟು ಒಳಭೇದಗಳಿವೆ.

[ವನವಲ್ಲಿ ಕೃಷ್ಣಪ್ಪಗಾಯಕನ ಪ್ರಿಯೆ ತನ್ನ ಹಸುಗೂಸು ಹಸಿದಿರಲು ಕಣ್ಣೀರನ್ನು ಸುರಿಸಿದಳು; ಅದು ಅವಳ ಮೊಲೆತೊಟ್ಟಿನಿಂದ ಹರಿದುಬರಲು, ಅದನ್ನು ಒಳ್ಳೆಯ ಹಾಲೆಂದು ಭ್ರಮಿಸಿ ಕುಡಿದು, ಆ ಮಗುವೂ ತೆಪ್ಪಗಾಯಿತು].

"ಇದರೊಳ್ ತಾಯ ಕಣ್ಣೀರಂ ಪಾಲೆಂದೀಂಟುವುದರಿಂ ತಾಯಿಂದೆ ಮಗುವಿಂಗುಪಕಾರಂ, ಕಣ್ಣೀರನೀಂಟುತ್ತೆ ಅಳದಿರ್ಪುದರಿಂ ಮಗುವಿಂದೆ ತಾಯ್ಗುಪಕಾರಂ".

[ಇದರಲ್ಲಿ ತಾಯ ಕಣ್ಣೀರನ್ನು ಹಾಲೆಂದು ಕುಡಿಯುವುದರಿಂದ ತಾಯಿಂದ ಮಗುವಿಗೆ ಉಪಕಾರ. ಕಣ್ಣೀರನ್ನು ಕುಡಿಯುತ್ತ ಅಳದೆ ಇರುವುದರಿಂದ ಮಗುವಿಂದ ತಾಯಿಗೆ ಉಪಕಾರ].

ಚಿಕ್ಕದೇವರಾಜನು ಮೈಸೂರು ಸಿಂಹಾಸನವನ್ನು ಏರಿದ ತರುಣದಲ್ಲಿಯೇ ಅನೇಕ ಶತ್ರುಗಳನ್ನು ಎದುರಿಸಬೇಕಾಯಿತು. ಅವರ ಪೈಕಿ ಮರಾಟೆಯವರು ಅತ್ಯಂತ ಪ್ರಬಲರಾಗಿದ್ದರು. ಶಿವಾಜಿ ಸ್ವತಃ ಮೈಸೂರಿನ ಮೇಲೆ ದಂಡೆತ್ತಿ ಬಂದಿದ್ದನು. ಅನಂತರ ಸಾಂಬಾಜಿ ತನ್ನ ದಳಪತಿಗಳನ್ನು ದಂಡಿನೊಡನೆ ಕಳಿಸಿದ್ದನು. ಇವರಲ್ಲದೆ, ಮಧುರೆಯ ನಾಯಕರು, ಕೆಳದಿಯ ನಾಯಕರು, ಇಕ್ಕೇರಿಯ ಅರಸರು—ಇವರೆಲ್ಲರ ಸೊಕ್ಕನ್ನೂ ಚಿಕ್ಕದೇವರಾಜ ಅಡಗಿಸಿದನು. ಶತ್ರುಗಳನ್ನೆಲ್ಲ ಸೋಲಿಸಿದಮೇಲೆ ಚಿಕ್ಕದೇವರಾಜನು 'ಕರ್ನಾಟಕ ಚಕ್ರವರ್ತಿ' 'ಅಪ್ರತಿಮವೀರ', 'ತೆಂಕಣರಾಜ' ಎಂಬ ಬಿರುದುಗಳನ್ನು ತಳೆದನು. ಈ 'ಅಪ್ರತಿಮವೀರನ' ಶೌರ್ಯಔದಾರ್ಯಾದಿ ಸದ್ಗುಣಗಳನ್ನೂ ವ್ಯಕ್ತಿ ಮಹಿಮೆಯನ್ನೂ ತಿರುಮಲಾರ್ಯನು ಅನೇಕ ಲಕ್ಷ್ಯ ಪದ್ಯಗಳಲ್ಲಿ ವರ್ಣಿಸಿದ್ದಾನೆ; ಉಳಿದ ಹಲವಾರು ಪದ್ಯಗಳಲ್ಲಿ ಚಿಕ್ಕದೇವರಾಜನ ಆಳಿಕೆಗೆ ಸಂಬಂಧಪಟ್ಟ ಸಂಗತಿಗಳೂ, ಆತನನ್ನು ಎದುರಿಸಿ ಸೋಲುಂಡ ಇಲ್ಲವೆ ಸತ್ತ ಶತ್ರುಗಳ ವಿಷಯವೂ ವರ್ಣಿತವಾಗಿವೆ. ಒಟ್ಟಿನಲ್ಲಿ, ಬಹುಸಂಖ್ಯೆಯ ಉದಾಹರಣ ಪದ್ಯಗಳಲ್ಲಿ ಚಿಕ್ಕದೇವನ ಗುಣ ಕಥನವೇ ಸಾಗಿದ್ದು, ಆತ ಕಥಾನಾಯಕನಂತೆ ಶೋಭಿಸುವುದರಿಂದ, 'ಅಪ್ರತಿಮವೀರ ಚರಿತೆ' ಎಂಬ ಗ್ರಂಥನಾಮ ಸಾರ್ಥಕವಾಗಿದೆ. ಇದರಲ್ಲಿ ಶಾಸ್ತ್ರಕವಿತ್ವ, ಕಾವ್ಯಕವಿತ್ವ ಇವೆರಡೂ ತುಂಗಭದ್ರೆಯರಂತೆ ಸಂಗಮಿಸಿವೆ.

ಶತ್ರುಗಳ ಪೈಕಿ ಮರಾಟರು ಅತ್ಯಂತ ಪ್ರಬಲರಾಗಿದ್ದರಷ್ಟೆ. ಅವರು ಭಂಗಪಟ್ಟುದನ್ನು ವರ್ಣಿಸುವುದಕ್ಕೆ ಹೆಚ್ಚಿನ ಸಂಖ್ಯೆಯ ಪದ್ಯಗಳು

ಮೀಸಲಾಗಿರುವುದು ಸಹಜವಾಗಿಯೇ ಇದೆ. 'ಸಾತ್ವತೀ' ವೃತ್ತಿಯಲ್ಲಿ ಭಯಾನಕ ಸಂದರ್ಭಕ್ಕೆ ಕೊಟ್ಟಿರುವ ಒಂದು ಉದಾಹರಣ ಪದ್ಯದಲ್ಲಿ (ii–15) ಕವಿ ಮರಾಠಿ ಪದಗಳನ್ನು ಸಂದರ್ಭೋಚಿತವಾಗಿ ಬಳಸಿದ್ದಾನೆ. ಚಿಕ್ಕದೇವನ 'ಧಾಟಿ'ಗೆ (ಎಂದರೆ ದಾಳಿಗೆ) ಹೆದರಿದ ಮರಾಟರು ಹೀಗೆ ಉದ್ಗಾರತೆಗೆದರಂತೆ :

ದೇವ ನಿನ್ನ ಧಾಟಿಯೊಳ್ ಮರಾಟಿಗಳ್ ಬಿಗುರ್ಪಿನಿಂ
ರಾವು ರಾವು ಜೀವು ಜೀವು ಗಾವು ಮೀ ತುರ್ಝೂ ಘರೇ
ದೇವು ದೇವು ಚಾರು ಪಾಯಿ ದೋನುಸಿಂಗ ಭೇವು ಭೇವ್
ಜೀವು ರಾವು ವೆಂಬರಳ್ಕಿ ಚಿಕ್ಕದೇವರಾಯ ಕೇಳ್.

[ದೇವ, ನಿನ್ನ ದಾಳಿಯಲ್ಲಿ ಮರಾಟಿಗಳು ಹೆದರಿಕೆಯಿಂದ, ''ರಾಯನೇ ರಾಯನೇ ! ಜೀವಸಹಿತ ಉಳಿಸು, ಉಳಿಸು, ನಾವು ನಿನ್ನ ಮನೆಯಲ್ಲಿ ಹಸುಗಳು, ನಾಲ್ಕು ಕಾಲು ಎರಡು ಕೊಂಬುಗಳನ್ನು ಕೊಡು, ಕೊಡು, ದಯೆತೋರು, ದಯೆತೋರು, ಕಾಪಾಡು ರಾಯನೆ" ಎಂದು ಹೆದರಿಕೊಂಡು ಹೇಳುತ್ತಾರೆ. ಚಿಕ್ಕದೇವರಾಯನೆ, ಕೇಳು." (ನಮಗೆ ಎರಡು ಕೊಂಬು ನಾಲ್ಕುಕಾಲು ಇಲ್ಲ. ಅಷ್ಟೆ, ನೀನು ಅವನ್ನು ಕೊಟ್ಟರೆ, ಹಸುಗಳಂತೆ ನಿನ್ನ ಮನೆಯಲ್ಲಿ ಇದ್ದು ನಿನ್ನ ಸೇವೆಮಾಡುತ್ತೇವೆ, ಕಾಪಾಡು-ಎಂದು ತಾತ್ಪರ್ಯ).]

ಒಂದು ಪದ್ಯದಲ್ಲಿ ಎರಡೆರಡಕ್ಷರಗಳು ಜೊತೆಜೊತೆಯಾಗಿ ಅನುಗೂಡಿ ಬರುವ 'ಛೇಕಾನುಪ್ರಾಸ' ಎಂಬ ಶಬ್ದಾಲಂಕಾರಕ್ಕೆ ಉದಾಹರಣೆಯಾಗಿ ಕೊಟ್ಟಿರುವ ಕೆಳಗಿನ ಕಂದ ಪದ್ಯದಲ್ಲಿ ತಿರುಮಲಾರ್ಯನಿಗೆ ಕಂದಪದ್ಯದ ಛಂದಸ್ಸಿನ ಮೇಲಿರುವ ಅಕ್ಕರೆ ಉಕ್ಕಿರುವುದು ಕಂಡುಬರುತ್ತದೆ :

ಕಂದಂ ಕವಿಕೋಕಿಲ ಮಾ–
ಕಂದಂ ಕೋಮಲವಿಕಾಸಿ ಕೃತಿಕಲ್ಪಲತಾ
ಕಂದಂ ವಿಸೃಮರ ರಸದು
ಕ್ಕಂದಂ ಚಿಕದೇವರಾಯ ಚಂದನ ಚಂದಂ

[ಕಂದ ಪದ್ಯವು ಕವಿಕೋಗಿಲೆಗಳ ಸಿಹಿಮಾವಿನ ಮರ ; ಕೋಮಲವಾಗಿ ಬೆಳೆಯುವ ಕಾವ್ಯವೆಂಬ ಕಲ್ಪಲತೆಯ ಗಡ್ಡೆ ; ಎಲ್ಲ ಕಡೆಯೂ ಹರಡುವ ರಸದ ಹೆಜ್ಜಳ ; ಚಿಕ್ಕದೇವ ರಾಯನ (ಹಣೆಯಲ್ಲಿ ಮೆರೆಯುವ) ಗಂಧದ (ಬಟ್ಟಿನ) ಸೌಂದರ್ಯ.]*

---

* ಈ ಪದ್ಯವು ಹರಿಹರನ ಗಿರಿಜಾ ಕಲ್ಯಾಣದಲ್ಲಿರುವ ಪದ್ಯವನ್ನು ಹೋಲುತ್ತದೆ. ಆ ಪದ್ಯದ ಪ್ರಭಾವವನ್ನು ಇದರಲ್ಲಿ ಚೆನ್ನಾಗಿ ಗುರುತಿಸಬಹುದು. ಗಿರಿಜಾ ಕಲ್ಯಾಣದ ಪದ್ಯ :

ತಿರುಮಲಾರ್ಯನು ಚಿಕ್ಕದೇವರಾಜನ ಗುಣಕಥನ ಮಾಡುವಾಗ, ಅತನ ಪರಾಕ್ರಮವರ್ಣನೆಗೆ ಪ್ರಾಧಾನ್ಯ ಕೊಟ್ಟಿರುವುದು ಸ್ವಾಭಾವಿಕವಾಗಿದೆ. ಅತ ಗರಡಿ ಸಾಧಕನಾಗಿ ಬಲಶಾಲಿಯಾಗಿದ್ದನೆಂಬ ಸಂಗತಿ ಓಜೋಗುಣವುಳ್ಳ ಗೌಡೀ ರೀತಿಯ ಉದಾಹರಣ ಪದ್ಯದಲ್ಲಿ ಸ್ವಾಭಾವಿಕವಾದ ಮಾತುಗಳಲ್ಲಿ ಚಿತ್ರಿತವಾಗಿದೆ:

ಕಟ್ಟಿದ. ದಟ್ಟಿ ಕೈವಿಡಿದ ಪೊಂಗಿರುಗಟ್ಟಿಗೆ. ರನ್ನಬಂದಿಗೋ-
ಲ್, ಬಟ್ಟಿತೆನಿಪ್ಪ ಚೊಲ್ಲೆಯದ ಮುಟ್ಟೆಯು. ಸೀಸಕ ಮಿಟ್ಟೆನಾಮದ ಬಳ್-
ಬಟ್ಟು ಮನಂಗೊಳಲ್ ಗರುಡಿಗೆಯ್ಮೆಯೊಳ್ ಈ ಚಿಕ್ಕದೇವರಾಯನಂ
ದಿಟ್ಟಿಪ, ಜಟ್ಟಿಗಳ್ ಗರುಡಿಗೋವಳಂ ಈ ನೃಪಂ ಎಂದು ವಂದಿಪರ್.

[ಕೈವಿಡಿದ = ಕೈಯಲ್ಲಿ ಧರಿಸಿದ. ಪೊಂಗಿರುಗಟ್ಟಿಗೆ (ಪೊನ್ + ಕಿರು + ಕಟ್ಟಿಗೆ) = ಚಿನ್ನದ ಚಿಕ್ಕ ಕೋಲು. ಬಟ್ಟಿತೆನಿಪ್ಪ = ಗುಂಡಾಗಿರುವ. ಚೊಲ್ಲೆಯ = ಜುಟ್ಟಿನ ತುದಿ ಗಂಟು, ಮುಟ್ಟೆ = ಗರುಡಿಸಾಧನೆಮಾಡುವ ಕೆಮ್ಮಣ್ಣು ಹರಡಿದ ಸ್ಥಳ. ಸೀಸಕ = (ಸಂ. ಶೀರ್ಷಕ) ತಲೆಯನ್ನು ಕಾಪಾಡುವ ಸಾಧನ, ಕುಲಾವಿ. ಮಿಟ್ಟೆ = ಮಣ್ಣು. ಮನಂಗೊಳ್ = ಆಕರ್ಷಕವಾಗಿರು. ಗರುಡಿಗೆಯ್ಮೆ = ಗರುಡಿಯ ಸಾಧನೆ. ದಿಟ್ಟಿಪ = ನೋಡುವ, ಗೋವಳ = ಗೋಪಾಲ, ಶ್ರೀಕೃಷ್ಣ.]

ಚಿಕ್ಕದೇವರಾಜ ಸಂಗೀತ ಬಲ್ಲವನು, ವೀಣಾವಾದನ ಚತುರ, ಎಂದೂ ಒಂದೆರಡು ಪದ್ಯಗಳಲ್ಲಿ ವರ್ಣಿಸಿದೆ. ಅತನ ಕವಿತಾ ಸಾಮರ್ಥ್ಯವನ್ನಾಗಲಿ ಪಾಂಡಿತ್ಯವನ್ನಾಗಲಿ ಎಲ್ಲಿಯೂ ಪ್ರಸ್ತಾಪಿಸದೆ ಇರುವುದು ಗಮನಾರ್ಹವಾಗಿದೆ. ಇದರಿಂದ, 'ಚಿಕ್ಕದೇವರಾಜ ಬಿನ್ನಪ' ಮತ್ತು 'ಗೀತಗೋಪಾಲ' ಎಂಬೀ ಕೃತಿಗಳನ್ನು ಅತನ ಹೆಸರಿನಲ್ಲಿ ತಿರುಮಲಾರ್ಯನೇ ರಚಿಸಿರಬಹುದೆಂಬ ಅನುಮಾನ ಬಲಪಡುತ್ತದೆ.

ಕಂದಂಗಳ್, ಅಮೃತಲತಿಕಾ-
ಕಂದಂಗಳ್, ಅನೂನ ವಾಕ್ಯಫಲ ವಿಲಸತ್ ಮಾ-
ಕಂದಂಗಳ್, ತನಿರಸದು-
ಕ್ಕಂದಂಗಳ್-ಸೊಗಯಿಸಿರ್ಪುವು, ಈ ಸತ್ಕೃತಿಯೊಳ್
(1-12)

[ಅಮೃತಲತಿಕಾಕಂದ = ಅಮೃತವಲ್ಲಿಯ ಗಡ್ಡೆ. ಅನೂನ = ಊನವಾಗಿಲ್ಲದ. ತುಂಬಿಕೊಂಡಿರುವ. ವಿಲಸತ್ = ಶೋಭಿಸುವ.]

ಅಲಂಕಾರ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅಪ್ರತಿಮ ವೀರ ಚರಿತೆಯಲ್ಲಿ ಹೊಸ ವಿಷಯಗಳೇನೂ ಇಲ್ಲದಿದ್ದರೂ, ಚಿಕ್ಕದೇವರಾಜನ ವ್ಯಕ್ತಿತ್ವ ಮತ್ತು ಚರಿತ್ರೆಯ ಸಂಗತಿಗಳ ದೃಷ್ಟಿಯಿಂದ ಈ ಗ್ರಂಥಕ್ಕೆ ಬೆಲೆಯಿದೆ.

ಕನ್ನಡ ಕುವಲಯಾನಂದ

ಕನ್ನಡ ಕುವಲಯಾನಂದವು ಅದೇ ಹೆಸರಿನ ಸಂಸ್ಕೃತ ಕುವಲಯಾನಂದವನ್ನು ಆಧರಿಸಿ ಬರೆದದ್ದು. ಸಂಸ್ಕೃತದ ಕುವಲಯಾನಂದದ ಕರ್ತೃ ಅಪ್ಪಯ್ಯ ದೀಕ್ಷಿತ. ಈತನ ಕಾಲ ಸು. 1500. ಈತ ತನಗಿಂತಲೂ ಹಿಂದಿನ ಜಯದೇವನ 'ಚಂದ್ರಾಲೋಕ' (ಸು. 1200)* ಎಂಬ ಅಲಂಕಾರ ಗ್ರಂಥವನ್ನು ಅನುಸರಿಸಿ ತನ್ನ ಗ್ರಂಥವನ್ನು ರಚಿಸಿದನು. ಉದಯಾದಿತ್ಯಾಲಂಕಾರದಂತೆ ಚಂದ್ರಾಲೋಕ ಕುವಲಯಾನಂದಗಳು ಪಾಠಪುಸ್ತಕಗಳ ಮಾದರಿಯಲ್ಲಿ ರಚಿತವಾದ ಗ್ರಂಥಗಳು. ಚಂದ್ರಾಲೋಕದಲ್ಲಿ ಇತರ ಕಾವ್ಯಲಕ್ಷಣಗಳೊಂದಿಗೆ 100 ಅಲಂಕಾರಗಳನ್ನು ನಿರೂಪಿಸಿದೆ. ಕುವಲಯಾನಂದದಲ್ಲಿ ಈ ಸಂಖ್ಯೆ 115 ಕ್ಕೆ ಏರಿದೆ.

ಕನ್ನಡ ಕುವಲಯಾನಂದವನ್ನು ರಚಿಸಿದ ಕವಿ "ತೊರಗಲ ಸೀಮೆಗರಸಾದ ಲಿಂಗಭೂಪರನ ಸತ್ಪುತ್ರ ಚಾಮೇಂದ್ರನು." ಇವನ ವಂಶದವರು ಬೆಳವಲ ನಾಡಿಗೆ ದೊರೆಗಳಾಗಿ ಪ್ರಭುತ್ವ ಮಾಡಿಕೊಂಡು ಬಂದರು. ವಂಶದ ಮೂಲಪುರುಷನಾದ ಅಪರಾದಿಯ ವಿಟ್ಟಪ್ಪಗೌಡನು 16 ನೆಯ ಶತಮಾನದ ಉತ್ತರಾರ್ಧದಲ್ಲಿ ಬಿಜಾಪುರದ ಸುಲ್ತಾನನಾಗಿದ್ದ ಆದಿಲಷಾಹನ ಸರದಾರನಾಗಿ ಸೇವೆಸಲ್ಲಿಸಿ, ಆತನಿಂದ ತೊರೆಗಲ್ ಸೀಮೆಯನ್ನು ಜಹಗೀರಾಗಿ ಪಡೆದನು. ಸ್ವಭುಜಬಲದಿಂದ ತನ್ನ ನಾಡನ್ನು ವಿಸ್ತರಿಸಿಕೊಂಡು, ಬಿಜಾಪುರದ ಸುಲ್ತಾನನ ಸಾಮಂತನೆನಿಸಿಕೊಂಡಿದ್ದನು. ಬಿಜಾಪುರದ ಬಾದಷಾಹಿಯು ನಷ್ಟವಾದಮೇಲೆ ಸವಣೂರಿನ ನವಾಬನು ಬೆಳವಲನಾಡನ್ನು

---

*ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಕನ್ನಡ ಕೈಪಿಡಿ'ಯಲ್ಲಿ ದಿವಂಗತ ಪಂಡಿತ ಕಾನಕಾನಹಳ್ಳಿ ವರದಾಚಾರ್ಯರು 'ಅರ್ಥಾಲಂಕಾರ'ಗಳನ್ನು (ಸು. 50) ಚಂದ್ರಾಲೋಕವನ್ನು ಅನುಸರಿಸಿ ವಿವರಿಸಿರುವುದನ್ನು ಇಲ್ಲಿ ನೆನೆಯಬಹುದು. ವರದಾಚಾರ್ಯರು ಲಕ್ಷಣಗಳಿಗೆ ಕನ್ನಡ ಕಾವ್ಯಗಳಿಂದ ಉದಾಹರಣ ಪದ್ಯಗಳನ್ನು ಆಯ್ದುಕೊಟ್ಟಿರುವುದು ಮಾತ್ರವಲ್ಲದೆ, ಲಕ್ಷ್ಯಲಕ್ಷಣ ಸಮನ್ವಯಮಾಡಿ ವಿವರಿಸಿರುವುದು ಅಲಂಕಾರ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ.

ವಶಪಡಿಸಿಕೊಂಡನು. ಆಗ ತೊರೆಗಲನಾಡು ಅವನ ಆಳಿಕೆಗೆ ಒಳಪಟ್ಟಿತು. ವಿಟ್ಟಗೌಡನಿಂದ ನಾಲ್ಕನೆಯ ತಲೆಯವನಾದ 'ಲಿಂಗಭೂಪರ'ನ ಮಗನೇ ಕುವಲಯಾನಂದ ಗ್ರಂಥಕರ್ತನಾದ ಜಾಯೇಂದ್ರ. ಈತ ಜಾಯಗೌಂಡ, ಜಾಯಗೊಂಡ, ಎಂದೂ ಹೆಸರುಗೊಂಡಿದ್ದನು. ತಂದೆ ಲಿಂಗಗೌಡನು ತೀರಿಕೊಂಡ ವರ್ಷದಲ್ಲಿಯೇ (1716) ಹುಟ್ಟಿದ ಜಾಯಗೌಂಡನು ರಾಜ್ಯ ಪ್ರತಿನಿಧಿಯಾದ ಹಿರಿಯ ತಾಯಿ ಚೆನ್ನಾಂಬೆಯ ಪೋಷಣೆ ಶಿಕ್ಷಣಗಳಲ್ಲಿ ಬೆಳೆದನು. "ಸ್ವಭಾವತಃ ಬುದ್ಧಿವಂತನಾದ ಜಾಯಗೌಂಡನು ತನಗೆ ದೊರೆತ ಶಿಕ್ಷಣವನ್ನು ಬೆಳೆಸಿಕೊಂಡು ವಿದ್ಯಾವಂತ, ಧೈರ್ಯಶಾಲಿ, ಶೂರ ಮೇಧಾವಿ, ರಾಜಕಾರಣ ನಿಪುಣನೆಂದು ಆ ಕಾಲದಲ್ಲಿ ಹೆಸರಾಗಿದ್ದನು. ...ಪ್ರಜೆಗಳ ಹಿತವನ್ನೇ ಲಕ್ಷ್ಯದಲ್ಲಿಟ್ಟು ಅವರನ್ನು ನ್ಯಾಯದಿಂದ ಪಾಲಿಸುತ್ತಿದ್ದನು... ಆತನು ಆರು ಭಾಷೆಗಳಲ್ಲಿ ನಿಪುಣನಾಗಿದ್ದನು. ಸ್ವತಃ ಕವಿಯಾಗಿದ್ದನು. ಅವನು ರಚಿಸಿದ 'ಕನ್ನಡ ಕುವಲಯಾನಂದ'ವೂ ನವರಸಗಳನ್ನು ವಿವರಿಸುವ 'ರಸಮಂಜರಿ'ಯೂ ಅವನು ಸಾಹಿತಿಯೂ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಪರಿಣತನೂ ಆಗಿದ್ದನೆಂಬುದನ್ನು ವಿಶದಪಡಿಸುವುವು. ವಿದ್ಯಾವಂತರನ್ನೂ ಪಂಡಿತರನ್ನೂ ಮನ್ನಿಸುತ್ತಿದ್ದನು. ಇವನ ವಿದ್ವತ್ತಿಗೂ ಜಾಣತನಕ್ಕೂ ಮೆಚ್ಚಿ ಮೂರನೆಯ ಪೇಶ್ವೆ ಬಾಜೀರಾಯನು ಇವನನ್ನು ಒಳ್ಳೇ ಗೌರವದಿಂದ ಕಾಣುತ್ತಿದ್ದನು."[18] ಈ ಆದರ್ಶ ಜನಪ್ರಿಯ ಪ್ರಭು 1758 ರಲ್ಲಿ ನರಗುಂದವಲ್ಲಿ ಕಾಲವಾದನು. ಅವನ ಸಮಾಧಿ ನವಿಲುಗುಂದದಲ್ಲಿದೆ.

'ಕುವಲಯಾನಂದ'ದಲ್ಲಿ ಅರ್ಥಾಲಂಕಾರಗಳನ್ನು ವಿವರಿಸುವುದೇ ಗ್ರಂಥಕರ್ತನ ಮುಖ್ಯ ಗುರಿ. ಆದರೂ ಗ್ರಂಥಾರಂಭದಲ್ಲಿ ಮಂಗಳಾಚರಣೆಯ ಒಂಬತ್ತು ದೇವತಾಸ್ತೋತ್ರಗಳಾದ ಮೇಲೆ, "ಪ್ರಥಮತಃ ಕಾವ್ಯರೀತಿ ಪದ್ಧತಿಯಂ ವಿವರಿಸುವೆನು" ಎಂದು ಹೇಳಿ, ಧ್ವನಿಪ್ರಧಾನವಾದ ಕಾವ್ಯ, ಧ್ವನಿ ಗೌಣವಾಗಿರುವ (ಎಂದರೆ ಅಪ್ರಧಾನವಾಗಿರುವ) ಕಾವ್ಯ, ಚಿತ್ರಕಾವ್ಯ (ಎಂಬ ಉತ್ತಮ, ಮಧ್ಯಮ, ಸಾಧಾರಣ) ಪ್ರಕಾರಗಳನ್ನು ಉದಾಹರಣಪೂರ್ವಕ ವಿವರಿಸಿದ್ದಾನೆ; ಬಳಿಕ ಚಿತ್ರಕಾವ್ಯದಲ್ಲಿ ಶಬ್ದಚಿತ್ರ, ಅರ್ಥಚಿತ್ರ, ಶಬ್ದಾರ್ಥೋಭಯ ಚಿತ್ರ ಎಂಬ ಮೂರು ಪ್ರಕಾರಗಳನ್ನು ಉದಾಹರಣಪೂರ್ವಕ ವಿವರಿಸಿದ್ದಾನೆ. ಅನಂತರ, "ಮೂರು ಬಗೆಯಿಂದ ಪೇಳ್ದ

ಕಾವ್ಯದೊಳು ಪ್ರಾಯಶಃ ಧ್ವನಿ ಗುಣೀಭೂತಧ್ವನಿ ಶ್ರೇಷ್ಠವಾಗಿಹುವು. ಬಳಿಕ ಮೂರು ಪ್ರಕಾರದ ಚಿತ್ರದೊಳು ಶಬ್ದಚಿತ್ರವು ಬಾಹುಲ್ಯದಿಂದ ನೀರಸವಾಗಿಹುದೆಂದು ಸತ್ಕವಿಗಳು ಆದರಣೆಯುಳ್ಳವರಾಗದಿದರಿಂದ ನ್ಯೂನತ್ವ ಹೇಳಿದ್ದಾಯಿತು. ಅತಃ ಶಬ್ದಚಿತ್ರಾಂಶು ರೂಪವಾದ ಕಾವ್ಯಮಂ ಬಿಟ್ಟುಳಿದ ಅರ್ಥಚಿತ್ರಾದಿ ರೂಪವಾದ ಕಾವ್ಯ ವಿಸ್ತಾರಮಂ ಶ್ರೀಗುರು ಪ್ರಸಾದ ಮಹಿಮೆಯಿಂ ಪೇಳ್ವೆ" ಎಂದು ಹೇಳಿ 'ಅರ್ಥಾಲಂಕಾರ ಪ್ರಕರಣ'ವನ್ನು ಕವಿ ಪ್ರಾರಂಭಿಸುತ್ತಾನೆ. ಮೇಲ್ಕಂಡ ಪೀಠಿಕಾಪ್ರಕರಣ ಬಹು ಸಂಕ್ಷೇಪವಾಗಿದೆ. ಇದಕ್ಕೂ ಅಪ್ಪಯ್ಯ ದೀಕ್ಷಿತನ 'ಚಿತ್ರಮೀಮಾಂಸೆ' ಎಂಬ ಗ್ರಂಥ ಆಧಾರವಾಗಿದೆ.

ಮೊದಲೇ ಹೇಳಿದಂತೆ, ಅಪ್ಪಯ್ಯ ದೀಕ್ಷಿತನ ಕುವಲಯಾನಂದವನ್ನು ಅನುಸರಿಸಿ ರಚಿತವಾದ ಗ್ರಂಥ. ಈ 'ಕನ್ನಡ ಕುವಲಯಾನಂದ'; ಜಾಯಗೊಂಡನು ಗ್ರಂಥದಲ್ಲಿ ಮೂಲ ಗ್ರಂಥಕ್ಕೆ ತಾನು ಋಣಿ ಎಂದು ಎಲ್ಲಿಯೂ ಒಪ್ಪಿಕೊಳ್ಳದಿದ್ದರೂ, ಅದರ ಹೆಸರನ್ನೇ ಇಟ್ಟುಕೊಂಡಿರುವುದರಿಂದ ಒಂದು ರೀತಿಯಲ್ಲಿ ಒಪ್ಪಿಕೊಂಡಹಾಗೆಯೇ ಆಗಿದೆ. "ಕುವಲಯಾನಂದ ಎಂಬ ಅಲಂಕಾರ ಶಾಸ್ತ್ರವನು, ಕನ್ನಡ ಕವಿತೆಯನು, ಶರ ಕುಸುಮ ಭೋಗ ಭಾಮಿನಿಯ ಪರಿವರ್ಧಿನಿಯ ವಾರ್ಧಕವನು" ಎಂದು ಜಾಯಗೊಂಡ 'ಸೂಚನೆ'ಯಲ್ಲಿ ತಿಳಿಸಿದ್ದಾನೆ; ಈ "ಪ್ರತಿಜ್ಞೆ"ಗೆ ಅನುಸಾರವಾಗಿ ಮೂಲ ಸಂಸ್ಕೃತ ಶ್ಲೋಕಗಳನ್ನು ಈ ಆರು ಬಗೆಯ ಷಟ್ಪದಿಗಳಲ್ಲಿ ಕನ್ನಡಿಸಿದ್ದಾನೆ. ಲಕ್ಷಣಗಳಿಗೆ ಉದಾಹರಣೆಯಾಗಿ ಕೊಡುವ ಪದ್ಯಗಳು ಕೂಡ ಲಕ್ಷ್ಮೀಶನ ಜೈಮಿನಿ ಭಾರತ, ರಾಘವಾಂಕನ ಕಾವ್ಯ, ಉದ್ಭಟ ಕಾವ್ಯ, ಚಾಯಣ ಭಾರತ, ಚಿತ್ರಭಾರತ, ಮುಂತಾದ ಷಟ್ಪದಿ ಕಾವ್ಯಗಳಿಂದ ಆರಿಸಿದವೇ ಆಗಿವೆ. ಹಲಕೆಲವು ಉದಾಹರಣ ಪದ್ಯಗಳು ಮೂಲ ಸಂಸ್ಕೃತ ಪದ್ಯಗಳ ಅನುವಾದಗಳು. "ಕನ್ನಡ ಸಾಹಿತ್ಯದಲ್ಲಿರುವ ಎಲ್ಲ ಅಲಂಕಾರ ಗ್ರಂಥಗಳು ಲಕ್ಷ್ಯಲಕ್ಷಣಗಳನ್ನು ಕಂದವೃತ್ತದಲ್ಲಿ ಹೇಳಿರುವವು. ತಿಮ್ಮನ ನವರಸಾಲಂಕಾರದಲ್ಲಿ ಮಾತ್ರ ಎರಡು ಷಟ್ಪದಿಗಳೂ ಒಂದು ತ್ರಿಪದಿ ಬಂದಿವೆ. ಉಳಿದವರಾರೂ ಷಟ್ಪದಿಗಳನ್ನು ಉಪಯೋಗಿಸಿ ಗ್ರಂಥ ಬರೆದಿಲ್ಲ. ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತವಾದ ಷಟ್ಪದಿ ಗ್ರಂಥಗಳಿಂದ ಉದಾಹರಣೆಯನ್ನು ಆರಿಸಿ ತೋರಿಸಿದ ಮತ್ತು ಲಕ್ಷ್ಯಲಕ್ಷಣಗಳನ್ನು ವಿವರಿಸಲು ಷಟ್ಪದಿ

ಯನ್ನೇ ಉಪಯೋಗಿಸಿದ ಗ್ರಂಥವು ಜಾಯಗೌಂಡನ ಕುವಲಾಯನಂದ ಒಂದೇ ಎಂದು ಹೇಳಬಹುದು. ಆದುದರಿಂದ ಈ ಗ್ರಂಥಕ್ಕೆ ಮಹತ್ವಬಂದಿದೆ" ಎಂದು ಈ ಗ್ರಂಥವನ್ನು ಮೊದಲಬಾರಿಗೆ ಸಂಪಾದನೆಮಾಡಿ ಪ್ರಕಟಿಸಿರುವ (1970) ಶಿ. ಚಿ. ನಂದಿಮಠ ಅವರು ಪೀಠಿಕೆಯಲ್ಲಿ ಹೇಳಿರುವ ಮಾತು ಗಳು ಒಪ್ಪತಕ್ಕವಾಗಿವೆ. ಷಟ್ಪದಿ ಕಾವ್ಯಗಳನ್ನು 'ವರ್ಣಕ ಕಾವ್ಯ' (ಹಾಡುಗಬ್ಬ)ಗಳ ಗುಂಪಿನಲ್ಲಿ ಸೇರಿಸುವುದು ರೂಢಿಯಾಗಿದೆ. ಈ ಗ್ರಂಥವು ಷಟ್ಪದಿಗಳನ್ನೇ ಒಳಗೊಂಡು, ಉದಾಹರಣ ಪದ್ಯಗಳೂ ಕೂಡ ಷಟ್ಪದೀ ಕಾವ್ಯಗಳಿಂದಲೇ ತೆಗೆದುಕೊಂಡುವಾದ್ದರಿಂದ, ಜಾಯಗೊಂಡನು ತನ್ನ ಕೃತಿಯನ್ನು 'ವರ್ಣಕ ಕಾವ್ಯ' ಎಂದು ಗ್ರಂಥದ ಸಮಾಪ್ತಿ ಪದ್ಯದಲ್ಲಿ ಕರೆದು ಕೊಂಡಿರುವ ಹಾಗೆ ಕಾಣುತ್ತದೆ. ಅವನೇ ಬರೆದಿರುವ ಟೀಕೆ ಟಿಪ್ಪಣಿಗಳೆಲ್ಲವೂ ಗದ್ಯದಲ್ಲಿವೆ.

ಜಾಯಗೊಂಡನ ನಿರೂಪಣಪದ್ಧತಿಯನ್ನು ವಿಶದಪಡಿಸಲು 'ದೀಪಕಾ ಲಂಕಾರ'ದ ವಿವರಣೆಯನ್ನು ಮಾದರಿಯಾಗಿ ಇಟ್ಟುಕೊಳ್ಳಬಹುದು :

ದೀಪಕಾಲಂಕಾರ :

"ಇನ್ನು ಪ್ರಸ್ತುತಾಪ್ರಸ್ತುತ ಧರ್ಮೈಕ್ಯಪ್ರ-
ಸನ್ನ ಪೆಸರಾದ ದೀಪಕವು ;
ಉನ್ನತ ಮದದಿಂದಲಿ ಗಜ, ಭೂಪ ಕೀರ್ತಿಯಿಂ
ಮಾನ್ಯರಾಗಿ ಯೊಪ್ಪುತ್ತಿಹರು,"

"ಟೀ॥ ಪ್ರಸ್ತುತ ಅಪ್ರಸ್ತುತಗಳಿಗೆ ಧರ್ಮೈಕ್ಯಪೇಳೆ ದೀಪಕವು 'ಉನ್ನತ ಮದ' ವೆಂಬುದುದಾಹರಣ. ಮದದಿಂದ ಗಜ, ಬಳಿಕ ಕೀರ್ತಿಯಿಂ ಪ್ರಸ್ತುತ ನಾದ ರಾಜನು ಒಪ್ಪುತಿಹನೆಂದು ಪೇಳಿಹುದರಿಂದ ಶೋಭಾರೂಪಧರ್ಮೈಕ್ಯ ವೊಂದೇ ಪೇಳಿಹುದು."

ಮೂಲಶ್ಲೋಕದಲ್ಲಿ ಲಕ್ಷಣ ಲಕ್ಷ್ಯ ಎರಡೂ ಉಂಟು. ಶರ ಷಟ್ಪದಿ ಯಲ್ಲಿರುವ ಕನ್ನಡ ಪದ್ಯ ಅದರ ಭಾಷಾಂತರ.

[ಅಲಂಕಾರಗಳಲ್ಲಿ, ವರ್ಣಿಸಬೇಕಾದ ವಿಷಯವನ್ನು 'ವರ್ಣ್ಯ' ಅಥವಾ 'ಪ್ರಸ್ತುತ' ಎಂದೂ, ವರ್ಣ್ಯವನ್ನು ಯಾವುದಾದರೂ ಒಂದು ರೀತಿಯಲ್ಲಿ ಹೋಲುತ್ತಿದ್ದು ವರ್ಣಿಸಬೇಕಾಗಿಲ್ಲದಿರುವುದನ್ನು 'ಅವರ್ಣ್ಯ' ಅಥವಾ 'ಅಪ್ರಸ್ತುತ' ಎಂದೂ ಅಲಂಕಾರಶಾಸ್ತ್ರದಲ್ಲಿ ಹೇಳಲಾಗುತ್ತದೆ. ರಾಜನು

ಕೀರ್ತಿಯಿಂದ ಶೋಭಿಸುತ್ತಾನೆ ; ಆನೆ ತನ್ನ ಮದದಿಂದ ಶೋಭಿಸುತ್ತದೆ. ಶೋಭಿಸುವುದು ಎರಡು ವಸ್ತುಗಳಲ್ಲಿಯೂ ಇರುವ ಸಮಾನಧರ್ಮ.]

ನರಪತಿ ವಿಜಯ

ಇದನ್ನು ಬರೆದವನು 'ಅಳಿಯ ಲಿಂಗರಾಜ' ಎಂದು ಪ್ರಸಿದ್ಧನಾಗಿದ್ದಾನೆ. ಮೈಸೂರು ಅರಸನಾದ ಮುಮ್ಮಡಿ ಕೃಷ್ಣರಾಜನ ಪೋಷಣೆಯಲ್ಲಿ ಬೆಳೆದು ವಿದ್ಯಾವಂತನಾಗಿ, ಆತನ ಇಬ್ಬರು ಹೆಣ್ಣುಮಕ್ಕಳನ್ನು ಮದುವೆಯಾದನು. ಈ ಕಾರಣದಿಂದ ಆ ಹೆಸರು ಬಂದಿತು. ಲಿಂಗರಾಜನ ಜನ್ಮವರ್ಷ 1823 ; ಮರಣಹೊಂದಿದ್ದು 1874ರಲ್ಲಿ. ಈತನು "ಮಹದೈಶ್ವರ್ಯವಂತನಾಗಿದ್ದರೂ ಸರ್ವದಾ ವಿದ್ವಜ್ಜನ ಸಹವಾಸ, ಪಾಠಪ್ರವಚನ, ನೂತನ ಗ್ರಂಥರಚನಾದಿಗಳಲ್ಲಿಯೇ ಆಸಕ್ತನಾಗಿದ್ದು ಸಂಸ್ಕೃತ ಕರ್ಣಾಟಕ ವಿಶ್ವದಲ್ಲಿ ಉದ್ದಾಮ ಪಾಂಡಿತ್ಯವನ್ನು ಸಂಪಾದಿಸಿ ಆ ಕಾಲದ ಕರ್ಣಾಟ ಕವಿಗಳಲ್ಲಿ ಅಗ್ರೇಸರನೆನಿಸಿಕೊಂಡಿದ್ದನು. ಸಂಗೀತದಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದನು. ಯಾವಾಗಲೂ ಈತನ ಸಭೆಯಲ್ಲಿ ಪ್ರಸಿದ್ಧರಾದ ಅನೇಕ ಜನ ವಿದ್ವಾಂಸರು ಸೇರಿ ನಾನಾ ವಿಧ ಗ್ರಂಥಾವಲೋಕನ, ತದರ್ಥಾನುವಾದಗಳನ್ನು ಮಾಡುತ್ತ ಇದ್ದುದರಿಂದ ಆತನ ಸೇವಾವೃತ್ತಿ ಜನಗಳೂ ಸಾಮಾನ್ಯವಾಗಿ ಕವಿತ್ವಗಳನ್ನು ಮಾಡುತ್ತಾ ಇದ್ದರು." (ಕವಿಚರಿತೆ, ಸಂ. 3, 1929 ; ಪು. 199–200). ಮುಮ್ಮಡಿ ಕೃಷ್ಣರಾಜನು ಈ ಗ್ರಂಥವನ್ನು ತನ್ನ ಸಭೆಯಲ್ಲಿ ಓದಿಸಿ ಕೇಳಿ, ಸುಪ್ರೀತನಾಗಿ, ಈತನಿಗೆ 'ಉಭಯ ಕವಿತಾ ವಿಶಾರದ' ಎಂಬ ಬಿರುದನ್ನು ಕೊಟ್ಟನು. ಲಿಂಗರಾಜನ ಪತ್ನಿಯರಿಬ್ಬರೂ ಸಾಹಿತ್ಯ ಸಂಗೀತಾದಿ ಕಲೆಗಳಲ್ಲಿ ನಿಪುಣೆಯರಾಗಿದ್ದರು. ತಮಗೆ ಅಲಂಕಾರ ತತ್ತ್ವಗಳನ್ನು ತಿಳಿಯಹೇಳಬೇಕೆಂದು ಅವರು ಪ್ರಾರ್ಥಿಸಿಕೊಳ್ಳಲು, ಪ್ರಭುವೂ ಮಾವನೂ ಆದ ದೊರೆಯನ್ನೇ ನಾಯಕನನ್ನಾಗಿ ಮಾಡಿಕೊಂಡು 'ಅಳಿಯ' ಲಿಂಗರಾಜನು ಈ ಲಕ್ಷಣಗ್ರಂಥವನ್ನು ರಚಿಸಿದುದಾಗಿ ಗ್ರಂಥದಿಂದ ತಿಳಿದುಬರುತ್ತದೆ. ಸ್ವಾರಸ್ಯವಾಗಿ ತಿಳಿಸಿರುವ ಆ ಚಿಕ್ಕ ಸರಸ ಪ್ರಸಂಗದ ಕಡೆಯ ಎರಡು ಪದ್ಯಗಳು :

ಒಂದು ದಿನಂ ನೃಪಸುತೆಯರ
ಪೊಂದಿದ ಅಲಂಕಾರತತ್ವದಿಚ್ಛೆಯ ತಿಳಿದು ಆ-
ನಂದದೆ ತನು ಪೊಂಪುಳಿವೆ-

ತ್ತು ಇಂದದಂ ಉಸುರಲ್ಕೆ ತೊಡಗಿದಂ ಲಿಂಗನೃಪಂ.

ಸ್ಫುರತ್ ಉಪಮಾ ಪ್ರಮುಖಾಲಂ-
ಕರಣದ ಅದೊಂದು ಲಕ್ಷ್ಯಪದ್ಯಮಂ ಒಲವಿಂ
ನೆರೆ ಲಕ್ಷಣ ಪದ್ಯದ ಉದಾ-
ಹರಣಕೆ ಕೃಷ್ಣಕ್ಷಿತೀಂದ್ರನ ಗುಣಮನೆ ಪೇಳ್ದಂ.

[ತನು = ಶರೀರ, ಪೊಂಪುಳಿವೆತ್ತು = ರೋಮಾಂಚಹೊಂದಿ. ಸ್ಫುರತ್ = ಪ್ರಕಾಶಮಾನ, ಶೋಭಿಸುವ.]

ಕೃಷ್ಣರಾಜನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿರುವ ವಿಷಯದಲ್ಲಿ ಲಿಂಗರಾಜನು ತಿರುಮಲಾರ್ಯನ ಮಾದರಿಯನ್ನು ಅನುಸರಿಸಿದ್ದಾನೆ. ಆದರೆ, ಅಪ್ರತಿಮವೀರ ಚರಿತೆಯಲ್ಲಿ ಚಿಕ್ಕದೇವರಾಜನ ಅನೇಕ ಗುಣಗಳಿಂದ ಕೂಡಿದ ವ್ಯಕ್ತಿಚಿತ್ರ ಅಲ್ಲಲ್ಲಿ ಜೀವಂತವಾಗಿ ಕಣ್ಣಿಗೆ ಕಟ್ಟಿದಂತೆ ತೋರಿಬರುವಂತೆ ಈ ಗ್ರಂಥದಲ್ಲಿ ಕೃಷ್ಣರಾಜನ ಗುಣವರ್ಣನೆ ಹಾಗೆ ತೋರಿಬರುವುದಿಲ್ಲ. ಲಿಂಗರಾಜನ ಬರವಣಿಗೆಯ ಶೈಲಿ ಸಂಸ್ಕೃತಪದಗಳಿಂದ ತುಂಬಿ, ಸಾಮಾನ್ಯನ ದೃಷ್ಟಿಯಿಂದ ಕಠಿನವಾಗಿಯೇ ಇದೆ.

ಗದ್ಯಪದ್ಯ ಮಿಶ್ರಿತವಾದ ಈ ಗ್ರಂಥದಲ್ಲಿ ಮೂರು ಅಧ್ಯಾಯಗಳಿದ್ದು, ಅವನ್ನು ಉಲ್ಲಾಸಗಳೆಂದು ಕರೆದಿದೆ. 'ಪೀಠಿಕಾ ರಚನ'ವೆಂಬ ಮೊದಲನೆಯ ಉಲ್ಲಾಸದಲ್ಲಿ ಕೃಷ್ಣರಾಜನ ವಂಶವಿಚಾರವನ್ನು ಸಂಗ್ರಹವಾಗಿ ತಿಳಿಸಿ, ಗ್ರಂಥ ರಚನಾ ಸಂದರ್ಭವನ್ನು ವಿವರಿಸಿದೆ. "ಈ ಅಲಂಕಾರ ಗ್ರಂಥದೊಳ್ ಲಕ್ಷ್ಯ ಲಕ್ಷಣ ಪದ್ಯಂಗಳ್ ಸ್ತ್ರೀಪುರುಷ ಪ್ರಶ್ನೋತ್ತರ ಮಾಲಾರೂಪಮಾಗಿಯೇ ಪೇಳಿರ್ಪುದು" ಎಂದು ಹೇಳಿರುವುದು ಗಮನಿಸತಕ್ಕ ಸಂಗತಿ. ಛಂದೋಂಬುಧಿಯಲ್ಲಿ ನಾಗವರ್ಮನು ಲಕ್ಷಣ ಪದ್ಯಗಳನ್ನು ತನ್ನ ಹೆಂಡತಿಗೆ ಹೇಳಿದಂತೆ ಬರೆದಿದ್ದಾನೆ. ಈ ಗ್ರಂಥದಲ್ಲಿಯೂ ಅದೇ ಪದ್ಧತಿ ಕಂಡುಬರುತ್ತದೆ.

ಎರಡನೆಯ ಉಲ್ಲಾಸದಲ್ಲಿ, ಮೂರು ಬಗೆಯ ಅನುಪ್ರಾಸಗಳು, ಮೂರು ಬಗೆಯ ಯಮಕ, ಪುನರುಕ್ತವದಾಭಾಸ ಮತ್ತು ಹಾರಬಂಧ, ಷೋಡಶದಳಪದ್ಮಬಂಧ, ತ್ರಿಶೂಲಬಂಧ, ಷಡರ (ಆರು ಆರೇಕಾಲಿನ) ಚಕ್ರ ಬಂಧ ಎಂಬ ಚಿತ್ರಾಲಂಕಾರಗಳು—ಈ ಶಬ್ದಾಲಂಕಾರಗಳನ್ನು ವಿವರಿಸಿದೆ. ಚಿತ್ರಾಲಂಕಾರಗಳ ಕಲ್ಲಚ್ಚಿನ ಚಿತ್ರಗಳೂ ಇವೆ. (ಹಾರಬಂಧದ ಪ್ರತಿಚಿತ್ರವನ್ನು ಅನುಬಂಧದಲ್ಲಿ ಕೊಟ್ಟಿದೆ.)

ಮೂರನೆಯ ಉಲ್ಲಾಸವು ಅರ್ಥಾಲಂಕಾರಗಳ ವಿವರಣೆಗೆ ಮೀಸಲಾಗಿದೆ. ಮುಖ್ಯವಾದ ಅಲಂಕಾರಗಳು, ಅವುಗಳ ಒಳಭೇದಗಳು, ಎಲ್ಲವೂ ಸೇರಿ ಸುಮಾರು 190 ಅಲಂಕಾರಗಳನ್ನು ನಿರೂಪಿಸಿದೆ. ಲಕ್ಷಣ ಪದ್ಯಗಳೆಲ್ಲ ಕಂದಗಳು. ಲಕ್ಷ್ಯಪದ್ಯಗಳು ಸಾಮಾನ್ಯವಾಗಿ ಕಂದಗಳಾಗಿದ್ದರೂ, ಕೆಲವು ವೃತ್ತಗಳೂ ಇವೆ. ವೃತ್ತಿ ಗದ್ಯದಲ್ಲಿದೆ. ಲಕ್ಷ್ಯಪದ್ಯಗಳು ಸ್ವಂತ ರಚನೆಗಳೆಂಬುದು ಸ್ಪಷ್ಟವಾಗಿಯೇ ಇದೆ. ಲಕ್ಷಣ ನಿರೂಪಣೆಯಲ್ಲಿ ಅನೇಕ ಸಂಸ್ಕೃತ ಮೂಲ ಗ್ರಂಥಗಳನ್ನು ಅನುಸರಿಸಿರುವಂತೆ ಕಂಡುಬರುತ್ತದೆ.

ಒಂದು ಉದಾಹರಣೆಯೊಂದಿಗೆ ಈ ಗ್ರಂಥವಿಚಾರವನ್ನು ಮುಗಿಸಬಹುದು :

ಸ್ವಭಾವೋಕ್ತಿ :

"ಜಾತ್ಯಾದಿಯಾ ಸ್ವಭಾವಮಂ
ಅತ್ಯಂತದೆ ಪೇಳಿ ತಾಂ ಸ್ವಭಾವೋಕ್ತಿ ಕರಂ ;
ಸ್ತುತ್ಯೋನ್ನತ ಕುಚಮಂಡಲ
ನೃತ್ಯನ್ನವರತ್ನಹಾರೇ ಸರಸ ವಿಹಾರೇ"

[ಸ್ತುತ್ಯವಾದ ದೊಡ್ಡದಾದ ಗುಂಡನೆಯ ಮೊಲೆಗಳ ಮೇಲೆ ಕುಣಿಯುವ ನವರತ್ನ ಹಾರವುಳ್ಳವಳೇ, ಸರಸವಾಗಿ ವಿಹಾರಮಾಡುವವಳೇ, ಕೇಳು: ವಸ್ತುಗಳ ಜಾತಿ ದ್ರವ್ಯ ಗುಣ ಕ್ರಿಯೆ, ಇವುಗಳ ಸ್ವಭಾವವನ್ನು ಪೂರ್ತಿಯಾಗಿ ತಿಳಿಸುವುದು ಸ್ವಭಾವೋಕ್ತಿ.]

"ವೃತ್ತಿ ॥ ಜಾತಿಕ್ರಿಯಾದಿ ಸ್ವಭಾವಮಂ ರಮ್ಯವಾಗಿ ಬಣ್ಣಿಸಲ್ಕೆ ಸ್ವಭಾವೋಕ್ತ್ಯಲಂಕಾರಂ."

ಲಕ್ಷ್ಯ ॥

"ಊರಿದ ಮಂಡಿ, ಬಲ್ಕುಣಿವ ಮುಂಗುರುಳ್, ಒಯ್ಯನೆ
ತೋರ್ವ ಸೇದೆಗಳ್,
ಜಾರಿದ ಮೇಲುದ, ಆ ತೊಳಲ್ವ ದಿಟ್ಟಿ ಸಡಿಲ್ದ ನವಿರಳ ಓಳಿ ತಾಂ
ತೋರಿರೆ ದುಂದುಚಂಡ ಪಿಡಿದಾಡೆ ನಿರೀಕ್ಷಿಸಿ ಕೃಷ್ಣ ಮೇದಿನೀ
ದಾರಂ, 'ಉದಾರೆ, ಭಾಪು !' ಎನುತಂ ಅಪ್ಪಲ್, ಆದೇನನೆ
ನೋಂತೆಯೌ ಸಖೀ."

ವೃತ್ತಿ ॥ ಇದರೊಳ್ ಕಂತುಕಕ್ರಿಡಾಕಾಲೋಚಿತ ಸ್ತ್ರೀಜಾತಿ ಸ್ವಭಾವಮಂ ಪೇಳ್ದುದರಿಂ ಸ್ವಭಾವೋಕ್ತ್ಯಲಂಕಾರಂ.

ಇತರ ಗ್ರಂಥಗಳು

ಜಯದೇವನ ಚಂದ್ರಾಲೋಕವನ್ನು ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳೂ ಅಕ್ಕಲೆ ನರಸಿಂಹಶಾಸ್ತ್ರಿಗಳೂ 'ಕರ್ಣಾಟಕ ಚಂದ್ರಾಲೋಕ' ಎಂಬ ಹೆಸರಿನಿಂದ ಕನ್ನಡಿಸಿದ್ದಾರೆ. ಇದರಿಂದ ಆ ಕಾಲದಲ್ಲಿ ಚಂದ್ರಾಲೋಕವು ಎಷ್ಟು ಪ್ರಸಿದ್ಧವಾಗಿತ್ತು ಎಂಬುದು ಗೊತ್ತಾಗುತ್ತದೆ.

''ಕನ್ನಡ ಭಾಷೆಯಲ್ಲಿ ನಾಗವರ್ಮ, ಉದಯಾದಿತ್ಯ ಮೊದಲಾದ ಮಹಾಕವಿಗಳು ರಚಿಸಿರುವ ಅಲಂಕಾರ ಗ್ರಂಥಗಳಲ್ಲಿ ಪದ್ಯಗಳ ಅರ್ಥವೂ, ಲಕ್ಷ್ಯ ಲಕ್ಷಣಗಳೂ ದುರವಗಾಹವಾಗಿರುವುದರಿಂದ ಕನ್ನಡಿಗರಾದ ಅಲಂಕಾರ ವಿದ್ಯಾರ್ಥಿಗಳು ಅಲಂಕಾರ ವಿದ್ಯಾರ್ಥಿಗಳೇ ಆದರಲ್ಲಾ! ಇದನ್ನು ಹೇಗಾದರೂ ಸುಲಭಪಡಿಸಬೇಕೆಂಬ ಉದ್ದೇಶದಿಂದ ಕೆಲವು ಶಬ್ದಾಲಂಕಾರಗಳೊಡನೆ ಈ ಚಂದ್ರಾಲೋಕವನ್ನು ಸುಲಭವೇದ್ಯವಾಗಿ ಕನ್ನಡದಲ್ಲಿ ರಚಿಸಿದೆನು'' ಎಂಬ, ಗ್ರಂಥಕರ್ತ ಅಕ್ಕಲೆಯವರ ಪ್ರಯತ್ನದ ಹಿಂದಿರುವ ಕಳಕಳಿಯಿಂದಾಗಿ ಅವರ ಅಲಂಕಾರ ಶಾಸ್ತ್ರ ಗ್ರಂಥ ಗಮನಾರ್ಹವಾಗಿದೆ. ಇಂದಿನ ವಿದ್ಯಮಾನಕ್ಕೆ ಅನ್ವಯಿಸಿ ಹೇಳುವುದಾದರೆ, ಇಂದು 'ಅಲಂಕಾರ ವಿದ್ಯಾರ್ಥಿ'ಗಳಿರುವರೇ ಹೊರತು 'ಅಲಂಕಾರಶಾಸ್ತ್ರ ವಿದ್ಯಾರ್ಥಿ'ಗಳಿಲ್ಲ. ಅಲಂಕಾರಗಳ ವಿವರಣೆಗೆ ಇಂದಿನ ಪಾಠಕ್ರಮದ ಯಾವ ಹಂತದಲ್ಲಿಯೂ ಉಚಿತ ಸ್ಥಾನವಿಲ್ಲ. ಪ್ರಾಚೀನ ಕಾವ್ಯಗಳ ಸೌಂದರ್ಯವನ್ನು ಪೂರ್ಣವಾಗಿ ಅರಿಯಬೇಕಾದರೆ ಅವರು ಪ್ರಯೋಗಿಸಿರುವ ಅಲಂಕಾರಗಳನ್ನು ಅಭ್ಯಾಸಪೂರ್ವಕವಾಗಿ ಅರ್ಥ ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯ. ಇಂದಿನ ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಇಂದಿನ ಭಾಷೆ ನುಡಿಗಟ್ಟುಗಳಲ್ಲಿ ನಮ್ಮ ಲಾಕ್ಷಣಿಕರು ನಿರೂಪಿಸಿರುವ ಪ್ರಮುಖ ಅಲಂಕಾರಗಳನ್ನು ತಿಳಿಯಹೇಳುವುದರ ಜೊತೆಗೆ, ಆಧುನಿಕ ಕವಿತೆಯಲ್ಲಿ ಕೂಡ ಕೆಲವು ಮುಖ್ಯ ಅಲಂಕಾರಗಳನ್ನು ಗುರುತಿಸುವ ರೂಢಿ ಬೆಳೆಯಬೇಕಾಗಿದೆ. ಈ ದೃಷ್ಟಿಯಿಂದ, ಅಕ್ಕಲೆ ನರಸಿಂಹ ಶಾಸ್ತ್ರಿಗಳ ಅಂದಿನ ಪ್ರಯತ್ನ ಹೊಸ ರೂಪದಲ್ಲಿ ಮತ್ತೆ ನಡೆಯಬೇಕಾಗಿದೆ.

ಈ ಗ್ರಂಥದಲ್ಲಿ, ಹಿಂದಿನ ಯಾವ ಕನ್ನಡ ಅಲಂಕಾರ ಶಾಸ್ತ್ರ ಗ್ರಂಥದಲ್ಲಿಯೂ ಕಂಡುಬರದ ಎರಡು ಚಿತ್ರಾಲಂಕಾರಗಳಿವೆ. ಅವು ಅಪೂರ್ವವಾಗಿರುವುದರಿಂದ, ಗಮನಾರ್ಹವಾಗಿವೆ. ಅವುಗಳನ್ನು ಗ್ರಂಥಕರ್ತರ ವಿವರಣೆಯೊಂದಿಗೆ ಕೆಳಗೆ ಎತ್ತಿಕೊಟ್ಟಿದೆ:

ಜ್ಯೋತಿಷ ಬಂಧ :

(ಸಂಸ್ಕೃತ ಅನುಷ್ಟುಪ್ ಶ್ಲೋಕ)

"ಮೀನ ಕೇತು ಗುರೋಚಾಪ
ಕರ ಭೌಮ ತಮೋರವೇ ॥
ಯಾಮ್ಯಾನಿಲ್ಯೆಂದ್ರಾಶ್ವಿನೇಯ
ಜೀವ ಚಿತ್ರೇ ಶನೈಶ್ಚರ ॥"

"ಧನುರ್ಧಾರಿಯಾದ ನರಕಾಸುರನನ್ನು ಸಂಹರಿಸಿದ, ಪಂಚಪಾಂಡವರೇ ಪ್ರಾಣವಾಗಿಯುಳ್ಳ, ಎಲೈ ಕೃಷ್ಣನೇ, ನನ್ನ ಚಿತ್ತದಲ್ಲಿ ನೆಲೆಯಾಗೆಂದು ತಾತ್ಪರ್ಯ. ಇದರಲ್ಲಿರುವ ಪದಗಳೆಲ್ಲಾ ಜ್ಯೋತಿಷಕ್ಕೆ ಸಂಬಂಧಪಟ್ಟಿರುವುದ ರಿಂದ ಇದು ಜ್ಯೋತಿಷ ಬಂಧ."

"ಭೌಮ-ನರಕಾಸುರ, ತಮಃ - ಅಂಧಕಾರ, ಅಶ್ವಿನ ಶಬ್ದದಿಂದ ಆಶ್ವಿನೇಯ. ಅನಿಲದಿಂದ ಆನಿಲ."

[ಕೇತು, ಗುರು; ಭೌಮ (=ಕುಜ, ಮಂಗಳ), ರವಿ (=ಸೂರ್ಯ), ಶನೈಶ್ಚರ-ಇವು ಗ್ರಹಗಳು. ಮೀನ, ಚಾಪ (ಧನುಸ್ಸು), ಇವು ರಾಶಿಗಳ ಹೆಸರುಗಳು. ಯಮ, ಅನಿಲ (=ವಾಯು), ಇಂದ್ರ-ಇವು ದಿಕ್ಪತಿಗಳ ಹೆಸರುಗಳು. ಅಶ್ವಿನಿ, ಚಿತ್ರೆ - ನಕ್ಷತ್ರಗಳ ಹೆಸರುಗಳು.]

ಗೀತ ಬಂಧ :

(ಅನುಷ್ಟುಪ್ ಶ್ಲೋಕ)

"ಸಾಪಗಂ ಗಾನಿಮಾ ಮಾಮಾ।
ಸಮಾಮಾನಿನಿ ಪಾಪಮಂ ॥
ಪಾರಿಪ್ಪರೀಪಂ ಸಾಪನಿಸಂ।
ನಿಗಮಾಗಮ ಮಾಗಧಂ ॥"

"ಮೇಘ ವಾಹನನಾದ ಇಂದ್ರನೂ, ಗಾತ್ರಮಾತ್ರವಾದ ಸರಸ್ವತಿಯೂ, ಮಹಾಲಕ್ಷ್ಮಿಯೂ, ಗಣೇಶ ಮಾತ್ರವಾದ ಪಾರ್ವತಿಯೂ, ವೇದಶಾಸ್ತ್ರಗಳೇ ಸ್ತುತಿಪಾಠಕರಾಗಿಯುಳ್ಳ ಬ್ರಹ್ಮ, ವಿಷ್ಣು, ಮಹೇಶ್ವರ, ಇವರುಗಳು ಪಾಪ ಪರಿಹಾರಕರೆಂದು ತಾತ್ಪರ್ಯ. ಇದರಲ್ಲಿರುವ ಅಕ್ಷರಗಳೆಲ್ಲಾ ಸಂಗೀತ ಶಾಸ್ತ್ರಕ್ಕೆ ಸಂಬಂಧಪಟ್ಟಿರುವುದರಿಂದ ಇದು ಗೀತಬಂಧ."

"ಮಹಾ ಮಾ ಎನ್ನುವುದರ ತದ್ಭವ ಮಾಮಾ. ಈ=ಸರಸ್ವತಿ. ಸಾ=ಲಕ್ಷ್ಮಿ. ಸಾಪ=ನೀರಿನಿಂದ ಕೂಡಿದುದು."

[ಮೇಲಿನ ಶ್ಲೋಕದಲ್ಲಿ ಸಂಗೀತದ ಸಪ್ತ ಸ್ವರಗಳಾದ ಸರಿಗಮಪಧನಿ ಎಂಬ ಅಕ್ಷರಗಳನ್ನು ಮಾತ್ರ ಉಪಯೋಗಿಸಿದೆ.]

ಚಿತ್ರಾಲಂಕಾರಗಳು ಬಗೆಬಗೆಯ ಚಮತ್ಕಾರಗಳಿಂದ ಕೂಡಿರುತ್ತವೆ. ಓದುಗರಲ್ಲಿ ಬೆರಗನ್ನು ಉಂಟು ಮಾಡುತ್ತವೆ. ರಚನೆಯ ರಹಸ್ಯವು ಗೊತ್ತಾದಾಗ ಬೌದ್ಧಿಕವಾದ ಸಂತೋಷವುಂಟಾಗುತ್ತದೆ. ಇದು ಹೃದ್ಯವಾದ ರಸಾನಂದಕ್ಕೆ ಸಮವಾಗಲಾರದು. ಅಲ್ಲದೆ, ಇವು ರಸಗಳನ್ನು ಪೋಷಿಸಲೂ ಆರವು. ಇವನ್ನು ರಚಿಸುವುದಕ್ಕೆ ಪಾಂಡಿತ್ಯ ಬೇಕು. ರಚಿಸುವುದಕ್ಕೆ ಕಷ್ಟವಾದ್ದರಿಂದ, ಚಿತ್ರಾಲಂಕಾರಗಳನ್ನು 'ದುಷ್ಕರ ಕಾವ್ಯ'ಗಳೆಂದೂ ಲಾಕ್ಷಣಿಕರು ಕರೆದಿದ್ದಾರೆ.

ಕಂದ ಪದ್ಯಗಳ ರಚನೆಯಲ್ಲಿ ಹಳಗನ್ನಡ ನುಡಿಗಟ್ಟು ಅಗತ್ಯವಾದ್ದರಿಂದ, ಅಕ್ಕಲೆಯುವರ ಸುಲಭವೆನ್ನಲಾದ ಪದ್ಯಗಳೂ ತಕ್ಕಮಟ್ಟಿಗೆ ಕಠಿನವಾಗಿಯೇ ಇವೆ. ಆದರೆ, ಮೇಲೆ ಉದ್ಧರಿಸಿರುವ ಅವರ ಗದ್ಯ ವಾಕ್ಯಗಳು ಈಗಿನ ಹೊಸಗನ್ನಡದಂತೆಯೇ ಇರುವುದು ಗಮನಾರ್ಹ.

ಇನ್ನೊಂದು ಅಪೂರ್ವ ರೀತಿಯ ಅಲಂಕಾರ ಗ್ರಂಥ ಗಮನಾರ್ಹವಾಗಿದೆ. ಅದು ಎಸ್. ಎನ್. ನರಹರಯ್ಯನವರ 'ಶ್ರೀ ಲಕ್ಷ್ಮೀನೃಸಿಂಹ ಸ್ತೋತ್ರಂ'. ಹೆಸರು ಕೇಳಿದ ಕೂಡಲೆ ಇದು ಸ್ತೋತ್ರ ಗ್ರಂಥವೆಂದು ಭಾಸವಾಗುತ್ತದೆ. ಈ ಗ್ರಂಥ ಪ್ರಕಟವಾದದ್ದು 1919ರಲ್ಲಿಯಾದರೂ, 1899ರ ಸುಮಾರಿನಲ್ಲಿ ರಚಿತವಾದಂತೆ ಕಂಡುಬರುತ್ತದೆ. ಗ್ರಂಥಕರ್ತರು ತಮ್ಮ ವಿದ್ಯಾರ್ಥಿ ದಶೆಯಲ್ಲಿ ಸಂಸ್ಕೃತ 'ಕುವಲಯಾನಂದ'ವನ್ನು ಅಧ್ಯಯನ ಮಾಡುವ ಕಾಲದಲ್ಲಿ ಗುರುಗಳಾದ ವಿಶ್ವೇಶ್ವರ ಶಾಸ್ತ್ರಿಗಳ ಪಾಠ ಸಾಗುತ್ತಿದ್ದಂತೆ, "ಆ ಆ ದಿವಸದ ಪಾಠಕ್ಕೆ ಲಕ್ಷ್ಯವಾಗುವಂತೆ ಕುಲದೇವತೆಯಾದ ಲಕ್ಷ್ಮೀನೃಸಿಂಹನನ್ನು ಅಧಿಕರಿಸಿ ಕಂದ ಪದ್ಯಗಳನ್ನು" ರಚಿಸಿಕೊಂಡು ಬಂದರು. "ಹಾಗೆ ರಚಿತವಾದ ಪದ್ಯಗಳೆಲ್ಲವೂ ಸೇರಿ ಒಂದು ಗ್ರಂಥದಂತೆ ಆದುದರಿಂದ ಅದಕ್ಕೇನಾದರೂ ಒಂದು ಹೆಸರು ಬೇಡವೇ ಎಂದು ಲಕ್ಷ್ಮೀನೃಸಿಂಹ ಸ್ತೋತ್ರವೆಂದು ಕರೆದೆನು" ಎಂದು ಗ್ರಂಥಕರ್ತರು ತಿಳಿಸಿದ್ದಾರೆ. ಲಾಕ್ಷಣಿಕರು ತಮ್ಮ ಆಶ್ರಯದಾತರಾದ ರಾಜರನ್ನೇ ನಾಯಕರನ್ನಾಗಿ ಮಾಡಿಕೊಂಡು, ಅವರ ಗುಣಕಥನ ಮಾಡುವ ಲಕ್ಷ್ಯ ಪದ್ಯಗಳನ್ನು ರಚಿಸುತ್ತಿದ್ದ ಪದ್ಧತಿಯನ್ನು ಹಿಂದೆ ನೋಡಿದ್ದೇವೆ. ಎಲ್ಲ ಅಲಂಕಾರಗಳಿಗೂ ದೇವತಾಪರವಾದ ಉದಾಹರಣ ಪದ್ಯಗಳಿರುವುದು

ಇದೊಂದು ಗ್ರಂಥದಲ್ಲಿಯೇ ಎಂದು ಕಾಣುತ್ತದೆ. ಲಕ್ಷಣ ಪದ್ಯಗಳಿಲ್ಲದಿರುವ ಕೊರತೆಯನ್ನು ನೀಗುವುದಕ್ಕಾಗಿ ಪ್ರತಿ ಅಲಂಕಾರದ ಲಕ್ಷಣವನ್ನೂ ಅತ್ಯಂತ ಸಂಕ್ಷೇಪವಾಗಿ, ತಿಳಿಯಾದ ಗದ್ಯದಲ್ಲಿ, ಗ್ರಂಥದ ಕಡೆಯಲ್ಲಿ 'ಅಲಂಕಾರ ಲಕ್ಷಣಂ' ಎಂಬ ಅನುಬಂಧದಲ್ಲಿ ಸೇರಿಸಿದ್ದಾರೆ.

ಗ್ರಂಥದಲ್ಲಿ, ಅರ್ಥಾಲಂಕಾರದ ಲಕ್ಷ್ಯ ಪದ್ಯಗಳು 100 ; ರಸಾಲಂಕಾರಗಳವು 7 ; ಪ್ರಮಾಣಾಲಂಕಾರಗಳು 8 ; ಸಂಸೃಷ್ಟಿ-ಸಂಕರಗಳು 5 – ಹೀಗೆ ಒಟ್ಟು 120 ಲಕ್ಷ್ಯ ಪದ್ಯಗಳೂ, ಇವಕ್ಕೆ ವಿವರಣೆಗಳೂ ನಿರೂಪಿತವಾಗಿವೆ.

'ಅನುಮಾನವೆಂಬ ಪ್ರಮಾಣದ ಲಕ್ಷ್ಯಪದ್ಯ :

"ಪಸರಿಸೆ ಕಱ್ತಲೆವೊಗೆ, ದಶ-
ದಿಶೆಗಳೊಳಂ ಮೆರೆಯೆ ತಾರಕಾಗ್ನಿ ಕಣಂಗಳ್
ಎಸೆಯೆ, ನೃಹರಿಜಟೆ ದಿವಿಜ-
ದ್ವಿಷರೊಡ್ಡಿಗೆ ಬಿಳ್ದುದರಿವೆನಗ್ನಿಯೆನುತ್ತುಂ."

[ಕತ್ತಲೆಯೆಂಬ ಹೊಗೆ ಹರಡಲು, ನಕ್ಷತ್ರಗಳೆಂಬ ಬೆಂಕಿಯ ಕಿಡಿಗಳು ಹತ್ತು ದಿಕ್ಕುಗಳಲ್ಲೂ ಮೆರೆಯಲು, ದೇವತೆಗಳ ಶತ್ರುಗಳ (ಎಂದರೆ ರಾಕ್ಷಸರ) ಸಮುದಾಯಕ್ಕೆ ನೃಸಿಂಹನ ಜುಟ್ಟು ಎಂಬ ಅಗ್ನಿ ಬಿದ್ದಿದೆಯೆಂದು ತಿಳಿಯುತ್ತೇನೆ.]

'ಅಪ್ರತಿಮ ವೀರಚರಿತೆ' ಮತ್ತು 'ನರಪತಿವಿಜಯ'ಗಳಲ್ಲಿ ಗ್ರಂಥ ರಚನೆಗೆ ರಾಜಭಕ್ತಿ ಪ್ರೇರಣೆ ಕೊಟ್ಟಿರುವಂತೆ, ಈ ಗ್ರಂಥದಲ್ಲಿ ಕುಲದೇವತಾ ಭಕ್ತಿ ಸ್ಫೂರ್ತಿ ಕೊಟ್ಟಿದೆ.

ರಸಪ್ರಕರಣ

ಕಾವ್ಯಶಾಸ್ತ್ರದಲ್ಲಿ 'ರಸ' ಎಂಬ ಮಾತಿಗೆ ಅತ್ಯಂತ ಹೆಚ್ಚಿನ ಬೆಲೆಯಿದೆ. ಕಾವ್ಯ ರಸವತ್ತಾಗಿರಬೇಕು ಎಂಬ ಮಾತನ್ನು ಎಲ್ಲ ಲಾಕ್ಷಣಿಕರೂ ಒಪ್ಪಿಕೊಂಡಿದ್ದಾರೆ. ತಾನು ಬರೆದದ್ದು ರಸವತ್ತಾಗಿರಬೇಕು, 'ರಸಿಕ'ರು (ಎಂದರೆ ಕಾವ್ಯದ ರಸದ ಸ್ವರೂಪವನ್ನು ಅರಿತು, ಆನಂದ ಹೊಂದಬಲ್ಲವರು) ಅದನ್ನು ಕೇಳಿಯೋ ಓದಿಯೋ ಸಂತೋಷಪಡಬೇಕು, ಎಂದು ಎಲ್ಲ ಕವಿಗಳೂ ಬಯಸುತ್ತಾರೆ.

ವೇದ ಮತ್ತು ಉಪನಿಷತ್ತುಗಳಲ್ಲಿ ಸೋಮರಸ ಎಂಬ ಮಾತು ಬರುತ್ತದೆ. ನೀರಿಗೂ ರಸ ಎಂಬ ಮಾತು ಬಳಕೆಯಾಗಿದೆ. ಬ್ರಹ್ಮ

ಸಾಕ್ಷಾತ್ಕಾರವನ್ನು (ಎಂದರೆ ಬ್ರಹ್ಮಸಾಕ್ಷಾತ್ಕಾರದ ಆನಂದವನ್ನು) ರಸ ಎಂದಿದೆ. (ರಸೋ ವೈ ಸಃ = ರಸವೇ ಅವನು).

'ರಸ' ಎನ್ನುವ ಮಾತು ಎಲ್ಲರಿಗೂ ಪರಿಚಿತವಾದದು. ಭೋಜನ 'ಷಡ್ರಸೋಪೇತ'ವಾಗಿರಬೇಕು (ಎಂದರೆ, ಸಿಹಿ, ಹುಳಿ, ಉಪ್ಪು, ಕಾರ, ಮುಂತಾದ 'ಆರು ಬಗೆಯ ರುಚಿಕರ ಗುಣ'ದಿಂದ ಕೂಡಿರಬೇಕು) ಎಂಬ ಮಾತು ರೂಢಿಯಾಗಿದೆ. ಹಾಗೆಯೆ, ಕಾವ್ಯವನ್ನು ರುಚಿಕರವಾಗಿ ಮಾಡಬಲ್ಲ ಅದರ ಗುಣ ಅಥವಾ ಸ್ವಭಾವವನ್ನು ಕಾವ್ಯದ ರಸ ಎನ್ನಬಹುದು. ರಸವಿಲ್ಲದ ಕಾವ್ಯ ರುಚಿಕರವಾಗಿರುವುದಿಲ್ಲ. ಕಾವ್ಯದ ರುಚಿಯನ್ನು ಬಲ್ಲವನ್ನು ರಸಿಕ. ಕಾವ್ಯದ ರಸವನ್ನು ಗುರುತಿಸಿ, ಅದನ್ನು ಸವಿಯುವ ಸಾಮರ್ಥ್ಯವೆ 'ಅಭಿರುಚಿ'. ಈ ಅಭಿರುಚಿಯನ್ನು ಅಭ್ಯಾಸದಿಂದ ಬೆಳಸಿಕೊಳ್ಳಬೇಕು.

ಶಾಸ್ತ್ರಗ್ರಂಥಗಳು ರಸವತ್ತಾಗಿರುವುದಿಲ್ಲ; ಹಾಗೆ ಇರಬೇಕಾದದ್ದೂ ಇಲ್ಲ. ಅವು ತಿಳಿವಳಿಕೆ ಕೊಡತಕ್ಕವು. ಕಾವ್ಯಕ್ಕೂ ಶಾಸ್ತ್ರಗ್ರಂಥಕ್ಕೂ ಇರುವ ಮುಖ್ಯ ವ್ಯತ್ಯಾಸ, ಈ ರಸವಂತಿಕೆ.

ಕ್ರೌಂಚ ಪಕ್ಷಿಗಳ ಜೋಡಿಯಲ್ಲಿ ಗಂಡುಹಕ್ಕಿ ಬೇಡನೊಬ್ಬನ ಬಾಣದ ಹೊಡೆತದಿಂದ ಸತ್ತು ಕೆಳಕ್ಕೆ ಬಿದ್ದಾಗ, ಇನ್ನೊಂದು ಪಕ್ಷಿಯ ಸಂಕಟವನ್ನು ಕಂಡು ವಾಲ್ಮೀಕಿಗೆ ಶೋಕ ಉಕ್ಕಿಬಂತು. ಈ ಶೋಕವೇ ಶ್ಲೋಕರೂಪದಲ್ಲಿ ಹೊರಹೊಮ್ಮಿತು ಎಂಬ ರಾಮಾಯಣದ ಪ್ರಸಂಗ ಪ್ರಸಿದ್ಧವಾಗಿದೆ. ವಾಲ್ಮೀಕಿಯ ಶೋಕಕ್ಕೆ ಕಾರಣ ಪಕ್ಷಿಯ ಶೋಕ; ಈ ಶೋಕದ ಭಾವ ಶ್ಲೋಕದ ಕವಿತೆಯಲ್ಲಿ ಪ್ರಕಟವಾಯಿತು. ಆ ಶೋಕಭಾವವನ್ನು ನಾವು ಕವಿತೆಯಲ್ಲಿ ಅನುಭವಿಸಿದಾಗ, ವಾಲ್ಮೀಕಿ ಬೇಡನ ವಿಚಾರದಲ್ಲಿ ಕೋಪಗೊಂಡು ಹೆಣ್ಣುಹಕ್ಕಿಯನ್ನು ಸಂತವಿಟ್ಟ ಹಾಗೆ ಸಂತವಿಡಲಾರೆವು. ಆದರೆ, ಎಂದೋ ಸತ್ತ ಹಕ್ಕಿಯ ಬಗೆಗೆ ಮರುಕವುಂಟಾಗುತ್ತದೆ; ನಾವು ವಾಲ್ಮೀಕಿಯಂತೆ ಕಾರ್ಯಪ್ರವೃತ್ತವಾಗುವುದಿಲ್ಲ; ನಾವು ಅನುಭವಿಸುವ ಶೋಕದ ಭಾವ ಲೋಕದಲ್ಲಿ ಅನುಭವಿಸುವುದಾಗಿರದೆ, ಕಾವ್ಯಲೋಕದಲ್ಲಿ ಅನುಭವಿಸುವುದಾಗಿರುತ್ತದೆ. ಈ ಅನುಭವವೇ ರಸಾನುಭವ; ಅನುಭವಿಸಿದ್ದು ಕರುಣರಸ. (ಆದಿಕಾವ್ಯವೆನಿಸಿದ ರಾಮಾಯಣವು ಕರುಣರಸ ಪ್ರಧಾನವಾದುದು.)

ಈ ರಸದ ವಿಚಾರವನ್ನು ಮೊತ್ತಮೊದಲು ಶಾಸ್ತ್ರೀಯವಾಗಿ ತಿಳಿಸಿದವನು ಭರತಮುನಿ; ತನ್ನ ನಾಟ್ಯಶಾಸ್ತ್ರದಲ್ಲಿ. ಆತ ರಸದ ವಿಚಾರವನ್ನೆಲ್ಲ ನಾಟ್ಯಕ್ಕೆ ಸಂಬಂಧಪಟ್ಟಂತೆ ವಿವರಿಸಿದ್ದಾನೆ. ಅವನ ಮತದಂತೆ ರಸಗಳು ಎಂಟು. ಅವು ಯಾವುವೆಂದರೆ–ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ. ಭರತನ ಅಭಿಪ್ರಾಯದಂತೆ ವಿಭಾವ, ಅನುಭಾವ, ವ್ಯಭಿಚಾರಿ (ಅಥವಾ ಸಂಚಾರಿ) ಭಾವಗಳ ಸಂಯೋಗದಿಂದ ರಸವು ಉತ್ಪತ್ತಿಯಾಗುತ್ತದೆ.

[ಭರತನು ತನ್ನ ಸೂತ್ರದಲ್ಲಿ ಸ್ಥಾಯೀಭಾವವನ್ನು ಸೇರಿಸಿಲ್ಲ. ಅದಕ್ಕೆ ಕಾರಣ ಏನೆಂಬ ವಿವರಣೆ ತೊಡಕಿನದಾದ್ದರಿಂದ, ಇಲ್ಲಿ ಅದರ ಚರ್ಚೆ ಭಾರವಾಗಬಹುದು. ಆದರೆ ಬೇರೆಯ ಸಂದರ್ಭದಲ್ಲಿ ಅದನ್ನವನು ಪ್ರಸ್ತಾಪಿಸುತ್ತಾನೆ. ರಸ ವಿಷಯಕವಾದ ಕನ್ನಡ ಲಕ್ಷಣ ಗ್ರಂಥಗಳ ಬಗೆಗೆ ವಿಚಾರ ಮಾಡುವಾಗ ಈ ಶಾಸ್ತ್ರೀಯ ಶಬ್ದಗಳು ಕಾಣಿಸಿಕೊಳ್ಳುವುದರಿಂದ, ಅವುಗಳ ಸ್ವರೂಪವನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸಿದೆ :

ನಾವು ಸುಖದುಃಖಗಳನ್ನು ಅನುಭವಿಸುವಾಗ ನಮ್ಮ ಚಿತ್ತವು ಸಮುದ್ರದಂತೆ ಕಲಕುತ್ತದೆ. ಅಲೆಗಳಂತೆ ವಿವಿಧ ವಿಕಾರಗಳು ಕಾಣಿಸಿಕೊಳ್ಳುತ್ತವೆ. ಚಿತ್ತವಿಕಾರವೆ 'ಚಿತ್ತವೃತ್ತಿ' ಅಥವಾ 'ಭಾವ'. ಸ್ಥಿರವಾಗಿ ಇರತಕ್ಕ ಇವು 'ಸ್ಥಾಯೀ ಭಾವಗಳು'. ಈ ಭಾವಗಳಲ್ಲಿ ಕೆಲವು ದೊಡ್ಡವು; ಇವುಗಳನ್ನು ಅನುಗೂಡಿ ಸಣ್ಣವು ಬಂದು ಹೋಗಿ ಮಾಡುತ್ತವೆ. ಸಂಚರಿಸುತ್ತಿರುತ್ತವೆ: ಇವು 'ಸಂಚಾರಿ' ಅಥವಾ 'ವ್ಯಭಿಚಾರಿ' ಭಾವಗಳು. ಉದಾಹರಣೆಗೆ 'ರತಿ' (ಪ್ರೀತಿ) ಒಂದು ಸ್ಥಾಯೀ ಭಾವ; ಲಜ್ಜೆ, ಹರ್ಷ, ಅಸೂಯೆ, ಇವು ಅದನ್ನು ಅನುಸರಿಸಿ ಬರಬಹುದು. ಈ ಸ್ಥಾಯೀ ಭಾವಕ್ಕೂ ಸಂಚಾರಿ ಭಾವಕ್ಕೂ ಇರುವ ಸಂಬಂಧವನ್ನು ಭರತನು ರಾಜ–ಪ್ರಜೆಗಳ, ಗುರು-ಶಿಷ್ಯರ ಸಂಬಂಧಕ್ಕೆ ಹೋಲಿಸಿದ್ದಾನೆ. ಸ್ಥಾಯೀ ಭಾವಗಳು ಎಂಟು (ಅಥವಾ ಒಂಬತ್ತು) : ರತಿ (ಪ್ರೀತಿ) ಹಾಸ್ಯ (ವಿನೋದ), ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ (ಅಸಹ್ಯತೆ), ವಿಸ್ಮಯ (ಆಶ್ಚರ್ಯ) ; ಈ ಎಂಟು ಸ್ಥಾಯೀಭಾವಗಳೇ ಕ್ರಮವಾಗಿ ಈ ಹಿಂದೆ ಹೇಳಿದ ಎಂಟು ರಸಗಳಾಗಿ ಪರಿಣಮಿಸುತ್ತವೆ. ಶಮ(ಶಾಂತಿ)ದಿಂದ ಶಾಂತರಸ. ಸಂಚಾರಿ ಭಾವಗಳು ಮೂವತ್ತುಮೂರು.

ನಮ್ಮ ಚಿತ್ತವು ಕಲಕಿ 'ಭಾವ'ಗಳು ಉದ್ರೇಕಗೊಳ್ಳಬೇಕಾದರೆ, ಕಾರಣ ಬೇಕು. ಹೊರ ಜಗತ್ತಿನಲ್ಲಿ ನಡೆಯುವ ಸಂಗತಿಗಳು ಅಂತಹ ಕಾರಣಗಳು. ಇವನ್ನು 'ವಿಭಾವ' ಎಂದು ಕರೆದಿದೆ. ಹುಲಿಯನ್ನು ಕಂಡಾಗ ನಮಗೆ ಭಯವಾಗುತ್ತದೆ. ಹುಲಿ ಭಯಕ್ಕೆ ಕಾರಣ, ಅಥವಾ ವಿಭಾವ ; ಭಯ ಒಂದು ಚಿತ್ತವೃತ್ತಿ, ಭಾವ. ಭಯಪಡುವಿಕೆ ನಮ್ಮ ಮುಖ ಬಿಳಿಚಿಕೊಳ್ಳುವುದು (ವಿವರ್ಣತೆ), ಬೆವರುವುದು (ಸ್ವೇದ), ಕೈಕಾಲು ನಡುಗುವುದು

(ವೇಪಥು) ಮುಂತಾದ ಕಾರ್ಯರೂಪದಲ್ಲಿ ಪ್ರಕಟವಾಗುತ್ತವೆ. ಈ ಭಾವಪ್ರಕಟನೆಯ ಕಾರ್ಯ 'ಸಾತ್ವಿಕ ಭಾವ' ಎಂದು ಹೆಸರು ಪಡೆದಿದೆ. ಇದಿಷ್ಟು ಲೋಕದ ವಿದ್ಯಮಾನ.

ಇವೇ ನಾಟ್ಯ ನಾಟಕಗಳಲ್ಲಿ ಅಭಿನಯಾದಿಗಳ ಮೂಲಕವೂ ಕಾವ್ಯಗಳಲ್ಲಿ ವರ್ಣನೆಯ ಮೂಲಕವೂ ಅನುಕರಣ ರೂಪದಲ್ಲಿ ಗೋಚರವಾಗುತ್ತವೆ. ಕಾವ್ಯಜಗತ್ತಿನಲ್ಲಿ ಸ್ಥಾಯಿೀ ಭಾವಗಳ ಕಾರಣ, ಸಹಚಾರಿ, ಕಾರ್ಯ, ಇವುಗಳನ್ನು ವಿಭಾವ, ಸಂಚಾರಿ ಭಾವ, ಅನುಭಾವ ಎಂದು ಕರೆಯಲಾಗಿದೆ. ಸ್ಥಾಯಿೀ ಭಾವಗಳನ್ನು ಉಂಟುಮಾಡುವ ವಸ್ತು 'ಆಲಂಬನ ವಿಭಾವ' ಎಂದೂ, ಅವನ್ನು ಉದ್ರೇಕಗೊಳಿಸುವ ವಸ್ತು 'ಉದ್ದೀಪನ ವಿಭಾವ' ಎಂದೂ ನಿರ್ದಿಷ್ಟವಾಗಿವೆ.

ಈ ವಿಭಾವ, ಅನುಭಾವ, ಸಂಚಾರಿ ಭಾವಗಳ ಯಥೋಚಿತವಾದ ಸಂಯೋಗ ಅಥವಾ ಒಡಗೂಡುವಿಕೆ ರಂಗದಮೇಲೆ ಅಥವಾ ಕಾವ್ಯದಲ್ಲಿ ಏರ್ಪಟ್ಟಾಗ, ಅಲ್ಲಿನ ರತಿ ಮೊದಲಾದ ಸ್ಥಾಯಿೀ ಭಾವಗಳು ಗೋಚರಕ್ಕೆ ಬಂದು, ಪ್ರೇಕ್ಷಕ ಅಥವಾ ವಾಚಕನಲ್ಲೂ ಸಂಸ್ಕಾರ ರೂಪದಲ್ಲಿ ಹುದುಗಿರುವ ಆ ಭಾವಗಳು ಮೇಲಕ್ಕೆ ಬಂದು, ಅವನ್ನು 'ರಸ' ರೂಪದಲ್ಲಿ ಅವನು ಸವಿಯುತ್ತಾನೆ. ಕಾವ್ಯದ ರತಿ ಮುಂತಾದ ಭಾವಗಳು ಅವನಿಗೆ ನೇರವಾಗಿ ಸಂಬಂಧಪಡದೆ ಇರುವುದರಿಂದ (ಎಂದರೆ 'ಮಮತೆ' ಅಡ್ಡಿಯಾಗದೆ ಇರುವುದ ರಿಂದ) ಅವುಗಳನ್ನು ಅವನು 'ಸವಿ'ಯುವುದು ಸಾಧ್ಯ. ರಸ ಅನುಭವಕ್ಕೆ ಬರುವುದು ಕವಿ ಮತ್ತು ವಾಚಕರಲ್ಲಿ ಮಾತ್ರ.]

ಕಾಳಿದಾಸನೂ ಎಂಟೇ ರಸಗಳನ್ನು ಹೇಳಿದ್ದಾನೆ. ಕವಿರಾಜಮಾರ್ಗ ಕ್ಕಿಂತ ಹಿಂದೆ ಸಂಸ್ಕೃತ ಲಕ್ಷಣಕಾರರಾದ ದಂಡಿಭಾಮಹಾದಿಗಳು ಕೂಡ 'ನವರಸ'ಗಳ ಪ್ರಸ್ತಾಪ ಮಾಡಿಲ್ಲ. ಎಂಟು ರಸಗಳ ಜೊತೆಗೆ ಶಾಂತರಸ ವನ್ನೂ ಒಂಬತ್ತನೆಯ ರಸವಾಗಿ ಮೊತ್ತಮೊದಲು ಹೇಳಿದವನು ಕವಿರಾಜ ಮಾರ್ಗಕಾರನೆ. ಕಾವ್ಯಾವಲೋಕನದಲ್ಲಿ ನಾಗವರ್ಮನೂ ಎಂಟೇ ರಸಗಳನ್ನು ಹೇಳಿದ್ದಾನೆ. ಈ ಗ್ರಂಥಗಳಲ್ಲಿ ರಸತತ್ತ್ವದ ವಿವರಣೆ ಇಲ್ಲ. 'ರಸವತ್' ಎಂಬ ಅಲಂಕಾರವನ್ನು ಮಾತ್ರ ಹೇಳಿ, ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆಯನ್ನು ಕೊಡಲಾಗಿದೆ. "ನವವಿಧ ರಸಂಗಳಂ ಮನಕೆವರೆ ನಿರೂಪಿಸುವ ವಚನವಿರಚನೆ ರಸವದ್ ವಿವಿಧಾಳಂಕಾರಂ"—ಎಂಬುದಿಷ್ಟೇ ಕವಿ ರಾಜಮಾರ್ಗದಲ್ಲಿ ಕೊಟ್ಟಿರುವ ರಸವದಲಂಕಾರದ ವಿವರಣೆ. 'ರೌದ್ರರಸದ ಈ ಉದಾಹರಣೆಯನ್ನು ನೋಡಿ :

ಕೊಂದು ಜಟಾಯುವಂ ಆತಂ
ಮುಂದಿಟ್ಟು ಆ ಜನಕ ಸುತೆಯಂ ಒಯ್ದಂ ಮತ್ತಾ

ಪಂದೆಯುಂ ಅಂತಕಮುಖದೊಳ್
ತಂದಿಟ್ಟಂದಲ್ಲದೆ, ಉಳಿಗುಮೇ ರೌದ್ರರಸಂ.

[ಪಂದೆ – ಹೇಡಿ ; ಅಂತಕ ಮುಖ – ಯಮನ ಬಾಯಿ.]

ರಾಮಾಯಣದ ಕಥೆಗೆ ಸಂಬಂಧಿಸಿದ ಈ ಪದ್ಯದಲ್ಲಿ (ಬಹುಶಃ) ರಾವಣನ ಬಗೆಗೆ ರಾಮನು ಉಗ್ರ ಕ್ರೋಧ (ಕೋಪ)ವನ್ನು ತಳೆದು ಪ್ರತಿಜ್ಞೆ ಮಾಡಿದ್ದನ್ನು ವರ್ಣಿಸಿದೆ.

ನಾಗವರ್ಮನು ರಸ ವಿಚಾರವನ್ನು ಚರ್ಚಿಸದಿದ್ದರೂ ರಸವೇ ಕಾವ್ಯದ ಜೀವ ಎಂದು ಹೇಳಿರುವುದನ್ನು ಈ ಮೊದಲೇ ಗಮನಿಸಿದ್ದೇವೆ. ಅವನು ಎಂಟು ರಸಗಳನ್ನೂ, ಅವುಗಳ ಸ್ಥಾಯಿಭಾವಗಳನ್ನೂ ತಿಳಿಸಿ, ಅವಕ್ಕೆ ಉದಾಹರಣೆಗಳನ್ನು ಕೊಟ್ಟು, ರಸ ವಿಚಾರವನ್ನು ಭರತನ ನಾಟ್ಯ ಶಾಸ್ತ್ರದಲ್ಲಿ ತಿಳಿಯಬೇಕು ಎಂದು ಸೂಚಿಸಿದ್ದಾನೆ, ಅಷ್ಟೆ.

ಶೃಂಗಾರ ರತ್ನಾಕರ

ಮೊತ್ತಮೊದಲಿಗೆ ರಸತತ್ತ್ವವನ್ನು ವಿವರಿಸುವ ಗ್ರಂಥವೆಂದರೆ ಕವಿ ಕಾಮನ 'ಶೃಂಗಾರ ರತ್ನಾಕರ'. ಇದಕ್ಕೆ 'ರಸವಿವೇಕ' ಎಂಬ ಇನ್ನೊಂದು ಹೆಸರೂ ಉಂಟು. ಇವನ ಕಾಲವನ್ನು ಸುಮಾರು 1100–1200ರ ನಡುವಣ ಕಾಲ ಎಂದು ಊಹಿಸಬಹುದು. ಕಾಮನ ಪೂರ್ತಿಯಾದ ಹೆಸರು ಕಾಮದೇವ. ಗ್ರಂಥದ ಮೊದಲ ಮಂಗಳ ಶ್ಲೋಕದಲ್ಲಿ ಪ್ರೇಮದ ಅಧಿದೇವತೆಯಾದ ಕಾಮನ ಪ್ರಾರ್ಥನೆಯಿದೆ. ಇದರಲ್ಲಿ ಗ್ರಂಥಕರ್ತನು ತನ್ನ ವಿಚಾರವನ್ನು ಸೂಚಿಸಿದ್ದಾನೆ : ಕವಿಕಾಮನು ರಮ್ಯವಾದ ಆಕಾರವುಳ್ಳವನು; ರಾಜರಿಗೆ ಪ್ರಿಯನಾದವನು; ಕಾಮತತ್ತ್ವವನ್ನು ಬಲ್ಲವನು. ಇವನ ಇನ್ನು ಕೆಲವು ಹೇಳಿಕೆಗಳಿಂದ, ಇವನು ಅನೇಕ ರಾಜರ ಆಸ್ಥಾನಗಳಲ್ಲಿ ಮನ್ನಣೆಗೆ ಪಾತ್ರನಾಗಿದ್ದನೆಂದು ಊಹಿಸಬಹುದು; ಅಲ್ಲದೆ, ಅವನು ಆಶುಕವಿಯೂ ವಾಗ್ಮಿಯೂ ಆಗಿದ್ದನು. ತಾನು, "ಶ್ರೀನಿಧಿ, ವಿವೇಕನಿಧಿ, ಕವಿತಾನಿಧಿ, ವಿದ್ಯಾನಿಧಿ, ಮಾನನಿಧಿ, ದಾನನಿಧಿ" ಎಂದು ಹೊಗಳಿಕೊಂಡಿದ್ದಾನೆ. ಕಾಮದೇವನು ವೈದಿಕ ಮತಾನುಯಾಯಿಯಾದ ಶೈವನೆಂದು ತೋರುತ್ತದೆ. ಶೃಂಗಾರ ಪರವಾದ ಅನೇಕ ಉದಾಹರಣ ಪದ್ಯಗಳಲ್ಲಿ ಕವಿಕಾಮನೇ ವರ್ಣಿತನಾದ ನಾಯಕನಾಗಿದ್ದಾನೆ. ಈ ವರ್ಣನೆಗಳ ವಿಷಯವೆಲ್ಲ ಕವಿಗೇ ಅನ್ವಯಿಸುತ್ತದೆಯೋ ಇಲ್ಲವೋ

ಹೇಳುವುದು ಕಷ್ಟ. ಉದಾಹರಣೆಯಾಗಿ, ನಾಯಕನ (ಕವಿಯ) 'ಅವಧಾನ' (ಗಮನವಿಡುವುದು) ಸಾಮರ್ಥ್ಯವನ್ನು ವರ್ಣಿಸುವ ಈ ಪದ್ಯ ಸ್ವಾರಸ್ಯ ವಾಗಿದೆ. ನಾಯಿಕೆ ತನ್ನ ಚೇಟಿಗೆ ಹೀಗೆ ಹೇಳುತ್ತಾಳೆ :

''ಎಸಕಂಬೆತ್ತ ಮತಿ ಪ್ರಕಾಶಮಮಂ ಆದಂ ಇನ್ನೇನೆಂದಪೆಂ, ಚೇಟಿ : ನಾ-
ಲ್ದೆಸೆಯೊಳ್ ನಾಲ್ವರ ಕಂಠದೊಳ್ ಬರೆಯೆ ಕಬ್ಬಂಬೇಳ್ವಂ ; ಒಲ್ದತ್ತಲ್ ಆ-
ಡಿಸುವಂ ನೆತ್ತಮಂ; ಇತ್ತಲೋದಿದೊಡೆ ತಪ್ಪಂ ಪೇಳ್ದುದಂ ತಿರ್ದಿ, ಆ,''
ಲಿಸುವಂ ಗೀತಮಂ; ಎನ್ನುವಂ, ನಗಿಸುವಂ, ಶೃಂಗಾರರತ್ನಾಕರಂ

(1-58)

['ಎಲೇ ಚೇಟಿ, ಶೃಂಗಾರರತ್ನಾಕರನಲ್ಲಿ ಪ್ರಕಟವಾಗುವ ಬುದ್ಧಿಯ ಪ್ರಕಾಶವನ್ನು ಏನೆಂದು ಹೇಳಲಿ! ನಾಲ್ಕು ದಿಕ್ಕಿನಲ್ಲಿ ನಾಲ್ಕುಮಂದಿ ಲೇಖಕರು ಕಂಠವನ್ನು ಹಿಡಿದು ಕುಳಿತಿರುವಾಗ ನಾಲ್ವರಿಗೂ ಏಕಕಾಲದಲ್ಲಿ ನಾಲ್ಕು ಕವಿತೆಯನ್ನು ಹೇಳಿ ಬರೆಯಿಸುವನು; ಆ ಕಡೆಯಲ್ಲಿ ಪಗಡೆಕಾಯಿ ನಡಸುವನು; ಈ ಕಡೆಯಲ್ಲಿ ಓದಿ ಹೇಳಿದ್ದರಲ್ಲಿ ತಪ್ಪನ್ನು ತಿದ್ದುವನು; ಗೀತವನ್ನು ಹಾಡುವನು; ಹಾಸ್ಯದ ಮಾತಾಡಿ ನನ್ನನ್ನೂ ನಗಿಸುವನು.]

ನಮ್ಮ ನಾಡಿನಲ್ಲಿ 'ಅವಧಾನಿ'ಗಳು, 'ಅಷ್ಟಾವಧಾನಿ'ಗಳು, 'ಶತಾವ ಧಾನಿ'ಗಳು ಇದ್ದರು; ಈಗಲೂ ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ; ರಾಜಾಸ್ಥಾನಗಳಲ್ಲಿಯೂ ವಿದ್ವಾಂಸರ ಸಭೆಗಳಲ್ಲಿಯೂ ಇವರು ತಮ್ಮ ಸಾಮರ್ಥ್ಯವನ್ನು ಮೆರೆದು ಬಹುಮಾನ ಪಡೆಯುತ್ತಿದ್ದರು. ಆದ್ದರಿಂದ ಮೇಲ್ಕಂಡ ಪದ್ಯದಲ್ಲಿ ಕವಿ ಕಾಮನು ತನ್ನ ಸಾಮರ್ಥ್ಯವನ್ನೇ ವರ್ಣಿಸಿ ಕೊಂಡಿದ್ದರೆ ಆಶ್ಚರ್ಯವಿಲ್ಲ.

ಕವಿ ಮುಖಮಣಿಮುಕುರಂ, ನವರಸವಿಭಾಸಿ ಕವಿಮುಖ ಮುಕುರಂ, ಮದನಾಗಮ ಸೂತ್ರಧಾರ, ಕವಿತಾಪಿತಾಮಹ, ಸರಸ್ವತೀಮುಖತಿಲಕ, ವಾಚಕ ವಾಚಸ್ಪತಿ, ಗದ್ಯಪದ್ಯವಿದ್ಯಾಧರ, ಶೃಂಗಾರರತ್ನಾಕರ, ಎಂದು ಮೊದಲಾಗಿ ಕವಿಕಾಮನು ಅನೇಕ ಬಿರುದುಗಳನ್ನು ಹೇಳಿಕೊಂಡಿದ್ದಾನೆ ತನ್ನ ಒಂದು ಬಿರುದನ್ನೇ ಗ್ರಂಥದ ಹೆಸರಾಗಿ ಇಟ್ಟಿದ್ದಾನೆ. ಸಂಸ್ಕೃತದಲ್ಲಿ 'ಶೃಂಗಾರ ಪ್ರಕಾಶ' ಎಂಬ ಅಲಂಕಾರ ಗ್ರಂಥವನ್ನು ಬರೆದಿರುವ ಭೋಜ ರಾಜನೂ (1010–1063) ತನ್ನ ಒಂದು ಬಿರುದನ್ನೇ ಗ್ರಂಥನಾಮವನ್ನಾಗಿ ಮಾಡಿದ್ದಾನೆ. ಈ ವಿಚಾರದಲ್ಲಿ, ಮತ್ತು ಇನ್ನೂ ಕೆಲವು ವಿಚಾರಗಳಲ್ಲಿ ಕವಿಕಾಮನು ಭೋಜನನ್ನು ಅನುಸರಿಸಿರುವಂತೆ ಕಾಣುತ್ತದೆ. ಸಾಳ್ವನು ತನ್ನ 'ರಸರತ್ನಾಕರ'ದಲ್ಲಿ ಶೃಂಗಾರರತ್ನಾಕರದಿಂದ ಸುಮಾರು 65 ಪದ್ಯ

ಗಳನ್ನು ತೆಗೆದುಕೊಂಡಿದ್ದಾನೆ. 'ನವರಸಾಲಂಕಾರ'ವನ್ನು ಬರೆದಿರುವ ತಿಮ್ಮನೂ ಈ ಕೃತಿಯಿಂದ ಅನೇಕ ಪದ್ಯಗಳನ್ನು ಸ್ವೀಕರಿಸಿರುವುದಾಗಿ ತಿಳಿದು ಬರುತ್ತದೆ. ಇದರಿಂದ, ಮುಂದಿನ ರಸ ಶಾಸ್ತ್ರಗ್ರಂಥಕರ್ತರಮೇಲೆ ಕವಿ ಕಾಮನು ಬೀರಿರುವ ಪ್ರಭಾವ ಎಷ್ಟೆಂಬುದು ಗೊತ್ತಾಗುತ್ತದೆ. ಈ ಕಾರಣ ದಿಂದಲೂ, ಶೃಂಗಾರರತ್ನಾಕರವು ಮೊತ್ತಮೊದಲನೆಯ ರಸ ಶಾಸ್ತ್ರಗ್ರಂಥ ವಾಗಿರುವುದರಿಂದಲೂ ಕನ್ನಡ ಲಕ್ಷಣ ಗ್ರಂಥಗಳ ಚರಿತ್ರೆಯಲ್ಲಿ ಇದರ ಸ್ಥಾನ ವಿಶೇಷ ರೀತಿಯದು; ಬೆಲೆಯುಳ್ಳದ್ದು. ಪಾರ್ಶ್ವಪಂಡಿತನು (ಕ್ರಿ.ಶ. 1205) ಕವಿಕಾಮನನ್ನು ಹೊಗಳುವ ಪದ್ಯವೊಂದರಲ್ಲಿ ಅವನ 'ಸ್ತನಶತಕ' ಎಂಬ ಗ್ರಂಥದ ಹೆಸರು ಹೇಳಿದ್ದಾನೆ. ಈ ಕೃತಿ ದೊರೆತಿಲ್ಲ. ತಾನು 'ಗದ್ಯಪದ್ಯ ವಿದ್ಯಾಧರ' ಎಂದು ಹೇಳಿಕೊಂಡಿರುವುದರಿಂದ, ಕವಿಕಾಮನು ಇನ್ನೂ ಕೆಲವು ಕೃತಿಗಳನ್ನು ರಚಿಸಿರಬಹುದು.

ಕೃತಿಪರಿಚಯ : ರಸತತ್ತ್ವವನ್ನು ನಿರೂಪಿಸುವ ಈ ಗ್ರಂಥದಲ್ಲಿ– "ರಸಮಂ ಕಾವ್ಯಂಗಳೊಳ್ ರಂಜಿಸಬಲ್ಲಾತನೆ...ವಿಖ್ಯಾತಿಯಂ ತಾಳ್ದುಗುಂ", "ರಸಮೆ ಮೊದಲ್ ಕವಿತೆಗೆ", "ರಸಯುಕ್ತರ ಸಭೆಯೊಳ್ ರಂಜಿಸಲರಿಯದ. ಕವಿತೆ ವಿರಸಮಂ ಪುಟ್ಟಿಸುಗುಂ",–ಎಂದು ಮುಂತಾಗಿ ಕಾವ್ಯದಲ್ಲಿ ರಸದ ಪ್ರಾಶಸ್ತ್ಯವನ್ನು ಎತ್ತಿಹಿಡಿದಿರುವುದು ಉಚಿತವಾಗಿದೆ. ಕನ್ನಡದಲ್ಲಿ ಆಗಿಬಂದ ಅಲಂಕಾರಶಾಸ್ತ್ರದ ಬೆಳವಣಿಗೆಯಲ್ಲಿ ಈ ಮಾತು ಒಂದು ಬಹು ಮುಖ್ಯವಾದ ಘಟ್ಟವನ್ನು ಗುರುತಿಸುತ್ತದೆ. ಅಲ್ಲದೆ, ಈ ಕೃತಿಯಲ್ಲಿ ಶೃಂಗಾರರಸಕ್ಕೆ ಪ್ರಾಧಾನ್ಯ ಕೊಟ್ಟಿರುವುದು ಕವಿ ಶೃಂಗಾರರಸಪ್ರಿಯ ಎನ್ನುವುದನ್ನು ಸೂಚಿ ಸುವುದಲ್ಲದೆ, 10-11ನೆಯ ಶತಮಾನಗಳಲ್ಲಿ ವೀರರಸಕ್ಕೂ ಶಾಂತರಸಕ್ಕೂ ಇದ್ದ ಪ್ರಾಧಾನ್ಯ ಕುಗ್ಗಿ, ಶೃಂಗಾರರಸ ಕವಿಗಳಿಗೂ ಜನಕ್ಕೂ ಹೆಚ್ಚು ಪ್ರಿಯವಾಗಿ ಪರಿಣಮಿಸಿದ್ದನ್ನೂ ಸೂಚಿಸುತ್ತದೆ. ವಿಚಾರಮಾಡಿ ನೋಡಿದರೆ, ಶೃಂಗಾರ ಎಲ್ಲ ಕಾಲಗಳಲ್ಲಿಯೂ ಜನಪ್ರಿಯವಾದ ರಸ. ಧರ್ಮ ಅರ್ಥ ಕಾಮ ಮೋಕ್ಷ ಗಳಲ್ಲಿ, ಕಾಮವೂ ಒಂದು ಪುರುಷಾರ್ಥವಾಗಿ ಎಣಿಕೆಯಾಗಿದೆ. ಭೋಜನ ಅಭಿಪ್ರಾಯದಂತೆ, ಶೃಂಗಾರವೇ ಎಲ್ಲ ರಸಗಳಿಗೂ ಮೂಲ. ಈ ವಿಚಾರಸಾರ ಕವಿಕಾಮನ ಮಾತುಗಳಲ್ಲಿ ಚೆನ್ನಾಗಿ ವ್ಯಕ್ತಪಟ್ಟಿದೆ :

ಶೃಂಗಾರರಸಂ ಮಿಕ್ಕ ರ-
ಸಂಗಳ್ಗೆ ಅಧಿದೈವಂ, ಅದನೆ ನರರ್ ಓಲಗಿಪರ್;

ಪಿಂಗದೆ ರೂಪಾವಯವ ಸು-
ಸಂಗತ ಯೌವನ ಮಹತ್ತುರಂಗಾರೂಢಂ. (1-23)

[ಶೃಂಗಾರರಸವೇ ಉಳಿದೆಲ್ಲ ರಸಗಳಿಗೂ ಅಧಿದೈವ. ಮನುಷ್ಯರು ಸೇವಿಸುವುದು ಅದನ್ನೇ. ಒಳ್ಳೆಯ ರೂಪ, ಪುಷ್ಟವಾದ ಅವಯವಗಳು, ಇವಕ್ಕೆ ಹೊಂದಿಕೊಂಡ ಯೌವನ ಎಂಬ ಕುದುರೆಯ ಮೇಲೆ ಕುಳಿತಿದೆ.]

ಇದು ಕೇವಲ ಶಾಸ್ತ್ರದ ಮಾತಲ್ಲ. ಲೋಕಾನುಭವದ, ಪ್ರಕೃತಿ ನಿಯಮದ ಅರಿವಿನ, ಮಾತುಕೂಡ ಆಗಿದೆ.

"ಆದ್ದರಿಂದ, ಶೃಂಗಾರರಸಪ್ರೀತಿ ಸಕಲಜನಕ್ಕೂ ಸಾಧಾರಣವಾಗಿರುವುದರಿಂದ, ಮೊದಲಲ್ಲೆ ಶೃಂಗಾರರಸದ ಬೇರೆಬೇರೆ ವಿಭಾಗಗಳನ್ನು ವರ್ಣಿಸುತ್ತೇನೆ" ಎಂದು ಶೃಂಗಾರರಸಕ್ಕೆ ಪ್ರಾಶಸ್ತ್ಯ ಕೊಟ್ಟಿರುವುದಕ್ಕೆ ಕಾರಣವನ್ನು ತಿಳಿಸುತ್ತಾನೆ ಕವಿಕಾಮ.

ರಸೋತ್ಪತ್ತಿಯ ವಿಚಾರದಲ್ಲಿ ಇವನು ಈ ಹಿಂದೆಯೇ ಪ್ರಸ್ತಾಪಿಸಿರುವ ಭರತನ ಅಭಿಪ್ರಾಯವನ್ನು ಅನುಸರಿಸಿಲ್ಲ. ಕೆಲವು ಅಂಶಗಳಲ್ಲಿ ಭೋಜನ ಮತವನ್ನು ಅಂಗೀಕರಿಸಿರುವಂತೆ ಕಾಣುತ್ತದೆ.

ಕವಿಕಾಮನ ವಿಚಾರಮಾರ್ಗ ಹೀಗಿದೆ :

ಶೃಂಗಾರದಿಂದ ಹಾಸ್ಯವೂ, ರೌದ್ರದಿಂದ ಕರುಣವೂ, ವೀರದಿಂದ ಅದ್ಭುತವೂ, ಬೀಭತ್ಸದಿಂದ ಭಯಾನಕವೂ ಹುಟ್ಟುವುವು ಎಂದು ಹೇಳಿ, ಈ ರಸಗಳ ವರ್ಣಗಳನ್ನೂ ಅಧಿದೈವಗಳನ್ನೂ ಹೆಸರಿಸುತ್ತಾನೆ. ಉದಾಹರಣೆಗೆ, ಶೃಂಗಾರದ ಬಣ್ಣ ಕಪ್ಪು, ದೈವ ಹರಿ. ಬಳಿಕ, ರಸೋತ್ಪತ್ತಿಯ ವಿಚಾರ ತಿಳಿಸುತ್ತಾನೆ.

ಪಂಚಭೂತಗಳಿಂದ ಆಗಿರುವ ಶರೀರದಲ್ಲಿ ಜೀವ (ಆತ್ಮ); ಆ ಜೀವನು ಅಂತಃಕರಣದ ಮೂಲಕ ಕಾರ್ಯಮಾಡುತ್ತಾನೆ. ಆ ಅಂತಃಕರಣ ಮನಸು, ಬುದ್ಧಿ, ಅಹಂಕಾರ, ಚಿತ್ತಗಳಿಂದ ಕೂಡಿದೆ; ಚಿತ್ತದಿಂದ ಭಾವ; ಭಾವದಿಂದ ರಸಗಳು; ರಸವನ್ನು ವಕ್ತ್ರ (ಮುಖ) ಪ್ರಕಟಿಸುತ್ತದೆ; ಮುಖಭಂಗಿಯ ಭೇದದಿಂದ ರಸಭೇದವನ್ನು ತಿಳಿಯಬೇಕು.

(ಕಥನಾಯಕನ ಅಥವಾ ನಟನ) ಮುಖದಲ್ಲಿ ‹ರಸ' ಪ್ರಕಟವಾಗುತ್ತದೆ ಎಂಬ ಕವಿಕಾಮನ ಅಭಿಪ್ರಾಯ ಶಾಸ್ತ್ರಸಮ್ಮತವಲ್ಲ. ಮುಖದಲ್ಲಿ ಪ್ರಕಟವಾಗುವುದು ‹ಭಾವ'.

ಆದರೆ, ಭಾವವನ್ನು ಪ್ರಕಟಿಸುವುದರಲ್ಲಿ ಎಲ್ಲ ಅಂಗಗಳಿಗಿಂತ ಮುಖದ ಪಾತ್ರ ಹಿರಿದು, ಇದನ್ನು ಆದನು ಎತ್ತಿ ಹೇಳಿರುವುದು ಉಚಿತವಾಗಿದೆ. ಈ ಸಂದರ್ಭದಲ್ಲಿ Face is the index of mind (ಮುಖ ಮನಸ್ಸಿನ ಕನ್ನಡಿ) ಎಂಬ ಇಂಗ್ಲಿಷ್ ಸೂಕ್ತಿಯನ್ನು ಜ್ಞಾಪಿಸಿಕೊಳ್ಳಬಹುದು.

ಇನ್ನು ಶೃಂಗಾರರಸದ ವಿಚಾರಕ್ಕೆ ಬಂದರೆ, 'ಮುದ' ಎಂದರೆ 'ಸಂತೋಷ' ಎಂಬ ಚಿತ್ತವೃತ್ತಿಯಿಂದ ಮುಖಕಮಲ ಅರಳುವುದೇ ಶೃಂಗಾರ ಎಂದು ಹೇಳಿ, – ವಾಗ್ವೃತ್ತಿ, ನೈಪಥ್ಯ, ಕ್ರಿಯಾತ್ಮಕ, ಸಂಕೀರ್ಣ, ವ್ಯಸ್ತ ಎಂದು ಶೃಂಗಾರದ ಐದು ಬಗೆಗಳನ್ನು ಉದಾಹರಣೆಗಳೊಡನೆ ವಿವರಿಸುತ್ತಾನೆ. ಸಂತೋಷದಿಂದ ತನ್ನ ಶೃಂಗಾರವನ್ನು ಮಾತಿನ ಮೂಲಕ ಇನ್ನೊಬ್ಬರಿಗೆ ವಿವರಿಸುವುದು ವಾಗ್ವೃತ್ತಿ; ಒಡವೆ, ಮಾಲ್ಯ, ಗಂಧಲೇಪ, ವಸ್ತ್ರಾಲಂಕಾರ –ಇವುಗಳ ಮೂಲಕ ಶೃಂಗಾರವನ್ನು ತೋರ್ಪಡಿಸುವುದು ನೈಪಥ್ಯ ; ಕಾರ್ಯತಃ ತೋರ್ಪಡಿಸುವುದು ಕ್ರಿಯಾತ್ಮಕ; ಶೃಂಗಾರರಸದಲ್ಲಿ ಬೇರೆ ರಸಗಳು (ಹಾಸ್ಯ, ಮುಂತಾದುವು) ಬೆರಸಿ ಬಂದರೆ ವ್ಯಸ್ತ. ವಾಗ್ವೃತ್ತಿ, ನೈಪಥ್ಯ, ಕ್ರಿಯಾತ್ಮಕ –ಇವುಗಳು ಮಿಶ್ರವಾದರೆ ಸಂಕೀರ್ಣ. ಈ ಹಿಂದೆ ಉದಾಹರಿಸಿರುವ 'ಅವಧಾನ' ಸಾಮರ್ಥ್ಯವನ್ನು ವರ್ಣಿಸುವ ಪದ್ಯ 'ವ್ಯಸ್ತ' ಶೃಂಗಾರಕ್ಕೆ ಲಕ್ಷ್ಯಪದ್ಯವಾಗಿದೆ.

ಉಳಿದ ರಸಗಳ ವಿಚಾರದಲ್ಲಿ ಮೂರು ಬಗೆಗಳನ್ನು ಮಾತ್ರ ಹೇಳಿದೆ : ವಾಕ್ (ಮಾತು), ರೂಪಕ ಮತ್ತು ಕ್ರಿಯೆ. "ನುಡಿ (=ವಾಕ್) ಉಚ್ಚಾರಣೆ ; ನುಡಿಯದೆ ನಿಜದಿಂದಂ (ಎಂದರೆ ಸ್ವ–ರೂಪದಿಂದ) ಅರಿಪೆ ರೂಪಕಂ ; ಮಾಡಿ ತೋರ್ಪೊಡೆ ಕ್ರಿಯಾ" (1–65). ಈ ಎಲ್ಲ ಪ್ರಕಾರಗಳಿಗೂ ಉದಾಹರಣೆಗಳನ್ನು ಕೊಟ್ಟು, ಪರಸ್ಪರ ವಿರುದ್ಧ ರಸಗಳನ್ನು ಹೆಸರಿಸಿ, ಒಂಬತ್ತು ಸ್ಥಾಯಿಭಾವಗಳನ್ನೂ ಅವುಗಳಿಂದ ಹುಟ್ಟುವ ಒಂಬತ್ತು ರಸಗಳನ್ನೂ ಹೆಸರಿಸಿ, "ರಸಮಂ ಕಾವ್ಯಂಗಳೊಳ್ ಕೂಡಿ ರಂಜಿಸಬಲ್ಲಾತನೆ ಸತ್ಕವೀಂದ್ರಜನತಾ ವಿಖ್ಯಾತಿಯಂ ತಾಳ್ದುಗುಂ", "ರಸಮೆ ಮೊದಲ್

ಕವಿತೆಗೆ" ಎಂದು ರಸದ ಪ್ರಶಸ್ತಿಯೊಂದಿಗೆ ಮೊದಲ ಪರಿಚ್ಛೇದವನ್ನು ಕವಿ ಕಾಮನು ಮುಗಿಸಿದ್ದಾನೆ.

ಎರಡನೆಯ ಪರಿಚ್ಛೇದವು ಮುಖ್ಯವಾಗಿ ಎಂಟು ಸ್ಥಾಯಿಭಾವಗಳ, ಎಂಟು ಸಾತ್ವಿಕ ಭಾವಗಳ, ಮೂವತ್ತು ಮೂರು ಸಂಚಾರಿ ಭಾವಗಳ ನಿರೂಪಣೆಗೆ ಮೀಸಲಾಗಿದೆ. ಕೊನೆಯಲ್ಲಿ, ಹತ್ತು ವಿಧಗಳಾದ ಶೃಂಗಾರ ಚೇಷ್ಟೆಗಳ ವಿವರಣೆಯಿದೆ. ಮೊದಲ ಪರಿಚ್ಛೇದದಲ್ಲಿ ನವರಸಗಳ ಪ್ರಸ್ತಾಪ ವಿದ್ದರೂ, ಶಾಂತರಸ ಶಾಸ್ತ್ರ ಸಂಮತವಲ್ಲ ಎಂದು ಸ್ಪಷ್ಟವಾಗಿ ಹೇಳಿ ಬಿಟ್ಟಿದ್ದಾನೆ. ಸಾತ್ವಿಕ ಭಾವಗಳನ್ನು ಶೃಂಗಾರಕ್ಕೆ ಸಂಬಂಧಪಟ್ಟ ಲಕ್ಷ್ಯ ಪದ್ಯಗಳ ಮೂಲಕವೇ ನಿರೂಪಿಸಿರುವುದು ಗ್ರಂಥದ ಆಶಯಕ್ಕೆ ಅನುಗುಣ ವಾಗಿದೆ.

'ಅಶ್ರು' (ಕಣ್ಣೀರು) ಸಾತ್ವಿಕಭಾವಕ್ಕೆ ಉದಾಹರಣೆ:

ಕಡುಮುಳಿದ ನಲ್ಲನಂ ಕಾ-
ಲ್ವಿಡಿದುಂ ಲಲ್ಲೆಸಿ ನುಡಿದುಂ ಆರದೆ ತಿಳಿಪಲ್
ನಿಡುಸುಯ್ದು ಕಾಂತೆ ನಲ್ಮೆಗೆ
ಮುಡಿಗಿಕ್ಕುವ ತೆರದಿನಿಕ್ಕಿದಳ್ ಕಣ್ಬನಿಯಂ

[ಕಾಲು ಹಿಡಿದುಕೊಂಡು, ಮುದ್ದುಮಾತುಗಳನ್ನಾಡಿ, ಕೋಪಗೊಂಡಿದ್ದ ಪ್ರಿಯನನ್ನು ಸಮಾಧಾನಪಡಿಸಲು ಕಾಂತೆ ಪ್ರಯತ್ನಪಟ್ಟಳು. ಯಾವುದೂ ಫಲಕಾರಿ ಯಾಗದಿರಲು, ನಿಟ್ಟುಸಿರುಬಿಟ್ಟು, ಪ್ರೇಮಕ್ಕೆ ಮುಡಿಪುಕಟ್ಟುವ ರೀತಿಯಲ್ಲಿ ಕಣ್ಣೀರು ಸುರಿಸಿದಳು.]

ಮೂರನೆಯ ಪರಿಚ್ಛೇದದಲ್ಲಿ 'ನಾಯಕನಾಯಿಕಾ' ಭೇದಗಳ ನಿರೂ ಪಣೆಯಿದೆ. ನಾಯಕ ನಾಲ್ಕು ಬಗೆ: ಅನುಕೂಲ ನಾಯಕ, ದಕ್ಷಿಣ ನಾಯಕ, ಕುಟಿಲ ನಾಯಕ, ಧೃಷ್ಟನಾಯಕ. ನಾಯಿಕೆಯಲ್ಲಿ ಸ್ವೀಯೆ (ಸ್ವಂತದವಳು), ಪರಕೀಯೆ, ಪಣ್ಯೆ (ಬೆಲೆವೆಣ್ಣು) ಎಂದು ಮೂರು ಮುಖ್ಯ ಭೇದಗಳು. ನಾಯಿಕೆಯರಲ್ಲಿ ಉತ್ತಮ, ಜಘನ್ಯ (ಕೀಳಾದವಳು) ಎಂದು ಮತ್ತೆ ಎರಡು ಭೇದಗಳು. ಈ ನಾಯಿಕೆಯರಲ್ಲಿ ಒಳಭೇದಗಳೂ ಉಂಟು. ಒಟ್ಟು ನಾಯಿಕಾಸಂಖ್ಯೆ 16. ಇವರಲ್ಲಿ 8 ಅವಸ್ಥೆಗಳು ವರ್ಣಿತವಾಗಿವೆ: ಸ್ವಾಧೀನ ಪತಿಕೆ, ಖಂಡಿತೆ, ಅಭಿಸಾರಿಕೆ, ಇತ್ಯಾದಿ. 'ಅಭಿಸಾರಿಕೆ' ಎಂಬ ನಾಯಿಕಾಭೇದ ಕಾವ್ಯಪ್ರಪಂಚದಲ್ಲಿ ಪ್ರಸಿದ್ಧ. ಅಭಿಸಾರಿಕೆ ಎಂದರೆ ತಾನಾಗಿ ಒಲಿದು ಪ್ರಿಯನ ಬಳಿಗೆ ಹೋಗುವವಳು. ಅವಳ ಸ್ವರೂಪ ಹೀಗೆ :

ಇರುಳೆನ್ನದೆ, ಕಳ್ತಲೆ ಕಡು
ವಿರಿದು ಎನ್ನದೆ ದುರ್ಗಂ ಎನ್ನದೆ, ಓಪನೊಳ್ ಎತ್ತಂ
ನೆರೆಯಲ್ ಪರಿದೆಯ್ದುವ ಸುಂ-
ದರಿ ಅಭಿಸಾರಿಕೆಯೆನಿಪ್ಪ ಪೆಸರಂ ಪಡೆಗುಂ

(3-59)

[ಕಳ್ತಲೆ=ಕತ್ತಲೆ. ಓಪ=ಪ್ರಿಯ. ನೆರೆ=ಕೂಡು. ಪರಿದೆಯ್ದು=ಓಡಿ ಬಳಿಗೆ ಹೋಗು.]

ನಾಲ್ಕನೆಯ ಪರಿಚ್ಛೇದ ನಾಯಕನಾಯಿಕೆಯರು ಪೊಂದಿರುವ ಸಖಿ ಸಖೀಜನರ ಭೇದಗಳು, ನಾಯಕ ನಾಯಿಕೆಯರ ಸಂಭೋಗ (ನೆರೆಯುವಿಕೆ, ಕೂಡುವಿಕೆ), ಅವರ ವಿಪ್ರಲಂಭ (ವಿರಹ ಅಥವಾ ಅಗಲಿಕೆ), ಅಗಲಿಕೆಯ ಸಂದರ್ಭದಲ್ಲಿ ಕಂಡುಬರುವ ದಶಾವಸ್ಥೆಗಳು — ಇವು ಉದಾಹರಣಪೂರ್ವಕ ವಾಗಿ ವರ್ಣಿತವಾಗಿವೆ. ನಾಯಕನ ಸಖನಿಗೆ 'ನರ್ಮಸಚಿವ'ನೆಂದೂ ಹೆಸರು. ನಾಲ್ಕು ಬಗೆಯ ನರ್ಮಸಚಿವರುಂಟು : ನಾಗರಿಕ, ವಿಟ, ವಿದೂಷಕ, ಪೀಠಮರ್ದ. ಇವರಲ್ಲಿ ವಿದೂಷಕ ಪಾತ್ರ ಸುಪರಿಚಿತವಾದದ್ದು ; ಜನಪ್ರಿಯ ವಾದದ್ದು. ಸಖೀಜನದಲ್ಲಿ ಸಾರಿಕೆ, ಚತುರಿಕೆ, ಸಂಚಾರಿಕೆ, ದೂತಿಕೆ ಎಂದು ನಾಲ್ಕು ವಿಧ. ಈ ಭೇದಗಳ ವಿವರಣೆಯೊಂದಿಗೆ ಗ್ರಂಥ ಸಮಾಪ್ತಿಯಾಗಿದೆ.

ಗ್ರಂಥದಲ್ಲಿ ಆತ್ಮಸ್ತುತಿಯ ಪದ್ಯಗಳು ಬೇಕಾದಷ್ಟಿವೆ. ಉದಾಹರಣ ಪದ್ಯಗಳಲ್ಲಿ, ಕೆಲವು ರಾಮಾಯಣದ ಕಥೆಗೆ ಸಂಬಂಧಪಟ್ಟಿವೆ. ಇನ್ನು ಕೆಲವು ಬೇರೆ ಬೇರೆ ಕಾವ್ಯಗಳ ಕಥಾಸಂದರ್ಭಗಳನ್ನು ಸೂಚಿಸುವಂತಿವೆ. ಕವಿ ತಾನು "ಗದ್ಯಪದ್ಯವಿದ್ಯಾಧರ" ಎಂದು ಹೇಳಿಕೊಂಡಿರುವುದರಿಂದ, ಅವನೇ ರಚಿಸಿರ ಬಹುದಾದ ಚಂಪೂಕಾವ್ಯಗಳಿಂದ ಉದಾಹರಣ ಪದ್ಯಗಳನ್ನು ಆಯ್ದು ಕೊಟ್ಟಿರಬಹುದು. ಒಟ್ಟಿನಲ್ಲಿ, ಕವಿಕಾಮನ "ಲಕ್ಷ್ಯಲಕ್ಷಣ ಪದ್ಯಗಳಲ್ಲಿ ಸಹಜ ಕವಿತ್ವವಿದೆ, ಲಲಿತ ಶೈಲಿಯಿದೆ, ಶಾಸ್ತ್ರಜ್ಞಾನವಿದೆ."[20]

ರಸರತ್ನಾಕರ

ಕನ್ನಡ ಲಕ್ಷಣಗ್ರಂಥಗಳ ಶ್ರೇಣಿಯಲ್ಲಿ ಸಾಳ್ವನ ರಸರತ್ನಾಕರಕ್ಕೆ ಒಂದು ಗಣ್ಯವಾದ ಸ್ಥಾನವಿದೆ. ರಸವಿಚಾರವನ್ನು ಕೂಡಿದಮಟ್ಟಿಗೂ ವಿಸ್ತಾರವಾಗಿ ನಿರೂಪಿಸುವ ಗ್ರಂಥ ಇದೊಂದೇ. ಗ್ರಂಥದ ಈ ವೈಶಿಷ್ಟ್ಯವನ್ನು ಕವಿಯೇ ಹೀಗೆ ವರ್ಣಿಸಿದ್ದಾನೆ:

ಇಂದುವರಂ ಅರುಂ ಈ ತೆರ
ದಿಂದಂ ಕನ್ನಡದೊಳ್ ಆರ್ಯರ್ 'ಆ' ಎಂಬಿನಂ ಒ–
ಳ್ಪಿಂದೆ ವಿವರಿಸಿದುದಿಲ್ಲ- ಎನೆ,
ಚಂದದೆ ಬಿಚ್ಚಳಿಸಿ ರಚಿಸಿದಂ ಕವಿಸಾಳ್ವಂ. (4-269)
[ಆರ್ಯ = ಶ್ರೇಷ್ಠ. ಒಳ್ಪಿಂದೆ = ಚೆನ್ನಾಗಿ. ಬಿಚ್ಚಳಿಸಿ = ವಿಸ್ತರಿಸಿ.]

ಸಾಳ್ವನು ಜೈನನೆಂಬ ಸಂಗತಿ ಅವನ ಗ್ರಂಥದಿಂದಲೇ ತಿಳಿದುಬರುತ್ತದೆ. ಈಗ್ರಂಥವನ್ನಲ್ಲದೆ ಇವನು 'ಭಾರತ','ವೈದ್ಯಸಾಂಗತ್ಯ' ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಧ್ವನಿತತ್ತ್ವವನ್ನು ವಿವರಿಸುವ 'ಶಾರದಾ ವಿಲಾಸ' ಎಂಬ ಗ್ರಂಥವೂ ಇವನದ್ದೆಂದೇ ಊಹಿಸಲಾಗಿದೆ. ತೌಳವ, ಹೈವ, ಕೊಂಕಣ ದೇಶ ಗಳನ್ನು ಆಳುತ್ತಿದ್ದ ಮಹಾಮಂಡಲೇಶ್ವರ ಭೈರವರಾಯನ ವಂಶಸ್ಥನಾದ ವಸುದಾನಮೇರು ಎಂಬ ಅರಸು ಸಾಳ್ವಮಲ್ಲ ಎಂಬ ಹೆಸರಿನಿಂದ ಆಳುತ್ತಿ ದ್ದನು. ಕವಿಸಾಳ್ವನು ಈ ದೊರೆಯ ಆಸ್ಥಾನ ಕವಿಯಾಗಿದ್ದನು. ಇವನ ಕಾಲ ಸುಮಾರು 1550 ಎಂದು ಕವಿಚರಿತೆಕಾರರು ನಿಶ್ಚಯಿಸಿದ್ದಾರೆ.

ಸಾಳ್ವನು ತನಗಿಂತ ಹಿಂದಿನ ಅನೇಕ ಸಂಸ್ಕೃತ ಕನ್ನಡ ಅಲಂಕಾರ ಗ್ರಂಥ ಗಳನ್ನು ಆಧಾರವಾಗಿಟ್ಟುಕೊಂಡು ತನ್ನ ಗ್ರಂಥವನ್ನು ರಚಿಸಿದ್ದಾನೆ. ಗ್ರಂಥಾ ರಂಭದಲ್ಲಿ, ಅಮೃತಾನಂದಿ, ವಿದ್ಯಾನಾಥ, ಹೇಮಚಂದ್ರ, ರುದ್ರಭಟ್ಟ–ಇವರ ಹೆಸರುಗಳನ್ನು ಸ್ಮರಿಸಿ, ನಾಗವರ್ಮ ಕವಿ ಕಾಮಾದಿಗಳ ಮಾರ್ಗವನ್ನೂ ಅನುಸರಿಸಿ ಗ್ರಂಥರಚನೆ ಮಾಡಿರುವುದಾಗಿ ತಿಳಿಸಿದ್ದಾನೆ. ಮೊದಲಿನ ಮೂವರು ಸಂಸ್ಕೃತದಲ್ಲಿ ಲಕ್ಷಣ ಗ್ರಂಥಗಳನ್ನು ರಚಿಸಿದ್ದಾರೆ. ರುದ್ರಭಟ್ಟನು 'ರಸಕಲಿಕೆ' ಎಂಬ ಗ್ರಂಥದ ಕವಿ ಎಂದು ರಸರತ್ನಾಕರದಿಂದಲೇ ತಿಳಿದು ಬರುತ್ತದೆ. ಈ ಗ್ರಂಥ ಕನ್ನಡದಲ್ಲಿದೆ, ಜಗನ್ನಾಥ ವಿಜಯುವನ್ನು ಬರೆದ ರುದ್ರಭಟ್ಟನೇ ಇದರ ಕರ್ತೃ–ಎಂದು ಒಬ್ಬರ ಅಭಿಪ್ರಾಯವಾದರೆ, ಸಂಸ್ಕೃತ ಕವಿಗಳ ಗುಂಪಿನಲ್ಲಿ ರುದ್ರಭಟ್ಟನ ಹೆಸರು ಇರುವುದರಿಂದ ರಸಕಲಿಕೆ ಸಂಸ್ಕೃತ ದಲ್ಲಿರಬಹುದು ಎಂದು ಇನ್ನು ಕೆಲವರ ಅಭಿಪ್ರಾಯ. ರಸರತ್ನಾಕರದ ಕೆಲವು ಹೇಳಿಕೆಗಳಿಗೆ ಹೋಲಿಕೆಯುಳ್ಳ ರಸಕಲಿಕೆ ಎಂಬ ಹೆಸರಿನ ಸಂಸ್ಕೃತ ಅಲಂಕಾರ ಗ್ರಂಥವೇನೋ ಒಂದು ಸಿಕ್ಕಿದೆ. ಆದರೆ ಅದರಲ್ಲಿ ಗ್ರಂಥಕರ್ತನ ಹೆಸರಿಲ್ಲ. "ಕನ್ನಡದಲ್ಲಿ 'ಸಾಹಿತ್ಯ ಸಂಜೀವನ' ವೆಂಬ ಲಕ್ಷಣ ಗ್ರಂಥವಿದ್ದಂತೆ ಸಾಳ್ವನ ಉಕ್ತಿಯಿಂದ ಗೊತ್ತಾಗುತ್ತದೆ (ಪು. 49); ಇದರ ಕರ್ತೃವಿನ ಹೆಸರು ಗಣೇಶ್ವರಾಗ್ನಿ. ರಸಗಳ ಪರಸ್ಪರ ವಿರೋಧವನ್ನು ಕುರಿತು ಹೇಳುತ್ತಾ

ಸಾಳ್ವನು ಈ ಗ್ರಂಥದ ಹೆಸರನ್ನು ಎತ್ತಿ, ಅಭಿಪ್ರಾಯವನ್ನು ಉಲ್ಲೇಖಿಸಿ, ಅದರಿಂದ ಎರಡು ಸೂತ್ರ ಪದ್ಯಗಳನ್ನೂ ಉದ್ಧರಿಸಿಕೊಟ್ಟಿದ್ದಾನೆ. ಈ ಹೆಸರಿನ ಲಾಕ್ಷಣಿಕನಾಗಲಿ ಅವನ ಕೃತಿಯಾಗಲಿ ಇದ್ದುದಕ್ಕೆ ಸಾಳ್ವನ ಹೇಳಿಕೆಯೇ ಏಕಮಾತ್ರ ಸಾಕ್ಷಿ. ವಿರಳವಾದ ಕನ್ನಡ ಲಾಕ್ಷಣಿಕರ ಪಂಕ್ತಿಗೆ ಈತನನ್ನು ಸೇರಿಸಲು ಸಾಳ್ವನಿಂದ ಆಗಿರುವ ಉಪಕಾರಕ್ಕಾಗಿ ನಾವು ಅವನಿಗೆ ಕೃತಜ್ಞರಾಗಿರಬೇಕಾಗಿದೆ".[21] ಈ 'ಸಾಹಿತ್ಯಸಂಜೀವನ'ವು ರಸವಿಚಾರವಲ್ಲದೆ, ಅಲಂಕಾರ ಶಾಸ್ತ್ರದ ಇತರ ವಿಚಾರಗಳನ್ನೂ ಒಳಗೊಂಡಿರಬಹುದೆಂದು ಗ್ರಂಥದ ಹೆಸರಿನಿಂದ ಊಹಿಸಬಹುದಾಗಿದೆ.*

ಸಾಳ್ವನು ಎಲ್ಲ ರಸಗಳ ವಿಚಾರವನ್ನೂ ತನ್ನ ಗ್ರಂಥದಲ್ಲಿ ನಾಗವರ್ಮ ಕವಿಕಾಮಾದಿಗಳಿಗಿಂತ ಹೆಚ್ಚು ವಿಸ್ತಾರವಾಗಿ ಪ್ರತಿಪಾದಿಸಿದ್ದರೂ, ಶೃಂಗಾರಕ್ಕೆ ಪ್ರಾಶಸ್ತ್ಯ ನೀಡಿರುವುದರಲ್ಲಿ ಕವಿಕಾಮನ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟವಾಗಿದೆ. ಪ್ರಥಮ ಪ್ರಕರಣವು ಪೂರ್ತಿಯಾಗಿ ಶೃಂಗಾರ ಪ್ರಪಂಚ ವಿವರಣೆಗೆ ಮೀಸಲಾಗಿರುವುದೇ ಇದಕ್ಕೆ ನಿದರ್ಶನ; ಅಲ್ಲದೆ, ಅನೇಕ ಸೂತ್ರಗಳನ್ನೂ ಉದಾಹರಣ ಪದ್ಯಗಳನ್ನೂ ಅವನ ಗ್ರಂಥದಿಂದಲೇ ಎತ್ತಿಕೊಟ್ಟಿದ್ದಾನೆ. ಇನ್ನಿತರ ವಿಚಾರಗಳಲ್ಲಿ ಸಂಸ್ಕೃತ ಗ್ರಂಥಗಳನ್ನು ಅವಲಂಬಿಸಿದ್ದಾನೆ. ಒಟ್ಟಿನ ಮೇಲೆ, ಅನೇಕ ಗ್ರಂಥಗಳ ವಿಷಯಗಳನ್ನು ಸಂಗ್ರಹಿಸಿ, ತಾನು ಇತರ ಲಾಕ್ಷಣಿಕರಿಗೆ ಋಣಿಯಾಗಿರುವುದನ್ನು ಒಟ್ಟಿನಲ್ಲಿ ಮಾತ್ರವಲ್ಲದೆ ಅಲ್ಲಲ್ಲಿ ಪ್ರತ್ಯೇಕವಾಗಿಯೂ – 'ಕವಿ ಕಾಮನ ಮತಂ,' 'ಇದು ನಾಗವರ್ಮನ ಮತಂ', 'ಹೇಮಚಂದ್ರ ಸೂರಿಯ ಮತದಿಂ' ಎಂದು ಮುಂತಾಗಿ – ಒಪ್ಪಿ

---

* ಸಾಳ್ವನು 'ಸಾಹಿತ್ಯಸಂಜೀವನ'ದಿಂದ ಎತ್ತಿಕೊಟ್ಟಿರುವ ಎರಡು ಪದ್ಯಗಳಲ್ಲಿ ಒಂದನ್ನಾದರೂ ನಾವು ಇಲ್ಲಿ ಅತ್ಯವಶ್ಯವಾಗಿ ಗಮನಿಸಬೇಕು :

ವೀರಂ ಬೀಭತ್ಸ ರೌದ್ರಂ ನಿಜದೆ ಕರುಣಶಾಂತಂಗಳ್ ಇಂತೆಯ್ದ ತಾಂ ಶೃಂ–
ಗಾರಕ್ಕಂ ವೈರಿಯಕ್ಕುಂ; ಕರುಣ ಭಯಮಿವು ಹಾಸ್ಯಕಂ ವೈರಿ ; ಆ ಶೃಂ–
ಗಾರಂ ಹಾಸ್ಯಂ ಬಳಿಕ್ಕಂ ಪರಿಕಿಸೆ ಸಲೆ ರೌದ್ರಂ ವಲಂ ಶಾಂತಂ ಇಂತುಂ
ಕಾರುಣ್ಯಕ್ಕಂ ಹಿತಂ ತಾನೆನಿಸದು ಭಯಕಂ ವೈರಿಯಾ ವೀರವೆಂದುಂ.

[ವೀರ, ಬೀಭತ್ಸ, ರೌದ್ರ, ಕರುಣ, ಶಾಂತ ರಸಗಳು ಶೃಂಗಾರಕ್ಕೆ ವಿರುದ್ಧ ರಸಗಳು : ಕರುಣಭಯಗಳು ಹಾಸ್ಯಕ್ಕೆ ವಿರುದ್ಧಗಳು ; ಶೃಂಗಾರ, ಹಾಸ್ಯ, ರೌದ್ರ, ಶಾಂತ–ಇವು ಕರುಣಕ್ಕೆ ವಿರುದ್ಧ ; ವೀರ ಭಯಗಳು ಪರಸ್ಪರ ವಿರುದ್ಧಗಳು.]

ಕೊಂಡಿರುವುದು ಮೆಚ್ಚತಕ್ಕ ಸಂಗತಿ. ಸಾಳ್ವನು ಕವಿ ಕಾಮನಿಗೆ ವಿಶೇಷವಾಗಿ ಋಣಿಯಾಗಿದ್ದರೂ ಅವನನ್ನು ಟೀಕಿಸಿರುವುದೂ ಉಂಟು. ಇತರರ ಅಭಿಪ್ರಾಯಗಳನ್ನು ತನ್ನವೆಂದು ತೋರುವಂತೆ ಮಾಡದೆ ಸ್ಪಷ್ಟವಾಗಿ ಒಪ್ಪಿಕೊಂಡಿರುವುದು ಶಾಸ್ತ್ರಕಾರನಲ್ಲಿ ಇರಬೇಕಾದ ಪ್ರಾಮಾಣಿಕತೆಯ ಲಕ್ಷಣ ಇನ್ನೊಂದು ವಿಶೇಷದ ಸಂಗತಿ ಏನೆಂದರೆ, ಅಗತ್ಯವಾದ ಕಡೆಗಳಲ್ಲಿ ಸೂತ್ರಗಳಿಗೆ ವೃತ್ತಿ(ವಿವರಣೆ)ಗಳನ್ನು ಬರೆಯುವುದರ ಜೊತೆಗೆ, 'ವಿಚಾರಂ' ಎಂಬ ವಿಭಾಗವನ್ನು ಕಲ್ಪಿಸಿಕೊಂಡು, ಅದರಡಿಯಲ್ಲಿ ಅಭಿಪ್ರಾಯ ಭೇದಗಳನ್ನೂ ವಿಷಯದ ತೊಡಕುಗಳನ್ನೂ ಚರ್ಚೆಮಾಡುವ ವಿಧಾನ.

ಉದಾಹರಣೆಗೆ, ರಸದ ಉತ್ಪತ್ತಿಯ ವಿಷಯದಲ್ಲಿ ನಾಗವರ್ಮನ ಸೂತ್ರವನ್ನೇ ಉದ್ಧರಿಸಿ, "ನಾಗವರ್ಮನಿಂತಪ್ಪುಗೆಯ್ದನದರ ವಿವರಮೆಂತೆಂದೊಡೆ" ಎಂದು ಭಾವ ವಿಭಾವ ಅನುಭಾವ ಸಂಚಾರಿ ಭಾವಗಳ ಸ್ವರೂಪವನ್ನು ವಿವರಿಸುತ್ತಾನೆ. 33 ವ್ಯಭಿಚಾರಿ ಭಾವಗಳಲ್ಲಿ ಒಂದಾದ 'ಚಿಂತೆ' ಯನ್ನು ಕುರಿತು ಹೇಳುವಾಗ —

" ವ॥ ಧ್ಯಾನಮೆ ಚಿಂತೆ.

" ವಿಚಾರಂ—ಇದು ಸ್ಮೃತಿಯಿಂ ವ್ಯತಿರಿಕ್ತಂ. ಅನುಭೂತ ವಸ್ತುಸ್ಮರಣಮೇ ಸ್ಮೃತಿ. ಅದಂ ಬಿಡದೆ ಧ್ಯಾನಿಪುದು ಚಿಂತೆ. ವಿತರ್ಕದಿಂ ಚಿಂತೆ ಬೇರೆ. ಚಿಂತೆಯಿಂ ಬಳಿಕಾದೊಡಂ ಒರ್ಮೆ ವಿತರ್ಕಮಪ್ಪುದು. ವಿತರ್ಕದಿಂ ಬಳಿಕ್ಕಾದೊಡಂ ಒರ್ಮೆ ಚಿಂತೆಯಪ್ಪುದು."

ಇಲ್ಲಿ ಸ್ಮೃತಿ, ವಿತರ್ಕ (ವಿಚಾರ), ಧ್ಯಾನ(ಚಿಂತೆ)ಗಳಿಗಿರುವ ಸೂಕ್ಷ್ಮ ವ್ಯತ್ಯಾಸಗಳನ್ನು ಬಿಡಿಸಿ ತೋರಿಸಿದ್ದಾನೆ. ಸಾಳ್ವನ ಈ ಕ್ರಮ ಶಾಸ್ತ್ರಪದ್ಧತಿಗೆ ಅನುಗುಣವಾಗಿದ್ದು, ಅವನ ಸ್ವತಂತ್ರ ವಿಚಾರ ವಿಮರ್ಶಾ ವಿಧಾನಕ್ಕೂ ದೃಷ್ಟಾಂತವಾಗಿದೆ. ಅಲ್ಲಲ್ಲಿ, ಸಾಳ್ವನ ವಿಚಾರಮಾರ್ಗದಲ್ಲಿ ದೋಷಗಳೂ. ಎಡೆಹೊಕ್ಕಿವೆ. ಆದರೆ, ಒಟ್ಟಿನಲ್ಲಿ ಅವನ ನಿರೂಪಣಾಕ್ರಮ ಶ್ಲಾಘ್ಯವಾದದ್ದು ; ವಿಚಾರಪೂರ್ಣವಾದದ್ದು.

ಸಾಳ್ವನ ಗ್ರಂಥದಲ್ಲಿ ಗಮನಾರ್ಹವಾದ ಇನ್ನೊಂದು ಶ್ಲಾಘ್ಯಕ್ರಮ – ಸ್ವಂತ ಲಕ್ಷ್ಯಗಳನ್ನು ಕೊಡದೆ, ಪೂರ್ವಕವಿಗಳ ಕಾವ್ಯಗಳಿಂದ ಸಂದರ್ಭಕ್ಕೆ ಹೊಂದುವ ಪದ್ಯಗಳನ್ನು ಲಕ್ಷ್ಯಗಳಾಗಿ ಆಯ್ದು ಕೊಡುವುದು. ಇದು ಕಾವ್ಯಾವ

ಲೋಕನವಲ್ಲಿ ನಾಗವರ್ಮ ಅನುಸರಿಸಿರುವ ಪದ್ಧತಿ. ಪಂಪನ ಆದಿಪುರಾಣ, ರನ್ನನ ಗದಾಯುದ್ಧ, ನಾಗವರ್ಮನ ಕಾವ್ಯಾವಲೋಕನ, ಶೃಂಗಾರ ರತ್ನಾಕರ, ರುದ್ರಭಟ್ಟನ ಜಗನ್ನಾಥ ವಿಜಯ, ನೇಮಿಚಂದ್ರನ ಲೀಲಾವತಿ – ಇವೇ ಮುಂತಾದ ಕೃತಿಗಳಿಂದ ಲಕ್ಷ್ಯ ಪದ್ಯಗಳನ್ನು ಆಯ್ದುಕೊಳ್ಳುವಲ್ಲಿ ಸಾಳ್ವನ ಒಳ್ಳೆಯ ಕಾವ್ಯಾಭಿರುಚಿಯೂ ಕಂಡುಬರುತ್ತದೆ. ಇವನು ತನ್ನ ಭಾರತವನ್ನು ಷಟ್ಪದೀ ಪದ್ಯಗಳ ನಡುಗನ್ನಡದಲ್ಲಿ ಬರೆದು, ಈ ಗ್ರಂಥವನ್ನು ಚಂಪೂ ರೂಪದ ಹಳಗನ್ನಡದಲ್ಲಿ ಬರೆದಿರುವುದು ವಿಚಾರಾರ್ಹ ಎಂದು ತೀ. ನಂ. ಶ್ರೀಕಂಠಯ್ಯನವರು ಸೂಚಿಸಿದ್ದಾರೆ. ಶಾಸ್ತ್ರ ಗ್ರಂಥವು ಕವಿಗಳಿಗೂ ವಿದ್ವಾಂಸರಿಗೂ ಮಾತ್ರ ಉದ್ದೇಶಪಟ್ಟಿದ್ದುದರಿಂದ, ತನ್ನ ಪ್ರೌಢಿಮೆಯನ್ನು ತೋರಿಸುವ ಸಲುವಾಗಿ ಹಳಗನ್ನಡದಲ್ಲಿ ಬರೆದಿರಬಹುದು. 18 ನೆಯ ಶತಮಾನದಲ್ಲಿ ತಿರುಮಲಾರ್ಯನೂ 19 ನೆಯ ಶತಮಾನದಲ್ಲಿ ಲಿಂಗರಾಜನೂ ತಂತಮ್ಮ ಲಕ್ಷಣ ಗ್ರಂಥಗಳನ್ನು ಹಳಗನ್ನಡದಲ್ಲಿ ಬರೆದಿರುವಲ್ಲಿ, ಇದೇನೂ ಸೋಜಿಗದ ವಿಷಯವಲ್ಲ.

ನವರಸಾಲಂಕಾರ

ರಸ ವಿಚಾರವನ್ನು ಪ್ರತಿಪಾದಿಸುವ ಕನ್ನಡ ಲಕ್ಷಣ ಗ್ರಂಥಗಳ ಸಾಲಿನಲ್ಲಿ ತಿಮ್ಮನ 'ನವರಸಾಲಂಕಾರ,' ಮೂರನೆಯದು. ಇದಕ್ಕೆ 'ಅಲಂಕಾರ ಸಾರ ಸಂಗ್ರಹ' ಎಂಬ ಹೆಸರೂ ಇದೆ. ಈ ಕೃತಿ ಇನ್ನೂ ಪ್ರಕಟವಾಗಿಲ್ಲದಿರುವುದರಿಂದ ಅಷ್ಟು ಪ್ರಸಿದ್ಧವಾಗಿಲ್ಲ. ಈ ಕವಿಯ ವಿಚಾರವಾಗಿ ಹೆಚ್ಚಿನ ಸಂಗತಿಗಳೂ ತಿಳಿದುಬಂದಿಲ್ಲ. ಗ್ರಂಥದಿಂದಲೇ ತಿಳಿದು ಬರುವ ಸಂಗತಿಗಳು ಇಷ್ಟು: ಇವನ ಪೂರ್ತಿ ಹೆಸರು ತಿಮ್ಮಣಾರ್ಯ. ಬ್ರಾಹ್ಮಣ ಕುಲದವನು; ರಾಯಣ್ಣನ ಮಗ. ಇವನಿಗೆ ಕವಿ ಕುಲ ಚಕ್ರವರ್ತಿ, ಕವಿಭಾಳ ಲೋಚನ, ರಸಿಕಬ್ರಹ್ಮ, ಮುಂತಾಗಿ ಅನೇಕ ಬಿರುದುಗಳಿದ್ದುವು. ಸಾಳ್ವನ ರಸರತ್ನಾಕರದ ಸೂತ್ರಗಳೂ ವಾಕ್ಯಗಳೂ ತಿಮ್ಮನ ಕೃತಿಯಲ್ಲಿ ಕಂಡುಬರುತ್ತವೆ. ಆದ್ದರಿಂದ, ಇವನು ಅವನಿಗಿಂತ ಈಚಿನವನು ; ಇವನ ಕಾಲ ಸು. 1600.

ಸಾಳ್ವನ ರಸರತ್ನಾಕರದಂತೆ ಇದೂ ಗದ್ಯಪದ್ಯಗಳಿಂದ ಕೂಡಿದೆ. ಕನ್ನಡ ಆಲಂಕಾರಿಕರಾದ ಸಾಳ್ವ, ಕವಿಕಾಮ, (ಎರಡನೆಯ) ನಾಗವರ್ಮ ಮತ್ತು ಸಂಸ್ಕೃತ ಆಲಂಕಾರಿಕರಾದ ಹೇಮಚಂದ್ರ, ಅಮೃತಾನಂದ, ಸಿಂಗ ಭೂಪಾಲ,

ಇವರುಗಳನ್ನು ತಾನು ಅನುಸರಿಸಿರುವುದಾಗಿ ಹೇಳಿಕೊಂಡಿದ್ದಾನೆ. ಅಲಂಕಾರ ವಿಚಾರದಲ್ಲಿ ಇದು ಪೂರ್ವ ಗ್ರಂಥಗಳ ಸಾರಸಂಗ್ರಹವನ್ನು ಒಳಗೊಂಡಿರುವುದರಿಂದ ಇದರ ಹೆಸರು ಅನ್ವರ್ಥಕವಾಗಿದೆ ಎಂದು ಹೇಳಬಹುದು. ಸ್ವತಂತ್ರ ರಚನೆ ಕಡಮೆ. ಪಂಪ, ಪೊನ್ನ, ನಾಗಚಂದ್ರ, ನೇಮಿಚಂದ್ರ ಮುಂತಾದ ಪೂರ್ವ ಕವಿಗಳ ಪದ್ಯಗಳನ್ನು ಲಕ್ಷ್ಯಗಳಾಗಿ ತೆಗೆದುಕೊಂಡಿದ್ದಾನೆ. ರಸದ ಉತ್ಪತ್ತಿಯನ್ನು ವಿವರಿಸುವಲ್ಲಿ ಭರತನನ್ನು ಅನುಸರಿಸಿದ್ದಾನೆ. ವೃತ್ತ ಕಂದಗಳೇ ತುಂಬಿರುವ ಈ ಗ್ರಂಥದಲ್ಲಿ ಎರಡು ಷಟ್ಪದಿಗಳೂ ಒಂದು ತ್ರಿಪದಿಯೂ ಸೇರಿರುವುದು ಗಮನಾರ್ಹ. ಶಕುಂತಳೆ ಗಿಡಬಳ್ಳಿಗಳಿಗೆ ನೀರೆರೆಯುತ್ತಿರುವಾಗ ದುಷ್ಯಂತನು ಮರೆಯಲ್ಲಿ ನಿಂತು ಅವಳನ್ನು ನೋಡುತ್ತಿರುವ ಸನ್ನಿವೇಶವನ್ನು ವರ್ಣಿಸುವ ಒಂದು ವಾರ್ಧಕ ಷಟ್ಪದಿ ಹೀಗಿದೆ :

ಈ ರಮಣಿ ರಿಸಿಗುವರಿಯೆಂತಾದಳ್ ಎನುತಿರೆ ವಿ-
ಚಾರಿಸುತೆ ಬಾಲಮೂಲ ವಕುಲಾವಾಲಕ್ಕೆ
ವಾರಿಸೇಚನವೆಸಪ ಪೆಣ್ಮೈವೆಳಗುವೊಳೆಯ ತಿಳಿವೊನಲ ಪೊಕ್ಕು ಪರಿದು
ಆ ರಾಯನೀಕ್ಷಣ ಝಷಂ ಚರಣಕಮಠಮಂ
ಸೇರಿ ಪೊಕ್ಕುಳ್ ಸುಳಿಯೊಳ್ ಆಳ್ದು ತೋಳ್‌ತೆರೆಗಳೊಳ್
ಚಾರಿವರಿದು ಆನನಾಬ್ಜಕೆ ನೆಗೆದು ಕಚನಿಚಯ ಜಲನೀಲಿಯೊಳ್ ಪೊರಳ್ದುದು.

[ಈ ಚೆಲುವೆ ಋಷಿಯ ಮಗಳು ಹೇಗಾದಳು ? ಎಂದು ವಿಚಾರಿಸುತ್ತ, ಎಳೆಯ ಬೇರುಳ್ಳ ಬಕುಳದ ಗಿಡದ ಪಾತಿಗೆ ನೀರನ್ನು ಎರೆಯುತ್ತಿದ್ದ ಹೆಣ್ಣಿನ ಮೈಯ ಕಾಂತಿಯೆಂಬ ಹೊಳೆಯ ತಿಳಿನೀರಿನ ಪ್ರವಾಹವನ್ನು ಹೊಕ್ಕು, ಆ ರಾಜನ (ದುಷ್ಯಂತನ) ನೋಟವೆಂಬ ಮೀನು ಪಾದಗಳೆಂಬ ಆಮೆಯನ್ನು ಸಮೀಪಿಸಿ, ಹೊಕ್ಕುಳ ಸುಳಿಯಲ್ಲಿ ಮುಳುಗಿ, ತೋಳುಗಳೆಂಬ ಅಲೆಗಳ ನಡುನಡುವೆ ಸುತ್ತಾಡಿ, ಮುಖಕಮಲಕ್ಕೆ ನೆಗೆದು, ಕೂದಲರಾಶಿಯೆಂಬ ನೀಲಜಲದಲ್ಲಿ ಹೊರಳಿತು.]

ಕಾಳಿದಾಸನ ನಾಟಕವನ್ನು ಅವಲಂಬಿಸಿ ಬರೆದ ಯಾವುದೋ ಕನ್ನಡ ಕಾವ್ಯದಿಂದ ಈ ಪದ್ಯವನ್ನು ಆಯ್ದು ಹಾಕಿರಬಹುದೆಂಬ ಊಹೆ ಇದೆ. "ವಿರಾಜತೇ ರಾಯಣ ತಿಮ್ಮಣಾರ್ಯೋ ಭಾಷಾ ದ್ವಯೀ ನಿರ್ಮಿತ ಕಾವ್ಯಶೇಷಃ" (ರಾಯಣನ ಮಗ ತಿಮ್ಮಣಾರ್ಯನು ಎರಡು ಭಾಷೆಗಳಲ್ಲೂ ನಿರ್ಮಿಸಿದ ಉಳಿದ ಕಾವ್ಯ ಶೋಭಿಸುತ್ತದೆ) ಎಂಬ ಕವಿಯ ಹೇಳಿಕೆಯನ್ನೂ, 'ಉಭಯ ಕವಿ ಶರಭ ಭೇರುಂಡ' ಎಂಬ ಅವನ ಬಿರುದನ್ನೂ ಗಮನಿಸಿದರೆ, ಇವನು ಕನ್ನಡ ಸಂಸ್ಕೃತಗಳಲ್ಲಿ ಕೃತಿ ರಚನೆ ಮಾಡಿದ್ದನೆಂದು ಧಾರಾಳವಾಗಿ ಹೇಳಬಹುದು. ಆದರೆ ಅವನ ಯಾವ ಕಾವ್ಯವೂ ದೊರೆಕಿಲ್ಲ. ಗ್ರಂಥದಲ್ಲಿ

ಎತ್ತಿಕೊಟ್ಟಿರುವ ಶಕುಂತಲಾ ವಿಷಯಕ ಪದ್ಯವನ್ನು ತನ್ನ ಕಾವ್ಯದಿಂದಲೇ ತಿಮ್ಮಣ್ಣನು ಎತ್ತಿಕೊಟ್ಟಿದ್ದರೂ ಇರಬಹುದು. ಇದು ಹೇಗಿದ್ದರೂ, ತ್ರಿಪದಿ ಮಾತ್ರ ಜನ್ನನ ಅನಂತನಾಥ ಪುರಾಣದ್ದು.

ರಸಮಂಜರಿ

ಈ ಹಿಂದೆ ಪರಿಚಯಮಾಡಿಕೊಟ್ಟ ಕನ್ನಡ ಕುವಲಯಾನಂದವನ್ನು ರಚಿಸಿದ ಚಾಮುಗೌಂಡನೇ ಇದನ್ನೂ ರಚಿಸಿರುವನು. "ಆ ಸಂಸ್ಕೃತ ರಸಮಂಜರಿ ಯೊಳು ಪೇಳ್ದ ಸ್ತ್ರೀಪುರುಷ ಲಕ್ಷಣ ಮೊದಲಾದ ರೀತಿಯನು ಸಂಕೋಚದಿಂದ ಕನ್ನಡ ಭಾಷೆಗಳಿಂದ ವುದಾಹರಣೆಗಳ ಪೇಳ್ವೆನು" ಎಂದು ಗ್ರಂಥದ ಮೊದಲಲ್ಲಿ ಹೇಳಿಕೊಂಡಿದ್ದಾನೆ. "ಇಲ್ಲಿ ಉಕ್ತವಾಗಿರುವ ಸಂಸ್ಕೃತ ರಸಮಂಜರಿ ಭಾನು ದತ್ತನ ಗ್ರಂಥವಲ್ಲದೆ ಬೇರೆಯಲ್ಲ"–ಎಂದು ತೀ. ನಂ. ಶ್ರೀ. ಅಭಿಪ್ರಾಯ ಪಟ್ಟಿದ್ದಾರೆ. ಈ ಗ್ರಂಥಕ್ಕೆ 'ಶೃಂಗಾರತಿಲಕ' ಎಂಬ ಇನ್ನೊಂದು ಹೆಸರೂ ಉಂಟು. ಈ ಗ್ರಂಥದ ಉದಾಹರಣ ಪದ್ಯಗಳು ಕನ್ನಡ ಕುವಲಯಾನಂದ ದಲ್ಲಿರುವಂತೆ ಬೇರೆ ಬೇರೆ ಪ್ರಕಾರದ ಷಟ್ಪದಿಗಳಲ್ಲಿವೆ. ಲಕ್ಷಣ ಭಾಗಗಳೂ ಉದಾಹರಣ ಪದ್ಯಗಳ ಟೀಕೆ ವಿವರಣೆಗಳೂ ಗದ್ಯದಲ್ಲಿವೆ. ಉದಾಹರಣ ಪದ್ಯಗಳ ಸಂಖ್ಯೆ 99. ಗ್ರಂಥದಲ್ಲಿ ಎಂಟು ಪ್ರಕರಣಗಳಿವೆ. ಪ್ರಕರಣಗಳಲ್ಲಿ ವಿಷಯನಿರೂಪಣೆ ಹೀಗಿದೆ: (1) ನಾಯಿಕೆಯ ಲಕ್ಷಣ. ಸ್ವೀಯೆ, ಪರಕೀಯೆ, ಸಾಮಾನ್ಯೆ ಎಂದು ಮೂರು ವಿಧ. ಸ್ವೀಯೆಯಲ್ಲಿರಬೇಕಾದ ನಾಲ್ಕು ಗುಣಗಳ ವಿವರಣೆ. ಸ್ವೀಯೆಯಲ್ಲಿ ವಯೋಭೇದದಿಂದ ಮುಗ್ಧೆ, ಮಧ್ಯೆ, ಪ್ರಗಲ್ಭೆ ಎಂದು ಮೂರು ಬಗೆ, ಹಾಗೂ ಇವರ ಲಕ್ಷಣಗಳು. (2) ಪರಕೀಯೆಯ ಭೇದಗಳ ಮತ್ತು ಲಕ್ಷಣದ ವಿವರಣೆ. ಪರಕೀಯೆಯಲ್ಲಿ ಕನ್ಯೆ, ಪರೋಢಾ ಎಂದು ಎರಡು ಬಗೆ. ಪರಪುರುಷನ ಮೇಲಿನ ಅನುರಾಗವನ್ನು ಪ್ರಕಟಮಾಡದೆ ಇರುವವಳು ಪರಕೀಯೆ. (3) ಸಾಮಾನ್ಯಾನಾಯಿಕೆಯ ಪ್ರಕಾರಗಳು ಮತ್ತು ಅವರ ಲಕ್ಷಣಗಳ ವಿವರಣೆ. ದ್ರವ್ಯಾಪೇಕ್ಷೆಯಿಂದ ಸಕಲ ಪುರುಷರ ಮೇಲೆ ಆಶೆಪಡುವವಳು. ಮೊದಲ ಪ್ರಕರಣದಲ್ಲಿ ವಿವರಿಸಿದ ಮೂರು ಬಗೆಯ ನಾಯಿಕೆಯರಲ್ಲಿಯೂ ಇರುವ ಎಂಟು ಬಗೆಯ ನಾಯಿಕೆಯರು ಮತ್ತು ಅವರ ಲಕ್ಷಣ ವಿವರಣೆ. (4) ನಾಯಿಕೆಯರಲ್ಲಿ ಉತ್ತಮಾ, ಮಧ್ಯಮಾ ಮತ್ತು ಅಧಮಾ ಎಂದು ಮತ್ತೆ ಮೂರು ಪ್ರಕಾರಗಳು, ಇವರ ಸ್ವಭಾವ ವಿವರಣೆ. (5) ನಾಯಿಕೆಯ ಪ್ರೀತಿ ಪಾತ್ರಳಾದ ಸಖಿಯ ಲಕ್ಷಣ ವಿವರಣೆ. ಇವರಲ್ಲಿ

ನಾಲ್ಕು ಬಗೆ. (6) ಉತ್ತಮಾ, ಮಧ್ಯಮಾ, ಅಧಮಾ ಎಂಬ ಮೂರು ಬಗೆಯ ದೂತಿಯರು. (7) ನಾಯಕ ವಿವರಣೆ : ನಾಯಕರಲ್ಲಿ ಪತಿ, ಉಪಪತಿ, ವೈಶಿಕ ಪತಿ ಎಂದು ಮೂರು ವಿಧ. ಪತಿಯಲ್ಲಿ–ಅನುಕೂಲ, ದಕ್ಷಿಣ, ಶಠ ದುಷ್ಟ ಎಂದು ನಾಲ್ಕು ಬಗೆ. ಮೂರು ಬಗೆಯ ನಾಯಕರಲ್ಲಿ ಮತ್ತೆ ಆರು ವಿಧ. ಎಲ್ಲ ಬಗೆಯವರಲ್ಲಿಯೂ ಉತ್ತಮ, ಮಧ್ಯಮ, ಅಧಮ ಎಂದು ಮೂರು ವಿಧ. ಇವರೆಲ್ಲರ ಲಕ್ಷಣವಿವರಣೆ. (8) ಸ್ವೇದ (ಬೆವರುವಿಕೆ), ಅಶ್ರು (ಕಣ್ಣೀರು) ಸ್ತಂಭನ (ಚೇಷ್ಟೆಯಿಲ್ಲದಿರುವಿಕೆ), ರೋಮಾಂಚ, ಸ್ವರಭಂಗ (ಧ್ವನಿ ಉಡುಗುವುದು), ವೈವರ್ಣ್ಯ (ಬಿಳಿಚಿಕೊಳ್ಳುವುದು), ವೇಪಥು (ನಡುಕ), ಪ್ರಲಯ (ಮೂರ್ಛೆ)–ಇವು ಎಂಟು ಸಾತ್ವಿಕ ಭಾವಗಳು. ಇವುಗಳ ವಿವರಣೆ. ನಾಯಕ ನಾಯಿಕೆಯರ ಪರಿಹಾಸ, ಸಂಭೋಗ ಶೃಂಗಾರ, ವಿಪ್ರಲಂಭ ಶೃಂಗಾರ ಮತ್ತು ಇವರ ದಶಾವಸ್ಥೆಗಳು. ಈ ಪ್ರಕರಣದಲ್ಲಿಯೇ ನವರಸಗಳ ವಿವರವೂ ಅವುಗಳಿಗೆ ಉದಾಹರಣೆಗಳೂ ಇವೆ. ಈ ಉದಾಹರಣೆಗಳೆಲ್ಲವೂ ಶಿವಸ್ತುತಿ ರೂಪದಲ್ಲಿವೆ. ಶಿವಸ್ತುತಿಯ ಒಂದೇ ಪದ್ಯದಲ್ಲಿ ನವರಸಗಳನ್ನೂ ಸೂಚಿಸಿರುವುದು ಚಮತ್ಕಾರ ಪೂರ್ಣವಾಗಿದೆ :

ಗಿರಿಜೆಗರೆಮೆಯ್ಯಿತ್ತ ದೆಸೆಯಿಂದ ಶೃಂಗಾರ,
ನರಕಪಾ[ಲಾ]ಹಾರದಿಂದಲ್ಲಿ ಬೀಭತ್ಸ,
ಉರಗಾಭರಣದಿಂದ ತೋರುತಿಹುದತಿಭಯಂ, ಗಜ ಚರ್ಮದಿಂದದ್ಭುತಂ.

ಕರದ ಶೂಲದಿ ವೀರ, ರೌದ್ರುವಹ ನೇತ್ರದಿಂ,
ಶಿರದ ಚಂದ್ರನ ಶಾಂತಿ, ಅರು (ರೆ?) ವಿಲ್ಲದದು ಹಾಸ್ಯ,
ಕಿರುಜಡೆಯ ಗಂಗೆ ಬಲು ಕರುಣ–ನವರಸಭರಿತ ಶಂಕರಂ ಸಲಹೆನ್ನನು ॥

[ಅರೆಮೆಯ್ಯಿ = ಅರ್ಧಮೈ. ನರಕಪಾಲ = ಮನುಷ್ಯನ ತಲೆ ಬುರುಡೆ, ಉರಗಾಭರಣ = ಹಾವಿನ ಒಡವೆ. ಅಹ = ಆಗಿರುವ. ಅರೆವಿಲ್ಲು = ಕಲ್ಲಿನ (ಎಂದರೆ ಮೇರು ಪರ್ವತ ?) ಬಿಲ್ಲು.]

ಜಾಯಗೊಂಡನ ನಿರೂಪಣಾ ವಿಧಾನವನ್ನೂ ಲಕ್ಷ್ಯ ಪದ್ಯದ ವಿವರಣೆಯ ಬಗೆಯನ್ನೂ ಒಂದು ಉದಾಹರಣೆಯಿಂದ ತಿಳಿಯಬಹುದು :

'ಯಿನ್ನು ಪರಕೀಯಾ ಲಕ್ಷಣಂಗಳ ಪೇಳ್ವೆ–
ಕನ್ಯಾ ಪರಕೀಯಾ –

ವಾರ್ಧಿಕ ॥ ಧರಣಿಪತಿ ತನ್ನ ಕುಲಶೀಲಕ್ಕೆ ಸಮನಾದ
[ಪಿ]ರಿದು ವಿಭವಾತಿಶಯವುಳ್ಳ ಭೂಪಾಲನಿಗೆ
ತರಳೆಯಳ ಮದುವೆಯನು ಮಾಡಿ ಕೊಡುವೆನೆನುತ್ತ
ನೇಮಿಸಿರಲದನು ತಿಳಿದು ॥

ತರುಣಿ ತಾನೊರ್ವ ರೂಪಾತಿಶಯ ಚದುರನಿಗೆ
ಕುರುವಿಟ್ಟು ಮದುವೆಯಾಗುವೆನೆನುತ ಮನದೊಳಗೆ
ಪರಿಪರಿಯ ಯೋಚನೆಯ ಮಾಡುತಲಿ ಬರೆದ
ಜಾತಕವನೀಕ್ಷಿಸುತಿರ್ದಳು ॥

'ಟೀಕು ॥ ಪರಪುರುಷನ ಮೇಲಿನ ಅನುರಾಗವನು ಪ್ರಕಟಮಾಡದಿರಲವಳು. ಪರಕೀಯಾಯೆನಿಸುವಳು. ಯಿಾ ಪರಕೀಯಾದಲ್ಲಿ ಕನ್ಯಾ ಪರಕೀಯಾಯೆಂದು ಪರೋಢಾ ಪರಕೀಯಾ ಯೆಂದು ಯೆರಡು ತೆರ. ಯಂತೆಂದರೆ ಮಾತೃ ಪಿತೃಗಳ ಅಜ್ಞದೊಳಿದ್ದು ಪರಪುರುಷನಲ್ಲಿ ಪ್ರೀತಿಯುಳ್ಳವಳೇ ಕನ್ಯಾ ಪರಕೀಯಾ, ಮದುವೆಯಾಗಿ ಪತಿಯಾಜ್ಞೆಯೊಳಿದ್ದು ಪರಪುರುಷನಲ್ಲಿ ಪ್ರೀತಿಯುಳ್ಳವಳೇ ಪರೋಢಾಪರಕೀಯಾ ಯೆನಿಸುವಳು.'

'ಕನ್ಯಾ ಪರಕೀಯಾ ಉದಾಹರಣೆ ಟೀಕು'–

'ಅರಸು ತನ್ನ ಕುಲಶೀಲಕ್ಕೆ ವಿಭವಕ್ಕೆ ಸರಿಯಾದ ವರಕ್ಕೆ ಮದುವೆಮಾಡಿ ಕೊಡುವೆನೆಂದು ಮನಸಿನಲ್ಲಿ ನಾನಾ ಪ್ರಕಾರ ಯೋಚಿಸುತ್ತ ತನ್ನ ಮನಸಿನ ಯೋಚನೆ ಸಫಲವಾದೀತೋ ಆಗದೋ ಯೆಂದು ತನ್ನ ಜಾತಕವನೀಕ್ಷಿಸುತಿರ್ದಳು. ತಂದೆ ನೇಮಿಸಿದ್ದು ಬಿಟ್ಟು ಮತ್ತೊಬ್ಬನ ಗುರುತಿಟ್ಟದ್ದರಿಂದ ಪರಕೀಯತ್ವ ಸಿದ್ಧವಾಯಿತು. ಯಿದು ಕ್ಷತ್ರಿಯಾದಿಗಳಲ್ಲೇ ಹೊರತು ಬ್ರಾಹ್ಮ[ಣ]ರಲ್ಲಿ ಕೂಡದು.'

ಶೃಂಗಾರ ರತ್ನಾಕರ, ರಸರತ್ನಾಕರ, ರಸಮಂಜರಿ–ಈ ಮೂರು ರಸ ವಿಷಯಕ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ವಿಷಯ ಒಂದೇ. ಮೂರರಲ್ಲಿಯೂ ಶೃಂಗಾರ ರಸಕ್ಕೇ ಪ್ರಾಧಾನ್ಯ. ಈ ಪ್ರಾಧಾನ್ಯಕ್ಕೆ ಕಾರಣವೇನೆಂಬುದನ್ನು ಕವಿಕಾಮನೂ ಸಾಳ್ವನೂ ಸ್ಪಷ್ಟಪಡಿಸಿರುವರು. ಜಾಯೇಂದ್ರನು ಗ್ರಂಥಾರಂಭದಲ್ಲಿ, 'ಪ್ರಸಿದ್ಧವಾದ ನವರಸಗಳಲ್ಲಿ ಶೃಂಗಾರ ರಸವೆ ಮೊದಲಗಿಹುದು' ಎಂದಿಷ್ಟೇ ಹೇಳಿ, ರಸಗಳ ಗಣನೆಯಲ್ಲಿ ಅದರ ಮೊದಲ ಸ್ಥಾನವನ್ನು ಮಾತ್ರ ತಿಳಿಸಿರುವನು. ಶ್ರೇಷ್ಠತೆಯಿಲ್ಲದಿದ್ದರೆ ಪ್ರಥಮಸ್ಥಾನ ಸಲ್ಲುವುದಿಲ್ಲವಷ್ಟೆ? ಶೃಂಗಾರರಸವು ಜನಪ್ರಿಯವಾದದ್ದರಿಂದ, ಈ ಮೂರು ಗ್ರಂಥಗಳೂ ತಮ್ಮ ಸ್ವಾರಸ್ಯವಾದ ಲಕ್ಷ್ಯಪದ್ಯಗಳಿಂದಾಗಿ ಓದುಗರಿಗೂ ಪ್ರಿಯ

ವಾಗುವುವು. ಮೊದಲೆರಡು ಗ್ರಂಥಗಳು ಹಳಗನ್ನಡದಲ್ಲಿರುವುದರಿಂದ, ಸಾಮಾನ್ಯರು ಅವುಗಳಲ್ಲಿನ ಉದಾಹರಣೆಯ ಪದ್ಯಗಳನ್ನು ಅರ್ಥಮಾಡಿಕೊಳ್ಳಲಾರರು. ರಸಮಂಜರಿಯ ಭಾಷೆ ಹೊಸಗನ್ನಡಕ್ಕೆ ಬಹು ಹತ್ತಿರವಾಗಿರುವುದರಿಂದಲೂ, ಜಾಯಗೊಂಡನು ಉದಾಹರಣೆಗಳ ತಾತ್ಪರ್ಯವನ್ನು ಬಹುಮಟ್ಟಿಗೆ ಸರಳವಾದ ಭಾಷೆಯಲ್ಲಿ ವಿವರಿಸಿರುವುದರಿಂದಲೂ ಅಪ್ರಕಟಿತವಾದ ಈ ಅಪೂರ್ವಕೃತಿ ಪ್ರಕಟಿತವಾದಾಗ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.*

ಧ್ವನಿತತ್ತ್ವ

ಕವಿರಾಜಮಾರ್ಗ, ಕನ್ನಡ ಕುವಲಯಾನಂದ, ಅಪ್ರತಿಮವೀರ ಚರಿತೆ–ಈ ಕನ್ನಡ ಅಲಂಕಾರ ಗ್ರಂಥಗಳಲ್ಲಿ 'ಧ್ವನಿತತ್ತ್ವ'ದ ಪ್ರಸ್ತಾಪ ಬಂದಿರುವುದನ್ನು ಈ ಹಿಂದೆ ಸೂಚಿಸಲಾಗಿದೆ. ಪ್ರಾಯಿಕವಾಗಿ ಎಲ್ಲ ಕನ್ನಡ ಕವಿಗಳೂ ಅಲಂಕಾರ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅಲಂಕಾರ, ರೀತಿ, ಗುಣ, ರಸ, ಮಾರ್ಗ, ದೇಸಿ–ಎಂಬೀ ಮಾತುಗಳನ್ನು ಪೂರ್ವಕವಿಗಳ ಇಲ್ಲವೆ ತಮ್ಮ ಕಾವ್ಯಗಳ ಪ್ರಶಸ್ತಿಯನ್ನು ಹೇಳಿಕೊಳ್ಳುವಾಗ ಬಳಸಿರುವರೇ ಹೊರತು 'ಧ್ವನಿ'ಯ ಹೆಸರನ್ನು ಎತ್ತಿಲ್ಲ. ಪಂಪನ ಆದಿ ಪುರಾಣದಲ್ಲಿ 'ಅಲಂಕಾರಧ್ವನಿ' ಎಂಬ ಮಾತು ಬರುತ್ತದೆ. ಪದ್ಯದ ಅರ್ಥವನ್ನು ಅದು ಬಂದಿರುವ ಸಂದರ್ಭದಲ್ಲಿ ವಿಚಾರಮಾಡಿ ನೋಡುವಲ್ಲಿ ಅದು ಸಂಗೀತ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ತೋರುತ್ತದೆ. ಧ್ವನಿತತ್ತ್ವ ಸಂಬಂಧವಾದ ಒಂದೆರಡು ಪಾರಿಭಾಷಿಕ ಶಬ್ದಗಳನ್ನು ಸ್ಪಷ್ಟವಾಗಿ ಪ್ರಯೋಗಿಸಿರುವವನು ನೇಮಿಚಂದ್ರನೊಬ್ಬನೆ, ತನ್ನ 'ಲೀಲಾವತಿ' ಎಂಬ ಕಾವ್ಯದಲ್ಲಿ. ಧ್ವನಿತತ್ತ್ವದ ವಿವರಣೆಗೇ ಮೀಸಲಾದ 'ಧ್ವನ್ಯಾಲೋಕ'ವೆಂಬ ಆನಂದವರ್ಧನನ ಗ್ರಂಥ 9 ನೆಯ ಶತಮಾನದಲ್ಲೇ ಹುಟ್ಟಿದ್ದು, ಮಮ್ಮಟನ 'ಕಾವ್ಯ ಪ್ರಕಾಶ'ದಲ್ಲಿ ಅದು ಪುನಃ ಪ್ರತಿಪಾದಿತವಾಗಿದ್ದರೂ 16 ನೆಯ ಶತಮಾನದವರೆಗೂ ಆ ವಿಷಯವನ್ನು ಕುರಿತು ಕನ್ನಡದಲ್ಲಿ ಯಾರೂ ಗ್ರಂಥ ರಚನೆ ಮಾಡದಿರುವುದು ನಿಜವಾಗಿಯೂ ಆಶ್ಚರ್ಯಕರವಾಗಿದೆ. ಈ ಪರಿಸ್ಥಿತಿಯಲ್ಲಿ, ರಸರತ್ನಾಕರವನ್ನು ಬರೆದ ಕವಿ ಸಾಳ್ವನು ಬರೆದಿರಬಹುದೆಂದು ಊಹಿಸಲಾದ 'ಶಾರದಾ ವಿಲಾಸ' ಎಂಬ ಗ್ರಂಥ ದೊರಕಿರುವುದು ಸಂತೋಷದ ಸಂಗತಿ. ಆದರೆ, ನಮ್ಮ ದುರ್ದೈವದಿಂದ, ಇದರ

* ಈ ಕೃತಿ ಇದೇ ಲೇಖಕನಿಂದ ಸಂಪಾದಿತವಾಗಿ, ಸದ್ಯದಲ್ಲಿಯೇ ಪ್ರಕಟವಾಗಲಿದೆ.

ಎರಡನೆಯ ಪರಿಚ್ಛೇದ ಮಾತ್ರ ದೊರೆಕಿವೆ. (ರಸರತ್ನಾಕರದೊಂದಿಗೇ ಈ ಗ್ರಂಥ ಭಾಗವೂ ಪ್ರಕಟವಾಗಿದೆ.)

ಧ್ವನಿ ಎಂದರೇನು ಎಂಬುದನ್ನು ಈ ಹಿಂದೆಯೇ ಸೂಚಿಸಿದೆ. ಇದರ ಭೇದಗಳ ವಿವರಣೆ ತುಂಬ ತೊಡಕಾದುದು. ಧ್ವನಿಯಲ್ಲಿ ವಸ್ತುಧ್ವನಿ, ಅಲಂಕಾರಧ್ವನಿ, ರಸಧ್ವನಿ ಎಂದು ಮೂರು ಬಗೆ.* ಈಗ ಸಿಕ್ಕಿರುವ ಗ್ರಂಥ ಭಾಗದ ಎರಡನೆಯ ಪರಿಚ್ಛೇದದಲ್ಲಿ 'ಧ್ವನಿವ್ಯಂಗ್ಯ' ವಿವರಣೆ ಬಂದಿದೆ. "ವ್ಯಂಗ್ಯ ಪ್ರಭೇದಗಳು ಅನೇಕ; ಅವಕ್ಕೆ ಅಂಗವಾಗಿ ಬರುವ ವಾಚ್ಯಾಲಂಕಾರಾದಿಗಳ ಪ್ರಭೇದಗಳು ಅನೇಕ; ಇವುಗಳಿಗೆ ಬೇರೆ ಬೇರೆ ರೀತಿಯಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸಿ ನೋಡಿದರೆ ಪ್ರಭೇದಗಳ ಸಂಖ್ಯೆ ಅನಂತವಾಗುತ್ತದೆ; ಇವನ್ನು ಲೆಕ್ಕಿಸುವುದೇ ಅಸದಳ; ಇನ್ನು ನಿರ್ದೇಶಿಸುವುದೆಲ್ಲಿ ಬಂತು!"[22] ಎಂಬ ವಿವೇಕಪೂರ್ಣವಾದ ಮಾತಿನೊಂದಿಗೆ ಈ ವಿಚಾರ ವಿಮರ್ಶೆಯ ಪ್ರಯತ್ನವನ್ನು ಕೈಬಿಟ್ಟು, 'ಶಾರದಾ ವಿಲಾಸ'ದ ವಿಚಾರವಾಗಿ ಒಂದೆರಡು ಮಾತು ಹೇಳಿ. ಅದರಲ್ಲಿನ ವಿಷಯ ನಿರೂಪಣೆಯ ಕ್ರಮವನ್ನು ಪರಿಚಯಮಾಡಿಕೊಳ್ಳೋಣ.

ಶಾರದಾ ವಿಲಾಸದ ಕರ್ತೃ—ಆತ ಶಾಳ್ವನೇ ಆಗಿರಲಿ ಬೇರೊಬ್ಬನೇ ಆಗಿರಲಿ—ಈಗ ಸಿಕ್ಕಿರುವ ಗ್ರಂಥ ಭಾಗದಲ್ಲಿ ಧ್ವನಿತತ್ತ್ವದ ಕ್ರಮವನ್ನು ಶಾಸ್ತ್ರೀಯವಾಗಿ ವಿವರಿಸಿರುವುದನ್ನು ನೋಡಿದರೆ, ಅವನು ಅದನ್ನು ಚೆನ್ನಾಗಿ ಬಲ್ಲನೆಂದು ಹೇಳಬಹುದು. ಒಂದು ಕಡೆ ತಾನು ಹೇಳಿರುವುದಕ್ಕಿಂತ ಹೆಚ್ಚಿನ ವಿಚಾರವನ್ನು 'ಕಾವ್ಯ ಪ್ರಕಾಶಿಕೆ' ಮತ್ತು 'ಸಾಹಿತ್ಯ ಸುಧಾರ್ಣವ'ದಲ್ಲಿ ನೋಡಿ ತಿಳಿಯಬೇಕೆಂದು ಸೂಚಿಸಿದ್ದಾನೆ. ಮೊದಲನೆಯದು ಮಮ್ಮಟನ ಕಾವ್ಯ ಪ್ರಕಾಶವೇ ಇರಬೇಕು. ಎರಡನೆಯದು ಯಾವುದೋ ತಿಳಿದು ಬಂದಿಲ್ಲ. ಅವನು ಕೊಡುವ ಉದಾಹರಣೆಗಳು ಬಹುಮಟ್ಟಿಗೆ ಸಂಸ್ಕೃತ ಲಕ್ಷಣ ಗ್ರಂಥಗಳಿಂದ ಆಯ್ದುಕೊಂಡವು.

ನಿರೂಪಣ ಪದ್ಧತಿಗೆ ಉದಾಹರಣೆ:

'ವಚನಂ ॥ ಮತ್ತಂ ಕಾವ್ಯ ವಿಶೇಷಭೇದಂಗಳಂ ಪೇಳ್ವೆನದೆಂತೆಂದೊಡೆ-

---

*ಈಚೆಗೆ 'ದರ್ಶನಧ್ವನಿ' ಎಂಬ ಒಂದು ಪ್ರಕಾರವನ್ನೂ ಕಲ್ಪಿಸಲಾಗಿದೆ. ಎಲ್ಲ ವಿಷಯಗಳಂತೆ 'ದರ್ಶನ'ವೂ ಕಾವ್ಯದ ವಸ್ತುವಾಗಬಹುದು. ಕಾವ್ಯದಲ್ಲಿ 'ದರ್ಶನ' (ಆಧ್ಯಾತ್ಮಿಕ ನೋಟ) ವ್ಯಂಗ್ಯವಾಗಿದ್ದರೆ, ಅದೂ ವಸ್ತುಧ್ವನಿಯಲ್ಲೇ ಅಡಕವಾಗುತ್ತದೆ. ಇಂಥ ಒಂದು ಪ್ರತ್ಯೇಕ ಪ್ರಕಾರವನ್ನು ಕಲ್ಪಿಸುವ ಅಗತ್ಯ ಕಾಣದು.

"ಸೂ॥ ಆವೆಡೆಯೊಳಂ ವಾಚ್ಯದತ್ತಣಿಂದ ಅಧಿಕಮಪ್ಪ ವ್ಯಂಗ್ಯಮನುಳ್ಳುದು ಉತ್ತಮ ಕಾವ್ಯಂ. ಆವುದಾನೊಂದೆಡೆಯೊಳ್ ವಾಚ್ಯಾರ್ಥದತ್ತಣಿಂದು ಅತಿಶಯಮಾಗಿ ತೋರುತಿರ್ಪ ವ್ಯಂಗ್ಯಮನುಳ್ಳುದು ಮಧ್ಯಮಕಾವ್ಯಂ. ಶಬ್ದಾರ್ಥೋಭಯ ಚಿತ್ರಮಾಗಿ ವ್ಯಂಗ್ಯರಹಿತ ಮಾಪ್ಪುದು ಅಧಮ ಕಾವ್ಯಂ."

ಅಧಮ ಕಾವ್ಯಕ್ಕೆ ಉದಾಹರಣೆ:

"ಎಳನೀರಂ ತೆಂಗು ರಂಭಾಪ್ರತತಿಗೆರೆಯೆ, ರಂಭಾಳಿಗಳ್ ತಮ್ಮನೀರಾ-
ವಳಿಯಂ ಪುಂಡ್ರೇಕ್ಷು ವಾಟಾವಳಿಗೆ ಸುರಿಯೆ ಪುಂಡ್ರೇಕ್ಷುಗಳ್ ತಮ್ಮ ನೀರಂ
ಕಳಮಕ್ಷೇತ್ರಕ್ಕೆ ಪೂರಂಬರಿಯಿಸೆ ; ಕಳಮಶ್ರೇಣಿಗಳ್ ತಮ್ಮ ಪಾಲಂ
ಗಿಳಿವಿಂಡಿಂಗೀಯೆ, ಚೆಲ್ವಾದುದು ಪುರಬಹಿರುದ್ಯಾನ ಕೇದಾರಜಾಳಂ".

[ತೆಂಗಿನ ಮರಗಳು ಬಾಳೆಯ ಗಿಡಗಳ ಗುಂಪಿಗೆ ತಮ್ಮ ಎಳನೀರನ್ನು ಎರೆಯುತ್ತಿದ್ದುವು. ಬಾಳೆಯ ಗಿಡಗಳು ತಮ್ಮಲ್ಲಿ ಕೂಡಿಕೊಂಡ ನೀರನ್ನು ಕಬ್ಬಿನ ಮಡಿಗಳಿಗೆ ಸುರಿಯುತ್ತಿದ್ದುವು. ಕಬ್ಬಿನ ಮಡಿಗಳು ತಮ್ಮಲ್ಲಿದ ನೀರನ್ನು ಬತ್ತದ ಗದ್ದೆಗಳಿಗೆ ಹರಿಯಬಿಡುತ್ತಿದ್ದುವು. ಬತ್ತದ ಗದ್ದೆಗಳು ತಮ್ಮ (ತೆನೆಗಳ) ಹಾಲನ್ನು ಗಿಳಿಗಳ ಬಳಗಕ್ಕೆ ಕೊಡುತ್ತಿದ್ದುವು ಹೀಗೆ, ಪಟ್ಟಣದ ಹೊರಗಿನ ಉದ್ಯಾನಗಳ ಮತ್ತು ಗದ್ದೆಗಳ ಸಮೂಹವು ಚೆಲುವಾಗಿತ್ತು.]

ಮೇಲಿನ ಪದ್ಯದಲ್ಲಿ ಮುಕ್ತಪದಗ್ರಹಣಾಲಂಕಾರ ಎಂಬ ಶಬ್ದಾಲಂಕಾರ ಇದೆಯೇ ಹೊರತು ಹೃದಯಂಗಮವಾದ ಅರ್ಥಸೌಂದರ್ಯ ಯಾವುದೂ ಇಲ್ಲ. ಅರ್ಥದಲ್ಲಿಯೂ ಕವಿಕಲ್ಪನೆಯ ಚಮತ್ಕಾರವಿದೆ, ಅಷ್ಟೆ. ಆದ್ದರಿಂದ, ಇದು ಅಧಮಕಾವ್ಯ. (ಅಧಮಕಾವ್ಯ ಎಂದರೆ ನಿಕೃಷ್ಟವಾದದ್ದು, ಓದಲು ಯೋಗ್ಯವಾದದ್ದಲ್ಲ, ಎಂದು ಅರ್ಥವಲ್ಲ. ಕಾವ್ಯದ ದರ್ಜೆಗಳಲ್ಲಿ ಮೂರನೆಯ ದರ್ಜೆಯದು ಎಂದಷ್ಟೇ ತಾತ್ಪರ್ಯ.)

ವಸ್ತುವಿನ ವರ್ಣನೆಯಿಂದ ಅಲಂಕಾರ ವ್ಯಂಗ್ಯವಾಗಿ ತೋರಿ ಬಂದು, 'ಅಲಂಕಾರ ಧ್ವನಿ' ಸಿದ್ಧಿಸುವುದಕ್ಕೆ ಉದಾಹರಣೆ—

"ಸುತಶೋಕವಹ್ನಿದಗ್ಧೋ-
ನ್ನತ ಕಾಯಂ ಬಾಹ್ಯಕುಂಡ ಸಂಸ್ಥಿತ ಶಿಖಿ ತಾ-
ನತಿ ಶೀತಮೆಂದು ನಿಲ್ಲದೆ
ದ್ರುತಗತಿಯಿಂ ಅಗಾಧಮಪ್ಪ ಮಡುವೊಳ್ ಬಿಳ್ದಂ."

[ಪುತ್ರಶೋಕವೆಂಬ ಅಗ್ನಿಯಿಂದ ಬೆಂದ ಎತ್ತರವಾದ ದೇಹವುಳ್ಳವನು, ಹೊರಗೆ ಅಗ್ನಿಕುಂಡದಲ್ಲಿದ್ದ ಉರಿ ಬಹಳ ತಣ್ಣಗಿದೆ ಎಂದು ತಿಳಿದು, ಬೇಗ ನಡೆದು ಹೋಗಿ ಆಳವಾದ ಮಡುವಿನಲ್ಲಿ ಬಿದ್ದನು.]

“ವಿವರಣಂ ॥ ಇಲ್ಲಿ ವಸಿಷ್ಠಂ ಪುತ್ರಶೋಕದಿಂ ಬೆಂದು ಅಗ್ನಿಯುಂ ಪ್ರೊಕ್ಕೊಡೆ ಬೇಯೆನೆಂಬ ವಾಕ್ಯಾರ್ಥರೂಪಮಪ್ಪ ವಸ್ತುಸ್ವಭಾವಂ, ಶೋಕಂ ಬಾಹ್ಯಾಗ್ನಿಯಿಂದಧಿಕಮೆಂಬ ವ್ಯತಿರೇಕಾಲಂಕಾರಮುಂ ಧ್ವನಿಯಿಸಿತು.”

* * *

ಇಲ್ಲಿಗೆ, ಇಪ್ಪತ್ತನೆಯ ಶತಮಾನದವರೆಗೆ ಅಲಂಕಾರ ಶಾಸ್ತ್ರದಲ್ಲಿ ರಚಿತವಾದ ಕನ್ನಡ ಲಕ್ಷಣಗ್ರಂಥಗಳ ಒಂದು ಬಹು ಸ್ಥೂಲವಾದ ಪರಿಚಯ ಮುಗಿದಂತಾಯಿತು. ಈ ಗ್ರಂಥಗಳೆಲ್ಲವೂ ಸಾಧಾರಣವಾಗಿ ಹಳಗನ್ನಡದಲ್ಲಿಯೇ ಇರುವುದರಿಂದ, ಅಲಂಕಾರಶಾಸ್ತ್ರವನ್ನು ಹೊಸಗನ್ನಡದಲ್ಲಿ ವಿವರಿಸಬೇಕಾದ ಅಗತ್ಯವಿದ್ದಿತು. ಈ ನಿಟ್ಟಿನಲ್ಲಿ ನಡೆದ ಮೊದಲನೆಯ ಶ್ಲಾಘ್ಯವಾದ ಪ್ರಯತ್ನವನ್ನು ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡು, ಹಳಗನ್ನಡ ವ್ಯಾಕರಣ ಅಲಂಕಾರಶಾಸ್ತ್ರ ಭಾಷಾಚರಿತ್ರೆ ಸಾಹಿತ್ಯಚರಿತ್ರೆ, ಇವೆಲ್ಲವನ್ನೂ ಒಳಗೊಂಡಂತೆ ‘ಕನ್ನಡ ಕೈಪಿಡಿ’ ಒಂದನ್ನು ಬೇರೆ ಬೇರೆ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಿತು. ಈ ಗ್ರಂಥದಲ್ಲಿ ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳು ಬರೆದಿರುವ ‘ಅಲಂಕಾರಶಾಸ್ತ್ರ’ದ ಭಾಗ ಬಹು ಅಡಕವಾಗಿಯೂ ಸಾರವತ್ತಾಗಿಯೂ ಇದೆ. ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಬರವಣಿಗೆ ಎನಿಸಿದೆ. ಈ ಕ್ಷೇತ್ರದಲ್ಲಿ ಅತ್ಯಂತ ಗಮನಾರ್ಹವಾದ ಕೃತಿ ಎಂದರೆ, ದಿವಂಗತ ತೀ. ನಂ. ಶ್ರೀಕಂಠಯ್ಯನವರು ಬರೆದಿರುವ ‘ಭಾರತೀಯ ಕಾವ್ಯಮೀಮಾಂಸೆ’. ಇದನ್ನು ಒಂದು ‘ಆಚಾರ್ಯಕೃತಿ’ ಎಂದು ಗ್ರಂಥದ ಮುನ್ನುಡಿಯಲ್ಲಿ ಕೆ. ವಿ. ಪುಟ್ಟಪ್ಪನವರು ಕರೆದಿರುವುದು ಉಚಿತವಾಗಿದೆ.

ಕನ್ನಡ ಲಕ್ಷಣ ಗ್ರಂಥಗಳೆಲ್ಲವೂ ಸಂಸ್ಕೃತ ಲಕ್ಷಣ ಗ್ರಂಥಗಳನ್ನು ಅನುಸರಿಸಿ ಬರೆದವು ಎಂಬ ಸಂಗತಿ ಸ್ಪಷ್ಟವಾಗಿದೆಯಷ್ಟೆ. ಈ ಗ್ರಂಥಗಳನ್ನು ಬರೆದವರು ಎಷ್ಟರಮಟ್ಟಿಗೆ ಮೂಲವನ್ನು ಅನುಸರಿಸಿದ್ದಾರೆ, ಇವುಗಳಲ್ಲಿರಬಹುದಾದ ಲೋಪದೋಷಗಳೇನು, ಇವುಗಳಲ್ಲಿ ಸ್ವತಂತ್ರವಿಚಾರಗಳೇನಾದರೂ ಇವೆಯೆ—ಎಂದು ಸಂಸ್ಕೃತ ಮೂಲ ಕೃತಿಗಳೊಂದಿಗೆ ಹೋಲಿಸಿ, ತೂಗಿನೋಡಿ, ಅವುಗಳ ಬೆಲೆ ಕಟ್ಟುವ ಉದ್ದೇಶದಿಂದ ಅವುಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೂ, ಸಂಸ್ಕೃತ ಭಾಷೆಯ ಗಾಢವಾದ ಪರಿಚಯವಿಲ್ಲದಿದ್ದರೂ ಸಂಸ್ಕೃತ ಲಕ್ಷಣಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳಬೇಕೆಂದು ಬಯಸುವವರಿಗೂ ಅನುಕೂಲವಾಗುವಂತೆ ಅವುಗಳನ್ನು ಭಾಷಾಂತರ ಮಾಡುವ

ಕೆಲಸ ನಡೆದೇ ಇರಲಿಲ್ಲ. ಈ ಕೊರನೆಯನ್ನು ಗಮನಿಸಿ, ಉಭಯ ಭಾಷಾ ವಿದ್ವಾಂಸರಾದ ಕೆ. ಕೃಷ್ಣಮೂರ್ತಿಯವರು ಭಾಮಹನ 'ಕಾವ್ಯಾಲಂಕಾರ', ದಂಡಿಯ 'ಕಾವ್ಯಾದರ್ಶ', ವಾಮನನ 'ಕಾವ್ಯಾಲಂಕಾರ ಸೂತ್ರ-ವೃತ್ತಿ', ಮಮ್ಮಟನ 'ಕಾವ್ಯಪ್ರಕಾಶ', ಆನಂದವರ್ಧನನ 'ಧ್ವನ್ಯಾಲೋಕ' ಮುಂತಾದ ಪ್ರಮುಖ ಲಕ್ಷಣಗ್ರಂಥಗಳನ್ನೆಲ್ಲಾ ತಿಳಿಯಾದ ಅಂದವಾದ ಹೊಸಗನ್ನಡದಲ್ಲಿ ಭಾಷಾಂತರಮಾಡಿ, ಕವಿಕೃತಿ ವಿಷಯಕವಾಗಿ ವಿಸ್ತಾರವಾದ ಸಾಹಿತ್ಯಪೂರ್ಣವಾದ ವಿಮರ್ಶಾತ್ಮಕವಾದ ಪೀಠಿಕೆಗಳೊಡನೆ ಪ್ರಕಟಿಸಿ, ಒಂದು ಅಭೂತಪೂರ್ವವಾದ ಸಾಧನೆಯನ್ನು ಮಾಡಿದ್ದಾರೆ; ಅಲಂಕಾರಶಾಸ್ತ್ರ ಪ್ರಪಂಚದ ವಿವಿಧತೆಯನ್ನೂ ವಿಸ್ತಾರವನ್ನೂ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ.

ಕನ್ನಡ ಲಕ್ಷಣ ಗ್ರಂಥಗಳು ಕೂಡ ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳಿಗೂ ಸಾಮಾನ್ಯ ಜನಕ್ಕೂ ಕಷ್ಟತರವೆಂದೇ ಹೇಳಬೇಕು. ಪೂರ್ವ ವಿದ್ವಾಂಸರು ಈ ಗ್ರಂಥಗಳನ್ನು ಸಂಪಾದನೆ ಮಾಡಿ ಪ್ರಕಟಿಸಿ ಉಪಕರಿಸಿದ್ದರು. ಇವು ಸುಲಭವಾಗಿ ಅರ್ಥವಾಗುವಂತೆ ಇವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಬೇಕಾದ ಅಗತ್ಯವೂ ಇದ್ದಿತು. ಈಚೆಗೆ, ಇಂಥ ಟೀಕೆ ಟಿಪ್ಪಣಿಗಳ ಸಮೇತ, ಕೃತಿ ಮತ್ತು ಕೃತಿಕರ್ತನ ಬಗೆಗೆ ವಿಮರ್ಶಾತ್ಮಕವಾದ ಪೀಠಿಕೆಗಳೊಡನೆ, 'ಕವಿರಾಜಮಾರ್ಗ', 'ಉದಯಾದಿತ್ಯಾಲಂಕಾರ', 'ಕನ್ನಡ ಕುವಲಯಾನಂದ' ಮುಂತಾದ ಗ್ರಂಥಗಳು ಶಾಸ್ತ್ರೀಯವಾಗಿ ಸಂಪಾದಿತವಾಗಿ ಹೊರಬಂದಿವೆ. ಈ ಬಗೆಯ ಕೆಲಸ ಮುಂದುವರಿಯಬೇಕಾಗಿದೆ.

ಕಾವ್ಯಕ್ಕೆ ಸಂಬಂಧಪಟ್ಟ ಶಾಸ್ತ್ರವನ್ನು ಪಾಶ್ಚಾತ್ಯರು poetics ಎಂದು ಕರೆಯುತ್ತಾರೆ. ಅರಿಸ್ಟಾಟಲ್ ಎಂಬ ಗ್ರೀಕ್ ಲಾಕ್ಷಣಿಕ ಪಾಶ್ಚಾತ್ಯ ಕಾವ್ಯಶಾಸ್ತ್ರದ ಪ್ರಥಮಾಚಾರ್ಯ. ಅವನಿಂದ ಮೊದಲ್ಗೊಂಡು ಇಂದಿನವರೆಗೆ ಅನೇಕ ಪಾಶ್ಚಾತ್ಯ ವಿದ್ವಾಂಸರು ಪಾಶ್ಚಾತ್ಯ ಕಾವ್ಯ ಸಂಪ್ರದಾಯಗಳನ್ನು ಲಕ್ಷ್ಯವಲ್ಲಿಟ್ಟುಕೊಂಡು ಸಾಹಿತ್ಯದ ವಿವಿಧ ಮುಖಗಳನ್ನು ಕುರಿತು ಚರ್ಚಿಸುತ್ತ ಬಂದಿದ್ದಾರೆ; ಅಪಾರ ವಿಮರ್ಶಾ ಗ್ರಂಥರಾಶಿಯನ್ನು ಸೃಷ್ಟಿಮಾಡಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಸಾಹಿತ್ಯ ಲಕ್ಷಣ ಸೂತ್ರಗಳನ್ನೂ ಒಳಗೊಂಡಂತೆ ಸಾಹಿತ್ಯ ವಿಮರ್ಶೆ ಅಗಾಧವಾಗಿ ಬೆಳೆದು ಬಂದಿದೆ. ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮವಾಗಿ ಕನ್ನಡದಲ್ಲಿಯೂ ಪಾಶ್ಚಾತ್ಯ ಕಾವ್ಯ ಸಂಪ್ರದಾಯಗಳು ಬೇರುಬಿಟ್ಟು, ಅವಕ್ಕೆ ಅನುಗುಣವಾಗಿ ವಿಮರ್ಶಾಶಾಸ್ತ್ರ ವ್ಯಾಸಂಗವೂ

ನಡೆಯುತ್ತ ಬಂದಿದೆ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳನ್ನು ವ್ಯಾಸಂಗ ಮಾಡಿರುವ ನಮ್ಮ ವಿದ್ವಾಂಸರು ಪಾಶ್ಚಾತ್ಯ ಸಾಹಿತ್ಯ ಸೂತ್ರಗಳನ್ನೂ ವಿಮರ್ಶಾ ಪದ್ಧತಿಯನ್ನೂ ಲೇಖನಗಳ ಮೂಲಕವೂ, ಅನುವಾದಗಳ ಮೂಲಕವೂ ಪರಿಚಯ ಮಾಡಿಕೊಡುತ್ತಿದ್ದಾರೆ. ಹಳಗನ್ನಡ ಕಾವ್ಯಗಳನ್ನು ಪಾಶ್ಚಾತ್ಯ ಸಾಹಿತ್ಯ ಸೂತ್ರಗಳ ಬೆಳಕಿನಲ್ಲಿ, ಪಾಶ್ಚಾತ್ಯ ವಿಮರ್ಶಾ ಶಾಸ್ತ್ರವನ್ನು ಅನ್ವಯಿಸಿ, ವಿಮರ್ಶೆ ಮಾಡುವ ಹಾಗೂ ಬೆಲೆ ಕಟ್ಟುವ ಕಾರ್ಯ ರೂಢಿಗೆ ಬಂದಿದೆ. ಆಧುನಿಕ ಕನ್ನಡ ಸಾಹಿತ್ಯವನ್ನು ಪಾಶ್ಚಾತ್ಯ ಪದ್ಧತಿಗೆ ಅನುಗುಣವಾಗಿಯೇ ವಿಮರ್ಶೆ ಮಾಡಬೇಕಾದದ್ದು ಉಚಿತವಾಗಿಯೂ ಇದೆ, ಅಗತ್ಯವಾಗಿಯೂ ಇದೆ. ಆದರೆ, ನಮ್ಮ ಪ್ರಾಚೀನ ಕೃತಿಗಳು ಭಾರತೀಯ ಕಾವ್ಯಲಕ್ಷಣದ ಚೌಕಟ್ಟಿನಲ್ಲಿ ನಿರ್ಮಿತವಾದವು. ಭಾರತೀಯ ಕಾವ್ಯಗಳು ಹಾಗೂ ಕಾವ್ಯ ಮೀಮಾಂಸೆ ಭಾರತೀಯ ಸಂಸ್ಕೃತಿಯ ನೆಲದಲ್ಲಿ ಹುಟ್ಟಿ ಬೆಳೆದಿವೆ. ಆದ್ದರಿಂದ, ನಮ್ಮ ಕಾವ್ಯಗಳ ಸ್ವಾರಸ್ಯವನ್ನು ಪೂರ್ಣವಾಗಿ ಸವಿಯಬೇಕಾದರೆ, ಭಾರತೀಯ ಕಾವ್ಯಲಕ್ಷಣಗಳ ಬೆಳಕನ್ನು ಅವುಗಳ ಮೇಲೆ ಹಾಯಿಸಿಯೇ ಅವುಗಳ ಸ್ವರೂಪವನ್ನು ಕಾಣಬೇಕಾಗಿದೆ. ಹಾಗೆಯೇ, ಸಾರ್ವತ್ರಿಕವೂ ಸಾರ್ವಕಾಲಿಕವೂ ಆದ ಮೂಲಭೂತ ಭಾರತೀಯ ಕಾವ್ಯತತ್ತ್ವಗಳನ್ನು ಅನ್ವಯಿಸಿ, ಆಧುನಿಕ ಕನ್ನಡ ಸಾಹಿತ್ಯವನ್ನು ವಿಮರ್ಶೆಮಾಡುವ ಪದ್ಧತಿಯೂ ಒಂದು ಮಿತಿಯಲ್ಲಿ ರೂಢಿಗೆ ಬರಬೇಕಾಗಿದೆ. ಪಾಶ್ಚಾತ್ಯ ಮತ್ತು ಭಾರತೀಯ ಸಾಹಿತ್ಯ ಮತ್ತು ಸಾಹಿತ್ಯ ಶಾಸ್ತ್ರಗಳಲ್ಲಿರುವ ಸಮಾನಾಂಶಗಳನ್ನೂ ಗುರುತಿಸಬೇಕಾಗಿದೆ. ಈ ದಿಸೆಯಲ್ಲಿಯೂ ಕಾರ್ಯಪ್ರಯತ್ನಗಳು ನಡೆಯತೊಡಗಿವೆ. ಈ ವಿಚಾರದ ಪರಿಚಯಕ್ಕೆ ಪ್ರತ್ಯೇಕ ಗ್ರಂಥವೇ ಬೇಕು. ಕಡೆಯ ಪಕ್ಷ, ಪ್ರತ್ಯೇಕ ಅಧ್ಯಾಯವಾದರೂ ಬೇಕು. ಈ ಗ್ರಂಥದ ಉದ್ದೇಶದಲ್ಲಿ ಈ ವಿಚಾರದ ಸಮೀಕ್ಷೆ ಸೇರಿಲ್ಲ. ಈ ಪ್ರಕರಣದ ಕೊನೆಯ ಮಾತಾಗಿ ಇಷ್ಟನ್ನು ಮಾತ್ರ ಹೇಳಬೇಕಾಗಿದೆ: ನಮ್ಮ ಪೂರ್ವದ ಕನ್ನಡ ಸಾಹಿತ್ಯ ಸಂಪತ್ತಿನ ಸೌಂದರ್ಯ ಸತ್ತ್ವಗಳನ್ನು ಗ್ರಹಿಸಬೇಕಾದರೆ, ಪ್ರಮುಖ ಕನ್ನಡ ಲಕ್ಷಣ ಗ್ರಂಥಗಳ ಮೂಲಕವಾದರೂ ಭಾರತೀಯ ಕಾವ್ಯ ಮೀಮಾಂಸೆಯ ಪರಿಚಯವನ್ನು ಹೊಂದಿರಬೇಕಾದದ್ದು ಅತ್ಯಗತ್ಯ.

ಅಡಿ ಟಿಪ್ಪಣಿಗಳು

1 ಅಕ್ಕಲೆ ನರಸಿಂಹಶಾಸ್ತ್ರೀ : 'ಕರ್ಣಾಟಕ ಚಂದ್ರಾಲೋಕ,' 1905 ; ಪೀಠಿಕೆ, ಪು. 1
2 ದಂಡಿ : ಕಾವ್ಯಾದರ್ಶ (ii-1) : 'ಕಾವ್ಯ ಶೋಭಾಕರಾನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೇ'
3 ವಾಮನ : ಕಾವ್ಯಾಲಂಕಾರ ಸೂತ್ರ (i-1, 2, 3) : 'ಸೌಂದರ್ಯಮಲಂಕಾರಃ'
4 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ, 1953 ; ಪು. 262
5 ಡಿ. ವಿ. ಗುಂಡಪ್ಪ : 'ಜೀವನ ಸೌಂದರ್ಯ ಮತ್ತು ಸಾಹಿತ್ಯ,' 4ನೆಯ ಮುದ್ರಣ, ಪು. 28ರ ಅಡಿಟಿಪ್ಪಣಿ : "ಸುಂದರ ಎಂಬ ಪದವು 'ಉನ್ದ' ಎಂಬ ಧಾತುವಿನಿಂದ ಬಂದದ್ದು. 'ಉನ್ದ' ಎಂದರೆ ಆರ್ದ್ರ ಮಾಡುವುದು, ಒದ್ದೆ ಮಾಡುವುದು, ತೋಯಿಸುವುದು—ಯಾವುದು ಮನಸ್ಸನ್ನು ಚೆನ್ನಾಗಿ ತೋಯಿಸ ಬಲ್ಲುದೋ, 'ಸರಸ' ಮಾಡಬಲ್ಲುದೋ ಅದು ಸುಂದರ." ('ಸರಸ' ಎಂದರೆ ರಸದಿಂದ ಕೂಡಿರುವುದು ಎಂದು ಅರ್ಥ)
6 ಭಾಮಹ : ಕಾವ್ಯಾಲಂಕಾರ (i-16)
7 ಕೆ. ಕೃಷ್ಣಮೂರ್ತಿ : ಕನ್ನಡ ಕಾವ್ಯಾಲಂಕಾರ, ಶಾರದಾ ಮಂದಿರ, ಮೈಸೂರು, 1961 ; ಪೀಠಿಕೆ, ಪು. xlii
8 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ. 1953 ; ಪು, 28, 29, 30
9 ವಿಶ್ವನಾಥ : ಸಾಹಿತ್ಯ ದರ್ಪಣ (ಕನ್ನಡ ಕೈಪಿಡಿ, ಪು. 203ರಲ್ಲಿ ಉದ್ಧರಿಸಿದೆ)
10 ಜಗನ್ನಾಥ ಪಂಡಿತ : ರಸಗಂಗಾಧರ (ಕನ್ನಡ ಕೈಪಿಡಿ, ಪು. 203 ರಲ್ಲಿ ಉದ್ಧರಿಸಿದೆ)
11 ಎ. ಆರ್. ಕೃಷ್ಣಶಾಸ್ತ್ರಿ : ಕನ್ನಡ ಕೈಪಿಡಿ, 3ನೆಯ ಭಾಗ, ix-i), ಅಲಂಕಾರ ; ಪು. 206
12 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ, 1953 ; ಅರಿಕೆ, ಪು. xiii
13 ದಂಡಿ : ಕಾವ್ಯಾದರ್ಶ (i–10) : 'ತೈಃ ಶರೀರಞ್ಚ ಕಾವ್ಯಾನಾಂ ಅಲಂಕಾರಾಶ್ಚ ದರ್ಶಿತಾಃ। ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ ॥
14 ಡಿ. ವಿ. ಗುಂಡಪ್ಪ : 'ಕರ್ನಾಟಕ ಪ್ರಗತಿಪಥ' (ಭಾಷಣ) ; ಮೈಸೂರು ಸರ್ಕಾರದ ಪ್ರಕಟನೆ, ಪು. 3
15 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ. 1953 ; ಪು. 446
16 ಆರ್. ನರಸಿಂಹಾಚಾರ್ (ಸಂ) : ನಾಗವರ್ಮ ವಿರಚಿತಂ ಕಾವ್ಯಾವಲೋಕನಂ ; ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ ; ತೃತೀಯ ಮುದ್ರಣ, 1967 ; ಪ್ರಥಮ ಮುದ್ರಣದ ಉಪೋದ್ಘಾತ (ಇಂಗ್ಲಿಷಿನಲ್ಲಿ), ಪು. 53

17 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ, 1953 ; ಪು. 448–449.

18 ಆರ್. ನರಸಿಂಹಾಚಾರ್ : ಕರ್ಣಾಟಕ ಕವಿಚರಿತೆ, 1972ರ ಮುದ್ರಣ ; ಪು. 179-180

19 ಶಿ. ಚೆ. ನಂದಿಮಠ (ಸಂ) : ಕನ್ನಡ ಕುವಲಯಾನಂದ, 1970 ; ಗ್ರಂಥಕಾರನ ವಂಶಪರಿಚಯ, ಪು. xiii–xiv

20 ಜಯರಾಯಾಚಾರ್ಯ (ಸಂ) : ನರಪತಿಚರಿತಂ, ಕರ್ನಾಟಕ ಗ್ರಂಥಮಾಲೆ, 1899, ಪೀಠಿಕೆ. ಪು. 1–2

21 ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, 1953 ; ಪು. 202

22 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ, 1953 ; ಪು. 456

23 ಅದೇ : ಪು. 263

ಛಂದಸ್ಸು

ಹಿನ್ನೆಲೆ

ಪ್ರಪಂಚದ ಜ್ಞಾನವನ್ನು ನಾವು ಇಂದ್ರಿಯಗಳ ಮೂಲಕ ಪಡೆಯುತ್ತೇವೆ ಎಂದು ಹಿಂದೆ ಹೇಳಿದೆಯಷ್ಟೆ. ಹಾಗೆಯೇ, ಸೃಷ್ಟಿಯ ಸೌಂದರ್ಯವನ್ನು ಇಂದ್ರಿಯಗಳ ಮೂಲಕ ಅನುಭವಿಸುತ್ತೇವೆ. ಹೊರಗಣ ಜಗತ್ತಿನ ಚೆಲುವನ್ನು ಅನುಭವಿಸುವುದರಲ್ಲಿ ಕಣ್ಣು ಕಿವಿಗಳ ಪಾತ್ರ ಮುಖ್ಯವಾದದು. ಕಣ್ಣು ದೃಶ್ಯ (ಕಾಣುವ) ಪ್ರಪಂಚದ ಚೆಲುವನ್ನು ನೋಡಿ ನಲಿದರೆ, ಕಿವಿ ಶ್ರವ್ಯ (ಕೇಳುವ) ಪ್ರಪಂಚದ ಇಂಪನ್ನು ಕೇಳಿ ಸುಖಪಡುತ್ತದೆ. ದೂರದ ಬೆಟ್ಟಸಾಲಿನ ನೀಲಿಯ ಬಣ್ಣ, ಅದರಲ್ಲಿ ಅಲೆಯಲೆಯಾಗಿ ಏರಿ ಇಳಿಯುವ ಅಂಕುಡೊಂಕುಗೆರೆಯ ಆಕಾರ; ಹೂಗಳ, ಎಲೆಗಳ, ಬಗೆಬಗೆಯ ಬಣ್ಣ ಮತ್ತು ಅವುಗಳ ಎಸಳಿನ ಮಾಟ, ಮನುಷ್ಯನ ಮೈಯಲ್ಲಿ ಆ ಕಡೆ ಈ ಕಡೆ ಹಂಚಿಕೊಂಡಿರುವ ಕಣ್ಣು ಹುಬ್ಬು ಕಿವಿ ಕೈಕಾಲುಗಳ ಸಮಪ್ರಮಾಣ (ಒಂದೇ ಅಳತೆಯ ಮಾಟ) – ಹೀಗೆ, ದೃಶ್ಯ ಸೌಂದರ್ಯದಲ್ಲಿ ಬಣ್ಣದ ಬೆಡಗಿನ ಜೊತೆಗೆ, ಮಾಟದ ಸೊಬಗೂ ಸಂತೋಷವನ್ನು ಕೊಡುತ್ತದೆ. ಈ ಮಾಟ ಅಥವಾ ಆಕೃತಿಯ ಸೊಬಗಿನ ಒಳಮರ್ಮ ಎಂದರೆ ಸಮಪ್ರಮಾಣ (symmetry). ಹಾಗೆಯೇ, ಶ್ರವ್ಯ ಪ್ರಪಂಚದ ಇಂಪಿನ ಚೆಲುವು, ಎಂದರೆ,—ಸಮುದ್ರದ ಮೊರೆತ, ಗುಡುಗಿನ ಮೊಳಗು, ಹರಿಯುವ ಹೊಳೆಯ ಕಲಕಲನಾದ, ಹಕ್ಕಿಗಳ ಉಲಿ, ಪ್ರಾಣಿಗಳ ಕೂಗು, ಮನುಷ್ಯನ ಮಾತು ಮತ್ತು ಹಾಡು– ಇವು ಕಿವಿಗೆ ಹಿತಕರವಾಗಿದ್ದು ಸಂತೋಷವನ್ನು ಕೊಡುತ್ತವೆ. ಕಿವಿ ಕೇಳುವ ವಿವಿಧ ಧ್ವನಿಗಳಲ್ಲಿ ಹಿತಕರವಾದ ನಾದದ್ದೇ ಒಂದು ಬಗೆಯ ಸುಖವಾದರೆ, ಆ ನಾದ ಹೊಮ್ಮುವುದರಲ್ಲಿ ಉಂಟಾಗುವ ಏರಿಳಿತವೂ ನಾವು ಅನುಭವಿಸುವ ಸುಖಕ್ಕೆ ಕಾರಣವಾಗುತ್ತದೆ. ಕಾಗೆ ಮತ್ತು ಕೋಗಿಲೆಗಳ ಕೂಗಿನಲ್ಲಿ ಕೇಳಿ ಬರುವ ವ್ಯತ್ಯಾಸ ಸ್ಪಷ್ಟವಾಗಿದೆ, 'ಕಾಕಾ' ಕೂಗಿನಲ್ಲಿ ನಾದದ ಹಿತವೂ ಇಲ್ಲ,

ಪರಿಮಿತದ ಸೊಗಸೂ ಇಲ್ಲ. 'ಕು-ಹೂ-ಹೂ' ಉಲಿಯಲ್ಲಿ ಇಂಪಾದ ದನಿ ಎರಡು ಮೆಟ್ಟಿಲು ಏರುವುದು, ಅದರಲ್ಲಿ ಒಂದು ಕ್ರಮ–ಇವು ಅನುಭವಕ್ಕೆ ಬರುವ ಸಂಗತಿ. ಸೃಷ್ಟಿಯ ನಾದ ಪ್ರಪಂಚದಲ್ಲಿಯೂ ಮಾತಿನ ಉಚ್ಚಾರಣೆ, ಪದ್ಯದ ವಾಚನ, ಗೀತದ ಗಾಯನ, ಮಾತೇ ಇಲ್ಲದ ರಾಗಾಲಾಪನೆ–ಇವುಗಳಲ್ಲಿ ಕಿವಿಗೆ ಗೊತ್ತಾಗುವ ಕ್ರಮಬದ್ಧವಾದ, ಮರಳಿ ಮರಳಿ ಸಮಗತಿಯಲ್ಲಿ ಹೊಮ್ಮುವ, ಸ್ವರದ ಪರಿಮಿತದ ಸರಣಿಗೆ ಲಯ ಎಂದು ಹೇಳುವುದು ಪ್ರಸಿದ್ಧವಾಗಿದೆ. ಸೃಷ್ಟಿ ಸಮಸ್ತವೂ ಈ ಲಯದ ಕಟ್ಟಿಗೆ ಒಳಗಾಗಿದೆ. ಸೂರ್ಯಚಂದ್ರರ ಉದಯ ಅಸ್ತ, ಒಂದಾದಮೇಲೆ ಒಂದರಂತೆ ಋತುಗಳು ಬರುವುದು ಹೋಗುವುದು (ಋತುಚಕ್ರ), ಗ್ರಹತಾರೆಗಳ ಚಲನವಲನ, ಹೃದಯದ ಬಡಿತ, ಮುಂತಾದ ಪ್ರಕೃತಿಯ ಘಟನಾ ಮಾಲೆಯಲ್ಲಿ ಲಯ ಕಾಣುತ್ತದೆ, ಇಲ್ಲವೆ ಕೇಳುತ್ತದೆ. ವಿಶ್ವದ ಲಯದ ಕಟ್ಟು ಹರಿದುಹೋಗುವುದೇ ವಿಲಯ ಅಥವಾ ಪ್ರಲಯ. ಎಂದರೆ, ವಿಶ್ವ ಎಲ್ಲಿಂದ ಬಂತೋ, ಎಲ್ಲಿಂದ ಹುಟ್ಟಿತೋ, ಅಲ್ಲಿಗೆ ಮರಳುವುದು. ಸೃಷ್ಟಿಯಾದಮೇಲೆ ನಾಶವಾಗಲೇಬೇಕು; ಆರೋಹಣವಾದಮೇಲೆ ಅವರೋಹಣವಾಗಲೇಬೇಕು; ಏರಿದ ಮೇಲೆ ಇಳಿಯಲೇಬೇಕು. ಲಯ ಎಂದರೆ ಲೀನವಾಗುವುದು ಎಂದು ಮೂಲಾರ್ಥ.

ಸೃಷ್ಟಿಯ ಅನುಕರಣವಾದ ಕಲೆಯ ಪ್ರಪಂಚದಲ್ಲಿಯೂ ಲಯವೇ ಕಲಾ ಸೌಂದರ್ಯದ ಗುಟ್ಟು. ಕಾವ್ಯದ ವಿಷಯವನ್ನು ತೆಗೆದುಕೊಂಡರೆ, ಕಾವ್ಯ ಮುಖ್ಯವಾಗಿ ಶ್ರವ್ಯಕಲೆ ಆದದ್ದರಿಂದ, ಅದನ್ನು ಓದಿದಾಗ ಅಥವಾ ಹಾಡಿದಾಗ ಅದರ ಪದಗಳ ಧಾಟಿಯಲ್ಲಿ, ನಡೆಯಲ್ಲಿ, ಹಿತಕರವಾಗಿ ಕೇಳಿ ಬರುವ ಕ್ರಮವಾದ ಸ್ವರಗಳ ಪರಿಮಿತವೆ ನಾದಲಯ. ಇದನ್ನು "'ಸ್ವರಾಂದೋಲನ'ವೆಂದೂ ಕರೆಯಬಹುದು. ಈ ಲಯವೇ ಎಲ್ಲ ಹಾಡಿನ ಸೂತ್ರ."[1] 'ಸ್ವರ'ಗಳು 'ವ್ಯಂಜನ' ರಹಿತವಾಗಿರುವುದರಿಂದ ಅಕ್ಷರಗಳ ಕಾಲ ಪ್ರಮಾಣವನ್ನು ಪದ್ಯದ ಲಯ ಎನ್ನಬಹುದು.

ಇಂಥ ಅಕ್ಷರಗಳ ಒಂದು ಗೊತ್ತಾದ ಸಂಖ್ಯೆಯ ಅಕ್ಷರಗಳುಳ್ಳ ಪಾಠಗಳ ಪದ್ಯಜಾತಿಗೂ, ಈ ಜಾತಿಗಳನ್ನು ವಿವರಿಸುವ ಶಾಸ್ತ್ರಕ್ಕೂ 'ಛಂದಸ್ಸು'ಎಂದು ಹೆಸರು.

ಲಯ ಶಬ್ದಪ್ರಪಂಚ ಸರ್ವಸ್ವಕ್ಕೂ ಅನ್ವಯಿಸುವ ಸೂತ್ರ. ಛಂದಸ್ಸು ಪದ್ಯಗಳಿಗೆ ಮಾತ್ರ ಸಂಬಂಧಿಸಿದ್ದು. ಭರತ ಮುನಿ ಹೇಳುವಂತೆ, 'ಛಂದಸ್ಸಿಲ್ಲದ ಶಬ್ದವಿಲ್ಲ; ಶಬ್ದವನ್ನು ಬಿಟ್ಟು ಛಂದಸ್ಸಿಲ್ಲ'.[2] ಆದರೆ, ಗದ್ಯದ ಲಯವನ್ನು ಛಂದಸ್ಸು ಎಂದು ಕರೆಯುವ ರೂಢಿಯಿಲ್ಲ; ಗದ್ಯಲಯಗಲ್ಲಿ ಒಂದು ಕ್ರಮವಿಲ್ಲದಿರುವುದೇ ಇದಕ್ಕೆ ಕಾರಣ. ಪದ್ಯದ ಲಯಕ್ಕೆ ಮಾತ್ರ ಛಂದಸ್ಸು ಎಂಬ ಹೆಸರು.

ಸಾಧಾರಣವಾಗಿ ಕಾವ್ಯಗಳೆಲ್ಲವೂ ಪದ್ಯರೂಪದಲ್ಲಿಯೇ ಇರುವುದರಿಂದ ಕಾವ್ಯಕ್ಕೂ ಛಂದಸ್ಸಿಗೂ ಹತ್ತಿರದ ನಂಟು ಏರ್ಪಟ್ಟಿದೆ. "ಇತರರ ಮನಸ್ಸಿಗೆ ಮುಟ್ಟುವಂತೆ ತನ್ನ ಅಭಿಪ್ರಾಯವನ್ನು ತಿಳಿಸಬಲ್ಲವನು ಮಾತುಬಲ್ಲವನು; ಹಿರಿದಾದ ಅರ್ಥವನ್ನು ಕೆಲವೇ ಮಾತುಗಳಲ್ಲಿ ತಿಳಿಸಬಲ್ಲವನು ಅವನಿಗಿಂತ ನಿಪುಣ. 'ನುಡಿಯಂ ಛಂದದೊಳೊಂದಿಡೆ ತೊಡರ್ಚಲ್ ಅರಿವಾತಂ ಆತನಿಂದಂ ಜಾಣಂ' (ಮಾತನ್ನು ಛಂದಸ್ಸಿನಲ್ಲಿ ಕೂಡಿಸಿ ಹೇಳಬಲ್ಲವನು ಅವನಿಗಿಂತಲೂ ಜಾಣ"–ಎಂದು ಕನ್ನಡದ ಆದಿ ಗ್ರಂಥವಾದ ಕವಿರಾಜಮಾರ್ಗದ ಹೇಳಿಕೆ (1–15). ಇದರಿಂದ, ಕಾವ್ಯದಲ್ಲಿ ಛಂದಸ್ಸಿನ ಸ್ಥಾನವೇನು, ಪಾತ್ರವೇನು, ಎಂಬುದನ್ನು ಊಹಿಸಿಕೊಳ್ಳಬಹುದು. ಜಯಕೀರ್ತಿ ಎಂಬಾತ ತನ್ನ 'ಛಂದೋನಶಾಸನ'ದಲ್ಲಿ

ಛಂದಃಶಾಸ್ತ್ರಂ ವಹಿತ್ರಂ ತದ್ವಿದಕ್ಷೋಃ ಕಾವ್ಯ ಸಾಗರಂ
ಛಂದೋಭಾಗ್ವಾಙ್ಮಯಂ ಸರ್ವಂ ನ ಕಿಂಚಿತ್ ಛಂದಸಾ ವಿನಃ

[ಛಂಶ್ಶಾಸ್ತ್ರವು ದೋಣಿ; ಕಾವ್ಯ ಸಾಗರವೆಲ್ಲ ಅದನ್ನು ಕುರಿತದ್ದೇ; ಮಾತಿನ ಪ್ರಪಂಚವೆಲ್ಲವೂ ಛಂದಸ್ಸಿಗೆ ಒಳಪಟ್ಟಿದೆ; (ಅಲ್ಲಿ) ಛಂದಸ್ಸನ್ನು ಹೊರತುಪಡಿಸಿ ಕಿಂಚಿತ್ತೂ ಇಲ್ಲ.]

ಎಂದಿದ್ದಾನೆ. ಅವನ ಮಾತಿನಲ್ಲಿ ನಿಜಾಂಶವಿದೆ. ಏಕೆಂದರೆ, ಆಡುವ ಮಾತೇ ಆಗಲಿ, ಕಾವ್ಯದ ಭಾಷೆಯೇ ಆಗಲಿ, ಮನಸ್ಸಿನ ಭಾವಕ್ಕೆ ತಕ್ಕಂತೆ ಪದಗಳ ನಡೆ ಅಥವಾ ಲಯ–ವೇಗವಾಗಿ ನಿಧಾನವಾಗಿ, ಕುಣಿಯುತ್ತ ಮಣಿಯುತ್ತ, ತೂಗುತ್ತ ತೊನೆಯುತ್ತಾ–ವ್ಯತ್ಯಾಸ ಹೊಂದುತ್ತದೆ. ಎಂದಮೇಲೆ, ಕವಿತೆಯ ಭಾವಕ್ಕೂ ಛಂದಸ್ಸಿಗೂ ಹತ್ತಿರದ ನಂಟು. ಉದಾಹರಣೆಗೆ, 'ನಡೆಮುಂದೆ ನಡೆಮುಂದೆ ನುಗ್ಗಿನಡೆ ಮುಂದೆ, ಮತ್ತು

'ಬಿಸುಡದಿರು ಬಿಸುಡದಿರು ಹಸುಳೆ ನೊಂದಪ ಸಕಟ'—ಈ ಎರಡು ಸಾಲುಗಳಲ್ಲಿ ಮಾತ್ರೆಗಳ ಲೆಕ್ಕ ಒಂದೇ ಆದರೂ 'ನಡೆ'ಯಲ್ಲಿ ವ್ಯತ್ಯಾಸವಿದೆ.

ಪ್ರತಿಯೊಂದು ಭಾಷೆಯೂ ತನ್ನದೇ ಆದ ಛಂದಸ್ಸನ್ನು ಹೊಂದಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಛಂದಸ್ಸಿನ ಸ್ವರೂಪವನ್ನು ಅನುಸರಿಸಿ ಮುಖ್ಯವಾಗಿ ಮೂರು ಪ್ರಕಾರಗಳನ್ನು ಗುರುತಿಸಬಹುದು : 1. ಸಂಸ್ಕೃತ ಛಂದಸ್ಸು, 2. ಪ್ರಾಕೃತ ಛಂದಸ್ಸು, 3. ದ್ರಾವಿಡ ಛಂದಸ್ಸು. ಸಂಸ್ಕೃತ ಛಂದಸ್ಸು ಮುಖ್ಯವಾಗಿ ಅಕ್ಷರ (ಅಥವಾ ವರ್ಣ) ಗಣಗಳ ಎಣಿಕೆಗೆ ಒಳಪಟ್ಟಿದೆ. ಪ್ರಾಕೃತ ಛಂದಸ್ಸಿನಲ್ಲಿ ಮಾತ್ರಾ ಗಣಗಳು ಸರ್ವಸಾಮಾನ್ಯ. ದ್ರಾವಿಡ ಛಂದಸ್ಸಿನಲ್ಲಿ ದೇವಗಣಗಳದ್ದೇ ಪ್ರಭುತ್ವ. ಕನ್ನಡ ಛಂದಸ್ಸಿನಲ್ಲಿ ಮೂರು ಬಗೆಯ ಗಣಗಳ ಛಂದಸ್ಸೂ ಪದ್ಯರಚನೆಗೆ ಒದಗಿಬಂದಿವೆ; ಈ ಕಾರಣದಿಂದ ಅದರಲ್ಲಿ ವೈವಿಧ್ಯ ಉಂಟಾಗಿದೆ. (ಛಂದಸ್ಸಿಗೆ ಸಂಬಂಧಪಟ್ಟ ಮಾತ್ರೆ, ಗಣ, ಗುರು, ಲಘು, ಮುಂತಾದ ಶಾಸ್ತ್ರಕ್ಕೆ ಸಂಬಂಧಪಟ್ಟ ಪದಗಳ ವಿಚಾರವನ್ನು ಗ್ರಂಥಗಳನ್ನು ಕುರಿತು ಹೇಳುವಾಗ ವಿವರಿಸಲಾಗುವುದು). ಕನ್ನಡ ಛಂದಸ್ಸಿನ ಮೇಲೆ ಸಂಸ್ಕೃತ ಛಂದಸ್ಸಿನ ಪ್ರಭಾವ ವಿಶೇಷವಾಗಿದೆ. ಪ್ರಾಕೃತ ಛಂದಸ್ಸಿನ ಪ್ರಭಾವವೂ ಉಂಟು (ಇಪ್ಪತ್ತನೆಯ ಶತಮಾನದ ಈಚಿನ ದಿನಗಳಲ್ಲಿ ಇಂಗ್ಲಿಷ್ ಕಾವ್ಯವ್ಯಾಸಂಗದ ಪರಿಣಾಮವಾಗಿ ಇಂಗ್ಲಿಷ್ ಛಂದಸ್ಸಿನ ಪ್ರಭಾವವೂ ಕನ್ನಡ ಕವಿತೆಯ ಮೇಲೆ ಬಿದ್ದಿದೆ.)

ಬೆಳವಣಿಗೆ : ಇನ್ನು ಕನ್ನಡ ಛಂದಸ್ಸು ಚಾರಿತ್ರಿಕವಾಗಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಸಂಕ್ಷೇಪವಾಗಿ ಪರಿಶೀಲಿಸಬಹುದು :

ಕನ್ನಡದ ಆದಿ ಗ್ರಂಥವಾದ ಕವಿರಾಜಮಾರ್ಗದಲ್ಲಿ ಪ್ರಾಸಂಗಿಕವಾಗಿ ಛಂದಸ್ಸಿನ ವಿಚಾರ ಬಂದಿದೆ. 'ಪದ್ಯಂ ಸಮಸ್ತ ಜನತಾ ಹೃದ್ಯಂ' ಎಂಬ ಶ್ರೀವಿಜಯನ ಹೇಳಿಕೆಯಲ್ಲಿ ಛಂದಸ್ಸಿನ ಮನಸೆಳೆವ ಗುಣ ಸೂಚಿತವಾಗಿದೆ. ಚತ್ತಾಣ ಬೆದಂಡೆ ಎಂಬ ಕನ್ನಡ ಕಾವ್ಯಗಳ ಸ್ವರೂಪವನ್ನು ತಿಳಿಸುತ್ತಾ, ಬೆದಂಡೆಯಲ್ಲಿ ಕಂದ ವೃತ್ತಗಳು ಇರುವುವೆಂದೂ ಚತ್ತಾಣದಲ್ಲಿ ಕಂದ ವೃತ್ತಗಳ ಜೊತೆಗೆ ಅಕ್ಕರ, ಚವುಪದಿ(=ಚೌಪದಿ), ಗೀತಿಕೆ, ತಿವದಿ(=ತ್ರಿಪದಿ) ಇರುವುವೆಂದೂ ಅವನು ಹೇಳಿದ್ದಾನೆ. (i–33, 34). ಪದ್ಯರಚನೆಯಲಿ ಗುರು ಲಘುಗಳನ್ನು ಇಡುವ ಕ್ರಮದಲ್ಲಿ ಹೆಚ್ಚುಕಡಮೆಗಳಾದರೆ 'ಛಂದೋಭಂಗ' ದೋಷವುಂಟಾಗುವುದನ್ನು ಉದಾಹರಣೆಗಳ ಸಮೇತ ವಿವರಿಸಿದ್ದಾನೆ. 'ಯತಿ'ಯ ಬಗೆಗೆ

ಶ್ರೀವಿಜಯ ಹೇಳಿರುವ ಮಾತುಗಳು ಚಾರಿತ್ರಿಕ ದೃಷ್ಟಿಯಿಂದ ಮುಖ್ಯ. ಸಂಸ್ಕೃತ ಅಕ್ಷರ ವೃತ್ತಗಳಲ್ಲಿ ಯತಿನಿಯಮದ ಪಾಲನೆ ಕಡ್ಡಾಯ. ಈ ನಿಯಮ ವನ್ನು ಮೀರಿದರೆ 'ಯತಿಭಂಗ' ಎಂಬ ಛಂದೋದೋಷವುಂಟಾಗುತ್ತದೆ. ಇದು ಕಾವ್ಯದೋಷವೂ ಹೌದು. ಕವಿರಾಜಮಾರ್ಗಕಾರ ಮೊದಲು ಯತಿ ಎಂದರೆ ಏನು ಎಂಬುದನ್ನು ಹೇಳುತ್ತಾನೆ. ಅವನ ಮತದಂತೆ, "ಯತಿಯೆಂಬುದು ಉಸಿರ್ವ (ಎಂದರೆ ಉಸಿರು ತೆಗೆದುಕೊಳ್ಳಲು ವಾಚನವನ್ನು ನಿಲ್ಲಿಸುವ) ತಾಣಂ (=ಸ್ಥಾನ). ವೃತ್ತ ಮತ್ತು ಜಾತಿ (ಎಂದರೆ ಮಾತ್ರಾ ಛಂದಸ್ಸು) ಪದ್ಯಗಳ ರಚನೆಯಲ್ಲಿ ಅದಕ್ಕೆ ಎಡೆಯಿದೆ." ಇಲ್ಲಿ ಮಾತ್ರಾ ಛಂದಸ್ಸು ಎಂದರೆ ಅವನು ಮುಖ್ಯವಾಗಿ ಕಂದಪದ್ಯವನ್ನು ಉದ್ದೇಶಿಸಿದ್ದಾನೆ. ಕಂದಪದ್ಯದಲ್ಲಿ ಯತಿಭಂಗ ದೋಷಕ್ಕೆ ಉದಾಹರಣೆ ಕೊಟ್ಟು ಆ ದೋಷವನ್ನು ಸರಿಪಡಿಸಿದ ಪದ್ಯದ ಉದಾ ಹರಣೆಯನ್ನೂ ತೋರಿಸಿದ್ದಾನೆ. "ಪೂರ್ವಾಚಾರ್ಯರು ಯತಿಭಂಗ ದೋಷ ವನ್ನೇ ಗುಣವೆಂದು ಭಾವಿಸಿ, ಕನ್ನಡಕ್ಕೆ ಸಹಜವಾಗಿದ್ದ ಖಂಡಪ್ರಾಸವನ್ನು ನಿಲ್ಲಿಸಿಕೊಂಡು ಯತಿಯನ್ನು ಮೀರಿದರು" (i–75) ಎಂಬ ಕವಿರಾಜಮಾರ್ಗದ ಹೇಳಿಕೆಗೆ ಅವಕ್ಕೂ ಹಿಂದಿನ ಕಾಲದ ಶಾಸನಗಳ ವೃತ್ತಗಳಲ್ಲಿ ಸಾಕ್ಷ್ಯ ದೊರೆಯುತ್ತದೆ. ಮುಂದೆ, ವ್ಯಾಕರಣಕಾರನಾದ ಕೇಶಿರಾಜನು 'ಯತಿ ವಿಲಂಘನದಿಂದೆ ಅರಿದಲ್ತೆ ಕನ್ನಡಂ' ಎಂದು ಹೇಳಿ, ಸಂಸ್ಕೃತದವರು ವಿಧಿಸಿದ್ದ ಯತಿಯನ್ನು ಮೀರುವುದು ಕನ್ನಡದ ವಿಶೇಷ ಎಂದಿದ್ದಾನೆ. 'ಕನ್ನಡಕ್ಕೆ ಯತಿಯಿಲ್ಲ ಕೋಣಂಗೆ ಮತಿಯಿಲ್ಲ' ಇಂದಿಗೂ ಸಾಮಾನ್ಯ ಜನ ಮರೆಯುತ್ತ ಬಂದಿರುವ ಒಂದು ಗಾದೆ ಮಾತು.

ಸಂಸ್ಕೃತ ಅಕ್ಷರ ವೃತ್ತಗಳ ಸಾಲಿನ ಕಡೆಯಲ್ಲಿ ಯತಿ ಇದ್ದೇ ತೀರಬೇಕು; ಸಾಲಿನ ಮಧ್ಯದಲ್ಲಿ ಆಯಾ ವೃತ್ತಲಕ್ಷಣದಲ್ಲಿ ಹೇಳಿರುವಂತೆ ಯತಿ ಇರಬೇಕು. 7ನೆಯ ಶತಮಾನದ ಶ್ರವಣಬೆಳ್ಗೊಳದ ಒಂದು ಶಾಸನ ಪದ್ಯ–ಮಹಾ ಸ್ರಗ್ಧರಾ ವೃತ್ತ–ದಲ್ಲಿ, ಲಕ್ಷಣಾನುಸಾರವಾಗಿ 15 ನೆಯ ಅಕ್ಷರದಲ್ಲಿ ಯತಿನಿಯಮ ಪಾಲನೆಯೂ, ಮೂರನೆಯ ಪಾದದ ಕಡೆಯಲ್ಲಿ ಯತಿಭಂಗವಾಗಿರುವುದೂ ಕವಿರಾಜಮಾರ್ಗದ ಹೇಳಿಕೆಗೆ ನಿದರ್ಶನವಾಗಿದೆ. ಆ ಸಾಲುಗಳು ಹೀಗಿವೆ :

> ಪರಮಾರ್ಥಂ ಮೆಚ್ಚಿ ನಾನೀ ಧರಣಿಯುಳಿರವಾನ್ । ಎಂದು ಸಂನ್ಯಾಸನಂ ಗೆ-
> ಯ್ದುರುಸತ್ವನ್ ನಂದಿಸೇನಪ್ರವರ ಮುನಿವರನ್ । ದೇವಲೋಕಕ್ಕೆ ಸಂದಾನ್.
> [ಉದ್ದಗೆರೆ ಇರುವ ಕಡೆ ಯತಿ.]

ಇಲ್ಲಿ ಖಂಡಪ್ರಾಸ ಅಥವಾ ಆದಿಪ್ರಾಸ, 15ನೆಯ ಅಕ್ಷರಕ್ಕೆ ಯತಿ, ಪಾದದ ಕಡೆಯಲ್ಲಿ ಯತಿಯಿಲ್ಲದೆ 'ಗೆಯ್ದು' ಎಂಬ ಪದ ಒಡೆದು ಎರಡು ಪಾದಗಳಿಗೆ ಹಂಚಿಹೋಗಿರುವುದು – ಈ ಅಂಶಗಳು ಮೇಲಿನ ಹೇಳಿಕೆಗೆ ಸೊಗಸಾದ ನಿದರ್ಶನ. ಕನ್ನಡದಲ್ಲಿ ಈ ರೀತಿ ಸಂಸ್ಕೃತ ಛಂದಸ್ಸಿನ ವೃತ್ತಗಳನ್ನು ಬರೆಯುವುದನ್ನು 'ಪೂರ್ವಾಚಾರ್ಯರು' ಬಳಕೆಗೆ ತಂದಿದ್ದರು ಎಂದಿರುವುದ ರಿಂದ, ಆ 'ಪೂರ್ವಾಚಾರ್ಯರು' ಕನ್ನಡದಲ್ಲಿ ಛಂದಸ್ಸಿನ ಲಕ್ಷಣ ಶಾಸ್ತ್ರವನ್ನು ಬರೆದವರಾಗಿರಬೇಕು ಎಂದು ಊಹಿಸಬಹುದು. ಆದರೆ, ಕವಿರಾಜಮಾರ್ಗಕ್ಕೂ ಹಿಂದೆ ಛಂದಸ್ಸನ್ನು ಕುರಿತ ಕನ್ನಡ ಲಕ್ಷಣಗ್ರಂಥವೊಂದು ಇದ್ದಿತು ಎಂದು ಹೇಳಲು ನಮಗೆ ಯಾವ ಆಧಾರವೂ ಇಲ್ಲ. ಈ ಸಂದರ್ಭದಲ್ಲಿ, ಪ್ರಾಸದ ವಿಚಾರವಾಗಿ ಒಂದು ಮಾತು ಹೇಳಬಹುದು : "ನುತ ಶಬ್ದಾಲಂಕಾರದೊಳ್ ಅತಿಶಯಂ ಈ ಕನ್ನಡಕ್ಕೆ ಸತತಂ ಪ್ರಾಸಂ" ಎಂದು ಕವಿರಾಜಮಾರ್ಗದಲ್ಲಿ ಹೇಳಿದ್ದರೂ ವೃತ್ತಗಳ ಪಾದಾಂತ್ಯದ ಯತಿಸ್ಥಾನಕ್ಕೆ ಬದಲಾಗಿ 'ಖಂಡಪ್ರಾಸ' ವನ್ನು ಹೇಳಿರುವುದರಿಂದ, ಛಂದಸ್ಸಿನಲ್ಲೂ ಅದಕ್ಕೆ ಒಂದು ಪಾತ್ರ ಲಭಿಸಿ ದಂತಾಯಿತು. ಪದ್ಯಕಾವ್ಯ ಮುಖ್ಯವಾಗಿ ಕೇಳತಕ್ಕದ್ದು (ಶ್ರವ್ಯ) ; ಒಂದು ಪಾದ ಎಲ್ಲಿ ನಿಲ್ಲುತ್ತದೆ, ಅದರ ಮುಂದಿನ ಪಾದ ಎಲ್ಲಿ ಮೊದಲಾಗುತ್ತದೆ ಎನ್ನುವುದನ್ನು ಈ ಆದಿ ಪ್ರಾಸ ಒಡೆದು ತೋರಿಸುವುದರಿಂದ ಇದಕ್ಕೆ ಖಂಡ ಪ್ರಾಸ ಎಂಬ ಹೆಸರು ಉಚಿತವಾಗಿದೆ.

ಹನ್ನೆರಡನೆಯ ಶತಮಾನದವರೆಗೂ ಪದ್ಯ (ವೃತ್ತ, ಕಂದ) ಮತ್ತು ಗದ್ಯಮಿಶ್ರಿತವಾದ 'ಚಂಪೂ'ಕಾವ್ಯಗಳು ರಚಿತವಾದುವು. ಹರಿಹರನು 'ರಗಳೆ' ಛಂದಸ್ಸನ್ನು ಉಪಯೋಗಿಸಿದನು. ಚಂಪೂ ಕಾವ್ಯಗಳಲ್ಲೂ ಹೆಸರಿಗೆ ತ್ರಿಪದಿ, ರಗಳೆಗಳ ಸಾಲುಗಳು ಇರುತ್ತಿದ್ದುವು. ಷಟ್ಪದಿ ಕಾವ್ಯಗಳ ಯುಗವನ್ನು ರಾಘವಾಂಕ ಪ್ರಾರಂಭಿಸಿದನು. ನಂಜುಂಡ ಕವಿಯ ಕುಮಾರರಾಮ ಚರಿತ್ರೆ ಸಾಂಗತ್ಯಕ್ಕೆ ಭದ್ರವಾದ ಸ್ಥಾನ ಕಲ್ಪಿಸಿತು. ತ್ರಿಪದಿ ಛಂದಸ್ಸಿಗೆ ಸರ್ವಜ್ಞ ಎತ್ತಿದ ಕೈ.

ಸಂಸ್ಕೃತ ಛಂದೋಗ್ರಂಥಗಳು

ಕನ್ನಡ ಛಂದೋಗ್ರಂಥಗಳಲ್ಲಿ ಸಂಸ್ಕೃತ ಛಂದಸ್ಸಿನ ವೃತ್ತಗಳ ಲಕ್ಷಣ ಗಳನ್ನು ಹೇಳುವಾಗ ಸಂಸ್ಕೃತ ಶಾಸ್ತ್ರಕಾರರನ್ನು ಅನುಸರಿಸಿರುವುದರಿಂದ,

ಸಂಕ್ಷೇಪವಾಗಿಯಾದರೂ ಕೆಲವರ ಪರಿಚಯ ಮಾಡಿಕೊಳ್ಳುವುದು ಅಗತ್ಯ ವೆನಿಸುತ್ತದೆ.

ವೇದದ ಆರು ಅಂಗಗಳಲ್ಲಿ ಛಂದಸ್ಸೂ ಒಂದು ಅಂಗವಾದ್ದರಿಂದ, ಸಂಸ್ಕೃತ ಭಾಷೆಯಲ್ಲಿ ಛಂದಶ್ಶಾಸ್ತ್ರ ವೇದಗಳಷ್ಟೇ ಪುರಾತನವಾದದ್ದು. ವೈದಿಕ ಛಂದಸ್ಸು ಎಂಬ ಪ್ರತ್ಯೇಕ ವಿಭಾಗವೇ ಏರ್ಪಟ್ಟಿದೆ. ಇದರಲ್ಲಿ ಗಾಯತ್ರಿ, ಅನುಷ್ಟುಭ್, ತ್ರಿಷ್ಟುಭ್, ಜಗತೀ ಎಂದು ನಾಲ್ಕು ಛಂದಸ್ಸುಗಳು ಮುಂದಿನ ಎಲ್ಲ ಛಂದಸ್ಸಿನ ಪ್ರಕಾರಗಳಿಗೂ ಮೂಲ. ಸಂಸ್ಕೃತ ಕಾವ್ಯ ಗಳಲ್ಲಿಯೂ ಶಾಸ್ತ್ರಗ್ರಂಥಗಳಲ್ಲಿಯೂ ಬಳಸುವ ವೃತ್ತಜಾತಿಗಳನ್ನು 'ಲೌಕಿಕ ಛಂದಸ್ಸು' ಎಂದು ಕರೆದಿದೆ. ಕನ್ನಡದಲ್ಲಿ ಬಳಸುವ ವೃತ್ತಗಳೂ ಕಂದಪದ್ಯವೂ ಸಂಸ್ಕೃತ 'ಲೌಕಿಕ' ಛಂದಸ್ಸಿನಿಂದ ಬಂದವು.

ಈಗ ತಿಳಿದುಬಂದಿರುವ ಮಟ್ಟಿಗೆ ಪಿಂಗಲನ ಛಂದಸ್ಸೂತ್ರಗಳೇ ಸಂಸ್ಕೃತದ ಮೊದಲ ಛಂದೋಗ್ರಂಥ. ಇವನ ಕಾಲ ಕ್ರಿ.ಪೂ.ಸು. 200. ಇದರಲ್ಲಿ ವೈದಿಕ ಮತ್ತು ಲೌಕಿಕ ಛಂದಸ್ಸುಗಳ ಲಕ್ಷಣಗಳನ್ನು 8 ಅಧ್ಯಾಯಗಳಲ್ಲಿ ಸೂತ್ರರೂಪದಲ್ಲಿ ಪಿಂಗಲನು ವಿವರಿಸಿದ್ದಾನೆ. ಲಘುಗುರು ಗಳಿಗೆ ಲಗ ಎಂಬ ಸಂಕೇತಗಳನ್ನು ಹೇಳಿದ್ದಾನೆ. ಮೂರು ಅಕ್ಷರಗಳ (ತ್ರಿಕ=ಮೂರನ್ನು ಉಳ್ಳದ್ದು) ಗಣಗಳಿಗೆ 'ಮ ಯ ರ ಸ ತ ಜ ಭ ನ' ಎಂಬ ಸಂಕೇತಾಕ್ಷರಗಳನ್ನು ಮೊದಲಿಗೆ ಕಾಣುವುದು ಈ ಗ್ರಂಥದಲ್ಲಿಯೇ. ಪಿಂಗಲ ಯತಿ ನಿಯಮವನ್ನೂ ಹೇಳಿದ್ದಾನೆ. ಭರತಮುನಿ ತನ್ನ ನಾಟ್ಯಶಾಸ್ತ್ರದ 15 ಮತ್ತು 16 ನೆಯ ಅಧ್ಯಾಯಗಳಲ್ಲಿ ಅನೇಕ ಪ್ರಸಿದ್ಧ ವರ್ಣವೃತ್ತಗಳನ್ನು ವಿವರಿಸಿದ್ದಾನೆ. 16ನೆಯ ಅಧ್ಯಾಯವನ್ನು, ಛಂದೋವಿಚಿತಿ ಎಂದೇ ಕರೆದಿದ್ದಾನೆ. 'ಜನಾಶ್ರಯೀ' ಎಂಬುದು ಪ್ರಾಚೀನ ಸಂಸ್ಕೃತ ಛಂದೋಗ್ರಂಥಗಳಲ್ಲಿ ಒಂದು. ಕ್ರಿ.ಶ. 6ನೆಯ ಶತಮಾನದ ಜನಾಶ್ರಯನೆಂಬ ಆಂಧ್ರದೇಶದ ರಾಜನ ಆಸ್ಥಾನ ಕವಿಯೊಬ್ಬನು ಈ ಗ್ರಂಥ ವನ್ನು ರಾಜನ ಹೆಸರಿನಲ್ಲಿ ರಚಿಸಿದ್ದಾನೆ ಎಂಬ ಅಭಿಪ್ರಾಯವಿದೆ. ಇದರಲ್ಲಿನ ಆರು ಅಧ್ಯಾಯಗಳಲ್ಲಿ ಸಂಸ್ಕೃತ ಪ್ರಾಕೃತ ಛಂದಸ್ಸುಗಳನ್ನು ವಿವರಿಸಿದೆ. ಸಂಸ್ಕೃತ ಛಂದಶ್ಶಾಸ್ತ್ರಕಾರರಲ್ಲಿ ಜಯದೇವನ ಹೆಸರು ಪ್ರಸಿದ್ಧವಾದದ್ದು. ಕನ್ನಡ 'ಛಂದೋಂಬುಧಿ'ಯ ನಾಗವರ್ಮನು ಇವನನ್ನು ಸ್ಮರಿಸಿರುವುದಲ್ಲದೆ, ಕೆಲವು ಅಂಶಗಳಲ್ಲಿ ಇವನನ್ನು ಅನುಸರಿಸಿದ್ದಾನೆ. ಇವುಗಳಲ್ಲಿ ಮುಖ್ಯ

ವಾದದ್ದು, ಲಕ್ಷಣಪದ್ಯವೇ ಉದಾಹರಣಪದ್ಯವೂ ಆಗಿರುವುದು. ಈ ಪದ್ಧತಿಯನ್ನು ನಾಗವರ್ಮನೂ ಅನುಸರಿಸಿದ್ದಾನೆ. ಜಯದೇವನ ಗ್ರಂಥ 'ಜಯದೇವಚ್ಛಂದಸ್' ಎಂದು ಹೆಸರಾಗಿದೆ. ಇವನ ಕಾಲ 9ನೆಯ ಶತಮಾನ, ಅಥವಾ 6ನೆಯ ಶತಮಾನಕ್ಕೂ ಹೋಗಬಹುದು. ಎಂದು ಭಾವಿಸಲಾಗಿದೆ. ಜಯದೇವ ಜೈನಮತದವನು. ಇವನು ಪಿಂಗಲನಿಗೆ ಸಮಾನ ಎಂದು ಕೆಲವರ ಎಣಿಕೆ; ಪಿಂಗಲನನ್ನು ಅನುಸರಿಸುವುದೂ ಕಂಡುಬರುತ್ತದೆ. ಇವನು ವೈದಿಕ ಲೌಕಿಕ ಛಂದಸ್ಸುಗಳೆರಡನ್ನೂ ವಿವರಿಸಿದ್ದಾನೆ.

ಜಯಕೀರ್ತಿ ಸಂಸ್ಕೃತ ಲಾಕ್ಷಣಿಕನಾದರೂ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಅವನಿಗೆ ಬಹು ಮುಖ್ಯವಾದ ಸ್ಥಾನವಿದೆ. ಇವನು ರಚಿಸಿರುವ ಎಂಟು 'ಅಧಿಕಾರ'ಗಳ 'ಛಂದೋನುಶಾಸನ'ದ ಏಳನೆಯ ಅಧಿಕಾರ 'ಕರ್ಣಾಟ ಭಾಷಾ ವಿಷಯ ಜಾತ್ಯಧಿಕಾರ' ಎಂಬ ಹೆಸರಿನಲ್ಲಿ ಅಕ್ಕರ, ತ್ರಿಪದಿ, ಮುಂತಾದ ಅಚ್ಚಗನ್ನಡ ಛಂದೋಜಾತಿಗಳ ವಿವರಣೆಗೆ ಮೀಸಲಾಗಿದೆ. ಇವುಗಳಲ್ಲಿ ಕೆಲವನ್ನು ತಮ್ಮ ಕಾವ್ಯಗಳಲ್ಲಿ ಬಳಸಿರುವ ಕನ್ನಡ ಕವಿಗಳ ಹೆಸರುಗಳನ್ನು ಹೇಳಿರುವುದು ಗಮನಿಸಬೇಕಾದ ಸಂಗತಿ. ಉದಾಹರಣೆಗೆ, ಅಸಗನು 'ಸಮಾನಾಕ್ಷರ'(ನಾಗವರ್ಮನು ಹೇಳುವ 'ದೊರೆಯಕ್ಕರ')'ಕರ್ಣಾಟ ಕುಮಾರ ಸಂಭವ ಕಾವ್ಯ'ದಲ್ಲಿ ಬಳಸಿದ್ದಾನೆ ಎಂದು ಜಯಕೀರ್ತಿ ಹೇಳಿದ್ದಾನೆ. ಅಸಗನ ಕಾಲ ಕ್ರಿ.ಶ. 9ನೆಯ ಶತಮಾನ. ಆದ್ದರಿಂದ ಇವನ ಕಾಲ ಇನ್ನೂ ಈಚಿನದು; ಛಂದೋನುಶಾಸನವನ್ನು ಪ್ರಕಟಿಸಿರುವ ಎಚ್. ಡಿ. ವೇಲಣಕರರು ಕ್ರಿ.ಶ. 1000 ಎಂದೂ, ಗೋವಿಂದ ಪೈ ಅವರು 900 ಎಂದೂ ಅಭಿಪ್ರಾಯ ಪಟ್ಟಿದ್ದಾರೆ. ಈಚೆಗೆ, ಸೀತಾರಾಮ ಜಾಗೀರದಾರರು ಹೆಗ್ಗೆರೆಯ ಶಾಸನದ ಆಧಾರವನ್ನು ಹಿಡಿದು, ಜಯಕೀರ್ತಿಯ ಕಾಲ ಕ್ರಿ.ಶ. 1069 ಎಂದು ತಿಳಿಸಿದ್ದಾರೆ.[3] ಈ ನಿರ್ಣಯ ನಿಲ್ಲುವಂತೆ ತೋರುತ್ತದೆ. ಅಕ್ಕರ ಮುಂತಾದ ಕನ್ನಡ ಮಟ್ಟುಗಳ ವಿವರಣೆಯಲ್ಲಿ ಛಂದೋನುಶಾಸನಕ್ಕೂ ಛಂದೋಂಬುಧಿಗೂ ಬಲು ಹತ್ತಿರದ ಹೋಲಿಕೆಯಿದೆ. ಎರಡು ಗ್ರಂಥಗಳಲ್ಲಿಯೂ ಲಕ್ಷಣ ಪದ್ಯವೇ ಲಕ್ಷ್ಯವೂ ಆಗಿದೆ. ಜಯಕೀರ್ತಿ ಕನ್ನಡ ನಾಡಿನವನು. ಕನ್ನಡ ಬಲ್ಲವನು; ಆತನಿಗೆ 'ಚಂದ್ರಾಯಣದೇವ' ಎಂದು ಇನ್ನೊಂದು ಹೆಸರಿದ್ದಂತೆಯೂ, ಜೈನ ಸಂನ್ಯಾಸಿಯೆಂದೂ ಶಾಸನದಿಂದ ತಿಳಿದುಬರುತ್ತದೆ. ಬಹುಶಃ ನಾಗವರ್ಮನ ಛಂದೋಂಬುಧಿಯನ್ನು ಅನುಸರಿಸಿ ಕನ್ನಡ ಛಂದಸ್ಸಿನ ಲಕ್ಷಣವನ್ನು

ವಿವರಿಸಿರುವನು ಎಂಬ ಕೆಲವು ವಿದ್ವಾಂಸರ ಅಭಿಪ್ರಾಯ ಸರಿ ಎಂದು ಕಾಣುತ್ತದೆ.

ಕೇದಾರಭಟ್ಟನ 'ವೃತ್ತರತ್ನಾಕರ' ಬಹು ಪ್ರಸಿದ್ಧವಾದ ಸಂಸ್ಕೃತ ಛಂದೋಲಕ್ಷಣಗ್ರಂಥ. ಇವನು ವೈದಿಕ ಮತದವನು; ಶೈವ ಪಂಥಕ್ಕೆ ಸೇರಿದವನು; ದಕ್ಷಿಣ ದೇಶದವನು. ಇವನ ಕಾಲ ಸು. 1100. ಇವನು ವೈದಿಕ ಛಂದಸ್ಸನ್ನು ಕೈಬಿಟ್ಟಿದ್ದಾನೆ. ವರ್ಣ ವೃತ್ತಗಳ ವಿಚಾರದಲ್ಲಿ ಪಿಂಗಲನಿಗಿಂತ ಅಚ್ಚುಕಟ್ಟು. ಜಯದೇವನಂತೆ ಲಕ್ಷ್ಯಗಳ ಮೂಲಕ ಲಕ್ಷಣ ವಿವರಣೆ ಮಾಡುವುದು ಇವನ ಪದ್ಧತಿ. ತನ್ನ ಗ್ರಂಥದ ಪ್ರಮಾಣ 136 ಶ್ಲೋಕಗಳೆಂದು ಹೇಳಿಕೊಂಡಿದ್ದಾನೆ. ವಿಶೇಷವಾಗಿ ವರ್ಣ ವೃತ್ತಗಳ ಅಧ್ಯಾಯದಲ್ಲಿ ಈಚಿನವರು ಬರೆದ ಶ್ಲೋಕಗಳೂ ಸೇರಿಹೋಗಿವೆ; ಇವನ ಗ್ರಂಥದಮೇಲೆ ಮಾಡಿರುವಷ್ಟು ವ್ಯಾಖ್ಯಾನಗಳು ಇತರ ಯಾವ ಛಂದೋಗ್ರಂಥ ಮೇಲೂ ಮಾಡಿಲ್ಲ. ಈ ಸಂಗತಿ ವೃತ್ತರತ್ನಾಕರದ ಜನಪ್ರಿಯತೆಗೆ ಸಾಕ್ಷಿ.

ಸಂಸ್ಕೃತದಲ್ಲಿ ಅತ್ಯಂತ ಪ್ರಮುಖವಾದ ಛಂದೋಗ್ರಂಥಗಳು ನಾಲ್ಕು ಎಂದು ವಿದ್ವಾಂಸರು ಪರಿಗಣಿಸಿದ್ದಾರೆ: ಪಿಂಗಲನ ಛಂದಸ್ಸೂತ್ರ, ಭರತನ ನಾಟ್ಯಶಾಸ್ತ್ರ, ಕೇದಾರಭಟ್ಟನ ವೃತ್ತಾರತ್ನಾಕರ ಮತ್ತು ಹೇಮಚಂದ್ರನ ಛಂದೋನುಶಾಸನ, ಹೇಮಚಂದ್ರನ ಕಾಲ ಕ್ರಿ.ಶ. 1089–1173. ಇವನು ಸಂಸ್ಕೃತದಲ್ಲೂ ಪ್ರಾಕೃತದಲ್ಲೂ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಇವನು ಜೈನಮತೀಯ. ಇವನ ಛಂದೋನುಶಾಸನದಲ್ಲಿ 8 ಅಧ್ಯಾಯಗಳಿದ್ದು, ವಿಷಯದ ಹಂಚಿಕೆ ಹೀಗಿದೆ: 1 ಪೀಠಿಕೆ; 2-3 ಸಂಸ್ಕೃತ ಛಂದಸ್ಸು; 4 ಆರ್ಯಾವೃತ್ತ ಮತ್ತು ಪ್ರಾಕೃತ ಛಂದಸ್ಸು; 5-8 ಅಪಭ್ರಂಶ ಛಂದಸ್ಸು. ಇವನ ಇತರ ಗ್ರಂಥಗಳು: (1) ತ್ರಿಷಷ್ಟಿ ಶಲಾಕಾ ಪುರುಷಚರಿತ, (2) ಯೋಗಶಾಸ್ತ್ರ, (3) ಶಬ್ದಾನುಶಾಸನ (ಇದರಲ್ಲಿ ಪ್ರಾಕೃತ ಭಾಷೆಗೆ ಒಂದು ಅಧ್ಯಾಯ ಮೀಸಲು), (4) ಕಾವ್ಯಾನುಶಾಸನ ಮತ್ತು (5) ದೇಶೀನಾಮ ಮಾಲಾ(ಶಬ್ದಕೋಶ).

ಇವಲ್ಲದೆ, ಇನ್ನೂ ಹಲ ಕೆಲವು ಸಂಸ್ಕೃತ ಹಾಗೂ ಪ್ರಾಕೃತ ಛಂದೋಗ್ರಂಥಗಳಿವೆ. ಇವುಗಳ ಪೈಕಿ ಹೆಚ್ಚು ಪ್ರಸಿದ್ಧಗಳಾದ ಕಾಲಿದಾಸನ ಶ್ರುತಬೋಧ, ವಿರಹಾಂಕನ ವೃತ್ತಜಾತಿ ಸಮುಚ್ಚಯ, ಪ್ರಾಕೃತ ಪೈಂಗಲ– ಇವುಗಳನ್ನು ಹೆಸರಿಸಬಹುದು.

ಕೆಲವು ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ ಕನ್ನಡ ಛಂದಸ್ಸಿನ ವಿವರಣೆ ಸ್ವಲ್ಪ ಮಟ್ಟಿಗೆ ನಡೆದಿದೆ. ಜಯಕೀರ್ತಿಯ ವಿಚಾರವನ್ನು ಈಗಾಗಲೇ ಹೇಳಿದ್ದಾಗಿದೆ. ಕಲ್ಯಾಣಿಯ ಚಾಲುಕ್ಯವಂಶ ದೊರೆ 3ನೆಯ ಸೋಮೇಶ್ವರನು 'ಅಭಿಲಷಿತಾರ್ಥ ಚಿಂತಾಮಣಿ'(ಅಥವಾ 'ಮಾನಸೋಲ್ಲಾಸ')ಎಂಬ ಗ್ರಂಥವನ್ನು ರಚಿಸಿದ್ದಾನೆ. (ಕ್ರಿ.ಶ. 1129). ಇದು ಒಂದು ವಿಶ್ವಕೋಶ ಎನ್ನಬಹುದು. ಕನ್ನಡಕ್ಕೆ ಸಂಬಂಧಪಟ್ಟಂತೆ ಅಂಶಗಣಗಳ ಸ್ವರೂಪ; ತ್ರಿಪದಿ, ಷಟ್ಪದಿ, ಕಂದಪದ್ಯ, ಇವುಗಳ ಲಕ್ಷಣ ಮತ್ತು ಉದಾಹರಣೆಗಳು ನಿರೂಪಿತವಾಗಿವೆ. ಶಾರ್ಙ್ಗದೇವನ 'ಸಂಗೀತರತ್ನಾಕರ'ವು ಸಂಗೀತ ಶಾಸ್ತ್ರಪ್ರಪಂಚದಲ್ಲಿ ಬಹಳ ಪ್ರಖ್ಯಾತವಾದದ್ದು. ಇವನಕಾಲ 13ನೆಯ ಶತಮಾನದ ಮಧ್ಯಭಾಗ. ಇವನ ಗ್ರಂಥದ 4ನೆಯ ಪ್ರಬಂಧಾಧ್ಯಾಯದಲ್ಲಿ ಕನ್ನಡ ಛಂದಸ್ಸಿನ ಏಳೆ (ಏಲಾ), ತ್ರಿಪದಿ ಮತ್ತು ಷಟ್ಪದಿಗಳ ಪ್ರಸ್ತಾಪವಿದೆ. ಇವುಗಳ ಲಕ್ಷಣವನ್ನು ವಿವರಿಸಿರುವುದಲ್ಲದೆ, ಇವುಗಳನ್ನು ಹಾಡತಕ್ಕ ರೀತಿಯನ್ನೂ ಸೂಚಿಸಿದೆ. ತ್ರಿಪದಿ, ಸಾಂಗತ್ಯ, ಷಟ್ಪದಿ ಛಂದಸ್ಸುಗಳಲ್ಲಿ ರಚಿಸಿರುವ ಕನ್ನಡ ಕಾವ್ಯಗಳನ್ನು 'ವರ್ಣಕ' ಅಥವಾ 'ಹಾಡುಗಬ್ಬ'ಗಳೆಂದು ಕರೆಯುವುದರ ಔಚಿತ್ಯ ಇದರಿಂದ ಸ್ಪಷ್ಟವಾಗುತ್ತದೆ.

ಕನ್ನಡ ಛಂದೋಗ್ರಂಥಗಳು

ಗುಣಗಾಂಕಿಯಂ : ಸುಮಾರು 11ನೆಯ ಶತಮಾನಕ್ಕೆ ಹಿಂದಿನದಾದ 'ಯಾಪ್ಪರುಂಗಲಕ್ಕಾರಿಘೈ' ಎಂಬ ತಮಿಳು ಭಾಷೆಯ ಛಂದೋಗ್ರಂಥ ವೊಂದರಲ್ಲಿ ಅದರ ವ್ಯಾಖ್ಯಾನಕಾರನು 'ಗುಣಗಾಂಕಿಯಂ'ಎಂಬ ಕನ್ನಡ ಛಂದೋಗ್ರಂಥದ ವಿಷಯವಾಗಿ ಹೇಳಿದ್ದಾನೆ. ಆದರೆ ಈ ಹೆಸರಿನ ಗ್ರಂಥ ಯಾವುದೂ ಈವರೆಗೆ ದೊರೆತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶ, ಗ್ರಂಥವನ್ನು ಒಬ್ಬ ಹೆಂಗಸನ್ನು ಕುರಿತು ಹೇಳಿದೆ ಎಂಬುದು. ಮೂಡಣ ಚಾಲುಕ್ಯರ 3ನೆಯ ವಿಜಯಾದಿತ್ಯನಿಗೆ (ಕ್ರಿ.ಶ. 844-888) 'ಗುಣಗ', 'ಗುಣ ಗಾಂಕ', 'ಗುಣಕೆನಲ್ಲ'ಎಂಬ ಬಿರುದುಗಳಿದ್ದುವೆಂದೂ, 'ಗುಣಗಾಂಕಿಯ'ದ ಕವಿ ತನ್ನ ಗ್ರಂಥವನ್ನು ಈ ರಾಜನಿಗೆ ಅಂಕಿತಮಾಡಿರಬಹುದೆಂದೂ ಕವಿ ಚರಿತೆಕಾರರು ಊಹಿಸಿದ್ದಾರೆ. ಈ ಊಹೆ ನಿಲ್ಲುವ ಪಕ್ಷಕ್ಕೆ, 'ಗುಣಗಾಂಕಿಯ'ವೆ ನಮಗೆ ತಿಳಿದು ಬಂದ ಮೊದಲ ಛಂದೋಗ್ರಂಥವಾಗುತ್ತದೆ.

ಕಾವ್ಯಾವಲೋಕನವನ್ನು ಬರೆದ 2ನೆಯ ನಾಗವರ್ಮನು 'ಛಂದೋ ವಿಚಿತಿ'ಎಂಬ ಗ್ರಂಥವನ್ನೂ ಬರೆದಿರಬಹುದೆಂದು ಹಿಂದೆ ಹೇಳಿದೆಯಷ್ಟೆ. ಆ

ಗ್ರಂಥವೂ ದೊರೆತಿಲ್ಲ. ಈ ನಾಗವರ್ಮನಿಗಿಂತ (1042) ಈಚಿನವನಾದ ಜಯಕೀರ್ತಿ (1099) ಹೇಳುವ 'ಛಂದೋಮತ' ಈ ಗ್ರಂಥ ಇದ್ದರೂ ಇರಬಹುದು.

ಕರ್ಣಾಟ ಛಂದೋಮತ : 'ಛಂದೋವಿಚಿತಿ' (?). ವಿಚಿತ್ರಾ ಎಂಬ ಒಂದು ತ್ರಿಪದಿಯ ಪ್ರಭೇದದ ಲಕ್ಷಣವನ್ನು ಹೇಳುವಾಗ ಜಯಕೀರ್ತಿ 'ಪೂರ್ವಂ ಕರ್ಣಾಟ ಛಂದೋಮತೇ' ಎಂದು ಬರೆದಿದ್ದಾನೆ. ಇದು ಆ ಹೆಸರಿನ ಒಂದು ಗ್ರಂಥವನ್ನು ಸೂಚಿಸುತ್ತದೋ ಸಾಮಾನ್ಯವಾಗಿ ಕನ್ನಡ ಛಂದಸ್ಸಿಗೆ ಅನ್ವಯಿಸುತ್ತದೋ ಖಚಿತವಾಗಿ ಹೇಳಲಾಗುವುದಿಲ್ಲ. ಇದು ಗ್ರಂಥದ ಹೆಸರೇ ಆಗಿದ್ದ ಪಕ್ಷದಲ್ಲಿ ನಾಗವರ್ಮನ ಛಂದೋಂಬುಧಿಗಿಂತ ಬಲು ಹಿಂದಿನ ಕನ್ನಡ ಛಂದೋಗ್ರಂಥ ಒಂದಿದ್ದಿತೆಂದು ಹೇಳಬಹುದು.''[4]

ನಾಗವರ್ಮನ ಛಂದೋಂಬುಧಿ

'ಕರ್ಣಾಟಕ ಕಾದಂಬರಿ' ಎಂಬ ಕನ್ನಡದ ಮೊದಲ ಶೃಂಗಾರ ಕಾವ್ಯವನ್ನೂ 'ಛಂದೋಂಬುಧಿ'ಯನ್ನೂ ಬರೆದವನು ಒಬ್ಬನು–ಮೊದಲನೆಯ ನಾಗವರ್ಮ; ಇವನು ಬ್ರಾಹ್ಮಣ; ಇವನ ಕಾಲ ಕ್ರಿ.ಶ. 990. ಕಾವ್ಯಾವಲೋಕನ ಮುಂತಾದ ನಾಲ್ಕು ಗ್ರಂಥಗಳನ್ನು (ಈಚೆಗೆ ದೊರೆತ, 1042ರಲ್ಲಿ ರಚಿತವಾಗಿರುವ ವರ್ಧಮಾನ ಪುರಾಣವೂ ಸೇರಿದರೆ ಐದು ಗ್ರಂಥಗಳು) ಬರೆದವನು ಇನ್ನೊಬ್ಬನು–ಎರಡನೆಯ ನಾಗವರ್ಮ; ಇವನು ಜೈನ; ಇವನ ಕಾಲ ಸು. 1150 (ವರ್ಧಮಾನ ಪುರಾಣ ದೊರೆತಮೇಲೆ, ಸು. 1050 ಎಂದು ಮಾರ್ಪಾಡಾಗಿದೆ): ಹೀಗೆಂದು ಬಹುಮಟ್ಟಿಗೆ ಎಲ್ಲ ವಿದ್ವಾಂಸರೂ ಒಪ್ಪಿಕೊಂಡು ಬಂದಿದ್ದಾರೆ. (ಈ ಎರಡನೆಯ ನಾಗವರ್ಮನೇ ತನಗಿಂತ ಹಿಂದಿನ ಒಬ್ಬ ನಾಗವರ್ಮನ ಹೆಸರನ್ನು ನೆನೆದಿದ್ದಾನೆ. ಈ ನಾಗವರ್ಮರ ಸಂಖ್ಯೆಯ ವಿಚಾರ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿನಿಂದಲೂ ತುಂಬ ಚರ್ಚೆಗೆ ಒಳಗಾಗಿದೆ. ಅವರುಗಳ ಕಾಲದ ವಿಚಾರವೂ ಅಷ್ಟೆ.)

ಛಂದೋಂಬುಧಿಯನ್ನು ಬರೆದವನು ಈ ಇಬ್ಬರು (ಅಥವಾ–ಕಾದಂಬರಿ ಮತ್ತು ಛಂದೋಂಬುಧಿಗಳ ಕರ್ತೃಗಳು ಬೇರೆ ಬೇರೆ ಎಂದಾದರೆ, ಮೂವರಲ್ಲಿ) ಒಬ್ಬ ನಾಗವರ್ಮ ಎಂಬುದರಲ್ಲಿ ಸಂದೇಹವೇ ಇಲ್ಲ. ಛಂದೋಂಬುಧಿಯ ಅನೇಕ ಹಸ್ತಪ್ರತಿಗಳು ದೊರೆತಿವೆ; ಇನ್ನೂ ದೊರೆ

ಯುತ್ತಿವೆ. ಪ್ರಾಚೀನ ಕಾಲದ ನಾಲ್ಕೈದು ಕನ್ನಡ ಛಂದೋಗ್ರಂಥಗಳಲ್ಲಿ ಇದು ಬಹುಮಟ್ಟಿಗೆ ಸಮಗ್ರವೂ ಪ್ರಮಾಣಭೂತವೂ ಆದ ಗ್ರಂಥ. ಆದ್ದರಿಂದ, ಅಂದೂ ಇಂದೂ ವಿದ್ವಾಂಸರ ಮಂಡಲಿಯಲ್ಲಿ ತುಂಬ ಪ್ರಿಯ ವಾಗಿದೆ. ಗ್ರಂಥದ ಹಸ್ತಪ್ರತಿಗಳು ಬಹು ಸಂಖ್ಯೆಯಲ್ಲಿ ದೊರೆತಿರುವುದು, ಲೆಕ್ಕವಿಲ್ಲದಷ್ಟು ಬೇರೆಬೇರೆ ಪಾಠಗಳು ಹುಟ್ಟಿಕೊಂಡಿರುವುದು, ಗ್ರಂಥದ್ದಲ್ಲ ವೆಂದು ನಿಸ್ಸಂದೇಹವಾಗಿ ಹೇಳಬಹುದಾದ ಪೂರ್ವದ ಮತ್ತು ಆಮೇಲಿನ ಕೃತಿಗಳ ಪದ್ಯಗಳೂ ಇತರ ಪದ್ಯಗಳೂ ಈ ಗ್ರಂಥದಲ್ಲಿ ಸೇರಿಹೋಗಿರುವುದು — ಇವಕ್ಕೆಲ್ಲ ಗ್ರಂಥದ ಜನಪ್ರಿಯತೆಯೇ ಮುಖ್ಯಕಾರಣ. ಕವಿಯ ಕಾಲ ಮತ್ತು ಮತಕ್ಕೆ ಸಂಬಂಧಪಟ್ಟ ಬಹು ಮುಖ್ಯ ವಿಚಾರಕ್ಕೆ ಸಂಬಂಧಪಟ್ಟ ಸಂಗತಿಯನ್ನೇ ಪಾಠವ್ಯತ್ಯಾಸಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಕೆಲವು ಹಸ್ತಪ್ರತಿಗಳಲ್ಲಿ ನಾಗವರ್ಮನ ವಂಶ, ತಂದೆ ತಾಯಿ, ಗುರು, ಪೋಷಕ, ಕವಿಯ ಶೀಲಸ್ವಭಾವ, ಮುಂತಾದ ಆತ್ಮವೃತ್ತಾಂತಕ್ಕೆ ಸಂಬಂಧ ಪಟ್ಟ ಹಲವು ಪದ್ಯಗಳಿವೆ. ಅವುಗಳ ಸಾರಾಂಶ ಇಷ್ಟು :

ಪ್ರಸಿದ್ಧವಾದ ವೆಂಗಿ ವಿಷಯದಲ್ಲಿಯ ಸಪ್ತಗ್ರಾಮಗಳಲ್ಲಿ ವೆಂಗಿಪಳು ಇದ್ದಿತು. ಅದರಲ್ಲಿ ಕೌಂಡಿನ್ಯಗೋತ್ರದ ವೆಣ್ಣಮಯ್ಯನೆಂಬ ಬ್ರಾಹ್ಮಣ ನಿದ್ದನು. ಇವನ ಮೊಮ್ಮಗ ವೆಣ್ಣಮಯ್ಯ; ಈತನ ಹೆಂಡತಿ ಪೋಳಕಬ್ಬೆ. 'ಆ ಪೋಳಕಬ್ಬೆಗಂ ವಿದ್ಯಾಪರಿಣತನಪ್ಪ ವೆಣ್ಣಮಯ್ಯಂಗಂ ವಾಕ್‌ಶ್ರೀಪತಿ, ಸತ್ಕವಿತ್ವಗುಣೋಪೇತಂ, ನಾಗವರ್ಮಂ ಅಗ್ರತನೂಜಂ.' ಇವನು ಯುದ್ಧ ದಲ್ಲಿ ಕುಂತೀಪುತ್ರ: ಶಾಸ್ತ್ರದಲ್ಲಿ ಬ್ರಹ್ಮ, ಐಶ್ವರ್ಯದಲ್ಲಿ ವಿಷ್ಣು ; ಶುಚಿಯಾದ ಶೀಲದಲ್ಲಿ ಭೀಷ್ಮ; ಸತ್ಯದಲ್ಲಿ ಕರ್ಣ; ಉದಾರತೆಯಲ್ಲಿ ವಿಕ್ರಮಾದಿತ್ಯ. ಇಂಥ ವನ —

"ಅರಸಂ ರಕ್ಕಸಗಂಗಂ, ಗುರುಗಳ್ ನೆಗಳ್ದ ಅಜಿತಸೇನ ಪಂಡಿತ ದೇವರ್,
"ಪೊರೆವ ನೃಪಂ ಅಣ್ಣಂ, ಎನೆ, ಮಚ್ಚರಿಸುವವರಾರ್ ? ನಾಕಿ ಇರುಳೊಳೇಂ ಪುಟ್ಟಿದನೇ ?
"ಗಂಡರ ಮೊಗುತಿಯೆನಿಸಿದ ಮಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ
"ಕೊಂಡಾಡಿ ಪೊರೆದಂ, ಎನೆ, ಧರೆ ಕೊಂಡಾಡದೆ, ಕೊಂಡುಕೊನೆಯದೇ, ನಾಕಿಗನಂ ?

[ನೆಗಳ್ದ – ಪ್ರಸಿದ್ಧವಾದ. ಗಂಡ = ಶೂರ. ರಾಯ = ಚಾಮುಂಡರಾಯ. ಕೊಂಡುಕೊನೆ ಅತಿಶಯವಾಗಿ ಹೊಗಳು. ನಾಕಿ, ನಾಕಿಗ = ನಾಗವರ್ಮ.]

-- ಹೀಗೆ "ಪ್ರಸಿದ್ಧನಾದ ನಾಗವರ್ಮನು, ಸಮಸ್ತ ವಿದ್ವಜ್ಜನಕ್ಕೆ ಹಿತಕರವಾದ ಛಂದಸ್ಸನ್ನು ಹೇಳಿದನು". ಈ ಮೇಲಿನ ಪದ್ಯಗಳ ಆಧಾರದಮೇಲೆ "ಈ ನಾಗವರ್ಮನು ರಕ್ಕಸಗಂಗನ ಕಾಲದಲ್ಲಿ (984) ಚಾವುಂಡರಾಯನಿಂದ ಪ್ರೋಷಿತನಾಗಿಯೂ ಅಜಿತಸೇನದೇವನ ಶಿಷ್ಯನಾಗಿಯೂ ಇದ್ದನೆಂಬುದು ವ್ಯಕ್ತವಾಗದಿರಲಾರದು" ಎಂದು ಕವಿ ಚರಿತೆಕಾರರು ಅಭಿಪ್ರಾಯಪಟ್ಟು, ಕಾದಂಬರಿಯಲ್ಲಿ ಭೋಜರಾಜನ ಪ್ರಸ್ತಾಪವಿರುವುದನ್ನೂ ಗಮನಿಸಿ, ಈ ನಾಗವರ್ಮನು ಕಾದಂಬರಿ ಮತ್ತು ಛಂದೋಂಬುಧಿಯ ಕರ್ತೃವೆಂದೂ ಇವನ ಕಾಲ ಕ್ರಿ.ಶ. ಸು. 990 ಇದ್ದಿರಬೇಕೆಂದೂ ತೀರ್ಮಾನಿಸಿದರು. ಬಳಿಕ "ಧಾರಾಪುರದ ಭೋಜರಾಜನು 1010ರಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿವುದರಿಂದ ಕಾದಂಬರಿಯನ್ನು ಬರೆದ ನಾಗವರ್ಮನು ಛಂದೋಂಬುಧಿಯನ್ನು ಬರೆದ ನಾಗವರ್ಮನಿಗಿಂತ ಬೇರೊಬ್ಬನಾಗಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ" ಎಂದು ಹೇಳಿ (ಕವಿಚರಿತ್ರೆ, ಸಂ. III, ಪು. 478), ನಾಗವರ್ಮರು ಮೂವರು ಎಂಬ ಅಭಿಪ್ರಾಯಕ್ಕೆ ದಾರಿಮಾಡಿಕೊಟ್ಟರು. ಈಚೆಗೆ ಈ ಅಭಿಪ್ರಾಯಕ್ಕೆ ಕೆಲವು ವಿದ್ವಾಂಸರು ಮನ್ನಣೆ ಕೊಡುತ್ತಿದ್ದಾರೆ. ಮೇಲೆ ಉದಾಹರಿಸಿದ ಪದ್ಯಗಳೂ ಸೇರಿದಂತೆ, ಈ ನಾಗವರ್ಮನ ವಂಶ ವಿಚಾರವನ್ನು ಕುರಿತ ಪದ್ಯಗಳು ನಂಬಿಕೆಗೆ ಅರ್ಹವಾದ ಅನೇಕ ಹಸ್ತಪ್ರತಿಗಳಲ್ಲಿ ಇಲ್ಲದಿರುವುದರಿಂದ ಅವುಗಳನ್ನು ಈಚಿನವರು ಸೇರಿಸಿರಬೇಕು ಎಂಬುದು ಇವರ ವಾದ. ಇದು ಸರಿಯಾದರೆ, ನಾಗವರ್ಮ ರಕ್ಕಸಗಂಗನ ಕಾಲದವನಾಗುವುದಿಲ್ಲ. ಜಯಕೀರ್ತಿಯ ಛಂದೋನುಶಾಸನಕ್ಕೂ ಛಂದೋಂಬುಧಿಗೂ ಮುಖ್ಯವಾಗಿ ಕನ್ನಡ ಛಂದಸ್ಸಿನ ವಿಷಯದಲ್ಲಿ ತುಂಬ ಹತ್ತಿರದ ಹೋಲಿಕೆ ಉಂಟೆಂದು ಈಗಾಗಲೇ ಹೇಳಿದೆಯಷ್ಟೆ. ಹೋಲಿಕೆಯ ಆಧಾರದಮೇಲೆ, "ನಾಗವರ್ಮನು...ಜಯಕೀರ್ತಿಯನ್ನು ಹಸುವನ್ನು ಕರುವಿನಂತೆ ಅನುಸರಿಸಿ ಸಂಚರಿಸುವುದು ಅಲ್ಲಲ್ಲಿ ದೃಗ್ಗೋಚರವಾಗುವುದು" ಎಂದೂ.[5] "ನಾಗವರ್ಮನು ಪಿಂಗಳ – ಜಯದೇವರನ್ನೇ ಅಲ್ಲದೆ ಕೇದಾರಭಟ್ಟ–ಹೇಮಚಂದ್ರರನ್ನೂ ಹಲವೆಡೆ ತನ್ನ ಛಂದೋಂಬುಧಿಯಲ್ಲಿ ಅನುಸರಿಸಿರುವುದು ನಿಸ್ಸಂಶಯ–ಅಷ್ಟೇ ಅಲ್ಲ–ಅವನು, ವೇಲಣಕರರು* ಕೊಡುವ ಹೇಮಚಂದ್ರನ ಸಾವಿನ ತೇದಿ ಸರಿಯಾಗಿರುವುದಾದರೆ,

* ಎಚ್. ಡಿ. ವೇಲಣಕರರು 'ಜಯದಾಮನ್' ಎಂಬ ಹೆಸರಿನಿಂದ ಜಯದೇವ, ಜಯಕೀರ್ತಿ, ಕೇದಾರಭಟ್ಟ, ಹೇಮಚಂದ್ರ, ಇವರುಗಳ ಛಂದೋಗ್ರಂಥಗಳನ್ನು ಬಹಳ ಉಪಯುಕ್ತವಾದ ಪೀಠಿಕೆಯೊಡನೆ ಒಂದು ಸಂಪುಟವಾಗಿ 1949ರಲ್ಲಿ ಪ್ರಕಟಿಸಿದ್ದಾರೆ.

ಕ್ರಿ.ಶ. 1173ರ ಅನಂತರದ ಕಾಲದವನೆಂಬುದೂ ನಿಸ್ಸಂಶಯ. ಆದರೆ, ಎಷ್ಟು ಅನಂತರದವನೆಂಬುದನ್ನು ತೋರಿಸಲು ಸದ್ಯಕ್ಕೆ ಆಧಾರಗಳಿಲ್ಲ" ಎಂದೂ ತೀರ ಇತ್ತೀಚೆಗೆ ಎಲ್. ಬಸವರಾಜು ಅವರು ಅಭಿಪ್ರಾಯಪಟ್ಟಿದ್ದಾರೆ.[6] "ಜಯಕೀರ್ತಿಯ ಕಾಲ ಬಹುಶಃ ಕ್ರಿ.ಶ. 11 ನೆಯ ಶತಮಾನ. ಅವನ ಮನೆಮಾತು ಕನ್ನಡ; ಕನ್ನಡ ಸಾಹಿತ್ಯದ ಪರಿಚಯ ಅವನಿಗೆ ಚೆನ್ನಾಗಿ ಇದ್ದಿತಲ್ಲದೆ 'ಛಂದೋಂಬುಧಿ'ಯನ್ನೂ ಅವನು ನೋಡಿದಂತೆ ತೋರುತ್ತದೆ" ಎಂದು ತೀ. ನಂ. ಶ್ರೀಕಂಠಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಎಲ್ಲ ಅಭಿಪ್ರಾಯಗಳನ್ನೂ ತೂಗಿ ನೋಡಿದಾಗ, ಜಯಕೀರ್ತಿಯೇ 'ಛಂದೋಂಬುಧಿ'ಯನ್ನು ಅನುಸರಿಸಿರುವನೆಂದು ಹೇಳಬೇಕಾಗುತ್ತದೆ. ಅಂದಮೇಲೆ, ನಾಗವರ್ಮನ ವಂಶವಿಚಾರವನ್ನು ಉಳ್ಳ ಪದ್ಯಗಳು ಬಹುಶಃ ಅವನೇ ಬರೆದವು, ಈಚಿನವರು ಸೇರಿಸಿದವು ಅಲ್ಲ, ಎಂದು ತಿಳಿಯಬೇಕಾಗುತ್ತದೆ. ಆಗ, ನಾಗವರ್ಮನ ಕಾಲ ಕ್ರಿ.ಶ. ಸುಮಾರು 990 ಎಂಬ ಕವಿಚರಿತೆಕಾರರ ತೀರ್ಮಾನ ಸದ್ಯದಮಟ್ಟಿಗಂತೂ ಕದಲದೆ ನಿಲ್ಲುತ್ತದೆ; ಕಾದಂಬರಿಯ ನಾಗವರ್ಮನೇ ಬೇರೆ ಛಂದೋಂಬುಧಿಯ ನಾಗವರ್ಮನೇ ಬೇರೆ ಎಂದು ಅವರು ಎತ್ತುವ ಸಂದೇಹದ ಬಗೆಗೂ ವಿಚಾರಮಾಡಬೇಕಾಗಿದೆ. ಕವಿಯ ವಂಶವೃತ್ತಾಂತದಲ್ಲಿ ಗುರು ಜೈನನಾದ ಅಜಿತಸೇನ, ಪೋಷಕ ಜೈನ ಚಾವುಂಡರಾಯ ಎಂದಿರುವುದು ಕವಿಯ ಮತಕ್ಕೆ ಬಾಧಕವಾಗುವುದಿಲ್ಲ. ನಾಗವರ್ಮ ವೈದಿಕ ಮತಾನುಯಾಯಿಯಾದ ಶೈವ ಬ್ರಾಹ್ಮಣ ಎನ್ನಲು ಗ್ರಂಥದಲ್ಲೇ ಆಧಾರಗಳಿವೆ. ಅವನು ಸಯ್ಯಡಿಯ ಗ್ರಾಮದವನು, ಅಲ್ಲಿನ 'ಪಿನಾಕಿ' (ಶಿವನ) ಅವನ ಕುಲದೈವ; ಸಯ್ಯಡಿಯಿಂದ ಗಂಗರಾಜ್ಯಕ್ಕೆ ಬಂದು ಚಾಮುಂಡರಾಯನ ಆಶ್ರಯವನ್ನು ಪಡೆದಿರುವಂತೆ ಕಾಣುತ್ತದೆ. ನಾಗವರ್ಮನು ತನ್ನ ಅನೇಕ ಬಿರುದುಗಳನ್ನು ಅಲ್ಲಲ್ಲಿ ಹೇಳಿಕೊಂಡಿರುವನು. ಅವುಗಳ ಪೈಕಿ 'ಕವಿ ರಾಜಹಂಸ'ನೆಂಬುದು ಅವನಿಗೆ ತುಂಬ ಇಷ್ಟವಾದುದಾಗಿ ಕಾಣುತ್ತದೆ.

ಛಂದೋಂಬುಧಿ (ಗ್ರಂಥ ಪರಿಚಯ) :

"ಛಂದಸ್ಸನ್ನು ಶಿವನು ಪಾರ್ವತಿಗೆ ತಿಳಿಯಹೇಳಿದನು. ಅದನ್ನು ಪಿಂಗಳನು ಭೂಲೋಕದಲ್ಲಿ ಪ್ರಚಾರಮಾಡಿದನು. ಆ ಛಂದಸ್ಸೆಂಬ ಸಮುದ್ರದಿಂದ ಮೊಗೆದು ಪಡೆದಷ್ಟನ್ನು ನಾಗವರ್ಮನು ತನ್ನ ಪತ್ನಿಗೆ ಹೇಳಿದನು'',

ಎಂದು ಪ್ರಾರಂಭಿಸಿ, "ಚಂದ್ರಮುಖೀ, 'ಛಂದೋಂಬುಧಿ' ಎನ್ನುವುದು ನನ್ನ ಛಂದೋಗ್ರಂಥದ ಹೆಸರು. ವಿದ್ವಾಂಸರು ಮೆಚ್ಚುವಂತೆ ಇದನ್ನು ನಿನಗೆ ಹೇಳುತ್ತೇನೆ, ಕೇಳು" ಎಂದು ವಿಷಯವಿವರಣೆಗೆ ತೊಡಗುತ್ತಾನೆ.

ಸಂಸ್ಕೃತದಲ್ಲಿ ಅನೇಕ ಶಾಸ್ತ್ರಗ್ರಂಥಗಳು ಗುರುಶಿಷ್ಯರ ಪ್ರಶ್ನೋತ್ತರ ಸಂವಾದರೂಪದಲ್ಲಿ ರಚಿತವಾಗಿವೆ. ಈ ಪದ್ಧತಿಯನ್ನು ಮಾರ್ಪಡಿಸಿಕೊಂಡು ನಾಗವರ್ಮ ತನ್ನ ಕೃತಿಯನ್ನು ಹೆಂಡತಿಗೆ ಹೇಳಿದಂತೆ ಬರೆದಿದ್ದಾನೆ. ಸಾಧಾರಣವಾಗಿ ಪ್ರತಿಯೊಂದು ಲಕ್ಷಣ ಪದ್ಯದ ಕೊನೆಯಲ್ಲೂ ವಿಲೋಲೇಕ್ಷಣೇ ಅಬ್ಜಾನನೇ, ಲಲಿತಗಾತ್ರೇ, ಚಕಿತಹರಿಣೀನೇತ್ರೆ, ವ್ಯಾಲೋಲನೀಲಾಳಕೇ, ಕನಕಕುಂಡಲಮಂಡಿತಗಂಡೇ, ಎಂದು ಹತ್ತುಹಲವಂದವಾಗಿ ಹೆಂಡತಿಯ ಚೆಲುವನ್ನು ಸೂಚಿಸುವ ಗುಣವಾಚಕಗಳನ್ನು ಕವಿ ಬಳಸಿದ್ದಾನೆ. ಕೆಲವೊಮ್ಮೆ ಹೆಂಡತಿಯನ್ನು ಕುರಿತ ಗುಣವಾಚಕ ಸಂಬೋಧನೆ ಅತಿ ದೀರ್ಘವಾದ ಸಮಾಸಪದವಾಗಿರುವುದೂ ಉಂಟು. ಎರಡು ಪಂಕ್ತಿಗಳ ಈ ಸಂಬೋಧನೆ ಅದ್ಭುತವಾಗಿದೆ: ''ಗುರುವೃತ್ತೋತ್ತುಂಗ ವಕ್ಷೋರುಹ ಭರವಿಲಸನ್ ಮಧ್ಯಶೀಖಾ ವಿಳಾಸ ಸ್ಫುರಿತಪ್ರೋದ್ದಾಮ ಕಾಂಚೀಖಚಿತ ಮಣಿನಿತಂಬ ಸ್ಥಿಲಾಭೋಗಭಾಗೇ". ಈ ರೀತಿಯ ಬರವಣಿಗೆಯಿಂದ ನಾಗವರ್ಮನ ದಾಂಪತ್ಯಜೀವನ ಸುಖಮಯವಾಗಿತ್ತು ಎಂದು ಊಹಿಸಬಹುದು.

ಮೊದಲ ಅಧಿಕಾರ: ಕ್ಷೀರಸಾಗರದಲ್ಲಿ ಕೌಸ್ತುಭರತ್ನ ಮೊದಲಾದುವು ಹುಟ್ಟಿದಂತೆ, 'ಛಂದೋಂಬುಧಿ'ಯಲ್ಲಿ 'ಮ ಯ ರ ಸ ತ ಜ ಭ ನ ಲಗಾಕ್ಷರಂ' ಹುಟ್ಟಿದುವು. (ಮೂರು ಮೂರು ಲಘು ಗುರು ಅಕ್ಷರಗಳಿಂದ ಏರ್ಪಡುವ ಮ ಗ ಣ, ಯ ಗ ಣ, ರ ಗ ಣ, ಸ ಗ ಣ, ತ ಗ ಣ, ಜ ಗ ಣ, ಭ ಗ ಣ, ನ ಗ ಣ ಛಂದಸ್ಸಿನ ಮೂಲ ಘಟಕಗಳು—ಇದು ತಾತ್ಪರ್ಯ).

ಅನಂತರ, ಗುರು ಲಘುಗಳನ್ನು ಗುರುತಿಸುವ ಚಿಹ್ನೆಗಳ ಸ್ವರೂಪವನ್ನು ತಿಳಿಸುತ್ತಾನೆ. ಅವನ ಮತದಂತೆ, ౧ ಈ ಚಿಹ್ನೆ ಗುರು ; । ಈ ಚಿಹ್ನೆ ಲಘು. (ಈ ಚಿಹ್ನೆಗಳನ್ನು ಕಾಲಕ್ರಮದಲ್ಲಿ ‿—ಹೀಗೆ ಬರೆಯುವ ರೂಢಿ ಯಾಯಿತು. ಆದರೆ, ಇದೂ ಮಾರ್ಪಾಡಾಗಿ, ಗುರುವನ್ನು (—) ಅಡ್ಡ ಗೆರೆಯಿಂದಲೂ ಲಘುವನ್ನು (‿) ಬಾಲಚಂದ್ರನ ವಕ್ರರೇಖೆ (ಕೊಂಕುಗೆರೆ) ಯಿಂದಲೂ ಗುರುತಿಸುವುದು ಈಗ ರೂಢಿಯಾಗಿದೆ.

ಪದ್ಯ ಯಾವ ಜಾತಿಯದಾದರೂ ಗುರು, ಲಘುಗಳ ಬೆಲೆಯಲ್ಲಿ ವ್ಯತ್ಯಾಸವಾಗುವುದಿಲ್ಲ. ಗುರುಲಘುಗಳ ಸ್ವರೂಪವು ನಾಗವರ್ಮನ ಮತ ದಂತೆ ಹೀಗೆ :

ಮುಂದೆ ಒತ್ತಕ್ಷರವಿದ್ದರೆ ಹಿಂದಿನ ಲಘುವೂ ಗುರುವಾಗುತ್ತದೆ; ಬಿಂದುವಿನಿಂದ (ಅನುಸ್ವಾರದಿಂದ) ಕೂಡಿರುವ ಅಕ್ಷರ, ವಿಸರ್ಗದಿಂದ ಕೂಡಿ ರುವ ಅಕ್ಷರ, ವ್ಯಂಜನದಿಂದ ಕೂಡಿರುವ ಒತ್ತಕ್ಷರ, ಪಾದದ ಅಂತ್ಯದಲ್ಲಿರುವ ಅಕ್ಷರ, ದೀರ್ಘಾಕ್ಷರ – ಇವು ಗುರು. ಗುರು = ಈಶ್ವರ ; ಲಘು = ವಿಷ್ಣು. [ನಾಗವರ್ಮ ಗುರುಲಘುಗಳ ಕಾಲಮಾನವನ್ನು ತಿಳಿಸಿಲ್ಲ. ಲಘುವಿನ ಬೆಲೆ ಒಂದು ಮಾತ್ರೆ, ಗುರುವಿನ ಬೆಲೆ ಎರಡು ಮಾತ್ರೆ ಎಂದು ಜಯಕೀರ್ತಿ ತಿಳಿಸಿದ್ದಾನೆ. ಅಲ್ಲದೆ, 'ಭಾಷಾ ವಿಷಯದ ಜಗದ್ವಾಣಿ'ಯಲ್ಲಿ ಎಂದರೆ ಜನಪದ ಗೀತೆಯಲ್ಲಿ ಒತ್ತಕ್ಷರವನ್ನು ಶಿಥಿಲವಾಗಿ (ಎಂದರೆ, ಸಡಿಲವಾಗಿ, ತೇಲಿಸಿ) ಉಚ್ಚರಿಸುವುದರಿಂದ ಹಿಂದಿನ ಅಕ್ಷರ ಲಘುತ್ವವನ್ನೇ ಪಡೆಯುತ್ತದೆ. ಇದು ಶಿಥಿಲದ್ವಿತ್ವ ಎಂದು ಛಂದಸ್ಸಿನಲ್ಲಿ ಪ್ರಸಿದ್ಧ. ಏ ಓ ಕಾರಗಳು ವಿಕಲ್ಪ ವಾಗಿ ದೀರ್ಘವೋ ಹ್ರಸ್ವವೋ ಆಗುವುವು – ಎಂದು ಅವನು ತಿಳಿಸಿರುವುದು ಗಮನಾರ್ಹವಾದ ಹೆಚ್ಚಿನ ವಿಚಾರ.]

ಅಕ್ಷರ ವೃತ್ತ ಅಥವಾ ವರ್ಣ ವೃತ್ತಗಳಲ್ಲಿ ಬಳಸುವ ಗಣಗಳ ಬಗೆಗೆ, "ಮ-ಯ-ರ-ಸ-ತ-ಜ-ಭ-ನ-ಲ(ಘು)–ಗ(ಗುರು), ಇವು ಗಣಗಳನ್ನು ಗುರು ತಿಸುವ ಹೆಸರುಗಳು. ಮೂರು ಗುರು (– – –), ಮೂರು ಲಘು (ᴗ ᴗ ᴗ), ಇವುಗಳ ಮಿಶ್ರಣ, ಹೀಗೆ ಎಂಟು ಗಣಗಳಾಗುತ್ತವೆ. ಇವುಗಳ ಅಧಿ ದೇವತೆ ಗಳು ಕ್ರಮವಾಗಿ – ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಸ್ವರ್ಗ" ಎಂದು ಗಣ ಸ್ವರೂಪವನ್ನು ತಿಳಿಸುತ್ತಾನೆ ನಾಗವರ್ಮ. ಮುಂದೆ ವೃತ್ತಗಳ ಲಕ್ಷಣವನ್ನು ವಿವರಿಸುವಾಗ ಈ ದೇವತೆಗಳ ಪರ್ಯಾಯ ನಾಮಗಳನ್ನು (ಬೇರೆ ಬೇರೆ ಹೆಸರುಗಳನ್ನು) ಬಳಸಿಕೊಂಡಿದೆ. ಉದಾ ಹರಣೆಗೆ :

ಅಗ ಲಗ್ನಿ ಮರುದ್ದ್ವಯ ಸಂ । ಯೋಗವಾಗಿರೆ ಸಂದುದು ಭೂ ॥
ಭಾಗದೊಳ್ ಮೃಗಲೋಚನೆ ಕೇಳ್ । ನಾಗವರ್ಮನಿನಾ ವನಜಂ ॥

ಎಂಬ ಒಂಬತ್ತು ಅಕ್ಷರಗಳ 'ಬೃಹತಿ' ಎಂಬ (512) ವೃತ್ತ ಜಾತಿಗಳಲ್ಲಿ ವನಜ ವೃತ್ತದ ಲಕ್ಷಣ-ಲಕ್ಷ್ಯ ಪದ್ಯ ಹೀಗಿದೆ. ಇದರಲ್ಲಿ ಅಗ್ನಿ ಗಣ (ಮೂರ

ನೆಯ ರಗಣ –⏑–) ಮತ್ತು ಎರಡು ಮರುತ್ (ವಾಯು) ಗಣಗಳು (ನಾಲ್ಕನೆಯ ಸಗಣ ⏑⏑–, ⏑⏑–) ಬರುತ್ತವೆ. ಈ ವನಜ ವೃತ್ತ ನಾಗವರ್ಮನಿಂದ ಸೃಷ್ಟಿಯಾಯಿತು ಎಂದು ಹೇಳಿರುವುದನ್ನು ಗಮನಿಸಬೇಕು. ಹೀಗೆಯೇ ಮುಂದೆ ಅನೇಕ ವೃತ್ತ ಲಕ್ಷಣಗಳನ್ನು ವಿವರಿಸುವಾಗ ಇಂಥ ಮಾತು ಬರುತ್ತದೆ. ಇದನ್ನು ನಂಬದಿರಲು ಕಾರಣವಿಲ್ಲ. ಏಕೆಂದರೆ, ಗುರು ಲಘುಗಳನ್ನು ಒಂಬತ್ತೊಂಬತ್ತಾಗಿ ಒಂದು ಸಲ ಜೋಡಿಸಿದ ಕ್ರಮ ಇನ್ನೊಂದುಸಲ ಬರದ ಹಾಗೆ ಜೋಡಿಸಿಕೊಂಡು ಹೋದರೆ 512 ವೃತ್ತಗಳು ಆಗುತ್ತವೆ. ಹಿಂದೆ ಯಾವ ಶಾಸ್ತ್ರಕಾರನೂ ಹೇಳದಿರುವ ಒಂದು ವೃತ್ತವನ್ನು ಛಂದಸ್ಸಿನ ಮರ್ಮವನ್ನು ಬಲ್ಲವನು ನಿರ್ಮಾಣ ಮಾಡುವುದು ಕಷ್ಟವೇನಲ್ಲ. ಆಯ್ಕೆಗೆ ಅಷ್ಟು ವಿಸ್ತಾರವಾದ ಹರವು ಇದೆ. ಹಾಗೆ ನಿರ್ಮಾಣಮಾಡಿದ ವೃತ್ತದ ಲಯ ಮಾತ್ರ ಕಿವಿಗೆ ಹಿತವಾಗಿರಬೇಕು ; ಅಷ್ಟೆ.* ಈ ಪದ್ಯದಲ್ಲಿ ಭಾಮಿನೀ ಷಟ್ಪದಿಯ ನಡೆಯನ್ನು ಗುರುತಿಸಬಹುದು ; ಕೇಳಲು ಹಿತವಾಗಿದೆ. ಈ ಗಣವಿನ್ಯಾಸದ ವೃತ್ತವನ್ನು ಹಿಂದಿನವರು ಯಾರೂ ಹೇಳಿಲ್ಲ. ಆದ್ದರಿಂದ ಇದು 'ನಾಗವರ್ಮನಿಂದ ಸಂದುದು' ಎಂದು ತಿಳಿಯಲು ಅಡ್ಡಿಯಿಲ್ಲ. ಇಂಥ ಅನೇಕ ಉದಾಹರಣೆಗಳು ಛಂದೋಂಬುಧಿಯಲ್ಲಿ ಇವೆ. ಇದರಿಂದ ನಾಗವರ್ಮ, ಪಿಂಗಲ, ಜಯದೇವ, ಮುಂತಾದ ಪೂರ್ವಲಾಕ್ಷಣಿಕರನ್ನು 'ಮಕ್ಕಿಕಾಮಕ್ಕಿ' ಅನುಕರಣೆಮಾಡತಕ್ಕವನಲ್ಲ, ಸ್ವತಂತ್ರವಾಗಿಯೂ ವಿಚಾರ ಮಾಡಿ ಹೊಸಹೊಸ ಛಂದಸ್ಸಿನ ಬಗೆಗಳನ್ನು ನಿರ್ಮಾಣ ಮಾಡಬಲ್ಲ ಪ್ರತಿಭಾವಂತನಾದ ಶಾಸ್ತ್ರಜ್ಞ ಎಂಬುದು ಚೆನ್ನಾಗಿ ಗೊತ್ತಾಗುತ್ತದೆ.

ವೃತ್ತಗಳನ್ನು ರಚಿಸುವಾಗ ಕವಿ (ಬಹುಶಃ ಮೊದಲ ಗಣವಾಗಿ) ಯಾವ ಗಣವನ್ನು ಉಪಯೋಗಿಸಿದರೆ ಏನು ಫಲ, ಯಾವ ಗಣದಿಂದ

---

*ಉದಾಹರಣೆಗೆ, 'ಅಮರಗಣ। ವಾತತೋ । ಯಂ' ಎಂಬ ಇದೇ 9 ಅಕ್ಷರಗಳ ವೃತ್ತ ಜಾತಿಯಲ್ಲಿ 'ಮಯೂರ' ಎಂಬ (ನಸಜ ಗಣಗಳ) ವೃತ್ತವನ್ನು ಗಮನಿಸಬಹುದು. ಈ ಪದ್ಯದಲ್ಲಿಯೂ 'ಎನಿಸಿತಿದು ನಾಕಿಯಿಂದಂ' ಎಂಬ ಮಾತು ಬಂದಿದೆ. ಇದರಲ್ಲಿ 5 ಮಾತ್ರೆಗಳ ವಾರ್ಧಿಕ ಷಟ್ಪದಿಯ ನಡೆ : ಮೇಲೆ ಒಂದು ದೀರ್ಘ ಇದೆ. ಹಿಂದಿನ ಲಕ್ಷಣಕಾರರು ಇದೇ 9 ಅಕ್ಷರದ ವೃತ್ತವನ್ನು 'ನಸಯ' ಗಣಗಳಿಂದ ನಿರ್ಮಿಸಿರುವುದೂ ಇದೆ. 'ಯ'ಗಣದ ಬದಲು 'ಜಗಣ' ಹಾಕಿ ಸ್ವಲ್ಪ ವ್ಯತ್ಯಾಸ ಮಾಡಿರುವುದರಿಂದ, ಇದನ್ನು 'ನಾಕಿ' (ನಾಗವರ್ಮ) ನಿರ್ಮಿಸಿದ್ದು ಎಂದಾಗ ನಾವು ನಂಬಬಹುದು.

ಶುಭ, ಯಾವುದರಿಂದ ಅಶುಭ ಎಂಬ ಬಗೆಗೆ ಛಂದೋಂಬುಧಿಯ ಕೆಲವು ಹಸ್ತಪ್ರತಿಗಳಲ್ಲಿಯೂ, ಈಚಿನ ಮುದ್ರಿತ ಪ್ರತಿಗಳಲ್ಲಿಯೂ ಕೆಲವು ಪದ್ಯಗಳಿವೆ. ಇತರರನ್ನು ಕುರಿತು ಬರೆದಾಗ ಈ ಶುಭಾಶುಭ ಫಲಗಳು ಕುರಿತವರಿಗೆ. ಈ ಪದ್ಯಗಳನ್ನು ನಾಗವರ್ಮನೇ ಬರೆದನೋ, ಈಚಿನವರು ಬರೆದು ಸೇರಿಸಿದರೋ, ಹೇಳುವುದು ಕಷ್ಟ. 'ಕವಿಜಿಹ್ವಾಬಂಧನ' ಎಂಬ ಛಂದಸ್ಸಿನ ಗ್ರಂಥದಲ್ಲಿ ಈ ವಿಷಯಕ್ಕೆ ಪ್ರಾಮುಖ್ಯ ಇರುವುದರಿಂದ ಆ ಸಂಬಂಧವಾಗಿ ವಿಚಾರ ಮಾಡುವಾಗ ಒಂದೆರಡು ಸಂಗತಿಗಳನ್ನು ಗಮನಿಸಬಹುದು.

ಯತಿ ನಿಯಮವನ್ನು ಕುರಿತು ನಾಗವರ್ಮನ ಅಭಿಪ್ರಾಯ ಸ್ಪಷ್ಟವಾಗಿದೆ: "ಯತಿ ಎಂಬುದು ಗಣನಿಯಮ ಪಾಲನೆಯಲ್ಲಿ ಗೋಚರಿಸುವ ಅಂಶ. ಅದು ಉಸಿರ್ದಾಣ (ಎಂದರೆ, ಅರ್ಥ ಕೆಡದ ರೀತಿಯಲ್ಲಿ ಪದ್ಯ ಛಂದಸ್ಸಿನ ನಡೆಯನ್ನು ನಿಲ್ಲಿಸಿ, ಉಸಿರು ತೆಗೆದುಕೊಳ್ಳುವ ಸ್ಥಳ). ಈ ಯತಿ ನಿಯಮವನ್ನು ಮೀರಿದರೆ ಕವಿತೆ ಶೋಭಿಸುವುದಿಲ್ಲ."

ಅನಂತರ, ಸಂಸ್ಕೃತ ಪ್ರಾಕೃತ ಅಪಭ್ರಂಶ ಮತ್ತು ಇತರ ಎಲ್ಲ ಭಾಷೆಗಳಲ್ಲಿಯೂ ಬಳಕೆಗೊಳ್ಳಬಹುದಾದ 26 ಛಂದಸ್ಸುಗಳನ್ನೂ, 'ಕರ್ಣಾಟ ವಿಷಯ ಭಾಷಾ ಜಾತಿ'ಯ ಛಂದಸ್ಸಿನ ಬಗೆಗಳನ್ನೂ ಹೆಸರಿಸಿದ್ದಾನೆ ನಾಗವರ್ಮ. ಈ 26 ಛಂದಸ್ಸುಗಳಲ್ಲಿ ಹುಟ್ಟುವ ವೃತ್ತಗಳೆಲ್ಲವೂ ಸಮವೃತ್ತಗಳು, ಎಂದರೆ, ಪದ್ಯದ ನಾಲ್ಕು ಪಾದಗಳೂ ಒಂದೇ ಸಂಖ್ಯೆಯ ಗಣಗಳನ್ನು ಹೊಂದಿರತಕ್ಕವು. ಇವುಗಳಲ್ಲದೆ ಮಾಲಾವೃತ್ತ, ದಂಡಕ, ರಗಳೆ, ಮಾತ್ರಾ ಛಂದಸ್ಸಿನ ಆರ್ಯೆ, ಸ್ಕಂಧಕ, ಎಂಬ ಜಾತಿಗಳೂ ಉಂಟು. 'ಕರ್ಣಾಟ ವಿಷಯ ಭಾಷಾ ಜಾತಿ' ಎಂದು ಹೆಸರಾದ ಛಂದಸ್ಸಿನಲ್ಲಿ ಮದನವತಿ, ಅಕ್ಕರ, ಚೌಪದಿ, ಏಳೆ, ತ್ರಿಪದಿ, ಉತ್ಸಾಹ, ಷಟ್ಪದಿ, ಅಕ್ಕರಿಕೆ, ಛಂದೋವತಂಸ – ಇವನ್ನು ಹೆಸರಿಸಿ, ಇವುಗಳ ಲಕ್ಷಣ ವಿವರಣೆಗೆ ಒಂದು ಅಧ್ಯಾಯವನ್ನು ಮೀಸಲಿರಿಸಿದ್ದಾನೆ. ಈ ಮೊದಲ ಅಧಿಕಾರವನ್ನು ಛಂದಸ್ಸಿನ ಪ್ರಾಮುಖ್ಯದ ವರ್ಣನೆಯಿಂದ ಮುಗಿಸಿದ್ದಾನೆ:

ಛಂದಮಂ ಅರಿಯದನ ಓದುಂ,
ಮುಂದಿರ್ದ ಆ ತಾಲ ಮಾನವರಿಯದ ಪಾಡುಂ,
ಬಂದುದ ಗೆಡೆವನ ನುಡಿಯುಂ, ಅ–
ದೊಂದರ್ಕಂ ಬಾಳ್ತೆಯಿಲ್ಲ ಕೇಳಿಂದುಮುಖೀ.

ಎರಡನೆಯ ಅಧಿಕಾರ: ಇದು ಸಮವೃತ್ತ ನಿರೂಪಣ ಪ್ರಕರಣ. ಇದರಲ್ಲಿ ಒಂದಕ್ಷರದ 'ಉಕ್ತೆ' ಯಿಂದ ಹಿಡಿದು 'ಉತ್ಕೃತಿ'ಯ 26 ಅಕ್ಷರಗಳವರೆಗಿನ ಛಂದಸ್ಸುಗಳಲ್ಲಿ ಪ್ರತಿಯೊಂದರಲ್ಲಿಯೂ ಹುಟ್ಟುವ ವೃತ್ತಗಳಲ್ಲಿ ಹಲಕೆಲವು ವೃತ್ತಗಳನ್ನು ಆಯ್ದುಕೊಂಡು, ಲಕ್ಷಣ ಪದ್ಯವೇ ಲಕ್ಷ್ಯವೂ ಆಗುವಂತೆ ನಾಗವರ್ಮನು ನಿರೂಪಿಸಿದ್ದಾನೆ. ವೃತ್ತಗಳ ಹೆಸರುಗಳಲ್ಲಿಯೇ ಒಂದು ಸೊಗಸಿದೆ. ಉದಾ., 4 ಅಕ್ಷರಗಳ ಸುಂದರ ವೃತ್ತ, ಮೃಗನೇತ್ರ, ತಿಲಕ, ಸರಸಿರುಹ, ಶಶಿಕಾಂತ, ಕುಮುದ, ಉದಯ, ವನಜ, ಮಂದಾನಿಲ, ಮಣಿರಂಗ, ಸೈನಿಕ, ಇಂದ್ರವಜ್ರ, ಚಂದ್ರಿಕೆ, ಹಂಸಮತ್ತ, ವಸಂತತಿಲಕ, ವನಮಯೂರ, ಮಾಲಿನಿ, ಮಣಿವಿಭೂಷಣ, ಪದ್ಮಮುಖಿ, ಮಂದಾಕ್ರಾಂತ, ಹರಿಣೀಪ್ಲುತ, ಪೃಥ್ವಿ, ಮಲ್ಲಿಕಾಮಾಲೆ, ಅರವಿಂದ, ಇತ್ಯಾದಿ ಇತ್ಯಾದಿ. ಈ ಹೆಸರುಗಳಲ್ಲಿ ಬಹುಸಂಖ್ಯೆಯವು ಹಿಂದಿನ ಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವವೇ. ಕೆಲವು ಸಂದರ್ಭಗಳಲ್ಲಿ ನಾಗವರ್ಮ ಹಿಂದಿನವರು ಕೊಟ್ಟ ಹೆಸರನ್ನು ತನಗೆ ಇಷ್ಟವಾದ ರೀತಿಯಲ್ಲಿ ಮಾರ್ಪಡಿಸಿಕೊಳ್ಳುವುದೂ ಉಂಟು. ಉದಾಹರಣೆಗೆ, ಪಿಂಗಳ ಜಯದೇವಾದಿಗಳು 'ಕುಸುಮಿತ ಲತಾವೇಲ್ಲಿತಾ' ಎಂದು ಕರೆದಿರುವುದನ್ನು ನಾಗವರ್ಮ 'ಕಂದರ್ಪಜಾತ' ಎಂದು ಹೆಸರಿಸಿದ್ದಾನೆ. ಅವಕಾಶ ದೊರೆತಾಗ, ವೃತ್ತದ ಹೆಸರನ್ನು ಪತ್ನಿಯನ್ನು ಕುರಿತ ಸಂಬೋಧನೆಯ ವಿಶೇಷವನ್ನಾಗಿ ಬಳಸಿಕೊಳ್ಳುವುದೂ ಉಂಟು :

ಲಲಿತಹರಿಣೀ ನೇತ್ರೇ ಕರ್ಣಾಮೃತಂ ಹರಿಣೀಪ್ಲುತಂ
ಮಲ್ಲಿಕಾಲೋಲ ನೀಲ ಸಹಸ್ರ ಕುಂತಳೆ ಸಂದುದಿಂತಿದು ಮಲ್ಲಿಕಾಮಾಲೆಯೆಂಬುದು
ನಿಶ್ಚಯಂ ಕವಿರಾಜಹಂಸ ವಿನಿರ್ಮಿತಂ
ನಾಗವರ್ಮ ವಿನಿರ್ಮಿತಂ ತರಳಲೋಚನೆ ನಾಮದಿಂ ತರಳಂ ಕವೀಂದ್ರಜನಸ್ತುತಂ,
ಸ್ರಗ್‌ಧಾಮಪ್ರೋದ್ದಾಮ ಕೇಶಾನ್ವಿತೆ ಬಗೆ ಪೆಸರಿಂ ಸ್ರಗ್ಧರಾನಾಮವೃತ್ತಂ

ಈ ಅಧಿಕಾರದಲ್ಲಿ ಹೇಳಿರುವ 19 ಅಕ್ಷರಗಳ 'ಅತಿಧೃತಿ' ಎಂಬ ಛಂದಸ್ಸಿನ ಶಾರ್ದೂಲ ವಿಕ್ರೀಡಿತ, 20 ಅಕ್ಷರಗಳ 'ಕೃತಿ'ಯೆಂಬ ಛಂದಸ್ಸಿನ ಮತ್ತೇಭ ವಿಕ್ರೀಡಿತ, ಹಾಗೂ ಉತ್ಪಲ ಮಾಲೆ, 21 ಅಕ್ಷರಗಳ 'ಪ್ರಕೃತಿ' ಛಂದಸ್ಸಿನ ಚಂಪಕಮಾಲೆ ಮತ್ತು ಸ್ರಗ್ಧರೆ, 22 ಅಕ್ಷರಗಳ 'ಆಕೃತಿ' ಛಂದಸ್ಸಿನ ಮಹಾಸ್ರಗ್ಧರೆ ಇವು 'ಖ್ಯಾತ ಕರ್ಣಾಟಕ'ಗಳು ಎಂದು ಪ್ರಸಿದ್ಧವಾಗಿವೆ. ಸುಮಾರು 12–13 ನೆಯ ಶತಮಾನಗಳವರೆಗಿನ ಕನ್ನಡ ಚಂಪೂ ಕಾವ್ಯಗಳಲ್ಲಿ ಕಂದಗಳನ್ನು ಬಿಟ್ಟರೆ ಈ ಆರು ವೃತ್ತಗಳು ವಿಶೇಷವಾಗಿ ಬಳಕೆಯಾಗಿವೆ. '700–950ರ

ಶಾಸನಗಳಲ್ಲಿಯೂ ಇವು ಸಿಕ್ಕುತ್ತವೆ.'[7] ಆದ್ದರಿಂದ ಇವಕ್ಕೆ 'ಖ್ಯಾತ ಕರ್ಣಾಟಕ' ಎಂದರೆ 'ಕನ್ನಡದಲ್ಲಿ ಹೆಸರಾದವು' ಎಂಬ ಹೇಳಿಕೆ ರೂಢಿಗೆ ಬಂದಿರಬಹುದು. ಈ ಆರು ವೃತ್ತಗಳನ್ನು ಸುಲಭವಾಗಿ ಗುರುತಿಸುವ ಬಗೆಯನ್ನು ಸೂಚಿಸುವ ಒಂದು ಪದ್ಯವೂ ಇದೆ. ಇದು ಕೆಲವು ಹಸ್ತಪ್ರತಿಗಳಲ್ಲಿ ಇಲ್ಲದಿರುವುದರಿಂದ ಈಚಿನವರು ರಚಿಸಿ ಛಂದೋಂಬುಧಿಗೆ ಸೇರಿಸಿರುವರೆಂದು ತೋರುತ್ತದೆ. ಅದು ಹೇಗಿದ್ದರೂ, ಛಂದಸ್ಸಿನ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಈ ಪದ್ಯವನ್ನು ಆಸಕ್ತಿಯುಳ್ಳವರು ಕಲಿತುಕೊಳ್ಳುವುದರಿಂದ ನಷ್ಟವೇನೂ ಇಲ್ಲ. ಅದನ್ನು ಕೆಳಗೆ ಕೊಟ್ಟಿದೆ :

ಗುರುವೊಂದಾದಿಯೊಳುತ್ಪಲಂ, ಗುರುಮೊದಲ್ ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ, ಲಘುದ್ವಂದ್ವಂ ಗುರು ದ್ವಂದ್ವಮಾ
ಗಿರೆ ಮತ್ತೇಭ, ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ,
ಹರಿಣಾಕ್ಷೀ. ಲಘು ನಾಲ್ಕು ಚಂಪಕಂ–ಇವಾರುಂ ಖ್ಯಾತ ಕರ್ಣಾಟಕಂ

'ಉತ್ಪಲ, ಶಾರ್ದೂಲ, ಸ್ರಗ್ಧರೆ–ಇವುಗಳ ಮೊದಲಿನ ಗುರುವಿಗೆ ಎರಡು ಲಘುಗಳನ್ನು ಇಟ್ಟು ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳನ್ನು ಕನ್ನಡ ಕವಿಗಳು ಮಾಡಿಕೊಂಡಂತೆ ಕಾಣುತ್ತದೆ.'[8] 'ಮತ್ತೇಭವಿಕ್ರೀಡಿತಂ ಪೆಸರಾಯ್ತಿಂತಿದು ನಾಗವರ್ಮ ಕವಿಯಿಂ ವ್ಯಾಲೋಲ ನೀಲಾಲಕೀ' ಎಂದಿರುವುದರಿಂದ ಈ ವೃತ್ತಕ್ಕೆ ನಾಗವರ್ಮನು ಮೊದಲಬಾರಿಗೆ ಲಕ್ಷಣ ಹೇಳಿದನೆಂದು ತೋರುತ್ತದೆ.

ಮೂರನೆಯ ಅಧಿಕಾರದಲ್ಲಿ-ಮಾಲಾವೃತ್ತ, ಅರ್ಧ ಸಮವೃತ್ತ, ವಿಷಮ ವೃತ್ತ, ಅನುಷ್ಟುಪ್ (ಶ್ಲೋಕ), ವೈತಾಳೀಯ, ಮುಂತಾದ ಕೆಲವು ವಿಶೇಷ ಜಾತಿಯ ಛಂದಸ್ಸುಗಳ ಲಕ್ಷಣಗಳನ್ನು ವಿವರಿಸಿದೆ. ಇವುಗಳಲ್ಲಿ 'ಶ್ಲೋಕ'ದ ಹೆಸರು ಎಲ್ಲರಿಗೂ ಪರಿಚಿತವಾದದ್ದು. ಇದು ರಾಮಾಯಣ, ಮಹಾಭಾರತ, ಭಗವದ್ಗೀತೆ ಮುಂತಾದ ಪ್ರಸಿದ್ಧ ಸಂಸ್ಕೃತ ಗ್ರಂಥಗಳಲ್ಲಿ ಬಳಕೆಯಾಗಿದೆ. ಶಾಸ್ತ್ರಗ್ರಂಥಗಳೆಲ್ಲ ಸಾಧಾರಣವಾಗಿ ಶ್ಲೋಕ ರೂಪದಲ್ಲಿ ರಚನೆಗೊಂಡಿವೆ. ಕವಿರಾಜಮಾರ್ಗದಲ್ಲಿ ಕನ್ನಡ ಶ್ಲೋಕ ರಚನೆಯ ಪ್ರಯೋಗವನ್ನು ಕಾಣಬಹುದು. ಸಂಸ್ಕೃತದಲ್ಲಿ ಸಾಧಾರಣವಾದ ಈ ಛಂದಸ್ಸು ಅದೇಕೋ ಕನ್ನಡಕ್ಕೆ ಒಗ್ಗಿಬರಲಿಲ್ಲ.

ರಗಳೆ ಛಂದಸ್ಸು ಹರಿಹರನ ರಗಳೆಗಳಿಂದಾಗಿ ಕನ್ನಡದಲ್ಲಿ ಪ್ರಸಿದ್ಧವಾಗಿದೆ. ಪಂಪನೇ ಮೊದಲಾದ ಕವಿಗಳು ಚಂಪೂ ಕಾವ್ಯಗಳಲ್ಲಿ ಅಲ್ಲಲ್ಲಿ ರಗಳೆ

ಗಳನ್ನು ಬಳಸಿದ್ದಾರೆ. ಇದು ಅಕ್ಷರಗಳ ಗಣ ನಿಯಮದ ಛಂದಸ್ಸಲ್ಲ; ಮಾತ್ರಾ ಗಣಗಳ ಛಂದಸ್ಸು. 'ರಗಳೆಯ ಲಕ್ಷಣಮುಂ ಕಂದಪದ್ಯದಿಂ ಪೇಳ್ವೆಂ' ಎಂದು ನಾಗವರ್ಮನು ಈ ಅಧ್ಯಾಯದಲ್ಲಿ ಸೇರಿಸಿರುವುದೂ, ಜಯಕೀರ್ತಿ ಛಂದೋನು ಶಾಸನದ ಮೊದಲ ಅಧಿಕಾರದಲ್ಲಿ ರಗಳೆಯ ಲಕ್ಷಣವನ್ನು ಹೇಳಿರುವುದೂ ವಿಚಾರಮಾಡತಕ್ಕ ವಿಷಯ. ಈ ಸಂಬಂಧದ ಚರ್ಚೆ ಇಲ್ಲಿ ಅಪ್ರಸಕ್ತ.

ನಾಲ್ಕನೆಯ ಅಧಿಕಾರದಲ್ಲಿ, ಕಂದ, ಆರ್ಯೆ, ಗೀತಿಕೆ, ಸಂಕೀರ್ಣ, ದುವಯಿ(= ದ್ವಿಪದಿ) ಎಂಬ, ಮಾತ್ರೆಗಳಿಂದ ಆಗುವ ಪದ್ಯ ಜಾತಿಗಳನ್ನು ಕಂದಪದ್ಯದಲ್ಲಿ ವಿವರಿಸಿದ್ದಾನೆ. (ಇಲ್ಲಿ ಹೆಸರಿಸಿರುವ ಗೀತಿಕೆ ಅಚ್ಚಗನ್ನಡ ಛಂದಸ್ಸಿನ ಗೀತಿಕೆ ಅಲ್ಲ.) ಸಂಸ್ಕೃತದ 'ಸ್ಕಂಧಕ' ಎಂಬ ಮಾತ್ರಾ ವೃತ್ತವು ಪ್ರಾಕೃತದಲ್ಲಿ 'ಖಂದಅ' ಎಂಬ ಹೆಸರಿನಿಂದ ಬಳಕೆಗೆ ಬಂದು, ಆ ಮೂಲಕ 'ಕಂದ'ವಾಗಿ, ಕನ್ನಡದಲ್ಲಿಯೇ ಹುಟ್ಟಿ ಬೆಳೆಯಿತೇನೋ ಎನ್ನುವಷ್ಟರ ಮಟ್ಟಿಗೆ ಕನ್ನಡಕ್ಕೆ ಒಗ್ಗಿಬಂತು ; ಕವಿಗಳಿಗೆ ಅತ್ಯಂತ ಪ್ರಿಯವಾಯಿತು. ಚಂಪೂ ಕಾವ್ಯಗಳಲ್ಲಿಯೂ ಅನೇಕ ನೀತಿ ಕಾವ್ಯಗಳಲ್ಲಿಯೂ ಶಾಸ್ತ್ರ ಗ್ರಂಥಗಳಲ್ಲಿಯೂ ಇದು ವಿಶೇಷವಾಗಿ ಬಳಕೆಯಾಗಿದೆ. ಸಂಸ್ಕೃತದಲ್ಲಿ ಶ್ಲೋಕ ಹೇಗೋ ಕನ್ನಡಕ್ಕೆ ಕಂದ ಹಾಗೆ. ಜನ್ನನ ಯಶೋಧರ ಚರಿತ್ರೆ ಪೂರ್ತಿಯಾಗಿ ಕಂದದಲ್ಲಿರುವುದನ್ನು ಇಲ್ಲಿ ಸ್ಮರಿಸಬಹುದು. ವೃತ್ತಿ ನಾಟಕ ಸಂಘಗಳು ಆಡುತ್ತಿದ್ದ ನಾಟಕಗಳಲ್ಲಿ ಕಂದಗಳ ಹಾಡಿಕೆ ವಿಶೇಷ ಸಂಗತಿ ಎನ್ನಿಸಿ, ತುಂಬ ಜನಪ್ರಿಯವಾಗಿತ್ತು. ಡಿ. ವಿ. ಜಿ. ಮುಂತಾದ ಆಧುನಿಕ ಕವಿಗಳು ಕೂಡ ಇದನ್ನು ಬಳಸುತ್ತ ಬಂದಿದ್ದಾರೆ. ಜಯಕೀರ್ತಿ 'ಸ್ಕಂಧ' ಎಂಬ ಹೆಸರಿನಿಂದ ಲಕ್ಷಣ ಹೇಳಿದ್ದಾನೆ.

ಐದನೆಯ ಅಧಿಕಾರವು, 'ಕರ್ಣಾಟ ವಿಷಯ ಜಾತಿ ವೃತ್ತ ಪ್ರಕರಣ' ವಿವರಣೆಗೆ ಮೀಸಲಾಗಿದೆ. ಇದು ಅಚ್ಚಗನ್ನಡ ಛಂದಸ್ಸು. ತೆಲುಗು ತಮಿಳು ಗಳಲ್ಲೂ ಇದು ಬಳಕೆಯಲ್ಲಿರುವುದರಿಂದ 'ದ್ರಾವಿಡ ಛಂದಸ್ಸು' ಎಂಬ ಸಾಮಾನ್ಯ ನಾಮದಿಂದ ಕರೆಯಬಹುದು. ಇದರ ಗಣಗಳ ಸ್ವರೂಪವನ್ನು ನಾಗವರ್ಮ ಹೀಗೆ ವಿವರಿಸಿದ್ದಾನೆ :

ಎರಡುಂ ಮೂರುಂ ನಾಲ್ಕುಂ
ಗುರುವಿಂ ಪ್ರಸ್ತರಿಸಲ್ ಅಂಬುನಿಧಿ, ಗಜ, ಧರಣೀ
ಶ್ವರ ಗಣಂ ಬಗೆಗಂ ; ಅವರ್ಕಂ
ಸರಸಿಜಭವ ವಿಷ್ಣು ರುದ್ರ ಸಂಜ್ಞೆಗಳಕ್ಕುಂ

[ಎರಡು (— —), ಮೂರು (— — —), ನಾಲ್ಕು (— — — —) ಗುರುಗಳನ್ನಿಟ್ಟುಕೊಂಡು ಪ್ರಸ್ತಾರ ಮಾಡಿದರೆ ಕ್ರಮವಾಗಿ 4, 8, 16 ಗಣ ಪ್ರಕಾರಗಳು ಹುಟ್ಟುವುವು. ಅವಕ್ಕೆ ಬ್ರಹ್ಮ, ವಿಷ್ಣು, ರುದ್ರ ಎಂಬ ಸಂಕೇತ ನಾಮಗಳು ಆಗುವುವು. (ಪ್ರಸ್ತಾರದಲ್ಲಿ ಪ್ರತಿ ಗಣದ ಮೊದಲು ಒಂದು ಗುರುವಿನ ಸ್ಥಾನದಲ್ಲಿ ಎರಡು ಲಘುಗಳು ಬರಬಹುದು. ಅಲ್ಲಿಂದ ಮುಂದೆ ಒಂದು ಗುರುವಿನ ಸ್ಥಾನದಲ್ಲಿ ಒಂದು ಲಘು ಮಾತ್ರ ಬರತಕ್ಕದ್ದು : ಈ ಹೆಚ್ಚಿನ ವಿವರಣೆಯನ್ನು ನಾಗವರ್ಮ ಜಯಕೀರ್ತಿಗಳಿಬ್ಬರೂ ಕೊಟ್ಟಿದ್ದಾರೆ.)]

ಜಯಕೀರ್ತಿ ಗಣಗಳಿಗೆ ಬೇರೆಯ ಸಂಕೇತನಾಮಗಳನ್ನು ಕೊಟ್ಟಿದ್ದಾನೆ. ತೆಲುಗು, ತಮಿಳುಗಳಲ್ಲಿಯೂ ಬೇರೆಯ ಹೆಸರುಗಳು. ಅವುಗಳನ್ನು ಈ ಕೆಳಗೆ ಪಟ್ಟಿಮಾಡಿದೆ :

ಗಣ	ನಾಗವರ್ಮ	ಜಯಕೀರ್ತಿ	ತೆಲುಗು	ತಮಿಳು
ಗುರು				
— —	(2) ಬ್ರಹ್ಮ	ರತಿ (ರ)	ಸೂರ್ಯ	ಈರಶೈಶೀರ್ (ಉರಿಚ್ಚೀರ್)
— — —	(3) ವಿಷ್ಣು	ಮದನ (ಲ)	ಇಂದ್ರ	ಮೂವಶೈಶೀರ್ (ವೆಣ್ಚೀರ್)
— — — —	(4) ರುದ್ರ	ಶರ (ಧ)	ಚಂದ್ರ	ನಾಲಶೈಶೀರ್ (ಪೋದುಂಚೀರ್)

ಈ ಗಣಗಳನ್ನು ದೇವಗಣಗಳೆಂದೂ ಕರೆಯುವ ರೂಢಿಯಿದೆ. ತಮಿಳಿನಲ್ಲಿ ಗಣದ ಗುರುವಿನ ಸಂಖ್ಯೆಯಿಂದಲೇ (ಇರ್ + ಅಶೈ, ಮೂ + ಅಶೈ, ನಾಲ್ + ಅಶೈ) ಗಣವನ್ನು ಹೆಸರಿಸಿದೆ. ಬಹುಶಃ ತಮಿಳಿನ 'ಅಶೈ'ಯಿಂದ ಸೂಚನೆ ಪಡೆದು, ಬಿ. ಎಂ. ಶ್ರೀ. ಯವರು ಮೊತ್ತ ಮೊದಲಿಗೆ ಈ ಗಣಗಳನ್ನು 'ಅಂಶಗಣ' ಎಂದು ಕರೆದರು. (ಅಶೈ = ಅಂಶ; ಶೀರ್ = ಗಣ). ಈ ಛಂದಸ್ಸಿನ ಧಾಟಿಯನ್ನು 'ಅಂಶಲಯ' ಎಂದು ಕರೆಯುವುದು ಈಗ ರೂಢಿಗೆ ಬಂದಿದೆ.

ಗಣಸ್ವರೂಪ ನಿರೂಪಣೆಯಾದ ಮೇಲೆ, ನಾಗವರ್ಮ ಅಕ್ಕರ ವೃತ್ತದಲ್ಲಿ ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರ, ಎಂದು 5 ಬಗೆಯ ಲಕ್ಷಣಗಳನ್ನು ವಿವರಿಸಿ, ಬಳಿಕ ತ್ರಿಪದಿ, ಚಿತ್ರ, ಚಿತ್ರಲತೆ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ

(ಲಯಗ್ರಾಹಿ), ಉತ್ಸಾಹ ದಂಡಕ, ಷಟ್ಪದಿ—ಇವುಗಳ ಲಕ್ಷಣವನ್ನು ಹೇಳಿದ್ದಾನೆ.

ಅಕ್ಕರದ 5 ಬಗೆಗಳನ್ನು ಜಯಕೀರ್ತಿ ಕಿರಿಯಕ್ಕರದಿಂದ ಮೊದಲು ಮಾಡಿ ಅಲ್ಪಾಕ್ಷರ, ಅಂತರಾಕ್ಷರ, ಮಧ್ಯಮಾಕ್ಷರ, ಸಮಾನಾಕ್ಷರ, ಮಹಾಕ್ಷರ ಎಂದು ಹೆಸರಿಸಿದ್ದಾನೆ. ನಾಗವರ್ಮ ಹೇಳುವ ಚಿತ್ರ, ಚಿತ್ರಲತೆಗಳೂ ತ್ರಿಪದಿಗಳೇ. ಹೀಗಿರುವುದನ್ನು ಗುರುತಿಸಿಯೇ ಜಯಕೀರ್ತಿ ತ್ರಿಪದಿಯಲ್ಲಿ ಮೂರು ಬಗೆಗಳೆಂದು ತಿಳಿಸಿ, ಅವುಗಳನ್ನು ಚಿತ್ರಾ, ವಿಚಿತ್ರಾ, ವಿಲಾ ಎಂದು ಹೆಸರಿಸಿದ್ದಾನೆ. ಜಯಕೀರ್ತಿ ತ್ರಿಪದಿ(ಕಾ) ಎಂದು ಹೆಸರಿಸಿದ್ದರೂ ಅವನ ಪ್ರಕಾರ ತ್ರಿಪದಿಗೆ ನಾಲ್ಕು ಪಾದಗಳು. ತ್ರಿಪದಿಯ ಕಡೆಯ (ತೃತೀಯ) ಪಾದವನ್ನು ಬಿಟ್ಟರೆ ವಿಲಾ ಆಗುತ್ತದೆ ಎಂದು ಅವನ ವಿಲಾಲಕ್ಷಣವಿವರಣೆ. ಇವರಿಬ್ಬರ ಅಭಿಪ್ರಾಯ ಪರಸ್ಪರ ವಿರುದ್ಧವಾಗಿರುವಂತೆ ಕಾಣುತ್ತದೆ. ತ್ರಿಪದಿಯನ್ನು ಹಾಡುವ ಕ್ರಮದಲ್ಲಿಯೇನೊ ನಾಲ್ಕು ಪಾದಗಳ ವಿಂಗಡಣೆಯುಂಟು. ಆದರೆ, ತ್ರಿಪದಿಯ 'ಸಾಹಿತ್ಯ'ದಲ್ಲಿ ಮೂರೇ ಪಾದಗಳು. ಆದ್ದರಿಂದ, ಈ ಛಂದಸ್ಸನ್ನು ತ್ರಿಪದಿ ಎಂದೇ ಕರೆಯುವುದು ಸರಿ. ವಿಳೆಗೆ ಎರಡೇ ಪಾದಗಳು. "ತ್ರಿಪದಿಯ ರಚನೆಯನ್ನು ನೋಡಿದರೆ ಇದು ಮೊದಲು ಎರಡು ಸಾಲಿನ ಹಾಡಾಗಿದ್ದು, ಮೂರು ಸಾಲಾಯಿತೆಂದು ಊಹಿಸಬಹುದಾಗಿದೆ" ಎಂದು ಬಿ. ಎಂ. ಶ್ರೀ. ಅಭಿಪ್ರಾಯ ಪಟ್ಟಿದ್ದಾರೆ. (ಕ. ಕೈಪಿಡಿ, ಪು. 150). ಎರಡು ಸಾಲಿನ ವಿಳೆ ತಮಿಳಿನ ಕುರಳ್ ಮತ್ತು ವೆಣ್ಬಾ ವೃತ್ತಗಳನ್ನು ಹೋಲುತ್ತದೆ. "ತ್ರಿಪದಿ ಕನ್ನಡ ಛಂದೋಗಂಗೆಯ ಗಂಗೋತ್ರಿ" ಎಂಬ ಡಿ. ಎಸ್. ಕರ್ಕಿಯವರ ಅಭಿಪ್ರಾಯವನ್ನು ಮಾರ್ಪಡಿಸಬೇಕೆಂದು ಕಾಣುತ್ತದೆ. ವಿಳೆಯನ್ನೇ ನಾವು ಕನ್ನಡ ಛಂದಸ್ಸಿನ ತಾಯಿಬೇರು ಎಂದು ಭಾವಿಸಬಹುದು. ವಿಳೆಯ ಉದಾಹರಣೆಗಳು ಜನಪದ ಸಾಹಿತ್ಯದಲ್ಲಿ ದೊರೆಯುತ್ತವೆ; ಶಾಸನಗಳಲ್ಲಾಗಲಿ ಹಿಂದಿನ ಕವಿಗಳ ಬರೆವಣಿಗೆಯಲ್ಲಿಯಾಗಲಿ ದೊರೆಯುವುದಿಲ್ಲ. ಬಿ. ಎಂ. ಶ್ರೀ. ಯವರೂ ಎಸ್. ವಿ. ಪರಮೇಶ್ವರ ಭಟ್ಟರೂ ವಿಳೆಯನ್ನು ಬಳಕೆಗೆ ತಂದಿದ್ದಾರೆ. ತ್ರಿಪದಿ ಶಾಸನಗಳಲ್ಲೂ ಚಂಪೂಕಾವ್ಯಗಳಲ್ಲೂ ಬಳಕೆಯಾಗಿದೆ. ಜನಪದ ಸಾಹಿತ್ಯದ ಬಹುಭಾಗ ತ್ರಿಪದಿ ಛಂದಸ್ಸಿನಲ್ಲಿದೆ. ಕವಿಗಳು ತ್ರಿಪದಿಯಲ್ಲಿ ಕೆಲವು ಕೃತಿಗಳನ್ನೂ ರಚಿಸಿದ್ದಾರೆ. ಸರ್ವಜ್ಞನ ತ್ರಿಪದಿಗಳು ಪ್ರಸಿದ್ಧವಾಗಿವೆ. ಈಚೆಗೆ ಜಯದೇವಿತಾಯಿ ಲಿಗಾಡೆಯವರು 'ಸಿದ್ಧರಾಮ

ಚರಿತ್ರೆ'ಯನ್ನು ತ್ರಿಪದಿಯಲ್ಲಿ ರಚಿಸಿರುವುದನ್ನು ಇಲ್ಲಿ ನೆನೆಯಬಹುದು. ಕವಿರಾಜಮಾರ್ಗದಲ್ಲೂ ಕಾವ್ಯಾವಲೋಕನದಲ್ಲೂ ಗೀತಿಕೆಗಳು ದೊರೆಯುತ್ತವೆ. ಇವುಗಳಲ್ಲಿ ಯಾವುದೂ ನಾಗವರ್ಮನು ಹೇಳುವ ಲಕ್ಷಣಕ್ಕೆ ಹೊಂದಿಕೆಯಾಗು ವುದಿಲ್ಲ. ಕುಮಾರರಾಮನ ಸಾಂಗತ್ಯ, ಭರತೇಶ ವೈಭವ, ಹದಿಬದೆಯ ಧರ್ಮ ಮುಂತಾದ ಕೃತಿಗಳಿಂದ ಕನ್ನಡದಲ್ಲಿ ಪ್ರಸಿದ್ಧವಾಗಿರುವ ಸಾಂಗ್ಯತದ ಲಕ್ಷಣವನ್ನು ಕುರಿತು ನಾಗವರ್ಮನಾಗಲಿ ಜಯಕೀರ್ತಿಯಾಗಲಿ ಏನೂ ಹೇಳಿಲ್ಲ. ಇದರಿಂದ, ಗೀತಿಕೆಯೇ ಸಾಂಗತ್ಯವಾಗಿ ಮಾರ್ಪಟ್ಟಿತೇನೋ ಎಂದು ಊಹಿಸಲು ಅವಕಾಶವಾಗಿದೆ. ಎರಡರಲ್ಲೂ ಅಂಶಗಣಗಳೇ ಬಳಕೆ ಯಾಗುತ್ತವೆ. ನಾಗವರ್ಮನು ಹೇಳುವ ಷಟ್ಪದಿಯೂ ಅಂಶಗಣಗಳಿಂದ ಕೂಡಿದ್ದು, ಅವನ ಕಾಲಕ್ಕೆ ಒಂದೇ ಬಗೆಯ ಷಟ್ಪದಿ ರೂಢಿಯಲ್ಲಿದ್ದಿತೆಂದು ಹೇಳಬಹುದು. ಈಚೆಗೆ ಪ್ರಸಿದ್ಧವಾದ ಮಾತ್ರಾಗಣಗಳ ಆರು ಬಗೆಯ ಷಟ್ಪದಿಗಳು ಅವನ ಕಾಲದಲ್ಲಿ ಇರಲಿಲ್ಲ.

ನಾಗವರ್ಮ ಜಯಕೀರ್ತಿಗಳು ವಿವರಿಸಿರುವ ಕನ್ನಡ ಛಂದಸ್ಸಿನ ಪ್ರಕರಣಗಳು ಕನ್ನಡ ಛಂದಸ್ಸಿನ ಚರಿತ್ರೆಯ ದೃಷ್ಟಿಯಿಂದ ಬಹಳ ಮುಖ್ಯ ವಾದವು; ಬೆಲೆಯುಳ್ಳವು.

ಆರನೆಯ ಅಧಿಕಾರದಲ್ಲಿ, ಆರು ಬಗೆಯ 'ಪ್ರತ್ಯಯ'ಗಳನ್ನು ವಿವರಿ ಸಿದೆ. ಇವು ಅಕ್ಷರ ವೃತ್ತಗಳಿಗೆ ಮಾತ್ರ ಅನ್ವಯಿಸುವ, ಛಂದಸ್ಸಿನ ಸ್ವರೂಪ ಗಳನ್ನು ಕಂಡುಹಿಡಿಯುವ ವಿಧಾನಗಳು. ಮೊದಲನೆಯದು (2ಅಕ್ಷರದಿಂದ 26 ಅಕ್ಷರಗಳವರೆಗಿನ ಛಂದಸ್ಸುಗಳ) ಯಾವುದಾದರೂ ಛಂದಸ್ಸಿನ ವೃತ್ತದ ಗುರು ಲಘುಗಳ 'ಪ್ರಸ್ತಾರ' ಕ್ರಮವನ್ನು ಗುರುತಿಸುವ ವಿಧಾನವನ್ನು ತಿಳಿಸು ತ್ತದೆ. ಎರಡನೆಯ ವಿಧಾನದಿಂದ, ಯಾವುದಾದರೂ ಒಂದು ವೃತ್ತದ ಗುರು ಲಘುಗಳ ಇಡುವಿಕೆಯಲ್ಲಿ ಕ್ರಮತಪ್ಪಿ ಲೆಕ್ಕಾಚಾರ ಕೆಟ್ಟಿದ್ದರೆ ಅದನ್ನು ಸರಿಪಡಿಸಿ ತಿಳಿಯುವ ಕ್ರಮವನ್ನು ವಿವರಿಸುತ್ತದೆ. ಇದಕ್ಕೆ 'ನಷ್ಟ' ಪ್ರತ್ಯಯ ಎಂದು ಹೆಸರು. ಮೂರನೆಯದು 'ಉದ್ದಿಷ್ಟ': ಒಂದು ಗೊತ್ತಾದ ವೃತ್ತವು ಆ ಛಂದಸ್ಸಿನಲ್ಲಿ ಎಷ್ಟನೆಯದು ಎಂದು ಗೊತ್ತು ಮಾಡುವ ವಿಧಾನ. ನಾಲ್ಕನೆಯ ಪ್ರತ್ಯಯವು, ಯಾವುದಾದರೂ ಒಂದು ಛಂದಸ್ಸಿನಲ್ಲಿ ಒಂದು ಲಘು ಅಥವಾ ಒಂದು ಗುರುವಿರುವ ವೃತ್ತ ಎಷ್ಟು, ಎರಡು ಲಘು ಅಥವಾ ಎರಡು ಗುರುವಿರುವ ವೃತ್ತಗಳೆಷ್ಟು, ಎಂದು

ಮುಂತಾಗಿ ವೃತ್ತಗಳ ಲಘು ಗುರು ಸಂಖ್ಯಾವಿವರಗಳನ್ನು ತಿಳಿಯುವ ('ಏಕ ದ್ವಿ ಆದಿ ಲಗಕ್ರಿಯೆ'ಯ) ವಿಧಾನವನ್ನು ವಿವರಿಸುತ್ತದೆ. ಐದನೆಯ 'ಸಂಖ್ಯಾನ' ಪ್ರತ್ಯಯದ ವಿವರ ನಾಗವರ್ಮನ ಪದ್ಯದಲ್ಲಿ ಸ್ಪಷ್ಟವಿಲ್ಲ. ಆರನೆಯ ಪ್ರತ್ಯಯದ ಹೆಸರು 'ಅಧ್ವಯೋಗ' ; (ಅಧ್ವ ಎಂದರೆ ಮಾರ್ಗ, ದಾರಿ). ಒಂದು ಛಂದಸ್ಸಿನ ಎಲ್ಲ ವೃತ್ತಗಳ ಪ್ರಸ್ತಾರವನ್ನು ಬರೆದಿಡಲು ಎಷ್ಟು ಸ್ಥಳಾವಕಾಶ ಬೇಕಾಗುತ್ತದೆ ಎಂಬುದನ್ನು ಈ ಪ್ರತ್ಯಯದಿಂದ ಕಂಡು ಹಿಡಿಯಲು ಸಾಧ್ಯವಾಗುವುದು.

ಯಾವ ಯಾವ ಗಣಗಳು ಕಾವ್ಯದಲ್ಲಿ ಪ್ರಯೋಗವಾದರೆ ಶುಭ, ಯಾವುವು ಅಶುಭ; ಯಾವ ಯಾವ ಗಣದಿಂದ ಯಾವ ಯಾವ ಫಲಗಳು ದೊರೆಯುವುವು-ಎಂಬುದನ್ನು ತಿಳಿಸುವ ಮೂರು ಪದ್ಯಗಳಿವೆ, ಈ ಅಧಿಕಾರದಲ್ಲಿ. ಉದಾಹರಣೆಗೆ, "ಧರೆಯಿಂ (ಮಗಣ) ಶ್ರೀ (ಸಂಪತ್ತು) ; ಜಲದಿಂ (ಯಗಣ) ಮಹೋನ್ನತಿ (ಅಭಿವೃದ್ಧಿ); ಜಸಂ (ಕೀರ್ತಿ) ಪದ್ಮಾರಿಯಿಂದೆ (ಭಗಣ); ಆಯು (ಆಯುಷ್ಯ) ದೇವರಿಂ (ನಗಣ); ರುಜೆ (ರೋಗ) ಭಾನುವಿಂ (ಜಗಣ); ಮರಣಂ ಅತ್ಯುಗ್ರಾಗ್ನಿಯಿಂ (ರಗಣ); ಶೂನ್ಯಂ (ಮಾಟ ?) ಅಂಬರದಿಂ (ತಗಣ) ; ವಾಯುವಿನಿಂ (ಸಗಣ) ವಿದೇಶ ಗಮನಂ ಕಾವ್ಯಾಧಿಪಂಗೆ ಅಕ್ಕುಂ ಎಂದೊರೆದಂ ಸತ್ಕವಿ ನಾಗವರ್ಮಂ." 'ಕಾವ್ಯಾಧಿಪ' ಎಂದರೆ ಕವಿ ಯಾವ ಆಶ್ರಯದಾತ ಅಥವಾ ಪೋಷಕನನ್ನು ಉದ್ದೇಶಿಸಿ ಕಾವ್ಯ ಬರೆಯುತ್ತಾನೆಯೋ ಆ ವ್ಯಕ್ತಿ. ಈ ಪದ್ಯಗಳನ್ನು ನಾಗವರ್ಮನೇ ಬರೆದನೋ ಈಚಿನವರು ಬರೆದು ಹಸ್ತಪ್ರತಿಗಳಲ್ಲಿ ಸೇರಿಸಿದರೋ, ಹೇಳುವುದು ಕಷ್ಟ. ಇಂಥ ನಂಬಿಕೆಗಳ ವಿಸ್ತಾರವಾದ ಪ್ರತಿಪಾದನೆ 'ಕವಿಜಿಹ್ವಾಬಂಧನ'ದಲ್ಲಿ ಬಂದಿದೆ. ಈ ನಂಬಿಕೆಗಳು ಎಷ್ಟರ ಮಟ್ಟಿಗೆ ಪರಿಣಾಮಕಾರಿ ಎಂಬುದು ಇಲ್ಲಿ ಪ್ರಸಕ್ತವಲ್ಲ. ಇಂಥ ನಂಬಿಕೆಗಳು ನಮ್ಮ ಜನ ಜೀವನದಲ್ಲಿ ಇಂದಿಗೂ ರೂಢಮೂಲವಾಗಿವೆ. ಬಸವಣ್ಣನವರು "ದೇವಗಣವನರಿಯೆ ಅಮೃತಗಣವನರಿಯೆ. ಆನೊಲಿದಂತೆ ಹಾಡುವೆನು" ಎಂದಿರುವುದೂ ಈ ಮಾತಿಗೆ ಸಾಕ್ಷಿ.

ನಾಗವರ್ಮನ 'ಛಂದೋಂಬುಧಿ'ಯ ಉಪಯುಕ್ತತೆ ಇಂದು ಕಡಮೆಯಾಗಿರಬಹುದು ; ಆದರೆ ಅದರ ಕೀರ್ತಿ ಮಾಸಿಲ್ಲ, ಮಾಸುವುದೂ ಇಲ್ಲ. ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಛಂದೋಂಬುಧಿಗೆ ಅಗ್ರಸ್ಥಾನ ಎಂದೆಂದಿಗೂ ಮೀಸಲಾಗಿರುತ್ತದೆ.

ಕವಿಜಿಹ್ವಾಬಂಧನ: ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಇದೊಂದು ವಿಲಕ್ಷಣವಾದ ಕೃತಿ. ಇದನ್ನು ಬರೆದವನು 'ಈಶ ಕವೀಶಂ' ಎಂದು ಗ್ರಂಥದಿಂದ ಗೊತ್ತಾಗುತ್ತದೆ. ಆದರೆ ಈಶ್ವರ ಕವಿ ಎಂದೇ ಪ್ರಸಿದ್ಧ. ಒಂದು ಪದ್ಯದಲ್ಲಿ 'ಶಬ್ದಮಣಿದರ್ಪಣ'ವೆಂಬ ವ್ಯಾಕರಣದ ಕರ್ತೃವಾದ ಕೇಶಿರಾಜನನ್ನು 'ಲಕ್ಷಣ ಶಿಕ್ಷಾಚಾರ್ಯ ಸುಲಕ್ಷಣೆ' ಎಂದು ಹೊಗಳಿರುವುದರಿಂದ, ಅನೇಕ ಕಡೆ ಬರುವ 'ಅಭಿನವ ಕೇಶಿರಾಜ' ಎಂಬ ಮಾತು ಕವಿಯ ಬಿರುದಾಗಿರುವಂತೆ ಕಾಣುತ್ತದೆ. ಕೇಶಿರಾಜನನ್ನು ಸ್ಮರಿಸುವುದರಿಂದ ಇವನ ಕಾಲ 1250 ರಿಂದ ಈಚೆಗೆ ಎಂಬುದು ಸ್ಪಷ್ಟ. ಎಷ್ಟು ಈಚೆಗೆ ಎಂದು ಹೇಳಲು ಆಧಾರಗಳಿಲ್ಲ. ಕವಿಚರಿತೆಕಾರರು ಇವನ ಕಾಲವನ್ನು 1500 ಎಂದು ಊಹಿಸಿದ್ದಾರೆ. ಇದಕ್ಕಿಂತ ಸ್ವಲ್ಪ ಹಿಂದೆ ಇದ್ದರೂ ಇರಬಹುದು. 'ವಡಿ'ಯ ವಿಚಾರವನ್ನು ಹೇಳುವ ಸಂದರ್ಭದಲ್ಲಿ 'ಭೀಮನ'ನ ಹೆಸರನ್ನು ಹೇಳುವುದರಿಂದ, ಸುಮಾರು 12ನೆಯ ಶತಮಾನದ ಮೊದಲ ಭಾಗದಲ್ಲಿ ಇದ್ದ ಭೀಮಕವಿಯ 'ಕವಿಜನಾಶ್ರಯಮು' ಎಂಬ ಛಂದಸ್ಸಿನ ಗ್ರಂಥವನ್ನು ಈಶ್ವರನು ನೋಡಿರಬಹುದು. ಮಂಗಳಪದ್ಯದಲ್ಲಿ 'ಸಿಡುವಣೆಗೊಡೆಯನಾದ ಕಲ್ಲಿನಾಥಲಿಂಗ'ವನ್ನು ಸ್ತುತಿಸಿರುವುದರಿಂದ ಇವನು 'ಸಿಡುವಣೆ' ಎಂಬ ಊರಿನವನೆಂದು ಗೊತ್ತಾಗುತ್ತದೆ. ಇದು ಬಿಜಾಪುರದ ಸಮೀಪದಲ್ಲಿದೆ ಎಂದು ತಿಳಿದುಬರುತ್ತದೆ. ಆದರೆ ಅಲ್ಲಿ ಕಲ್ಲಿನಾಥನ ದೇವಾಲಯ ಇದೆಯೋ ಇಲ್ಲವೋ ತಿಳಿಯದು. ಗಣಗಳಿಗೆ ಬ್ರಾಹ್ಮಣ ಮುಂತಾಗಿ ಚತುರ್ವರ್ಣಗಳನ್ನು ಹೇಳಿರುವ ಇವನು ಬಹುಶಃ ಶೈವ ಬ್ರಾಹ್ಮಣನೆಂದು ಕಾಣುತ್ತದೆ.

ಇನ್ನು ಗ್ರಂಥದ ವಿಚಾರ: 'ಕವಿಜಿಹ್ವಾಬಂಧನ' (ಕವಿಯ ನಾಲಗೆಕಟ್ಟು) ಎಂಬ ಗ್ರಂಥನಾಮವೇ ಗ್ರಂಥದ ಸ್ವರೂಪವನ್ನು ತೆರೆದು ತೋರಿಸುತ್ತದೆ. ನಾಲ್ಕು ಆಶ್ವಾಸಗಳುಳ್ಳ ಈ ಗ್ರಂಥದ ಬಹುಭಾಗವನ್ನು ಗಣಗಳ ಮತ್ತು ಅಕ್ಷರಗಳ ಸ್ವರೂಪ, ಬೇರೆ ಬೇರೆ ಗಣಗಳನ್ನು ಗೊತ್ತಾದ ರೀತಿಯಲ್ಲಿ ಪ್ರಯೋಗಿಸುವುದರಿಂದ ಉಂಟಾಗುವ ಶುಭಾಶುಭ ಫಲಗಳು — ಇವುಗಳ ವಿವರಣೆ ಆಕ್ರಮಿಸಿಕೊಂಡಿದೆ; ಈ ಭಾಗ ಈಗಿನ ಕಾಲಕ್ಕಂತೂ ಅಪ್ರಯೋಜಕವಾದರೂ, ಕೃತಿಯ ಉದ್ದೇಶದ ದೃಷ್ಟಿಯಿಂದ ಸಮಗ್ರವಾಗಿದೆ. ಕಾವ್ಯಮೀಮಾಂಸೆಗೆ ಸಂಬಂಧಪಟ್ಟಂತ ಶಬ್ದಾಲಂಕಾರ ಎನ್ನಬಹುದಾದ ಪ್ರಾಸಗಳ ವಿಚಾರವನ್ನು ಉದಾಹರಣ ಪೂರ್ವಕ ವಿವರಿಸಲಾಗಿದೆ. 'ವಡಿ'ಯ ವಿಚಾರ

ಈ ಗ್ರಂಥದ ವೈಶಿಷ್ಟ್ಯ. ಕೇಶಿರಾಜನನ್ನು ಮೆಚ್ಚಿಕೊಂಡಿರುವ್ಪದರಿಂದಲೋ ಏನೋ, ವ್ಯಾಕರಣ ವಿಷಯಾಂಶಗಳನ್ನು ಪಟ್ಟಿಮಾಡಿ ಹೇಳಿದ್ದಾನೆ. 4 ನೆಯ ಆಶ್ವಾಸ ಪೂರ್ತಿಯಾಗಿ ಛಂದಸ್ಸಿಗೆ ಸಂಬಂಧಪಡದ ಕನ್ನಡಗಳ ಬಗೆಗಳ ವಿಚಾರ, ಅರಿಸಮಾಸ, ಮೋಹಸ್ನೇಹಗಳ ವಿಚಾರ—ಇವುಗಳನ್ನು ಒಳಗೊಂಡಿದೆ.

ಈಶ್ವರಕವಿ ಪದ್ಯಗಳನ್ನು ಪತ್ನಿಗೆ ಹೇಳಿದಂತೆ ರಚಿಸಿರುವುದನ್ನು ನೋಡಿದರೆ ಇವನು ಛಂದೋಂಬುಧಿಯನ್ನು ಪರಿಶೀಲಿಸಿದ್ದಿರಬಹುದು ಎಂದು ತೋರುತ್ತದೆ. ಛಂದೋಂಬುಧಿಯಲ್ಲಿನ ಗಣಗಳ ಶುಭಾಶುಭಫಲ ವಿವೇಚನೆಯ ಪದ್ಯಗಳು ನಾಗವರ್ಮನೇ ಬರೆದುವಾದರೆ, ಈ ಕವಿ ಅವನಿಂದಲೇ ಸ್ಫೂರ್ತಿ ಪಡೆದು ಆ ವಿಚಾರವನ್ನು ತನ್ನದೇ ಆದ ರೀತಿಯಲ್ಲಿ (ಬಹುಶಃ ಯಾವುದಾದರೂ ಸಂಸ್ಕೃತ ಮೂಲ ಗ್ರಂಥವನ್ನು ಅನುಸರಿಸಿ) ವಿಸ್ತಾರವಾಗಿ ಪ್ರತಿಪಾದಿಸಿರಬಹುದು.

ಒಂದೆರಡು ಉದಾಹರಣೆಗಳಿಂದ ಅವನು ನಿರೂಪಿಸಿರುವ ವಿಷಯಗಳ ಸ್ವರೂಪವನ್ನು ಪರಿಚಯಮಾಡಿಕೊಳ್ಳಬಹುದು :

(i) ಗಣಗಳಿಗೆ ಲಿಂಗಗಳೂ ಉಂಟು ! ನೋಡಿ :

ಸ್ತ್ರೀಲಿಂಗಂ ಮ, ಯ, ಗಣಮುಂ । ಮೇಲಹ ರ, ಸ, ಭ, ಜ, ಗಣಂಗಳವು
ಪುಲ್ಲಿಂಗಂ ॥
ಬಾಲಕಿ, ನ, ತ, ಗಣವೆರಡು ಮ । ನಾಲೋಕಿಸು ನಿತ್ಯಮವು ನಪುಂಸಕಲಿಂಗಂ ॥

(ii) ಕವಿಗಳು ಗಣಗಳ ಫಲ ಸ್ವರೂಪವನ್ನು ತಿಳಿದು ಸಂದರ್ಭಾನುಸಾರ ಹೇಗೆ ಪ್ರಯೋಗ ಮಾಡಬೇಕೆಂಬುವ ವಿಚಾರದಲ್ಲಿ ಒಂದು ಉದಾಹರಣೆ :

ಮಗಣವ ಮೊದಲಿಟ್ಟಗ್ರದೆ । ರಗಣಮನಿಡೆ ನಾಶಮಕ್ಕು ಕೃತಿಕರ್ತಂಗಂ ।
ತಗಣಮನಿಟ್ಟಡೆ ತತ್‌ಪತಿ ಪಗೆವರ್ಗಂ ಸೋಲ್ತು ಮಾನಭಂಗದೊಳಿರ್ಕುಂ ॥

ಈಶ್ವರಕವಿಯ ಪ್ರಕಾರ, ಗಣಪ್ರಯೋಗದ ಫಲ—ಒಳ್ಳೆಯದು ಮತ್ತು ಕೆಟ್ಟದ್ದು—ಕವಿಗೂ ಉಂಟು ; ಕೃತಿಗೆ ಒಡೆಯನಾದ ಆಶ್ರಯದಾತ ರಾಜನಿಗೂ ಉಂಟು. ರಾಜನ ಭವಿಷ್ಯ ಕವಿಯ ಕಯ್ಯಲ್ಲಿದೆ ಎಂದಾಯಿತು ! ರಾಜನ ಖಡ್ಗಕ್ಕಿಂತ ಕವಿಯ 'ಕಂಠ' ಪ್ರಬಲ ! ಕವಿ ಅಶುಭ ಗಣಪ್ರಯೋಗದ ಬೆದರಿಕೆ ಹಾಕಿ ರಾಜನಿಂದ ಮಾನಸನ್ಮಾನಗಳನ್ನು ಸುಲಿಗೆಮಾಡಿಕೊಳ್ಳುವ ಅವಕಾಶ ಕಲ್ಪಿಸಿಕೊಳ್ಳಲು ಲಾಕ್ಷಣಿಕರು ಈ ವಿಧಿ-ನಿಷೇಧಗಳ ಮೂಟ ಹೂಡಿ

ದಂತೆ ಕಾಣುತ್ತದೆ. ಈಶ್ವರಕವಿಯ ಕೃತಿ ಆ ಕಾಲದ ನಂಬಿಕೆಗಳಿಗೆ ಕನ್ನಡಿ ಹಿಡಿದಿದೆ, ಅಷ್ಟೆ. "ಇಂದು ನಮಗೆ ಅಮೃತಗಣ ವಿಷಗಣಗಳಲ್ಲಿ ನಂಬಿಕೆ ಇಲ್ಲದಿರಬಹುದು; ಹಿಂದಿನ ಕಾಲದಲ್ಲಿ ಇತ್ತು; ಅದನ್ನು ಇವನು ಪ್ರತಿಪಾದಿಸಿದ್ದಾನೆ."[9]

(iii) ವಡಿಯ ವಿಚಾರ :

ಪದಪದ್ಯದ ಮೊದಲಕ್ಕರ ।
ವದು ತಪ್ಪದೆ ನಡುವೆ ಯತಿವಿಲಾಸದೊಳಿಡಲುಂ ।
ವಿದಿತದೆ ವಡಿಯಪ್ಪುದು ಮೃದು ।
ಪದಯುಗೆ ನಿರ್ಮಲಸುಚಿತ್ತೆ ಪರಹಿತ ಚರಿತೇ ॥
ಇಪತ್ತು ತೆರದ ವಡಿ ತಾ ।
ನಿಪ್ಪವು : ಮತ್ತವರೊಳೈದು ನಿರತದೆ ಬಕ್ಕುಂ ।
ಒಪ್ಪುವ ಭೀಮಣ ಮುಖ್ಯರ್ ।
ತಪ್ಪದೆ ತರಳಾಕ್ಷಿ ಪೇಳ್ದ ತಾಣಂಗಳೊಳಂ ॥

(ಮೇಲಿನ ಪದ್ಯಗಳಲ್ಲಿ, ಪ-ಪ, ತ-ತಾ, ಇವು ವಡಿಯ ಅಕ್ಷರಗಳು). "ವಡಿಯೆಂಬುದು ತೆಲುಗಿಂ ಪೇಳ್ದೆಗಲ್ಲದೆ ಕನ್ನಡಕ್ಕೆ ಪೇಳಿದುದಿಲ್ಲಂ" ಎಂದು ಕವಿ ಸ್ಪಷ್ಟಪಡಿಸಿದ್ದಾನೆ. ಪುರಂದರ ಕನಕ ಮೊದಲಾದ ದಾಸರ ರಚನೆಗಳಲ್ಲಿಯೂ ಸರ್ವಜ್ಞ ಪದಗಳಲ್ಲಿಯೂ ಈ 'ವಡಿ'ಯ ಪ್ರಯೋಗವನ್ನು ಕಾಣಬಹುದು.

ಮೊದಲೇ ಹೇಳಿದಂತೆ, ಛಂದಸ್ಸಿಗೆ ಸಂಬಂಧಪಟ್ಟ ವಿಷಯಗಳಲ್ಲದೆ ಬೇರೆಯ ವಿಷಯಗಳೂ ಈ ಕೃತಿಯಲ್ಲಿ ಹೊಕ್ಕಿವೆ. "ಆದ್ದರಿಂದ 'ಕವಿಜಿಹ್ವಾಬಂಧನ'ವೆಂದರೆ ಕವಿಯ ನಾಲಗೆಗೆ ಛಂದಸ್ಸಿನ ಕಟ್ಟು ಒಂದೇ ಅಲ್ಲ, ಲಕ್ಷಣಶಾಸ್ತ್ರದೊಳಗೆ ಸೇರುವ ಮಿಕ್ಕೆಲ್ಲ ಶಾಸ್ತ್ರಗಳ ಕಟ್ಟೂ ಎಂದು ತಿಳಿಯಬೇಕು."[10]

ಛಂದಸ್ಸಾರ : ಗುಣಚಂದ್ರ ಎಂಬ ಜೈನಕವಿಯಿಂದ ರಚಿತವಾದ ಈ ಕಿರಿಯ ಗ್ರಂಥವು ಅದರ ಹೆಸರೇ ತಿಳಿಸುವಂತೆ ಸಂಸ್ಕೃತ ಮತ್ತು ಕನ್ನಡ ಛಂದಸ್ಸುಗಳ ಮುಖ್ಯ ವಿಚಾರಗಳ ಸಾರವನ್ನು ಒಳಗೊಂಡಿದೆ. ಗ್ರಂಥಾರಂಭದ ಜಿನಸ್ತುತಿಯಿಂದ ಕವಿ ಜೈನನೆಂಬ ಅಂಶ ಹೊರಪಡುತ್ತದೆ. "ಇವನ ವಿಷಯವಾಗಿ ಈ ಗ್ರಂಥದಿಂದ ಇನ್ನಾವ ಅಂಶವೂ ತಿಳಿವುದಿಲ್ಲ. ಕೇದಾರ

ಭಟ್ಟನ ವೃತ್ತರತ್ನಾಕರವನ್ನು ಬಹಳಮಟ್ಟಿಗೆ ಅನುಸರಿಸಿದ್ದಾನೆ. ಇವನು ಸುಮಾರು 1650ರಲ್ಲಿ ಇದ್ದಿರಬಹುದು."–ಇಷ್ಟೇ ಇವನ ವಿಚಾರವಾಗಿ ಕವಿ ಚರಿತೆಕಾರರು ಹೇಳಿರುವುದು. (ಕವಿಚರಿತೆ, II, ಪು. 372).

ಗ್ರಂಥದಲ್ಲಿ ಐದು ಅಧ್ಯಾಯಗಳಿವೆ. (1) 'ಸಂಜ್ಞಾ'ಪ್ರಕರಣ: ಇದರಲ್ಲಿ ಗುರುಲಘು, ಅಕ್ಷರಗಣ, ಯತಿ, ಇವುಗಳ ಲಕ್ಷಣವನ್ನು ಅತ್ಯಂತ ಸಂಕ್ಷೇಪವಾಗಿ ತಿಳಿಸಿದೆ. ಗಣಗಳ ಶುಭಾಶುಭ ಫಲಗಳನ್ನೂ ಸೂಚಿಸಿದೆ. (2) ಇದು 'ಮಾತ್ರಾವೃತ್ತ' ಪ್ರಕರಣ: ಇದರಲ್ಲಿ ಆರ್ಯಾ, ಗೀತಿ, ಕಂದ, ಶರ ಕುಸುಮ ಭೋಗ ಭಾಮಿನೀ ಪರಿವರ್ಧಿನಿ ವಾರ್ಧಕ–ಈ ಆರು ಬಗೆಯ ಷಟ್ಪದಿಗಳ ಲಕ್ಷಣವನ್ನು ವಿವರಿಸಿದೆ; ಲಕ್ಷಣಕ್ಕೆ ಆಯಾ ಪದ್ಯವೇ ಉದಾಹರಣೆ. (3) ಮೂರನೆಯ 'ಸಮ'ವೃತ್ತ ಪ್ರಕರಣದಲ್ಲಿ ಉಕ್ತೆಯಿಂದ ಉತ್ಕೃತಿಯ ವರೆಗಿನ 26 ಛಂದಸ್ಸುಗಳಲ್ಲಿ ಹುಟ್ಟುವ ವಿವಿಧ ವೃತ್ತಗಳ ಲಕ್ಷಣವನ್ನು ತಿಳಿಸಿದೆ. ಲಕ್ಷಣ ನಿರೂಪಣೆಯ ಕ್ರಮ ಅಭ್ಯಾಸಿಗಳು ನೆನಪಿನಲ್ಲಿಟ್ಟು ಕೊಳ್ಳಲು ಅನುಕೂಲವಾಗುವಂತೆ ಗಣಸಂಕೇತದ ಅಕ್ಷರಗಳು ಮತ್ತು ವೃತ್ತದ ಹೆಸರು ಇವುಗಳಿಂದ ಕೂಡಿ, ಒಂದೇ ವಾಕ್ಯದಲ್ಲಿ ಅಡಕವಾಗಿದೆ.* ಉದಾಹರಣೆಗೆ, 'ಖ್ಯಾತ ಕರ್ಣಾಟಕ' ವೃತ್ತಗಳ ಲಕ್ಷಣವನ್ನು ಗಮನಿಸ ಬಹುದು:

ಸೂರ್ಯಾಶ್ವಂ ಮ–ಸ–ಜಂ–ಸ್ತ–ತಂ ಗುರುಯುತಂ । ಶಾರ್ದೂಲ ವಿಕ್ರೀಡಿತಂ.
ಸ-ಭ-ರಂ-ನಂ-ಯ-ಯ-ಲಂ-ಗ-ಮುಂ ತ್ರಿಗದಶಂ । ಮತ್ತೇಭ ವಿಕ್ರೀಡಿತಂ.
ಉತ್ಪಲಮಾಲೆಯುಂ ಭ-ರ-ನ-ಭಂ–ಭ । ರ–ಲಂ–ಗುರುರುದ್ರಭಂಗುರಂ.
ಮಂ-ರಂ-ಭಂ-ನಂ-ಯ-ಯಂ-ಯಂ। ತ್ರಿಮುನಿಯತಿಯುತಂ ಸ್ರಗ್ಧರಾನಾಮವೃತ್ತಂ
ವಿಧುಪುರಭೇದ ಚಂಪಕದ ಮಾಲೆಯಿದುಂ ನ-ಜ-ಭಂ-ಜ-ಜಂ-ಜರಂ
ಸ-ತ-ತಂ-ನಂ-ಸಂ-ರ-ರಂ-ಗಂ ತ್ರಿಶರಯತಿ ಮಹಾ । ಸ್ರಗ್ಧರಾನಾಮವೃತ್ತಂ

---

* 'ಕನ್ನಡ ಕೈಪಿಡಿ'ಯಲ್ಲೂ ಇದೇ ಕ್ರಮದಲ್ಲಿ ಲಕ್ಷಣವನ್ನು ಹೇಳಿದೆ:
ಕಣ್ಗೊಪ್ಪಲ್ ಮಸಜಂ ಸತಂತಗಮುಮಾ ಶಾರ್ದೂಲವಿಕ್ರೀಡಿತಂ.
ಉತ್ಪಲಮಾಲೆಯಪ್ಪುದು ಭರಂ ನಭಭಂರಲಗಂ ನೆಗಳ್ದಿರಲ್.
ಸಭರಂ ನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ.
ತೋರಲ್ ಮಂರಂಭನಂ ಮೂಯಗಣಮೃಮದೆ ತಾಂ ಸ್ರಗ್ಧರಾವೃತ್ತಮಕ್ಕುಂ
ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್.
ಸತತಂನಂಸಂರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತಮಕ್ಕುಂ.

(4) 'ಸಂಕೀರ್ಣ' ಪ್ರಕರಣ ಎಂಬ ನಾಲ್ಕನೆಯ ಅಧ್ಯಾಯದಲ್ಲಿ ದಂಡಕ, ಪ್ರಚಿತಕ, ಆರ್ಯಾಪ್ರಭೇದಗಳು, ಉದ್ಗೀತ, ಆರ್ಯಾಗೀತಿ, ವೈತಾಳೀಯದ ಪ್ರಭೇದಗಳು, ಮಾತ್ರಾಸಮಕ, ಅರ್ಧಸಮ-ವಿಷಮ ವೃತ್ತ ಪ್ರಭೇದಗಳು, ಗಾಥಾ, ಈ ವಿವಿಧ ಜಾತಿಯ ಛಂದಸ್ಸುಗಳ ಲಕ್ಷಣವನ್ನು ನಿರೂಪಿಸಿದೆ. ಛಂದೋಂಬುಧಿಯಲ್ಲಿ ವಿವರಿಸಿರುವ ಷಟ್ಪ್ರತ್ಯಯ ವಿಧಾನಗಳನ್ನೂ ಒಂದೊಂದು ಕಂದ ಪದ್ಯದಲ್ಲಿ ನಿರೂಪಿಸಿದೆ. (5) 'ತಾಳ ವೃತ್ತಾದಿ ಪ್ರಕರಣ'ವೆಂಬ ಅಯ್ದನೆಯ ಅಧ್ಯಾಯವು ಈ ಗ್ರಂಥದ ವೈಶಿಷ್ಟ್ಯ. ಇದರಲ್ಲಿ, ಧ್ರುವ, ಮಟ್ಟ, ತ್ರಿಪುಟೆ, ರೂಪಕ, ಅಷ್ಟ, ಜಂಪೆ, ಏಕ–ಈ ಸಪ್ತತಾಳಗಳಿಗೆ ಒಳಪಟ್ಟು ಪದ್ಯಗಳನ್ನು ರಚಿಸುವ ಕ್ರಮವನ್ನು ವಿವರಿಸಿದೆ. ಉದಾಹರಣೆಗೆ, ರೂಪಕ ತಾಳದ ಪದ್ಯ :

ಯುಗ ರಸಯುತಿ
ಸೊಗಯಿಸಿ ಬರೆ
ಬಗೆ ರೂಪಕ-
ಮೊಗೆಯಿಸುಗುಂ.

ಎರಡು (ಯುಗ) ಆರು (ರಸ) ಸ್ಥಾನಗಳಲ್ಲಿ ಯತಿ. ಸಂಗೀತ ಕೃತಿಗಳೂ, ದಾಸರ ಪದಗಳೂ ತಾಳನಿಬದ್ಧವಾಗಿರುತ್ತವೆ. ಅವುಗಳಲ್ಲಿ ಪಲ್ಲವಿ. ಅನುಪಲ್ಲವಿ, ಚರಣ —ಎಂಬ ಅಂಗಗಳುಂಟು. ಷಟ್ಪದಿ, ರಗಳೆ ಮುಂತಾದ ಮಾತ್ರಾ ಛಂದಸ್ಸಿನ ಪದ್ಯಗಳಲ್ಲೂ ತಾಳಗಳ ಗುರುತು ಹತ್ತುತ್ತವೆ· ಗುಣಚಂದ್ರನು ಕೊಟ್ಟಿರುವ ತಾಳನಿಬದ್ಧ ಚತುಷ್ಪದಿಯ ಉದಾಹರಣೆಗಳನ್ನು ಹೋಲುವ ಪದ್ಯಗಳು ಸಾಧಾರಣವಾಗಿ ಕನ್ನಡ ಕಾವ್ಯಗಳಲ್ಲಿ ಸಿಕ್ಕುವುದಿಲ್ಲ. ಇದೇ ಅಧ್ಯಾಯದಲ್ಲಿ, ದ್ವಿಪದಿ, ಮಂದಾನಿಲ–ಲಲಿತ–ಉತ್ಸಾಹ ರಗಳೆಗಳು, ಲಾವಣಿ(ಣೆ), ಸೀಸಪದ್ಯ ಇವುಗಳ ಲಕ್ಷಣವನ್ನೂ ವಿವರಿಸಿದೆ.

ನಂದಿ ಛಂದೋರ್ಣವ : ಈ ಗ್ರಂಥ (1909ರಲ್ಲಿ) ಮೊದಲು ಪ್ರಕಟವಾದಾಗ ಅದರ ಸಂಪಾದಕರಾದ ಎಂ. ಎ. ರಾಮಾನುಜಯ್ಯಂಗಾರ್ಯರು — "ಈ ಗ್ರಂಥವನ್ನು ಬರೆದವನು ಯಾವನೋ ಗೊತ್ತಿಲ್ಲ. ಗ್ರಂಥಕ್ಕೆ ಹೆಸರು ನಂದಿ ಛಂದಸ್ಸು ಎಂದಿರುವುದರಿಂದ ನಂದಿಯೆಂಬುದೇ ಈ ಗ್ರಂಥಕರ್ತನ ಹೆಸರಾಗಿದ್ದರೂ ಇರಬಹುದು." ಅವನ ಕಾಲ, ಸ್ಥಳ, ಮತ, ಮುಂತಾದ

ವಿವರಗಳ ಬಗೆಗೂ ಏನೂ ತಿಳಿಯದು, ಎಂದು ಹೇಳಿದ್ದರು. ಅಲ್ಲದೆ, ಪೂರ್ತಿ ಗ್ರಂಥವೂ ದೊರಕಿರಲಿಲ್ಲ. ಈಚೆಗೆ ಬಹುಮಟ್ಟಿಗೆ ಪೂರ್ತಿಯಾದ ಗ್ರಂಥವು ದೊರೆತು[1] ಕವಿ ವಿಚಾರವಾಗಿ ನಿರ್ಣಾಯಕವಾದ ವಿವರಗಳು ಗೊತ್ತಾಗಿವೆ. ಗ್ರಂಥದ ಪ್ರತಿ ಅಧ್ಯಾಯದ ಕಡೆಯ ಗದ್ಯದಲ್ಲಿ 'ವೀರಭದ್ರಕವಿ ವಿರಚಿತಮಪ್ಪ ನಂದಿ ಛಂದೋರ್ಣವ' ಎಂದು ಹೇಳಿದೆ. ಗ್ರಂಥದ ಕೊನೆಯ ಪದ್ಯದಲ್ಲಿ ಕವಿಯೇ ತಿಳಿಸಿರುವ ಪ್ರಕಾರ ಅದು 28-4-1846ರಲ್ಲಿ 'ಪರಿಪೂರ್ಣ'ವಾಯ್ತು ಎಂದು ತಿಳಿದುಬರುತ್ತದೆ. "ಕೃತಿಕರ್ತನುಮಾ ಗುರು ನಂದಿನಾಥ ಹೃತ್ಕುವಲಯ ವಾಸನಾಗಿ ನುಡಿಗೂಡಿಸಿಕೊಟ್ಟಿರೆ ಪೇಳ್ದೆ" ಎಂದು ಕವಿ, ಉಮೆಗೆ ಗುರುವಾದ[2] ನಂದಿನಾಥನ (ಎಂದರೆ, ಶಿವನ) ಪ್ರೇರಣೆಯಿಂದ ಕೃತಿಯನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಇವನ ವಂಶ ವಿಚಾರವೂ ಗ್ರಂಥದಿಂದಲೇ ತಿಳಿದುಬರುತ್ತದೆ. "ದರೂರು ಗ್ರಾಮದಲ್ಲಿದ್ದ ಶಿವಯೋಗಿ ವೀರಣಾರ್ಯನು ರೇಣುಕಾರ್ಯನ ಪರಂಪರೆಯವನು. ಈ ವೀರಣಾರ್ಯನ ಶಿಷ್ಯ ಸಿದ್ಧವೀರ ವಿಡಪಲೂರಿನವನು. ಇವನ ಮಗ ಬಸವಯ್ಯ, ಅವನ ಮಗನೇ ನಂದಿ ಛಂದೋರ್ಣವದ ವೀರಭದ್ರ ಕವಿ"[11] "...ನಂದಿ ಛಂದವೆನುತೂಹಿಸಿ ನಾಂ ಪೆಸರಿಟ್ಟೆನರ್ತಿಯಿಂ" ಎಂದು ಕವಿಯೇ ತಿಳಿಸಿರುವ ಪ್ರಕಾರ ಇದನ್ನು 'ನಂದಿ ಛಂದಸ್ಸು' ಎಂದು ಕರೆದರೂ ತಪ್ಪಾಗದು.

ಈ ಗ್ರಂಥದ ಮೇಲೆ ತೆಲುಗು ಛಂದೋಗ್ರಂಥಗಳ ಪ್ರಭಾವವು ಬಿದ್ದಿರುವುದು ಸ್ಪಷ್ಟವಾಗಿದೆ. ಅಂಶಗಣಗಳನ್ನು ಸೂರ್ಯ, ಇಂದ್ರ, ಚಂದ್ರ ಎಂದು ಹೆಸರಿಸಿರುವುದರಲ್ಲಿ ಮಾತ್ರವಲ್ಲದೆ ಆ ಗಣಗಳ ಪ್ರಸ್ತಾರ ಕ್ರಮದಲ್ಲಿಯೂ ಇದು ಎದ್ದು ಕಾಣುತ್ತದೆ. ಅಕ್ಷರಗಣಗಳಿಗೆ ಪ್ರತಿಯೊಂದಕ್ಕೂ ಅದರದರ ಅಧಿದೈವ, ಗೋತ್ರ, ರಸ, ಹುಟ್ಟು, ನಕ್ಷತ್ರ, ರಾಶಿ, ಗಣ, ಲಿಂಗ, ಇತ್ಯಾದಿ ವಿವರಗಳನ್ನು ಸಾಂಗವಾಗಿ ವಿವರಿಸಿದ್ದಾನೆ. ಈ ಎಂಟು ಗಣಗಳ ಲಕ್ಷಣ ನಿರೂಪಣೆ 'ಸೀಸಪದ್ಯ' ಎಂಬ ತೆಲುಗು ಛಂದಸ್ಸಿನಲ್ಲೇ ರಚಿತವಾಗಿವೆ. ಮೂರನೆಯ ಅಧ್ಯಾಯದಲ್ಲಿ, ವಧೂವರರ ವಿಷಯದಲ್ಲಿ ದ್ವಾದಶಕೂಟಗಳನ್ನು ನೋಡುವಂತೆ, ಗಣಗಳಿಗೂ ಗ್ರಹಮೈತ್ರ, ವರ್ಣಕೂಟ, ಗಣಕೂಟ, ಇತ್ಯಾದಿ ಕೂಟಗಳನ್ನು ಹೇಳಿದೆ. ಈ ಸಂಬಂಧದ ಲಕ್ಷಣ ವಿವರಣೆಯ ಕೆಲವು ಪದ್ಯಗಳು ಸೀಸಪದ್ಯದಲ್ಲೂ ತೇಟಗೀತಿಯಲ್ಲೂ ರಚಿತವಾಗಿವೆ. ಇಷ್ಟೇ ಅಲ್ಲದೆ ವಡಿಯ ವಿಚಾರವೂ, ಸೀಸಪದ್ಯ ತೇಟಗೀತಿ ಆಟವೆಲದಿಗಳ ಲಕ್ಷಣವೂ ನಿರೂ

ಚಿತವಾಗಿದೆ. ಈ ಎಲ್ಲ ವಿವರಗಳನ್ನೂ ಕವಿ ತೆಲುಗು ಛಂದೋಗ್ರಂಥಗಳಿಂದಲೇ ಸ್ವೀಕರಿಸಿದ್ದಾನೆ. ಮೂರನೆಯ ಅಧ್ಯಾಯದಲ್ಲಿಯೇ ಷಟ್ಪದಿಗಳ ಲಕ್ಷಣವನ್ನೂ ಹೇಳಿದ್ದಾನೆ. ಉದಾಹರಣೆಗಳು ಆಯಾ ಷಟ್ಪದಿ ಛಂದಸ್ಸಿನಲ್ಲಿಯೆ ರಚಿತವಾಗಿವೆ. ಇವುಗಳ ಲಕ್ಷಣ ವಿವರಣೆಯ ವಿಶೇಷವೆಂದರೆ, ಚರಣಕ್ಕೆ ಇಂತಿಷ್ಟು ಗಣ, ಗಣಕ್ಕೆ ಇಂತಿಷ್ಟು ಮಾತ್ರೆ, ಎಂದು ಹೇಳದೆ ಮೊತ್ತದ ಮಾತ್ರಾಸಂಖ್ಯೆಯನ್ನು ಹೇಳಿದೆ. ಇದೇ ಅಧ್ಯಾಯದಲ್ಲಿ ವರ್ಣಮಾಲೆಯ (ಎ, ಒ, ಬಿಟ್ಟು ಉಳಿದ) 50 ಅಕ್ಷರಗಳನ್ನು ಹತ್ತು ಹತ್ತು ವರ್ಗಗಳ ಐದು ವರ್ಗಗಳಾಗಿ ವಿಂಗಡಿಸಿ, ಪ್ರತಿ ವರ್ಗಾಕ್ಷರಗಳ ಫಲವನ್ನೂ ಹೇಳಿದೆ. ಪವನ ವರ್ಗದ (ಅಕ್ಷರಗಳ) ಫಲ ಮೃತಿ (ಸಾವು), ದಹನ (ಅಗ್ನಿ) ವರ್ಗದ ಫಲ ಮೋದ (ಸಂತೋಷ), ಅವನಿ (ಭೂಮಿ) ವರ್ಗದ ಫಲ (ಸಂಪತ್ತು), ವಾರಿ (ಜಲ) ವರ್ಗದ ಫಲ ಕ್ಷೇಮ, ಗಗನವರ್ಗದ ಫಲ ಶೋಕ! ಒಟ್ಟಿನಮೇಲೆ ಹೇಳುವುದಾದರೆ, ನಂದಿ ಛಂದಸ್ಸಿನ ಕವಿ 'ಜಿಹ್ವಾಬಂಧನ' ಎಂಬ ಹೆಸರು ಕೊಟ್ಟಿಲ್ಲವೇ ಹೊರತು, ಸಾಕಷ್ಟು ನಿಯಮ ಕಟ್ಟುಗಳನ್ನು ವಿಧಿಸಿದ್ದಾನೆ. ಎರಡನೆಯ ಅಧ್ಯಾಯ ಸಂಸ್ಕೃತದ ಅಕ್ಷರವೃತ್ತಗಳ ಲಕ್ಷಣ ಹಾಗೂ ಷಟ್ಪ್ರತ್ಯಯಗಳ ವಿವರಣೆಗೆ ಮೀಸಲಾಗಿದೆ. ಛಂದೋಂಬುಧಿಯಲ್ಲಿರುವಂತೆ, ಸಾಧಾರಣವಾಗಿ ಲಕ್ಷಣಪದ್ಯಗಳೇ ಉದಾಹರಣೆಗಳೂ ಆಗಿವೆ. ನಾಗವರ್ಮನಂತೇ ಇವನೂ ಪತ್ನಿಯನ್ನು ಸಂಬೋಧಿಸಿ ಲಕ್ಷಣ ಪದ್ಯಗಳನ್ನು ಹೇಳಿದ್ದಾನೆ. ಸೀಸಪದ್ಯದ ಹಾಗೂ ಷಟ್ಪದೀ ಲಕ್ಷಣದ ಒಂದೊಂದು ಉದಾಹರಣೆಯೊಂದಿಗೆ ಈ ಗ್ರಂಥದ ಸಮೀಕ್ಷೆಯನ್ನು ಮುಗಿಸಬಹುದು :

ವೃತ್ತ (ಲಕ್ಷಣ) ಗರ್ಭಿತ ಸೀಸ

ಭ-ರ-ನ-ಭಾ-ಭ-ರ-ಲ-ಗಂ ಬರಲು **ತಾನುತ್ಪಲ**
ಮಾಲೆ ದಿಕ್ಕು ಯತಿಯು **ಮಾ**ಯುರಪಿತ್ರೆ
ನ-ಜ-ಭ-ಜ-ಜ-ಜ-ರಗಳ್ ನಾರಿ **ಚಂಪಕಮಾಲೆ**
ಸೊಗಸಾದ ರುದ್ರಯತಿ **ಸುಂ**ದರಾಂಗಿ
ಮ-ಸ-ಜ-ಸ-ತ-ತ-ಗಗಳ್ ಮಹಿಯೊಳು ಶಾರ್ದೂಲ
ಸರಸ ವಿಶ್ವಾರಾಮ **ಸಾ**ರಸಾಕ್ಷಿ
ಸ-ಭ-ರ-ನ-ಮ-ಯ-ಲ-ಗ ವಿಧಯಾನೆ ಮತ್ತೇಭ
ನೀರೆ ಕೇಳ್ ಮನುಯತಿ ನಿತ್ಯವೆಂದು

ತೇಟಗೀತಿ ॥ ಆರು ಸುರರಾಜಗಣವಿರ ಲವರ ಮುಂದೆ
ಭಾನುಗಣಯುಗ್ಮ ಬಂದಿರಲ್ ಪಾದವಾಯ್ತು
ಚದುರರೀ ರೀತಿಯಲಿ ನಾಲ್ಕು ಚರಣ ಪೇಳಿ
ಭರದಿ ತುದಿಗೀತವಿಡೆ ಸೀಸ ಪದ್ಯ ತರುಣಿ

ವಾರ್ಧಕ ಷಟ್ಪದಿ :

ತರುಣಿ ಕೇಳ್ ವಾರ್ಧಕದ ಷಟ್ಪದಕೆ ಧರಣಿಯೊಳು
ನಿರುತ ವಿಂಶತಿ ಮಾತ್ರೆ ಮೊದಲೆರಡು ಚರಣಗಳಿ
ಗಿರಲದರ ತುದಿಪದಕೆ ಸರಸಮೂವತ್ತೆರಡು ಲಘುಗಳೊದಗಿದವು ಮುಂದೇ
ಭರದಿ ಮೂರಡಿಗಳೀ ತೆರದಿ ಪೇಳಿದೆಯಾರು
ಪರಿಯ ಷಟ್ಪದಗಳೆಂದರಿವುದಿದು ಪೂರ್ವಕವಿ
ವರ ಮಾರ್ಗ ಚೆಲುವ ಪರಿಣಾಂಕವದನೆ ಕೇಳ್ ಮದಕರಿಗಮನೆ ಕುಂದರದನೇ

[ಪ್ರತಿ ಅರ್ಧದ ಮೊದಲೆರಡು ಚರಣಗಳಿಗೆ 20 ಮಾತ್ರೆ ; ಮೂರನೆಯ ಪಾದಕ್ಕೆ ಮೂವತ್ತು ಮಾತ್ರೆ, ಮೇಲೆ ಎರಡು ಲಘುಗಳು. ಪಂಚಮಾತ್ರಾ ಗಣಗಳು ಇರಬೇಕೆಂದು ಹೇಳಿಲ್ಲ. ಆದರೆ ಪದ್ಯದಲ್ಲಿ ಪಂಚಮಾತ್ರಾಗಣಗಳ ನಡೆಯೇ ಇದೆ. ಮೂರನೆಯ ಪಾದದಲ್ಲಿ, ಮೇಲೆ ಒಂದು ಗುರು ಎಂದು ಹೇಳುವ ಕಡೆ ಎರಡು ಲಘು ಎಂದು ಹೇಳಿರುವುದೂ ಸಲಕ್ಷಣವಾಗಿಲ್ಲ. ಆದರೆ ಪದ್ಯದ ಮೂರು ಆರನೆಯ ಪಾದಗಳಲ್ಲಿ ಕೊನೆಗೆ ಗುರುವೇ ಬಂದಿದೆ. ಒಟ್ಟಿನಲ್ಲಿ, ಅಪೂರ್ವ ಲಕ್ಷಣ ವಿವರಣೆ.]

ಇತರ ಕೆಲವು ಈಚಿನ ಗ್ರಂಥಗಳು : ಕಿಟೆಲ್ಲರು 1875 ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ ನಾಗವರ್ಮನ ಛಂದೋಂಬುಧಿಯ ಪೀಠಿಕೆಯು ಕನ್ನಡ ಛಂದಸ್ಸನ್ನು ಕುರಿತು ಬರೆಯುತ್ತ, ಸಿ. ಪಿ. ಬ್ರೌನರು 1857 ರಲ್ಲಿ ಪ್ರಕಟಿಸಿದ 'ತೆಲುಗು ವ್ಯಾಕರಣ'ದಲ್ಲಿ ಕನ್ನಡ ಛಂದಸ್ಸನ್ನೂ ಕುರಿತು ಸಂಕ್ಷೇಪವಾಗಿ ಬರೆದಿರುವರೆಂದು ತಿಳಿಸಿದ್ದಾರೆ. ಈ ಎರಡೂ ಬರಹಗಳು ಇಂಗ್ಲಿಷಿನಲ್ಲಿವೆ. "1869 ರಲ್ಲಿ ಬೌತ್ ಲೋನ ಎಂಬವರು 'ಕನ್ನಡ ಛಂದಸ್ಸ'ನ್ನು ಕುರಿತು ಲ್ಯಾಟಿನ್ ಭಾಷೆಯಲ್ಲಿ ಸಣ್ಣ ಹೊತ್ತಗೆಯನ್ನು ಹೊರತಂದರು. ನೀಲಗಿರಿಯಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಚಾವಲಿ ರಾಮಸ್ವಾಮಿ ಶಾಸ್ತ್ರಿಯವರು ತಮ್ಮ ಬಳಿ ಕನ್ನಡ ಕಲಿಯುತ್ತಿದ್ದ 'ಕರ್ನಾಟ ವಿದ್ಯಾರ್ಥಿಗಳಾದ ಕೆಲವರು ದೊಡ್ಡ ಮನುಷ್ಯರ' ಪ್ರಯೋಜನಕ್ಕಾಗಿ ಕನ್ನಡ ಪಾಠಗಳಲ್ಲಿ ತಿಳಿದಿರಬೇಕಾದ ಛಂದಸ್ಸು, ಕಾವ್ಯ ಲಕ್ಷಣ, ಅಲಂಕಾರ ರಸ ಮುಂತಾದುವುಗಳನ್ನು ಪೂರ್ವ ಗ್ರಂಥಗಳು ಸಂಗ್ರಹವಾಗಿರುವಂತೆ ಮಿತವಾಗಿ ಸೇರಿಸಿ, 'ಕರ್ಣಾಟಕ ಛಂದೋಲಂಕಾರ ಸಾಹಿತ್ಯ

ಲಕ್ಷಣ ಸಂಗ್ರಹ' ಎಂಬ ಗ್ರಂಥವನ್ನು ಕ್ರಿ. ಶ. 1885 ರಲ್ಲಿ ಪ್ರಕಟಿಸಿದರು. ಧಾರವಾಡದಲ್ಲಿ ಉಪಾಧ್ಯಾಯರಾಗಿದ್ದ ಘೋಂಡೋ ನರಸಿಂಹ ಮುಳಬಾಗಲ ಅವರು 'ಛಂದಸ್ಸಾರ'ಎಂಬ ಗ್ರಂಥವನ್ನು 1890ರಲ್ಲಿ ಬರೆದು ಪ್ರಕಟಿಸಿದರು. 1893 ರಲ್ಲಿ ಕನ್ನಡ ಛಂದಸ್ಸನ್ನು ಕುರಿತು-ಕಾರವಾರದಲ್ಲಿ ಶಿಕ್ಷಕರಾಗಿದ್ದ-ನರಸಿಂಹ ಮಾಧವ ಮುಡಿಪಿ ಎಂಬುವರು Prosody of the Kannada Language ಎಂಬ ಪುಸ್ತಕವನ್ನು ಇಂಗ್ಲಿಷಿನಲ್ಲಿ ಬರೆದರು. 1895 ರಲ್ಲಿ ಪ್ರಕಟವಾದ ಮತ್ತೊಂದು ಛಂದೋಗ್ರಂಥವೆಂದರೆ ಶ್ರೀನಿವಾಸ ರಾಘವಾಚಾರ್ಯರ 'ಛಂದೋಮಾಲಿಕೆ'. ಇವಿಷ್ಟು ಹೊಸಗನ್ನಡದ ಅರುಣೋದಯ ಕಾಲ(19 ನೆಯ ಶತಮಾನ)ದಲ್ಲಿ ವಿದೇಶೀಯ ಮತ್ತು ಸ್ವದೇಶೀಯ ಕನ್ನಡ ವಿದ್ವಾಂಸರಿಂದ ಪ್ರಕಟವಾದ ಛಂದೋವಿಷಯಕವಾದ ಗ್ರಂಥಗಳು. ಹೀಗೆ, ಕನ್ನಡ ಛಂದಸ್ಸನ್ನು ಕುರಿತಂತೆ 1875 ರಿಂದೀಚೆಗೆ ಗ್ರಂಥಗಳನ್ನು ರಚಿಸಿದವರಿಗೆಲ್ಲ ಕಿಟ್ಟೆಲ್ಲರ ಛಂದೋಂಬುಧಿಯೇ ಪರಮಾಧಾರ ಗ್ರಂಥವಾಗಿತ್ತು."[12] ವಿಶೇಷವೆಂದರೆ, ಕೆಲವು ಗ್ರಂಥಗಳಲ್ಲಿ, ಲೇಖಕರು ತಾವೇ ರಚಿಸಿದ ಪದ್ಯಗಳನ್ನು ಉದಾಹರಣೆಯಾಗಿ ಕೊಟ್ಟಿರುವುದು. ಹಲಕೆಲವು ಛಂದಸ್ಸಿನ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿಯ ಹೇಳುವ ಪರಿಚಯಗ್ರಂಥಗಳಷ್ಟೆ. ಅವುಗಳ ಸ್ವರೂಪವನ್ನು ಪರಿಚಯಮಾಡಿಕೊಡುವ ಉದ್ದೇಶದಿಂದ, ಕೆಲವು ಪ್ರಯತ್ನಗಳ ಬಗೆಗೆ ನಾಲ್ಕು ಮಾತು ಹೇಳಬಹುದು.

ಛಂದಸ್ಸಾರ: ಇದರ ಲೇಖಕರು ಧಾರವಾಡ ಶಿಕ್ಷಕ-ಶಿಕ್ಷಣ ವಿದ್ಯಾಲಯದ ಕನ್ನಡ ಗುರುಗಳಾಗಿದ್ದ ಘೋಂಡೋ ನರಸಿಂಹ ಮುಳಬಾಗಲ್ ಅವರು. ಗ್ರಂಥದ 2 ನೆಯ ಆವೃತ್ತಿಯಲ್ಲಿ ಗ್ರಂಥ ರಚನೆಯ ಉದ್ದೇಶವನ್ನು ಹೀಗೆ ತಿಳಿಸಿದ್ದಾರೆ: "ಈಗ ಕನ್ನಡ ವಿದ್ಯಾರ್ಥಿಗಳಿಗೂ ಅವರ ಬೋಧಕರಿಗೂ ಕವಿತೆಯ ಯಥಾರ್ಥಜ್ಞಾನವು ಬಹುಶಃ ಇಲ್ಲೆಂದರೂ ಸಲ್ಲುವುದು. ಎಷ್ಟೋ ಜನರು ರಚಿಸಿದ ಹೊಸ ಕವಿತೆಗಳು ಅಶುದ್ಧವಾಗಿರುತ್ತವೆ. ಈಗ ಕನ್ನಡ ವಿದ್ಯಾರ್ಥಿಗಳು ಕಲಿಯುವ ಕವಿತಾಪದ್ಧತಿಯು ಬಹುಶಃ ಅಶುದ್ಧವಾಗಿದೆ ಮತ್ತು ಅದರಲ್ಲಿ ಅನೇಕ ನ್ಯೂನತೆಗಳಿರುತ್ತವೆ. ಅದಕ್ಕೆ ಆಧಾರವಾದ 'ನಾಗವರ್ಮನ ಛಂದಶ್ಶಾಸ್ತ್ರ'ಎಂಬ ಗ್ರಂಥವಾದರೂ ಅಸ್ಪಷ್ಟ ವಚನಗಳಿಂದಲೂ ಎಷ್ಟೋ ಕೊರತೆಗಳಿಂದಲೂ ನಿರರ್ಥಕ ಶಬ್ದಗಳಿಂದಲೂ ವ್ಯಾಕರಣವಿರುದ್ಧ ಪ್ರಯೋಗಗಳಿಂದಲೂ ತುಂಬಿರುವ ಕಾರಣ ವಿದ್ಯಾರ್ಥಿಗಳಿಗೆ

ಕಲಿಸುವಹಾಗಿಲ್ಲ.” “ಈ ಗ್ರಂಥದಲ್ಲಿ ಸಂಸ್ಕೃತ ಕನ್ನಡ ನುಡಿಗಳ ಮುಖ್ಯಮುಖ್ಯ ಛಂದಸ್ಸುಗಳಲ್ಲಿರುವ ಪ್ರಸಿದ್ಧ ವೃತ್ತಗಳ ಲಕ್ಷಣಗಳನ್ನು ಹೇಳಿರುವುದರಿಂದ ಇದಕ್ಕೆ ‘ಛಂದಸ್ಸಾರ’ ಎಂಬ ಹೆಸರು ಕೊಡಲ್ಪಟ್ಟಿದೆ.’’ ಪೂರ್ವ ಲಾಕ್ಷಣಿಕರ ಸಂಪ್ರದಾಯವನ್ನು ಅನುಸರಿಸಿ ಅನೇಕ ಲಕ್ಷಣ ಲಕ್ಷ್ಯಪದ್ಯಗಳನ್ನು ಸ್ವಂತವಾಗಿ ರಚಿಸಿ ಸೇರಿಸಿರುವುದು ಗಮನಾರ್ಹ. ಒಂದು ಉದಾಹರಣೆ :

ಚಿತ್ರಪದ ವೃತ್ತಂ :

ಚಿತ್ರಪದಂ ಯತಿ ನಾಲ್ಕರೊಳು
ಭ-ತ್ರಿತಯಂ ಗುರುವಂತ್ಯದೊಳು

ಉದಾಹರಣೆ :

(ನೀತಿ)

ಪಾಪವ ಗಂಗೆ, ಕುರಂಗಧರಂ
ತಾಪವ, ದೈನ್ಯವ ಕಲ್ಪಕುಜಂ,
ಲೋಪಿಕುಮುತ್ತಮ ಸಂಗಮವಾ
ಪಾಪವ ತಾಪವ ದೈನ್ಯಮುಮಂ.

[ಗಂಗೆ ಪಾಪವನ್ನು, ಚಂದ್ರ ತಾಪವನ್ನು, ಕಲ್ಪವೃಕ್ಷ ದೈನ್ಯವನ್ನು ಕಳೆಯುತ್ತವೆ. ಉತ್ತಮ ಸಹವಾಸ ಪಾಪ, ತಾಪ, ದೈನ್ಯಗಳೆಲ್ಲವನ್ನೂ ಕಳೆಯುತ್ತದೆ.]

“ಇದು ಮಹಾರಾಷ್ಟ್ರ ಭಾಷೆಯದಾದರೂ ಈಗ ಕನ್ನಡದಲ್ಲಿ ಕೆಲವರು ಉಪಯೋಗಿಸುತ್ತಾರೆ” ಎಂದು ಹೇಳಿ ‘ಸಾಕಿ’ ಎಂಬ ಪದ್ಯಪ್ರಕಾರದ ಲಕ್ಷಣವನ್ನು ತಿಳಿಸಿದ್ದಾರೆ. ಲಕ್ಷಣ ಪದ್ಯವೇ ಉದಾಹರಣೆಯೂ ಆಗಿದೆ.

ಶರನಿಧಿ ಮಾತ್ರೆಯ ಗಣಮೇಳರ್ಧದೆ, ವಿರತಿ ಚತುರ್ಗಣದಿಂದಂ !
ಗುರುಯುಗಮಂತ್ಯಗಣಂ ಪ್ರಾಸಂ ಕಡೆಗಿರೆ ಸಾಕಿಯೆನಿಪ ಛಂದಂ ॥

[ನಾಲ್ಕು ಮಾತ್ರೆಗಳ ಏಳು ಗಣಗಳು ಪದ್ಯಾರ್ಧದಲ್ಲಿ ಬರುತ್ತವೆ. ನಾಲ್ಕನೆಯ ಗಣಕ್ಕೆ ಯತಿ, ಅಂತ್ಯಗಣ ಎರಡು ಗುರುಗಳಾಗಿರಬೇಕು. ಅಂತ್ಯಪ್ರಾಸ.]

ಸೀಸಪದ್ಯಕ್ಕೆ ಇವರು ಕೊಡುವ ಲಕ್ಷಣ ತೆಲುಗುಗ್ರಂಥಗಳಲ್ಲಿ ಕೊಡುವುದಕ್ಕೆ ಅನುಗುಣವಾಗಿಲ್ಲ. ಸೀಸಪದ್ಯದಲ್ಲಿ ಬಳಕೆಯಾಗುವ ದೇವಗಣಗಳು ಆಂಧ್ರದೇಶದಲ್ಲೂ ಕರ್ನಾಟಕದಲ್ಲೂ ಕ್ರಮೇಣ ಪಂಚಮಾತ್ರಾಗಣಕ್ಕೆ ತಿರುಗಿರುವುದು ಕಂಡುಬರುತ್ತದೆ. ಈ ಲಕ್ಷಣವನ್ನೇ ಇವರೂ ಹೇಳಿದ್ದಾರೆ : ಸೀಸ

ಪದ್ಯಕ್ಕೆ 4 ಪಾದಗಳು ; ಪ್ರತಿಪಾದದಲ್ಲಿ 5 ಮಾತ್ರೆಯ ಏಳು ಗಣಗಳು+ ಒಂದು ಗುರು ; ನಾಲ್ಕನೆಯ ಗಣವಾದ ಮೇಲೆ ಯತಿ.

ಛಂದೋಮಾಲಿಕೆ (1895) : ಇದನ್ನು ರಚಿಸಿದವರು ಮೈಸೂರು ಸರ್ಕಾರದ ನಾರ್ಮಲ್‌ಸ್ಕೂಲ್ ಪಂಡಿತರಾದ ಶ್ರೀನಿವಾಸರಾಘವಾಚಾರ್ಯರು. ಮೇಲಿನ ಗ್ರಂಥದಂತೆ ಇದೂ ವಿದ್ಯಾರ್ಥಿಗಳ ತಿಳಿವಳಿಕೆಗೆಂದೇ ರಚಿತವಾದದ್ದು. ಬಹುಶಃ ಆಂಗ್ಲಸಾಹಿತ್ಯದ ಪರಿಚಯವಿದ್ದರೂ ಅದರ ಪ್ರಭಾವಕ್ಕೆ ಅಷ್ಟಾಗಿ ಒಳಗಾಗದ ಪ್ರಾಚೀನ ಸಂಪ್ರದಾಯದ ಪಂಡಿತರೊಬ್ಬರು ಆಧುನಿಕ ಕನ್ನಡ ಕವಿತೆ ಇನ್ನೂ ತಲೆದೋರುವ ಸೂಚನೆಯೂ ಇಲ್ಲದಿದ್ದ ಕಾಲದಲ್ಲಿ ಕನ್ನಡ ಛಂದಸ್ಸಿನ ಬಗೆಗೆ ಆಡಿರುವ ಮಾತುಗಳು ಗಮನಾರ್ಹವಾಗಿವೆ :

> "ಭಾಷೆಗೆ ವ್ಯಾಕರಣದಂತೆ ಛಂದೋನಿಯಮವೂ ಅಂಗವಾಗಿರುವುದು, ಆದರೆ ವ್ಯಾಕರಣವು ವಚನ ಪದ್ಯಗಳೆರಡಕ್ಕೂ, ಛಂದೋನಿಯಮವು ಪದ್ಯಮಾತ್ರಕ್ಕೂ, ಸೇರುವುದು... ಕನ್ನಡವು 'ಸಂಸ್ಕೃತ ಭಾಷೆಯಿಂದ ಹುಟ್ಟಿದ್ದಲ್ಲ' ಎಂದು ಅಲ್ಲಿನ ದೇಶ್ಯಪದ ಮುಂತಾದ್ದರಿಂದ ತಿಳಿಯಬಂದರೂ ವ್ಯಾಕರಣ, ಅಲಂಕಾರ, ಛಂದಸ್ಸು ಇವುಗಳ ಕ್ರಮದ ವಿಷಯದಲ್ಲಿ ಸಂಸ್ಕೃತ ಭಾಷೆಗೆ ಪ್ರತಿಬಿಂಬವಾಗಿರುವುದು, ಆದರೆ ಛಂದಸ್ಸಿನಲ್ಲಿ ಯತಿ, ಪ್ರಾಸ, ರಗಳೆ ಮುಂತಾದ ಕೆಲವು ಮಾತ್ರಾಗಣ ವೃತ್ತ, ಇವುಗಳಿಂದ ಸ್ವಲ್ಪ ವ್ಯತ್ಯಾಸವನ್ನು ಹೊಂದಿದೆ. ಸಂಸ್ಕೃತದಲ್ಲಿಯೂ ಯತಿ ಕೆಲವೆಡೆಯಲ್ಲಿಯೇ ಇದ್ದರೂ, ಕನ್ನಡದಲ್ಲಿ ಅಷ್ಟರಮಟ್ಟಿಗೂ, ಐಚ್ಛಿಕವಾಗಿ ಕೆಲವೆಡೆಯಲ್ಲಲ್ಲದೆ ಪಲವು ಕಡೆಯಲ್ಲಿ ಕಾಣುವುದಿಲ್ಲ. ಪ್ರಾಸದಿಂದ ಪದ್ಯವು ಎಷ್ಟು ಮನೋಹರವಾಗಿದ್ದರೂ ಅರ್ಥಗಾಂಭೀರ್ಯಕ್ಕೂ, ಲಾಲಿತ್ಯಕ್ಕೂ ವಿಶೇಷವಾಗಿ ಭಂಗವುಂಟಾಗಿರುವುದು. ಅಭಿನವ ಪಂಪ ಮೊದಲಾದ ಜೈನ ಕವಿಗಳೂ ಪ್ರಾಸದ ನಿಯಮವಿಲ್ಲದೆ ಗ್ರಂಥವನ್ನು ರಚಿಸಿದ್ದಲ್ಲಿ ಅವರ ಗ್ರಂಥಗಳಲ್ಲಿ ಇನ್ನೂ ಗಾಂಭೀರ್ಯ, ಲಾಲಿತ್ಯಗಳು ಹೆಚ್ಚುತ್ತಿತ್ತೆಂದು ಹೇಳುವುದಕ್ಕೆ ಅಡ್ಡಿಯೇನೂ ಇಲ್ಲ. ಆದ್ದರಿಂದ ಪ್ರಾಸವನ್ನು ನಿಯತವಾಗಲ್ಲದೆ, ಐಚ್ಛಿಕವಾಗಿಟ್ಟುಕೊಳ್ಳುವ ಪಕ್ಷದಲ್ಲಿ ಸಂಸ್ಕೃತದಂತೆ ಕನ್ನಡಕ್ಕೂ ವಿಶೇಷಪ್ರಕಾಶವುಂಟಾದೀತೆಂದು ತೋರುತ್ತದೆ."

ಪ್ರಾಸ ಶಬ್ದಾಲಂಕಾರ ; ಕವಿರಾಜಮಾರ್ಗಕಾರನು ಹೇಳುವಂತೆ, ಕನ್ನಡಕ್ಕೆ ಅದು 'ಅತಿಶಯ'ವಾದುದೂ ಹೌದು. ಛಂದಸ್ಸಿಗೂ ಪ್ರಾಸಕ್ಕೂ ಅನಿವಾರ್ಯವಾದ ಸಂಬಂಧವಿಲ್ಲದಿದ್ದರೂ ಪದ್ಯದ ಪಾದ ವಿಂಗಡನೆಯನ್ನು ಸೂಚಿಸುವಲ್ಲಿ ಕನ್ನಡ ಕವಿಗಳು ಆದಿಪ್ರಾಸವನ್ನು ನಿಯತಗೊಳಿಸಿಕೊಂಡರು ; ಹೆಚ್ಚು ಕಡಮೆ ಅಂತ್ಯಪ್ರಾಸವೂ ಅದೇ ಕೆಲಸವನ್ನು ಮಾಡುತ್ತದೆ ; ತೆಲುಗಿನಲ್ಲಿ 'ವಡಿ'ಯನ್ನು ಸೂಚಿಸುವಲ್ಲಿ ಪ್ರಾಸ ಉಪಯುಕ್ತವಾಗಿ ಪರಿಣಮಿಸಿದೆ. ಈ

ಸಂದರ್ಭದಲ್ಲಿ ವಿಚಾರಮಾಡಿದಾಗ, ಪ್ರಾಸವನ್ನು ಐಚ್ಛಿಕವಾಗಿಟ್ಟುಕೊಳ್ಳ ಬಹುದೆಂಬ ಮೇಲ್ಕಂಡ ಅಭಿಪ್ರಾಯ ಮಾನ್ಯವಾಗುತ್ತದೆ.

"ಇದರಲ್ಲಿ ಪ್ರಸಿದ್ಧವಾದ ವೃತ್ತಗಳು ಪ್ರಾಚೀನೋದಾಹರಣೆಗಳೊಡನೆ ವಿವರಿಸಲ್ಪಟ್ಟಿವೆ. ಆದರೆ ತ್ರಿಪದಿ, ಸಾಂಗತ್ಯ ಮೊದಲಾದ ವೃತ್ತಗಳನ್ನು ಅನೇಕವಿದ್ದರೂ ಅವು ಪ್ರಕೃತೋಪಯುಕ್ತವಲ್ಲವೆಂದು ಈ ಮುದ್ರಣದಲ್ಲಿ ಬಿಡಲ್ಪಟ್ಟಿವೆ", ಎಂಬ ಗ್ರಂಥಕರ್ತರ ಮಾತು ಗ್ರಂಥದ ವಿಷಯವನ್ನು ಪರಿಚಯ ಮಾಡಿಕೊಡುತ್ತದೆ. ಅಕ್ಕರ ಛಂದಸ್ಸಿನ ರಹಸ್ಯ ಗ್ರಂಥಕರ್ತರಿಗೆ ಅರ್ಥವಾಗಿಲ್ಲ ; ಅಂಶಗಣಗಳ ಬದಲು ಮಾತ್ರಾಗಣಗಳ ಲೆಕ್ಕವಿಟ್ಟು ಅದನ್ನು ವಿವರಿಸ ಹೊರಟಿರುವುದು ಈ ಗ್ರಂಥದ ಒಂದು ದೋಷ. ಅಕ್ಷರ ವೃತ್ತಗಳ ಛಂದೋನಿಯಮವನ್ನು ಆಯಾ ವೃತ್ತಛಂದಸ್ಸಿನ ಸೂತ್ರವಾಕ್ಯಗಳ ರೂಪ ದಲ್ಲಿ ಹೇಳಿರುವುದು ನೆನಪಿಟ್ಟುಕೊಳ್ಳಲು ಅನುಕೂಲವಾಗಿದೆ. 'ಕನ್ನಡ ಕೈಪಿಡಿ' ಯಲ್ಲಿಯೂ ಇವೇ ವಾಕ್ಯಗಳನ್ನು ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಬಳಸಿಕೊಂಡಿದೆ.

ಈ ಶತಮಾನದಲ್ಲಿ ರಚಿತವಾದ ಛಂದೋಗ್ರಂಥಗಳನ್ನೂ ಛಂದಸ್ಸಿನ ಕ್ಷೇತ್ರದಲ್ಲಿ ನಡೆದಿರುವ ಸಮೀಕ್ಷೆ ಸಂಶೋಧನೆಗಳನ್ನೂ ಪರಿಚಯ ಮಾಡಿ ಕೊಡುವುದು ಈ ಗ್ರಂಥದ ಪರಿಮಿತಿಯಲ್ಲಿ ಸೇರಿಲ್ಲ. ಆ ಗ್ರಂಥಗಳ ಹೆಸರು ಗಳನ್ನು ಅನುಬಂಧದ ಪಟ್ಟಿಯಲ್ಲಿ ಕೊಟ್ಟಿದೆ. ಆದರೂ ಅವುಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯವೆನಿಸುತ್ತದೆ.

ಬಸವಪ್ಪ ಚೆನ್ನಪ್ಪ ಪಟ್ಟೇದ ಎಂಬವರು 'ಷಟ್ಪದಿ ವಂಶ ವಿಕಾಸ' ಎಂಬ ಚಿಕ್ಕ ಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಪ್ರಸಿದ್ಧವಾದ ಆರು ಷಟ್ಪದಿಗಳ ಜೊತೆಗೆ, 'ಒಮ್ಮಡಿ ಷಟ್ಪದಿ' ಎಂಬ ವರ್ಗದಲ್ಲಿ 'ತಲ', 'ಜಲ', 'ವರ', 'ಅಸಮ' (ಕ್ರಮವಾಗಿ, 3+3, 3+4, 3+5, 4+5 ಮಾತ್ರೆಗಳ ನಡೆ), 'ಇಮ್ಮಡಿ ಷಟ್ಪದಿ'ಗಳು ಎಂಬ ವರ್ಗದಲ್ಲಿ 'ಸಂವರ್ಧಿನಿ' ಮತ್ತು 'ಪ್ರೌಢ' (ಕ್ರಮವಾಗಿ 3+5+3+5, 4+5+4+5 ಮಾತ್ರೆಗಳ ನಡೆ) ಎಂಬ ಹೊಸ ಷಟ್ಪದಿಗಳನ್ನು ನಿರ್ಮಿಸಿ, ಉದಾಹರಣೆಗಳನ್ನು ಕೊಟ್ಟಿ ದ್ದಾರೆ. 'ತಲ', 'ಜಲ', ಲಯಗಳು ಆಧುನಿಕ ಕವಿತೆಯಲ್ಲಿ ಕಂಡುಬರುತ್ತವೆ ಎಂಬುದನ್ನು ಕರ್ಕಿಯವರು ತಮ್ಮ 'ಛಂದೋವಿಕಾಸ' ದಲ್ಲಿ ತೋರಿ ಸಿದ್ದಾರೆ.

'ಕೈಪಿಡಿ'ಯಲ್ಲಿ ಕನ್ನಡ ಛಂದಸ್ಸಿನ ಬೆಳವಣಿಗೆಯನ್ನು ತಮಿಳು ಮತ್ತು ತೆಲುಗು ಛಂದಸ್ಸುಗಳೊಂದಿಗೆ ಹೋಲಿಸಿ ಬಿ. ಎಂ. ಶ್ರೀಕಂಠಯ್ಯನವರು ಬರೆದಿರುವ ಲೇಖನ ಇತರ ಸಂಶೋಧಕರಿಗೆ ದಾರಿ ತೋರಿಸಿತು. ಡಿ. ಎಸ್. ಕರ್ಕಿಯವರ 'ಛಂದೋವಿಕಾಸ' ಕನ್ನಡ ಛಂದಸ್ಸಿನ ಅಕ್ಷರಗಣ, ಮಾತ್ರಾಗಣ, ಅಂಶಗಣಗಳ ತ್ರಿವೇಣೀ ಸಂಗಮವನ್ನೂ ಅವರ ನೆಲೆ–ಬೆಲೆಗಳನ್ನೂ ಚಾರಿತ್ರಿಕ ದೃಷ್ಟಿಯಿಂದಲೂ ಭಾವಮೂಲ್ಯದೃಷ್ಟಿಯಿಂದಲೂ ವಿವೇಚನೆ ಮಾಡಿರುವ, ಒಂದು ಬೆಲೆಯುಳ್ಳ ಗ್ರಂಥ. ನಾಗವರ್ಮನ 'ಛಂದೋಂಬುಧಿ'ಯ ಪಾಠ ಸಮಸ್ಯೆಗಳನ್ನು ಪರಿಹರಿಸಿ, ಬಹುಮಟ್ಟಿಗೆ ಕವಿಯ ಮೂಲರಚನೆಗೆ ಹತ್ತಿರವಾದ ಪಾಠವನ್ನು ಒದಗಿಸುವ ಎರಡು ಪ್ರಯತ್ನಗಳು ಶ್ಲಾಘ್ಯವಾಗಿವೆ: ಒಂದು, 'ಛಂದಸ್ಸಂಪುಟ'ದಲ್ಲಿ ಅಡಕವಾಗಿರುವ ಎಲ್. ಬಸವರಾಜು ಅವರ ಪರಿಷ್ಕರಣ; ಇನ್ನೊಂದು, ವಿಚಾರಪೂರ್ಣ ಪೀಠಿಕೆಯೊಂದಿಗೆ ಪ್ರಕಟವಾಗಿರುವ ಕುಕ್ಕಿಲ ಕೃಷ್ಣಭಟ್ಟರ ಪರಿಷ್ಕರಣ. ಟಿ. ವಿ. ವೆಂಕಟಾಚಲ ಶಾಸ್ತ್ರಿಯವರ 'ಕನ್ನಡ ಛಂದಸ್ಸು' ಕನ್ನಡ ಛಂದಸ್ಸಿನ ಸ್ವರೂಪವನ್ನೂ ಬೆಳವಣಿಗೆಯನ್ನೂ ಚೆನ್ನಾಗಿ ಪರಿಚಯ ಮಾಡಿಕೊಡುತ್ತದೆ. ಆಧುನಿಕ ಕನ್ನಡ ಕವಿತೆಯ ಛಂದೋರೂಪಗಳನ್ನು ಕುರಿತು ತೀ. ನಂ. ಶ್ರೀಕಂಠಯ್ಯನವರು ಬರೆದಿರುವ 'ಹೊಸ ಛಂದಸ್ಸಿನ ಲಯಗಳು' ಎಂಬ ಲೇಖನ ತುಂಬ ಬೆಲೆಯುಳ್ಳದ್ದು; ಈ ವಿಷಯವಾಗಿ ಕರ್ಕಿಯವರೂ ತಮ್ಮ ಗ್ರಂಥದಲ್ಲಿ ಪರಿಶೀಲನೆ ನಡೆಸಿದ್ದಾರೆ; ಕನ್ನಡ ಕಾವ್ಯದಲ್ಲಿ ತೀರ ಈಚಿನ ಬೆಳವಣಿಗೆ 'ನವ್ಯಕಾವ್ಯ'; ಇದು ಕೂಡ ಈಗಾಗಲೇ 'ಹಳೆಯದು' ಎನ್ನಿಸಿಕೊಳ್ಳುವಂತಾಗಿದೆ. ಈ ಕಾವ್ಯದ ಲಕ್ಷಣವನ್ನು ವಿಚಾರಮಾಡುವವರು ಇದರ 'ಲಯ' 'ಆಡುಮಾತಿನ ಲಯ' (speech rhythm) ಎಂದು ಹೇಳುವುದು ರೂಢಿಯಾಗಿದೆ. ಆಡುಮಾತು ಅಥವಾ ಬಳಕೆಯ ಮಾತು ಆಧುನಿಕ ಭಾಷಾವಿಜ್ಞಾನದ (linguistics) ಅಧ್ಯಯನದ ವಿಷಯ; ಅದಕ್ಕೆ ಲಕ್ಷಣವನ್ನು ಹೇಳುವುದು ಸಾಧ್ಯವಾಗಿದೆ. ಆದರೆ, 'ಆಡುಮಾತಿನ ಲಯ'ವನ್ನು ಉದಾಹರಣೆಗಳಿಂದ ತೋರಿಸಬಹುದೇ ಹೊರತು, ಅದರ 'ಲಕ್ಷಣ'ವನ್ನು ವಿವರಿಸುವುದು ಕಷ್ಟ; 'ಲಕ್ಷಣ'ಕ್ಕೆ ಒಳಪಡುವ ಉದಾಹರಣೆಗಳೂ ಇವೆ; ಇವು ಮಾತ್ರಾಲಯಕ್ಕೆ ಒಳಪಡುತ್ತವೆ.

ಅಡಿ ಟಿಪ್ಪಣಿಗಳು

1 ಡಿ. ಎಸ್. ಕರ್ಕಿ : 'ಛಂದೋವಿಕಾಸ,' 1956 : ಪು. 8

2 'ಛಂದೋ ಹೀನೋ ನ ಶಬ್ದೋಽಸ್ತಿ ನಚ್ಛಂದಶ್ಶಬ್ದ ವರ್ಜಿತಃ'. (ನಾಟ್ಯಶಾಸ್ತ್ರ : 15–39).

3 ಸೀತಾರಾಮ ಜಾಗೀರ್‌ದಾರ್ : 'ಹೆಗ್ಗೆರೆಯ ಶಾಸನ ಮತ್ತು ಜಯಕೀರ್ತಿಯ ಕಾಲ' ; 'ಮಾನವಿಕ ಕರ್ಣಾಟಕ,' ಸಂಪುಟ 3, ಸಂಚಿಕೆ 3 ; 1973 ; ಪು. 29-34

4 ಆರ್. ನರಸಿಂಹಾಚಾರ್ : ಕರ್ಣಾಟಕ ಕವಿಚರಿತೆ, I ; ದ್ವಿತೀಯ ಮುದ್ರಣ. 1972 ; ಅನುಬಂಧ 2, ಪು. 43

5 ಎಲ್. ಬಸವರಾಜು : 'ಕನ್ನಡ ಛಂದಸ್ಸಂಪುಟ,' 1974 ; ಪೀಠಿಕೆ, ಪು. xxxiii (33)

6 ಮೇಲಿನದೇ : ಪು. li (51)

7-8 ಕನ್ನಡ ಕೈಪಿಡಿ, 1936, ಪು. 131-132

9 ಎ. ಆರ್. ಕೃಷ್ಣಶಾಸ್ತ್ರೀ (ಸಂ) : 'ಈಶ್ವರಕವಿ ವಿರಚಿತಂ ಕವಿಜಿಹ್ವಾಬಂಧನಂ,' 1952 ; ಪೀಠಿಕೆ, ಪು. xiii

10 ಮೇಲಿನದೇ

1 ಎಲ್. ಬಸವರಾಜು ಅವರು ಅತ್ಯಂತ ದಕ್ಷತೆಯಿಂದ ಸಂಪಾದನೆ ಮಾಡಿ ಪ್ರಕಟಿಸಿರುವ 'ಛಂದಸ್ಸಂಪುಟ'ದಲ್ಲಿ (1974) ಈ ಗ್ರಂಥ ಪ್ರಕಟವಾಗಿದೆ. ಛಂದೋಂಬುಧಿ, ಕವಿಜಿಹ್ವಾಬಂಧನ, ಛಂದಸ್ಸಾರ–ಇವೂ ಈ ಸಂಪುಟದಲ್ಲಿಯೇ ಕೂಡಿ ಪ್ರಕಟವಾಗಿವೆ,

2 "ಇಂದುಧರನುಮೆಗೆ ಪೇಳ್ದಾ ಛಂದಂ" ಎಂಬ ನಾಗವರ್ಮನ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಛಂದಸ್ಸನ್ನು ಮೊದಲು ಶಿವನು ಉಮೆಗೆ ಹೇಳಿದ್ದರಿಂದ, ಅವನು ಪತ್ನಿಗೆ ಗುರುವೂ ಆದನು. 'ಉಮಾಗುರು' ಎಂಬ ವೀರಭದ್ರನ ಮಾತಿನಲ್ಲಿ ಇದೇ ಅಭಿಪ್ರಾಯ ಸೂಚಿತವಾಗಿರುವಂತಿದೆ. ಬಸವರಾಜು ಅವರು ಹೇಳಿರುವಂತೆ 'ನಂದಿನಾಥ' ಕೃತಿಗೆ ಪ್ರೇರಕನಾದ್ದರಿಂದ 'ಕೃತಿಗೆ ಪತಿ' ; ಆದರೆ 'ಕೃತಿಕರ್ತನ ಗುರು' ಅಲ್ಲ.

11 ಎಲ್. ಬಸವರಾಜು : 'ಛಂದಸ್ಸಂಪುಟ,' 1974 ; ಪೀಠಿಕೆ, ಪು. lxix

12 ಮೇಲಿನದೇ : ಅರಿಕೆ, ಪು. iii-iv

ವ್ಯಾಕರಣ – ನಿಘಂಟು – ಜ್ಞಾನಕೋಶ

ಒಸ್ನೆಲೆ

ವೇದಗಳನ್ನು ಕಲಿಯುವುದಕ್ಕೆ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ – ಇವುಗಳ ತಿಳಿವಳಿಕೆ ಅತ್ಯಗತ್ಯ; ಇವು ವೇದದ 'ಷಡಂಗ' ಗಳೆಂದು ಪ್ರಸಿದ್ಧವಾಗಿವೆ. ಹಾಗೆಯೆ, ಸಂಸ್ಕೃತವಾಗಲಿ ಕನ್ನಡವಾಗಲಿ, ಕಾವ್ಯಗಳ ಅಭ್ಯಾಸಕ್ಕೆ ವ್ಯಾಕರಣ, ನಿಘಂಟು, ಛಂದಸ್ಸು, ಅಲಂಕಾರ - ಈ ನಾಲ್ಕು ಶಾಸ್ತ್ರಗಳ ತಿಳಿವಳಿಕೆ ಅತ್ಯಗತ್ಯ. ಇವುಗಳನ್ನು ಕಾವ್ಯಾಭ್ಯಾಸದ 'ಚತುರಂಗ' ಎಂದು ಕರೆಯಬಹುದು. ಇವುಗಳ ಪೈಕಿ, ಅಲಂಕಾರಶಾಸ್ತ್ರ ಮತ್ತು ಛಂದಶ್ಶಾಸ್ತ್ರಗಳನ್ನು ಕುರಿತು ಕನ್ನಡದಲ್ಲಿ ರಚಿತವಾಗಿರುವ ಪ್ರಾಚೀನ ಗ್ರಂಥಗಳ ಪರಿಚಯವನ್ನು ಹಿಂದಿನ ಎರಡು ಅಧ್ಯಾಯಗಳಲ್ಲಿ ಮಾಡಿ ಕೊಟ್ಟಿದೆ. ಈ ಅಧ್ಯಾಯದಲ್ಲಿ ವ್ಯಾಕರಣ, ನಿಘಂಟು ಮತ್ತು ಜ್ಞಾನಕೋಶ – ಈ ಶಾಸ್ತ್ರಗ್ರಂಥಗಳ ಪರಿಚಯವನ್ನು ಮಾಡಿಕೊಡಲಾಗುವುದು.

ವ್ಯಾಕರಣ ಮತ್ತು ನಿಘಂಟುಗಳನ್ನು ಒಟ್ಟಿನಲ್ಲಿ 'ಶಬ್ದಶಾಸ್ತ್ರ' ಎಂದು ಕರೆಯಬಹುದು. ಒಂದು ಭಾಷೆಯ ಅಂಗೋಪಾಂಗಗಳಾದ ವರ್ಣ (ಅಕ್ಷರ), ಪದ ಅಥವಾ ಶಬ್ದ, ವಾಕ್ಯ –ಇವುಗಳ ರೂಪ ರಚನೆಯನ್ನು ವಿವರಿಸುವ ಶಾಸ್ತ್ರವೆ ವ್ಯಾಕರಣ. ಇದನ್ನು ಸಾಮಾನ್ಯವಾಗಿ 'ವರ್ಣನಾತ್ಮಕ ವ್ಯಾಕರಣ' (Descriptive Grammar) ಎಂದು ಹೇಳುತ್ತಾರೆ. ಈ ಪ್ರಕಾರವಲ್ಲದೆ, ಚಾರಿತ್ರಿಕ ವ್ಯಾಕರಣ, ತೌಲನಿಕವ್ಯಾಕರಣ, ಮುಂತಾದ ಪ್ರಕಾರಗಳೂ ಉಂಟು. ಕನ್ನಡ ಭಾಷೆಯ ವ್ಯಾಕರಣಗಳೆಲ್ಲವೂ ವರ್ಣನಾತ್ಮಕ ವ್ಯಾಕರಣದ ಪ್ರಕಾರಕ್ಕೆ ಸೇರುತ್ತವೆ. ಕಾಲ್ಡ್‌ವೆಲ್ ಎಂಬ ಪಾಶ್ಚಾತ್ಯ ವಿದ್ವಾಂಸನು ಬರೆದಿರುವ Comparative Grammar of the Dravidian Languages ('ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ') ಎಂಬ ಗ್ರಂಥವು ಅದರ ಹೆಸರೇ

ಸೂಚಿಸುವಂತೆ ತೌಲನಿಕ ವ್ಯಾಕರಣ ಪ್ರಕಾರಕ್ಕೆ ಸೇರುತ್ತದೆ. ಕಾಲ್ಡ್‌ವೆಲ್ ಈ ಭಾಷೆಗಳಲ್ಲಿ ಕಂಡುಬರುವ ವ್ಯಾಕರಣಸಿದ್ಧಿಯ ಹೋಲಿಕೆಯನ್ನು ವಿವರಿಸಿ ಈ ಗ್ರಂಥವನ್ನು ಬರೆದು, ಇವು ಸಂಸ್ಕೃತದಿಂದ ಹುಟ್ಟಿದುವಲ್ಲ ಎಂದು ಸ್ಥಾಪಿಸಿದನು. ಕನ್ನಡ, ತಮಿಳು, ತೆಲುಗು, ಮಲೆಯಾಳ, ತುಳು, ಇವು ಪಂಚದ್ರಾವಿಡ ಭಾಷೆಗಳೆಂದು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿವೆ. ನಮ್ಮ ಪ್ರಾಚೀನ ಕನ್ನಡ ವ್ಯಾಕರಣಕರ್ತರಿಗೆ ಈ ತೌಲನಿಕ ದೃಷ್ಟಿಯಿರದಿದ್ದರೂ ಕನ್ನಡ ಸಂಸ್ಕೃತದಿಂದ ಭಿನ್ನವಾದ ಭಾಷೆ ಎಂಬ ಅರಿವಿದ್ದಿತು. ಅವರು ಕನ್ನಡ ವ್ಯಾಕರಣವನ್ನು ರಚಿಸುವ ವೇಳೆಗೆ ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳು ಅಸಂಖ್ಯಾತವಾಗಿ ಸೇರಿಹೋಗಿದ್ದುದು ಮಾತ್ರವಲ್ಲದೆ, ಸಂಸ್ಕೃತ ಕಾವ್ಯಗಳ ಮಾದರಿಯನ್ನು ಅನುಸರಿಸಿ ಮೊಮ್ಮೊದಲು ಕಾವ್ಯರಚನೆಮಾಡಿದ ಕವಿಗಳು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ವಿದ್ವಾಂಸರಾಗಿದ್ದುದರಿಂದ ಅವರ ಕನ್ನಡ ಭಾಷೆಯ ಬಳಕೆಯಲ್ಲಿ ಸಂಸ್ಕೃತ ಭಾಷಾ ಮರ್ಯಾದೆಯ (ಕಟ್ಟುಪಾಡಿನ) ಪ್ರಭಾವ ತನ್ನ ಅಚ್ಚೊತ್ತಿತ್ತು. 'ಪ್ರಯೋಗಶರಣಾಃ ವೈಯಾಕರಣಾಃ' (ವೈಯಾಕರಣರು ಪ್ರಯೋಗ ಶರಣರು) ಎಂಬ ಸೂಕ್ತಿಯಂತೆ, ಕನ್ನಡ ವೈಯ್ಯಾಕರಣರು ಕನ್ನಡ ಭಾಷೆಯಮೇಲೆ ಬಿದ್ದಿದ್ದ ಸಂಸ್ಕೃತ ವ್ಯಾಕರಣದ ಪ್ರಭಾವವನ್ನೂ ಕನ್ನಡದ ಸ್ವಂತ ವ್ಯಕ್ತಿತ್ವವನ್ನೂ ಈ ಎರಡು ಭಾಷೆಗಳ ಬೆರಕೆಯಿಂದ ಉದ್ಭವಿಸಿದ್ದ ಕೆಲವು ವಿಶೇಷ ಲಕ್ಷಣಗಳನ್ನೂ ಸಮಸ್ಯೆಗಳನ್ನೂ ಕಾವ್ಯಪ್ರಯೋಗಗಳಲ್ಲಿ ಗುರುತಿಸಿದರು. ಸಂಸ್ಕೃತ ವ್ಯಾಕರಣ ಪದ್ಧತಿಗಳಲ್ಲಿ ಬಲ್ಲಿದರಾಗಿದ್ದ ಅವರು ಸಂಸ್ಕೃತ ವ್ಯಾಕರಣಗಳ ಮಾದರಿಯಲ್ಲಿಯೇ ಕನ್ನಡ ವ್ಯಾಕರಣಗಳನ್ನು ರಚಿಸಿದರು. ಈ ಕಾರಣದಿಂದ ನಮ್ಮ ಕನ್ನಡ ವ್ಯಾಕರಣಗಳ ವಿಷಯ ವರ್ಗೀಕರಣ, ನಿರೂಪಣ ಪದ್ಧತಿ, ಸೂತ್ರಗಳ ರಚನೆ, ಶಾಸ್ತ್ರೀಯ ಪದಗಳ ಬಳಕೆ, ಈ ಮುಂತಾದ ವ್ಯಾಕರಣ ವಿಧಾನಗಳೆಲ್ಲವೂ ಸಂಸ್ಕೃತ ವ್ಯಾಕರಣ ಶಾಸ್ತ್ರಪ್ರಪಂಚದಿಂದ ಆಮದು ಮಾಡಿಕೊಂಡವು. ನಾಗವರ್ಮನ 'ಕರ್ಣಾಟಕ ಭಾಷಾಭೂಷಣ', ಭಟ್ಟಾಕಲಂಕನ 'ಶಬ್ದಾನುಶಾಸನ,' ಇವು ಕನ್ನಡ ಭಾಷೆಯನ್ನು ಕುರಿತು ಸಂಸ್ಕೃತ ಭಾಷೆಯಲ್ಲಿ ಬರೆದ ವ್ಯಾಕರಣಗಳು. ಎಂದಮೇಲೆ, ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತ ವ್ಯಾಕರಣದ ಪ್ರಭಾವ ಎಷ್ಟು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ರೂಪರಚನೆಯಲ್ಲಿ ಕನ್ನಡ ವ್ಯಾಕರಣ ಸಂಸ್ಕೃತವ್ಯಾಕರಣದ ಪಡಿನೆಳಲಾಯಿತು. ಸಂಸ್ಕೃತ ವ್ಯಾಕರಣ - ಅದರಲ್ಲಿ ಪಾಣಿನಿಯ ವ್ಯಾಕರಣ - ಅತ್ಯಂತ ಶಾಸ್ತ್ರೀಯ

ಎಂದು ಪಾಶ್ಚಾತ್ಯ ವಿದ್ವಾಂಸರು ಮುಕ್ತಕಂಠದಿಂದ ಹೊಗಳಿದ್ದಾರೆ. ಹೀಗಿರುವಲ್ಲಿ, ಸಂಸ್ಕೃತ ವ್ಯಾಕರಣ ಪದ್ಧತಿಯ ಅನುಸರಣೆಯಿಂದ ಕನ್ನಡಕ್ಕೆ ಲಾಭವಾಗಿದೆಯೇ ಹೊರತು ನಷ್ಟವೇನೂ ಇಲ್ಲ. ಕನ್ನಡ ವ್ಯಾಕರಣಕಾರರು ಸಂಸ್ಕೃತ ವ್ಯಾಕರಣಗಳನ್ನು ಧಾರಾಳವಾಗಿ ಅವಲಂಬಿಸಿರುವುದರಿಂದ, ಮುಖ್ಯ ಸಂಸ್ಕೃತ ವ್ಯಾಕರಣ ಸಂಪ್ರದಾಯಗಳನ್ನು ಪರಿಚಯಮಾಡಿಕೊಳ್ಳುವುದು ಪ್ರಯೋಜನಕರವೆನಿಸುತ್ತದೆ.

ಸಂಸ್ಕೃತ ವ್ಯಾಕರಣಗಳು : ಸುಮಾರು 13ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಬೋಪದೇವನೆಂಬ ವೈಯಾಕರಣನು ತನ್ನ 'ಮುಗ್ಧಬೋಧ' ಎಂಬ ವ್ಯಾಕರಣದಲ್ಲಿ – ಇಂದ್ರ, ಚಂದ್ರ, ಕಾಶಕೃತ್ಸ್ನ, ಆಪಿಶಾಲಿ, ಶಾಕಟಾಯನ, ಪಾಣಿನಿ, ಅಮರ, ಜೈನೇಂದ್ರ, ಎಂಬ ಎಂಟು ಮಂದಿಯನ್ನು ವ್ಯಾಕರಣಶಾಸ್ತ್ರದ 'ಆದಿಶಾಬ್ದಿಕರು' (ಪೂರ್ವಾಚಾರ್ಯರು) ಎಂದು ಹೇಳಿದ್ದಾನೆ. ಇವರ ಪೈಕಿ ಕಾಶಕೃತ್ಸ್ನ ಮತ್ತು ಆಪಿಶಾಲಿ ಎಂಬವರು ಪಾಣಿನಿಗಿಂತ ಪೂರ್ವದಲ್ಲಿ ಇದ್ದವರು. ಪಾಣಿನಿ ತನ್ನ 'ಅಷ್ಟಾಧ್ಯಾಯಿ'ಯಲ್ಲಿ ತನಗಿಂತ ಹಿಂದಿನ ಒಂಬತ್ತು ಮಂದಿ ವೈಯಾಕರಣರನ್ನು ಹೆಸರಿಸಿದ್ದಾನೆ. ಇವರ ಪೈಕಿ ಶಾಕಟಾಯನ ಒಬ್ಬ. ಶಾಕಟಾಯನ ಎಂಬ ಹೆಸರಿನ ವೈಯಾಕರಣರು ಇಬ್ಬರಿದ್ದಂತೆ ತಿಳಿದುಬರುತ್ತದೆ. ಒಬ್ಬನು ಜೈನ; 'ಶಬ್ದಾನುಶಾಸನ' ಎಂಬ ವ್ಯಾಕರಣದ ಕರ್ತೃ. ಈ ವ್ಯಾಕರಣಕ್ಕೆ ಅವನೇ 'ಅಮೋಘವೃತ್ತಿ' ಎಂಬ ವಿವರಣೆಯನ್ನು ಬರೆದಿದ್ದಾನೆ. ಈ 'ಅಮೋಘವೃತ್ತಿ'ಯ ಮೇಲೆಯೇ 'ಅಮೋಘವೃತ್ತಿ ವಿವರಣ' ಅಥವಾ 'ನ್ಯಾಸ' ಎಂಬ ವ್ಯಾಖ್ಯಾನವನ್ನು ಪ್ರಭಾಚಂದ್ರನೆಂಬವನು ಬರೆದಿದ್ದಾನೆ. ಶಾಕಟಾಯನನು ನೃಪತುಂಗ ಅಮೋಘವರ್ಷನ (ಕ್ರಿ.ಶ. 814-877) ಸಂಸ್ಮರಣಾರ್ಥವಾಗಿ ತನ್ನ ಗ್ರಂಥಕ್ಕೆ ಅಮೋಘವೃತ್ತಿಯೆಂದು ಹೆಸರಿಟ್ಟನೆಂದೂ ಅವನ ಆಸ್ಥಾನದ ವಿದ್ವನ್ಮಣಿಗಳಲ್ಲಿ ಒಬ್ಬನೆಂದೂ ಕವಿರಾಜಮಾರ್ಗವನ್ನು ಮೊತ್ತಮೊದಲು ಸಂಪಾದನೆ ಮಾಡಿ ಪ್ರಕಟಿಸಿದ ಕೆ. ಬಿ. ಪಾಠಕರ ಅಭಿಪ್ರಾಯ. ಆರ್. ನರಸಿಂಹಾಚಾರ್ಯರು ಈ ಅಭಿಪ್ರಾಯವನ್ನು ಒಪ್ಪಿಲ್ಲ; ಇನ್ನೂ ಪೂರ್ವದವನು ಎನ್ನುತ್ತಾರೆ. ಅದು ಹೇಗಿದ್ದರೂ, ಸಂಸ್ಕೃತದಲ್ಲಿ ಶಾಕಟಾಯನನದ್ದೇ ಒಂದು ವ್ಯಾಕರಣ ಸಂಪ್ರದಾಯವುಂಟು; ಕನ್ನಡ ವ್ಯಾಕರಣಕರ್ತರ ಮೇಲೆ ಇವನ ವ್ಯಾಕರಣದ ಹಾಗೂ 'ನ್ಯಾಸ'ದ ಪ್ರಭಾವವೂ ಬಿದ್ದಿದೆ. ಉದಾಹರಣೆಗೆ,

ಕೇಶಿರಾಜನ 'ಶಬ್ದಮಣಿದರ್ಪಣ'ದಲ್ಲಿ ವ್ಯಾಕರಣದ ಫಲವನ್ನು ಕುರಿತ ಪದ್ಯ ಪ್ರಭಾಚಂದ್ರನ 'ನ್ಯಾಸ'ದ ಶ್ಲೋಕದ ಭಾಷಾಂತರ :

'ನ್ಯಾಸ'ದ ಶ್ಲೋಕ :

ವ್ಯಾಕರಣಾತ್ ಪದಸಿದ್ಧಿಃ ಪದಸಿದ್ಧೇರರ್ಥನಿರ್ಣಯೋ ಭವತಿ ।
ಅರ್ಥಾತ್ ತತ್ತ್ವಜ್ಞಾನಂ ತತ್ತ್ವಜ್ಞಾನಾತ್ ಪರಂ ಶ್ರೇಯಃ ॥

'ದರ್ಪಣ'ದ ಪದ್ಯ :

ವ್ಯಾಕರಣದಿಂದೆ ಪದಂ, ಆ
ವ್ಯಾಕರಣದಪದದಿಂ ಅರ್ಥಂ, ಅರ್ಥದೆ ತತ್ತ್ವಾ-
ಲೋಕಂ, ತತ್ತ್ವಾಲೋಕದಿಂ
ಆಕಾಂಕ್ಷಿಪ ಮುಕ್ತಿಯಕ್ಕುಂ ; ಅದೆ ಬುಧರ್ಗೆ ಫಲಂ.

ಪ್ರಭಾವಶಾಲಿಯಾಗಿದ್ದ ಇನ್ನೊಂದು ವ್ಯಾಕರಣ ಸಂಪ್ರದಾಯ ಶರ್ವವರ್ಮನ 'ಕಾತಂತ್ರ' ವ್ಯಾಕರಣದಿಂದ ಮೊದಲಾಯಿತು. ಇದಕ್ಕೆ 'ಕಲಾಪ ವ್ಯಾಕರಣ' ಮತ್ತು 'ಕುಮಾರ ವ್ಯಾಕರಣ' ಎಂಬ ಹೆಸರುಗಳೂ ಇವೆ. ಈ ವೈಯಾಕರಣ ಕ್ರಿ. ಶ. 5 ನೆಯ ಶತಮಾನಕ್ಕೂ ಪೂರ್ವದವನು. ಕಾವ್ಯಾವಲೋಕನದಲ್ಲಿನ 'ಶಬ್ದಸ್ಮೃತಿ' ಎಂಬ ವ್ಯಾಕರಣಾಧ್ಯಾಯವನ್ನೂ 'ಭಾಷಾಭೂಷಣ'ವನ್ನೂ ಬರೆದ ಎರಡನೆಯ ನಾಗವರ್ಮನಿಗೆ 'ಅಭಿನವಶರ್ವವರ್ಮ' ಎಂಬ ಬಿರುದಿದ್ದಿತು. ಕೇಶಿರಾಜನ ತಾಯಿಯ ತಂದೆಯಾದ ಕವಿ ಸುಮನೋಬಾಣನೂ 'ಇದಾನೀಂತನ'(=ಈಗಿನ) ಶರ್ವವರ್ಮ ಎಂಬ ಬಿರುದನ್ನು ಹೊಂದಿದ್ದನೆಂದು ಜನ್ನನ ಒಂದು ಪದ್ಯದಿಂದ ತಿಳಿದುಬರುತ್ತದೆ.* ಅಲ್ಲದೆ, ಜನ್ನನು ಇನ್ನೊಂದು ಪದ್ಯದಲ್ಲಿ–'ರನ್ನಂ ವೈಯಾಕರಣಂ । ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ', 'ನವವೈಯಾಕರಣಂ' ಎಂದೂ ತನ್ನನ್ನು ಕರೆದುಕೊಂಡಿದ್ದಾನೆ. ಜನ್ನನ ಗುರುವೂ ವೈಯಾಕರಣ ಕೇಶಿರಾಜನ ಮಾತಾಮಹನೂ ಆದ ಸುಮನೋಬಾಣನು ವೈಯಾಕರಣನಾಗಿದ್ದು 'ಇದಾನೀಂತನ ಶರ್ವವರ್ಮ' ಎಂದು ಪ್ರಸಿದ್ಧನಾಗಿದ್ದರೆ ಆಶ್ಚರ್ಯವಿಲ್ಲ. ಇದರಿಂದ, ಶರ್ವವರ್ಮನ 'ಕಾತಂತ್ರ' ವ್ಯಾಕರಣ ಕರ್ನಾಟಕದಲ್ಲಿ ತುಂಬ ಪ್ರಚುರವಾಗಿದ್ದು, ಕನ್ನಡ ಕವಿಗಳಮೇಲೆ ತುಂಬ ಪ್ರಭಾವ ಬೀರಿದ್ದಿರಬೇಕು ಎಂದು ತೋರಿಬರು

---

* 'ಇದಾನೀಂತನ ಶರ್ವವರ್ಮ' ಎಂಬ ಬಿರುದೂ ನಾಗವರ್ಮನದೇ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಸಂಬಂಧದ ಚರ್ಚೆ ಇಲ್ಲಿ ಬೇಕಿಲ್ಲ.

ತ್ತದೆ. ಕೇಶಿರಾಜನ ಶಬ್ದಮಣಿದರ್ಪಣದ ಮೇಲಂತೂ 'ಕಾತಂತ್ರ'ದ ಪ್ರಭಾವ ವಿಶೇಷವಾಗಿದೆ. ಶರ್ವವರ್ಮನ ಸಂಬಂಧವಾಗಿ ಸ್ವಾರಸ್ಯವಾದ ಪ್ರವಾದಗಳಿವೆ. ಒಂದೆರಡರಲ್ಲಿ ಅವನು ಕುಮಾರಸ್ವಾಮಿಯ ಆರಾಧಕನೆಂದು ತಿಳಿಯಬರುವುದ ರಿಂದ ಶರ್ವವರ್ಮನು ವೈದಿಕಮತಾನುಯಾಯಿ ಎಂದು ತೋರುತ್ತದೆ.*

ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಪ್ರಭಾವ ಬೀರಿದ್ದ ಇನ್ನೊಂದು ಪ್ರಸಿದ್ಧ ವ್ಯಾಕರಣ ಸಂಪ್ರದಾಯ 'ಜೈನೇಂದ್ರ ವ್ಯಾಕರಣ'ಕ್ಕೆ ಸೇರಿದ್ದು. ಇದರ ಕರ್ತೃ ಪೂಜ್ಯಪಾದ ಎಂದು ಪ್ರಸಿದ್ಧನಾಗಿದ್ದ ದೇವನಂದಿ. "ಈತನಿಗೆ ಮೊದಲು ದೇವನಂದಿ ಎಂಬ ಹೆಸರು ಇದ್ದಿತು.ತರುವಾಯ ಬುದ್ಧಿ ಮಾಹಾತ್ಮ್ಯ ದಿಂದ ಜಿನೇಂದ್ರಬುದ್ಧಿ ಎಂಬ ನಾಮಧೇಯವು ಉಂಟಾಯಿತು. ಬಳಿಕ ವನ ದೇವತೆಗಳಿಂದ ಇವನ ಪಾದಗಳು ಪೂಜಿಸಲ್ಪಟ್ಟುದರಿಂದ ಪೂಜ್ಯಪಾದ ಎಂಬ ಹೆಸರು ಬಂದಿತು. ಈತನು ವೈದ್ಯಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ...ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿದ್ದಾನೆಯೋ ಇಲ್ಲವೋ ತಿಳಿಯದು."[1] ಚಾವುಂಡರಾಯನು (ಕ್ರಿ. ಶ. 978) ಈತನನ್ನು–"ಸುಕವಿಪ್ರಣುತರ್, ವ್ಯಾಕರಣ ಕರ್ತೃಗಳ್, ಗಗನ ಗಮನ ಸಾಮರ್ಥ್ಯರ್, ತಾರ್ಕಿಕ ತಿಳಕರ್, ಎಂದು ಪೊಗಳ್ವುದು ಸಕಲ ಜನಂ ಪೂಜ್ಯಪಾದಭಟ್ಟಾರಕರಂ" ಎಂದೂ, ವೃತ್ತವಿಲಾಸನೆಂಬ ಕವಿ (ಸು. 1160) – "ಭರದಿಂ ಜೈನೇಂದ್ರಮಂ ಭಾಸುರ ಮೆನಲೊರೆದಂ, ಪಾಣಿನೀಯಕ್ಕೆ ಟೀಕಂ ಬರೆದಂ" ಎಂದೂ ಹೊಗಳಿದ್ದಾರೆ. ಈ ಟೀಕೆಗೆ 'ಶಬ್ದಾವತಾರ' ಎಂಬ ಹೆಸರಿದ್ದಂತೆ ತಿಳಿದುಬರುತ್ತದೆ. ಪೂಜ್ಯ ಪಾದನ ಕಾಲ ಕ್ರಿ. ಶ. ಸು. 600 ಇರಬಹುದೆಂದು ಕವಿಚರಿತೆಕಾರರು ಹೇಳುತ್ತಾರೆ.

ಅತ್ಯಂತ ಪ್ರಖ್ಯಾತವಾದ ಪ್ರಾಚೀನ ಸಂಸ್ಕೃತ ವ್ಯಾಕರಣ ಪಾಣಿನಿಯ ಅಷ್ಟಾಧ್ಯಾಯಿ. ಇದು ರಚಿತವಾದಂದಿನಿಂದ ತೊಡಗಿ ಇಂದಿನ ತನಕ ಇದು ಸಂಸ್ಕೃತ ವಿದ್ವತ್ ಪ್ರಪಂಚದಲ್ಲಿ ತನ್ನ ಪ್ರಭುತ್ವವನ್ನು ಇನ್ನೊಂದು ವ್ಯಾಕರಣ ಸಂಪ್ರದಾಯಕ್ಕೆ ಬಿಟ್ಟುಕೊಟ್ಟಿಲ್ಲ. ಈ ಕೃತಿಯಷ್ಟೇ ಪ್ರಸಿದ್ಧವಾಗಿವೆ, ಇದರ ಮೇಲೆ ರಚಿತವಾದ ವಾರ್ತಿಕಗಳು, ಭಾಷ್ಯಗಳು, ವ್ಯಾಖ್ಯಾನಗಳು. ಇವುಗಳಲ್ಲಿ ಮುಖ್ಯವಾದುವು : ಕಾತ್ಯಾಯನನ 'ವಾರ್ತಿಕ'ಗಳು, ಪತಂಜಲಿಯ 'ಮಹಾ

---

* ಕಾತಂತ್ರ ವ್ಯಾಕರಣ ಜೈನವ್ಯಾಕರಣವೆಂಬ ಪ್ರತೀತಿಯೂ ಇದೆ. ದಂತಕಥೆಗಳ ಆಧಾರದ ಮೇಲೆ ನಿಶ್ಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ.

ಭಾಷ್ಯ', ಭರ್ತೃಹರಿಯ 'ವಾಕ್ಯಪದೀಯ', ಜಯಾದಿತ್ಯ ಮತ್ತು ವಾಮನರ 'ಕಾಶಿಕಾ' ವೃತ್ತಿ, ಮುಂತಾದುವು. ಪಾಣಿನಿಯ 'ಅಷ್ಟಾಧ್ಯಾಯಿ'ಯ ವ್ಯಾಸಂಗಕ್ಕೆ ಪೂರ್ವಭಾವಿಯಾಗಿ ಇಂದಿಗೂ ಅಧ್ಯಯನ ಮಾಡುವ ವ್ಯಾಕರಣ ಗ್ರಂಥವೆಂದರೆ ಭಟ್ಟೋಜಿಯ 'ಸಿದ್ಧಾಂತ ಕೌಮುದಿ'. ಪಾಣಿನಿಯ ಕಾಲ ಅನಿಶ್ಚಿತ; ಕ್ರಿಸ್ತಪೂರ್ವ 6ನೆಯ ಶತಮಾನ 4ನೆಯ ಶತಮಾನಗಳ ನಡುವಣ ಕಾಲ ಎಂದು ವಿದ್ವಾಂಸರ ಊಹೆ.*

ಕನ್ನಡ ವ್ಯಾಕರಣಗಳು

ಕಾವ್ಯಾವಲೋಕನದಲ್ಲಿ ಶಂಖವರ್ಮ, ಗುಣವರ್ಮ, ನಾಗವರ್ಮರ 'ಅಧ್ವಾನ'ಗಳ(=ಮಾರ್ಗಗಳ) ಮಾತು ಬಂದಿದೆ. ಇವು ಕಾವ್ಯಮಾರ್ಗಗಳೋ ವ್ಯಾಕರಣ ಮಾರ್ಗಗಳೋ ಆಗಿರಬಹುದು. ನಿಶ್ಚಿತವಾಗಿ ಹೇಳಲು ಆಧಾರ ಗಳಿಲ್ಲ.

ಕವಿರಾಜಮಾರ್ಗ : ಕವಿರಾಜಮಾರ್ಗದಲ್ಲಿ ಗದ್ಯ ಗ್ರಂಥಕಾರರ ಹೆಸರು ಗಳನ್ನು ಹೇಳುವಾಗ ದುರ್ವಿನೀತನ ಹೆಸರನ್ನೂ ಹೇಳಿದೆ. ಕವಿಚರಿತೆಕಾರರು ತಿಳಿಸುವ ಪ್ರಕಾರ, ಇವನು ಗಂಗವಂಶದ ದೊರೆ; ಕೆಲವು ಶಾಸನಗಳ ಪ್ರಕಾರ, ಇವನಿಗೆ 'ಶಬ್ದಾವತಾರಕಾರ' ಎಂಬ ವಿಶೇಷಣವಿದ್ದಂತೆ ತಿಳಿದುಬರುತ್ತದೆ; ಆದ್ದರಿಂದ ಇವನು ಶಬ್ದಾವತಾರವನ್ನು ಬರೆದಂತೆ ಊಹಿಸಬಹುದು. ಇದು ವ್ಯಾಕರಣ ಗ್ರಂಥವೇ ಆಗಿರಬೇಕು. ಆದರೆ ಕನ್ನಡದ್ದೋ ಸಂಸ್ಕೃತದ್ದೋ ಹೇಳಲು ಸಾಧ್ಯವಿಲ್ಲ. ಕವಿರಾಜಮಾರ್ಗವು ಅಲಂಕಾರಶಾಸ್ತ್ರ ಗ್ರಂಥವಾದರೂ ದೋಷ-ಅದೋಷಗಳನ್ನು ವರ್ಣಿಸುವ ಇದರ ಮೊದಲ ಪರಿಚ್ಛೇದದಲ್ಲಿ ಅನೇಕ ವ್ಯಾಕರಣಾಂಶಗಳನ್ನು ಪ್ರಸ್ತಾಪ ಮಾಡಲಾಗಿದೆ. ಕಾವ್ಯವು ಗುಣ ಗಳಿಂದ ಕೂಡಿರಬೇಕಲ್ಲದೆ ಎಲ್ಲ ದೃಷ್ಟಿಗಳಿಂದಲೂ ದೋಷರಹಿತವಾಗಿರಬೇಕು ಎಂಬುದು ಎಲ್ಲ ಕಾವ್ಯಲಕ್ಷಣ ಶಾಸ್ತ್ರಜ್ಞರ ಅಭಿಪ್ರಾಯ. ಕಾವ್ಯದಲ್ಲಿ ವ್ಯಾಕರಣ ದೋಷಗಳೂ ಬರಕೂಡದು. ಆದ್ದರಿಂದ, ವ್ಯಾಕರಣಕ್ಕೂ ಕಾವ್ಯ

---

* ಸಂಸ್ಕೃತ ವ್ಯಾಕರಣಗಳ ಸಂಬಂಧವಾಗಿ ವಿಷಯ ಸಂಗ್ರಹಕ್ಕೆ ಆರ್. ನರಸಿಂಹಾ ಚಾರ್ಯರು ಸಂಪಾದನೆ ಮಾಡಿ ಪ್ರಕಟಿಸಿರುವ ಭಟ್ಟಾಕಲಂಕನ 'ಕರ್ಣಾಟ ಶಬ್ದಾನುಶಾಸನ'ಕ್ಕೆ (1923) ಬರೆದಿರುವ ವಿಚಾರಪೂರ್ಣವಾದ ಇಂಗ್ಲಿಷು ಭಾಷೆಯ ಪ್ರಸ್ತಾವನೆಗೆ ಋಣಿಯಾಗಿದ್ದೇನೆ.

ಮೀಮಾಂಸೆಗೂ ಒಂದು ಸಂಬಂಧವಿದೆ. ವ್ಯಾಕರಣ ದೋಷಗಳೂ ಕಾವ್ಯ ದೋಷಗಳೇ ಆಗುತ್ತವೆ. ಕನ್ನಡದಲ್ಲಿ ಕಾವ್ಯರಚನೆ ಮಾಡುವಾಗ ಯಾವ ಬಗೆಯ ದೋಷಗಳು ಉಂಟಾಗಬಹುದು ಎಂಬುವನ್ನು ಕವಿರಾಜಮಾರ್ಗದಲ್ಲಿ ತಕ್ಕಮಟ್ಟಿಗೆ ವಿಸ್ತಾರವಾಗಿಯೇ ಹೇಳಿದೆ. ಕನ್ನಡದ ದೃಷ್ಟಿಯಿಂದ ವಿಚಾರ ಮಾಡಿ ಸ್ವಂತ ಉದಾಹರಣೆಗಳನ್ನು ಕೊಟ್ಟು ವಿಷಯವನ್ನು ವಿವರಿಸಿರುವುದರಲ್ಲಿ ಕವಿರಾಜಮಾರ್ಗದ ಕರ್ತೃ ಶ್ರೀವಿಜಯನ ಸ್ವತಂತ್ರವಾದ ವಿಚಾರಸರಣಿ ಕಂಡು ಬರುತ್ತದೆ. ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ತಾನು ಪ್ರಮಾಣವೆಂದು ಅಂಗೀಕರಿಸಿರುವ ಕವಿಗಳ 'ಸುಮಾರ್ಗ'ದಲ್ಲಿ ಶ್ರೀವಿಜಯನನ್ನೂ ಹೆಸರಿಸಿರುವುದು ಮಾತ್ರವಲ್ಲದೆ, ಕವಿರಾಜಮಾರ್ಗದ ಪದ್ಯಗಳನ್ನು ಉದಾಹರಿಸಿದ್ದಾನೆ. ಕವಿರಾಜಮಾರ್ಗದಲ್ಲಿ ಬಂದಿರುವ ವ್ಯಾಕರಣ ವಿಚಾರಗಳ ಸಂಬಂಧದಲ್ಲಿ ಸೂತ್ರಗಳನ್ನು ರಚಿಸಿಲ್ಲದಿದ್ದರೂ, ವ್ಯಾಕರಣ ದೋಷ-ಅದೋಷಗಳ ಸ್ವರೂಪವನ್ನು ಸ್ಪಷ್ಟವಾಗಿ ಪರಿಚಯ ಮಾಡಿಕೊಟ್ಟಿರುವುದರಿಂದ, ಆ ಸಂಬಂಧವಾದ ವ್ಯಾಕರಣನಿಯಮಗಳನ್ನು ನಾವು ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಕವಿರಾಜಮಾರ್ಗದಲ್ಲಿ ವ್ಯಾಕರಣ ಸೂತ್ರಗಳಿಲ್ಲದಿದ್ದರೂ ಮುಂದೆ ಬಂದ ವ್ಯಾಕರಣ ಕರ್ತೃರಿಗೆ ಅನೇಕ ವಿಚಾರಗಳಲ್ಲಿ ಮಾರ್ಗದರ್ಶನ ಮಾಡಿದ ಗೌರವದ ಸ್ಥಾನ ಕವಿರಾಜಮಾರ್ಗಕ್ಕಿದೆ. ಇದರಲ್ಲಿ ನಿರೂಪಣೆಗೊಂಡ ಮುಖ್ಯ ವ್ಯಾಕರಣಾಂಶಗಳು ಇವು :

ಪ್ರಥಮ ಪರಿಚ್ಛೇದ : (1) ಆಗಿನ ಕಾಲದ ಹಳಗನ್ನಡದ ಅಪಪ್ರಯೋಗ ; (2) ಸಮಸಂಸ್ಕೃತ ಪದಗಳು, ಸಂಸ್ಕೃತದ ಅವ್ಯಯಗಳು – ಕನ್ನಡದಲ್ಲಿ ಇವುಗಳ ಪ್ರಯೋಗದ ಬಗೆಗೆ ವಿಧಿ – ನಿಷೇಧಗಳು ; (3) ಸಮಾಸಗಳಲ್ಲಿ ಸಂಸ್ಕೃತ – ಕನ್ನಡ ಪದಗಳನ್ನು ಕೂಡಿಸಿ ಸಮಾಸ ಮಾಡಕೂಡದು (ಅರಿಸಮಾಸ ದೋಷ) ; (4) ಕೆಟ್ಟ ಅರ್ಥ ಬರುವಂತೆ, ಕೇಳುವವಕ್ಕೆ ಹಿತವಾಗಿಲ್ಲದಿರುವಂತೆ, ಪದಗಳನ್ನು ಕೂಡಿಸಿ ಬರೆದರೆ ಆಗುವ 'ಶ್ರುತದುಷ್ಟ' ಮತ್ತು 'ಶ್ರುತಿಕಷ್ಟ' ಎಂಬ ದೋಷಗಳ ವಿಚಾರ ; (5) ಪುನರುಕ್ತ ದೋಷ ; (6) ಯಥಾಸಂಖ್ಯ ದೋಷ ; (7) ವ್ಯವಹಿತ ದೋಷ (ಪರಸ್ಪರ ಸಂಬಂಧವುಳ್ಳ ಪದಗಳನ್ನು ಅನ್ವಯವಾಗದಂತೆ ಬಿಡಿಸಿ ಪ್ರಯೋಗಿಸುವುದು) ; (8) ವಿಸಂಧಿ ದೋಷ (ಸಂಧಿ ಮಾಡಬೇಕಾದ ಕಡೆ ಮಾಡದಿರುವುದು) ; (9) ವಿರೂಪ ಸಂಧಿ ; (10) ನೇಯಾರ್ಥ ದೋಷ ; (11) ಕಾರಕ ದೋಷ ; (12) ವಚನ ದೋಷ ; (13) ಸಮುಚ್ಚಯ ದೋಷ ; (14) ವಿಕಲ್ಪ ದೋಷ ; (15) ಅವಧಾರಣಾ ದೋಷ ; (16) ವಿಶಂಕಾ ದೋಷ.

ದ್ವಿತೀಯ ಪರಿಚ್ಛೇದ ; (1) ಕ್ರಿಯಾವಿಶೇಷಣದ ಪ್ರಯೋಗದಲ್ಲಿ ದೋಷಗಳು ; (2) ಅವ್ಯಯಗಳ ಪ್ರಯೋಗದಲ್ಲಿ ದೋಷ ; (3) ದ್ವಿತೀಯಾ ಷಷ್ಠಿ ವಿಭಕ್ತಿಗಳಲ್ಲಿ 'ಅ' ಕಾರ ದೀರ್ಘೀಕರಣ ವಿಚಾರ ; ಸಂಬೋಧನಾ ವಿಭಕ್ತಿಯ ದೀರ್ಘೀಕರಣ ; (4) ಬಹು ವಿಶೇಷಣಗಳ ಪ್ರಯೋಗ ವಿಚಾರ ; (5) ದಕ್ಷಿಣೋತ್ತರ ಮಾರ್ಗಗಳಲ್ಲಿ ಕೆಲವು ಕ್ರಿಯಾ ಪದಗಳ ವಿಚಾರ.

ಒಂದು ಉದಾಹರಣೆಯೊಂದಿಗೆ ಈ ಪ್ರಕರಣವನ್ನು ಮುಗಿಸ ಬಹುದು :

ಅರಿಸಮಾಸ ದೋಷ ವಿಚಾರ :

ತರಿಸಂದಾ ಸಕ್ಕದಮುಮ
ನರಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುರಿತು ಬೆರಸಿದೊಡೆ ವಿರಸಂ
ಮರುಗುವ ಪಾಲ್ಗಳಿಯ ಪಸಿಗಳಂ ಬೆರಸಿದವೋಲ್

[ಸಂಸ್ಕೃತ ಮತ್ತು ಕನ್ನಡ ಪದಗಳು ಯಾವುವು ಎಂಬ ಬಗೆಗೆ ನಿಶ್ಚಿತವಾದ ಜ್ಞಾನ ವಿಲ್ಲದೆ ಅವುಗಳನ್ನು ಸಮಸ್ತ ಪದಗಳಲ್ಲಿ ಬೆರಸಿದರೆ ಕುಡಿಯುವ ಹಾಲಿಗೆ ಮಜ್ಜಿಗೆಯ ಹಸಿಗಳನ್ನು ಬೆರೆಸಿದ ಹಾಗೆ ವಿರಸವಾಗುತ್ತದೆ. ಹಾಲಿಗೆ ಹೆಪ್ಪು ಹಾಕಬೇಕಾದರೆ ಕುದಿಯುವ ಹಾಲು ಆರಿ ತುಸು ಬಿಸಿಯಾಗಿರುವಾಗ ಮಜ್ಜಿಗೆಯನ್ನು ಬೆರಸಿದರೆ ಗಟ್ಟಿ ಮೊಸರಾಗುತ್ತದೆ. ಕುದಿಯುವಾಗಲೇ ಬೆರಸಿದರೆ ಒಂದಕ್ಕೊಂದು ಹೊಂದದೆ ಹಾಲು ಒಡೆದು ಹೋಗುತ್ತದೆ. ಹಾಗೆಯೆ, ಸಂಸ್ಕೃತ ಕನ್ನಡ ಪದಗಳನ್ನು ಕೂಡಿಸಿ ಒಂದು ಪದವಾಗಿ ಮಾಡ ಹೊರಟರೆ, ಸಾಮರಸ್ಯ ಸಿದ್ಧಿಸುವುದಿಲ್ಲ. ಸಮಾಸ ಪದ ವಿಲಕ್ಷಣವಾಗಿ ಕಾಣುತ್ತದೆ.]

ಅರಿಸಮಾಸ ದೋಷಕ್ಕೆ ಉದಾಹರಣೆ :

ಅರಸುಕುಮಾರನನ್ ಆಯತ
ತರ ಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ
ಪರಿಗತನಗೆಯಿಂದಿರ್ದಂ
ಗುರುನಾಣ್‌ಭರದಿಂದಂ ಎರಗಿ ಮುಖತಾವರೆಯಂ

ಈ ಪದ್ಯದಲ್ಲಿ ದೋಷವನ್ನು ಕಳೆದು ಸರಿಪಡಿಸಿದ ಪದ್ಯ :

ನರಪತಿತನಯನನ್, ಆಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನೆ ಆಂ
ಪರಿಗತಹಾಸ್ಯದೊಳ್ ಇರ್ದಂ
ಗುರುಲಜ್ಜಾಭರದಿಂ ಎರಗಿ ಮುಖ ಸರಸಿಜಮಂ

ಕಾವ್ಯರಚನೆಗೆ ಸಂಬಂಧಪಟ್ಟಂತೆ ವ್ಯಾಕರಣ ವಿಚಾರದಲ್ಲಿ ಅನೇಕ ಉಪಯುಕ್ತ ಸಲಹೆ ಸೂಚನೆಗಳನ್ನು ಪ್ರಾಯೋಗಿಕವಾಗಿ ಮುಂದಿಟ್ಟಿರುವ ಕವಿರಾಜಮಾರ್ಗದ ಈ ವಿಭಾಗವನ್ನು 'ಕನ್ನಡ ಪ್ರಥಮ ಪ್ರಾಯೋಗಿಕ ವ್ಯಾಕರಣ' (Practical Grammar) ಎಂದು ಕರೆದರೆ ತಪ್ಪಾಗದು.

ಶಬ್ದಸ್ಮೃತಿ ಮತ್ತು ಭಾಷಾಭೂಷಣ

ಇವೆರಡು ವ್ಯಾಕರಣಗಳೂ ಎರಡನೆಯ ನಾಗವರ್ಮನಿಂದ ರಚಿತವಾಗಿವೆ. 'ಕಾವ್ಯಾವಲೋಕನ' ವನ್ನು ಕುರಿತು ಹೇಳುವಾಗ ಕವಿಯ ವಿಚಾರವಾಗಿ ಈಗಾಗಲೇ ತಿಳಿಸಿದೆ. ಅವನ 'ವರ್ಧಮಾನ ಪುರಾಣ' ದ (ಕ್ರಿ.ಶ. 1042) ಕೆಲವು ಪದ್ಯಗಳು 'ಕಾವ್ಯಾವಲೋಕನ' ದಲ್ಲಿಯೂ ಸೇರಿರುವುದರಿಂದ ಈ ಕೃತಿಯ ಮೊದಲನೆಯ ಅಧ್ಯಾಯವಾಗಿ ರಚಿತವಾಗಿರುವ 'ಶಬ್ದಸ್ಮೃತಿ' ಈಚಿನ ರಚನೆ ಎಂಬುದು ಸ್ಪಷ್ಟ; 'ಶಬ್ದಸ್ಮೃತಿ' ಯ ವಿಷಯವನ್ನೇ ವಿಸ್ತರಿಸಿ, ನಾಗವರ್ಮ 'ಕರ್ಣಾಟಕ ಭಾಷಾಭೂಷಣ' ವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾನೆ. ನಾಗವರ್ಮನು ತನ್ನನ್ನು 'ಅಭಿನವಶರ್ವವರ್ಮ' ಎಂದು ಕರೆದುಕೊಂಡಿರುವನಷ್ಟೆ; ಈ ಎರಡೂ ಗ್ರಂಥಗಳ ರಚನೆಯಲ್ಲಿ ಶರ್ವವರ್ಮನ 'ಕಾತಂತ್ರ' ವ್ಯಾಕರಣವನ್ನು ಅನುಸರಿಸಿದ್ದಾನೆ. ಕಾವ್ಯಮೀಮಾಂಸೆಯನ್ನು ವಿವರಿಸುವ ಗ್ರಂಥವಲ್ಲಿ ವ್ಯಾಕರಣ ವಿಚಾರವನ್ನು ಸೇರಿಸುವ ವಿಷಯದಲ್ಲಿ ಪೂರ್ವ ಸಂಪ್ರದಾಯವನ್ನೇ ಅನುಸರಿಸಿದ್ದಾನೆ. ಈ ವಿಚಾರದಲ್ಲಿ ಕವಿರಾಜಮಾರ್ಗದಿಂದ ಸ್ಫೂರ್ತಿಪಡೆದಿದ್ದರೂ ಇರಬಹುದು. ಆದರೆ, ಕೇಶಿರಾಜನೂ ಭಟ್ಟಾಕಲಂಕನೂ ಕವಿರಾಜಮಾರ್ಗದಿಂದ ಉದಾಹರಣೆಗಳನ್ನು ಎತ್ತಿಕೊಟ್ಟಿರುವಲ್ಲಿ, ನಾಗವರ್ಮನು ಅದರಿಂದ ಉದಾಹರಣೆಗಳನ್ನು ಕೊಡದಿರುವ ಮಾತು ಹಾಗಿರಲಿ, ಅದನ್ನು ನೋಡಿರುವ ಅಥವಾ ಅದನ್ನು ತನ್ನ ಗ್ರಂಥ ರಚನೆಗಾಗಿ ಬಳಸಿಕೊಂಡಿರುವ ಬಗೆಗೆ ಯಾವ ಸುಳಿವೂ ಇಲ್ಲ. ಹೀಗಿರುವುದರಿಂದ, 'ಶಬ್ದಸ್ಮೃತಿ' ಕಾವ್ಯಾವಲೋಕನದ ಪ್ರಥಮಾಧ್ಯಾಯವಾದರೂ ಸ್ವಯಂಪೂರ್ಣವಾಗಿರುವುದರಿಂದ, 'ಪ್ರಥಮ ಸ್ವತಂತ್ರ ಕನ್ನಡ ವ್ಯಾಕರಣ' ಎಂಬ ಗೌರವಕ್ಕೆ ಪಾತ್ರವಾಗುತ್ತದೆ.

'ಶಬ್ದಸ್ಮೃತಿ'ಯಲ್ಲಿ ಐದು 'ಪ್ರಕರಣ' ಗಳಿವೆ: (i) ಸಂಧಿ ಪ್ರಕರಣ, (ii) ನಾಮ ಪ್ರಕರಣ, (iii) ಸಮಾಸ ಪ್ರಕರಣ, (iv) ತದ್ಧಿತ ಪ್ರಕರಣ,

(v) ಆಖ್ಯಾತ ಪ್ರಕರಣ. ಈ ಪ್ರಕರಣ ವಿಭಜನೆಯನ್ನು ನಾಗವರ್ಮನೇ ಹೀಗೆ ವರ್ಣಿಸಿದ್ದಾನೆ :

> ಪರಮಾರ್ಥಂ ಪೇಳೆಪಟ್ಟಿರ್ದ ಅಧಿಕರಣಂ ಇವಿಂತಯ್ದರೊಳ್ ಶಬ್ದಸಿದ್ಧಿ
> ಸ್ಮರಣಕಾರ್ಯಕ್ಕೆ ಉದಾತ್ತಪ್ರಕರಣಗಣನಾವೃತ್ತಿಯಿಂ ಪೊರ್ದಿ ನಿಲ್ಕುಂ,
> ತರದಿಂದಂ ಸಂಧಿ, ನಾಮಸ್ಥಿತಿ, ವಿತತಸಮಾಸಕ್ರಮಂ. ತದ್ಧಿತಂ ವಿ–
> ಸ್ತರ ರೂಪಾಖ್ಯಾತಂ ಆಖ್ಯಾತಮುಂ, ಎನೆ ದೊರೆವೆತ್ತಯ್ದುಂ ಅಧ್ಯಾಯವರ್ಗಂ.

‘ಶಬ್ದಸ್ಮೃತಿ’ ಯಲ್ಲಿ ಶಬ್ದಸಿದ್ಧಿ ಅಥವಾ ಪದಸಿದ್ಧಿಯನ್ನು ವಿವರಿಸುವುದೇ ಉದ್ದೇಶವೆಂಬುದು ಮೇಲಿನ ಪದ್ಯದಿಂದ ಗೊತ್ತಾಗುತ್ತದೆ. ಸಾಂಪ್ರದಾಯಿಕವಾದ ವರ್ಣನಾತ್ಮಕ ವ್ಯಾಕರಣದಲ್ಲಿ ಸಾಧಾರಣವಾಗಿ ವರ್ಣನಿರ್ಣಯ ಅಥವಾ ವರ್ಣ ಸಮಾನ್ನಾಯ (=ಅಕ್ಷರಮಾಲೆ, alphabet), ಪದಸಿದ್ಧಿ - ಇವು ನಿರೂಪಿತವಾಗಿರುವ ವಿಷಯಗಳು. ವಾಕ್ಯಸಿದ್ಧಿ ಅಥವಾ ವಾಕ್ಯರಚನಾ ವಿಧಾನ ವಿವರಣೆಗೆ (syntax) ಪ್ರಾಧಾನ್ಯವಿಲ್ಲ. ವಿಭಕ್ತಿ ವ್ಯವಸ್ಥೆಯ ನಿರೂಪಣೆ ಕೆಲಮಟ್ಟಿಗೆ ವಾಕ್ಯಸಿದ್ಧಿಗೆ ಸಂಬಂಧಪಟ್ಟಿರುತ್ತದೆ. ಈ ಮೂಲಭೂತ ಸೂತ್ರ ನಮ್ಮ ಪ್ರಾಚೀನ ಕನ್ನಡ ವ್ಯಾಕರಣಗಳಿಗೆಲ್ಲಕ್ಕೂ ಸಾಧಾರಣವಾಗಿ ಅನ್ವಯಿಸುತ್ತದೆ. ನಮ್ಮ ವ್ಯಾಕರಣಕಾರರು ಕೊಡುವ ಉದಾಹರಣೆಗಳೆಲ್ಲವೂ ಸಾಧಾರಣವಾಗಿ ಪದ್ಯಕಾವ್ಯಗಳಿಂದ ಆಯ್ದುಕೊಂಡವು. ಅವುಗಳಿಂದ ವಾಕ್ಯಸಿದ್ಧಿಯ ಸ್ವರೂಪವನ್ನು ತಕ್ಕಮಟ್ಟಿಗೆ ಅರಿತುಕೊಳ್ಳಬಹುದು.

ಈ ವ್ಯಾಕರಣದಲ್ಲಿ ನಾಗವರ್ಮನು ಸೂತ್ರಗಳನ್ನು ಕಂದಪದ್ಯದಲ್ಲಿ ಬರೆದಿದ್ದಾನೆ. ಕಾವ್ಯಾವಲೋಕನದ ಇತರ ಅಧಿಕರಣಗಳಲ್ಲಿರುವಂತೆ ಇಲ್ಲಿಯೂ ಪಂಪ, ಪೊನ್ನ, ರನ್ನ ಮುಂತಾದ ಪೂರ್ವಕವಿಗಳಿಂದ ಆಯ್ದ ಪ್ರಯೋಗಗಳನ್ನೇ ಉದಾಹರಣೆಯಾಗಿ ಕೊಟ್ಟಿರುತ್ತಾನೆ. 96 ಸೂತ್ರಗಳೂ ಉದಾಹರಣ ಪದ್ಯಗಳೂ ಸೇರಿ ಈ ಅಧಿಕರಣದಲ್ಲಿ ಒಟ್ಟು 422 ಪದ್ಯಗಳಿವೆ.* ಒಟ್ಟಿನಲ್ಲಿ, ಪ್ರಯೋಗಗಳನ್ನು ಆಧರಿಸಿ ರೂಪಿಸಿದ ಸೂತ್ರಗಳನ್ನು ಒಳ

---

* ಕಾವ್ಯವಲೋಕನದ 3ನೆಯ ಮುದ್ರಣದಲ್ಲಿ 423 ಪದ್ಯಗಳು ಎಂದು ಕಾಣಿಸಿದೆ. 56ನೆಯ ಉದಾಹರಣ ಪದ್ಯ ‘ಕಾವ್ಯಸಾರ’ ದಲ್ಲಿ (523ನೆಯ ಸಂಖ್ಯೆಯದು) ಅರ್ಧನೇಮಿ ಪುರಾಣದ್ದು ಎಂದು ಸೂಚಿಸಿದೆ. ಕವಿ ಚರಿತೆಯ ಪ್ರಕಾರ ನಾಗವರ್ಮನ ಕಾಲವನ್ನು 1145 ಎಂದು ಇಟ್ಟುಕೊಂಡರೂ ನೇಮಿಚಂದ್ರನ (1170–1220) ಈ ಪದ್ಯ ಕಾವ್ಯಾವಲೋಕನದಲ್ಲಿ ಈಚೆಗೆ ಯಾರೋ ಸೇರಿಸಿದ್ದು ಎಂದು ಭಾವಿಸಬೇಕಾಗುತ್ತದೆ.

ಗೊಂಡು, ಈ ವ್ಯಾಕರಣ ಸಂಗ್ರಹವಾಗಿಯೂ ಸರಳವಾಗಿಯೂ ಶಾಸ್ತ್ರೀಯ ವಾಗಿಯೂ ಇದೆ. ಪ್ರಥಮ ವ್ಯಾಕರಣ ಎಂಬ ಕಾರಣದಿಂದ ಇದಕ್ಕೊಂದು ಚಾರಿತ್ರಿಕವಾದ ಬೆಲೆಯಿದೆ. ಈ 'ಶಬ್ದಸ್ಮೃತಿ' ಎಂಬ ಅಧಿಕರಣದ ಕಡೆಯ ಪದ್ಯದಲ್ಲಿ ಮಾತ್ರ ನಾಗವರ್ಮನು ತಾನು 'ಅಭಿನವಶರ್ವವರ್ಮ' ಎಂದು ಹೇಳಿಕೊಂಡಿರುವುದು ಉಚಿತವಾಗಿದೆ. ನಾಗವರ್ಮ ಸೂತ್ರಗಳ ಸ್ವರೂಪ ವನ್ನೂ, ಪ್ರಯೋಗಗಳನ್ನು ಆಯ್ದುಕೊಡುವಲ್ಲಿ ಅವನು ತೋರಿಸಿರುವ ವೈಚಿತ್ರ್ಯ ಜ್ಞಾನವನ್ನೂ ಒಂದು ಉದಾಹರಣೆಯಿಂದ ಪರಿಚಯಮಾಡಿಕೊಳ್ಳಬಹುದು :

ಸೂತ್ರ 18.

ಪುರುಷಸ್ತ್ರೀವಾಚಕವಾಗಿರೆಯುಂ ಮತ್ತಲ್ಲಿ ಸರ್ವನಾಮಂ ಸಯ್ತು ಒಂ।
ದಿರೆಯುಂ, ಇರ್, ಅರ್, ದಿರ್, ವಿರ್, ಕಳ್, ದೊರೆಕೊಂಡನುಸರಿಸುಗುಂ,
ಜನೋಕ್ತಿಕ್ರಮದಿಂ.

ಇರ್, ಅರ್, ದಿರ್,ಗಳಿಗೆ ಪ್ರಯೋಗ

ಆರಾರ್ಗೆ ಪೆಂಡಿರ್, ಒಡವುಟ್ಟಿದರ್ ಎಂಬರ್ ಆರಾ-
ರ್ಗೆ, ಆರಾರ್ಗೆ ತಂದೆವಿರ್, ಅತಿಪ್ರಿಯ ಪುತ್ರರ್ ಆರಾ-
ರ್ಗೆ, ಆರಾರ್ಗೆ ತಾಯ್ದಿರ್, ಎರಡಿಲ್ಲದೆ ಕೂರ್ಪರ್ ಆರಾ-
ರ್ಗೆ? ಆರಯ್ಯೆ, ತಾನೆ ತನಗೆ; ಇನ್ ನೆರಂ ಅಲ್ಲಂ ಆರುಂ.

ವ್ಯಾಕರಣ ನಿಯಮಗಳ ರಚನೆಗೆ ಪ್ರಾಚೀನ ಕನ್ನಡ ವ್ಯಾಕರಣಕಾರ ರೆಲ್ಲರೂ ಕವಿಗಳ ಪ್ರಯೋಗವನ್ನೇ ಆಧಾರವಾಗಿಟ್ಟುಕೊಂಡು, ಕವಿಗಳ ಮತ್ತು ವಿದ್ವಾಂಸರ ಪ್ರಯೋಜನಾರ್ಥವಾಗಿಯೇ ವ್ಯಾಕರಣರಚನೆಮಾಡುತ್ತಿದ್ದ ರೆಂಬುದು ಸ್ಪಷ್ಟವಾಗಿಯೇ ಇದೆ. ಈ ಮಾತಿಗೆ ನಾಗವರ್ಮನೂ ಹೊರತೇ ನಲ್ಲ. ಆದರೂ, ಮೇಲೆ ಉದಾಹರಿಸಿರುವ ಸೂತ್ರದಲ್ಲಿ 'ಜನೋಕ್ತಿಕ್ರಮದಿಂ' ಎಂಬ ಮಾತು, 'ಶಬ್ದಸ್ಮೃತಿ'ಯ ಕಡೆಯ ಪ್ರಕರಣದ ಕೊನೆಯ ಪದ್ಯದಲ್ಲಿ 'ಅಭಿಮತ ಶಬ್ದಸಂಸ್ಮರಣದಿಂ ಜನಮಂ ತಿಳಿವಂತುಮಾಡಿ'ಎಂಬ ಹೇಳಿಕೆ, ಗ್ರಂಥದ ಹೆಸರು, ಇವನ್ನು ಗಮನಿಸಿದರೆ, ಕವಿಪ್ರಯೋಗ ಮಾತ್ರವಲ್ಲದೆ ಜನರ ರೂಢಿಯ ಭಾಷೆಯನ್ನುಗಮನಿಸಿ, ಜನಕ್ಕಾಗಿಯೂ ಅವರು ಶಬ್ದಸಿದ್ಧಿ ಯನ್ನು ಪಾಠಮಾಡಿ ತಮ್ಮ ಸ್ಮೃತಿಯಲ್ಲಿ (ನೆನಪಿನಲ್ಲಿ) ಉಳಿಸಿಕೊಳ್ಳುವುದ ಕ್ಕಾಗಿಯೂ ವ್ಯಾಕರಣ ರಚನೆಮಾಡುವುದು ನಾಗವರ್ಮನ ಉದ್ದೇಶ ಎಂದು ಕಂಡುಬರುತ್ತದೆ. 'ಶಬ್ದಸಿದ್ಧಿಸ್ಮರಣ' ಎಂಬ ಮಾತು ಈ ಮೊದಲೆ ಉದಾ

ವರಿಸಿರುವ ಪ್ರಥಮಾಧಿಕರಣದ ಮೊದಲ ಪದ್ಯದಲ್ಲಿಯೂ ಬಂದಿರುವುದನ್ನು ಗಮನಿಸಬೇಕು.) ಇವನ ವ್ಯಾಕರಣ—ಇಂದಿನ ಜನ ಹಾಗಿರಲಿ—ಅಂದಿನ ಸಾಮಾನ್ಯ ಜನಕ್ಕಾದರೂ ಅರ್ಥವಾಗುತ್ತಿತ್ತೆ, ಅವನ ಉದ್ದೇಶ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ, ಎಂಬ ಮಾತು ಬೇರೆ. ಅವನ ಉದ್ದೇಶವಂತೂ ಸ್ತುತ್ಯ.

ಕರ್ಣಾಟಕ ಭಾಷಾಭೂಷಣ: ಇದು ಸಂಸ್ಕೃತ ಭಾಷೆಯಲ್ಲಿದೆ. ಕಾವ್ಯಾವಲೋಕನದ ಸೂತ್ರವನ್ನು ಇದರಲ್ಲಿ ಉದ್ಧರಿಸಿರುವುದರಿಂದ ಅದು ರಚಿತವಾದ ಮೇಲೆ ಇದು ರಚಿತವಾಗಿದೆ ಎಂಬುದು ಸ್ವಯಂಸ್ಪಷ್ಟ. ಅಂದಿನ ದಿನಗಳಲ್ಲಿ ಸಂಸ್ಕೃತವು ಅಖಿಲ ಭಾರತದ ರಾಷ್ಟ್ರಭಾಷೆಯ ಸ್ಥಾನವನ್ನು ಅಲಂಕರಿಸಿತ್ತು; ಎಲ್ಲ ವಿದ್ವಾಂಸರೂ ಕವಿಗಳೂ ಸಂಸ್ಕೃತವನ್ನು ಬಲ್ಲವರಾಗಿದ್ದರು. 'ಭಾಷಾಭೂಷಣ' ಸಂಸ್ಕೃತದಲ್ಲಿ ಇರುವುದನ್ನು ಗಮನಿಸಿದರೆ, ಕನ್ನಡ ತಿಳಿಯದ ಕರ್ಣಾಟಕದ ಮತ್ತು ಹೊರಗಿನ ವಿದ್ವಾಂಸರಿಗೆ ಕನ್ನಡ ಭಾಷೆಯ ಸ್ವರೂಪವನ್ನೂ ಅದರ ಮಹತ್ವವನ್ನೂ ಪರಿಚಯಮಾಡಿಕೊಡಬೇಕೆಂಬುದು ನಾಗವರ್ಮನ ಉದ್ದೇಶವಾಗಿದ್ದಿತು ಎಂದು ತೋರುತ್ತದೆ. ಎಲ್ಲ ಭಾಷೆಗಳೂ ಜಿನನ ಮುಖದಿಂದ ಬಂದವು, ಆದ್ದರಿಂದ ಸಮಾನ. ಭಾಷಾ ಪ್ರಪಂಚದಲ್ಲಿ ಮೇಲು ಕೀಳು ಎಂಬುದಿಲ್ಲ, ಎಂಬುದು ಜೈನಧರ್ಮದ ಕಲ್ಪನೆ. 'ಪರಮಜಿನೇಂದ್ರವಾಣಿಯೆ ಸರಸ್ವತಿ, ಬೇರದು ಪೆಣ್ಣರೂಪಮಂ ಧರಿಯಿಸಿ ನಿಂದುದಲ್ತು' ಎಂಬ ಪಂಪನ ಭಾವನೆಯನ್ನೇ ನಾಗವರ್ಮ 'ಭಾಷಾಭೂಷಣ'ದ ಮಂಗಳ ಶ್ಲೋಕದಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ:

ಸರ್ವಜ್ಞಂ ತದಹಂ ವಂದೇ । ಪರಂಜ್ಯೋತಿಸ್ತಮೋಪಹಂ ।
ಪ್ರವೃತ್ತಾ ಯನ್ಮುಖಾತ್ ದೇವೀ । ಸರ್ವಭಾಷಾ ಸರಸ್ವತೀ ।'

['ಎಲ್ಲ ಭಾಷೆಗಳಿಗೂ ಸಮಾನಳಾದ ಸರಸ್ವತೀದೇವಿ ಯಾರ ಮುಖದಿಂದ ಹೊರಬಂದಳೋ, ಪರಂಜ್ಯೋತಿಯೂ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವವನೂ ಆದ ಆ ಸರ್ವಜ್ಞನನ್ನು (ಜಿನನನ್ನು) ವಂದಿಸುತ್ತೇನೆ.']

ಸಂಸ್ಕೃತ ವ್ಯಾಕರಣಗಳ ಮಾದರಿಯಲ್ಲಿಯೇ ಇಲ್ಲಿನ ಸೂತ್ರಗಳು ಅತ್ಯಂತ ಅಡಕವಾಗಿ ರಚಿತವಾಗಿವೆ.* ಸೂತ್ರಗಳಿಗೆ ವೃತ್ತಿಯನ್ನೂ ಟೀಕನ್ನೂ

---

* ಸೂತ್ರದ ಲಕ್ಷಣ : 'ಸ್ವಲ್ಪಾಕ್ಷರಂ, ಅಸಂದಿಗ್ಧ, ಸಾರವತ್, ವಿಶ್ವತೋಮುಖಂ । ಅಸ್ತೋಭಂ, ಅನವದ್ಯಂ ಚ, ಸೂತ್ರಂ ಸೂತ್ರವಿದೋ ವಿದುಃ' ॥ ಸೂತ್ರ ಅತ್ಯಂತ ಕಡಮೆ ಅಕ್ಷರಗಳಲ್ಲಿ ಹೇಳಿರಬೇಕು. (ಸೂತ್ರಕಾರನು ಒಂದು ಅಕ್ಷರವನ್ನು ಉಳಿಸಿದರೆ ಪುತ್ರೋತ್ಸವ ಪಡೆದಷ್ಟು ಅವನಿಗೆ ಸಂತಸವಂತೆ!) ಸಂದೇಹಕ್ಕೆ ಎಡೆಯಿರಬಾರದು. ಸಾರವತ್ತಾಗಿರಬೇಕು. ಹೇಳಬೇಕಾದ್ದೆಲ್ಲವನ್ನೂ ಒಳಗೊಂಡಿರಬೇಕು. ಅರ್ಥಾಂತಕವಾಗಿ ನಿಲ್ಲಕೂಡದು. ದೋಷವಿಲ್ಲದಿರಬೇಕು. ಸೂತ್ರರಚನೆ ಅತ್ಯಂತ ಕಷ್ಟಕರ. ಕನ್ನಡ ಶಾಸ್ತ್ರಕಾರರು ಕಂದಪದ್ಯಗಳಲ್ಲಿ ಈ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ನಾಗವರ್ಮನೇ ಬರೆದಿದ್ದಾನೆ. ಸೂತ್ರಗಳಿಗೆ ಪ್ರಯೋಗಗಳ ಉದಾಹರಣೆಗಳಿವೆ. ಅವರೆ, ಶಬ್ದಸ್ಮೃತಿಯಲ್ಲಿರುವಂತೆ ಪೂರ್ವಕವಿಗಳಿಂದ ಆಯ್ದ ಪ್ರಯೋಗಗಳು ಬಹು ಕಡಮೆ.

ಸೂತ್ರ, ವೃತ್ತಿ. ಟೀಕು, ಪ್ರಯೋಗ – ಇವುಗಳ ನಿರೂಪಣವಿಧಾನಕ್ಕೆ ಒಂದು ಉದಾಹರಣೆ:

ಸೂ ॥ ಅಳೀ ಚ ಗುಣವಚನೇಭ್ಯಃ ॥ 190 ॥

ವೃ ॥ ಗುಣವಚನೇಭ್ಯಃ ಸ್ತ್ರೀವಿವಕ್ಷಾಯಾಂ ಅಳ್, ಪ. ಚ - ಪ್ರತ್ಯಯ ಭವತಃ ॥

ಉ ॥ ಒಳ್ಳಿದಳ್, ನಲ್ಲಳ್, ಪೊಲ್ಲಳ್, ಇನಿಯಳ್; ಚದುರೆ ಪಾಪ್ಸೆ, ಸಿತಗೆ, ಜಾಣೆ.

ಟೀ ॥ ಗುಣವಚನೇಭ್ಯಃ = ಗುಣವಚನಮಪ್ಪ ಶಬ್ದಂಗಳತ್ತಣಿಂ ಪರಮಾಗಿ, ಸ್ತ್ರೀಲಿಂಗ ವಿಷಯದೊಳ್, ಅಳೀಚ = ಅಳ್, ಏ, ಎಂಬ ಪ್ರತ್ಯಯಂಗಳುಮಕ್ಕುಂ.

ಶಬ್ದಸ್ಮೃತಿಯಲ್ಲಿ ಐದು ಅಧಿಕರಣಗಳಲ್ಲಿ ಹೇಳಿರುವ ವಿಷಯವನ್ನೇ ಇನ್ನೂ ವಿಸ್ತಾರವಾಗಿ ಇದರಲ್ಲಿ ಹತ್ತು ಪ್ರಕರಣಗಳಲ್ಲಿ ನಿರೂಪಿಸಿದೆ. ಅವು ಯಾವುವೆಂದರೆ, – ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಉಪಾಖ್ಯಾತಿ(?), ಸಮಾಸ, ತದ್ಧಿತ, ಆಖ್ಯಾತ, ಅವ್ಯಯ, ನಿಪಾತವಿಧಾನ. ಒಟ್ಟು ಸೂತ್ರಗಳ ಸಂಖ್ಯೆ 269. (ರೈಸ್ ಅವರ ಪರಿಷ್ಕರಣದಲ್ಲಿ 280 ಇವೆ.)

ಕೇಶಿರಾಜನು ನಾಗವರ್ಮನ ವ್ಯಾಕರಣಗಳನ್ನು ಅನುಸರಿಸಿ ತನ್ನ 'ಶಬ್ದಮಣಿದರ್ಪಣ'ವನ್ನು ಇನ್ನೂ ವಿಸ್ತಾರವಾಗಿ ರಚಿಸಿದ್ದಾನೆ. ಇದರಿಂದ ಅವುಗಳ ಬೆಲೆ ಏನೂ ಕಡಿಮೆಯಾಗದೆ ಇದ್ದರೂ, ಹೆಚ್ಚಿನ ಬೆಲೆ ಏನೂ ಇಲ್ಲವೆಂಬುದು ಅರಿವಾಗುತ್ತದೆ. ನಾಗವರ್ಮನು ಹೇಳಿಲ್ಲದ ಅನೇಕ ಹೊಸ ವಿಚಾರಗಳನ್ನು ಕೇಶಿರಾಜ ಹೇಳಿದ್ದಾನೆ; ನಾಗವರ್ಮನಿಂದ ಈಚಿನ ಕವಿಗಳ ಪ್ರಯೋಗಗಳನ್ನೂ ಸೇರಿಸಿದ್ದಾನೆ; ಭಾಷೆಯ ಬೆಳವಣಿಗೆಯಲ್ಲಿ ಕಂಡು ಬಂದ ಮಾರ್ಪಾಟುಗಳನ್ನು ಗುರುತಿಸಿದ್ದಾನೆ. ಈ ಕಾರಣಗಳಿಂದ ಕೇಶಿರಾಜನ ವ್ಯಾಕರಣ ಹೆಚ್ಚಿನ ಮಾನ್ಯತೆಯನ್ನು ಪಡೆಯಿತು.

ಶಬ್ದಮಣಿದರ್ಪಣ : ಇದರ ಕರ್ತೃವಾದ ಕೇಶಿರಾಜನು ಗ್ರಂಥದ ಮೊದಲಿನಲ್ಲೂ ಕಡೆಯಲ್ಲೂ ಕೆಲವು ಪದ್ಯಗಳಲ್ಲಿ ತನ್ನ ವಿಷಯವಾಗಿ ಕೆಲವು ಮುಖ್ಯ ಸಂಗತಿಗಳನ್ನು ತಿಳಿಸಿದ್ದಾನೆ. ಆ ಪದ್ಯಗಳ ಸಾರಾಂಶ: "ಕವಿ ಕೇಶವನು ಯಾದವ ಕಟಕಾಚಾರ್ಯನಾಗಿದ್ದ ಕವಿ ಸುಮನೋಬಾಣನ ದೌಹಿತ್ರ (ಎಂದರೆ, ಮಗಳ ಮಗ). ಯೋಗಿ ಪ್ರವರ ಚಿದಾನಂದ ಮಲ್ಲಿಕಾರ್ಜುನನ ಮಗ. ಲಾಕ್ಷಣಿಕರು ಕರ್ಣಾಟಕ ಲಕ್ಷಣ ಶಬ್ದಶಾಸ್ತ್ರವನ್ನು ಹೇಳು ಎಂದು

ಅಪ್ಪಣೆ ಮಾಡಿದ್ದರಿಂದ ಅದನ್ನು 'ಶಬ್ದಮಣಿದರ್ಪಣ' ಎಂದು ಹೆಸರನ್ನಿಟ್ಟು ಹೇಳಿದನು. ಪ್ರಸಿದ್ಧವಾದ 'ಚೋಳಪಾಲಕ ಚರಿತಂ', 'ಶ್ರೀ ಚಿತ್ರಮಾಲೆ', 'ಸುಭದ್ರಾ ಹರಣಂ', 'ಪ್ರಬೋಧ ಚಂದ್ರಂ', 'ಕಿರಾತಂ' (=ಕಿರಾತಾರ್ಜುನೀಯು) – ಇವು ಕೇಶಿರಾಜನ ಇತರ ಕೃತಿಗಳು.'' ಸುಮನೋಬಾಣನು ಹೊಯ್ಸಳ ಒಂದನೆಯ ನಾರಸಿಂಹನಲ್ಲಿ (ಕ್ರಿ.ಶ. 1152-1173) ಕಟಕೋಪಾಧ್ಯಾಯನಾಗಿದ್ದವನು.* 'ಸೂಕ್ತಿಸುಧಾರ್ಣವ'ದ ಕರ್ತೃವಾದ ಮಲ್ಲಿಕಾರ್ಜುನನು ವೀರ ಸೋಮೇಶ್ವರನ (1233-1254) ಕಾಲದಲ್ಲಿದ್ದವನು. ''ಆರ್ಯನ, ಯಾದವ ಕಟಕಾಚಾರ್ಯನ, ಕೇಶವನ ಶಬ್ದಮಣಿದರ್ಪಣವು ಸೂರ್ಯಚಂದ್ರ ಮೇರುವಾರಿಧಿ ಪರ್ಯಂತ ಶಾಶ್ವತವಾಗಿರಲಿ'' ಎಂಬ ಹಾರೈಕೆಯ ಪದ್ಯದಲ್ಲಿ ತಾನೂ 'ಯಾದವ ಕಟಕಾಚಾರ್ಯ'ನಾಗಿದ್ದುದರ ಸಂಗತಿಯನ್ನು ಕೇಶಿರಾಜ ತಿಳಿಸಿದ್ದಾನೆ. ಆದ್ದರಿಂದ. ಅಜ್ಜನಾದ ಸುಮನೋಬಾಣನಂತೆ ಇವನು ಹೊಯ್ಸಳ ಸೋಮೇಶ್ವರನಲ್ಲಿಯೋ ಹೊಯ್ಸಳ(3ನೆಯ) ನಾರಸಿಂಹನಲ್ಲಿಯೋ (1254-1292) ಕಟಕಾಚಾರ್ಯನಾಗಿದ್ದಿರಬಹುದು. ಆದ್ದರಿಂದ, ಕೇಶಿರಾಜನ ಕಾಲ ಸು. 1250-60.

ಮಲ್ಲಿಕಾರ್ಜುನನ ಆಶ್ರಯದಾತನಾಗಿದ್ದ ಸೋಮೇಶ್ವರನ ಅಜ್ಜ ವೀರಬಲ್ಲಾಳನಿಗೆ (1173–1220) 'ಚೋಳರಾಜ್ಯಪ್ರತಿಷ್ಠಾಚಾರ್ಯ' ಎಂದೂ ಅವನ ಮಗ ವೀರನರಸಿಂಹನಿಗೆ (1220–1233) 'ಚೋಳ ಕುಲೈಕ ರಕ್ಷಕ' ಎಂದೂ ಬಿರುದುಗಳಿದ್ದುವಾಗಿ ತಿಳಿದುಬರುತ್ತದೆ. ಕೇಶಿರಾಜನು ತನ್ನ ಕೃತಿಮಾಲೆಯಲ್ಲಿ 'ಚೋಳಪಾಲಕ' ಚರಿತವನ್ನು ಮೊದಲು ಹೆಸರಿಸಿದ್ದಾನೆ. ಆದ್ದರಿಂದ ಕಟಕಾಚಾರ್ಯನಾಗುವುದಕ್ಕೆ ಮೊದಲು ಬಹುಶಃ ವೀರನರಸಿಂಹನ ಕಾಲದಲ್ಲಿ (ಅಥವಾ ಅವನು ತೀರಿಕೊಂಡ ತರುಣದಲ್ಲಿ)–ತನ್ನ ಪೂರ್ವವಯಸ್ಸಿನಲ್ಲಿ–ಅವನು ಪಾಂಡ್ಯರ ಮೇಲೆ ದಂಡೆತ್ತಿಹೋಗಿ ಚೋಳ (3ನೆಯ) ರಾಜರಾಜನನ್ನು ಅವನ ಸಿಂಹಾಸನದಲ್ಲಿ ನೆಲೆಗೊಳಿಸಿದ ಸಂಗತಿಯನ್ನು ಆ ಕೃತಿಯಲ್ಲಿ ವರ್ಣಿಸಿರಬಹುದು. ಈ ಕೃತಿಯಾಗಲಿ, ಕೇಶಿರಾಜನು ತಿಳಿಸಿರುವ ಇತರ ಕೃತಿಗಳಾಗಲಿ ದೊರಕಿಲ್ಲ.

---

*ಎಂ. ಎಂ. ಕಲಬುರ್ಗಿ ಅವರು ಸುಮನೋಬಾಣ 2ನೆಯ ನರಸಿಂಹನಲ್ಲಿ ಕಟಕೋಪಾಧ್ಯಾಯ ಎಂದು ಅಭಿಪ್ರಾಯಪಡುತ್ತಾರೆ. (ಶಬ್ದಮಣಿದರ್ಪಣ ಸಂಗ್ರಹ, 1975, ಪೀಠಿಕೆ x).

ಕೇಶಿರಾಜನ ಕೃತಿಗಳ ಪೈಕಿ ಸುಭದ್ರಾಹರಣ, ಪ್ರಬೋಧಚಂದ್ರ, ಇವು ನಾಟಕಗಳಾಗಿದ್ದರೂ ಇರಬಹುದು. ಸೂಕ್ತಿಸುಧಾರ್ಣವದಲ್ಲಿಯೂ ಶಬ್ದಮಣಿದರ್ಪಣದಲ್ಲಿಯೂ ಕೇಶಿರಾಜನ ಕೃತಿಗಳಿಂದ ಉದಾಹರಣ ಪದ್ಯಗಳನ್ನು ಆಯ್ದು ಸೇರಿಸಿರುವ ಸಾಧ್ಯತೆ ಇದೆಯೆಂದು ವಿದ್ವಾಂಸರು ಊಹಿಸಿದ್ದಾರೆ.

ಕೇಶಿರಾಜನು ಕವಿ ಜನ್ನನ ಸೋದರಳಿಯ ಎಂದು ಹೇಳಲಾಗಿದೆ. ಜನ್ನನು ತನ್ನ 'ಯಶೋಧರ ಚರಿತೆ'ಯಲ್ಲಿ ತಾನು 'ಕವಿ ಸುಮನೋಬಾಣನ ಮಗ'ನೆಂದೂ, 'ಅನಂತನಾಥಪುರಾಣ'ದಲ್ಲಿ ಎರಡು ಕಡೆ - 'ಗಂಗಾ ಶಂಕರರ ಪುತ್ರಂ', ಎಂದೂ ಹೇಳಿರುವುದು ಈ ಹೇಳಿಕೆಗೆ ಆಧಾರ. ಸುಮನೋಬಾಣ ಎಂಬುದು ಶಂಕರನ ಬಿರುದು ಎಂಬುದು ಕವಿಚರಿತೆಕಾರರ ಅಭಿಪ್ರಾಯ. ಇದನ್ನು ಒಪ್ಪಿದರೆ, ಸುಮನೋಬಾಣನ ಮಗಳ ಮಗನಾದ ಕೇಶಿರಾಜನು ಜನ್ನನ ಸೋದರಳಿಯನಾಗುತ್ತಾನೆ. ಜನ್ನನ ಅನಂತನಾಥ ಪುರಾಣದ ಇನ್ನೊಂದು ಪದ್ಯದಲ್ಲಿ (1-34), ಸುಮನೋಬಾಣನು ಅವನ ಉಪಾಧ್ಯಾಯ ಎಂದು ಅರ್ಥಮಾಡಲು ಅವಕಾಶವಿದೆ. ಈಚೆಗೆ ಎಂ. ಎಂ. ಕಲಬುರ್ಗಿಯವರು ಈ ಅರ್ಥವನ್ನು ಹಿಡಿದು, ನಾಗವರ್ಮ ಜನ್ನನ ಗುರುವಲ್ಲ, ಸುಮನೋಬಾಣನೇ ಗುರು, ಕೇಶಿರಾಜ ಜನ್ನನ ಸೋದರಳಿಯನಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ (ಕರ್ಣಾಟಕ ಭಾರತಿ, 7-1, 1974, ಪು. 145-149). ಅವರ ಅಭಿಪ್ರಾಯ ವಿಚಾರ ಮಾಡತಕ್ಕದ್ದಾಗಿದೆ. ಕೇಶಿರಾಜನು ತನ್ನ ಅಜ್ಜನನ್ನು ಸ್ಮರಿಸುವಾಗ ನಿಜವಾದ ಹೆಸರನ್ನು ಹೇಳಿರುವನೆಂದು ತಿಳಿಯಬೇಕೆ, ಇಲ್ಲವೆ ಆತನ ಬಿರುದನ್ನು ಹೇಳಿರುವನೆಂದು ತಿಳಿಯಬೇಕೆ ? ತಂದೆಯ ಹೆಸರಿನ ಜೊತೆಗೆ ಅಜ್ಜನ ಹೆಸರನ್ನೇ ಹೇಳಿದ್ದಾನೆ ಎಂದು ತಿಳಿಯುವುದೇ ಸರಿ. ಆದ್ದರಿಂದ, ಸುಮನೋಬಾಣನೇ ಬೇರೆ, ಶಂಕರನೇ ಬೇರೆ, ಜನ್ನ ಸುಮನೋಬಾಣನ 'ಮಗ' ಎಂದರೆ 'ಶಿಷ್ಯ'. ಶಿಷ್ಯ ಗುರುವಿನ 'ಕರಸಂಜಾತ' (=ಸುತ, ಮಗ) ಎಂಬ ಕಲ್ಪನೆ ಎಲ್ಲ ಧರ್ಮಗಳಲ್ಲೂ ಉಂಟು. ಜನ್ನ ಸುಮನೋಬಾಣನ ಶಿಷ್ಯ ; ಕೇಶಿರಾಜ ಮಗಳ ಮಗ. ಜನ್ನ 'ಕವಿಗಳೊಳಗೆ ವೈಯಾಕರಣಂ' ; 'ಇದಾನೀಂತ ಶರ್ವವರ್ಮ' ಎಂದು ಬಿರುದು ತಳೆದ ವೈಯಾಕರಣ ಸುಮನೋಬಾಣನಲ್ಲಿ ಜನ್ನನ ಶಿಷ್ಯವೃತ್ತಿ. ವೈಯಾಕರಣ ರಕ್ತ ಕೇಶಿರಾಜನಲ್ಲೂ ಹರಿದುಬಂದಿದೆ. 'ಸೂಕ್ತಿ ಸುಧಾರ್ಣವ' ಕಾವ್ಯಸಂಕಲನಕ್ಕೆ ಸಂಗ್ರಹಿಸಿದ್ದ ಮಲ್ಲಿಕಾರ್ಜುನನ

ಗ್ರಂಥ ಭಂಡಾರವೂ ಕೇಶಿರಾಜನ ಆಸ್ತಿಯಾಗಿ ಬಂದಿದೆ. ಶಬ್ದಮಣಿದರ್ಪಣ ದಲ್ಲಿ ಅಪಾರ ಸಂಖ್ಯೆಯಲ್ಲಿ ಉದಾಹರಣೆಗಳನ್ನು ಕೊಡಲು ಇದರಿಂದ ಸಹಾಯವಾಗಿದೆ.

ಕೇಶಿರಾಜನ ಮತವೂ ವಾದಕ್ಕೆ ಬಿದ್ದಿದೆ. ಇವನು ಜೈನನೆಂದೇ ಎಲ್ಲ ವಿದ್ವಾಂಸರ ಒಕ್ಕೊರಲಿನ ಅಭಿಪ್ರಾಯ. ಒಬ್ಬಿಬ್ಬರು ಇವನು ಜೈನನಲ್ಲ, ವೈದಿಕಮತಾನುಯಾಯಿ ಎಂದು ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಈ ವಿಚಾರದಲ್ಲಿ ಹೀಗೆಯೇ ಸರಿ ಎಂದು ನಿರ್ಣಯಿಸುವುದು ಸದ್ಯದ ಸ್ಥಿತಿಯಲ್ಲಿ ಕಷ್ಟ. ಮಲ್ಲಿಕಾರ್ಜುನನು ಜಿನಸ್ತುತಿ ಮಾಡಿರುವುದರಿಂದಲೂ, ಕೇಶಿರಾಜ ಜೈನ ಸಂಪ್ರದಾಯದಂತೆ ವಾಗ್ದೇವಿಯ ಸ್ತೋತ್ರ ಮಾಡಿರುವುದರಿಂದಲೂ, ಜೈನ ಕಲ್ಪನೆಯಂತೆ 'ಶಬ್ದ ದ್ರವ್ಯ, ಅದರ ವರ್ಣ ಶ್ವೇತ' ಎಂದಿರುವುದ ರಿಂದಲೂ, ಜಿನೇಂದ್ರ ಪುರಾಣಕರ್ತರ ಸಾಲಿನಲ್ಲಿ ಜನ್ನನು 'ಪುಷ್ಪಬಾಣ' (=ಸುಮನೋಬಾಣ)ನನ್ನು ಸೇರಿಸಿ ಹೊಗಳುವುದರಿಂದಲೂ ಕೇಶಿರಾಜ ಜೈನನೆಂದು ತಿಳಿಯುವುದು ಸೂಕ್ತವೆಂದು ಕಾಣುತ್ತದೆ.

ಶಬ್ದಮಣಿದರ್ಪಣ : "ಸೂರ್ಯೇಂದು ಮೇರುವಾರಿಧಿ ಪರ್ಯಂತಂ ಪರೆದು ನಿಲ್ಕೆ" ಎಂದು ಕೇಶಿರಾಜ ತನ್ನ 'ಶಬ್ದಮಣಿದರ್ಪಣ'ವನ್ನು ಹರಸಿ ಕನ್ನಡ ನಾಡಿನಲ್ಲಿ ಸಂಚಾರಮಾಡಲು ಬಿಟ್ಟಂದಿನಿಂದ ಕನ್ನಡ ಜನತೆ ಅದನ್ನು ಅಳಿಯ ಲೀಯದೆ ಅಕ್ಕರೆಯಿಂದ ಕಾಪಾಡಿಕೊಂಡು ಬಂದಿದೆ. ಈಗ ದೊರೆತಿರುವ ಮತ್ತು ಇನ್ನು ಮುಂದೆ ದೊರೆಯಬಹುದಾದ ಆ ಗ್ರಂಥದ ಹಸ್ತಲಿಖಿತ ಪ್ರತಿ ಗಳ ಬಾಹುಳ್ಯವು ಇದಕ್ಕೆ ಸಾಕ್ಷಿಯಾಗಿದೆ. ಮುದ್ರಣ ಕಲೆ ಬಂದ ಮೇಲಂತೂ ಕನ್ನಡ ವಿದ್ವಾಂಸರು ಆ ಗ್ರಂಥವನ್ನು ಪರಿಷ್ಕರಿಸಿ ಅಭ್ಯಾಸಕ್ಕೆ ಅನುಕೂಲಿಸು ವಂತೆ ತಮಗೆ ಉಚಿತವೆಂದು ತೋರಿದ ಸಹಾಯಕ ಸಾಮಗ್ರಿಗಳೊಡನೆ, ಹಲವುಸಾರಿ ಮುದ್ರಿಸಿ ಪ್ರಕಟಿಸಿದ್ದಾರೆ."[2] ಈ ಅಭಿಪ್ರಾಯಕ್ಕೆ ಪೂರಕವಾಗಿ ಕೆಲವು ವಿವರಗಳನ್ನು ಇಲ್ಲಿ ಕೊಡಬಹುದು :

ಶಬ್ದಮಣಿದರ್ಪಣಕ್ಕೆ ನಿಟ್ಟೂರು ನಂಜಯ್ಯನೆಂಬವನು ಟೀಕೆ ಬರೆದಿದ್ದಾನೆ : ಅಲ್ಲಲ್ಲಿ 'ವಿಚಾರ'ಗಳೂ ಉಂಟು, ಈತನು ಭಟ್ಟಾಕಲಂಕನ ಶಬ್ದಾನುಶಾಸನಗಳಿಂದ ಸೂತ್ರ ಗಳನ್ನು ಉದಾಹರಿಸಿದ್ದಾನೆ. ಆದ್ದರಿಂದ ಈತನ ಕಾಲ 1604ಕ್ಕಿಂತ ಈಚೆಗೆ ಎಂದು ಹೇಳಬಹುದು.[3]

ಇನ್ನೊಬ್ಬ ವ್ಯಾಖ್ಯಾನಕಾರ ಲಿಂಗಣಾರಾಧ್ಯ. ಈತ ಆರಾಧ್ಯ ಪಂಗಡದ ವೀರಶೈವ ಮತದವನು. ಇವನು ಕೇಶಿರಾಜನ ವೃತ್ತಿಯ ಸ್ಥಾನದಲ್ಲಿ ತನ್ನದೇ ಆದ ವೃತ್ತಿಯನ್ನು ಬರೆದು, ಅದನ್ನು 'ಸೂತ್ರಾನ್ವಯರತ್ನಮಾಲೆ' ಎಂದು ಹೆಸರಿಸಿದ್ದಾನೆ. ಈ ವೃತ್ತಿಯಿರುವ ಒಂದು ಹಸ್ತಪ್ರತಿಯನ್ನು ಬರೆದ ಕಾಲ 1724 ಎಂದು ಸ್ಪಷ್ಟವಾಗಿ ಗೊತ್ತಾಗಿದೆ. ಆದ್ದರಿಂದ, ಈ ಲಿಂಗಣಾರಾಧ್ಯನ ಕಾಲ ಆ ವರ್ಷಕ್ಕಿಂತ ಹಿಂದಿನದೆಂದು ಮಾತ್ರ ಹೇಳಬಹುದು. ಲಿಂಗಣಾರಾಧ್ಯನ ವೃತ್ತಿಯಲ್ಲಿ ಕೆಲವು ವಿಶೇಷ ಗುಣಗಳೂ ಇವೆ. ಕೇಶಿರಾಜನ ಸೂತ್ರಗಳಲ್ಲಿ ಕಂಡು ಬರುವ ಅರ್ಥಕ್ಲೇಶಗಳನ್ನು ಎಷ್ಟೋ ವೇಳೆ ತೃಪ್ತಿಕರವಾಗಿ ಪರಿಹರಿಸಲು ಪ್ರಯತ್ನಿಸಿರುವನು.[4]

ಹೈದರಾಬಾದು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿರುವ ಒಂದು 'ಹೊಸ ಪ್ರತಿ'ಯಲ್ಲಿ ಮೇಲ್ಕಂಡ ವ್ಯಾಖ್ಯಾನಗಳಿಗಿಂತ ಭಿನ್ನವಾದ ವ್ಯಾಖ್ಯಾನವಿದೆ. ಈ ವ್ಯಾಖ್ಯಾನದಲ್ಲಿ ಕಂಡುಬರುವ ವಿಷಯದ ಸ್ವರೂಪವನ್ನೂ, ಸೂತ್ರಗಳಲ್ಲಿ ಕಂಡು ಬರುವ ಪಾಠಭೇದಗಳನ್ನೂ ಬೇರೆಯ ಪ್ರತಿಗಳಲ್ಲಿ ದೊರೆಯದೆ ಇಲ್ಲಿ ಮಾತ್ರ ಕೊಟ್ಟಿರುವ ಹೊಸ ಉದಾಹರಣೆಗಳನ್ನೂ ದಿವಂಗತ ಪ್ರೊ|| ಡಿ. ಕೆ. ಭೀಮಸೇನರಾಯರು ಒಂದು ಲಿಖಿತ ಉಪನ್ಯಾಸದಲ್ಲಿ ವಿವರಪಡಿಸಿದ್ದಾರೆ.[5] ವ್ಯಾಖ್ಯಾನಕಾರನ ಬಗೆಗೆ ಯಾವ ವಿವರಗಳೂ ತಿಳಿದು ಬಂದಿಲ್ಲ. ಹಸ್ತಪ್ರತಿಯ ಸ್ವರೂಪದ ಆಧಾರದ ಮೇಲೆ ಈಗ ದೊರೆತಿರುವ ಹಸ್ತಪ್ರತಿಗಳೆಲ್ಲಕ್ಕಿಂತ ಇದು ಪ್ರಾಚೀನವಾದುದೆಂದೂ, ಹೆಚ್ಚು ಶುದ್ಧವಾದುದೆಂದೂ ಭೀಮಸೇನರಾಯರು ಅಭಿಪ್ರಾಯಪಟ್ಟಿದ್ದಾರೆ.

ಈವರೆಗೆ, ಜೆ. ಗ್ಯಾರೆಟ್ (1868), ರೆವರೆಂಡ್ ಎಫ್. ಕಿಟ್ಟೆಲ್ (1872), ಪಂಜೆ ಮಂಗೇಶರಾಯರು (1920), ಕನ್ನಡ ಸಾಹಿತ್ಯ ಪರಿಷತ್ತು (1920), ಮದರಾಸು ವಿಶ್ವವಿದ್ಯಾನಿಲಯ, ಡಿ. ಎಲ್. ನರಸಿಂಹಾಚಾರ್ – ಈ ವಿದ್ವಾಂಸರ ಹಾಗೂ ವಿದ್ವತ್ ಸಂಸ್ಥೆಗಳ ಸಾರ್ಥಕ ಪರಿಶ್ರಮದಿಂದ ಶಬ್ದಮಣಿ ದರ್ಪಣ ಹಲವು ರೂಪಗಳಲ್ಲಿ ಹೊರಬಂದಿದೆ. ಆದರೂ, ಒಂದಕ್ಕೊಂದಕ್ಕೆ ಎಷ್ಟೋ ವ್ಯತ್ಯಾಸಗಳಿರುವುದರಿಂದ ಕೇಶಿರಾಜನ ಕೈಬರಹದ ಶಬ್ದಮಣಿದರ್ಪಣವನ್ನು ಬಹುಮಟ್ಟಿಗೆ ಪ್ರತಿಬಿಂಬಿಸುವ ಕೃತಿ ಸ್ವರೂಪವನ್ನು ನಿರ್ಣಯಿಸಲು ಇನ್ನೂ ಸಾಧ್ಯವಾಗಿಲ್ಲ.

ಶಬ್ದಮಣಿದರ್ಪಣದ ಕೆಲವು ಸಂಗ್ರಹಗಳೂ ಪ್ರಕಟವಾಗಿದೆ.

ಬರ್ನೆಲ್ ಎಂಬ ಪಾಶ್ಚಾತ್ಯ ವಿದ್ವಾಂಸನು ಶಬ್ದಮಣಿದರ್ಪಣದ ಮಹತ್ವವನ್ನು ಕುರಿತು ಹೇಳಿರುವ ಮಾತುಗಳು ಗಮನಾರ್ಹವಾಗಿವೆ : "ಶಬ್ದಮಣಿದರ್ಪಣದ ನಿಯಮಗಳು ಸ್ವತಂತ್ರ ಸಂಶೋಧನೆ ಹಾಗೂ ಪ್ರಸಿದ್ಧರಾದ ಬರಹಗಾರರ ಪ್ರಯೋಗಗಳ ಆಧಾರದ ಮೇಲೆ ರೂಪಗೊಂಡಿವೆ; ಇದೇ ಅದರ ಮಹತ್ವದ ಮತ್ತು ನಿಜವಾದ ಗುಣ; ಈ ರೀತಿಯಲ್ಲಿ ಅದು

ತಮಿಳು ಮತ್ತು ತೆಲುಗು (ವ್ಯಾಕರಣ) ಗ್ರಂಥಗಳಿಗಿಂತ* ಎಷ್ಟೋ ಮುಂದುವರಿದಿವೆ ; ಅವು ವ್ಯರ್ಥವಾದ ಶುಷ್ಕಪಾಂಡಿತ್ಯದ ತರ್ಕವಿತರ್ಕಗಳಲ್ಲಿ ತೊಡಗಿವೆ.”[6]

ಶಬ್ದಮಣಿದರ್ಪಣದ ಸೂತ್ರ, ವೃತ್ತಿ, ಮತ್ತು ಪ್ರಯೋಗಗಳ ವಿಷಯವಾಗಿ ನಾಲ್ಕು ಮಾತು ಹೇಳಬಹುದು. ಸೂತ್ರಗಳ ಪಾಠ, ಅನುಕ್ರಮ ಸಂಖ್ಯೆಗಳ ವಿಷಯದಲ್ಲಿ ಪ್ರತಿಯಿಂದ ಪ್ರತಿಗೆ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ, ಒಟ್ಟಿನ ಮೇಲೆ ಸೂತ್ರಗಳು ಕೇಶಿರಾಜನು ರಚಿಸಿರುವ ರೂಪದಲ್ಲಿ ಉಳಿದುಕೊಂಡು ಬಂದಿವೆ. ಹಸ್ತಪ್ರತಿಗಳಲ್ಲಿ ಪರಸ್ಪರ ಹೋಲಿಕೆಯಿಂದ ಈ ಅಂಶ ವ್ಯಕ್ತಪಡುತ್ತದೆ. ಆದರೆ, ವೃತ್ತಿಗಳಲ್ಲಿ ವ್ಯತ್ಯಾಸಗಳು ಕಂಡುಬಂದಿವೆ; ಕೆಲವು ಪ್ರತಿಗಳಲ್ಲಿ ಇದ್ದಂತೆ ಇನ್ನು ಕೆಲವಲ್ಲಿ ಇಲ್ಲ ; ಕೆಲವು ಪ್ರತಿಗಳಲ್ಲಿ ಸಂಕ್ಷೇಪವಾಗಿದ್ದು, ಕೆಲವಲ್ಲಿ ವಿಸ್ತಾರವಾಗಿವೆ. ಕೇಶಿರಾಜ ಬರೆದದ್ದು ಯಾವುದಿರಬಹುದು ಎಂದು ಖಂಡಿತವಾಗಿ ಹೇಳುವುದು ಕಷ್ಟ. ವೃತ್ತಿಗಳಲ್ಲಿರುವ ರೂಪ ಮತ್ತು ಪ್ರಮಾಣಗಳ ವ್ಯತ್ಯಾಸಗಳನ್ನು ಗಮನಿಸಿದರೆ, ಲಿಂಗಣಾರಾಧ್ಯನಂತೆ ಇತರರೂ ತಮತಮಗೆ ತೋರಿದಂತೆ ವೃತ್ತಿಗಳನ್ನು ಬರೆದಿರಬಹುದೆಂದು ಸಂದೇಹಪಡಲು ಅವಕಾಶವಿದೆ.

ಆದರೆ, ಪೀಠಿಕಾಪ್ರಕರಣದ ಈ ಪದ್ಯದಲ್ಲಿ ಕೇಶಿರಾಜ ವೃತ್ತಿಯನ್ನು ತಾನೇ ಬರೆದುದಾಗಿ ಹೇಳಿದ್ದಾನೆ :

ಪ್ರಾಸಚ್ಛಂದೋನ್ವಯ ವಿ-
ನ್ಯಾಸದಿನಂತಿಂತು ಶಬ್ದಮಿರ್ಕುಂ ; ವೃತ್ತಿ-
ವ್ಯಾಸಂ ತದ್‌ವ್ಯಾಕುಲಮೆಂ-
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇಳ್ದೆಂ

---

* ತೊಲ್‌ಕಾಪ್ಪಿಯರ್ ಅವರ ‘ತೊಲ್‌ಕಾಪ್ಪಿಯಮ್’ ಎಂಬುದು ಅತ್ಯಂತ ಪ್ರಾಚೀನವಾದ ತಮಿಳು ವ್ಯಾಕರಣ (ಕ್ರಿ. ಶ. 1 – 2 ಶತಮಾನ). ಎಲ್ಲ ವ್ಯಾಕರಣಗಳಿಗಿಂತ ಹೆಚ್ಚು ಪ್ರಚುರವಾಗಿರುವ ವ್ಯಾಕರಣ ‘ನನ್ನೂಲ್’ (ಕ್ರಿ. ಶ. 12ನೆಯ ಶತಮಾನ) ; ಇದರ ಕರ್ತೃ ಭವನಂದಿ ಎಂಬ ಜೈನ. ಅತ್ಯಂತ ಪ್ರಾಚೀನ ತೆಲುಗು ವ್ಯಾಕರಣ ‘ಆಂಧ್ರ ಶಬ್ದಚಿಂತಾಮಣಿ’ ; ಇದರ ಕರ್ತೃ ನನ್ನಯ್ಯಭಟ್ಟ (ಕ್ರಿ. ಶ. 11ನೆಯ ಶತಮಾನ). ಸಂಸ್ಕೃತದಲ್ಲಿರುವ ಈ ವ್ಯಾಕರಣಕ್ಕೆ ಸಂಸ್ಕೃತದಲ್ಲೂ ತೆಲುಗಿನಲ್ಲೂ ಅನೇಕ ವ್ಯಾಖ್ಯಾನಗಳು ಹುಟ್ಟಿವೆ. 13ನೆಯ ಶತಮಾನದಲ್ಲಿ ಕೇತನನು ‘ಆಂಧ್ರಭಾಷಾಭೂಷಣವನ್ನೂ’ ಅಥರ್ವಣಾಚಾರ್ಯ ಎಂಬ ಜೈನನು ‘ತ್ರಿಲಿಂಗಶಬ್ದಾನುಶಾಸನ’ವನ್ನೂ ರಚಿಸಿದ್ದಾರೆ.

"ಪ್ರಾಸಯೋಜನೆ, ಛಂದಸ್ಸಿನ ನಿರ್ಬಂಧ, ಅನ್ವಯಕ್ಕೆ ಸಂಬಂಧಪಟ್ಟ ತೊಡಕುಗಳು - ಈ ಕಾರಣಗಳಿಂದ ಶಬ್ದಗಳು ಎಲ್ಲೆಲ್ಲಿಯೋ ಇರುತ್ತವೆ. ಅವುಗಳನ್ನು ಅನುಸರಿಸಿದ ವೃತ್ತಿಯಲ್ಲಿ ಸಂದೇಹವುಂಟಾಗಬಹುದೆಂದು, ಸೂತ್ರಕ್ಕೆ ತಾತ್ಪರ್ಯದ ಅರ್ಥ ವಿಶದಪಡುವಂತೆ ಹೇಳಿದ್ದೇನೆ" ಎಂದು ಕೇಶಿರಾಜನೇ ಬರೆದಂತೆ ಈ ಪದ್ಯವನ್ನೂ ಯಾರೋ ಬರೆದು ಸೇರಿಸಿದ್ದಾರೆ ಎಂಬ ಅಭಿಪ್ರಾಯವೂ ಇದೆ. ಹಾಗೆ ತಿಳಿಯುವುದು ಸರಿಯಲ್ಲ. ಪೇಳ್ದೆಂ (ಅಥವಾ ಬರೆದೆಂ) ಎಂದು ಉತ್ತಮ ಪುರುಷ ಪ್ರಯೋಗವಿರುವ ಪದ್ಯ ಇನ್ನೊಬ್ಬನದಾಗಿದ್ದರೆ ಲಿಂಗಣಾರಾಧ್ಯನಂತೆ ಅವನು ತನ್ನ ಹೆಸರನ್ನು ಹೇಳಿಕೊಳ್ಳದೆ ಇರುತ್ತಿರಲಿಲ್ಲ. ನಾಗವರ್ಮನ ಶಬ್ದಸ್ಮೃತಿಯನ್ನೂ ಅವನದೇ ವೃತ್ತಿಯುಳ್ಳ ಭಾಷಾಭೂಷಣವನ್ನೂ ಅನುಸರಿಸಿ ವ್ಯಾಕರಣವನ್ನು ರಚಿಸಿರುವ ಕೇಶಿರಾಜನು ಅವನ ಮೇಲ್ಪಂಕ್ತಿಯನ್ನೇ ಅನುಸರಿಸಿ ವೃತ್ತಿಯನ್ನು ಬರೆದಿದ್ದಾನೆ ಎಂದು ತಿಳಿಯುವುದೇ ಸರಿ. ಇತರರ ಕೈವಾಡದಿಂದ ವೃತ್ತಿಯ ರೂಪದಲ್ಲಿ ವ್ಯತ್ಯಾಸಗಳಾಗಿರುವ ಸಾಧ್ಯತೆಯೇನೋ ಇದೆ.

ಕೇಶಿರಾಜನ ಪ್ರಯೋಗಗಳ ಬಗೆಗೂ ಇದೇ ಬಗೆಯ ಸಂದೇಹಗಳು ತಲೆದೋರುತ್ತವೆ. ಕೆಲವು ಪ್ರತಿಗಳಲ್ಲಿ ಪೂರ್ವಕವಿಗಳ ಉದಾಹರಣ ಪದ್ಯಗಳು ಭಾಗಶಃ ಮಾತ್ರ ದೊರಕುತ್ತವೆ; ಕೆಲವು ಪ್ರತಿಗಳಲ್ಲಿ ಅವೇ ಪದ್ಯಗಳು ಇಡಿಯಾಗಿ ಉದಾಹೃತವಾಗಿವೆ. ಉದಾಹರಿಸುವ ಪದ್ಯ ನೀರಸವಾಗಿದ್ದು ವ್ಯಾಕರಣಪ್ರಯೋಗದೃಷ್ಟಿಯಿಂದ ಮುಖ್ಯವಾಗಿದ್ದರೆ, ಸಂಬಂಧಪಟ್ಟ ಪದ್ಯಭಾಗವನ್ನು ಮಾತ್ರ ಕೇಶಿರಾಜ ತೆಗೆದುಕೊಂಡಿರಬಹುದು. ಪದ್ಯ ಸ್ವಾರಸ್ಯವಾಗಿದ್ದರೆ ಇಡಿಯ ಪದ್ಯವನ್ನೇ ಅವನು ಸೇರಿಸಿಕೊಂಡಿರುವ ಸಾಧ್ಯತೆಯೂ ಇದೆ. ಈ ವಿಷಯದಲ್ಲಿ, "ಕೇಶಿರಾಜನ ಪ್ರಯೋಗ ಇಡಿ ಪದ್ಯ ರೂಪವಾಗಿತ್ತೆ ಅಥವಾ ಪದ್ಯ ಭಾಗ ಮಾತ್ರವಾಗಿತ್ತೆ ಎಂಬ ಪ್ರಶ್ನೆಗೆ 'ಇದಮಿತ್ಥಂ' (ಇದು ಹೀಗೆಯೇ) ಎಂದು ಉತ್ತರ ಹೇಳುವಹಾಗಿಲ್ಲ" ಎಂಬ ಡಿ. ಎಲ್. ನರಸಿಂಹಾಚಾರ್ಯರ ಅಭಿಪ್ರಾಯವನ್ನು ಒಪ್ಪಬೇಕಾಗುತ್ತದೆ.

ಇದು ಹೇಗಿದ್ದರೂ, ಅವನ ಪ್ರಯೋಗಪ್ರಪಂಚವನ್ನು ಒಟ್ಟಿನಲ್ಲಿ ಪರಿಶೀಲಿಸಿದರೆ ಅವನ ಸೂಕ್ಷ್ಮವಾದ ಶಾಸ್ತ್ರದೃಷ್ಟಿ, ವ್ಯಾಕರಣಲಕ್ಷಣ ಜ್ಞಾನ, ಕಾವ್ಯಪರಿಚಯ ಹಾಗೂ ಸ್ಮರಣ ಶಕ್ತಿ, ಕಾವ್ಯಾಭಿರುಚಿ, ಸಂಗ್ರಹ ಕೌಶಲ, ಅಪಾರ ಪರಿಶ್ರಮ- ಇವು ನಮಗೆ ಗೋಚರವಾಗುತ್ತವೆ. ಪ್ರಯೋಗಗಳ

ಸಂಖ್ಯೆಯೇ ಸುಮಾರು 730.* ಅನೇಕ ಪ್ರಯೋಗಗಳು ನೀತಿ ಪರವಾದ ಕವಿಸೂಕ್ತಿಗಳಾಗಿದ್ದು, ನಾಣ್ನುಡಿಗಳಂತಿವೆ. ವಿಷಯ ದೃಷ್ಟಿಯಿಂದ ಪ್ರಯೋಗಗಳಲ್ಲಿ ವೈವಿಧ್ಯವಿದೆ. ಯಾವ ಪೂರ್ವ ಕವಿಗಳ ಕೃತಿಗಳಿಂದ ಪ್ರಯೋಗಗಳನ್ನು ಸಂಗ್ರಹಿಸಿದೆ ಎಂಬುದನ್ನು ಕೇಶಿರಾಜನು ಈ ಕೆಳಗಿನ ಪದ್ಯದಲ್ಲಿ ತಿಳಿಸಿದ್ದಾನೆ :

ಗಜಗನ, ಗುಣನಂದಿಯ, ಮನ-
ಸಿಜನ, ಅಸಗನ, ಚಂದ್ರಭಟ್ಟಗುಣವರ್ಮ ಶ್ರೀ-
ವಿಜಯರ, ಪೊನ್ನನ, ಪಂಪನ,
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ

ಈ ಕವಿಗಳಲ್ಲದೆ, ರನ್ನ, ನಾಗಚಂದ್ರ, ನಾಗವರ್ಮ, ನೇಮಿಚಂದ್ರ, ಬ್ರಹ್ಮಶಿವ, ಹಂಸರಾಜ ಮುಂತಾದ ಕವಿಗಳಿಂದಲೂ ಕೇಶಿರಾಜನು ಪ್ರಯೋಗಗಳನ್ನು ಆರಿಸಿಕೊಂಡಿದ್ದಾನೆ. ಅಲ್ಲದೆ, ಕವಿಗಳ ಹೆಸರು ಗೊತ್ತಿಲ್ಲದ ಅನೇಕ ಪ್ರಯೋಗಗಳೂ ಬೇರೆ ಬೇರೆ ಶಾಸ್ತ್ರಗ್ರಂಥಗಳಿಂದ ಆಯ್ದ ವಾಕ್ಯಗಳೂ ದೊರಕುತ್ತವೆ. ಒಟ್ಟಿನಲ್ಲಿ ತನಗಿಂತ ಹಿಂದಿನ ಮತ್ತು (ಬಹುಶಃ) ತನ್ನ ಕಾಲದ ಸಾಹಿತ್ಯದ ಮತ್ತು ಗ್ರಂಥಸ್ಥ ಭಾಷೆಯ ಸ್ವರೂಪವನ್ನು ಕೇಶಿರಾಜನು ಪ್ರಯೋಗಗಳ ಮೂಲಕ ಪರಿಚಯ ಮಾಡಿಕೊಟ್ಟು, ಶಾಸ್ತ್ರ ಗ್ರಂಥಕ್ಕೆ ಕಾವ್ಯದ ಸವಿಯನ್ನೂ ಬೆರಸಿದ್ದಾನೆ. ಮಲ್ಲಿಕಾರ್ಜುನನು 'ಸೂಕ್ತಿಸುಧಾರ್ಣವ' ಸಂಕಲನಕ್ಕಾಗಿ ಸಂಗ್ರಹಿಸಿದ್ದ ಅಮೂಲ್ಯ ಗ್ರಂಥ ಭಂಡಾರವು ಮಗನ ವ್ಯಾಕರಣ ರಚನೆಗೆ ಒದಗಿಬಂದಿರುವುದರಲ್ಲಿ ಸಂದೇಹವಿಲ್ಲ.

ಪ್ರಯೋಗಗಳ ಸ್ವರೂಪವನ್ನು ಕೆಲವು ಉದಾಹರಣೆಗಳ ಮೂಲಕ ಪರಿಚಯ ಮಾಡಿಕೊಳ್ಳಬಹುದು :

(i) ಪದ್ಯ ಮತ್ತು ಪದ್ಯಭಾಗ ಉದಾಹೃತವಾಗಿರುವುದು :

---

* ಈ ಸಂಖ್ಯೆ ಡಿ. ಎಲ್. ಎನ್. ಸಂಪಾದಿತ ಮುದ್ರಣದಲ್ಲಿ ಎಣಿಕೆಮಾಡಿದ್ದು ''ಶಬ್ದಮಣಿದರ್ಪಣದಲ್ಲಿ ಸುಮಾರು 850 ಪ್ರಯೋಗ ವಾಕ್ಯಗಳನ್ನು ಉದಾಹರಿಸಿದೆ'' ಎಂದು ಮದರಾಸು ವಿಶ್ವವಿದ್ಯಾನಿಲಯದ ಮುದ್ರಣದ ಅವತರಣಿಕೆ ಬರೆದಿರುವವರು ತಿಳಿಸುತ್ತಾರೆ.

ಪಡೆದಂ ರಜೋಽಧಿಕಂ ಬಿದಿ
ಪೆಡೆವಣಿಯುಂ ಫಣಿಯುಂ, [ಅಮೃತರಸಮುಂ ವಿಷಮುಂ,
ಕಡಲಂ ಸುಳಿಯುಂ, ಮಳೆಯುಂ
ಸಿಡಿಲಂ, ಪಡೆವಂತೆ ಸುಜನರಂ ದುರ್ಜನರಂ]

ಧಾತುವಿಗೆ ಮೂರು ಪುರುಷಗಳಲ್ಲಿಯೂ ಭೂತಕಾಲದಲ್ಲಿ ಕಾಲಸೂಚಕ 'ದ' ಪ್ರತ್ಯಯವು ಪುರುಷವಾಚಕ ವಿಭಕ್ತಿಯ ಮೊದಲಲ್ಲಿ ಬರುತ್ತದೆ ಎಂಬ ನಿಯಮಕ್ಕೆ ಎಲ್ಲ ಪ್ರತಿಗಳಲ್ಲಿಯೂ ಪದ್ಯಭಾಗ ಮಾತ್ರ ಉದಾಹೃತವಾಗಿದೆ. ಉಸ್ಮಾನಿಯ ವಿಶ್ವವಿದ್ಯಾನಿಲಯದ 'ಹೊಸ ಪ್ರತಿ'ಯಲ್ಲಿ ಇಡಿಯ ಪದ್ಯವಿದೆ; ಉದಾಹರಣೆಗೆ ಇದು ಅನಗತ್ಯವಾದರೂ, ಇಡಿಯ ಪದ್ಯದಿಂದ ಸೃಷ್ಟಿಯ ನಿಯಮ ಮನಮುಟ್ಟುತ್ತದೆ. ಗ್ರಂಥದ ಸ್ವಾರಸ್ಯ ಹೆಚ್ಚುತ್ತದೆ. ಇದೇ 'ಹೊಸ ಪ್ರತಿ'ಯಲ್ಲಿ 'ಪಾರುತ್ತರಂಗಿಣಿಯುಮೊಳ್ದಾಲಿಂಗನಂ ಮಾಡುವಂ' ಎಂಬ ಉದಾಹರಣವಾಕ್ಯದ ಕೆಳಗೆ 'ರಾಮಚರಿತೆ' ಎಂಬ ಗ್ರಂಥದ ಹೆಸರಿದೆ. ಇದು ನಾಗಚಂದ್ರನ ರಾಮಚಂದ್ರಚರಿತಪುರಾಣದಲ್ಲಿಲ್ಲವಾದ್ದರಿಂದ, ಬೇರೊಂದು ರಾಮಾಯಣವಾಗಿರಬಹುದು; ಇನ್ನೂ ದೊರಕಿಲ್ಲದ ಶ್ರೀವಿಜಯನ 'ರಘುವಂಶ ಮಹಾಪುರಾಣ'ದ ಪದ್ಯಭಾಗವಿದ್ದರೂ ಇರಬಹುದು.

(ii) ವಿಧ್ಯರ್ಥದಲ್ಲಿ 'ಇಂ' ಎಂಬ ಪ್ರತ್ಯಯಕ್ಕೆ ಇದೇ ಹೊಸ ಪ್ರತಿಯಲ್ಲಿ ಈ ಕೆಳಗಿನ ಪದ್ಯ ಹೆಚ್ಚಿನದಾಗಿ ಉದಾಹೃತವಾಗಿದೆ (ಈ ಪದ್ಯವೂ ರಾಮಾಯಣ ಕಥೆಗೇ ಸಂಬಂಧಪಟ್ಟಿರುವುದಾಗಿದೆ. ಇದು ಪಂಪ ರಾಮಾಯಣದಲ್ಲಿ ಇಲ್ಲ. ಮೇಲೆ ಹೆಸರಿಸಿದ 'ರಾಮ ಚರಿತೆ'ಯದೇ ಆಗಿರಬಹುದು.) :

ಗಗನಾಧ್ವರ್ ಸರಣಾಗಿಂ ಆಗಿಂ ; ಅಮರರ್ ಒಂದಾಗಿಂ ಆಗಿಂ ; ದಿಶಾ-
ಳಿಗಧೀಶರ್ ನೆರೆದೊಡ್ಡಿಂ ಒಡ್ಡಿಂ : ಉರಗರ್ ಬಂದೆಯ್ದಿಂ ಎಯ್ದಿಂ ; ಮನ-
ಸ್ವಿಗಳೀದೈತ್ಯನಂ ಇಕ್ಕಿಂ ಇಕ್ಕಿಂ ; ಅದಟರ್ ಪೂಣ್ದರ್ನ್ಮಿಂ ಅರ್ನ್ಮಿಂ ; ಯಶೋ-
ರ್ಥಿಗಳೆನ್ನಂ ನೆಲೆಗುಯ್ಯಿಂ ಉಯ್ಯಿಂ - ಎನುತುಂ ತನ್ವಂಗಿ ಪುಯ್ಯಲ್ಚಿದಳ್.[7]

[ಗಗನಾಧ್ವರ್ – ಆಕಾಶಮಾರ್ಗದಲ್ಲಿ ಹೋಗುವವರು, ಖೇಚರರು. ಅಮರರ್ = ದೇವತೆಗಳು. ದಿಶಾಳಿಗಧೀಶರ್ = ದಿಕ್ಪಾಲಕರು. ನೆರೆದೊಡ್ಡಿಂ = ಗುಂಪಾಗಿ ಎದುರಿಸಿ. ಉರಗರ್ = (ಪಾತಾಳದ) ನಾಗರು. ಮನಸ್ವಿ = ವಿವೇಕಿಗಳು. ದೈತ್ಯ = ರಾಕ್ಷಸ. ಇಕ್ಕಿಂ = ಕೊಲ್ಲಿರಿ. ಅದಟರ್ = ಪರಾಕ್ರಮಿಗಳು. ಪೂಣ್ದರ್ನ್ಮಿಂ = (ಪೂಣ್ದುಂ + ಅರ್ನ್ಮಿಂ) ಪ್ರತಿಜ್ಞೆಮಾಡಿ, ಬಲವನ್ನು ತೋರಿಸಿರಿ. ಯಶೋರ್ಥಿ = ಕೀರ್ತಿಯನ್ನು ಬಯಸುವವರು. ನೆಲೆಗೆ = (ನನ್ನ) ಸ್ಥಳಕ್ಕೆ. ಉಯ್ಯಿಂ = ಕರೆದುಕೊಂಡುಹೋಗಿ. ತನ್ವಂಗಿ = ತೆಳ್ಳನೆಯ ದೇಹವುಳ್ಳವಳು. ಪುಯ್ಯಲ್ಚಿದಳ್ = ಮೊರೆಯಿಟ್ಟಳು.]

(iii) ಈ ಕೆಳಗಿನ ಎರಡು ಉದಾಹರಣೆಗಳೂ ರಾಮಾಯಣ ಕಥೆಗೇ ಸಂಬಂಧಪಟ್ಟಿವೆ.

"ಪೇರಿರ್ದ್ದಿರ್ಪತ್ತು ತೋಳುಂ ದಶಮುಖಕಂಪರಾಟೋಪಮುಂ......"
- ಸೂತ್ರ 76, ಉದಾ. 6 (ಡಿ. ಎಲ್. ಎನ್. ಪರಿಷ್ಕರಣ)
ನಿನಗೆನಗೆ ತನಗೆ ತೀರ್ಗುಮೆ।
ಹನುಮಂತನ ಶಕ್ತಿಸಾಹಸಂ ರಿಪುವಿಜಯಂ ॥
- ಸೂ. 157, ಉದಾ. 2 (ಡಿ. ಎಲ್. ಎನ್. ಪರಿಷ್ಕರಣ)

(iv) ಶಬ್ದಮಣಿದರ್ಪಣದಲ್ಲಿ ಮಹಾಭಾರತ ಕಥೆಗೆ ಸಂಬಂಧಪಟ್ಟಂತೆಯೇ ಸುಮಾರು 100 ಪ್ರಯೋಗಗಳಿವೆ ಎಂಬುದು ಆಶ್ಚರ್ಯದ ಸಂಗತಿ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ, ಇವುಗಳಲ್ಲಿ 25ಕ್ಕೆ ಮಾತ್ರ ಪಂಪ ಭಾರತದಲ್ಲೂ ರನ್ನನ ಗದಾಯುದ್ಧದಲ್ಲೂ ಆಕರಗಳು ದೊರೆಯುತ್ತವೆ. ಈ "25 ಪ್ರಯೋಗಗಳನ್ನು ತೆಗೆದು ಹಾಕಿದರೆ ಇನ್ನೂ 75 ಪ್ರಯೋಗಗಳು ಉಳಿಯುತ್ತವೆ. ಈ 75 ಪ್ರಯೋಗಗಳಿಗೆ ಉಪಲಬ್ಧವಿದ್ದ ಕನ್ನಡದ ಯಾವ ಭಾರತದಲ್ಲಿಯೂ ಆಕರ ಸಿಗುವುದಿಲ್ಲ. ಕೇಶಿರಾಜನು ಇವುಗಳನ್ನು ಯಾವುದೋ ಅನುಪಲಬ್ಧ ಭಾರತದಿಂದ ಅಥವಾ ಭಾರತಗಳಿಂದ ಸ್ವೀಕರಿಸಿರಬೇಕು".8

(v) ಇನ್ನು ಕೆಲವು ಸ್ವಾರಸ್ಯವಾದ ಉದಾಹರಣೆಗಳು :

ಮರವಣೆಗಂ ಬೀಣೆಗಂ ಅಂ-
ತರಮಾವುದೊ ; ದೋಷರಹಿತ ಮೃದುಲಲಿತ ಪದ
ಸ್ಫುರಿತ ಸರಸೋಕ್ತಿಗಂ ನಿ-
ಷ್ಠುರಕುಕವಿ ಕಟೂಕ್ತಿಗಳ್ಗಮೇನಂತರಮೋ.

[ಸುಶ್ರಾವ್ಯವಾದ ಒಳ್ಳೆಯ ಕವಿತೆ ವೀಣೆಯ ಹಾಗೆ ; ಕುಕವಿಯ ಕರ್ಕಶವಾದ ಕೆಟ್ಟಕವಿತೆ ಮರದ ಮಣೆಯನ್ನು ಬಡಿದ ಹಾಗೆ.]

"ಕಾಮನಗರಟಿಗೆ ವರ್ಪಂತೆ ಸುತ್ತಿ ವರ್ಪುವು ಗಿಳಿಗಳ್"
[ಗರಟಿಗೆ + ವರು (= ಬರು) = ಗಸ್ತುತಿರುಗು, ಕಾವಲಿರು, ಪಹರೆ ಇರು.]
"ಪೊನ್ನುಳ್ಳವನೆ ಕುಲೀನಂ"
"ಬಡವರ ಪಿತರರಂತೆ ಮರುಗುತ್ತಿರ್ಪಂ"

[ಬಡವರು ಶ್ರಾದ್ಧಮಾಡಲು ಹಣವಿಲ್ಲದೆ ಅದನ್ನು ಮಾಡದೆ ಹೋದರೆ ಅವನ ಮೃತರಾದ ಪಿತೃಗಳು ಸದ್ಗತಿ ಕಾಣದೆ ಗೋಳಾಡುವಂತೆ ಗೋಳಾಡುತ್ತಿರುವನು.]

"ಇನಿಯುವು ವಿಷಯ ಸುಖಂ ನಂಜಿನ ಸವಿಪೊಲ್."

[ವಿಷ ಸಿಹಿಯಾಗಿದ್ದರೂ ಕೊಲ್ಲುವಂತೆ ಇಂದ್ರಿಯ ಸುಖ ಹಿತಕರವಾಗಿದ್ದರೂ ಪರಿಣಾಮದಲ್ಲಿ ದುಃಖಕರ.]

"ಅವರಿವರುವರಳವೆ (= ಅವರ + ಇವರ + ಉವರ + ಅಳವೆ)
ಕಾವ್ಯವಿದ್ಯೆಗಳ್ ?"

[ಕವಿತಾರಚನೆಯು ವಿದ್ಯೆ ಸಾಮಾನ್ಯರಿಂದ ಸಾಧ್ಯವಿಲ್ಲ.]

"ಕವಿಗೆ ಕೇಡಿಲ್ಲೆಂದುಂ." [ಕೇಡು = ನಾಶ, ಅವಸಾನ.]
"ಕವಿಗೆ ಕವಿ ಮುನಿವಂ." [ಮುನಿ = ಕೋಪಿಸು]
"ಪಾಪಕ್ಕಂಜುವಂ ತಕ್ಕಂ." [ತಕ್ಕಂ = ಯೋಗ್ಯ, ಮಾನವಂತ]
"ಬಿರುದರ್ಗೆ ಬಿರುದರ್ ಸೆಣಸುವರ್." [ಸೆಣಸು = ಹುದುಡಿಸು, ಪೈಪೋಟಿಮಾಡು.]

"ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೆ ?"

[ವಯಸ್ಸಿನಲ್ಲಿ ಚಿಕ್ಕವರಾದವರು ತಿಳಿವಳಿಕೆಯುಳ್ಳವರಾದರೆ ಅವರು ಕೊಡುವ ಅಭಿಪ್ರಾಯ ಬೆಲೆಯುಳ್ಳದ್ದಾಗಿರಬಹುದು ಎಂದು ಭಾವ.]

ಶಬ್ದಮಣಿದರ್ಪಣದ ವೈಶಿಷ್ಟ್ಯಗಳು

ತನ್ನ ವ್ಯಾಕರಣದಲ್ಲಿ ನಿರೂಪಿಸಿರುವ ವಿಶೇಷ ವಿಚಾರಗಳನ್ನು ಕೇಶಿರಾಜನೇ ಹೀಗೆ ಒಕ್ಕಣಿಸಿದ್ದಾನೆ:

'ಗಮಕ ಸಮಾಸ'ದಿಂ, 'ಱಟ-ಕುೞ-ಕ್ಷಳ'ದಿಂ, 'ಶ್ರುತಿ ಸಹ್ಯ ಸಂಧಿ'ಯಿಂ,
ಸಮುಚಿತಮಾಗಿ ಬರ್ಪ 'ಸತಿಸಪ್ತಮಿ'ಯಿಂ, 'ಸಮಸಂಸ್ಕೃತೋಕ್ತಿ'ಯಿಂ,
'ವ-ಮ-ಪ-ಪ ಭೇದ'ದಿಂ, 'ವಿರಹಿತಾವ್ಯಯ ಸಂಸ್ಕೃತಲಿಂಗ'ದಿಂ ಪದೋ-
ತ್ತಮ 'ಶಿಥಿಲತ್ವ'ದಿಂ, 'ಯತಿವಿಲಂಘನ'ದಿಂದರಿದಪ್ಪ ಕನ್ನಡಂ.*

[ಶ್ರುತಿಸಹ್ಯ = ಕೇಳುವುದಕ್ಕೆ ಹಿತವಾದ. ಸಮುಚಿತಮಾಗಿ = ಉಚಿತವಾದ ರೀತಿಯಲ್ಲಿ. ವಿರಹಿತಾವ್ಯಯ = ಸಮಾಸವಾಗದೆ ಬೇರೆಯಾಗಿರುವ ಅವ್ಯಯ. ಶಿಥಿಲತ್ವ = ಶಿಥಿಲದ್ವಿತ್ವ. ಯತಿ ವಿಲಂಘನ = ಯತಿಯನ್ನು ಮೀರುವುದು. ಅರಿದು = ಅಪೂರ್ವ.]

ಈ ಪದ್ಯವನ್ನು ಕೇಶಿರಾಜನೇ ಬರೆದಿರುವನೇ, ಇಲ್ಲವೆ ಈಚಿನವರು ಬರೆದು ಸೇರಿಸಿರುವರೇ. ಎಂಬ ಸಂದೇಹದ ಪ್ರಶ್ನೆಗೆ ಅವಕಾಶವಿದೆ. ಈ

* ಇಲ್ಲಿ ಹೇಳಿರುವ ವ್ಯಾಕರಣ ವಿಚಾರಗಳನ್ನು ವಿವರಿಸುವುದಕ್ಕೆ ಅವಕಾಶವೂ ಇಲ್ಲ, ಇದು ಸ್ಥಳವೂ ಅಲ್ಲ, ಒಂದೆರಡು ವಿಚಾರಗಳನ್ನು ಉದಾಹರಣೆಗಾಗಿ ಮುಂದೆ ಹೇಳಿದೆ.

ವಿಚಾರದಲ್ಲಿ ನಿರ್ಧಾರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. 'ಸಮಾಪ್ತಿ ವಾಕ್ಯಂಗಳ್' ಎಂಬ ಪದ್ಯಮಾಲೆಯಲ್ಲಿ ತನ್ನ ವಿಷಯವಾಗಿ ಕೇಶಿರಾಜನು ಹೆಮ್ಮೆಯ ಮಾತುಗಳನ್ನು ಹೇಳಿಕೊಂಡಿರುವುದರಿಂದ, ಕೃತಿಯ ವೈಶಿಷ್ಟ್ಯ ವನ್ನು ತಿಳಿಸುವ ಈ ಪದ್ಯವನ್ನೂ ಅವನೇ ಬರೆದಿರುವ ಸಂಭವವೇ ಹೆಚ್ಚಾಗಿದೆ.

1. **ಗಮಕ ಸಮಾಸ :** ನಾಗವರ್ಮನು ತನ್ನ ವ್ಯಾಕರಣಗಳಲ್ಲಿ ಈ ಸಮಾಸದ ವಿಚಾರವನ್ನು ಎತ್ತಿಲ್ಲ. ಸಂಸ್ಕೃತದ ವ್ಯಾಕರಣಗಳಲ್ಲಿ ಈ ಸಮಾಸಕ್ಕೆ ಅವಕಾಶವೇ ಇಲ್ಲ. ಕನ್ನಡ ಭಾಷೆಯ ಪ್ರಯೋಗಗಳನ್ನು ಗಮನಿಸಿ, ಇದನ್ನು ಮೊತ್ತಮೊದಲಿಗೆ ಗುರುತಿಸಿ ವಿವರಿಸಲು ಪ್ರಯತ್ನಪಟ್ಟಿರುವುದು ನಿಜವಾಗಿ ಮೆಚ್ಚತಕ್ಕ ಸಂಗತಿ. ಕೆಲವು ಗಮಕ ಸಮಾಸದ ಉದಾಹರಣೆಗಳಲ್ಲಿ ಕನ್ನಡ-ಸಂಸ್ಕೃತ ಪದಗಳಿಗೆ ಸಮಾಸವಾಗುವುದರಿಂದ, ಇಲ್ಲಿ 'ಅರಿಸಮಾಸ'ದ ದೋಷ ವಿಲ್ಲ ಎಂದು ಕೇಶಿರಾಜ ಹೇಳಬೇಕಾಯಿತು. ಇದು ಕರ್ಮಧಾರಯ ಸಮಾಸದ ಒಂದು ಪ್ರಭೇದವೆಂದೂ ಹೇಳಿದ್ದಾನೆ. ಗಮಕಸಮಾಸ ವಿಚಾರ ಇವನ ಸ್ವತಂತ್ರ ವಾದ ವಿಚಾರಶಕ್ತಿಗೆ ಉತ್ತಮವಾದ ಉದಾಹರಣೆ. (ಗಮಕ ಸಮಾಸದ ಕೆಲವು ಉದಾಹರಣೆಗಳು : ಕಿರಿಯ ಮಗಂ, ನಿಡಿಯ ನಾಲಗೆ ; ಮೂವತ್ತಾರು; ಅವಕಾರ್ಯಂ ; ಪಾಡುವ ತುಂಬಿ ; ಕಂಡ ವಿಚಾರಂ ; ಆದ ವಿಷ್ಣು ವಿಜಯಾ ದಿತ್ಯಂ ; ಬಾರದ ಭವಂ ; ಆ ಮನೆ, ಈ ರಾಮನಿಂ ; ಎಲ್ಲಾ ಕಾರ್ಯಂ ; ಮಾ ಲಕುಮಿ, ಮಾದೇವ.)

2. **ಱ (ರಳ)-ಕುಳ-ಕ್ಷಳ :** 'ಱ' ಕಾರದ ಉಚ್ಚಾರಣೆ ಹೊಸಗನ್ನಡ ದಲ್ಲಿ ಇಲ್ಲ ; ತೆಲುಗಿನಲ್ಲಿಯೂ ಈಗ ಇಲ್ಲ ; ತಮಿಳು ಮಲಯಾಳಗಳಲ್ಲಿ ಇಂದಿಗೂ ಉಳಿದುಕೊಂಡುಬಂದಿದೆ. ಕೇಶಿರಾಜನ ಕಾಲಕ್ಕೂ ಹಿಂದೆಯೇ ಇದರ ಉಚ್ಚಾರಣೆ ಸಡಿಲವಾಗುತ್ತ ಬಂದು, ಕೆಲವು ಶಬ್ದಗಳಲ್ಲಿ 'ಳ' ಕಾರ ವಾಗಿಯೂ ಇನ್ನು ಕೆಲವಲ್ಲಿ 'ಱ' (ಹಳಗನ್ನಡದ 'ರ') ಕಾರವಾಗಿಯೂ, ಮತ್ತೂ ಕೆಲವಲ್ಲಿ 'ರ' ಕಾರವಾಗಿಯೂ ಮಾರ್ಪಾಡು ಹೊಂದುತ್ತ ಬಂತು. (ಉದಾ., ಪವಱ-ಪವಳ-ಹವಳ , ಗಱ್ದೆ-ಗರ್ದೆ-ಗದ್ದೆ). 'ಕುಳ' ಎಂದರೆ ಕನ್ನಡದಲ್ಲಿ ಸಹಜವಾಗಿಯೇ ಉಚ್ಚಾರವಾಗುವ 'ಳ' ಕಾರ. (ಪೊಳ್-ಪೊಳ್ಳು-ಹೊಳ್ಳು ; ಕಳ್ ; ಕಳವು, ಮುಂತಾದುವು). 'ಕ್ಷಳ' ಎಂದರೆ ಸಂಸ್ಕೃತ

‘ಲ’ ಕಾರವನ್ನು ಕನ್ನಡದಲ್ಲಿ ‘ಳ’ ಕಾರವಾಗಿ ಉಚ್ಚರಿಸುವುದು. (ಉದಾ., ಉತ್ಪಲಂ–ಉತ್ಪಳಂ ; ಜಲಂ–ಜಳಂ ; ಫಲಂ–ಫಳಂ, ಇತ್ಯಾದಿ.) ಈ ಮೂರು ಅಕ್ಷರಗಳ ಉಚ್ಚಾರಣೆಯಲ್ಲಿಯೂ ಭೇದಗಳಿದ್ದುದರಿಂದ ಪ್ರಾಚೀನ ಜೈನ ಕವಿಗಳು ಉಚ್ಚಾರವಾದಂತೆಯೇ ಬರಹದಲ್ಲೂ ಲಿಪಿ ಭೇದಗಳನ್ನು ಕಾಣಿಸಿ, ಪದ್ಯದ ಪ್ರಾಸಸ್ಥಾನದಲ್ಲಿ ಅವುಗಳನ್ನು ಬೆರಕೆಮಾಡುತ್ತಿರಲಿಲ್ಲ. ಆದರೆ, ಪಂಪ ಪೊನ್ನ ರನ್ನರ ತರುವಾಯ ಪ್ರೌಢ ಜೈನಕಾವ್ಯಗಳಲ್ಲಿ ಇಂತಹ ಬೆರಕೆಗೆ ಪ್ರಾರಂಭವಾಯಿತು. ಜನಸಮುದಾಯದಲ್ಲಿ ‘ಳ’ ಮತ್ತು ‘ಲ’ ಕಾರಗಳ ಉಚ್ಚಾರಣೆಯಲ್ಲಿಯೇ ಮಾರ್ಪಾಡಾಗುತ್ತಿದ್ದುದೇ ಇದಕ್ಕೆ ಕಾರಣ. ಹೀಗಾಗಿ, ಈ ಮೂರಕ್ಷರಗಳ ಕವಿ ಪ್ರಯೋಗದಲ್ಲಿ ಅವ್ಯವಸ್ಥೆಯೂ ದೋಷಗಳೂ ಕಾಣಿಸಿಕೊಳ್ಳತೊಡಗಿದ್ದುವು. ಇದನ್ನು ಕಂಡೇ, ಕ್ರಾಂತಿ ಕವಿಯಾದ ಹರಿಹರನು ತನ್ನ ‘ಗಿರಿಜಾ ಕಲ್ಯಾಣ’ದಲ್ಲಿ :

> **ನೋಡುವೊಡೆ ಒಂದಕ್ಕರಮದು ;**
> **ಮಾಡುವೊಡೆ ಉಚ್ಚರಣೆಗೆ ಅರಿದು ; ಮೂರುಂ ತೆರನಂ**
> **ಕೂಡೆ ಕವಿತತಿ ವಿಚಾರಿಸ-**
> **ಬೇಡ ಅದರಿಂ ಱಳ-ಕುಳ-ಕ್ಷಳಂಗಳ ನಿದರೊಳ್.**

[ವಿಚಾರಮಾಡಿ ನೋಡಿದರೆ (ರಳ-ಕುಳ-ಕ್ಷಳ ಎಂಬ ಮೂರು ಅಕ್ಷರಗಳೂ) ನಿಜವಾಗಿ ಒಂದೇ ಅಕ್ಷರ ; ಅದನ್ನು ಮೂರು ರೀತಿಯಲ್ಲಿ ಉಚ್ಚಾರಣೆ ಮಾಡುವುದು ಅಸಾಧ್ಯ (= ಅರಿದು). ಆದ್ದರಿಂದ, ಮೂರು ತೆರನಾಗಿರುವ ಈ ಒಂದೇ ಅಕ್ಷರದ ಭೇದರೂಪಗಳನ್ನು ಕವಿಗಳಾದವರು ಈ ಕಾವ್ಯದಲ್ಲಿ ವಿಚಾರಕ್ಕೆ ತೆಗೆದುಕೊಳ್ಳಬೇಡಿ].

—ಎಂದು ಘೋಷಿಸಿ, ಸಂಪ್ರದಾಯದ ಕಟ್ಟನ್ನು ಮುರಿದನು. ಎಲ್ಲ ಕಾಲಗಳಲ್ಲಿಯೂ ತಮ್ಮ ಕಾಲದ ಭಾಷೆಯಲ್ಲಿನ ಅಶುದ್ಧ ಪ್ರಯೋಗಗಳನ್ನು ಖಂಡಿಸಿ, ಅವುಗಳ ಶುದ್ಧರೂಪವನ್ನು ತೋರಿಸಿಕೊಟ್ಟು, ಭಾಷಾಶುದ್ಧಿಯನ್ನು ಕಾಪಾಡುವುದು ತಮ್ಮ ಕರ್ತವ್ಯವೆಂದು ವ್ಯಾಕರಣಕಾರರೂ ವ್ಯಾಕರಣ ನಿಯಮಪಾಲನೆಯಲ್ಲಿ ಶ್ರದ್ಧೆಯುಳ್ಳವರೂ ಭಾವಿಸುವುದು ಸಹಜ.* ಕೇಶಿ

---

* ಈಗ ಭಾಷೆಯ ಸ್ವರೂಪವನ್ನು ಅರಿಯದವರೂ ಅರಿತವರೂ ‘ವಿನಹ’ (ವಿನಾ), ಪುನಹ (ಪುನಃ), ತಿಳ (ಳು) ವಳಿಕೆ (ತಿಳಿವಳಿಕೆ), ಪದ್ಮಳನ್ನು, ಕಮಲಳನ್ನು (ಪದ್ಮನನ್ನು, ಕಮಲೆಯನ್ನು), ಜವಾಬ್ದಾರಿಯುತ (ಜವಾಬ್ದಾರಿಯಿಂದ ಕೂಡಿದ), ಮುಂದುವರೆ (ಮುಂದುವರಿ) ಎಂದು ಪ್ರಯೋಗಿಸುವುದು ರೂಢಿಗೆ ಬಿದ್ದಿದೆ. ಇಂಥ ಉದಾಹರಣೆಗಳು ಬೇಕಾದಷ್ಟಿವೆ.

ರಾಜನೂ ಈ ಮೂರು ಅಕ್ಷರಗಳ ನೆಲೆ–ಬೆಲೆಗಳನ್ನು ಗೊತ್ತುಪಡಿಸಿ, ಅನೇಕ ಸೂತ್ರಗಳಲ್ಲಿ ಈ ಸಂಬಂಧವಾದ ನಿಯಮಗಳನ್ನು ರಚಿಸಿದ; ಕನ್ನಡದಲ್ಲಿ 'ಱ' (ರಳ) ಅಕ್ಷರವುಳ್ಳ ಒಂದು ಸಮಗ್ರ ಪಟ್ಟಿಯನ್ನೇ ತಯಾರಿಸಿಟ್ಟ; ಕನ್ನಡ ಸಹಜವಾಗಿ 'ಲ' ಕಾರವಿದ್ದು, ಅವುಗಳನ್ನು 'ಳ' ಕಾರವಾಗಿ ಉಚ್ಚಾರ ಮಾಡಕೂಡದೆಂದು ವಿಧಿಸಿದ (ಉದಾ., "ಬೆರಲ್, ಒರಲ್, ಎರಲ್, ಕೊರಲ್, ಸರಲ್, ಅರಲ್, ಪರಲ್, ಮರಲ್, ಮುಂಗೈಸರಲ್ ಇವು ನಿತ್ಯ ಲಾಂತಂಗಳ್. ಇವಂ ಬೆರಳ್, ಕೊರಳ್ ಎಂದು ಕುಳನಾಗುಚ್ಚರಿಸಲಾಗದು," –ಸೂತ್ರ 38ರ ವೃತ್ತಿ). ಹುಚ್ಚು ಹರಿಯುತ್ತಿದ್ದ ಭಾಷಾ ಪ್ರವಾಹದ ಎದುರು ಕೇಶಿರಾಜ ಕಟ್ಟಿದ ಒಡ್ಡುಗಳು ಕೊಚ್ಚಿಹೋದುವು. ಆದರೆ, ಅವನ ಮಹಾ ಪ್ರಯತ್ನವನ್ನು ಮೆಚ್ಚಬೇಕು. ಮಹಾಪ್ರಯತ್ನವೊಂದರ ಸೋಲೂ ಗೆಲವಿನಷ್ಟೇ ಗಮನಾರ್ಹ.

ಕೇಶಿರಾಜನು ಮೇಲಿನ ಪದ್ಯದಲ್ಲಿ ಒಕ್ಕಣಿಸಿರುವ ಕನ್ನಡದ ವೈಶಿಷ್ಟ್ಯಗಳಲ್ಲದೆ, ಇನ್ನೂ ಅನೇಕ ವರ್ಣನಾತ್ಮಕ ವ್ಯಾಕರಣ ವಿಚಾರಗಳನ್ನು ವಿಶ್ಲೇಷಿಸಿ ಹೇಳಿರುವನು. ಇವು ಹಳಗನ್ನಡವನ್ನು ಅಭ್ಯಾಸ ಮಾಡುವವರಿಗೂ ಭಾಷಾ ಶಾಸ್ತ್ರದ ತಿಳಿವಳಿಕೆಗೂ ಕನ್ನಡ ಭಾಷಾ ಚರಿತ್ರೆಯ ಜಾಡನ್ನು ಗುರುತಿಸುವುದಕ್ಕೂ ಬಹಳ ಸಹಾಯಕವಾಗಿವೆ.

ಒಟ್ಟಿನ ಮೇಲೆ—

ಸಿರಿಗೆ ಈಕ್ಷಿಪ ರಸಚಿತ್ರಂ
ಸರಸತಿಗೆ ಎರಡನೆಯ ಬೀಣೆ, ಎನೆ ಸೌಭಾಗ್ಯಂ
ಕರಮಾದುದು ಎಂದು ಬುಧರ್ ಆ-
ದರಿಪರ್, ಮೆಚ್ಚು ಎಂದೆ ಶಬ್ದಮಣಿದರ್ಪಣಮಂ

[ಶಬ್ದಮಣಿದರ್ಪಣ ಲಕ್ಷ್ಮಿ ನೋಡತಕ್ಕ ರಸಚಿತ್ರ; ಸರಸ್ವತಿಯ ಕೈಯ ಎರಡನೆಯ ವೀಣೆ-ಎನ್ನುವಂತೆ ಇದರ ಸೌಭಾಗ್ಯವು ಅತಿಶಯವಾಗಿದೆ, ಎಂದು ಹೇಳಿ, 'ಇದು ತಮಗೆ ಕೊಟ್ಟ ಬಹುಮಾನ' ಎಂದು ವಿದ್ವಾಂಸರು ಇದನ್ನು ಪ್ರೀತಿಯಿಂದ ಕಾಣುವರು.']

—ಎಂಬ ಕೇಶಿರಾಜನ ಪ್ರಶಂಸೆಯ ಮಾತು ಹುಸಿಯಲ್ಲ; "ಕರ್ಣಾಟಕ ಲಕ್ಷಣ ಶಿಕ್ಷಾಚಾರ್ಯ" ಎಂಬ ಪ್ರಶಸ್ತಿ ಅವನಿಗೆ ಇಂದಿಗೂ ಸಲ್ಲುತ್ತದೆ.

ಶಬ್ದಾನುಶಾಸನ: ಈ ವ್ಯಾಕರಣ ಗ್ರಂಥ ಸಂಸ್ಕೃತ ಭಾಷೆಯಲ್ಲಿದೆ. ಇದನ್ನು ಬರೆದವನು ಭಟ್ಟಾಕಲಂಕದೇವ; ಈತ ಜೈನ ಕವಿ; ಅಕಲಂಕದೇವನ

ಶಿಷ್ಯ. ದಕ್ಷಿಣ ಕನ್ನಡ ಜಿಲ್ಲೆಯ ಹಾಡುವಳ್ಳಿ (ಸಂಗೀತಪುರ) ಎಂಬ ಗ್ರಾಮದ ಜೈನ ಮಠ ಪೀಠದ ಗುರು ಅಕಲಂಕ. ಶಬ್ದಾನುಶಾಸನ 1604ರಲ್ಲಿ ರಚಿತವಾಯಿತೆಂದು ಗ್ರಂಥದಿಂದಲೇ ತಿಳಿಯಬರುತ್ತದೆ. ಭಟ್ಟಾಕಲಂಕನೇ ಬರೆಯಿಸಿದನೆಂದು ತಿಳಿದುಬಂದಿರುವ ಶಾಸನವೊಂದರ ಪದ್ಯದಿಂದ ಅವನು ಶಬ್ದಾಗಮ, ತರ್ಕ, ನಾಟಕ, ಅಲಂಕಾರ. ಭರತನ ನಾಟ್ಯಶಾಸ್ತ್ರ. ಜ್ಯೋತಿಷ, ಮಂತ್ರ ತಂತ್ರವಿಧಿ, ಶಿಲ್ಪಶಾಸ್ತ್ರ, ನ್ಯಾಯಶಾಸ್ತ್ರ, ವೇದ, ಸ್ಮೃತಿ, ಅಧ್ಯಾತ್ಮ, ಪುರಾಣ, ವೈದ್ಯ, ಗಣಿತ, ಮುಂತಾದ ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನೆಂದು ತಿಳಿಯಬರುತ್ತದೆ. ದೇವಚಂದ್ರನೆಂಬವನು ತನ್ನ 'ರಾಜಾವಳೀ ಕಥೆ'ಯಲ್ಲಿ (1838) ಇವನ ವಿಷಯವಾಗಿ—"ಸುಧಾಪುರದೊಳ್ ಭಟ್ಟಾಕಲಂಕ ಸ್ವಾಮಿಗಳ್ ಶಾಸ್ತ್ರಗಳೆಲ್ಲಮಂ ಕಲ್ತು ಮಹಾ ವಿದ್ವಾಂಸರೆನಿಸಿ ಪ್ರಾಕೃತ, ಸಂಸ್ಕೃತ, ಮಾಗಧಿ ಮೊದಲಾದ ಷಡ್ಭಾಷಾ ಕವಿಗಳಾಗಿ ಕರ್ಣಾಟಕ ವ್ಯಾಕರಣಮಂ ರಚಿಸಿ ಕೀರ್ತಿಯಂ ಪಡೆದರ್" ಎಂದು ಹೇಳಿದ್ದಾನೆ. ಈತನು ಕನ್ನಡ ಸಂಸ್ಕೃತ ಈ ಎರಡು ಭಾಷೆಗಳ ವ್ಯಾಕರಣಗಳಲ್ಲಿಯೂ ಪ್ರವೀಣನಾಗಿದ್ದನೆಂಬ ಸಂಗತಿ ಗಮನಾರ್ಹ. ಈತನು ನೃಪತುಂಗ,* ನಾಗವರ್ಮ, ಕೇಶಿರಾಜ, ಈ ಕನ್ನಡ ವೈಯಾಕರಣರನ್ನೂ ಜೈನೇಂದ್ರ, ಪಾಣಿನಿ, ಪತಂಜಲಿ, ಶಾಕಟಾಯನ, ವಾಮನ. ಮುಂತಾದ ಸಂಸ್ಕೃತ ವೈಯಾಕರಣರನ್ನೂ ಅನೇಕ ಸಂಸ್ಕೃತ ಶಾಸ್ತ್ರ ಗ್ರಂಥಗಳನ್ನೂ ತನ್ನ ವ್ಯಾಕರಣ ಶಾಸ್ತ್ರ ನಿರೂಪಣೆಗೆ ಅಲ್ಲಲ್ಲಿ ಪ್ರಮಾಣಗಳಾಗಿ ಹೇಳಿದ್ದಾನೆ. ಇದರಿಂದ ಅವನ ಅಪಾರವಾದ ವಿದ್ವತ್ತು ಗೊತ್ತಾಗುತ್ತದೆ. ಇವನ ಗ್ರಂಥ ಶಬ್ದಮಣಿದರ್ಪಣಕ್ಕಿಂತ ಹೆಚ್ಚು ಶಾಸ್ತ್ರೀಯವಾಗಿದೆ ಎಂಬ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಕೇಶಿರಾಜನಂತೆ ಇವನೂ ಪಂಪ, ಪೊನ್ನ, ರನ್ನ, ನಾಗಚಂದ್ರ. ನೇಮಿಚಂದ್ರ, ಅಗ್ಗಳ, ಆಂಡಯ್ಯ, ಮಧುರ ಮುಂತಾದ ಕನ್ನಡ ಕವಿಗಳ ಕಾವ್ಯಗಳಿಂದ ಪದ್ಯಗಳನ್ನು ಉದಾಹರಿಸಿದ್ದಾನೆ. ಮೊತ್ತದಲ್ಲಿ, "ಇದು ನಾಗವರ್ಮನ ಕರ್ಣಾಟಕ ಭಾಷಾ ಭೂಷಣಕ್ಕಿಂತಲೂ ವಿಸ್ತಾರವಾಗಿಯೂ ಪ್ರೌಢ ವ್ಯಾಖ್ಯಾನ ಸಮೇತವಾಗಿಯೂ ಇದೆ; ಶಬ್ದಮಣಿ ದರ್ಪಣಕ್ಕಿಂತಲೂ ಹೆಚ್ಚು ವಿಷಯಗಳನ್ನು ಒಳಗೊಂಡಿದೆ, ಕನ್ನಡ ಭಾಷೆಗೆ ಇದು ಅತ್ಯುತ್ತಮ ವ್ಯಾಕರಣ ಗ್ರಂಥವೆಂದು ಹೇಳಬಹುದು."[೨]

* ನೃಪತುಂಗನೇ ಕವಿರಾಜಮಾರ್ಗದ ಕರ್ತೃ ಎಂಬ ವಾದವೂ ಇದೆಯಷ್ಟೆ. ಭಟ್ಟಾಕಲಂಕನೂ ನೃಪತುಂಗನ ಕವಿರಾಜಮಾರ್ಗ ಎಂದೇ ಹೇಳಿದ್ದಾನೆ.

ಕನ್ನಡ ಭಾಷೆಯನ್ನು ಕುರಿತ ಈ ಸಂಸ್ಕೃತ ಭಾಷೆಯ ವ್ಯಾಕರಣದಲ್ಲಿ ನಾಲ್ಕು ಪಾದಗಳಿವೆ : (1) ವರ್ಣಮಾಲೆ, ಪಾರಿಭಾಷಿಕ ಪದಗಳ ವಿವರಣೆ, ಅವ್ಯಯಗಳು, ಸಂಧಿಗಳು ; (2) ಲಿಂಗ, ಸಂಸ್ಕೃತದ ಅಪಭ್ರಂಶ ರೂಪಗಳು, ವಿಭಕ್ತಿ ಪ್ರತ್ಯಯಗಳು ; (3) ಸಮಾಸಗಳು, ಸರ್ವನಾಮ, ವಚನ, ಸಂಖ್ಯಾವಾಚಕಗಳು, ತದ್ಭವಗಳು ; (4) ಕ್ರಿಯಾ ಪದಗಳು, ಆಖ್ಯಾತ ಪ್ರತ್ಯಯಗಳು. ಈ ನಾಲ್ಕು ಪಾದಗಳಲ್ಲಿ ಒಟ್ಟು 592 ಸೂತ್ರಗಳಿವೆ. ಈ ಸೂತ್ರಗಳಿಗೆ 'ಭಾಷಾಮಂಜರಿ'ಯೆಂಬ ವೃತ್ತಿಯೂ 'ಮಂಜರೀಮಕರಂದ' ವೆಂಬ ವ್ಯಾಖ್ಯಾನವೂ ಇದೆ. ವಿಷಯ ನಿರೂಪಣಾ ಕ್ರಮವು ಪ್ರಾಚೀನ ಸಂಸ್ಕೃತ ವ್ಯಾಕರಣ ಗ್ರಂಥಗಳ ಮಾದರಿಯನ್ನು ಅನುಸರಿಸಿದೆ.

"ಸೂತ್ರಗಳನ್ನು ಭಟ್ಟಾಕಲಂಕನು ರಚಿಸಲಿಲ್ಲ ; ವೃತ್ತಿ ಮತ್ತು ವ್ಯಾಖ್ಯಾನಗಳನ್ನು ರಚಿಸಿದವನು ಭಟ್ಟಾಕಲಂಕ ; ಸೂತ್ರಕಾರನು ಮೇಧಾವಿಯಾದ ಪಂಡಿತ ; ವೃತ್ತಿ ವ್ಯಾಖ್ಯಾನಗಳನ್ನು ಬರೆದ ಭಟ್ಟಾಕಲಂಕನು ಸೂತ್ರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅಸಮರ್ಥನಾಗಿದ್ದ ಸಾಧಾರಣ ಗ್ರಂಥಕಾರ" ಎಂಬ ಅಭಿಪ್ರಾಯವನ್ನು ಪಂಡಿತ ಕೆ. ವರದಾಚಾರ್ಯರು ವ್ಯಕ್ತಪಡಿಸಿದ್ದರು. ಶಬ್ದಾನುಶಾಸನಕ್ಕೆ ಇಂಗ್ಲಿಷಿನಲ್ಲಿ ಪೀಠಿಕೆಯನ್ನು ಬರೆದಿರುವ ಆರ್. ನರಸಿಂಹಾಚಾರ್ಯರು ಈ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ.[10]

ಗ್ರಂಥದ ಪ್ರಾರಂಭದಲ್ಲಿ ವರ್ಧಮಾನ ಸ್ತುತಿರೂಪದ ಶ್ಲೋಕ :

> ನಮಃ ಶ್ರೀವರ್ಧಮಾನಾಯ ವಿಶ್ವವಿದ್ಯಾವಭಾಸಿನೇ |
> ಸರ್ವಭಾಷಾಮಯೀ ಭಾಷಾ ಪ್ರವೃತ್ತಾ ಯನ್ಮುಖಾಂಬುಜಾತ್ ||

['ಯಾರ ಮುಖಕಮಲದಿಂದ ಎಲ್ಲ ಭಾಷೆಗಳನ್ನೂ ಒಳಗೊಂಡ ದಿವ್ಯಭಾಷೆಯು ಪ್ರಕಟವಾಯಿತೋ, ಸಮಸ್ತ ವಿದ್ಯೆಗಳೂ ಯಾರಲ್ಲಿ ಪ್ರಕಾಶಮಾನವಾಗಿವೆಯೋ ಆ ಶ್ರೀವರ್ಧಮಾನನಿಗೆ ನಮಸ್ಕಾರ.]

ಈ ಶ್ಲೋಕ ನಾಗವರ್ಮನ ಭಾಷಾಭೂಷಣದ ಮಂಗಳ ಶ್ಲೋಕದಂತೆಯೆ ಇದೆ.

ಭಟ್ಟಾಕಲಂಕನು ಶಬ್ದಾನುಶಾಸನವನ್ನು ಬಹುಮಟ್ಟಿಗೆ ಸಮಗ್ರವಾಗಿಯೂ ವಿಸ್ತಾರವಾದ ವೃತ್ತಿ ವ್ಯಾಖ್ಯಾನಗಳೊಡನೆಯೂ ಸಂಸ್ಕೃತದಲ್ಲಿ ಬರೆದಿರುವುದನ್ನು ನೋಡಿದರೆ, ಅವನ ಕಾಲದಲ್ಲಿ ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಸಂಸ್ಕೃತ ವಿದ್ವಾಂಸರ ಗಮನಕ್ಕೆ ಕನ್ನಡದ ಹಿರಿಮೆಗರಿಮೆ

ಗಳನ್ನು ತರುವುದೇ ಆಗಿತ್ತೆಂದು ಊಹಿಸಬಹುದು. ಕನ್ನಡ ಭಾಷೆಯ ಹಳಮೆಯನ್ನೂ ಹಿರಿಮೆಯನ್ನೂ ಸಮರ್ಥಿಸಿ ಅವನು ಆಡಿರುವ ಮಾತುಗಳು ಗಮನಾರ್ಹವಾಗಿವೆ :

"ಈ ಭಾಷೆ ಶಾಸ್ತ್ರ ನಿರೂಪಣೆಗೆ ಅತ್ಯಂತ ಉಪಯೋಗಿಯಾಗಿದೆ. ಇವರಲ್ಲಿ ತತ್ತ್ವಾರ್ಥ ಮಹಾಶಾಸ್ತ್ರಕ್ಕೆ ವ್ಯಾಖ್ಯಾನ ರೂಪದ 96,000 ಗ್ರಂಥ ಪ್ರಮಾಣದ* 'ಚೂಡಾಮಣಿ' ಎಂಬ ಮಹಾಗ್ರಂಥವೂ, ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಗಳನ್ನೊಳಗೊಂಡ ಗ್ರಂಥಗಳೂ ಕಾವ್ಯನಾಟಕಾಲಂಕಾರ ಕಲಾ ಶಾಸ್ತ್ರ ವಿಷಯಗಳನ್ನೊಳಗೊಂಡ ಅನೇಕಾನೇಕ ಗ್ರಂಥಗಳೂ ದೊರೆಯುವುವಾದ್ದರಿಂದ ಇದು ಮಹಾಜನರಿಂದ ಪರಿಗ್ರಾಹ್ಯ ವಾಗಿದೆ."

ಭಾಷೆಗಳ ವಿಚಾರವಾಗಿ ಹೇಳುತ್ತಾ, ಕರ್ಣಾಟಕ ಆಂಧ್ರ ಮಗಧ ಮಾಳವ ದೇಶಗಳ ಭಾಷೆಗಳಲ್ಲದೆ ಮನುಷ್ಯರ ಮತ್ತು ದೇವತೆಗಳ ಎಲ್ಲ ಭಾಷೆಗಳಿಗೂ ಭಾಷೆ ಎಂಬ ಶಬ್ದ ಅನ್ವಯಿಸುತ್ತದೆ ಎಂದಿದ್ದಾನೆ. ಪ್ರಸಿದ್ಧ ಗಳಾಗಿ ಪ್ರಚಾರದಲ್ಲಿರುವುವು 18 ಮಹಾಭಾಷೆಗಳೆಂದೂ, 700 ಕ್ಷುಲ್ಲಕ ಭಾಷೆಗಳುಂಟೆಂದೂ ಅವನ ಹೇಳಿಕೆ. ಸಂಸ್ಕೃತ ಭಾಷೆಯಲ್ಲಿ ಹೇಗೆ ಶುದ್ಧ–ಅಶುದ್ಧ ಪ್ರಯೋಗಗಳನ್ನು ತೋರಿಸಲು 'ಅನುಶಾಸನ' (ನಿಯಮ) ಮಾಡ ಲಾಗುವುದೋ ಅದೇ ರೀತಿ ಕನ್ನಡ ಭಾಷೆಯಲ್ಲಿಯೂ ಸುಶಬ್ದ–ಅಪಶಬ್ದಗಳ ವಿವೇಚನೆ ಮಾಡಿ 'ಅನುಶಾಸನ' ಮಾಡಲು ಆ ಭಾಷೆ ಅರ್ಹವಾಗಿದೆ–ಎಂದು ಹೇಳಿರುವುದರಲ್ಲಿ ಭಟ್ಟಾಕಲಂಕನ ಉತ್ಕಟವಾದ ಕನ್ನಡ ಭಾಷಾಭಿಮಾನವನ್ನು ಗುರುತಿಸಬಹುದು.

ಭಟ್ಟಾಕಲಂಕನ ನಿರೂಪಣ ಕ್ರಮವನ್ನು ಪರಿಚಯ ಮಾಡಿಕೊಡಲು, ಒಂದು ಸೂತ್ರವನ್ನೂ, ಅದರ ವೃತ್ತಿಯನ್ನೂ ಪ್ರಯೋಗವನ್ನೂ ಕೆಳಗೆ ಕೊಟ್ಟಿದೆ :

"ಸೂತ್ರಂ ॥ ಭೇದ್ಯವದ್ಭೇದಕಂ ॥111॥"

"ವೃತ್ತಿಃ॥ ಭೇದ್ಯಂ ವಿಶೇಷ್ಯಂ ; ಭೇದಕಂ ವಿಶೇಷಣಂ ವಿಶೇಷಣವಾಚಿನೋ ಯೇ ಶಬ್ದಾಃ ತೇ ವಿಶೇಷ್ಯವಲ್ಲಿಙ್ಗಾ ಭವನ್ತಿ."

---

* ಗ್ರಂಥ ಎಂದರೆ 32 ಅಕ್ಷರಗಳ ಸಂಖ್ಯೆಯ ಬರಹ. ಶ್ಲೋಕದಲ್ಲಿ 32 ಅಕ್ಷರಗಳಿರು ತ್ತವೆ. (ಶಬ್ದಾಗಮ ವ್ಯಾಕರಣ, ಯುಕ್ತ್ಯಾಗಮ ತರ್ಕ, ಪರಮಾಗಮ ಜೈನ ಧಾರ್ಮಿಕ ಶಾಸ್ತ್ರ ; ವೇದೋಪನಿಷತ್ತುಗಳು.)

['ಸೂತ್ರ–ಭೇದ್ಯದಂತೆ ಭೇದಕ. ವೃತ್ತಿ॥ ಭೇದ್ಯ ಎಂದರೆ ವಿಶೇಷ್ಯ (ವಿಶೇಷಿಸಲ್ಪಡುವ ಪದ=ನಾಮಪದ) ; ಭೇದಕ ಎಂದರೆ ವಿಶೇಷಣ. ವಿಶೇಷಣ ವಾಚಿಗಳಾದ ಶಬ್ದಗಳು ವಿಶೇಷ್ಯದಂತೆ (ಅದೇ ರೂಪದಲ್ಲಿ) 'ಲಿಂಗ'ಗಳಾಗುವುವು.]

"ಪ್ರಯೋಗಃ ॥ ಅಯ್ವರ್ ಪುರುಷರ್, ಅಯ್ವರ್ ಸತಿಯರ್, ಅಯ್ದು ಗಿರಿಗಳ್ ; ಎಣ್ಬರ್ ಪುತ್ರರ್, ಎಣ್ಬರ್ ಪುತ್ರಿಯರ್, ಎಂಟು ಕೂಸುಗಳ್ ; ಅವರ್ ದೇವರ್, ಇವರ್ ದೇವಿಯರ್, ಅವು ಕಲ್ಪಂಗಳ್ ; ಈತನೊಳ್ಳಿದಳ್, ಈಕೆಯೊಳ್ಳಿದಳ್, ಇದೊಳ್ಳಿತ್ತು ; ಇನಿಯಂ ನಲ್ಲಂ, ಇನಿಯಳ್ ನಲ್ಲಳ್, ಇನಿದು ಪಾಲ್ ; ಕರಿಯಳ್ ಪಾರ್ವತಿ, ಕರಿಯಂ ಕೃಷ್ಣಂ, ಕರಿದು ಕತ್ತುರಿ.

"ಪಾಡುವುವಂ ತುಂಬಿಗಳಂ,
ಕೂಡುವುವಂ ಜಕ್ಕವಕ್ಕಿಗಳಂ, ಅತಿಬಿನದಂ
ಮಾಡುವುವಂ ಪುಲ್ಲೆಗಳಂ
ನೋಡಿದನರಸಂ ವಿವೇಕನಿಧಿ ಸಂತಸದಿಂ."

[ಜಕ್ಕವಕ್ಕಿ=ಚಕ್ರವಾಕ ಪಕ್ಷಿ, ಬಿನದ=ವಿನೋದ, ಪುಲ್ಲೆ=ಜಿಂಕೆ, ಸಂತಸ=ಸಂತೋಷ.]

ಭಟ್ಟಾಕಲಂಕನ ಶಬ್ದಾನುಶಾಸನ ರಚಿತವಾದ ಮೇಲೆ ಸುಮಾರು 200 ವರ್ಷಗಳ ಕಾಲ ಕನ್ನಡ ವ್ಯಾಕರಣಕ್ಷೇತ್ರ ಕೃಷಿಯಿಲ್ಲದೆ ಹಾಳುಬಿದ್ದಿರುವುದು ಕಂಡುಬರುತ್ತದೆ. ಕನ್ನಡ ವ್ಯಾಕರಣದ ವ್ಯಾಸಂಗ ಮತ್ತು ರಚನೆಗಳಲ್ಲಿ ಮತ್ತೆ ಆಸಕ್ತಿ ಹುಟ್ಟುವಂತೆ ಮಾಡಿದ ಶ್ರೇಯಸ್ಸು ಪಾಶ್ಚಾತ್ಯ ವಿದ್ವಾಂಸರಿಗೆ ಸಲ್ಲಬೇಕು. ಭಾರತದಲ್ಲಿ ಮುದ್ರಣ ಕಲೆ ಪ್ರಚಾರಕ್ಕೆ ಬಂದಮೇಲೆ ಕನ್ನಡದಲ್ಲಿ ಮೊತ್ತಮೊದಲಿಗೆ ಮುದ್ರಿತವಾದದ್ದು ವಿಲಿಯಂ ಕೇರಿ ಎಂಬವನ A Grammar of the Karnata Language ಎಂಬ ವ್ಯಾಕರಣ ಗ್ರಂಥ (1817). ಇನ್ನೂ ಇಬ್ಬರು ಮೂವರು ಪಾಶ್ಚಾತ್ಯರು ಕನ್ನಡದಲ್ಲಿಯೆವ್ಯಾಕರಣ ಗ್ರಂಥಗಳನ್ನು ರಚಿಸಿದರು. ಕ್ರೈಸ್ತಮತ ಪ್ರಚಾರಕ್ಕೆಂದು ನಮ್ಮ ನಾಡಿನಲ್ಲಿ ಬಂದು ನೆಲಸಿದ ಮಿಷನರಿಗಳ ಉಪಯೋಗಕ್ಕೆಂದು ಕೆಲವು ಪಾಶ್ಚಾತ್ಯ ವಿದ್ವಾಂಸರು ಇಂಗ್ಲಿಷಿನಲ್ಲಿ ಕನ್ನಡ ವ್ಯಾಕರಣಗಳನ್ನು ರಚಿಸಿದರು. ಈ ವ್ಯಾಕರಣಗಳಪೈಕಿ ಕಿಟ್ಟೆಲರ A Grammar of the Kannada Language (1903) ಪ್ರಸಿದ್ಧವಾಗಿದ್ದು, ವಿಚಾರ ಪೂರ್ಣವಾಗಿರುವುದರಿಂದ ಈಗಲೂ ವ್ಯಾಸಂಗಮಾಡತಕ್ಕದ್ದಾಗಿದೆ. ಈ ಗ್ರಂಥದಲ್ಲಿ ಕಿಟ್ಟೆಲ್ಲರು ಹಳಗನ್ನಡ, ನಡುಗನ್ನಡ, ಹೊಸಗನ್ನಡ-ಈ ಮೂರು ಭಾಷಾ ಪ್ರಭೇದಗಳನ್ನೂ ಚಾರಿತ್ರಿಕ

ವಾಗಿಯೂ ತುಲನಾತ್ಮಕವಾಗಿಯೂ ಪರಿಶೀಲನೆ ಮಾಡಿದ್ದಾರೆ. ಈ ಕೃತಿ ವ್ಯಾಕರಣ ಮಾತ್ರವಲ್ಲದೆ, ಭಾಷಾ ಚರಿತ್ರೆಯ ಲಕ್ಷಣಗಳನ್ನೂ ಹೊಂದಿದೆ. ಗಮನಿಸಬೇಕಾದ ಇನ್ನೊಂದು ಮಹಾಕೃತಿ, ಡಾ॥ ಕಾಲ್ಡ್‌ವೆಲ್ಲರ A Comparative Grammar of the Dravidian Languages (2ನೆಯ ಮುದ್ರಣ, 1875). ಇದರಲ್ಲಿ ದ್ರಾವಿಡ ಭಾಷಾವರ್ಗದ ಮುಖ್ಯಭಾಷೆಗಳಾದ ದಕ್ಷಿಣ ಭಾರತದ ಭಾಷೆಗಳ ತುಲನಾತ್ಮಕ ವ್ಯಾಕರಣ ನಿರೂಪಿತವಾಗಿದೆ.

ಕರ್ನಾಟಕದಲ್ಲಿ ವಿದ್ಯಾಭ್ಯಾಸವು ಪ್ರಗತಿ ಹೊಂದುತ್ತ ಬಂದಂತೆ ಕರ್ನಾಟಕದ ಬೇರೆ ಬೇರೆ ಪ್ರಾಂತಗಳ ವಿದ್ವಾಂಸರು ವಿದ್ಯಾರ್ಥಿಗಳ ವ್ಯಾಸಂಗಕ್ಕೆಂದು ಹೊಸಗನ್ನಡದಲ್ಲಿ ವ್ಯಾಕರಣಗಳನ್ನು ರಚಿಸಿಕೊಂಡು ಬಂದಿದ್ದಾರೆ. 20ನೆಯ ಶತಮಾನದಲ್ಲಿ ಈ ವರೆಗೆ ನಡೆದಿರುವ ಕೆಲಸವೆಲ್ಲವೂ ಒಂದು ಪರಿಮಿತವಾದ ಚೌಕಟ್ಟಿನಲ್ಲಿ ನಡೆದಿರತಕ್ಕದ್ದು. ಇವುಗಳ ವಿವೇಚನೆ ಈ ಗ್ರಂಥದ ಉದ್ದೇಶದಲ್ಲಿ ಸೇರಿಲ್ಲವಾದದ್ದರಿಂದ ಅವುಗಳನ್ನು ಇಲ್ಲಿ ಪರಿಚಯಮಾಡಿಕೊಡುವ ಗೋಜಿಗೆ ಹೋಗಿಲ್ಲ. (ಈ ಕೆಲವು ಕೃತಿಗಳ ವಿವರಗಳನ್ನು ಮಾತ್ರ ಅನುಬಂಧದ ಪಟ್ಟಿಯಲ್ಲಿ ಕೊಟ್ಟಿದೆ.) ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಹೊಸಗನ್ನಡದ ಗ್ರಾಂಥಿಕ ಹಾಗೂ ವ್ಯವಹಾರ ಭಾಷಾ ಪ್ರಭೇದಗಳು– ಇವನ್ನು ಚಾರಿತ್ರಿಕವಾಗಿಯೂ ವರ್ಣನಾತ್ಮಕವಾಗಿಯೂ ವಿವರಿಸುವ ಒಂದು 'ಸಮಗ್ರ ಕನ್ನಡ ವ್ಯಾಕರಣ'ದ (Comprehensive Historical and Descriptive Grammar) ರಚನೆಯ ಅಗತ್ಯವಿದೆ ಎಂದು ಸೂಚಿಸಿ, ಈ ಪ್ರಕರಣವನ್ನು ಮುಗಿಸಬಹುದು.

ಭಾಷಾ ಚರಿತ್ರೆ ; ಭಾಷಾ ವಿಜ್ಞಾನ

ಕನ್ನಡ ವ್ಯಾಕರಣವನ್ನು ಆಧರಿಸಿ ಕನ್ನಡ ಭಾಷಾ ಚರಿತ್ರೆ ಎಂಬ ಶಾಸ್ತ್ರ ವಿಭಾಗವೊಂದು ಬೆಳೆದು ಬಂದಿದೆ. ಆರ್. ನರಸಿಂಹಾಚಾರ್ಯರ A History of Kannada Language, ಕನ್ನಡ ಕೈಪಿಡಿಯಲ್ಲಿ ಟಿ. ಎಸ್. ವೆಂಕಣ್ಣಯ್ಯನವರು ಬರೆದಿರುವ 'ಭಾಷಾ ಚರಿತ್ರೆ' ಯ ವಿಭಾಗ, ಇವು ಇಂದಿಗೂ ಪ್ರಮಾಣಭೂತ ರಚನೆಗಳಾಗಿವೆ. ಎ. ಎನ್. ನರಸಿಂಹಯ್ಯ, ಜಿ. ಎಸ್. ಗಾಯಿಯವರೂ ಶಾಸನಗಳ ಭಾಷೆಯ ವ್ಯಾಕರಣಗಳನ್ನು ರಚಿಸಿದ್ದಾರೆ. ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ 'ವರ್ಣನಾತ್ಮಕ ವ್ಯಾಕರಣ'ದ ಸ್ವರೂಪವನ್ನು ಎಚ್. ಎಸ್. ಬಿಳಿಗಿರಿಯವರು ವಿವರಿಸಿದ್ದಾರೆ.

ಗ್ರಾಂಥಿಕ ಭಾಷೆಗಿಂತ ಹೆಚ್ಚಾಗಿ ವ್ಯವಹಾರ ಭಾಷೆಯನ್ನೇ ಹೆಚ್ಚಾಗಿ ಅವಲಂಬಿಸಿರುವ 'ಭಾಷಾ ವಿಜ್ಞಾನ' ವು ಒಂದು ಪ್ರತ್ಯೇಕ ಶಾಸ್ತ್ರವಾಗಿಯೇ ಬೆಳೆದು, ಪ್ರಪಂಚದ ಎಲ್ಲಾ ಭಾಷೆಗಳಿಗೂ ಅನ್ವಯಿಸುವ ಮೂಲ ಸೂತ್ರಗಳು ರೂಪಗೊಂಡಿವೆ. ಕನ್ನಡಕ್ಕೆ ಸಂಬಂಧಪಟ್ಟಂತೆ ಭಾಷಾವಿಜ್ಞಾನದ ಕ್ಷೇತ್ರದಲ್ಲಿ ಆರ್. ವೈ. ಧಾರವಾಡಕರ್, ಎಚ್. ಎಸ್. ಬಿಳಿಗಿರಿ, ಹಾ. ಮಾ. ನಾಯಕ, ಎಂ. ಚಿದಾನಂದ ಮೂರ್ತಿ, ಎ. ಕುಶಾಲಪ್ಪಗೌಡ, ಆರ್. ಸಿ. ಹಿರೇಮಠ, ಜೆ. ಎಸ್. ಕುಳ್ಳಿ, ಹಂಪ. ನಾಗರಾಜಯ್ಯ, ಕೆ. ಎಂ. ಕೃಷ್ಣರಾವ್, ಕೆ. ಜಿ. ಶಾಸ್ತ್ರಿ, ಡಿ. ಎನ್. ಶಂಕರಭಟ್ಟ, ಮುಂತಾದ ಹಲವುಮಂದಿ ವಿದ್ವಾಂಸರು ಕೃತಿ ರಚನೆ ಮಾಡಿದ್ದಾರೆ, ವಿದ್ವತ್ಪೂರ್ಣವಾದ ಲೇಖನಗಳನ್ನು ಬರೆದಿದ್ದಾರೆ. ಈ ಕ್ಷೇತ್ರ ಸಂಪೂರ್ಣವಾಗಿ ಈ ಶತಮಾನದ ಈಚಿನ ದಿನಗಳ ಬೆಳವಣಿಗೆ ಯಾದ್ದರಿಂದ ಇದರ ಪರಿಚಯು ಈ ಗ್ರಂಥಕ್ಕೆ ಹೊರತಾಗಿದೆ.

ನಿಘಂಟು

ಒಂದು ಭಾಷೆಯ ಶಬ್ದಗಳ ಏಕಾರ್ಥವನ್ನೂ ಬೇರೆ ಬೇರೆ ಅರ್ಥಗಳನ್ನೂ ಆ ಶಬ್ದಗಳ ಸಮಾನಾರ್ಥಕ ಪದಗಳ ಮೂಲಕವಾಗಿಯಾಗಲಿ, ಸಮಾನಾರ್ಥಕ ಪದಗಳಿಲ್ಲದಿರುವಾಗ ವಿವರಣೆಯ ಮೂಲಕವಾಗಿಯಾಗಲಿ, ಕೆಲವು ಸಂದರ್ಭ ಗಳಲ್ಲಿ ಸಮಾನಾರ್ಥ ಕೊಡುವ ಇತರ ಭಾಷೆಗಳ ಪದಗಳ ಮೂಲಕವಾಗಿ ಯಾಗಲಿ, ಒಂದು ಕಡೆ ತಿಳಿಸುವ ಗ್ರಂಥ ನಿಘಂಟು. ಇದಕ್ಕೆ 'ಶಬ್ದಕೋಶ', 'ಅರ್ಥಕೋಶ' ಗಳೆಂಬ ಹೆಸರುಗಳೂ ಉಂಟು. ಆಧುನಿಕ ನಿಘಂಟುಗಳಲ್ಲಿ ಪದಗಳನ್ನು ಅಕಾರಾದಿಯಾಗಿ ಜೋಡಿಸಿ ಪ್ರತಿಪದದ ಲಿಂಗ, ವಚನ, ರೂಪ ನಿಷ್ಪತ್ತಿ, ಪ್ರಯೋಗ ವಿಧಾನ,ಅದರ ಬೇರೆ ಬೇರೆ ಅರ್ಥಗಳು, ಒಂದೇ ಅರ್ಥದ ಬೇರೆ ಬೇರೆ ಪದಗಳು (=ಪರ್ಯಾಯ ಪದಗಳು, ಸಮಾನಾರ್ಥಕಪದಗಳು) ಮುಂತಾದ ವಿವರಗಳನ್ನು ಕೊಟ್ಟಿರುತ್ತದೆ. ಭರತ ಖಂಡದ ಪ್ರಾಚೀನ ನಿಘಂಟುಗಳು ಇಷ್ಟು ಸಮಗ್ರ ವ್ಯಾಪ್ತಿಯುಳ್ಳವಾಗಿರಲಿಲ್ಲ. ಈ ಪ್ರಾಚೀನ ನಿಘಂಟುಗಳಲ್ಲಿ ಭಿನ್ನಾರ್ಥಕ ಮತ್ತು ಸಮಾನಾರ್ಥಕ ನಾಮಪದಗಳನ್ನು ಮಾತ್ರ ಅವುಗಳ ಪರ್ಯಾಯ ಪದಗಳೊಡನೆ ಕೊಟ್ಟಿರುತ್ತದೆ. ಕೆಲವು ವ್ಯಾಕರಣಕಾರರು ವ್ಯಾಕರಣಗಳಲ್ಲಿ ಧಾತು ಪಾಠಗಳನ್ನು ಸೇರಿಸುತ್ತಿದ್ದರು.

ಸಂಸ್ಕೃತ ನಿಘಂಟುಗಳು : ಸಂಸ್ಕೃತದಲ್ಲಿ ವೈದಿಕ ನಿಘಂಟೇ ಅತ್ಯಂತ ಪ್ರಾಚೀನವಾದ ನಿಘಂಟು. ಇದರ ಕರ್ತೃ, ಕಾಲಗಳು ತಿಳಿದು ಬಂದಿಲ್ಲ. ಇದರಲ್ಲಿ ಒಟ್ಟು ಐದು ಪ್ರಕರಣಗಳಿವೆ. ಮೊದಲ ಮೂರು ಪ್ರಕರಣಗಳಲ್ಲಿ

ಧಾತುಗಳಿಂದ ಹುಟ್ಟಿ ರೂಪಗೊಂಡ ನಾಮಪದಗಳ ಪರ್ಯಾಯ ನಾಮಗಳನ್ನು ಕೊಟ್ಟಿದೆ; ನಾಲ್ಕನೆಯದರಲ್ಲಿ ಅರ್ಥವನ್ನು ನಿರ್ಣಯಿಸುವ ಪದಗಳೂ, ಐದನೆಯದರಲ್ಲಿ ವೇದಗಳಲ್ಲಿ ಹೇಳಿರುವ ದೇವತೆಗಳ ಹೆಸರುಗಳೂ ಇವೆ. ಈ ನಿಘಂಟಿನ ಮೇಲೆ ಹಲವಾರು ಭಾಷ್ಯಗಳೂ ವ್ಯಾಖ್ಯಾನಗಳೂ ಹುಟ್ಟಿಕೊಂಡಿವೆ. ಪ್ರಸಿದ್ಧವೂ ಪ್ರಾಚೀನವೂ ಆದದ್ದು ಪತಂಜಲಿಯ 'ಮಹಾಭಾಷ್ಯ'. ವೇದಗಳನ್ನು ಅಧ್ಯಯನ ಮಾಡುವುದಕ್ಕೆ ಸಹಾಯಕಗಳಾದ ಆರು ಅಂಗಗಳಲ್ಲಿ ನಿರುಕ್ತವೂ ಒಂದು ಬಗೆಯ ಭಾಷ್ಯವೇ (=ವಿಸ್ತಾರವಾದ ವಿವರಣೆ). ಕ್ರಿ.ಶ. ಸು. ನಾಲ್ಕನೆಯ ಶತಮಾನದವನೆಂದು ಹೇಳಲಾದ ಯಾಸ್ಕನ 'ನಿರುಕ್ತ'ವೇ ಮೊತ್ತಮೊದಲಿನದೆಂದು ವಿದ್ವಾಂಸರ ಅಭಿಪ್ರಾಯ. ಸ್ವರೂಪದಲ್ಲಿ ಇದು ಒಂದು ನಿಘಂಟು. ಇದರ ಮೇಲೆಯೇ ಸ್ಕಂದಸ್ವಾಮಿ, ಭಟ್ಟ ಭಾಸ್ಕರ ಮಿಶ್ರ, ಮಾಧವ, ದೇವರಾಜಯಜ್ವನ್-ಎಂಬುವರುಗಳ ವ್ಯಾಖ್ಯಾನಗಳಿವೆ. ಶಬ್ದಾರ್ಥ ನಿರ್ಣಯಕ್ಕೆ ನಿರುಕ್ತ, ನಿರ್ವಚನ, ಎಂಬವು, ಪಾರಿಭಾಷಿಕ ಪದಗಳು. ಯಾಸ್ಕನು ತನ್ನ 'ನಿರುಕ್ತ' ದಲ್ಲಿಯೇ 'ನಾಮ ಚ ಧಾತು ಜಮಾಹಾ ನಿರುಕ್ತೇ' ಎಂದರೆ 'ನಿರುಕ್ತವು ಧಾತುಗಳಿಂದ ಹುಟ್ಟಿದ ನಾಮಪದಗಳನ್ನು ತಿಳಿಯ ಹೇಳುತ್ತದೆ' ಎಂದಿದ್ದಾನೆ. ಯಾಸ್ಕನ ನಿರುಕ್ತವನ್ನು ಬಿಟ್ಟರೆ, ಹಲಾಯುಧನ 'ಅಭಿಧಾನ ರತ್ನಮಾಲೆ', ಅಮರ ಸಿಂಹನ 'ನಾಮ ಲಿಂಗಾನು ಶಾಸನ' (ಅಮರಕೋಶ), ವರರುಚಿಯ ಕೋಶ, ಶಾಶ್ವತ, ಧನಂಜಯ ಕೋಶ, ವಾಗುರಿ ಕೋಶ, ಮೇಧಿನಿ ಕೋಶ, ಮಹಿಪನ ಅನೇಕಾರ್ಥ ಕೋಶ, ಕೋಶ ಕಲ್ಪತರು, ಶಿವದತ್ತನ ಶಿವಕೋಶ, ಇವು ಪ್ರಸಿದ್ಧವಾದವಲ್ಲಿ ಹಲವು. ಈಚೆಗೆ ಸಂಸ್ಕೃತದಲ್ಲಿದೊರೆಯುವ ಪ್ರಕಟಿತ ಮತ್ತು ಅಪ್ರಕಟಿತವಾದ ಎಲ್ಲ ಕೋಶಗಳನ್ನೂ ಆಧರಿಸಿ 'ಸಮಗ್ರ ಸಂಸ್ಕೃತ ಕೋಶ'ದ ನಿರ್ಮಾಣ ಕಾರ್ಯವನ್ನು ಪುಣೆಯ ಡೆಕನ್ ಕಾಲೇಜಿನವರು ಕೈಗೊಂಡಿದ್ದಾರೆ.* ಈ ಸಂಸ್ಥೆಯ ಇನ್ನೊಂದು ಯೋಜನೆ 'ಪರ್ಯಾಯ ಕೋಶ' ಎಂಬ ಸಂಸ್ಕೃತ ಸಮಾನಾರ್ಥಕ ಪದಗಳ ನಿಘಂಟುವಿನ ಪ್ರಕಟನೆ.†

---

* ಎಲ್ಲ ಪ್ರಕಟಿತ ಮತ್ತು ಅಪ್ರಕಟಿತ ಪ್ರಾಚೀನ ಕನ್ನಡ ನಿಘಂಟುಗಳನ್ನೂ ಒಂದೇ ಸಂಪುಟವಾಗಿ ಪ್ರಕಟಿಸುವಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯ ಕೈಗೊಂಡಿದೆ ಎಂದು ತಿಳಿದು ಬರುತ್ತದೆ. ಎಸ್. ಬಸವಾರಾಧ್ಯರು ಇದರ ಸಂಪಾದಕರು.

† ಜೆ. ಎಂ. ಹನಸೋಗೆಯವರು ಈಚೆಗೆ 'ಕನ್ನಡ ಸಮಾನಾರ್ಥಕ ಕೋಶ' ವನ್ನು ಪ್ರಕಟಿಸಿದ್ದಾರೆ. (ಪ್ರಕಾಶಕರು; ನಭಶ್ರೀ ಪ್ರಕಾಶನ, ಮೈಸೂರು-9, 1974. ಇದು ಸಮಗ್ರವಾಗಿಲ್ಲ. ಅನೇಕ ಬಗೆಯ ಲೋಪದೋಷಗಳಿಂದ ಕೂಡಿದ್ದರೂ, ಪ್ರಥಮ ಪ್ರಯತ್ನವೆಂದು ಸ್ವಾಗತಾರ್ಹ.

ಕನ್ನಡ ನಿಘಂಟುಗಳು

ಕನ್ನಡ ವಾಙ್ಮಯದಲ್ಲಿ ರಚಿತವಾಗಿ ನಮಗೆ ದೊರಕಿರುವ ಎಲ್ಲ ಬಗೆಯ ಪ್ರಾಚೀನ ನಿಘಂಟುಗಳ ಸಂಖ್ಯೆ ಸುಮಾರು 40 ಕ್ಕಿಂತ ಮಿಗಿಲಾಗಿದೆ. ಈಚೆಗೆ (ಎಂದರೆ 19ನೆಯ ಶತಮಾನದ ಕೊನೆಯ ದಶಕಗಳಲ್ಲಿ ಮತ್ತು ಈ ಶತಮಾನದ ಆರಂಭದ ದಶಕಗಳಲ್ಲಿ) ವಿದೇಶೀಯ ಮತ್ತು ದೇಶೀಯ ವಿದ್ವಾಂಸರು ರಚಿಸಿರುವ ಸುಮಾರು 20 ನಿಘಂಟುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಸುಮಾರು 60 ನಿಘಂಟುಗಳು ರಚಿತವಾಗಿವೆ. ಪರಿಶೀಲನೆಯ ಸೌಲಭ್ಯಕ್ಕಾಗಿ ಪ್ರಾಚೀನ ನಿಘಂಟುಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿಕೊಳ್ಳಬಹುದು ; (i) ಹಳಗನ್ನಡ- ಕನ್ನಡ ನಿಘಂಟುಗಳು, (ii) ಕನ್ನಡ-ಸಂಸ್ಕೃತ ನಿಘಂಟುಗಳು, (iii) ಸಂಸ್ಕೃತ–ಕನ್ನಡ ನಿಘಂಟುಗಳು, (iv) ಇತರ (ಶಾಸ್ತ್ರೀಯ ಮುಂತಾದ ಪರಿಮಿತ ವಿಷಯಗಳ) ನಿಘಂಟುಗಳು. ಈ ವರ್ಗಗಳಲ್ಲಿ, ಪ್ರಾತಿನಿಧಿಕವಾಗಿ ಗಮನಾರ್ಹವೆನಿಸುವ ಕೆಲಕೆಲವನ್ನು ಮಾತ್ರ ಪರಿಚಯಾತ್ಮಕವಾಗಿ ಅವಲೋಕಿಸಿದೆ. ಈಚಿನ (ಆಧುನಿಕ) ನಿಘಂಟುಗಳನ್ನು ಒಂದು ಪ್ರತ್ಯೇಕ ವರ್ಗವಾಗಿ ಪರಿಗಣಿಸಿ, ಆ ವರ್ಗದಲ್ಲಿ ಅತ್ಯಂತ ಪ್ರಮುಖವಾದುವನ್ನು ಮಾತ್ರ ಪರಿಚಯ ಮಾಡಿಕೊಟ್ಟಿದೆ.

I. ಹಳಗನ್ನಡ–ಕನ್ನಡ

(1) **ರನ್ನಕಂದ :** ಈ ನಿಘಂಟು ಪೂರ್ತಿಯಾಗಿ ದೊರೆತಿಲ್ಲ. ಸಿಕ್ಕಿರುವಷ್ಟು ಗ್ರಂಥಭಾಗದಲ್ಲಿ 12 ಕಂದ ಪದ್ಯಗಳಿವೆ. ಪ್ರತಿ ಪದ್ಯವೂ 'ಕವಿರತ್ನ' ಎಂಬ ಅಂಕಿತದೊಂದಿಗೆ ಮುಗಿಯುವುದರಿಂದ, ಇದು 'ಗದಾಯುದ್ಧ'ವನ್ನು ಬರೆದ ರನ್ನ ಬರೆದುದೆಂದು ಊಹಿಸಲಾಗಿದೆ. ಒಂದು ಉದಾಹರಣೆ:

ಸಣ್ಣದೆನಲ್ ಕಿರಿದಕ್ಕುಂ,
ಪಣ್ ಎನೆ ಮಾಡೆಂಬ ವಾಚಿ, ಬಳಿಯೆನೆ ವಂಶಂ,
ಎಣ್ ಎನೆ ಲೆಕ್ಕಿಪುದು, ಬಿಸು-
ಗಣ್ಣನ್ ಎನಲ್ ಗೊರವನ್ ಅಪ್ಪುದು-ಎಲೆ ಕವಿರತ್ನಾ
[ಬಿಸುಗಣ್ಣ, ಗೊರವ = ಶಿವ]

(2) ಕೇಶಿರಾಜನ ಕೋಶಗಳು :

(i) **ಱಳಾಕ್ಷರಯುಕ್ತ ಶಬ್ದಕೋಶ :** ಱ ಳ ಕುಳ ಕ್ಷಳ–ಈ ಅಕ್ಷರಗಳ ವಿಚಾರವನ್ನು ಕೇಶಿರಾಜನು ಶಬ್ದಮಣಿ ದರ್ಪಣದ ಸಂಧಿ ಪ್ರಕರಣದಲ್ಲಿ

ವಿವರಿಸಿದ್ದಾನೆ. (ಸೂತ್ರ 28 ರಿಂದ 39--ಡಿ.ಎಲ್.ಎನ್. ಮುದ್ರಣ). ಱೞಕ್ಷರಯುಕ್ತ ಪದಗಳ ಒಂದು ಚಿಕ್ಕ ಕೋಶವನ್ನೇ ವ್ಯಾಕರಣ ಗ್ರಂಥದ ಒಂದು ಭಾಗವಾಗಿ ಸೇರಿಸಿದ್ದಾನೆ. ಈ ಕೋಶದಲ್ಲಿ, "ಒಂದರ್ಥಮುಂ, ಎರಡರ್ಥಮುಂ, ಮೂಱರ್ಥಮುಂ, ನಾಲ್ಕರ್ಥಮುಂ, ಅಯ್ದರ್ಥಮುಂ, ಪೇೞ್ವ ಸಹಜ ಱೞಂಗಳಂ ಕವಿಮಾರ್ಗದೊಳ್ ಪ್ರಮಾಣ ಪುರುಷರಿಂ ಕಂಡಱಿದವಂ ನೆಱೆ ಪೇೞ್ದಪೆಂ" ಎಂದು ಮುನ್ನುಡಿದು (ಸೂ. 33ರ ವೃತ್ತಿ), 181 ಶಬ್ದಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಅವನು ಅರ್ಥವಿಸುವ ಬಗೆಯನ್ನು ಕೆಲವು ಉದಾಹರಣೆಗಳಿಂದ ಕೆಳಗೆ ಪರಿಚಯಮಾಡಿಕೊಟ್ಟಿದೆ :

ಒಂದರ್ಥಕ್ಕೆ : ಅದವೞಿಲೆಂದು ಮೞುಕಂ
ಕಚ್ಚೞಿಯೆಂದು ಬಿರುದಿನ ಬಳ.
ನೆಗೆೞ್ ಎಂದು ನಕ್ರಂ.
ಕೞಿಯೆಂದು ಆತಪತ್ರ (= ಕೊಡೆ) ದೊಳ್ ಱೞಂ.
ತಳಿಯೆಂದು ಕ್ರಿಯೆಯೊಳಂ ಪಶುವಿನ
ಕೊರಲ ತಳಿಯೊಳಂ ಕುಳಂ.

ಎರಡರ್ಥಕ್ಕೆ : ಅೞ್ದನೆಂದು ನೀರೊಳ್ ಮುೞುಂಗಿದನುಂ ಕೆಟ್ಟನುಮಕ್ಕುಂ.
ಕೊತ್ತೞಿಯೆಂದು ಕಾಗೆಯ ಮೊತ್ತಮುಂ
ಬೆಸೆದವರ ನೆರವಿಯುಂಮಕ್ಕುಂ

ಮೂರರ್ಥಕ್ಕೆ : ಎೞ್ತೆಂದು ಗೂಳಿಯುಂ
ಅನಡ್ವನುಂ ಹೊರಸಿನ ನೆಯ್ಗೆಯ ಊಕೆಯ
ನುಲಿಯುಮಕ್ಕುಂ.

ನಾಲ್ಕರ್ಥಕ್ಕೆ : ಕೀೞ್ ಎಂದು ಒರೆಯಿಲ್ಲದ ಬಂಗಾರಮುಂ
ತುರಗಮುಖದ ಲೋಹಮುಂ
ಕ್ಷೀಣ ಕುಲನುಂ
ಕೆೞಗುಂ ಅಕ್ಕುಂ

ಐದರ್ಥಕ್ಕೆ : (ಒಂದೇ ಪದ) ಬೞಿಯೆಂದು ಬಟ್ಟೆಯುಂ
ವಂಶಮುಂ ಕರೆವನುಂ ಲೇಪಿಸುವುದುಂ
ಪಿಂಗಲಿಯ ಬೞಿಗೊರಲುಮಕ್ಕುಂ ;
ಮತ್ತೆಂಬ ಪೂರಕದ ಬೞಿ ಅವ್ಯಯಮಾಗಿ
ಱೞಂ,

'ಇವು ಪ್ರಯೋಗದೃಷ್ಟಂಗಳ್, ಇವಱೊಳ್ ಸಂಶಯಮಿಲ್ಲ' ಎಂಬ ಕೇಶಿರಾಜನ ಮಾತಿನಿಂದ, ಕವಿಗಳ ಪ್ರಯೋಗಗಳ ಆಧಾರದ ಮೇಲೆ ಅರ್ಥ

ವನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ನಿರ್ಣಯಿಸಿದ್ದಾನೆ ಎಂಬುದು ಗೊತ್ತಾಗುತ್ತದೆ. ಶಾಸ್ತ್ರೀಯುವಾದ ಇವನ ಈ ಕ್ರಮ ಇಂದಿಗೂ ಮೇಲುಪಂಕ್ತಿ.

(ii) **ಧಾತುಪಾಠ :** ಶಬ್ದಮಣಿದರ್ಪಣದ 6ನೆಯ ಪ್ರಕರಣ ಅಚ್ಚಗನ್ನಡ ಧಾತುಗಳ ಅರ್ಥವನ್ನು ತಿಳಿಸುವುದಕ್ಕೆ ಮೀಸಲಾಗಿದೆ. ಕಕಾರದಿಂದ ಮೊದಲಾಗಿ ಳಕಾರದವರೆಗೆ ಬೇರೆ ಬೇರೆ ವ್ಯಂಜನಾಕ್ಷರಗಳಿಂದ ಕೊನೆಗೊಳ್ಳುವ ಧಾತುಗಳಿಗೆ ('ಕ್ರಿಯಾರ್ಥೋ ಧಾತುಃ'–ಕ್ರಿಯೆಯ ಅರ್ಥವನ್ನು ಹೇಳುವ ಶಬ್ದ ಧಾತು) ಸಂಸ್ಕೃತದಲ್ಲಿ ಅರ್ಥ ಹೇಳಿರುವುದು ಗಮನಾರ್ಹ. ಸಂಸ್ಕೃತ ಬಲ್ಲವರಿಗೆ ಕನ್ನಡ ಧಾತುಗಳ ಅರ್ಥವನ್ನು ತಿಳಿಸಿಕೊಡುವುದು ಅವನ ಉದ್ದೇಶವೆಂದು ಕಾಣುತ್ತದೆ. ಅಲ್ಲದೆ, ಎಷ್ಟೋ ಸಂದರ್ಭಗಳಲ್ಲಿ, ಕನ್ನಡ ಶಬ್ದಗಳಿಗೆ ಸಂಕ್ಷೇಪವಾಗಿ ಕನ್ನಡದಲ್ಲಿ ಅರ್ಥ ಹೇಳುವುದು ಕಷ್ಟವಾಗಿರುವುದೂ ಒಂದು ಕಾರಣವಾಗಿದ್ದಿರಬೇಕು.

ಸಂಸ್ಕೃತದಲ್ಲಿ ವೇದಸಮನಾಗಿ ಭೀಮನು ಧಾತುಪಾಠಕ್ಕೆ ಅರ್ಥ ಹೇಳಿರುವನೆಂದೂ, ಅದೇ ತೆರನಾಗಿ ತಾನು ಕನ್ನಡದಲ್ಲಿ ಹೇಳುವುದಾಗಿಯೂ ತಿಳಿಸಿದ್ದಾನೆ. ಸಂಸ್ಕೃತದಲ್ಲಿ ಅನೇಕ ಮಂದಿ ಭೀಮ-ಭೀಮಸೇನರು ಆಗಿಹೋಗಿದ್ದಾರೆ. ಇವರುಗಳ ಪೈಕಿ 'ಧಾತುಪಾಠ' ಮತ್ತು 'ಭೈಮೀವ್ಯಾಕರಣ'ದ ಕರ್ತೃವೇ ಕೇಶಿರಾಜನು ಉಲ್ಲೇಖಿಸಿರುವ ಭೀಮನೆಂದು ಎ. ಎನ್. ನರಸಿಂಹಯ್ಯನವರು ನಿರ್ಣಯಿಸಿದ್ದಾರೆ. "ಪತಂಜಲಿಯ ಮಹಾಭಾಷ್ಯದಿಂದ ಮೊದಲು ಧಾತುಗಳ 'ಸಂಹಿತಾಪಾಠ' ಮಾತ್ರವಿದ್ದಿತು, ಎಂದರೆ ಧಾತುಗಳನ್ನು ಬಿಡಿಸಿ ಹೇಳಲಿಲ್ಲ, ಒಟ್ಟಾಗಿ ಅರ್ಥನಿರ್ದೇಶವಿಲ್ಲದ ಧಾತುಗಳನ್ನು ಜೋಡಿಸಿ ಬಿಟ್ಟಿದ್ದಿತು–ಎಂಬುದು ಸ್ಪಷ್ಟವಾಗುತ್ತದೆ. ಭೀಮಸೇನನು ತರುವಾಯ ವಿದ್ಯಾರ್ಥಿಗಳ ಉಪಯೋಗ, ಹಿತಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಧಾತುಗಳನ್ನು ಪ್ರತ್ಯೇಕಿಸಿ, ಅವುಗಳಿಗೆ ಅರ್ಥನಿರ್ದೇಶ ಮಾಡಿದನು, ಎಂದು ಹೇಳಬಹುದು...ಕೇಶಿರಾಜನು ಉಲ್ಲೇಖಿಸಿರುವ ಭೀಮನು ಪಾಣಿನಿಯ ಧಾತುಪಾಠದ ಸಂಹಿತಾಪಾಠದ ಆಧಾರದಮೇಲೆಯೇ ಅರ್ಥಸಹಿತವಾದ ಧಾತುಪಾಠವನ್ನು ರಚಿಸಿದನೆಂದೂ, ಇವನ ಕಾಲ ಸುಮಾರು ಕ್ರಿ. ಶ. 600 ಎಂದೂ, ಹೇಳುವುದು ಸಾಧ್ಯ."[11]

ಕೆಲವು ಉದಾಹರಣೆಗಳು : ಅಟ್ಕು–ಜೀರ್ಣೇ (= ಅರಗು) ; ಕಾ–ರಕ್ಷಣೇ ; ಮಿಸುಕು = ಅಂತರ್ಗತಸ್ಪನೇ (= ಪಿಸುಗುಟ್ಟು) ; ಅಗುಟ್ಚು – ಜಲಾಶಯಮಗ್ನೇ (= ನೀರಿನಲ್ಲಿ ಮುಳುಗಿಸು)

(iii) **ಪ್ರಯೋಗಸಾರ:** 'ಅಪರಿಮಿತ ವಿದ್ಯರೆನಿಸಿರ್ದ ಪುರಾಣ ಕವೀಂದ್ರರ ಅಖಿಳ ಕಾವ್ಯಂಗಳ ಗೂಢಪದ ಪ್ರಯೋಗಮುಂ ನೆರಪಿ ಪದಾರ್ಥಂಗಳನೀಂ ಮನಂಬುಗೆ ಪೇೞ್ವೆಂ' ಎಂದು ಹೇಳಿ, ಹಿಂದಿನ ಕವಿಗಳಿಂದ ಆಯ್ದು, ಅಪೂರ್ವವಾದ ನಾಮಪದಗಳಿಗೆ ಈ ಪಟ್ಟಿಯಲ್ಲಿ ಅರ್ಥ ಹೇಳಿದ್ದಾನೆ. ಪ್ರಾಯಿಕವಾಗಿ ಕನ್ನಡದಲ್ಲೇ ಅರ್ಥ ಹೇಳಿದ್ದಾನೆ.

ಕೆಲವು ಉದಾಹರಣೆಗಳು : 'ಅಗುಂದಲೆ'ಯೆಂದು ಪಿರಿದು, 'ಅಜಿಲ್' ಎಂದು ನಕ್ಷತ್ರಂ. 'ಅಜಿದಿ'ಯೆಂದು ತುಂಬಿ, 'ಕೊತ್ತಳಿ'ಯೆಂದು ಕಾಗೆಗಳ ಮೊತ್ತಂ. ಸೈಪೆಂದು ಪುಣ್ಯಂ–(ಸು. 230ರ ಮೇಲೆ ಪದಗಳಿವೆ).

ರನ್ನಕಂದ ಮೊದಲ ಕನ್ನಡ ನಿಘಂಟಾದರೂ ಪೂರ್ತಿಯಾಗಿ ದೊರೆತಿಲ್ಲ. ನಾಗವರ್ಮನ ವಸ್ತುಕೋಶವು ಬಹುಮಟ್ಟಿಗೆ ಸಂಸ್ಕೃತ ನಿಘಂಟುಗಳನ್ನು ಆಧರಿಸಿ ಬರೆದದ್ದು. ಆದ್ದರಿಂದ, ಕೇಶಿರಾಜನ ಮೇಲ್ಕಂಡ ಶಬ್ದಕೋಶಗಳನ್ನು ಮುಂದಿನ ನಿಘಂಟುಕಾರರಿಗೆ ಮಾರ್ಗದರ್ಶನ ಮಾಡಿದ ರಚನೆಗಳೆಂದು ಹೇಳಬಹುದು.

(3) **ಕರ್ಣಾಟಕ ಶಬ್ದಸಾರ:** ಇದರ ಕರ್ತೃ ತಿಳಿದುಬಂದಿಲ್ಲ. ಇದು ಗದ್ಯರೂಪದಲ್ಲಿರುವುದು ಗಮನಾರ್ಹ. ಇದರ ಕಾಲ ಸು. 1400. ಇದರಲ್ಲಿ 676 ವಾಕ್ಯಗಳಿವೆ. ಉದಾಹರಣೆ :

"ಜನ್ನವಗೆಯುಂ, ಎಂಟಡಿವರಿಜಂ, ಬೀರಂ, ಬಿಸುಗಣ್ಣನುಗಂ, ಅರೆವಾನಿಸವೆಗೆಯುಂ –ಈ 5 ವೀರಭದ್ರಂಗೆ ಪೆಸರ್," (5 ಪದಗಳಿಗೂ ಕ್ರಮವಾಗಿ ಅರ್ಥ—ಯಜ್ಞದ ಶತ್ರು, ಎಂಟು ಅಡಿಗಳ ಆಕಾರವುಳ್ಳವನು, ವೀರ, ಈಶ್ವರಪುತ್ರ, ನೃಸಿಂಹನ ಶತ್ರು).

"ಕಂದೆಂಮುಂ ಕರೆಯೆಂದುಂ ಕಳಂಕಂ, ಜತ್ತುಳ ಮೆಂದು ಫೇನಂ (=ನೊರೆ), ಕಾಬ್ಬು(ಳ್ಪು)ರಮೆಂದು ಕಾಡ ಹೊನಲ್."

(4) **ಕಬ್ಬಿಗರ ಕೈಪಿಡಿ:** ಇದರ ಕರ್ತೃವಿಚಾರವೂ ತಿಳಿದುಬಂದಿಲ್ಲ. ಕಾಲ ಸು. 1400. 99 ಕಂದ ವೃತ್ತಗಳಲ್ಲಿ ಹಳಗನ್ನಡ ಪದಗಳಿಗೆ ಅರ್ಥವನ್ನು ತಿಳಿಸಿದೆ. ಒಂದು ಉದಾಹರಣೆ :

ಪಂಡಿತವಕ್ಕಿ ಕೀರನೊಳೆ, ತಾರಗೆವಿಟ್ಟೆಯೆನಲ್ಕೆ ಪುಷ್ಕರಂ,
ಕಂಡವೆನಲ್ಕೆ ತುಂಡಿನೊಳೆ, ಬಣ್ಣಪುರಂ ಮಿಗೆ ವರ್ಣಪೂರದೊಳ್,
ತಂಡವೆನಲ್ಕೆ ಹಿಂಡಿನೊಳೆ, ದೂದವಿ ಕುಂಟಣಿಯೊಳ್, ಬೆದಂಡೆ ವೈ-
ದಂಡಿಕ ನಾಮಧೇಯದೊಳೆ, ಕನ್ನಪುರಂ ಸಲೆ ಕರ್ಣಪೂರದೊಳ್.

[ಕೀರ=ಗಿಳಿ, ಪುಷ್ಕರ=ಆಕಾಶ. ಬಣ್ಣವುರ, ಬೆದಂಡೆ, ಕನ್ನವುರ ಇವು ಅರ್ಥವೆಂದು ಕೊಟ್ಟಿರುವ ಸಂಸ್ಕೃತ ಪದಗಳ ತದ್ಭವಗಳು.]

(5) **ಚತುರಾಸ್ಯ ನಿಘಂಟು** : ಇದನ್ನು ಬರೆದವನು ಚತುರಾಸ್ಯ ಬೊಮ್ಮರಸನೆಂಬ ವೀರಶೈವ ಕವಿ. ಇವನ ಕಾಲ ಸು. 1450. "ಗಗನಾನ್ವಯ ತಿಲಕಂ ಹಂಪರಸ ಸೂನು ತಿಪ್ಪರಸಂ ಪೇಳೆಲೆ ಚತುರಾನನ" ಎನ್ನಲು ತಾನು "ಕರ್ಣಾಟಕಾಭಿಧಾನ"ವನ್ನು ಹೇಳಿದುದಾಗಿ ಕವಿ ಹೇಳಿಕೊಂಡಿದ್ದಾನೆ. (ಪ. 4). ಗ್ರಂಥದ ಕಡೆಯಲ್ಲಿ, "ಇಂತೀ ಕನ್ನಡ ದೇಸಿಯ ಅನಂತಾರ್ಥವ ಬುಧ ಸಮೂಹವು ಅರಿವಡೆವಂದದೆ ಸಂತಸದಿಂ ಅರಿಪಿದಂ ಕವಿ ಚಿಂತಾಮಣಿ ಯೆನಿಪ ಸರಸ ಕವಿ ತಿಪ್ಪರಸಂ" (ಪ. 133) ಎಂದು ಹೇಳಿರುವುದರಿಂದ, ಗ್ರಂಥದ ರಚನೆಯಲ್ಲಿ ತಿಪ್ಪರಸನು ಮಾರ್ಗದರ್ಶನ ಮಾಡಿರಬಹುದೆಂದು ತೋರುತ್ತದೆ. ಗ್ರಂಥದಲ್ಲಿ 137 ಕಂದ ಪದ್ಯಗಳಿವೆ. ಗ್ರಂಥಾರಂಭದಲ್ಲಿ 'ಪಂಪೆಯಾಳ್ದನ' (ವಿರೂಪಾಕ್ಷನ) ಸ್ತೋತ್ರವಿದೆ. ಪ್ರತಿ ಪದ್ಯವೂ 'ಚತುರಾಸ್ಯ' ಎಂದು ಕೊನೆಗೊಳ್ಳುವುದರಿಂದ ಈ ನಿಘಂಟು' 'ಚತುರಾಸ್ಯ ನಿಘಂಟು' ಎಂದೇ ಪ್ರಸಿದ್ಧ. "ಕನ್ನಡದೆ ಎಂತಪ್ಪುವು ಶಬ್ದಂ ಎಂಬ ವಿದ್ವಜ್ಜನರಾ ಚಿಂತೆ ಪರಿಹರಿಪ ಮಾಳ್ಕೆಯೊಳ್ ಇಂತುಸಿರ್ವೆಂ ದೇಸಿ ತದ್ಭವಂ ತತ್ಸಮಮುಂ" ಎಂದು ಗ್ರಂಥದ ವಿಷಯವನ್ನು ಕವಿ ತಿಳಿಸಿದ್ದಾನೆ.

ಎರಡು ಉದಾಹರಣೆಗಳು :

ಬಿಯದಂ ವ್ಯಾಧಂ ; ತೆವರ್, ಆ । ರಯಲ್, ಉದ್ದನೆಲಂ ; ಮುಸುಂಕಿತು
ಎನಲ್ ಆವರಣಂ ;
ಜಯುಮೆನೆ ಗೆಲ್ಲಂ, ನೆರೆಸ ೦ । ದೆಯಮೆನೆ ಸಂದೇಹಮಪ್ಪುದು, ಎಲೆ ಚತುರಾಸ್ಯ ॥
(ಪ. 35)

ನುಡಿವಕ್ಕಿಯೆನಲ್ ಗಿಣಿಯುಂ । ಪಡಿಯರವಕ್ಕಿಯೆನೆ ಕೋಗಿಲೆಯ ಪೆಸರಕ್ಕುಂ ;
ನಡೆವಕ್ಕಿ ಹಂಸೆಯಕ್ಕುಂ । ತೊಡರ್ವಕ್ಕಿಯೆ ಚಕ್ರವಾಕಂ, ಎಲೆ ಚತುರಾಸ್ಯ ॥
(ಪ. 129)

(6) **ಕಬ್ಬಿಗರ ಕೈಪಿಡಿ** : ಇದರ ಕರ್ತೃ ಲಿಂಗ ಮಂತ್ರಿ. ಇವನ ಕಾಲ ಸು. 1530. ವೀರಶೈವ ಮತೀಯ; ತಂದೆ ವಿರೂಪಾಕ್ಷ. ವಿಜಯನಗರ ಅರಸರ ಸಾಮಂತನಾಗಿದ್ದ ರಾಯಭೂವರನ ಪ್ರಧಾನಿಯಾಗಿದ್ದನೆಂದು ಶಾಸನ ಗಳಿಂದ ತಿಳಿದುಬರುತ್ತದೆ. ತಾನು ಸಂಗೀತ ನಿಪುಣನೆಂದೂ, ಅನೇಕ

ಲಿಪಿಗಳನ್ನು ಬಲ್ಲವನೆಂದೂ ಹೇಳಿಕೊಂಡಿದ್ದಾನೆ. 'ಭಿಕ್ಷಾಟನ ಚರಿತೆ'ಯನ್ನು ಬರೆದಿರುವ ಗುರುಲಿಂಗವಿಭು ಇವನಾಗಿರಬಹುದು ಎಂಬ ಸಂದೇಹಕ್ಕೂ ಅವಕಾಶವಿದೆಯೆಂದು ಕವಿಚರಿತೆಕಾರರು ತಿಳಿಸುತ್ತಾರೆ.

ಈ ಶಬ್ದಕೋಶ ವಾರ್ಧಿಕ ಷಟ್ಪದಿಯಲ್ಲಿರುವುದು ಗಮನಾರ್ಹವಾದ ಅಂಶ. 100 ಪದ್ಯಗಳಲ್ಲಿ* ಹಳಗನ್ನಡ ಪದಗಳಿಗೆ ಅರ್ಥವನ್ನು ಹೇಳಿದೆ. ಗ್ರಂಥದ ಪ್ರಾರಂಭದಲ್ಲಿ ಪಂಪಾ ವಿರೂಪಾಕ್ಷ ಲಿಂಗನ ಸ್ತೋತ್ರವಿದೆ. ಅರ್ಥ ತಿಳಿಸಲು ಆಯ್ಕೆಯಾಗಿರುವ ಶಬ್ದಗಳ ವೈಶಿಷ್ಟ್ಯವನ್ನು ಕವಿ ಹೀಗೆ ಸೂಚಿಸಿದ್ದಾನೆ :

"ಮಿಸುಪ ಗೂಢಪದ ಪ್ರಯೋಗದೊಳ್ಪಂ,
ರಸಮಂ ಒಸರ್ವ ಅಚ್ಚಗನ್ನಡದ ಚೆಲ್ವುಮಂ,
ತದ್ಭವದ ಚೆಸುಗೆಯಂ, ದೇಶ್ಯಕ್ಕೆ ಅಮರ್ದ್ದ ಸೊಂಪಂ,
ತೊಳಪ ತತ್ಸಮದ ಬಿನ್ನಣವನು,
...ಕಬ್ಬಿಗರ ಕೈಪಿಡಿಯೆಂದು ಪೆಸರನಿತ್ತು
ಒಸೆದು ಪೇಳ್ದಪೆನು,"

ಉದಾಹರಣ ಪದ್ಯ :

ಪಂಚಸೆಗೆ ಮಾಜು ಎಂದು ಪೆಸರಕ್ಕು, ಪಂಶಮಂ
ಬಂಚಮೆನಲ್ ಅಕ್ಕು, ಗಾವಿಲನೆಂಬು ಗ್ರಾಮಣಿ. ಪ-
ಳಂಚು ಎಂದು ತಾಗು ಎಂದು ಸಂಘಟ್ಟನಾರ್ಥ, ಪಾಗದ ಮೆನಲ್ ಪ್ರಾಕೃತಾಖ್ಯಂ;
ಉಂಚಂ ಎಂದು ಉದ್ದುಮಪ್ಪುದು. ಮೇಣ್ ಅಪೂರ್ವಮಂ
ಪಾಂಚಂ ಎಂಬುದು, ಅವಸೆ ಎನಲ್ ಅಮಾವಾಸ್ಯೆ, ಗುಳ
ವಂಚಿತಂ ಗುಡ, ಪಕ್ಕ ರಕ್ಕೆಯುಪ್ಪುದು, ನಾಡಿ ನಾಳಿಯೆನೆ ಗಳಿಗೆಯಕ್ಕುಂ.

ಈ ನಿಘಂಟಿಗೆ ವೆಸರುಘಟ್ಟದ ಹೊನ್ನಪ್ಪನೆಂಬವನು (1885) 'ಚಕೋರ ಚಂದ್ರಿಕೆ' ಎಂಬ ಟೀಕನ್ನು ಬರೆದಿದ್ದಾನೆ.

(7) **ಕರ್ಣಾಟಕ ಶಬ್ದಮಂಜರಿ :** ಇದನ್ನು ರಚಿಸಿದವನು ವಿರಕ್ತ ತೋಂಟದಾರ್ಯನೆಂಬ ವೀರಶೈವ ಕವಿ. ಇವನ ಕಾಲ ಸು. 1560. ಇದರಲ್ಲಿ ವಾರ್ಧಿಕ ಷಟ್ಪದಿಯ 120 ಪದ್ಯಗಳಿವೆ. ಹಳಗನ್ನಡ ಪದಗಳಿಗೆ ಅರ್ಥವನ್ನು

* 101 ಪದ್ಯಗಳೆಂದು ಎನ್. ಬಸವರಾಧ್ಯರ ಹೇಳಿಕೆ. (ಚಿನ್ನದ ಬೆಳಸು, ಕನ್ನಡ ಸಾಹಿತ್ಯ ಪರಿಷತ್ತು, 1970; ಹೊಂದಿಸೆ-3. ಪು. 44."

ತಿಳಿಸಿದೆ. “ಅಚ್ಚಗನ್ನಡ ಗೂಢಪದ ತತ್ಸಮಂ ತದ್ಭವಗಳೆಂಬ ಶಬ್ದನಾಮಗಳ ನೋರಂತೆ ವಿರಚಿಸಿದೆನು ಎಲ್ಲಾ ಕವೀಶ್ವರರ ಉದಾಹರಣ ಸನ್ಮಾರ್ಗವಿಡಿದು” ಎಂದು ನಿಘಂಟು ರಚನೆಯ ಉದ್ದೇಶವನ್ನು ಕವಿ ತಿಳಿಸಿದ್ದಾನೆ. “ಈ ನಿಘಂಟು ಬಹಳ ಪ್ರಚಲವಾಗಿತ್ತೆಂದು ಕಂಡುಬರುತ್ತದೆ. ಆದ್ದರಿಂದಲೇ ಇದಕ್ಕೆ ನಾಲ್ಕು ಬೇರೆಬೇರೆ ಟೀಕುಗಳು ರಚಿತವಾಗಿವೆ. 1870ರಲ್ಲಿ ಮುನೇಗೌಡರ ಟೀಕೂ, 1884ರಲ್ಲಿ ಹೆಸರುಘಟ್ಟದ ಹೊನ್ನಪ್ಪನವರ ‘ವಿಬುಧಾನಂದಿನೀ’ ಎಂಬ ಟೀಕೂ, 1891ರಲ್ಲಿ ಎಸ್. ಆರ್. ಕರಿಬಸವಶಾಸ್ತ್ರಿಗಳ ಸುಜನೋಲ್ಲಾಸಿನೀ’ ಎಂಬ ಟೀಕೂ, ಕರ್ತೃ ಯಾರೆಂಬುದು ತಿಳಿಯದ ಮತ್ತೊಂದು ಅಚ್ಚಾಗಿಲ್ಲದ ಟೀಕೂ ಕಂಡುಬರುತ್ತವೆ.”[12]

1870ರಲ್ಲಿ ಮದರಾಸಿನ ಹಿಂದೂ ಭಾಷಾ ಮುದ್ರಾಕ್ಷರ ಶಾಲೆಯಲ್ಲಿ ಅಚ್ಚಾಗಿರುವ ಪ್ರತಿಯ ‘ಅವತಾರಿಕೆ’ಯಲ್ಲಿ, “ಶ್ರೀಮನ್ ಮಹೀಶೂರಪುರ ವರಾಧೀಶ ಶ್ರೀಮದ್ ರಾಜಾಧಿರಾಜ ಶ್ರೀಕೃಷ್ಣಕಂಠೀರವ ಸಾರ್ವಭೌಮನ ಅಪ್ಪಣೆಯಿಂದ ಸಭಾರತ್ನದಲ್ಲಿ ವಪ್ಪಿರ್ದ ಮಹಾಪಂಡಿತರಿಂದ ಈ ಕರ್ಣಾಟ ಶಬ್ದಮಂಜರಿಗೆ ಟೀಕು ಮಾಡಲ್ಪಟ್ಟು ಇದೆ” ಎಂಬ ಮಾತಿನಿಂದಲೂ, ಮುಖ ಪತ್ರದಲ್ಲಿ—“ಬೆಂಗಳೂರಿನಲ್ಲಿರುವ ಕರ್ಣಾಟ ಚತುರ್ವಿಧ ಕವಿ ಶಾರದ ಮುನೇಗೌಡರಿಂದ ಚನ್ನಾಗಿ ಶೋಧಿಸಲ್ಪಟ್ಟು ಇದೆ” ಎಂಬ ಮಾತಿನಿಂದಲೂ ಮುನೇಗೌಡರು ಈ ಗ್ರಂಥಕ್ಕೆ ಟೀಕು ಬರೆದವರಲ್ಲ ಎಂದು ಗೊತ್ತಾಗುತ್ತದೆ.

“ವರ ಷಟ್‌ಸ್ಥಲಾಚಾರಸಂಪನ್ನ ಸಿದ್ಧಸಮಲ ಸು । ಸ್ಥಿರ ಶೈವ ಪಂಚಾಕ್ಷರೀ ಮಂತ್ರ ಹೃದಯನುರು । ತರ ಸತ್‌ಕ್ರಿಯಾ ಜ್ಞಾನಸಂಪನ್ನನಖಿಲ ಶಾಸ್ತ್ರಾರ್ಥ ಕೋವಿದ ಪಾವನಾ ॥ ಚರಿತ ಘನಗುರು ನಿರಂಜನ ಲಿಂಗ ಚರಣ ಸರ। ಸಿರುಹಾ ಸೌರಭ ಮಧುಕರಂ ತೋಂಟದಾರ್ಯಂ ಬಿ । ತ್ತರಿಸಿದನೆನಲ್ಕೆ ಮೆಚ್ಚದರೊಳರೆ ಕರ್ಣಾಟ ಶಬ್ದಮಂಜರಿಯನಿದನು ॥” (ಪ. 2) ಎಂದು ತನ್ನ ವಿಚಾರವನ್ನೂ ಗ್ರಂಥಪ್ರಾಶಸ್ತ್ಯವನ್ನೂ ಸೂಚಿಸಿ, ತನ್ನ ಆರಾಧ್ಯ ದೈವವಾದ, ‘ವರಗುರು ನಿರಂಜನ’ ನೆನಿಸಿದ ಶಿವನ ಪರ್ಯಾಯನಾಮಗಳನ್ನು ತಿಳಿಸುವ ಪದ್ಯದಿಂದ ಕವಿ ಗ್ರಂಥವನ್ನು ಪ್ರಾರಂಭಿಸುತ್ತಾನೆ.

ಒಂದು ಉದಾಹರಣ ಪದ್ಯವನ್ನೂ ಅದಕ್ಕೆ ಬರೆದಿರುವ ಟೀಕನ್ನೂ ಕೆಳಗೆ ಕೊಟ್ಟಿದೆ :

ಸಾರಿಕೆಯೆನಿಕ್ಕಂಜೆಯೆನೆ ಹಂಸೆ ಸೋಗೆಯೆನೆ ।
ಮೊರ [ಮೋರ?] ನೆನೆ ನವಿಲ್ ಅಮಳ್ದಲೆವಕ್ಕಿಯದು ತಾನು ।
ಭೇರುಂಡನಕ್ಕು ಚಾದಗೆ ಚಾತಕಮುದಕ್ಕು ಕೊಂಚೆಯೆನೆ ಕ್ರೌಂಚಪಕ್ಷಿ ॥

ವಾರೆಯಾಗದು ಕೇಗೆನಲ್ ನವಿಲದನಿ ಕೋಕಿ |
ಲಾರವಕೆ ಕುಕಿಲೆಂದು ತೊಂಡುಗೆಡೆಮುದೆನಲ್ಕೆ ।
ಸಾರುಗುಂ ಗಿಳಿಪಾತುಂ ಬೆಜ್ಜೆ ಜಡಿಪಂ ಬಗ್ಗು ಬಿಪ್ಪಂಡ ವೆಂದಿಂಬಿವು ॥ (ಪ. 30)

ಟೀ॥ ಸಾರಕಿ-ಸಾರಕಿಯೆನೆ–ಯೆನೆ–ಯೆನಲಾಗಿ–ಹೆಣ್ಣುಗಿಳಿಯ ಪೆಸರು. ಅಂಚೆಯೆನೆ-ಅಂಚೆಯೆನಲಾಗಿ - ಹಂಸೆ - ಹಂಸೆಪಕ್ಷಿಯೆಂದಾಗುವುದು. ಇದು ಹಂಸೆ ಪಕ್ಷಿಯ ಪೆಸರು, ಸೋಗೆ-ಸೋಗೆಯೆನಲಾಗಿ-ಮೊರ-ಮೊರವೆಯೆನಲಾಗಿ-ಈ ಎರಡು ನವಿಲು-ನವಿಲೆಂದಾಗು ವುದು-ಇದು ಸೋಗೆ ನವಿಲಿನ ಪೆಸರು. ಅಮಳ್ದಲೆವಕ್ಕಿಯು-ಯೆರಡು ತಲೆಯಾದ ಹಕ್ಕಿ-ಇತ್ತಲೆವಕ್ಕಿ-ಇತ್ತಲೆವಕ್ಕಿಯು-ತಾನದು-ಅದು ಭೇರುಂಡನಕ್ಕು-ಗಂಡುಭೇರುಂಡನಾಗುವುದು-ಇದು ಇರುದಲೆವಕ್ಕಿಯ ಪೆಸರು. ಚಾದಗೆ–ಚಾದಗೆ ಹಕ್ಕಿಯು-ಚಾತಕಮುದಕ್ಕು-ಚಾತಕ ಪಕ್ಷಿಯೆಂದಾಗುವುದು - ಕೊಂಚಯೆನೆ - ಕೊಂಚಯೆನಲಾಗಿ - ಕ್ರೌಂಚಪಕ್ಷಿಯು - ಕ್ರೌಂಚಪಕ್ಷಿ ಯೆಂದಾಗುವುದು-ವಾರೆಯಾಗದು-ಹೊರಚ್ಚಾಗದು. ಕೇಗೆನಲು-ಕೇಗೆಯೆನಲಾಗಿ-ನವಿಲದನಿ-ನವಿಲದನಿಯೆಂದಾಗುವುದು, ತೊಂಡುಗೆಡೆದುನೆನಲ್ಕೆ-ತೊಂಡು ಗೆಡೆಮುದೆನಲಾಗಿ-ಗಿಳಿಯ ವಾತು-ಸಾರುಗುಂ-ಸೇರುವುದು-ಇದು ಗಿಳಿಯ ಮಾತಿನ ಪೆಸರು-ಬೆಜ್ಜೆ-ಬೆಜ್ಜೆಯೆಂದು-ಜಡಿಪಂ-ಜಡಿಪಮೆಂದು-ಬಗ್ಗು –ಬಗ್ಗುವೆಂದು–ಬಿಪ್ಪಂಡ - ಬಿಪ್ಪಂಡವೆಂದು - ಯೆಂದೆಂಬವು ಯೆಂದೆಂಬಂಥಾ ಈ ನಾಲ್ಕು.

'ನಾನಾರ್ಥ ಶಬ್ದ' ಎಂಬ ವಿಭಾಗದಲ್ಲಿ 'ಕಾಂತ' ('ಕ' ಕಾರದಿಂದ ಕೊನೆ ಗೊಳ್ಳುವ) ಶಬ್ದಗಳಿಂದ ಮೊದಲಾಗಿ 'ಸಾಂತ' ಶಬ್ದಗಳವರೆಗೆ, ಕೆಲವು ವರ್ಗಾಕ್ಷರಗಳಿಂದ ಕೊನೆಗೊಳ್ಳುವ ಶಬ್ದಗಳನ್ನು ಬೇರೆಬೇರೆ ಗುಂಪುಗಳಾಗಿ ಮಾಡಿಕೊಂಡು ಅರ್ಥಹೇಳಿರುವುದು ಈ ಗ್ರಂಥದ ಒಂದು ವಿಶೇಷ. ಇದು ಕೇಶಿರಾಜನು ತನ್ನ 'ಪ್ರಯೋಗಸಾರ'ದಲ್ಲಿ ಅನುಸರಿಸಿರುವ ಕ್ರಮ.

(8) **ಸೂರ್ಯಕವಿಯ 'ಕವಿ ಕಂಠಹಾರ'** : 'ಕವಿ ಕಂಠಹಾರ'ವನ್ನು ಬರೆದಿರುವ ಸೂರ್ಯನು ಬ್ರಾಹ್ಮಣ. ಸೂರ್ಯಭಕ್ತನಾದ ಕರಣಿಕ ತಿಮ್ಮ ಮಂತ್ರಿಯ ಮಗ ; ಬೇಲೂರ ದೊರೆಯಾದ ವೆಂಕಟಾದ್ರಿ ರಾಜನ ಮೊಮ್ಮ ಗನೂ ಧವಳಾಂಕ ಭೀಮ ಎಂಬ ಬಿರುದು ಹೊಂದಿದ್ದ ಕೃಷ್ಣರಾಜನ ಮಗನೂ ಆದ ವೆಂಕಟಾದ್ರಿ ರಾಜನ ಆಜ್ಞಾನುಸಾರವಾಗಿ ಈ ಗ್ರಂಥವನ್ನು ರಚಿಸಿರುವು ದಾಗಿ ಹೇಳಿಕೊಂಡಿದ್ದಾನೆ. ಆದ್ದರಿಂದ ಇವನು ಆ ದೊರೆಯ ಆಶ್ರಿತ ನಾಗಿದ್ದಿರಬಹುದು. ಬೇಲೂರು ಶಾಸನಗಳಿಂದ ಈ ದೊರೆಯ ಕಾಲ

ಗೊತ್ತಾಗುವುದರಿಂದ, ಸೂರ್ಯನ ಕಾಲವನ್ನು ಸುಮಾರು 1640 ಎಂದು ಕವಿ ಚರಿತೆಕಾರರು ನಿರ್ಣಯಿಸಿದ್ದಾರೆ.

ಈ ಕನ್ನಡ ನಿಘಂಟಿನಲ್ಲಿ 271 ಕಂದ ಪದ್ಯಗಳಿವೆ. ಗ್ರಂಥಕ್ಕೆ ಕೊಟ್ಟಿರುವ ಹೆಸರಿನ ಸಾರ್ಥಕತೆಯನ್ನು ಹೀಗೆ ತಿಳಿಸಿದ್ದಾನೆ :

ಪರುಷ ಮಿಗೆ[1] ಮುನ್ನಂ ಆದಿಮರ್[1] । ಬರೆದ ಒಳ್‌ಕರ್ಣಾಟ ಶಬ್ದಮಣಿನಿಚಯಮುಮಂ
ಸರಗೊಳಿಸಿ ಪೇಳ್ದಿಂ; ಇದು ತಾಂ । ಪರಿಕಿಸೆ ಕವಿಕಂಠಹಾರಮೆನಿಕುಂ ಪೆಸರಿಂ.

ಗ್ರಂಥಾರಂಭದಲ್ಲಿ ಶಿವ, ರಾಮ, ಗಣಪತಿ, ಇವರುಗಳನ್ನು ಸ್ತುತಿಸಲಾಗಿದೆ. ಕವಿಯ ತವರುನಾಡಿನ ಪ್ರೇಮ, ಹುಟ್ಟೂರಿನ ಪ್ರೀತಿ, ಈ ಪದ್ಯಗಳಲ್ಲಿ ಪ್ರತಿಬಿಂಬಿತವಾಗಿದೆ :

ನಾಡಿರ್ಪುದೊಂದು, ಪರಿಕಿಸಿ । ನೋಡಲ್, ಕಾಶ್ಮೀರದೇಶಕೆ ಅಯ್ವಡಿಯೆನೆ ತಾಂ
ಗಾಡಿವಡೆದಿಹುದು ಗೀರ್‌ವಧು । ಗೆ ಆಡುಂಬೊಲನೆನೆ ಸುದೇಶ ಹೊಯ್ಸಳ ದೇಶಂ.
ಆ ದೇಶದೊಳಗೆ ನರಹರಿ । ಯಾದೇಶದಿಂ ಒಪ್ಪುತಿರ್ಪುದು ಅತಿ ವೈಭವದಿಂ
ಮೇದಿನಿಗಚ್ಚರಿಯೆಂದೆನೆ । ಸಾಧುಜನಪ್ರವರವಿನುತ ವೇಲಾನಗರಂ.

[ಐವಡಿ = ಐದು ಮಡಿ, ಐದರಷ್ಟು. ಗಾಡಿ = ಚೆಲುವು. ಗೀರ್‌ವಧು = ಸರಸ್ವತಿ. ಆಡುಂಬೊಲ = ಆಟದ ಬಯಲು. ಆದೇಶ = ಅಪ್ಪಣೆ. ಮೇದಿನಿ = ಭೂಮಿ, ಲೋಕ. ಅಚ್ಚರಿ = ಆಶ್ಚರ್ಯ. ಸಾಧುಜನ ಪ್ರವರ ವಿನುತ = ಶ್ರೇಷ್ಠರಾದ ಸಜ್ಜನರ ಹೊಗಳಿಕೆಗೆ ಪಾತ್ರನಾದ. ವೇಲಾ ನಗರ = ಬೇಲೂರು (ಹಾಸನ ಜಿಲ್ಲೆಯಲ್ಲಿದೆ).]

"ಈ ಕವಿಯ ಬಂಧವನ್ನು ನೋಡಿದರೆ ಈತನು ಪ್ರೌಢನಲ್ಲವೆಂದು ತೋರುತ್ತದೆ. ಇವನ ಕಂದಗಳಲ್ಲಿ ಛಂದೋಭಂಗ, ವಿಷಮಸ್ಥಾನದಲ್ಲಿ ಜಗಣ ಪ್ರಯೋಗ, ಪದಗತವಾದ ಹ್ರಸ್ವ ದೀರ್ಘಗಳನ್ನು ವಿನಿಮಯ ಮಾಡಿಕೊಳ್ಳುವುದು, ಪದಗಳನ್ನು ಸ್ವೇಚ್ಛೆಯಾಗಿ ಪ್ರಯೋಗಿಸುವುದು - ಇವೇ ಮೊದಲಾದ ಹಲವು ದೋಷಗಳು ಕಾಣಬರುತ್ತವೆ" ಎಂದೂ, ಗದ್ಯರೂಪದಲ್ಲಿರುವ 'ಶಬ್ದಸಾರ'ವನ್ನು ಅಲ್ಲಿನ ಕೆಲವು ಪದಗಳನ್ನು ಬಿಟ್ಟು ಪದ್ಯರೂಪಕ್ಕೆ ತಿರುಗಿಸಿದ್ದಾನೆ ಎಂದೂ ಈ ಗ್ರಂಥದ ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ.[13] ಎಷ್ಟೇ ಸಣ್ಣ ದೋಷವಾದರೂ ಅದು ಕಾವ್ಯದ ಸೌಂದರ್ಯಕ್ಕೆ ಕುಂದು ತರು

1. 'ಮುನ್ನ ಆದ್ಯರ್' ಎಂದು ಗ್ರಂಥ ಸಂಪಾದಕರು ತಿದ್ದಿರುವ ಹಾಗೆ ಕಾಣುತ್ತದೆ, ಇಲ್ಲಿ ಕೊಟ್ಟಿರುವುದು ಕವಿಚರಿತೆಯ ಪಾಠ.

ವುದು ನಿಶ್ಚಯ. ಆದರೆ, ಶಾಸ್ತ್ರ ಕವಿತ್ವದಲ್ಲಿ ಮೇಲೆ ಸೂಚಿಸಿರುವಂಥ ತಪ್ಪುಗಳನ್ನು ಅಷ್ಟಾಗಿ ಗಮನಿಸಬೇಕಾಗಿಲ್ಲವೆಂದು ತೋರುತ್ತದೆ. ನಾಗವರ್ಮನಂಥ ಸಮರ್ಥ ಕವಿಯೇ ತನ್ನ 'ವಸ್ತುಕೋಶ'ದಲ್ಲಿ ಕೆಲವು ಇಂಥ ದೋಷಗಳನ್ನು ಮಾಡಿರುವಲ್ಲಿ, 'ಕವಿಕಂಠಹಾರ'ದಂಥ ಚಿಕ್ಕ ಕೃತಿಯಲ್ಲಿ ಪದ್ಯರಚನೆಗೆ ಸಂಬಂಧಿಸಿದ ಸಣ್ಣಪುಟ್ಟ ದೋಷಗಳನ್ನು ದೊಡ್ಡದು ಮಾಡಬೇಕಾಗಿಲ್ಲ. ಅದರಲ್ಲಿಯೂ, ನಿಘಂಟಿನ ಶಬ್ದರೂಪಗಳನ್ನು ಇದ್ದ ಹಾಗೆಯೇ ಪದ್ಯಬಂಧದಲ್ಲಿ ಅಡಗಿಸುವುದು ಶ್ರಮಸಾಧ್ಯವಾದ ಕೆಲಸ ಎಂಬುದನ್ನೂ ಮರೆಯಬಾರದು. ಅಲ್ಲದೆ, ವಿವೇಕಿಗಳು ಮಾಸಿದ ಕನ್ನಡಿಯನ್ನು ಹಸನುಮಾಡಿಕೊಂಡು ಉಪಯೋಗಿಸುವಂತೆ, "ಪಸುಳೆಯಿ ನಾಂ ಪೇಳ್ದ ಇದರೊಳಗೆ ಒಸೆಯುಂತೆ ತಪ್ಪುಗಳ ತಿರ್ದಿ ಮೆರೆವುದು ಗುಣಮಂ" ಎಂದು ಕವಿಯೇ ಓದುಗರನ್ನು ಬೇಡಿಕೊಂಡಿದ್ದಾನೆ. ನೇರವಾಗಿ ಹೇಳದಿದ್ದರೂ, ಶಬ್ದಸಾರವನ್ನು ಅನುಸರಿಸಿ ಪದ್ಯರೂಪದಲ್ಲಿ ಇದನ್ನು ಬರೆದಿರುವುದಾಗಿ ಅವನು ತಿಳಿಸಿರುವುದು ಮೇಲೆ ಉದಾಹರಿಸಿರುವ ಪದ್ಯದಲ್ಲಿ ಸೂಚಿತವಾಗಿರುವಂತಿದೆ. ಕುಕವಿಗಳಿಗೆ ಮೊದಲು ನಮಸ್ಕರಿಸಿ ಆಮೇಲೆ ರಸಿಕರಿಗೆ ನಮಸ್ಕರಿಸುತ್ತೇನೆ ಎಂಬ ತನ್ನ ಮಾತಿಗೆ, "ಮುಸುಕಿದ ಕೆಂಜಿಗ (ಕೆಂಪುಗೊದ್ದ) ಗೂಡಹುತ ಪೊಸ ಪಣ್ಣಂ ಮುದದೊಳ್ ಒಲ್ದು ಸವಿವಂತೆವೋಲ್ ಅಂ'' ಎಂಬ ಈ ದೃಷ್ಟಾಂತವೂ ಮೇಲಿನ ಕನ್ನಡಿಯ ದೃಷ್ಟಾಂತವೂ ಸೂರ್ಯನ ಕಾವ್ಯ-ಕವಿತ್ವ ಶಕ್ತಿಯನ್ನು ಸ್ವಲ್ಪಮಟ್ಟಿಗೆ ತೋರಿಸುತ್ತವೆ. ಇಷ್ಟು ಬೆಳಸಿದ್ದರ ಉದ್ದೇಶ, ನಮ್ಮ ಪ್ರಾಚೀನ ಶಾಸ್ತ್ರಗ್ರಂಥಗಳನ್ನು ವಿಮರ್ಶೆಮಾಡುವಾಗ ಯಾವ ದೃಷ್ಟಿ ಇರಬೇಕು ಎನ್ನುವುದನ್ನು ಸೂಚಿಸುವುದು ; ಹಾಗೂ, ಕಾವ್ಯಗುಣವೂ ಉಳ್ಳ ಕವಿರಾಜಮಾರ್ಗದಂಥ ಶ್ರೇಷ್ಠ ಶಾಸ್ತ್ರಗ್ರಂಥಕ್ಕೆ ಎಷ್ಟು ಹೆಚ್ಚಿನ ಬೆಲೆ ಕೊಡಬೇಕಾಗುತ್ತದೆ ಎಂಬುದನ್ನು ಅರಿಯುವುದು.

ಎರಡು ಉದಾಹರಣ ಪದ್ಯಗಳೊಂದಿಗೆ ಈ ಗ್ರಂಥಾವಲೋಕನವನ್ನು ಮುಗಿಸಬಹುದು :

ಕಂದೆಂದು ಕರೆ ಎಂದುಂ । ಸಂದೆಗಮಿಲ್ಲ. ಅವು ಕಳಂಕ ; ಜೊನ್ನಂಜ್ಯೋತ್ಸ್ನಂ ;
ಸಂದುದು-ತಾರಗೆ ಅರಿಲ್; ಎನಲ್। ಇಂದು, ಉಡುಸಂತತಿಗೆ ನಾಮವಿವು ಬುಧರಿಂ.

[ಕಂಧು = ಕರೆ = ಕಳಂಕ ; ಜೊನ್ನ = ಜ್ಯೋತ್ಸ್ನಂ (= ಬೆಳುದಿಂಗಳು) ;
ತಾರೆಗೆ = ಅರಿಲ್ = ಉಡು (ಸಂತತಿ) (= ನಕ್ಷತ್ರ.]

ನಿನತು, ತನತು, ಮುಂತಾದ ಸರ್ವನಾಮಗಳಿಗೆ ಸಂಬಂಧಪಟ್ಟ ಪದ್ಯ ಗಮನಾರ್ಹವಾಗಿದೆ :

ನಿನತೆಂದು ನಿನ್ನದಕ್ಕುಂ। ತನತೆಂದುಂ ತನ್ನದಕ್ಕು ಸತ್ಕವಿ ವರರಿಂ ;
ಉನತೆಂದು ಮುನ್ನದಕ್ಕುಮ। ದನಿಶಂ ಬಹುವಚನಕಕ್ಕು ನತ್ವಂ ಮತ್ವಂ.
(ಪ. 219)

ಸೂರ್ಯ ಅನುಸರಿಸಿರುವ 'ಶಬ್ದಸಾರ'ದಲ್ಲಿ (ಪು. 26) ಈ ಉದಾಹರಣೆ ಹೀಗೆ ನಿರೂಪಿತವಾಗಿದೆ :

542. ನಿನತೆಂದುಂ, ನಿನತ್ತೆಂದುಂ, ನಿನ್ನದು.
543. ತನತೆಂದುಂ, ತನತ್ತೆಂದುಂ, ತನ್ನದು.
544. ಎನತೆಂದುಂ, ಎನತ್ತೆಂದುಂ, ಎನ್ನದು.
545. ಉನತೆಂದುಂ, ಉನತ್ತೆಂದುಂ, ಉನ್ನದು.

ಈ ಎರಡು ನಿಘಂಟುಗಳಿಗೂ ಮೂಲ ಶಬ್ದಮಣಿದರ್ಪಣ. ಅಲ್ಲಿನ ಸೂತ್ರ (ಡಿ.ಎಲ್.ಎನ್. ಮುದ್ರಣ, ಸಂಖ್ಯೆ 158) ಹೀಗಿದೆ :

ನಿನತೆನತು ತನತೆನಿಪ್ಪುವು। ಜನಿಯಿಸುಗುಂ ನಿನ್ನದೆನ್ನದುಂ ತನ್ನದೆನಿ-
ಪ್ಪಿನಿತರೊಳಂ ಮೇಣ್ ದ್ವಿತ್ವದಿ। ನನೇಕದೊಳ್ ನತ್ವದೆಡೆಗೆ ಮತ್ವಂ ಬರೆಯುಂ.

ಕಾವ್ಯರಚನೆಯಲ್ಲಿಯೇ ಪೂರ್ವಕವಿಯೊಬ್ಬನಿಂದ ತರುವಾಯದ ಕವಿ ವಸ್ತುವನ್ನೊ ಭಾವವನ್ನೊ ಉಕ್ತಿಯನ್ನೊ ಸ್ವೀಕರಿಸುವುದು ಅಪರಾಧ ವಲ್ಲವೆಂದು ನಾವು ತಿಳಿದಿರುವಾಗ, ಶಾಸ್ತ್ರ ವಿಚಾರದಲ್ಲಿ ಸಿದ್ಧಾಂತವಾದ ವಿಚಾರಗಳನ್ನು ಸ್ವೀಕರಿಸುವುದು ಅಪರಾಧವಲ್ಲವೇ ಅಲ್ಲ; ಮಾತ್ರವಲ್ಲ, ಹಾಗೆ ಸ್ವೀಕರಿಸುವುದು ಅನಿವಾರ್ಯ ಕೂಡ.

(9) **ಕರ್ಣಾಟಕ ಸಂಜೀವನ:** ರಳ ಕುಳ ಕ್ಷಳ ಎಂಬ ಮೂರು ಅಕ್ಷರಗಳ ಪ್ರಯೋಗ ವಿಚಾರದಲ್ಲಿ ಬೆಳೆದು ಬಂದ ಅವ್ಯವಸ್ಥೆಯನ್ನು ತಡೆಗಟ್ಟಲು ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ನಿಯಮಗಳನ್ನು ರಚಿಸಿ ಪ್ರಯತ್ನಪಟ್ಟ ಅಂಶವನ್ನು ಈ ಹಿಂದೆ ಗಮನಿಸಿದೆ. ಕ್ರಿ.ಶ. ಸು. 1600ರಲ್ಲಿ ಶೃಂಗಾರ ಕವಿ ಈ ವಿಚಾರದಲ್ಲಿ ಮತ್ತೆ ಕಟ್ಟುಪಾಡನ್ನು ರೂಢಿಗೆ ತರುವ ಉದ್ದೇಶದಿಂದ 'ಕರ್ಣಾಟಕ ಸಂಜೀವನ'ವೆಂಬ ನಿಘಂಟನ್ನು ರಚಿಸಿದನು. ಱಳ ಕುಳ ಕ್ಷಳಗಳ ವಿಷಯದಲ್ಲಿ ಪ್ರಾಸ ನಿಯಮವನ್ನು ಅನುಸರಿಸಬೇಕು, ಅವುಗಳನ್ನು ಬೆರಸಕೂಡದು, "ಇದು ಪಂಪರಾಜಾದಿ ಕರ್ಣಾಟಕ ಕವಿರಾಯರ

ಮತ" ಎಂಬುದು ಅವನ ನಿಲವು. ಬಳಕೆ ತಪ್ಪಿಹೋಗಿ ಸತ್ತುಹೋದಂತೆ ಕಾಣುತ್ತಿದ್ದ ಒಂದು ಭಾಷಾ ನಿಯಮವನ್ನು ಮತ್ತೆ ಬಳಕೆಗೆ ತಂದು ಅದನ್ನು ಬದುಕಿಸುವ ಪ್ರಯತ್ನವೇ ಗ್ರಂಥರಚನೆಯ ಉದ್ದೇಶವಾದದ್ದರಿಂದ, ಕವಿ ತನ್ನ ಗ್ರಂಥಕ್ಕೆ 'ಕರ್ಣಾಟಕ ಸಂಜೀವನ' ಎಂಬ ಹೆಸರನ್ನು ಕೊಟ್ಟಂತೆ ಕಾಣುತ್ತದೆ. "ಇದು ಲಕ್ಷಣಕೆ ಜೀವನಂ, ತದ್ಗುಣದೆ ನಾಮ ಕರ್ಣಾಟಕ ಸಂಜೀವನಂ" ಎಂಬ ಕವಿಯ ಹೇಳಿಕೆಯೂ ಈ ಅಭಿಪ್ರಾಯವನ್ನು ಸೂಚಿಸುತ್ತದೆ.

ಶೃಂಗಾರಕವಿ ಜೈನ; ರಸಿಪಾಳಿಗೆ ಪ್ರಭುವಾದ ಬೊಮ್ಮರಸ ನಾಯಕನ ಮಗ "ಕಳೆಯೂಣ್ಮ ಶೃಂಗಾರ ಕವಿಗೆ ಪೆರರುಕ್ತಿಯಂ ಕಳಲ್ ಒಲ್ಲದೆ ಉಸಿರ್ವ ಜಲಂ" ಇದ್ದಿತು. "ಇವನ ಹೆಸರನ್ನು ನೋಡಿದರೆ ಈತನು ಈ ನಿಘಂಟು ವಲ್ಲದೆ ಕಾವ್ಯಗಳನ್ನೂ ಬರೆದಿರಬೇಕೆಂದು ತೋರುತ್ತದೆ. ರತ್ನಾಕರಾಧೀಶ್ವರ ಶತಕವನ್ನು ಬರೆದಿರುವ ಹಂಸರಾಜನಿಗೆ ಶೃಂಗಾರಕವಿ ಎಂಬ ಬಿರುದುಂಟು. ಅವನೂ ಜೈನ ಕವಿ. ಅವನೇ ಈ ಗ್ರಂಥವನ್ನೂ ಬರೆದಿರಬಹುದೋ ಎಂಬ ಸಂದೇಹವು ಹುಟ್ಟಬಹುದು" ಎಂದು ಕವಿಚರಿತೆಕಾರರು ಅಭಿಪ್ರಾಯ ಪಟ್ಟಿದ್ದಾರೆ. (ಕವಿಚರಿತೆ, II, ಪು. 289).

ವಾರ್ಧಿಕ ಷಟ್ಪದಿಯಲ್ಲಿ ಬರೆದಿರುವ ಈ ಕನ್ನಡ ನಿಘಂಟಿನಲ್ಲಿ ಕೇವಲ 35 ಪದ್ಯಗಳಿವೆ. 'ೞ' ಕಾರವಿರುವ ಶಬ್ದಗಳಲ್ಲಿ ಒಂದು ಅರ್ಥದಿಂದ ಐದು ಅರ್ಥಗಳುಳ್ಳ ಶಬ್ದಗಳನ್ನು ಪ್ರತ್ಯೇಕ ಗುಂಪುಗಳಾಗಿ ಮಾಡಿ ಅವಕ್ಕೆ ಅರ್ಥ ಹೇಳಿದ್ದಾನೆ. ಇಲ್ಲಿ ಈ ಕವಿ ಕೇಶಿರಾಜನನ್ನು ಅನುಸರಿಸಿದ್ದಾನೆ. 'ಕುಳ' (ಕನ್ನಡದ ಸಹಜ 'ಳ'ಕಾರ) ಪ್ರಯೋಗವಿರುವ ಶಬ್ದಗಳನ್ನೂ, 'ಕ್ಷಳ'ನ್ನುಳ್ಳ ಶಬ್ದಗಳನ್ನು ಬೇರೆಯಾಗಿ ವಿಂಗಡಿಸಿ ಅರ್ಥ ಹೇಳಿದ್ದಾನೆ.

ಕ್ಷಳಾಕ್ಷರ ಪ್ರಯೋಗ ವಿಷಯಕ ಪದ್ಯವನ್ನು ಇಲ್ಲಿ ಉದಾಹರಿಸ ಬಹುದು :

'ಕ್ಷಳನೆಂಬುದೊಂದುಂಟು, ಸಂಸ್ಕೃತದ 'ಲಾಕ್ಷರ'
ಸ್ಥಳಮಂ 'ಳಾಕಾರ'ಮಾಗುಚ್ಚರಿಪ್ಪುದದು ; ಜಲಕೆ
ಜಳ, ಬಲಕೆ ಬಳ, ಕುಲಕೆ ಕುಳ, ಕಮಲ ಶಬ್ದಕ್ಕೆ ಕಮಳಮಂತು ಸಂಸ್ಕೃತಂ ;
'ಕ್ಷಳ'ನೊಳಂ 'ೞ'ನುಂಟು : ಕಪಳೆ ಶಬ್ದಕೆ ಕಾೞ್,
ಪುಳಿನಕ್ಕೆ ಪುೞಿಲ್, ಉಜ್ಜ್ವಳಕ್ಕೆ ತಾನುಜ್ಜೞಂ,
ಕಳಮಕ್ಕೆ ಕೞಿವೆ, ಕಂಬಳಕೆ ಕಂಬೞಿಯೆಂಬ ತೆೞಿದಿನಹುದದು ಕನ್ನಡಂ.

II. ಸಂಸ್ಕೃತ-ಕನ್ನಡ

ಪ್ರಾಚೀನ ಕನ್ನಡಕಾವ್ಯಗಳಲ್ಲಿ ಸಂಸ್ಕೃತ ಶಬ್ದಗಳ ಬಳಕೆ ಬಹಳ ಹೆಚ್ಚಾಗಿರುವುದರಿಂದ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಹೇಳುವ ಅಗತ್ಯವನ್ನು ನಮ್ಮ ನಾಡಿನ ಉಭಯಭಾಷಾ ಪಂಡಿತರು ಕಂಡುಕೊಂಡು, ಅಂತಹ ನಿಘಂಟುಗಳನ್ನು ರಚಿಸಿದರು. ಕನ್ನಡ–ಕನ್ನಡ ನಿಘಂಟುಗಳಷ್ಟೇ ಮುಖ್ಯವಾದುವು ಇವು. ಸುಮಾರು 8–10 ನಿಘಂಟುಗಳಲ್ಲಿ ಕೆಲವು ಪ್ರಮುಖ ನಿಘಂಟುಗಳನ್ನು ಮಾತ್ರ ಇಲ್ಲಿ ಪರಿಚಯ ಮಾಡಿಕೊಡುವುದು ಸಾಧ್ಯ.

(1) **ವಸ್ತುಕೋಶ :** ವ್ಯಾಕರಣ, ಛಂದಸ್ಸು, ಅಲಂಕಾರ, ನಿಘಂಟು- ಈ ನಾಲ್ಕು ಕೈಗಳುಳ್ಳ ಕಾವ್ಯಸರಸ್ವತಿಯನ್ನು ಆರಾಧಿಸಿರುವವರು ಕನ್ನಡದಲ್ಲಿ ವಿರಳ. ಈ ಬಗಯ ವಾಗ್ದೇವೀ ಸೇವೆಯ ಪುಣ್ಯ ಎರಡನೆಯ ನಾಗವರ್ಮನದು. ಅವನ ವಿಚಾರವಾಗಿಯೂ, ಅವನು ರಚಿಸಿರುವ 'ಶಬ್ದಸ್ಮೃತಿ' ಮತ್ತು 'ಕರ್ಣಾಟಕ ಭಾಷಾಭೂಷಣ' (ವ್ಯಾಕರಣಗಳು), 'ಕಾವ್ಯಾವಲೋಕನ' (ಅಲಂಕಾರ), 'ಛಂದೋವಿಚಿತಿ' (?)—ಇವುಗಳ ವಿಚಾರವಾಗಿ ಈ ಹಿಂದೆ ಹೇಳಿದೆ. ಇಲ್ಲಿ, ಕನ್ನಡದಲ್ಲಿ ದೊರೆತಿರುವ ಹಳೆಯ ದೊಡ್ಡ ನಿಘಂಟುಗಳಲ್ಲಿ ಮೊದಲನೆಯದು ಎನ್ನಬಹುದಾದ 'ಅಭಿಧಾನ ವಸ್ತುಕೋಶ'ವನ್ನು ಸಂಕ್ಷೇಪದಲ್ಲಿ ಪರಿಚಯ ಮಾಡಿಕೊಡಲಾಗುವುದು.

ಕೃತಿಯ ಮೊದಲಲ್ಲಿ ವರ್ಧಮಾನ ಜಿನೇಂದ್ರನನ್ನು ಸ್ತುತಿಸಿದ ಮೇಲೆ, ಗ್ರಂಥರಚನೆ ಮತ್ತು ಗ್ರಂಥಸ್ವರೂಪಗಳ ವಿಷಯವಾಗಿ ನಾಗವರ್ಮನು ಹೀಗೆ ಹೇಳಿದ್ದಾನೆ :

> ವರರುಚಿ ಹಲಾಯುಧಂ ಭಾಗುರಿ ಶಾಶ್ವತಂ ಅಮರಕೋಶಂ ಎಂಬಿವು ಮೊದಲಾ
> ಗಿರೆ ಪೂರ್ವಶಾಸ್ತ್ರಮುಂ ಸಂಹರಿಸಿ ಮನಂಗೊಳೆ ನಿಘಂಟುವಂ ವಿರಚಿಸುವೆಂ. (ಪ. 2)

ಮೇಲೆ ಹೆಸರಿಸಿರುವ 'ಪೂರ್ವಕಾಲದ ನಿಘಂಟುಗಳ ಸಾರಸಂಗ್ರಹವನ್ನು ಒಟ್ಟುಗೂಡಿಸಿ ಮನಸ್ಸಿಗೆ ಹಿಡಿಯುವಂತೆ ಹೇಳುತ್ತೇನೆ'—ಇದು ನಾಗವರ್ಮನ ಪ್ರತಿಜ್ಞೆ. 'ನಿಘಂಟು' ಎಂಬ ಪದದ ಪ್ರಯೋಗವನ್ನು ಇಲ್ಲಿ ಮೊದಲಿಗೆ ಸಂಧಿಸುತ್ತೇವೆ. ನಾಗವರ್ಮನೇ ಹೇಳುವಂತೆ, (ನಾನಾರ್ಥಕಾಂಡ, ಪ. 100) "ಕೋಶಂ ಅಶೇಷ ಅರ್ಥನಿಚಯವಾಚಿಯುಂ ಅಕ್ಕುಂ" ಎಂದು ಕೋಶವೆಂದರೂ ನಿಘಂಟೇ. (ಕೋಶ ಎನ್ನುವುದಕ್ಕೆ ಬೇರೆ ಅರ್ಥಗಳೂ ಇರುವುದರಿಂದ, ನಿಘಂಟು ಪದಪ್ರಯೋಗ ಸೂಕ್ತ). "ಇದು ಕನ್ನಡದಲ್ಲಿ ಉಪಯೋಗಿ

ಸುವ ಸಂಸ್ಕೃತಪದಗಳಿಗೆ ಅರ್ಥವನ್ನು ಹೇಳುವ ಪದ್ಯರೂಪವಾದ ಸಂಸ್ಕೃತ ಕರ್ಣಾಟಕ ನಿಘಂಟು" ಎಂದು ಒಬ್ಬ ವಿದ್ವಾಂಸರು ಅಭಿಪ್ರಾಯ ಪಟ್ಟರೆ,[14] ಇನ್ನೊಬ್ಬರು "ಪ್ರಕೃತ ಗ್ರಂಥವು ಕರ್ಣಾಟಕ ಭಾಷೆಯಲ್ಲಿ ಛಂದೋರೂಪ ನಾಗಿ ಕನ್ನಡ ಕಬ್ಬಗಳಲ್ಲಿ ಪ್ರಯೋಗಿಸಬಹುದಾದ ಸಮಸಂಸ್ಕೃತ ಶಬ್ದಗಳ ಸ್ವರೂಪವನ್ನು ತಿಳಿಸುವ ಕೋಶವಾಗಿದೆ. ಇದರಲ್ಲಿ ಸಮಸಂಸ್ಕೃತ* ಶಬ್ದಗಳು ಮಾತ್ರವಲ್ಲದೆ ಅಲ್ಲಲ್ಲೇ ಹಲವು ದೇಶ್ಯ ಶಬ್ದಗಳೂ ದೊರೆಕುವುವು" ಎಂದು ಅಭಿಪ್ರಾಯಪಟ್ಟಿದ್ದಾರೆ.[15] ನಾಗವರ್ಮನು "ಅಭಿಯೋಗಪರರ್ ಪರ್ಯಾಯ ಶಬ್ದದೊಳ್ ತಾತ್ಪರ್ಯದಿಂ ಅನ್ವರ್ಥತೆಯಿ ಂಅನಭಿಹಿತದೊಳ್ ಆಹಾರ್ಯಂ ಇದೆಂದು ಅರ್ಥಗತಿಯಂ ಅರಿದು ಪರ್ಯಾಳೋಚಿಸಿಕೊಳ್ಗೆ" ಎಂದು ಶಬ್ದಾರ್ಥ ಗಳನ್ನು ಹೇಗೆ ಗ್ರಹಿಸಬೇಕೆಂಬುದನ್ನು ತಿಳಿಸಿದ್ದಾನೆ.† ಆದ್ದರಿಂದ, "ಕರಮೆ ಜಡಮತಿಯುಂ ಅರಿವಂತಿರೆ ಕನ್ನಡದಿಂ ಜಲಕ್ಕನಾಗಿರ್ಪನೆಗಂ ಕವಿಕಂಠಾ ಭರಣಂ ಇದಂ ನಾಗವರ್ಮಂ ವಿರಚಿಸಿದಂ ಎನೆ ಮೆಚ್ಚದರ್ ಆರ್" ಎಂಬುದು ಅವನ ನಂಬಿಕೆ. ಅವನ ದೃಷ್ಟಿಯಲ್ಲಿ ಕೃತಿ ಪೂರ್ವಕೋಶಗಳ ಸಂಗ್ರಹವೂ, (ಶ್ರಮ ತೆಗೆದುಕೊಳ್ಳುವವರಿಗೆ) ಸುಲಭವೂ ಆದ್ದರಿಂದ,—

ಪುದಿದ ಮನಸ್ತಮಮಂ ಬಿಡೆ
ಬೆದರಿ ಸದರ್ಥಪ್ರಕಾಶಮಂ ಮಾಡುಗುಂ ಅ-
ಪ್ಪುದರಿಂ ಸಮಸ್ತವಿದ್ಯಾ
ಪ್ರದೀಪಂ ಅಭಿಧಾನಕೋಶಂ ಅಲ್ಲದೆ ಪೆರತೇಂ ?

[ಮನಸ್ಸನ್ನು ತುಂಬಿಕೊಂಡಿರುವ ಅಜ್ಞಾನವೆಂಬ ಕತ್ತಲೆ ಹೆದರಿ ಬಿಟ್ಟುಹೋಗುವಂತೆ ಒಳ್ಳೆಯ ಅರ್ಥವೆಂಬ ಜ್ಞಾನದ ಬೆಳಕನ್ನು ಉಂಟುಮಾಡುವುದರಿಂದ ಈ ಅಭಿಧಾನ ವಸ್ತು

---

* ಯಾವ ಯಾವ ಸಂಸ್ಕೃತ ಪದಗಳಿಗೆ ಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸ ಲಾಗುವಂತೆ ಸಾಮಪ್ರಕೃತಿಗಳನ್ನಾಗಿ ಮಾಡಿಕೊಳ್ಳಬಹುದೋ ಅಂಥ ಸಂಸ್ಕೃತ ಪದಗಳು 'ಸಮಸಂಸ್ಕೃತ' ಎಂದು ಕವಿರಾಜಮಾರ್ಗಕಾರ ಮತ್ತು ಕೇಶಿರಾಜರ ಅಭಿಪ್ರಾಯ. ಕೇಶಿ ರಾಜನ ಅಭಿಪ್ರಾಯದಲ್ಲಿ 'ತತ್ಸಮ'ಗಳು ಬೇರೆ.

† ಈ ವಾಕ್ಯದ ಭಾವಾರ್ಥ : 'ಸಮಾನಾರ್ಥವುಳ್ಳ ಪರ್ಯಾಯ ಶಬ್ದಗಳ ಅರ್ಥವನ್ನು ಆ ಶಬ್ದಗಳ ತಾತ್ಪರ್ಯದಿಂದಲೂ ಅವುಗಳನ್ನು ಪರಸ್ಪರ ಅನ್ವಯಿಸಿಕೊಂಡು ಅರ್ಥಮಾಡಿ ಕೊಳ್ಳುವ ಮೂಲಕವೂ ಬಿಡಿಸಿಹೇಳದಿರುವ ಶಬ್ದಾರ್ಥಸ್ವರೂಪವನ್ನು ಅಧ್ಯಾಹಾರವಾಗಿದೆ (understood) ಎಂದು ತಿಳಿದು ವಿದ್ವತ್ತಿಗಾಗಿ ಪರಿಶ್ರಮ ಪಡುವುದರಲ್ಲಿ ಶ್ರದ್ಧೆ ಯುಳ್ಳವರು ಪರ್ಯಾಲೋಚಿಸಿಕೊಳ್ಳಲಿ.'

ಕೋಶವು 'ಸಮಸ್ತ ವಿದ್ಯಾಪ್ರದೀಪ'–ಎಲ್ಲ ವಿದ್ಯೆಗಳನ್ನೂ ಬೆಳಗುವ ದೀಪ-ಅಲ್ಲದೆ ಬೇರೆ ಇನ್ನೇನು ತಾನೆ ಆಗುವುದು ?]

ಎಂದು, ಗ್ರಂಥದ ಪ್ರಯೋಜನವನ್ನು ನಿರೂಪಿಸಿದ್ದಾನೆ.

ವಸ್ತುಕೋಶವು ಕಂದ ವೃತ್ತಗಳಲ್ಲಿ ರಚಿತವಾಗಿದ್ದು, ಒಟ್ಟು 800 ಪದ್ಯಗಳನ್ನು ಒಳಗೊಂಡಿದೆ ಎಂದು ಒಂದು ಹಸ್ತಪ್ರತಿಯಿಂದ ತಿಳಿದುಬರುತ್ತದೆ. (ಆದರೆ, ದೊರೆತಿರುವ ಹಸ್ತಪ್ರತಿಗಳಲ್ಲಿ 753 ಪದ್ಯಗಳು ಮಾತ್ರ ಇದ್ದು, ಉಳಿದ ಪದ್ಯಗಳು ನಷ್ಟವಾಗಿವೆ ಎಂದು ಊಹಿಸಬೇಕಾಗುತ್ತದೆ.) ಕಂದಗಳ ಸಂಖ್ಯೆಯೇ ಹೆಚ್ಚು. ಅಚ್ಚಗನ್ನಡ ಛಂದಸ್ಸಾದ ಅಕ್ಕರ ತ್ರಿಪದಿಗಳೂ ಕೆಲವು ಇವೆ.

ನಾಗವರ್ಮನು ತಾನು ಋಣಿಯಾಗಿರುವ ಅನೇಕ ಸಂಸ್ಕೃತ ಕೋಶಕಾರರನ್ನು ಹೆಸರಿಸಿದ್ದರೂ ವಿಶೇಷವಾಗಿ ಹಲಾಯುಧ ಕೋಶವನ್ನೇ ಅನುಸರಿಸಿರುವುದು ಕಂಡುಬರುತ್ತದೆ. ಕೆಲವು ಅಂಶಗಳಲ್ಲಿ ಅಮರಸಿಂಹನ ನಾಮಲಿಂಗಾನುಶಾಸನವನ್ನೂ ಧನಂಜಯ ನಿಘಂಟನ್ನೂ ಅನುಸರಿಸಿರುವನು.

''ಹಲಾಯುಧಕೋಶದಲ್ಲಿ (ಅಭಿಧಾನರತ್ನಮಾಲೆ) ಸ್ವರ್ಗಕಾಂಡ, ಭೂಮಿಕಾಂಡ, ಪಾತಾಳಕಾಂಡ, ಸಾಮಾನ್ಯಕಾಂಡ, ನಾನಾರ್ಥ ಕಾಂಡಗಳೆಂಬ ಐದು ಕಾಂಡಗಳುಂಟು. ಈ ಕೋಶಾನುಸಾರವಾಗಿಯೆ ಪ್ರಕೃತಕೋಶಕಾರನು (ನಾಗವರ್ಮನು) ಈ ಸ್ವರ್ಗ, ಭೂಮಿ, ಪಾತಾಳಕಾಂಡಗಳಲ್ಲಿಯ ಶಬ್ದಗಳನ್ನು ಒಟ್ಟುಗೂಡಿಸಿ ಒಂದು ಕಾಂಡದಲ್ಲಿ ಅಡಕಮಾಡಿ 'ಅವಿಭಿನ್ನಾರ್ಥಕಾಂಡ'ವೆಂದು ಅದಕ್ಕೆ ಹೆಸರನ್ನು ಕೊಟ್ಟಿರುವನು. ಉಳಿದ ಸಾಮಾನ್ಯ, ನಾನಾರ್ಥಕಾಂಡಗಳ ಹೆಸರನ್ನೂ ಶಬ್ದಸಮುದಾಯವನ್ನೂ ಮಾರ್ಪಡಿಸದೆ ಆದರಂತೆಯೇ ಹೇಳಿರುವನು. ಅಲ್ಲದೆ ಅಮರಸಿಂಹನು ತನ್ನ ಕೋಶದ ಮೊದಲೆರಡು ಕಾಂಡಗಳಲ್ಲಿ ಹೇಳಿರುವ ವಿಷಯವನ್ನು ಈತನು ತನ್ನ ಕೋಶದ ಮೊದಲನೆಯ ಕಾಂಡದಲ್ಲಿಯೂ, ಅಮರದ ಮೂರನೆಯ ಕಾಂಡದ ವಿಶೇಷ್ಯ ನಿಘ್ನ ಸಂಕೀರ್ಣವರ್ಗಗಳಲ್ಲಿ ಹೇಳಿರುವ ವಿಷಯವನ್ನು ಈತನು ತನ್ನ ಕೋಶದ ಎರಡನೆಯ ಕಾಂಡದಲ್ಲಿಯೂ, ನಾನಾರ್ಥ ಅವ್ಯಯವರ್ಗಗಳಲ್ಲಿಯ ವಿಷಯವನ್ನು ಮೂರನೆಯ ಕಾಂಡದಲ್ಲಿಯೂ ಸಂಗ್ರಹಿಸಿರುವನೆಂದು ವ್ಯಕ್ತವಾಗುವುದು. ಕಾಂಡಸಂಖ್ಯೆಯಲ್ಲಿಯೂ, ಕಾಂಡಗಳನ್ನು ವರ್ಗೀಕರಿಸುವುದರಲ್ಲಿಯೂ ಈತನು ಅಮರಸಿಂಹನನ್ನು ಹಿಂಬಾಲಿಸಿದ್ದರೂ, ಶಬ್ದಗಳನ್ನು ವರ್ಗೀಕರಿಸುವುದರಲ್ಲಿ ಮಾತ್ರ ಭಿನ್ನಮಾರ್ಗವನ್ನವಲಂಬಿಸಿರುವನು. ಈತನ ವರ್ಗವಿಭಾಗ ಕ್ರಮವು ಈ ರೀತಿಯಾಗಿರುವುದು ; ಒಂದನೆಯ ಅವಿಭಿನ್ನಾರ್ಥಕಾಂಡದಲ್ಲಿ, (1) ಸ್ವರ್ಗವರ್ಗ, (2) ಕಾಲವರ್ಗ, (3) ಸಂಸರಣವರ್ಗ, (4) ಸಲಿಲವರ್ಗ, (5) ಭೂವರ್ಗ, (6) ಕಾಲಾಯಸಾದಿ ಧಾತುವರ್ಗ,

(೭) ವನವರ್ಗ, (೮) ವೃಕ್ಷಾದಿವರ್ಗ, (೯) ಮೃಗಪಕ್ಷಿವರ್ಗ, (೧೦) ಪುರಗೃಹೋಪಕರಣ ವರ್ಗ, (೧೧) ಮನುಷ್ಯವರ್ಗ, (೧೨) ದೇಹಾವಯವಾದಿವರ್ಗ, (೧೩) ಭೂಷಣಾದಿ ವರ್ಗ, (೧೪) ಸಮರಾದಿ ಸಂಪ್ರಕೀರ್ಣವರ್ಗ, (೧೫) ಪಶುವರ್ಗ, (೧೬) ಧಾನ್ಯವರ್ಗ, ಎಂಬ ಹದಿನಾರು ವರ್ಗಗಳಿರುವುವು.

ಎರಡನೆಯ ಸಾಮಾನ್ಯ ಕಾಂಡದಲ್ಲಿ, (೧) ವಿಶೇಷಣ ವರ್ಗ, (೨) ವಿಶೇಷ್ಯವರ್ಗ ಎಂಬ ಎರಡು ವರ್ಗಗಳಿರುವುವು.

ಮೂರನೆಯ ನಾನಾರ್ಥಕಾಂಡದಲ್ಲಿ ವರ್ಗವಿಭಾಗಾದಿ ಕ್ರಮಗಳಿಲ್ಲ."[16]

ಮೇಲೆ ವಿವರಿಸಿರುವಂತೆ, ನಾಗವರ್ಮನು ಹಲವು ಪೂರ್ವ ನಿಘಂಟುಗಳ ಉತ್ತಮಾಂಶಗಳನ್ನು ಸಂಗ್ರಹಿಸಿ ಒಂದು ಉತ್ತಮವಾದ ಸಂಸ್ಕೃತ–ಕನ್ನಡ ಕೋಶವನ್ನು ರಚಿಸಿದ್ದಾನೆ.

ಕೆಲವು ಉದಾಹರಣೆಗಳ ಮೂಲಕ ನಾಗವರ್ಮನ ಶಬ್ದಾರ್ಥ ನಿರೂಪಣ ಕ್ರಮವನ್ನು ಕೆಳಗೆ ಪರಿಚಯ ಮಾಡಿಕೊಟ್ಟಿದೆ :

'ಅಕ್ಷೋಹಿಣಿ' ಎಂಬ ಸೇನಾವಿವರವನ್ನು ಒದಗಿಸುವ ಈ ಪದ್ಯ ಕನ್ನಡ ಛಂದಸ್ಸಾದ ಅಕ್ಕರ ವೃತ್ತದಲ್ಲಿದೆ :

ಒಂದು ಸಾಮಜ ವೊಂದು ತೇರ್ ಮೂರಶ್ವಮಯ್ದು ಕಾಲಾಳ್ಗಳ್ ಪತ್ತಿಯಕ್ಕುಂ ।
ಸಂದ ಪತ್ತಿ ಮೂರಾಗೆ ಸೇನಾಮುಖಂ, ಆ ಮೂರು ಗುಲ್ಮಂ. ಮೂರು ಗುಲ್ಮ ।
ಕ್ಕೊಂದು ಗಣಂ. ಅವು ಮೂರು ವಾಹಿನಿ, ತತ್‌ತ್ರಯಂ ಪೃತನಾಖ್ಯೆ,
ಪೃತನೆಗಳ್ ಮೂ ।
ರೊಂದಿ ತೋರೆ ಚಮು ಮೂರುಮನೀಕಿನಿ ಪತ್ತನೀಕಿನಿ ಯಕ್ಷೌಹಿಣಿಯೆನಿಕ್ಕುಂ ॥

[1 ಆನೆ + 1 ತೇರು + 3 ಕುದುರೆ + 5 ಕಾಲಾಳು = ಪತ್ತಿ ; 3 ಪತ್ತಿ = ಸೇನಾಮುಖ ; 3 ಸೇನಾಮುಖ = ಗುಲ್ಮ ; 3 ಗುಲ್ಮ = ಗಣ ; 3 ಗಣ = ವಾಹಿನಿ ; 3 ವಾಹಿನಿ = ಪೃತನಾ ; 3 ಪೃತನಾ = ಚಮು ; 3 ಚಮು = ಅನೀಕಿನಿ ;10 ಅನೀಕಿನಿ = ಅಕ್ಷೋಹಿಣಿ]

ಶೌಂಡಿಕನೆನೆ ಕಳ್ಳವಳಂ ।
ಬಂಡಂ ನಗ್ನಾಂಗಿಯಾ ಬೆದಂಡೆಯುವಂ ವೈ-
ದಂಡಿಕಂ ಅರಿ ಕುಹಕತೆಯಂ ।
ಕೊಂಡಾಡುವನಿಂದ್ರಜಾಲಿಕಂ ತಾನಕ್ಕುಂ ॥*

---

* ಈ ಪದ್ಯಗಳ ಪಾಠ ಶುದ್ಧವಾಗಿರಲಿಲ್ಲ, ಸರಿಯಾಗಿ ಅರ್ಥವಾಗುವಂತೆ ತಿದ್ದಿದೆ.

[ಶೌಂಡಿಕೆ = ಕಳ್ಳವಳ (ಹೆಂಡ ಮಾರುವವನು) ; ನಾಗ್ನಾಂಗಿ = ಬಂಡ (ನಾಚಿಕೆಯಿಲ್ಲದೆ ಬತ್ತಲೆ ತಿರುಗುವವನು) ; ಬೆದಂಡೆಯುವಂ = ವೈದಂಡಿಕ (ಬೆದಂಡೆ ಎಂಬ ಹಾಡುಗಬ್ಬವನ್ನು ಹಾಡುವವನು) ; ಇಂದ್ರಜಾಲಿಕ = ಕುಹಕತೆಯಂ ಕೊಂಡಾಡುವಂ (ಕಣ್ಕಟ್ಟು ಮಾಯೆ ಮೋಸ ವಿದ್ಯೆಗಳನ್ನು ತೋರಿಸುವವನು)].

ತ್ರಿಪದಿ ॥ ಧ್ರುವಂ ಸನಾತನಂ ನಿತ್ಯಮವಿನಶ್ವ-
ರಂ ವಪ್ರತೀಚ್ಯಂ ಶಾಶ್ವತ ಸ್ಥಾ-
ನವೆಮಗಕ್ಕೆ ನಿರಾಕುಳಂ*

ನಿಮಗೆ ಶಾಶ್ವತವಾದ ಮೋಕ್ಷಪದವಿ ಸಿಕ್ಕಲಿ ಎಂಬ ಶುಭ ಕೋರುವ ಈ ಪದ್ಯದಲ್ಲಿ ಆ ಅರ್ಥದ ಪರ್ಯಾಯ ಪದಗಳನ್ನು ನಾಗವರ್ಮ ಕೊಟ್ಟಿದ್ದಾನೆ.

(2) **ಅಭಿಧಾನ ರತ್ನಮಾಲಾ ಟೀಕೆ:** ಹಲಾಯುಧನ ಸಂಸ್ಕೃತ ಕೋಶಕ್ಕೆ 'ಅಭಿಧಾನ ರತ್ನಮಾಲೆ'ಎಂಬ ಹೆಸರಿದೆ. ಇದರಲ್ಲಿ 884 ಶ್ಲೋಕಗಳಿವೆ. ಈ ಕೋಶದ ಸಂಸ್ಕೃತ ಪದಗಳಿಗೆ ಸಮಾನಾರ್ಥಕಗಳಾದ ಕನ್ನಡ ಮಾತುಗಳನ್ನು ಕೊಟ್ಟು ಟೀಕೆಯನ್ನು ಬರೆದಿದೆ. ಈ ಟೀಕೆಯನ್ನು ನಾಗವರ್ಮನು ಬರೆದಿರಬಹುದು ಎಂಬ ಊಹೆಗೆ ಅವಕಾಶವಿದೆ. ಹಾಗೆಂದು ಖಂಡಿತವಾಗಿ ಹೇಳಲು ಬಲವಾದ ಆಧಾರವಿಲ್ಲ. ಕನ್ನಡ ಕಾವ್ಯಗಳಲ್ಲಿ ಕಂಡುಬರುವ ಸಂಸ್ಕೃತ ಶಬ್ದಗಳ ಅರ್ಥವನ್ನು ಗ್ರಹಿಸಲು ಈ ಟೀಕೆ ಉಪಯುಕ್ತವಾಗಿದೆ.

ಉದಾಹರಣೆಗಳು :—

1 ನೃತ್ಯ, ಗೀತ, ವಾದ್ಯ—ಈ ಮೂರು ಸಂಗೀತಮೆಂಬುದು. ಮೊದಲ ನಾಟ್ಯಮಂ ಪೂರ್ವರಂಗಮೆಂಬುದು. (ಸ್ವರ್ಗ ಕಾಂಡ—95)

2 ಘೋಷವತೀ, ವೀಣಾ—ಈ ಎರಡು ವೀಣೆ ; ವಿಪಂಚೀ, ಪರಿವಾದಿನೀ, ವಲ್ಲಕೀ–ಈ ಮೂರು ತಂತ್ರಿಯ ಭೇದ ಆದ ವೀಣೆಯ ಭೇದಂಗಳ್ (96).

(3) **ಮಂಗರಾಜ ನಿಘಂಟು :** ಕನ್ನಡದಲ್ಲಿ ಮಂಗರಾಜ ಅಥವಾ ಮಂಗರಸ ಎಂಬ ಹೆಸರಿನವರು ಮೂವರು ಎಂಬ ತಿಳಿವಳಿಕೆಯಿತ್ತು. 'ಖಗೇಂದ್ರ ಮಣಿದರ್ಪಣ'ದ ಮಂಗರಸ ಮೊದಲನೆಯವನು (ಇವನ ವಿಚಾರವನ್ನು ಮುಂದೆ ಪ್ರಸ್ತಾವಿಸಲಿದೆ) ; ಎರಡನೆಯವನೆ ನಿಘಂಟುಕಾರ ; ಮೂರನೆಯವನು 'ಸೂಪಶಾಸ್ತ್ರ'ವನ್ನು ಬರೆದಿರುವವನು (ಇವನ ವಿಚಾರವನ್ನೂ ಮುಂದೆ ತಿಳಿಸಲಿದೆ) ; (ಈಚೆಗೆ, 'ಫಣಿಕುಮಾರ ಚರಿತೆ'ಯ ಕರ್ತೃ ಬೊಮ್ಮಣ್ಣಕವಿಯ ಮಗ 'ಅಭಿನವ ಮಂಗರಸ'ನ ಸಂಗತಿ ತಿಳಿದು ಬಂದಿದೆ;

ಇವನು 'ಮನ್ಮಥ ಮಣಿದರ್ಪಣ' ಎಂಬ ಕೃತಿಯನ್ನು ರಚಿಸಿದ್ದಾನೆ. ಇವನು ನಾಲ್ಕನೆಯ ಮಂಗರಸ.)

ಇಲ್ಲಿ ಪ್ರಸಕ್ತನಾದ ಕವಿ ತನ್ನ ನಿಘಂಟುವಿನ ಸಮಾಪ್ತಿ ವಾಕ್ಯದಲ್ಲಿ "ಶಶಿಪುರಾಧಿಪತಿ ಸೋಮೇಶ್ವರ ಚರಣಾರವಿಂದ ಮಧುಸೇವಿತ ಮಧುಕರಾಯಮಾಣ...ಅಭಿನವ ಬಾಲ ಸರಸ್ವತಿ ಮಂಗರಾಜ ವಿರಚಿತಮಪ್ಪ ಅಭಿನವಾಭಿಧಾನದೊಳ್ ನಾನಾರ್ಥಕಾಂಡಂ ಸಮಾಪ್ತಂ ಮಂಗರಾಜ ನಿಘಂಟು ಸಮಾಪ್ತ ಮಾದುದು" ಎಂದು ಹೇಳಿಕೊಂಡಿರುವುದರಿಂದ,–ಕವಿಯ ಹೆಸರು ಮಂಗರಾಜ, ಕೃತಿಯ ಹೆಸರು 'ಅಭಿನವಾಭಿಧಾನ' ಹಾಗೂ 'ಮಂಗರಾಜ ನಿಘಂಟು', ಇವನ ಸ್ಥಳ 'ಶಶಿಪುರ', ಇವನು ಅಲ್ಲಿನ ಸೊಮೇಶ್ವರನ ಭಕ್ತ, ಇವನಿಗೆ 'ಬಾಲ ಸರಸ್ವತಿ' ಎಂಬ ಬಿರುದಿದ್ದಿತು –ಎಂದು ತಿಳಿಯಬಹುದು. ಅಲ್ಲದೆ, ಗ್ರಂಥವಲ್ಲಿನ ಕವಿಯ ಹೇಳಿಕೆಗಳಿಂದ ಈ ಸಂಗತಿಗಳು ನಿಶ್ಚಿತವಾಗಿ ತಿಳಿದು ಬರುತ್ತವೆ: ಇವನು ಕಮ್ಮೆಕುಲದ ಬ್ರಾಹ್ಮಣ; ತಂದೆಯ ಹೆಸರು ತಿಮ್ಮಾರ್ಯ ರಾಮರಸ; "ಅಧಿದೈವವೆನಿಪ ಸೋಮೇಶನ ವರಪ್ರಥೆಯಿಂ ಪೆರ್ಮೆಯಿಂ ಸಭೆ ಮೆಚ್ಚುವಂತೆ ನಾನಾ ಶಬ್ದ ಸಾಮ್ಯದಿಂದ ಅಭಿನವ ನಿಘಂಟನಭಿನವ ಮಂಗ ನಿರ್ಮಿಸಿದನು, ಅಂಬರ (ಆಕಾಶ = 0), ಅಂಬಕ (ಕಣ್ಣು = 2), ವಹ್ನಿ (ಅಗ್ನಿ = 3), ಏಕೈಕ (= 1), ಶಕದ ಬಹುಧಾನ್ಯದಲ್ಲಿ", ಎಂದರೆ ಕುಲದೈವ ವಾದ ಸೋಮೇಶ್ವರನ ಕೃಪೆಯಿಂದ ಶಾಲಿವಾಹನ ಶಕೆಯ ಬಹುಧಾನ್ಯ ಸಂವತ್ಸರದ 1320 (= ಕ್ರಿ. ಶ. 1398)ರಲ್ಲಿ ಅಭಿನವ ಮಂಗನು ಅಭಿನವ ನಿಘಂಟನ್ನು ರಚಿಸಿದನು.

"ವರರುಚಿಯ ಜಾಣ್ಮೆ, ಗೋಪಾಲಕನ ಬೆಡಗು, ಭಾಗುರಿಯ ಗೂಢತೆ, ಧನಂಜಯನ ಪರ್ಯಾಯ, ಸುರಪರಿಯ ಸುವಿಭಕ್ತಿ, ವಿಶ್ವಪ್ರಕಾಶನ ಚದುರು, ನಾಗವರ್ಮನಕನ್ನಡಂ, ವರವೈಜಯಂತಿಯ ನಯಂ, ಹಲಾಯುಧನ ವಿಸ್ತರದ ವಚನೋಕ್ತಿಯಿಂಬಿಂತಿವೆಲ್ಲವನು ಸಂವರಿಸಿ, ಅಭಿನವಮಂಗನುಸಿರಿದಂ ಸ್ತ್ರೀ ಬಾಲರರಿವಂತುಟಭಿಧಾನಮಂ" ಎಂದು ಮಂಗರಾಜನು ತನಗಿಂತ ಹಿಂದಿನ ನಿಘಂಟುಕಾರರ ಗುಣಗಳೆಲ್ಲವೂ ತನ್ನ ಕೃತಿಯಲ್ಲಿ ಅಡಗಿವೆ ಎಂದು ಹೇಳಿ ಕೊಂಡಿದ್ದಾನೆ. ಆದರೆ, ಇವನು ಮುಖ್ಯವಾಗಿ ಹಲಾಯುಧನ ಅಭಿಧಾನ ರತ್ನಮಾಲೆಯನ್ನೂ ನಾಗವರ್ಮನು ಅದರಮೇಲೆ ಬರೆದಿರುವ ಟೀಕೆಯನ್ನೂ ಹಾಗೂ ಅವನ ವಸ್ತುಕೋಶವನ್ನೂ ಅವಲಂಬಿಸಿ ತನ್ನ ಕೃತಿಯನ್ನು ರಚಿಸಿ

ದ್ದಾನೆ. ವಾರ್ಧಿಕಷಟ್ಪದಿಯಲ್ಲಿ ರಚಿತವಾಗಿರುವ ಇದರಲ್ಲಿ 539 ಪದ್ಯಗಳಿವೆ; 5 ಕಾಂಡಗಳಿವೆ. ಅವುಗಳಲ್ಲಿ ವಿಷಯ ವಿಭಜನೆ ಹೀಗಿದೆ: (1) ಸ್ವರ್ಗಕಾಂಡ–ದೇವ, ಗ್ರಹ, ದಿಕ್, ಕಾಲ, ನಾಟ್ಯ, ಶಬ್ದಗಳೆಂಬ 6 ವರ್ಗಗಳು ; (2) ಭೂಕಾಂಡ–ಭೂ, ಶೈಲ, ವನೌಷಧಿ, ಮೃಗ, ಪಕ್ಷಿ, ಮೊದಲಾದ 17 ವರ್ಗಗಳು ; (3) ಪಾತಾಳ ಕಾಂಡ–ಮೃತ, ಭೋಗಿ, ಜಲ ಎಂಬ ಮೂರು ವರ್ಗಗಳು : (4) ಸಾಮಾನ್ಯ ಕಾಂಡ ; (5) ನಾನಾರ್ಥ ಕಾಂಡ : ವರ್ಗ ವಿಭಾಗಗಳಿಲ್ಲ.

ಪೂರ್ವದ ನಿಘಂಟುಗಳಲ್ಲಿ ಕಾಣಬಾರದ ಕೆಲವು ಸ್ವಾರಸ್ಯವಾದ ಸಂಗತಿಗಳು ಈ ನಿಘಂಟಿನಲ್ಲಿವೆ. ಉದಾಹರಣೆಗೆ–ದೇವವರ್ಗದಲ್ಲಿ "ಮಾಳಚಿಯ ಭರ್ತೃ, ಮಲ್ಲಾರಿ, ಪಲ್ಲಿಂಪ ದೇಶಾಧೀಶನೆಂದೆನಲು ಮೈಲಾರದೇವನಕ್ಕುಂ" (ಪ. 15), ಎಂಬ ಮಾತು ; ಬ್ರಹ್ಮವರ್ಗದಲ್ಲಿ ಬ್ರಾಹ್ಮಣರ ಕುಲಗಳನ್ನು ಹೇಳುವ ಸಂದರ್ಭದಲ್ಲಿ, "ಬ್ರಾಹ್ಮರೊಳು ಕಮ್ಮೆ ಮೊದಲಾದೆಂಟು ಕುಲವಕ್ಕು" ಎಂಬ ಸಂಗತಿ ; (ಪ. 7)ದೇಹಾಲಂಕಾರವರ್ಗದಲ್ಲಿ, 12 ಬೆರಲು = 1 ಗೇಣು, 2ಗೇಣು = 1 ಮೊಳ, 1ಮೊಳ + ನಾಲ್ಕುಬೆರಲು = ಗಜ, 2ಮೊಳ = ನಾಭಿಗೋಲು, ಈ ಅಳತೆಯ ವಿಷಯ (ಪ. 11) — ಇವು ಕನ್ನಡ ನಾಡಿಗೆ ವಿಶಿಷ್ಟವಾದ ವಿದ್ಯಮಾನವಾಗಿ ಕಾಣುತ್ತವೆ. ವೈಶ್ಯವರ್ಗದಲ್ಲಿರುವ ಕನ್ನಡ ನಾಡಿನ ಲೆಕ್ಕಾಚಾರದ ಬೇಳೆ, ಪಾಗ, ಪಣ, ಪಲ, ಬೀಸಿಗೆ, ತೊಲೆ, ಭಾರ, ಸೊಲ್ಲಗೆ, ಬಳ್ಳ, ಕೊಳಗ, ಖಂಡುಗ — ಈ ಶಬ್ದಗಳೂ ಗಮನಾರ್ಹ. (ಪ. 11) ಇದೇ ವರ್ಗದಲ್ಲಿ, ಕಾಗದ, ದೌತಿ, ಕಲಾಮು, ಎಂಬ ಅನ್ಯದೇಶ ಶಬ್ದಗಳೂ ಗಮನಿಸತಕ್ಕವು. ಈ ವರ್ಗದಲ್ಲಿ ಛಂದಸ್ಸಿಗೆ ಸಂಬಂಧಪಟ್ಟ ಗುರು ಲಘುಗಳ ವಿಚಾರ ತಂದಿರುವುದು ಸೋಜಿಗದ ವಿಷಯ. 'ಗುರು ಕೊಂಕುಗೆರೆಯಕ್ಕು, ಲಘುನಿಂದ ಗೆರೆಯಕ್ಕು' ಎಂಬ ಮಾತು ನಾಗವರ್ಮನ ಛಂದೋಂಬುಧಿಯ ಉಕ್ತಿಯೇ ಆಗಿದೆ. 'ಗುರುವೊಂದಾಧಿಯೊಳುತ್ಪಲಂ...' ಎಂದು ಮೊದಲಾಗುವ, 'ಖ್ಯಾತಕರ್ಣಾಟಕವೃತ್ತಗಳ ಗುರುತು ಪೆಚ್ಚುವ ಪದ್ಯ ಇಲ್ಲಿ ವಾರ್ಧಿಕ ಷಟ್ಪದಿಯ ರೂಪದಲ್ಲಿ ಅವತರಿಸಿದೆ. ಹೀಗೆ ಇಂಥ ಹಲವಾರು ಸ್ವಾರಸ್ಯವಾದ ಅಂಶಗಳು ಈ ನಿಘಂಟಿಗೆ ಕನ್ನಡತನದ ಮುದ್ರೆಯನ್ನೊತ್ತಿದೆ.

(4) **ಕಾಶಕೃತ್ಸ್ನ ಶಬ್ದಕಲಾಪಧಾತುಪಾಠ :** ಕನ್ನಡ ಕಾವ್ಯಗಳ ವಿದ್ಯಾರ್ಥಿಗಳಿಗೆ ಇದು ಅಷ್ಟೇನೂ ಉಪಯುಕ್ತವಾದ ಗ್ರಂಥವಲ್ಲದಿದ್ದರೂ, ಒಂದು ಅಪೂರ್ವಗ್ರಂಥ ಎಂಬ ಕಾರಣದಿಂದ ಇದರ ಬಗೆಗೆ ನಾಲ್ಕುಮಾತು ಹೇಳಬಹುದು. ಇದನ್ನು ಬರೆದವನು ಚನ್ನವೀರಕವಿ. ಕಾಲ ಸು. 1500. "ಈತನು ಸಾರಸ್ವತ ವ್ಯಾಕರಣ, ಪುರುಷಸೂಕ್ತ, ನಮಕಚಮಕ ಇವುಗಳಿಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇವನು ವೀರಶೈವ ಕವಿ...ಈ ವ್ಯಾಖ್ಯಾನಗಳನ್ನು ನೋಡಿದರೆ ಈತನು ದೊಡ್ಡ ಪಂಡಿತನು ಎಂಬುದಕ್ಕೆ ಅಡ್ಡಿಯಿಲ್ಲ"[17] ಎಂದು ತಿಳಿಸಿರುವ ಕವಿಚರಿತೆಕಾರರು ಈ ಧಾತುಪಾಠದ ಕನ್ನಡ ಟೀಕೆಯ ಬಗೆಗೆ ಏನೂ ಹೇಳಿಲ್ಲ. ಈ ನಿಘಂಟನ್ನು ಮೊತ್ತಮೊದಲಿಗೆ ಸಂಪಾದನೆ ಮಾಡಿ ಪ್ರಕಟಿಸಿರುವ ಎ. ಎನ್. ನರಸಿಂಹಯ್ಯನವರು ಕವಿ-ಕೃತಿ ವಿಚಾರವಾಗಿ ಕೆಲವು ಸಂಗತಿಗಳನ್ನು ತಿಳಿಯಪಡಿಸಿದ್ದಾರೆ: "ಇವಕ್ಕೆ 'ಕಾಶಕೃತ್ಸ್ನ ಶಬ್ದ ಕಲಾಪಧಾತು ಪಾಠಃ' ಎಂಬ ಹೆಸರು ಬರಲು ಕಾರಣವನ್ನು ಸ್ಪಷ್ಟವಾಗಿ ಗ್ರಂಥದಲ್ಲಿ ಹೇಳಿಲ್ಲ,... ಇದು 'ಕಲಾಪ' ವ್ಯಾಕರಣಕ್ಕೆ ಸಂಬಂಧ ಪಟ್ಟಿದೆ ಎಂದೂ ಹೇಳುವುದುಂಟು...ಆದಿ ಶಾಬ್ದಿಕ ಋಷಿಗಳ ಗುಂಪಿಗೆ ಕಾಶಕೃತ್ಸ್ನ ಸೇರಿದವನು. ಕಾಶಕೃತ್ಸ್ನವ್ಯಾಕರಣವೇ ಕಲಾಪ ವ್ಯಾಕರಣವೆಂದೂ ಇದು ಐಂದ್ರ ವ್ಯಾಕರಣದ ಗುಂಪಿಗೇ ಸೇರಿದ್ದೆಂದೂ ಅನೇಕರು ಹೇಳುತ್ತಾರೆ... ಈ ಧಾತುಪಾಠದ ಕರ್ಣಾಟ ಟೀಕೆಯನ್ನು ಬರೆದವನು ಕಾಶೀಕಾಂಡ ಚನ್ನವೀರ ಕವಿಯೆಂಬುದು ವ್ಯಕ್ತವಾಗುತ್ತದೆ. ...ಈ ಧಾತು ಪಾಠದ...ಅಧ್ಯಾಯಾಂತ್ಯದಲ್ಲಿ ಕೊಟ್ಟಿರುವ ತನ್ನ ವಿಷಯಕ್ಕೂ ಪುರುಷಸೂಕ್ತದ 23ನೇ ಋಕ್ಕಿನ ಕನ್ನಡ ಟೀಕೆಗೂ ಹೋಲಿಕೆಯಿದೆ.... ಈ ಹೋಲಿಕೆಯಿಂದಲೂ ಇವೆರಡು ಟೀಕೆಗಳನ್ನು ರಚಿಸಿದವನೂ ಒಬ್ಬನೇ ಎಂಬುದು ಸ್ಪಷ್ಟಪಡುತ್ತದೆ."[18] ಕವಿ ಕೊಟ್ಟಿರುವ ಸ್ವವಿಷಯಕವಾದ ಅಧ್ಯಾಯಾಂತ್ಯ ಗದ್ಯದಿಂದ, ಈತನ ತಂದೆ ಕೋಕಿಲಾಕುಂಡ ಸಂಗನ ಗುರುಲಿಂಗ, ತಾಯಿ ನಂದ್ಯಂಬೆ; ಈತ ಯಾಗಂಟಿ ಶರಭಲಿಂಗ ಭಕ್ತ; ಈತನ ಸ್ಥಳ ಸಹ್ಯಾದ್ರಿಯ ತಪ್ಪಲಲ್ಲಿರುವ ಕುಂಟಿಕಾಪುರ; ಶಿವಲೆಂಕ ಮಂಚಣ ಪಂಡಿತಾರಾಧ್ಯ ವಂಶೋದ್ಭವ–ಎಂದು ತಿಳಿದು ಬರುತ್ತದೆ. 'ಶಿವಲೆಂಕ ಮಂಚಣ ಪಂಡಿತಾರಾಧ್ಯ ವಂಶೋದ್ಭವ' ಎಂಬ ಉಲ್ಲೇಖವನ್ನು ವಿಮರ್ಶೆಮಾಡಿ, ಚನ್ನವೀರ ಕವಿ ಶಿವಲೆಂಕ ಮಂಚಣನ (ಸು. 1160) ಶಿಷ್ಯ ಪರಂಪರೆಗೆ ಸೇರಿದವನಿರಬೇಕು, ಕವಿಚರಿತೆಕಾರರು ಹೇಳಿರುವಂತೆ ಅವನ

ವಂಶೋದ್ಭವನಲ್ಲದಿರಬಹುದು—ಎಂದು ನರಸಿಂಹಯ್ಯನವರು ಅಭಿಪ್ರಾಯ ಪಡುತ್ತಾರೆ.

ಕನ್ನಡ ಟೀಕೆಯನ್ನು ಒಳಗೊಂಡ ಈ ಧಾತುಪಾಠದಲ್ಲಿ ಸಂಸ್ಕೃತದ ಭೂ, ಇತ್ಯಾದಿ ಸಂಸ್ಕೃತ ಧಾತುಗಳಿಂದ ನಿಷ್ಪನ್ನವಾಗುವ ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥವನ್ನು ಹೇಳಿದೆ. ಒಟ್ಟು 12 ಅಧ್ಯಾಯಗಳಿವೆ. ಗ್ರಂಥಾದಿಯಲ್ಲಿ "ವ್ಯಾಕರಣವರಿಯದವರ ವ್ಯಾಕರಣಜ್ಞಾನದ ಶಿಕ್ಷೆಗೆ" ಇದು ರಚಿತವಾಗಿದೆ ಎಂದು ತಿಳಿದುಬರುತ್ತದೆ. ಟೀಕೆಯಲ್ಲಿ ಚನ್ನವೀರನ ಅಚ್ಚಗನ್ನಡದ ಒಲವೂ ಉಭಯಭಾಷಾ ಪಾಂಡಿತ್ಯವೂ ಚೆನ್ನಾಗಿ ವ್ಯಕ್ತಪಡುತ್ತದೆ. ಒಂದೆರಡು ಉದಾಹರಣೆಗಳಿಂದ ಈ ಅಂಶ ಸ್ಪಷ್ಟವಾಗಬಹುದು :

ಭೂ—ಸತ್ತಾಯಾಂ, ಭೂಕ್ವಿಪ್ ಎಂಬಲ್ಲಿ ಕ್ವಿಪ್ ಪೋಗೆ ಭೂಃ ಎಂಬ ಕೃಲ್ಲಿಂಗ ವಾಯ್ತು.

ಭೂಃ = ನೆಲಂ ; ಭೂತಿಃ = ಸಿರಿ ; ಭೂತಃ = ಪ್ರಮಥಂ ;

ಭುವನಂ = ನಾಡು ; ಪ್ರಭವಃ = ಹುಟ್ಟಿದಂ ; ಪರಾಭವಃ = ಸೋಲ್ತಂ ;

ಪ್ರಭುಃ = ದೇಶಾಯಿ ; ವಿಭುಃ = ಅರಸು—ಇತ್ಯಾದಿ.

ಖರ್ದ—ದಂಶನೇ, ಕಡಿತದೊಲೊಳ್ : ಖರ್ದತಿ = ಕಡಿದಪುದು, ಖರ್ದಃ = ನಾಯ್.

ಲಜ, ಲಜಿ, ಲಾಜ, ಲಾಜಿ, ತರ್ಜ-ಭರ್ತ್ಸನೇ, ಬೈಯ್ಯಲೊಳ್, ಲಜತಿ = ಬಯ್ದಪಂ ; ಲಂಜತಿ ಸೆಳೆದಪಳ್. ಲಂಜಾ = ಸೂಳೆ.

ಅಡ್ಡ—ಅಭಿಯೋಗೇ, ಮರೆಯೊಳ್ಃ ಅಡ್ಡತೀತಿ ಅಡ್ಡಯಿಸಿದಪುದೆಂಬುದು ; ಅಡ್ಡಂ = ಮರೆ.

ಗಡ್ಡ = ವದನೈಕದೇಶೇ, ಚುಬುಕದೊಳ್: ಗಡ್ಡ = ಚುಬುಕಂ ; ಗಾಡ್ಡಾ = ಗಡ್ಡೆ.

ಕುಲ = ಸಂಖ್ಯಾನೇ, ಎಣಿಕೆಯೊಳ್ : ಕುಳಿಃ = ನಿಮ್ನ (ತಗ್ಗು) ಭೂಮಿ. ಕುಲಂ = ಕೊಳಂ.

ಈ ನಿಘಂಟನ್ನು ಉದ್ದಕ್ಕೂ ಪರಿಶೀಲಿಸುತ್ತಾ ಹೋದಂತೆ, ನಾವು ಯಾವ ಪದಗಳು ಕನ್ನಡದವು ಎಂದು ತಿಳಿದಿರುವೆವೋ ಅವು ಸಂಸ್ಕೃತ ಮೂಲದಿಂದ ಬಂದವು ಎಂದು ಕಂಡುಬರುತ್ತದೆ. ಚನ್ನವೀರ ಕವಿಯ ನಿರ್ವಚನ ಎಷ್ಟರಮಟ್ಟಿಗೆ ಸರಿ ಎಂಬುದನ್ನು ವಿಚಾರಮಾಡಬೇಕಾಗುತ್ತದೆ. ಭಾಷಾ ಶಾಸ್ತ್ರಜ್ಞರ ಸಂಶೋಧನೆಗೆ ಇಲ್ಲಿ ವಿಪುಲವಾದ ಸಾಮಗ್ರಿಯಿದೆ. ಈ ದೃಷ್ಟಿಯಿಂದ ಈ ಕೃತಿ ಮುಖ್ಯವಾಗಿದೆ.

'ಶಬ್ದರತ್ನಾಕರ' (30 ಕಂದ ಪದ್ಯಗಳು); ಪದ್ಯನಾನಾರ್ಥ (39 ಕಂದ ಪದ್ಯಗಳು), ಚನ್ನಕವಿಯ 'ನಾನಾರ್ಥಕಂದ' (160 ಕಂದ ಪದ್ಯಗಳು), ದೇವೋತ್ತಮನ 'ನಾನಾರ್ಥರತ್ನಾಕರ' (169 ವೃತ್ತಗಳು), 'ಧನಂಜಯ ನಿಘಂಟು' (ಸಂಸ್ಕೃತ ನಿಘಂಟಿಗೆ ಕನ್ನಡ ಟೀಕು)–ಇವು ಸಂಸ್ಕೃತ ಶಬ್ದಗಳ ನಾನಾರ್ಥಗಳನ್ನು ಕನ್ನಡದಲ್ಲಿ ತಿಳಿಸುವ ಇತರ ಕೆಲವು ನಿಘಂಟುಗಳು. ಇವುಗಳ ಕಾಲ ಸುಮಾರು 1600 ಎಂದು ಊಹಿಸಲಾಗಿದೆ.

ಈ ಸಂಸ್ಕೃತ-ಕನ್ನಡ ನಿಘಂಟುಗಳಿಂದ, ಕನ್ನಡ ನಾಡಿನಲ್ಲಿ ಸಾಮಾನ್ಯ ಜನಕ್ಕೂ ಸಂಸ್ಕೃತ ಶಬ್ದಗಳ ಅರ್ಥಜ್ಞಾನವನ್ನು ಉಂಟುಮಾಡಿಕೊಟ್ಟು, ಕಾವ್ಯಾಭ್ಯಾಸಕ್ಕೂ ಕಾವ್ಯರಚನೆಗೂ ಅಗತ್ಯವಾದ ಸಹಾಯಕ ಸಾಮಗ್ರಿಯನ್ನು ಒದಗಿಸಿಕೊಡಬೇಕೆಂಬುದು ನಮ್ಮ ಪೂರ್ವದ ವಿದ್ವಾಂಸರ ಗುರಿಯಾಗಿತ್ತು ಎಂದು ಭಾವಿಸಬಹುದು.

III. ಶಾಸ್ತ್ರವಿಷಯಗಳ ನಿಘಂಟುಗಳು

ಹಿನ್ನೆಲೆ : ಈಗಿನ ಕಾಲದಲ್ಲಿ ವೈಜ್ಞಾನಿಕ ಪಾರಿಭಾಷಿಕ ಪದಗಳನ್ನು (scientific terminology) ಒಳಗೊಂಡ ನಿಘಂಟುಗಳ ಅಗತ್ಯವನ್ನು ನಾವು ಕಂಡುಕೊಳ್ಳುತ್ತಿರುವಂತೆ, ನಾನಾ ಶಾಸ್ತ್ರಗಳಿಗೆ ಸಂಬಂಧಪಟ್ಟ ನಿಘಂಟುಗಳ ಅಗತ್ಯವನ್ನು ಪೂರ್ವಕಾಲದ ಕನ್ನಡ ವಿದ್ವಾಂಸರು ಗ್ರಹಿಸಿದ್ದರು. ಈ ನಿಜಾಂಶ, ಕನ್ನಡದಲ್ಲಿ ರಚಿತವಾಗಿ ದೊರೆತಿರುವ ಕೆಲವು ಶಾಸ್ತ್ರವಿಷಯಕ ನಿಘಂಟುಗಳಿಂದ ಗೊತ್ತಾಗುತ್ತದೆ. ಕನ್ನಡ ಕವಿಗಳು ನಾನಾ ಶಾಸ್ತ್ರಗಳಲ್ಲಿ ಪಂಡಿತರಾಗಿದ್ದುದರಿಂದ, ಅವರ ಶಾಸ್ತ್ರಜ್ಞಾನ ಕಾವ್ಯಗಳಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ವಿವಿಧ ಶಾಸ್ತ್ರಗಳಲ್ಲಿ ಬಳಕೆಯಾಗುವ ಪದಗಳ ಅರ್ಥಗಳು ತಿಳಿಯದಿದ್ದರೆ, ಕಾವ್ಯಗಳ ಅನೇಕ ಸಂದರ್ಭಗಳ ತಾತ್ಪರ್ಯಕೂಡ ಗೋಚರವಾಗುವುದಿಲ್ಲ. ಆದ್ದರಿಂದ, ಶಾಸ್ತ್ರಾಸಕ್ತರಿಗೆ ಮಾತ್ರವಲ್ಲದೆ ಕಾವ್ಯಾಭ್ಯಾಸಂಗ ಮಾಡುವವರಿಗೂ ಇಂಥ ನಿಘಂಟುಗಳಿಂದ ಪ್ರಯೋಜನವುಂಟು. ಈ ಬಗೆಯ ನಿಘಂಟುಗಳಲ್ಲಿ, ಆಯುರ್ವೇದ ವೈದ್ಯಕ್ಕೆ ಸಂಬಂಧಪಟ್ಟ ನಿಘಂಟುಗಳೇ ಹೆಚ್ಚಿನ ಸಂಖ್ಯೆಯವು. ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದು 'ಅಕಾರಾದಿ ವೈದ್ಯನಿಘಂಟು.' ಅಮೃತನಂದಿ ಎಂಬ ಜೈನಕವಿಯಿಂದ ರಚಿತವಾದ ಇದರ ಕಾಲ ಸು. 1300 ಎಂದು ಕವಿಚರಿತೆಕಾರರ ಊಹೆ. ಇದರಲ್ಲಿ ಸಂಸ್ಕೃತ ಪದಗಳಿಗೆ ಸಮಾನವಾದ

ಕನ್ನಡ ಪದಗಳನ್ನು ಕೊಟ್ಟಿದೆ. ಇದರಿಂದ ನಮ್ಮ ನಾಡಿನ ಗಿಡಮೂಲಿಕೆಗಳ ಪರಿಚಯವೂ ಆಗುವುದು. ಕೆಲವು ಶಬ್ದಗಳು :

ಅಳಿಷ್ಮ–ತಿಲಕವೃಕ್ಷ; ಅಳಿಕಾ–ಬಳ್ಳಿಹರುವೆ; ಅಲಸಾ–ಚಿನ್ನತಾರೆ; ಅಕ್ಷಿ-ನರುವಂಜಿ. 'ಧನ್ವಂತಿರೀಯ ನಿಘಂಟು' (ಕರ್ತೃ ?) (ಕ್ರಿ. ಶ. ಸು. 1500), 'ಮದನಾರಿ ವೈದ್ಯ ನಿಘಂಟು', 'ಇಂದ್ರದೀಪಿಕಾ ನಿಘಂಟು (ಕವಿ, ಕಾಲ ?)–ಇವೂ ಇದೇ ಜಾತಿಯ ನಿಘಂಟುಗಳು, ಸು. 1775 ರಲ್ಲಿದ್ದ ಲಕ್ಷಣಪಂಡಿತನೆಂಬವನೂ ಇಂಥ ಒಂದು ನಿಘಂಟನ್ನು ರಚಿಸಿರುವುದಾಗಿ ತಿಳಿದುಬರುತ್ತದೆ.*

ಚಾಮುಂಡಾ ಲಘುನಿಘಂಟು : ಇದರ ಕರ್ತೃ ಮೈಸೂರು ರಾಜ್ಯದ ದೊರೆಯಾಗಿದ್ದ ಮುಮ್ಮಡಿ ಕೃಷ್ಣರಾಜರು. ಇದು 1884ರಲ್ಲಿ ರಚಿತವಾಗಿದೆ. ಇದರಲ್ಲಿ ಮೂರು ಪ್ರಕರಣಗಳಿವೆ. ಗ್ರಂಥದ ಕಡೆಯಲ್ಲಿ ವಿಷಯ ಸ್ವರೂಪ ವನ್ನು ತಿಳಿಸುವ ಗದ್ಯಭಾಗದ ಕೆಲವು ವಾಕ್ಯಗಳು :

ಶ್ರೀಮತ್ ಕೃಷ್ಣರಾಜ ಮಹಾರಾಜ ಕಂಠೀರವವರವರಿಂದ ವಿರಚಿತವಾದ ಶ್ರೀಚಾಮುಂಡಾ ಲಘುನಿಘಂಟೆಂಬ ಗ್ರಂಥದ ಪ್ರಥಮ ಪ್ರಕರಣದಲ್ಲಿ ದೇವತಾಯುಧ ಹಸ್ತಭೇದಗಳು (128),... ದ್ವಿತೀಯ ಪ್ರಕರಣದಲ್ಲಿ ಪ್ರಸಿದ್ಧ ಪಶುಮೃಗ ಜಾತಿ ಭೇದಗಳು (112), ಪ್ರಸಿದ್ಧ ಮುಖ್ಯ ಪಕ್ಷಿಜಾತಿ ಭೇದಗಳು (109), ಪ್ರಸಿದ್ಧ ಜಲಜಂತು ಕೀಟ ಭೇದಗಳು (49);... ಮೂರನೆಯ ಪ್ರಕರಣದಲ್ಲಿ ಪ್ರಸಿದ್ಧ ವೃಕ್ಷ ಕಿರುಗಿಡ ಶಾಕ ಪುಷ್ಪಜಾತಿ ಕುರುಚು ಗಿಡಗಳ ಭೇದಗಳು (478); ಬಳ್ಳಿ ವಿಭೇದಗಳು (66), ಗಂಧಿಕಸರಕು ನಾರುಬೇರುಗಳ ಭೇದಗಳು (148), ನವರತ್ನ ಕ್ಷುದ್ರಮಣಿ ಭೇದಗಳು (22), ಲೋಹ ಭೇದ (11), ಪರ್ಯಾಯ ಮಣಿಗಳು ಶಂಖಭೇದಗಳು (16), ಪ್ರಸಿದ್ಧಧಾನ್ಯ ಭೇದಗಳು (44), ಪ್ರಸಿದ್ಧಫಲಾಹಾರ ಪಾನೀಯ ದ್ರವ್ಯಗಳು (54)-ಅಂತು ಈ ಚಾಮುಂಡಾ ಲಘು ನಿಘಂಟಿನ ಮೂರು ಪ್ರಕರಣಕ್ಕೂ ಒಟ್ಟು ಪದ ಅರ್ಥಗಳು 1236 ಕ್ಕೆ ಶ್ಲೋಕಗಳು 152, ಸ್ವಾಂಕಿತ ಸೀಸ್ಸ ಪದ್ಯ 1 ಸಹಾ ನಿರ್ಮಾಣಮಾಡಿದೆ.

3ನೆಯ ಪ್ರಕರಣದಿಂದ ಉದಾಹರಣೆಗಳು :

ಮತ್ಸ್ಯಂಡಿ ಫಾಣಿತಂ ಲಾಜಾಃ ಶರ್ಕರಾ ಕೂರ್ಚಿಕಾದಧಿ
ಕರಕಾಯಿತ ಪಾನೀಯಂ ಚೀನಾ ಬೂರಾಚ್ಛ ಶರ್ಕರಾಃ ॥ 46 ॥

---

* ಈ ಸಂದರ್ಭದಲ್ಲಿ, ಡಿ. ಎಸ್. ಶಿವಪ್ಪನವರು ಹೊರತಂದಿರುವ 'ಇಂಗ್ಲಿಷ್-ಕನ್ನಡ ವೈದ್ಯ ಪದಕೋಶ' (1973)ವನ್ನು ಉಲ್ಲೇಖಿಸಲು ಸಂತೋಷವೆನಿ ಸುತ್ತದೆ, "ವೈದ್ಯಶಾಸ್ತ್ರ ಕಲಿವವರಿಗೆ ಈ ಪದಕೋಶದಿಂದ ತಾಂತ್ರಿಕ ಪದಗಳ ಅರ್ಥ ಇನಿತಾದರೂ ಹೊಳೆಯಲೆಂಬುದೇ" ಲೇಖಕರ ಉದ್ದೇಶ. ಇಲ್ಲಿನ ಪದಗಳು ಆಲೋಪತಿ ವೈದ್ಯ ಪದ್ಧತಿಗೆ ಸಂಬಂಧಪಟ್ಟಿವೆ.

ಮತ್ಸ್ಯಂಡಿ = ಕಂಬಸಕ್ಕರೆ, ಪಾಣಿತಂ = ಕಾಕಂಬಿ,
ಲಾಜಾಃ = ಅರಳು, ಶರ್ಕರಾ = ರಾಯಿಪುಡಿ,
ಕೂರ್ಚಿಕಾ = ಗಿಣ್ಣು, ದಧಿ = ಮೊಸರು, ಕರಕಾಯಿತಂ
ಪಾನೀಯಂ = ನೀರುಗಟ್ಟಿಮಾಡಿದ್ದು, ಚೀನಾಶರ್ಕರಾ
= ಚೀನಾಸಕ್ಕರೆ, ಭೂರಾ ಶರ್ಕರಾ = ಬೂರಾಸಕ್ಕರೆ,
ಅಚ್ಛಶರ್ಕರಾ = ಬಿಳಿಕಲ್ಲು ಸಕ್ಕರೆ.

ತತ್ತ್ವಾಭಿನಯ ನಿಘಂಟು : ಇದು ನಾಟ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಕೋಶ. ಕವಿ ಯಾರೆಂಬುದು ಗೊತ್ತಿಲ್ಲ. ಇದು 1895 ರಲ್ಲಿ ರಚಿತವಾದುದೆಂದು ಇದರ ಹಸ್ತಪ್ರತಿಯಿಂದ ತಿಳಿದು ಬರುತ್ತದೆ. ಇದರಲ್ಲಿ ಹಸ್ತಮುದ್ರೆಗಳ ಲಕ್ಷಣಗಳನ್ನು ವಿವರಿಸಿದೆ.

ಕೋಶ ಪ್ರತಿಕೋಶ ನಿಘಂಟು : ಇದರ ಲೇಖಕ ಪೂರ್ಣಾನಂದ ಅವಧೂತ ಶಿವಯೋಗಿ. ಕಾಲ ಗೊತ್ತಿಲ್ಲ. ಸಂಸ್ಕೃತ ಮಂತ್ರಶಾಸ್ತ್ರದ ವೇದಾಂತ ಭಾಗದ ಮೂಲ ಸಂಸ್ಕೃತ ಶ್ಲೋಕಗಳಿಗೆ ಕನ್ನಡದಲ್ಲಿ ಟೀಕು ಬರೆದಿದೆ.

IV. ಕಾವ್ಯಶಬ್ದಕೋಶಗಳು

ಕನ್ನಡ ಸಾಹಿತ್ಯ ಪರಿಷತ್ತು 1930ರಲ್ಲಿ ಕಾವ್ಯಗಳಲ್ಲಿ ಪ್ರಯೋಗವಾದ ಶಬ್ದಗಳ ವಿಶಿಷ್ಟ ನಿಘಂಟುಗಳನ್ನು ಸಿದ್ಧಗೊಳಿಸಿತು. ಕಾರಣಾಂತರಗಳಿಂದ ಇವು ಪ್ರಕಟವಾಗಲಿಲ್ಲ. ಇವುಗಳ ನಿರ್ಮಾಣದ ಶ್ರೇಯಸ್ಸು ದಿವಂಗತ ಬೆಳ್ಳಾವೆ ವೆಂಕಟನಾರಣಪ್ಪನವರಿಗೆ ಸಲ್ಲುತ್ತದೆ. ಇವರು ಪರಿಷತ್ತಿನ ಪಂಡಿತರುಗಳ ನೆರವಿನಿಂದ ಈ ನಿಘಂಟುಗಳನ್ನು ತಯಾರಿಸಿದ್ದಾರೆ: (i) ಷಟ್ಪದಿ ಕಾವ್ಯಗಳ ನಿಘಂಟು : 12 ಷಟ್ಪದಿ ಕಾವ್ಯಗಳಿಂದ ಶಬ್ದಗಳನ್ನು ಸಂಗ್ರಹಿಸಿ, ಅವುಗಳ ಅರ್ಥ ನಿಷ್ಕರ್ಷೆಮಾಡಿದೆ ; (ii) ಕನ್ನಡ ನಿಘಂಟುಗಳ ನಿಘಂಟು : ನಾವು ಈ ಹಿಂದೆ ಉಲ್ಲೇಖಿಸಿರುವ ಅನೇಕ ಪ್ರಾಚೀನ ನಿಘಂಟುಗಳಿಂದ ಶಬ್ದಗಳನ್ನು ಸಂಗ್ರಹಿಸಿ ತಯಾರಿಸಿದೆ; (iii) ಱಟಿಕುಳ ನಿಘಂಟು : ಪ್ರಾಚೀನ ಕಾವ್ಯಗಳಲ್ಲಿ ಪ್ರಯೋಗಿಸಿರುವ ಱಳಾಕ್ಷರಗಳ ಶಬ್ದಗಳು, ಕುಳಾಕ್ಷರ ಶಬ್ದಗಳು, ಇವುಗಳನ್ನು ಸಂಗ್ರಹಿಸಿ ತಯಾರಿಸಿದೆ. ಈ ಮೂರು ನಿಘಂಟುಗಳೂ ಅಪ್ರಕಟಿತವಾಗಿದ್ದರೂ, ಪರಿಷತ್ತು ನಿರ್ಮಾಣಮಾಡುತ್ತಿರುವ ಕನ್ನಡ–ಕನ್ನಡ ನಿಘಂಟುವಿನ ರಚನೆಯಲ್ಲಿ ಉಪಯುಕ್ತವಾಗಿ ಪರಿಣಮಿಸಿದೆ.

ಭಾರತ ನಿಘಂಟು : ಇದನ್ನು ರಚಿಸಿದವನು ಯಾರೆಂಬುದು ತಿಳಿದು ಬಂದಿಲ್ಲ. ಕಾಲ ಸು. 1600 ಎಂದು ಊಹಿಸಲಾಗಿದೆ. "ಕುಮಾರವ್ಯಾಸನೇ ಇದನ್ನು ಬರೆದಿರಬಹುದೆಂಬ ಪ್ರತೀತಿ ಇದೆ" ಎಂದು ಎನ್. ಬಸವಾರಾಧ್ಯರು ತಿಳಿಸುತ್ತಾರೆ. (ಚಿನ್ನದ ಬೆಳಸು; ಪು. 44). ಇದರಲ್ಲಿನ 67 ಕಂದಪದ್ಯಗಳಲ್ಲಿ ಕುಮಾರವ್ಯಾಸಭಾರತದ ದೇಶ್ಯಶಬ್ದಗಳಿಗೆ ಅರ್ಥಹೇಳಿದೆ.

ಒಂದು ಉದಾಹರಣೆ :

ತಲ್ಲಣಮೆನೆ ಭಯಮಕ್ಕುಂ । ಹಲ್ಲಣೆಸಿತೆನಲ್ಕೆ ನಿಲ್ಲದೈದಿದುದಕ್ಕುಂ ॥
ಭುಲ್ಲವಣೆಯೆನಲು ಪೆರ್ಚುಗೆ। ಘಲ್ಲಣೆಯೆನೆ ಘಾತಿಯೆಂದು ತಿಳಿಗೆ ವಿದಗ್ಧರ್ ॥

ಕಿಟ್ಟೆಲ್ ನಿಘಂಟು : ರೆ॥ ಎಫ್. ಕಿಟ್ಟೆಲ್ (1832–1903)ರವರ ಈ ನಿಘಂಟು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು. ಇದನ್ನು ಎಷ್ಟು ಹೊಗಳಿದರೂ ಸಾಲದೆನ್ನಿಸುತ್ತದೆ. ಕಿಟ್ಟೆಲ್‌ರವರು ಅನೇಕ ವರ್ಷಗಳ ಕಾಲ ಅಪಾರ ಪರಿಶ್ರಮದಿಂದ ವಾಙ್ಮಯ ತಪಸ್ಸನ್ನಾಚರಿಸಿ ಈ ಬೃಹತ್ ಕೋಶವನ್ನು ರಚಿಸಿದ್ದಾರೆ. ಆವರೆಗೆ ಪ್ರಕಟವಾಗಿದ್ದು ತಮಗೆ ದೊರೆತ ಎಲ್ಲ ಮುದ್ರಿತ ಕನ್ನಡ ಗ್ರಂಥಗಳನ್ನು ಮಾತ್ರವಲ್ಲದೆ, ಹಸ್ತಪ್ರತಿಗಳನ್ನು ಕೂಡ ಪರಿಶೀಲಿಸಿ, ಶಬ್ದಸಂಗ್ರಹಮಾಡಿದ್ದಾರೆ. ಅಲ್ಲದೆ, ಕರ್ನಾಟಕದ ಬೇರೆ ಬೇರೆ ಪ್ರಾಂತಗಳ ಬಳಕೆ ನುಡಿಗಳನ್ನೂ ಗಾದೆ ಮಾತುಗಳನ್ನೂ ಗಮನಿಸಿ, ಅವಕ್ಕೂ ಇದರಲ್ಲಿ ಎಡೆಕಲ್ಪಿಸಿದ್ದಾರೆ. ಪ್ರಯೋಗಗಳ ಆಧಾರದಮೇಲೆ ಅರ್ಥನಿರ್ಣಯಮಾಡಿ, ಆಕರಗಳನ್ನು ಸೂಚಿಸಿದ್ದಾರೆ. ಅರ್ಥ ಹೇಳಿದಮೇಲೆ ಪ್ರತಿ ಶಬ್ದದ ವ್ಯುತ್ಪತ್ತಿಯನ್ನೂ ಇತರ ದ್ರಾವಿಡ ಭಾಷೆಗಳಲ್ಲಿನ ಜ್ಞಾತಿಪದಗಳನ್ನೂ ಸೂಚಿಸಿದ್ದಾರೆ. ಅರ್ಥವನ್ನು ಇಂಗ್ಲಿಷಿನಲ್ಲಿ ಕೊಟ್ಟಿರುವುದರಿಂದ, ಇಂಗ್ಲಿಷ್ ಬಾರದ ಕನ್ನಡಿಗರಿಗೆ ಇದರ ಪ್ರಯೋಜನ ತಪ್ಪಿದ್ದು ಒಂದು ಕೊರತೆಯೆನಿಸಿದರೂ ಕನ್ನಡ ಭಾಷೆಯ ಸತ್ವಸಂಪನ್ನತೆಗಳು ಕನ್ನಡ ನಾಡಿನ ಹೊರಗಿನ ವಿದ್ವಾಂಸರಿಗೆ ಅರಿವಾಗಲು ಇದರಿಂದ ಪ್ರಯೋಜನವಾಗಿರುವುದರಿಂದ, ಇದರ ಉಪಯುಕ್ತತೆ ಸರ್ವಕಾಲಕ್ಕೂ ಸರ್ವದೇಶಗಳಿಗೂ ಲಭಿಸತಕ್ಕದ್ದಾಗಿದೆ. ನಮ್ಮ ನಾಡಿನಲ್ಲಿ ಕೂಡ, ಹಳಗನ್ನಡವನ್ನು ಕಾಲೇಜುಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೂ ಪಾಠ ಹೇಳುವ ಅಧ್ಯಾಪಕರಿಗೂ ಕೈನೆರವಾಗಿರುವ ನಿಘಂಟು ಇದೊಂದೇ. ಈಚೆಗೆ ಹುಟ್ಟಿಕೊಂಡಿರುವ ಅನೇಕ ಕನ್ನಡ ನಿಘಂಟುಗಳಿಗೆ ಇದು ಮಾತೃಕೆ. ದಿವಂಗತ ಡಿ. ಎಲ್. ನರಸಿಂಹಾಚಾರ್ಯರ ಮಾತುಗಳಿಂದ ಈ ಪರಿಚಯವನ್ನು ಮುಗಿಸಬಹುದು :

"ಕಿಟ್ಟೆಲ್ ಅವರ ಕೀರ್ತಿ ಶಾಶ್ವತವಾಗಿ ನೆಲಸಿರುವುದಕ್ಕೆ ಕಾರಣ ಅವರು ರಚಿಸಿದ 'ಕನ್ನಡ - ಇಂಗ್ಲಿಷ್ ನಿಘಂಟು' ಎಂಬ ಬೃಹತ್ ಕೋಶ. ಈ ಮಹಾ ಕೋಶವನ್ನು ಸಿದ್ಧಗೊಳಿಸುವುದಕ್ಕೆ ಸುಮಾರು 15 ವರ್ಷಗಳ ಕಾಲ ಹಿಡಿಯಿತು. ಇದಕ್ಕಿಂತ ಹಿಂದೆ ರೀವ್ಸ್ ಎಂಬಾತನು ಕನ್ನಡ-ಇಂಗ್ಲಿಷ್ ಕೋಶವೊಂದನ್ನು ತಯಾರಿಸಿದ್ದನು ; ಅವನು 1817 ರಲ್ಲೇ ಈ ಕೆಲಸವನ್ನು ಆರಂಭಿಸಿ 1832ರಲ್ಲಿ ಎಂದರೆ 15 ವರ್ಷಗಳ ಅನಂತರ ಅದನ್ನು ಮುಗಿಸಿ ಅಚ್ಚುಹಾಕಿಸಿ ಪ್ರಕಟಿಸಿದ್ದನು. ಕಿಟ್ಟೆಲ್ ಅವರು ಇದರಿಂದ ತಮಗಾದ ಸಹಾಯವನ್ನು ಮುಕ್ತಕಂಠದಿಂದ ಒಪ್ಪಿಕೊಂಡಿದ್ದಾರೆ. ಆದರೆ ಈ ನಿಘಂಟು ಪ್ರಮಾಣಭೂತವಲ್ಲ, ಶಾಸ್ತ್ರೀಯವಾದುದಲ್ಲ. ಕೈಗೆ ಸಿಕ್ಕಿದ ಶಬ್ದಗಳೆಲ್ಲ ಇಲ್ಲಿ ಸೇರಿಕೊಂಡು ಬಿಟ್ಟಿವೆ. ಈ ವಿಷಯಗಳನ್ನೆಲ್ಲ ಕಿಟ್ಟೆಲ್ ಅವರು ಪರಿಶೀಲಿಸಿ ಗ್ರಾಹ್ಯವಾದ ಅಂಶಗಳನ್ನು ಮಾತ್ರ ಸ್ವೀಕರಿಸಿದ್ದಾರೆ. ಅವರ ಪರಿಪಕ್ವವಾದ ಪಾಂಡಿತ್ಯದ ಪ್ರತೀಕವಾಗಿದೆ ಅವರ ಈ ನಿಘಂಟು. ಇಂದಿಗೂ ಅದನ್ನು ಮೀರಿಸಲು ಕನ್ನಡಿಗರಿಗೆ ಸಾಧ್ಯವಾಗಿಲ್ಲ.* 1894ರಲ್ಲಿ ಪ್ರಕಟವಾದ ಈ ನಿಘಂಟು ಇವತ್ತಿಗೂ ಕನ್ನಡ ಭಾಷೆಯ ನಿಷ್ಕೃಷ್ಟವಾದ, ಪ್ರಮಾಣ ಭೂತವಾದ ಮಹಾ ಶಬ್ದಕೋಶವಾಗಿದೆ. ಇಷ್ಟು ವಿಜಿತವೂ ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭರತ ಖಂಡದ ಯಾವ ದೇಶ ಭಾಷೆಗೂ ಇಲ್ಲವೆಂದು ಬಲ್ಲವರು ಹೇಳುತ್ತಾರೆ." ('ಪೀಠಿಕೆಗಳು ಮತ್ತು ಲೇಖನಗಳು', 1971: ಪು. 1005).

ಜ್ಞಾನಕೋಶ

ಕರ್ನಾಟಕ ವಿಶ್ವಕ್ಕೆ ಬಹು ಪ್ರಾಚೀನ ಕಾಲದಲ್ಲಿಯೇ ನಾಲ್ಕು ವಿಶ್ವಕೋಶಗಳನ್ನು ಅರ್ಪಿಸಿದೆ. ಇವು ಆಗ ಭರತ ಖಂಡದಲ್ಲಿ ಪ್ರಚುರವಾಗಿದ್ದ ಸರ್ವಶಾಸ್ತ್ರಗಳನ್ನೂ ಒಳಗೊಂಡಿರುವುದರಿಂದ 'ಸರ್ವಶಾಸ್ತ್ರಕೋಶ'ವೆಂದೂ, ಸಕಲ ವಸ್ತುಗಳ ಪರಿಚಯ ಮಾಡಿಕೊಡುವುದರಿಂದ 'ಸರ್ವವಸ್ತು ಕೋಶ'

*ಈಚೆಗೆ ಕಿಟ್ಟೆಲ್ ನಿಘಂಟನ್ನು ಪರಿಷ್ಕರಿಸಿ, ಮದರಾಸು ವಿಶ್ವವಿದ್ಯಾನಿಲಯದವರು ಪುನರ್ಮುದ್ರಣ ಮಾಡಿಸಿದ್ದಾರೆ. ಇದರಲ್ಲಿ ಕಿಟ್ಟೆಲ್‌ರವರಿಗೆ ದೊರಕದಿದ್ದ ಕಾವ್ಯಗಳ ಪದಗಳನ್ನೂ ಹೊಸದಾಗಿ ಸೇರಿಸಿದೆ. ಇದರ ಸಂಪಾದಕರು ಪ್ರೊ॥ ಎಂ. ಮರಿಯಪ್ಪ ಭಟ್ಟರು. ಕನ್ನಡ ಸಾಹಿತ್ಯ ಪರಿಷತ್ತು ತಯಾರಿಸುತ್ತಿರುವ ಸಮಗ್ರ ಕನ್ನಡ ಕೋಶಕ್ಕೂ ಕಿಟ್ಟೆಲ್ ನಿಘಂಟು ಆಧಾರವಾಗಿ ಪರಿಣಮಿಸಿದೆ. ಸುಪ್ರಸಿದ್ಧ ಭಾಷಾ ವಿಜ್ಞಾನಿಗಳಾದ ಎಮೆನೋ ಮತ್ತು ಬರೋ ಅವರು ತಯಾರಿಸಿರುವ 'ದ್ರಾವಿಡ ಭಾಷೆಗಳ ಶಬ್ದಗಳ ರೂಪನಿರ್ವಾಚಕ ನಿಘಂಟು'ವಿಗೂ ಇದೇ ಕನ್ನಡದ ವಿಷಯದ ಮಟ್ಟಿಗೆ ಆಧಾರಭೂತ ಗ್ರಂಥವಾಗಿದೆ.

ವೆಂದೂ, ನಾನಾ ವಿಷಯಗಳ ತಿಳಿವಳಿಕೆಯನ್ನುಂಟುಮಾಡಿಕೊಡುವುದರಿಂದ 'ಜ್ಞಾನಕೋಶ' ವೆಂದೂ ಬೇರೆ ಬೇರೆ ಹೆಸರುಗಳಿಂದ ಕರೆಯಬಹುದು. ಈ ಪ್ರಕಾರಕ್ಕೆ ಈಗ ಬಳಕೆಯಲ್ಲಿರುವ ಮಾತು ವಿಶ್ವಕೋಶ ; ಈಗಿನ ವಿಶ್ವಕೋಶದ ವಿಷಯದ ಹರಹು, ರಚನಾ ವಿಧಾನ, ಮುಂತಾದವು ಈ ಯುಗಕ್ಕೆ ತಕ್ಕಂತೆ ವಿಶ್ವ ಸಮಸ್ತವನ್ನೂ ಒಳಕೊಳ್ಳುವುದರಿಂದ, ತಪ್ಪು ಕಲ್ಪನೆ ಉಂಟಾಗಬಾರದು ಎಂಬ ಉದ್ದೇಶದಿಂದ 'ಜ್ಞಾನಕೋಶ' ಎಂಬ ಹೆಸರನ್ನು ಇಲ್ಲಿ ಬಳಸಿದೆ. ಹೆಸರು ಏನೇ ಇದ್ದರೂ, ಈ ಬಗೆಯ ಗ್ರಂಥಗಳಿಂದ ವಾಚಕರಿಗೆ ದೊರಕು ವುದು ಜ್ಞಾನ ; ಈ ಜ್ಞಾನ ಉಪಕಾರಕ. ಕನ್ನಡದ 'ಲೋಕೋಪಕಾರ', 'ಸಿರಿಭೂವಲಯ', 'ಅಭಿಲಷಿತಾರ್ಥ ಚಿಂತಾಮಣಿ', 'ವಿವೇಕ ಚಿಂತಾಮಣಿ'– ಈ ನಾಲ್ಕು ಸರ್ವಶಾಸ್ತ್ರ ಸಮುಚ್ಚಯ ಗ್ರಂಥಗಳು ತಮ್ಮ ಬೇರೆ ಬೇರೆ ಹೆಸರು ಗಳಿಂದ ಮೇಲೆ ಹೇಳಿರುವ ಉದ್ದೇಶಗಳನ್ನು ಪೂರಯಿಸಿ, ಅನ್ವರ್ಥಕವಾಗಿವೆ.

ಲೋಕೋಪಕಾರ : ಇದರ ಕರ್ತೃ 2ನೆಯ ಚಾವುಂಡರಾಯ. (ಮೊದಲನೆ ಯವನು ಗಂಗರಾಜ ರಾಚಮಲ್ಲನ ಮಂತ್ರಿ ; 'ಚಾವುಂಡರಾಯ ಪುರಾಣ'ದ ಕರ್ತೃ ; ಶ್ರವಣಬೆಳುಗೊಳದ ಗೊಮ್ಮಟ ವಿಗ್ರಹವನ್ನು ಮಾಡಿಸಿ ನಿಲ್ಲಿಸಿ ದವನು ; ಇವನ ಕಾಲ 978). ಇವನು ತನ್ನ ಗ್ರಂಥದ ರಚನಾ ಕಾಲವನ್ನು ಶಕವರ್ಷ 947 (ಕ್ರಿ. ಶ. 1025) ಎಂದು ತಾನೇ ತಿಳಿಸಿ ಹಾಗೂ ಉಪಕಾರ ಮಾಡಿದ್ದಾನೆ.* ಇವನ ಇತರ ಜೀವಿತ ವೃತ್ತಾಂತಗಳೂ ಗ್ರಂಥದಿಂದಲೇ

---

* ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಪ್ರಥಮ ಸಂಪುಟದಲ್ಲಿ 'ಲೋಕೋಪಕಾರ'ದ ವಿಷಯವಾಗಿ ಖಚಿತವಾಗಿ ಬರೆಯಲು ಸಾಧ್ಯವಾಗಿರಲಿಲ್ಲ. 'ಲೋಕೋ ಪಕಾರ'ದ ಸೂಪಶಾಸ್ತ್ರ ವಿಷಯಕವಾದ ಗ್ರಂಥಭಾಗ ಮತ್ತು 'ಲೋಕೋಪಕಾರ'ದ 5, 6 ನೆಯ ಅಧಿಕಾರಗಳು ಮಾತ್ರ ಅವರ ಗಮನಕ್ಕೆ ಬಂದಿದ್ದುವು. ಸೂಪಶಾಸ್ತ್ರದ ಅಧಿಕಾರದಲ್ಲಿ 'ಜಯ ಬಂಧು ನಂದನ' ಎಂಬ ಕರ್ತೃವಿನ ಒಂದು ಬಿರುದು ಮಾತ್ರ ಕಂಡುಬಂದಿತ್ತು. ಆದ್ದರಿಂದ ಅವರು 'ಜಯಬಂಧು ನಂದನ' ನ 'ಸೂಪಶಾಸ್ತ್ರ' ವಿಷಯವಾಗಿ ಬರೆದು, ಕವಿಯ ಕಾಲವನ್ನು ಊಹೆಯ ಮೇಲೆ ಸು. 800 ಎಂದು ತಿಳಿಸಿದರು. (ಕವಿ ಚರಿತೆ, 1972ರ ಮುದ್ರಣ, ಪು. 17). 'ಲೋಕೋಪಕಾರ'ದ 5, 6ನೆಯ ಅಧಿಕಾರಗಳನ್ನು ಒಂದು ಪ್ರತ್ಯೇಕ ಗ್ರಂಥವಾಗಿ ಭಾವಿಸಿ, ಅದರ ಕರ್ತೃ ಚಾವುಂಡರಾಯ ಎಂದು ಹೇಳಿ, ಇವನ ಕಾಲವನ್ನು 1150 ಎಂದು ಊಹಿಸಿದ್ದರು. (ಕವಿಚರಿತೆ I, 17), ಸಮಗ್ರ ಪ್ರತಿ ದೊರೆತಿಲ್ಲ ಎಂದೂ ಹೇಳಿದ್ದರು. ಈ ಭಾಗದಲ್ಲಿಯೂ 'ಜಯಬಂಧು ನಂದನ' ಎಂಬ ಅಂಕಿತವನ್ನು ಕಂಡು, ಈ ಅಂಕಿತವುಳ್ಳ ಪದ್ಯಗಳು ಸೂಪಶಾಸ್ತ್ರದಿಂದ ತೆಗೆದುಕೊಂಡವು ಎಂದು ಭಾವಿಸಿದ್ದರು. ಹೀಗೆ, ಈ ಕೃತಿಯ ಬಗೆಗೆ ಒಂದು ಅನಿಶ್ಚಿತ ಸ್ಥಿತಿ ಇದ್ದಿತು. ಈಗ ಅದು ನಿವಾರಣೆಯಾಗಿದೆ.

ತಿಳಿದು ಬರುತ್ತವೆ. ಇವನ ತಂದೆ 'ಕವಿತಾ ವಿಲಾಸ' ಎಂಬ ಬಿರುದನ್ನು ಪೊಂದಿದ್ದ (ಶಂಕರ) ಭಟ್ಟೋಪಾಧ್ಯಾಯ ; ತಾಯಿ ಮಲ್ಲಿಕಬ್ಬೆ. ಚಾಲುಕ್ಯ ಚಕ್ರವರ್ತಿ ಜಯಸಿಂಹನು ಇವನನ್ನು ಮೆಚ್ಚಿಕೊಂಡು ಇವನಿಗೆ ಅನೇಕ ಗ್ರಾಮಗಳನ್ನು ಕೊಟ್ಟು ಗೌರವಿಸಿದುದಾಗಿ ತಿಳಿದುಬರುತ್ತದೆ. ಚಾವುಂಡರಾಯನ ವ್ಯಕ್ತಿತ್ವದರ್ಶನ ಅವನ ಒಂದು ಪದ್ಯದಲ್ಲಿ ನಮಗೆ ದೊರೆಯುತ್ತದೆ :

"ಒಡಲಂ ಚಾರುಚರಿತ್ರದೊಳ್, ಧನಮಂ ಇಷ್ಟಾಪೂರ್ತದೊಳ್, ಸತ್ಯಮಂ । ನುಡಿಯೊಳ್, ಸಾಹಸಮಂ ನಿಜೇಶಹಿತದೊಳ್, ಸದ್ಭಕ್ತಿಯಂ ತಂದೆಯೊಳ್, । ಮೃಡನಂ ನಿಶ್ಚಲ ಚಿತ್ತದೊಳ್, ಬೆಸನಂ ಸದ್ಧರ್ಮದೊಳ್ ತಾಳ್ದಿದಂ । ಗಡಂ ಎಂದೆಂದು ಜಗಕ್ಕೆ ನೋಂತವರದಾರ್ ಚಾವುಂಡರಾಯಂಬರಂ".

ಚಾವುಂಡರಾಯ ಸಕಲಶಾಸ್ತ್ರಸಂಪನ್ನನಾಗಿದ್ದುದರಲ್ಲಿ ಸಂದೇಹವೇ ಇಲ್ಲ. 'ವಾಗ್ವಧೂ ಮಂಡನ ಮುಖತಿಲಕ', 'ವಿಬುಧ ಕಲ್ಪವೃಕ್ಷಂ', 'ಬುಧೈಕಾಶ್ರಯ', 'ಜಯಬಂಧು ನಂದನ' ಎಂಬಿವು ಅವನ ಅನೇಕ ಬಿರುದುಗಳಲ್ಲಿ ಕೆಲವು.

'ಲೋಕೋಪಕಾರ' ಸು. 940 ವೃತ್ತಗಳನ್ನೂ ಬಹು ಸಂಖ್ಯೆಯ ಕಂದಪದ್ಯಗಳನ್ನೂ ಹೊಂದಿದ್ದು, ಚಂಪೂ ಪ್ರಕಾರಕ್ಕೆ ಸೇರುತ್ತದೆ. 12 ಅಧಿಕಾರಗಳ ಈ ಗ್ರಂಥದಲ್ಲಿ, ಪಂಚಾಂಗ ಫಲ, ನವಪಟಲ, ವಾಸ್ತು ವಿಚಾರ, ಉತ್ಪಾತ ಶಾಂತಿ, ಉದಕಾರ್ಗಳ (ಜಲಾಶಯ ನಿರ್ಮಾಣ), ವೃಕ್ಷಾಯುರ್ವೇದ, ಸುಗಂಧವಾದ, ಸೂಪಶಾಸ್ತ್ರ, ವೈದ್ಯ, ವಿಷವೈದ್ಯ, ಸರ್ಪಲಕ್ಷಣ ಪರಿಜ್ಞಾನ, ಶಕುನ–ಈ ವಿಷಯಗಳು ನಿರೂಪಿತವಾಗಿವೆ; ಪದ್ಯಗಳಿಗೆ ಟೀಕೆಯಿದೆ. ಗ್ರಂಥದಲ್ಲಿ ಹೇಳಿರುವುದೆಲ್ಲವೂ ಕವಿಯ ದೃಷ್ಟಿಯಲ್ಲಿ ಸರ್ವಜನಹಿತಕಾರಿಯಾದುದು. ಶಕುನ ಕೂಡ 'ಸರ್ವಹಿತ'ವನ್ನು ಉಂಟುಮಾಡತಕ್ಕದ್ದು. ಎಂದಮೇಲೆ ಗ್ರಂಥನಾಮ ಸಾರ್ಥಕವಾಗಿದೆ.

ಈ ಬಗೆಗೆ ಅವನ ಮಾತನ್ನೇ ಆಲಿಸೋಣ : "ಪಲವುಂ ಲೌಕಿಕ ಶಾಸ್ತ್ರಮುಳ್ಳುವರಿಂ ಈ ಲೋಕೋಪಕಾರಂ ಜಗ । ತ್ತಿಲಕಂ; ರಾಜ ಸಮಾಜ ಪೂಜಿತಂ, ತಾತ್ಪರ್ಯದಿಂದಂ ಸ್ವಗೋತ್ರಲಲಾಮಂ, ಕವಿತಾ ವಿಳಾಸ ತನುಜಾತಂ ಪೇಳ್ದನೆಂದಂದು, ಕೇವಲಮಲ್ತು, ಇದು, ಪೊನ್ಗೆ ಕಂಪು ದೊರೆಕೊಂಡಂತಾದುದು ; ಏಂ ಸಾರಮೋ ! " ಲೋಕೋಪಕಾರದಲ್ಲಿ ಅಡಕವಾಗಿ ಹೇಳಿರುವ ವಿಷಯಗಳಲ್ಲಿ ಒಂದೊಂದನ್ನು ಅಧಿಕರಿಸಿ ಶ್ರೀಧರಾಚಾರ್ಯ

('ಜಾತಕ ತಿಲಕ'), ಕೀರ್ತಿವರ್ಮ (ಗೋವೈದ್ಯ), ಜಗದ್ದಳ ಸೋಮನಾಥ (ವೈದ್ಯ ಗ್ರಂಥ : 'ಕಲ್ಯಾಣಕಾರಕ') ಇವರುಗಳು ವಿಸ್ತಾರವಾಗಿ ಪ್ರತಿಪಾದಿಸಿ ಗ್ರಂಥ ರಚನೆ ಮಾಡಿದ್ದಾರೆ. ಇದರಿಂದ 'ಲೋಕೋಪಕಾರ'ದ ಮೇಲ್ಮೆ ಗೊತ್ತಾಗುತ್ತದೆ. ಇನ್ನು, ಗ್ರಂಥದಿಂದ ಕೆಲವು ಸಂಗತಿಗಳನ್ನು ಎತ್ತಿ ಹೇಳಿ, ಅದರ ಸ್ವರೂಪವನ್ನು ಪರಿಚಯ ಮಾಡಿಕೊಡಲಾಗುವುದು.

ಮೂರನೆಯ ಅಧಿಕಾರದಲ್ಲಿ, ಮನೆ ಕಟ್ಟುವ ಬಗೆಗೆ ವಿವರಪೂರ್ಣವಾದ ಸಲಹೆ ಸೂಚನೆಗಳನ್ನು ನೀಡುವ ಪ್ರಸ್ತಾವದಲ್ಲಿ, ಅದಕ್ಕೆ ಉಪಯೋಗಿಸ ಬಾರದ ಮರಗಳನ್ನು ಹೆಸರಿಸಿದ್ದಾನೆ : "ಬೇವಿನ ಪುಣಿಸೆಯ ತಾರೆಯ ಮಾವಿನ ಮುಳ್ಮರನ ಪಾಲ್ಮರಂಗಳ ಸುರಗೀ ಹಾವಳಿಯ ಮರಂ ಕರಂ ಅಶು ಭಾವಹಮಕ್ಕುಂ ; ಗೃಹಕ್ಕೆ ಶಲ್ಯಂಗಳ್." - ಈ ಹಾವಳಿ ಮಾಡುವ ಮರ ಗಳು ಮನೆಹಾಳ ಮರಗಳು !

5ನೆಯ ಅಧಿಕಾರದಲ್ಲಿ, ಬಾವಿ ತೋಡುವಾಗ ಎಲ್ಲಿ ನೀರಿನ ಸೆಲೆ ಇದೆ, ಎಲ್ಲಿ ಇಲ್ಲ, ಎಂಬುದನ್ನು ತಿಳಿಸುತ್ತಾನೆ :

ತುರುಗಿ ತಳಿರ್ತು ಪೂತು ಫಲಮಾದೆಲೆಯಿಕ್ಕಿದ ಕೊಂಬುಗಳ್ ನೆಲ-
ಕ್ಕೊರಗಿದ ನುಣ್ಪುವೆತ್ತ ಮರಂ ಉಳ್ಳೆಡೆಯೊಳ್ ಜಲಮಕ್ಕುಂ ಅಲ್ಲಿಯೆಂ-
ದರಿವುದು ; ತಾರಿದಂಬಿದ ನಳುಂಕಿದ ಕೊಂಬೋಣಗಿರ್ದ ಪೂಟೆಯೆ-
ಳ್ದೊರಗಿದ ವೃಕ್ಷದಿಂದರಿವುದು ಆ ಯೆಡೆಯೊಳ್ ಜಲಮಾಗದೆಂಬುದಂ.

ತಲೆಬುರುಡೆಯನ್ನು ನೋಡಿ ಮನುಷ್ಯನ ಸ್ವಭಾವವನ್ನು ತಿಳಿಯುವ ಅದರ ಲಕ್ಷಣ :

"ಕೊಡೆಯ ಮರ್ಯಾದೆಯಲ್ಲಿ ಮಂಡೆಯುಳ್ಳಾತಂ ಅಲಸನಪ್ಪಂ ; ಕೋಡಗದ ಮಂಡೆಯ ಮರ್ಯಾದೆಯ ಮಂಡೆಯುಳ್ಳಾತಂ ಸುಖಿಯಪ್ಪಂ, ದೊಡ್ಡಿತಪ್ಪ ಮಂಡೆ ಯುಳ್ಳಾತಂ ಚಲಚಿತ್ತನಪ್ಪಂ, ಸಮವಾಗಿರ್ಪ ಮಂಡೆಯುಳ್ಳಾತಂ ವಿದ್ವಾಂಸನಪ್ಪಂ, ಹಾವಿನ ಮರ್ಯಾದೆಯ ಮಂಡೆಯುಳ್ಳಾತಂ ಬಹುಳಮಪ್ಪ ದುಃಖಮನುಳ್ಳಾತನಪ್ಪಂ."

ಆಧುನಿಕ ಜ್ಞಾನ ವಿಜ್ಞಾನಗಳ ತಿಳಿವಳಿಕೆ ಹರಡಿರುವ ಈ ಕಾಲದಲ್ಲಿ ಗ್ರಂಥದಲ್ಲಿ ಹೇಳಿರುವ ವಿಷಯಗಳೆಲ್ಲವೂ ನಮಗೆ ಗ್ರಾಹ್ಯವಾಗದಿರಬಹುದು. ಆದರೆ, ವಿವೇಚನೆಯಿಂದ ಪರಿಶೀಲಿಸಿ ಉಪಯುಕ್ತವಾದ ಅಂಶಗಳನ್ನು ಅರಿತು ಸ್ವೀಕರಿಸುವ ಪಕ್ಷಕ್ಕೆ ಇಂದಿಗೂ ಲೋಕೋಪಕಾರಕವಾಗಬಹುದು ಈ ಕನ್ನಡದ ಪ್ರಥಮ ವಿಶ್ವಕೋಶ, 'ಲೋಕೋಪಕಾರ'.

ಸಿರಿಭೂವಲಯ* : "ಸಿರಿಭೂವಲಯು" ನಾಮಾಂಕಿತವಾದ ಕುಮು ದೇಂದು ಕವಿಯ ಅದ್ಭುತ ಗ್ರಂಥವನ್ನು ಸಂಪಾದಕರಾದ ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯ ಮತ್ತು ಪಂಡಿತ ಎಲ್ಲಪ್ಪ ಶಾಸ್ತ್ರಿಗಳು ಬಹು ಪ್ರಯಾಸಪಟ್ಟು ಬೆಳಕಿಗೆ ತಂದಿರುವರು. ಈ ಮಹಾ ಗ್ರಂಥದ ಪ್ರಥಮ ಭಾಗಕ್ಕೆ ಮುನ್ನುಡಿ ಯನ್ನು ಬರೆದ ಶ್ರೀಕಂಠಯ್ಯನವರು ಸಾಧ್ಯವಾದಮಟ್ಟಿಗೂ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಹೇಳಿ ಈ ಗ್ರಂಥದ ವಿಶ್ವಪ್ರಾಶಸ್ತ್ಯವನ್ನು ಸೂಚಿಸಿರುವರು. ಕೇವಲ ಭಾಷಾ ದೃಷ್ಟಿಯಿಂದ ಈ ಗ್ರಂಥವು ಆಧುನಿಕ ವೆಂದು ತೀರ್ಮಾನಿಸಿದರೆ ಉದ್ಭವಿಸುವ ಅನೇಕ ಸಮಸ್ಯೆಗಳಿಗೆ ಸದುತ್ತರ ಕೊಡುವುದು ದುಸ್ತರವಾದುದರಿಂದಲೂ, ಈ ಗ್ರಂಥವನ್ನು ಅಧ್ಯಯನ ಮಾಡಲು ಕನ್ನಡ ಭಾಷಾ ಶಾಸ್ತ್ರವೇ ಅಲ್ಲದೆ ಜೈನ ಸಿದ್ಧಾಂತ, ಜ್ಯೋತಿಷ, ಆಯುರ್ವೇದ, ರಸಾಯನಶಾಸ್ತ್ರ, ಜೈನಗಣಿತ ಪದ್ಧತಿ, ಪುರಾತತ್ತ್ವಶೋಧನೆ, ಕರ್ನಾಟಕದ ಚರಿತ್ರೆ, ಅನೇಕ ಭಾಷೆಗಳಲ್ಲಿ ಪಾಂಡಿತ್ಯ, ಋಗ್ವೇದ, ರಾಮಾ ಯಣ, ಮಹಾಭಾರತ, ಭಗವದ್ಗೀತೆ ಇತ್ಯಾದಿಗಳ ಸಂಪೂರ್ಣ ಜ್ಞಾನ ಮುಂತಾದುವು ಅತ್ಯವಶ್ಯಕ. ಇಂತಹ ಸರ್ವಜ್ಞತ್ವವಿಲ್ಲದೆ ಈ ಗ್ರಂಥದ ವಿಮರ್ಶೆಗೆ ಕೈಹಾಕಿ ಕೇವಲ ಕುತೂಹಲಜನಕವಾದ, ಮನೋರಂಜನೆಗಾಗಿ ಚಕ್ರಬಂಧ ಸ್ಪರ್ಧೆಗಾಗಿ ರಚಿಸಿದ ಗ್ರಂಥವೆಂದು ತೀರ್ಮಾನಿಸಿದರೆ, ಮಹಾ ಅಪಚಾರವಮಾಡಿದಂತಾಗುವುದು. ಭಾರತೀಯ ಸಂಸ್ಕೃತಿಗೇ ಅಲ್ಲದೆ ವಿಶ್ವ ಸಂಸ್ಕೃತಿಗೂ ಈ ಗ್ರಂಥವು ಪರಮೋಪಕಾರ ಮಾಡುತ್ತದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈಗ ಪ್ರಕಟವಾಗಿರುವ ಭೂವಲಯ ಸಿದ್ಧಾಂತದ ಪ್ರಥಮ ಮತ್ತು ದ್ವಿತೀಯ ಭಾಗದಲ್ಲಿ ಕಂಡುಬರುವ ಕೆಲವು ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.''[19]

ಮೇಲೆ ಉದ್ಧರಿಸಿರುವ ವಾಕ್ಯಗಳನ್ನು ಇತಿಹಾಸ ಪ್ರಾಧ್ಯಾಪಕರೂ ಮಹಾ ವಿದ್ವಾಂಸರೂ ಆದ ದಿವಂಗತ ಎಸ್. ಶ್ರೀಕಂಠ ಶಾಸ್ತ್ರಿಗಳು ಬರೆದಿರುವ "ಕುಮುದೇಂದು ಕವಿಯ 'ಭೂವಲಯ" ಎಂಬ ವಿಚಾರ

---

* ಈ ಅಪೂರ್ವ ಗ್ರಂಥವನ್ನು ನೋಡಲು ಈ ಲೇಖಕನಿಗೆ ಅವಕಾಶವಾಗಲಿಲ್ಲ. ಆದ್ದರಿಂದ, ಅದನ್ನು ಪರಿಶೀಲಿಸಿರುವ ಇತರ ವಿದ್ವಾಂಸರ ವಾಕ್ಯಗಳನ್ನೇ ಉದ್ಧರಿಸಬೇಕಾ ಗಿದೆ, ['ಸಿರಿಭೂವಲಯ' — ಬೆಂಗಳೂರಿನ ಸರ್ವಾರ್ಥ ಸಿದ್ಧಿ ಸಂಘ ; ಭಾಗ 1 (1953) ; ಭಾಗ 2 (1955).]

ಪ್ರಚೋದಕವು ವಿದ್ವತ್ಪೂರ್ಣವೂ ಆದ ಲೇಖನದಿಂದ ಎತ್ತಿಕೊಟ್ಟಿದೆ. ಈ ಲೇಖನದಲ್ಲಿ ಶಾಸ್ತ್ರಿಗಳು ಪ್ರಮುಖವಾಗಿ ಗ್ರಂಥದ ಕಾಲವಿಚಾರವನ್ನು ಮಾತ್ರ ಚರ್ಚಿಸಿ, 'ಸದ್ಯದಮಟ್ಟಿಗೆ' ಎನ್ನಬಹುದಾದ ಅರ್ವಾಚೀನ ಕಾಲದ ಗಡುವನ್ನು ಸೂಚಿಸಿದ್ದಾರೆ. 'ಭೂವಲಯ'ದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷನ ಹಾಗೂ (ನೃಪತುಂಗನ) ಆತನ ಕಾಲದವರಾದ ವೀರಸೇನ, ಜಿನಸೇನ, ಗಂಗ ವಂಶದ ಸೈಗೊಟ್ಟ ಶಿವಮಾರ—ಇವರ ಉಲ್ಲೇಖಗಳಿವೆ. ಈ ಸಂಬಂಧದ ಪದ್ಯಗಳು :

ವರದ ಮಂಗಳದ ಪ್ರಾಭೃತದ ಮಹಾಕಾವ್ಯ । ಸರಣಿಯೊಳ್ ಸಿರಿವೀರಸೇನ ।
ಗುರುಗಳ ಮತಿಜ್ಞಾನದರಿವಿಗೆ ಸಿಲುಕಿಪ । ಅರಹನ್ತ ಕೇವಲ ಜ್ಞಾನ ॥
(9-143)

ಜನಿಸಲು ಸಿರಿವೀರಸೇನರ ಶಿಷ್ಯನ । ಘನವಾದ ಕಾವ್ಯದ ಕಥೆಯ ।
ಜಿನಸೇನ ಗುರುಗಳ ತನುವಿನ ಜನ್ಮದ । ಘನ ಪುಣ್ಯವರ್ಧನ ವಸ್ತು ॥ (145)

ನಾನಾ ಜನಪದವೆಲ್ಲದರೊಳು ಧರ್ಮ । ತಾನು ಕ್ಷೀಣಿಸಿ ಬರ್ಪಾಗ ।
ತಾನಲ್ಲಿ ಮಾನ್ಯಖೇಟದ ದೊರೆ ಜಿನಭಕ್ತ। ತಾನು ಅಮೋಘವರ್ಷಾಂಕ ॥ (146)

ಭೂವಲಯದ ಅದೇ ಪ್ರಕರಣದ 169-172ರ ವರೆಗಿನ ಪದ್ಯಗಳಲ್ಲಿ ‹ಆದಿಮ ಧವಲ', ‹ಎರಡನೆಯ ಜಯ ಧವಲ', 'ಮೂರನೆಯ ಮಹಾಧವಲ', ಇವುಗಳ ಉಲ್ಲೇಖವಾದಮೇಲೆ—

ದೀನತ್ವವಳಿಸುತ ಜನತೆಯ ಪಾಲಿಪ । ಭೂನುತ ವರ್ಧಮಾನಾಂಕ ॥
ಆ ನಮ್ಮ ಜನತೆಯ ಜಯಶೀಲ ಧವಲದ | ಶಾನೆ ಪದವಿಯದು ನಾಲ್ಕು ॥ (70)

ವಶವಾದತಿಶಯ ಧವಲ ಭೂವಲಯದ । ಯಶವಾಗೆ ಐದನೆಯ ಅನ್ಯ ।
ರಸವಿಸ್ಮಯವಾದ ವಿಜಯ ಧವಲ ವಿನ್ತು । ಯಶದ ಭೂವಲಯದ ಭರತ ॥
(171)

ಮಹಿಯ ಗೆಲ್ದಂತದ ವಶಗೆಯ್ದ ರಾಜನು । ವಹಿಸಿದ ದಕ್ಷಿಣ ಭರತ ।
ಸಿಹಿಯ ಖಂಡದ ಕರ್ನಾಟಕ ಚಕ್ರಿಯ । ಮಹಿಯೆ ಮಂಡಲವೆಸರಾಯ್ತು ॥
(172)

ಪ್ರಾಭೃತ ಮಹಾಕಾವ್ಯದ (‹ಷಟ್‌ಖಂಡಾಗಮ') ‹ಅತಿಶಯಧವಲ' ಎಂಬ 5ನೆಯ, ಹಾಗೂ 6ನೆಯ ಟೀಕಾ ಗ್ರಂಥಗಳ ಉಲ್ಲೇಖಗಳು – ಇವು ಅಮೋಘವರ್ಷ ನೃಪತುಂಗನ ಕಾಲಕ್ಕೆ ಸೇರಿದವು ಎಂಬ ಸಂಗತಿಯನ್ನು ತಿಳಿಸುತ್ತವೆ. ಇಷ್ಟರಿಂದ, ಈ ಟೀಕಾ ಗ್ರಂಥಗಳ ರಚನಾಕಾಲಕ್ಕೆ 'ಭೂ

ವಲಯ'ದ ಸಮರ್ಥನೆಯೂ ದೊರಕುತ್ತದೆಯೇ ಹೊರತು, ಶ್ರೀಕಂಠ ಶಾಸ್ತ್ರಿಗಳು ಹೇಳುವ ಹಾಗೆ—"ಜಿನಸೇನನ ಜಯಧವಳ (ಕ್ರಿ.ಶ. 837), ಅನಂತರ ಅಮೋಘವರ್ಷನ ಅಂತ್ಯ (ಕ್ರಿ.ಶ. 877)ಕ್ಕೆ ಮತ್ತು ಕ್ರಿ.ಶ. 866ರ ನೀಲಗುಂದ ಸಿರೂರು ಶಾಸನಗಳಿಗೆ ಮುಂಚೆ ನೃಪತುಂಗನಿಗೆ ಅತಿಶಯ ಧವಳ ಎಂಬ ಬಿರುದು ಬಂದು ಈ ಅಂತರದಲ್ಲಿ ಕುಮುದೇಂದುವಿನ 'ಭೂವಲಯ' ಮತ್ತು 'ಕವಿರಾಜಮಾರ್ಗ'* ರಚಿತವಾಗಿರಬೇಕು," ಎಂದೂ (ಪು. 570), ಕುಮುದೇಂದುವಿನ ಗ್ರಂಥ ಜಿನಸೇನನ ಧವಳಾ ಟೀಕೆಯ ರಚನಾನಂತರ (ಕ್ರಿ.ಶ. 837), ಆದಿ ಪುರಾಣವೂ ಪ್ರಚಾರಕ್ಕೆ ಬಂದಮೇಲೆ ಬಂಕೇಶನ ತಲಕಾಡು ದಿಗ್ವಿಜಯಕ್ಕೆ ಮುಂಚೆ ಸೈಗೊಟ್ಟ ಶಿವಮಾರನು ಇನ್ನೂ ಜೀವಿಸಿದ್ದಾಗ (ಸುಮಾರು ಕ್ರಿ.ಶ. 850ರಲ್ಲಿ ?) ರಚಿತವಾಗಿರಬೇಕು" ಎಂದೂ (ಪು. 574) ಅಭಿಪ್ರಾಯಪಟ್ಟಿರುವುದು ಸ್ವಲ್ಪ ಆಶ್ಚರ್ಯಕರವಾಗಿಯೇ ಕಾಣುತ್ತದೆ. ಕುಮುದೇಂದು ತನ್ನ ಗುರುಪರಂಪರೆಯನ್ನು ಹೇಳುವಾಗ 'ಸ್ವಸ್ತಿಶ್ರೀಮದ್ರಾಯ ರಾಜಗುರು ಭೂಮಂಡಲಾಚಾರ್ಯ' ಎಂದು ಉಲ್ಲೇಖಿಸಿರುವುದನ್ನು ಪ್ರಸ್ತಾಪಿಸಿ, "ರಾಯರಾಜಗುರು ಎಂಬ ಬಿರುದು 13ನೆಯ ಶತಾಬ್ದಕ್ಕೆ ಹಿಂದೆ ಶಾಸನಗಳಲ್ಲಿ ಕಂಡುಬರುವುದಿಲ್ಲ" ಎಂದು ಶಾಸ್ತ್ರಿಗಳು ತಿಳಿಸಿರುವುದರಿಂದ (ಲೇಖನದ ಪು. 575), 'ಭೂವಲಯ'ದ ರಚನಾಕಾಲವನ್ನು ಅವರೇ 13ನೆಯ ಶತಕದ ಈಚೆಗೆ ಎಳೆದಂತಾಗಿದೆ. ಕುಮುದೇಂದು ಆತ್ಮಕಥೆಯನ್ನು ಹೇಳುವಾಗ ಅನೇಕ ಜೈನ ತೀರ್ಥಕ್ಷೇತ್ರಗಳನ್ನು ಹೆಸರಿಸಿರುವುದನ್ನು ಉಲ್ಲೇಖಿಸಿ, "ಇವುಗಳಲ್ಲಿ ಪೆನುಗೊಂಡೆ ಮತ್ತು ಗೇರುಸೊಪ್ಪೆ ಹೊಯ್ಸಳ ವಿಜಯನಗರ ಕಾಲದಲ್ಲಿ ಪ್ರಖ್ಯಾತವಾದವು" (ಎಂದರೆ ಸು. 12 - 16ನೆಯ ಶತಕಗಳ ಕಾಲ) ಎಂದು ಹೇಳಿರುವುದೂ ಗಮನಾರ್ಹ. (ಪು. 587).

'ಭೂವಲಯ'ದಲ್ಲಿ 'ಕವಿಜಿಹ್ವಾಬಂಧನ'ದ ಉಲ್ಲೇಖವಿದೆ. ಇದರ ಕರ್ತೃ ಈಶ್ವರ ಕವಿಯ ಕಾಲ ಸು. 1500. "ಕುಮುದೇಂದು ಹೇಳುವ

* ಕವಿರಾಜಮಾರ್ಗ, 866-877, ಈ ನಡುವೆ ರಚಿತವಾಗಿರಬಹುದು. ಎಂಬ ಅಭಿಪ್ರಾಯ ಒಪ್ಪತಕ್ಕದ್ದು. ನೃಪತುಂಗನಿಗೆ 'ವೀರನಾರಾಯಣ' ಎಂಬ ಬಿರುದೂ ಇದ್ದಿತಷ್ಟೆ. ಇದು ಅವನಿಗೆ ಸು. 865ರ ಸಮೀಪದಲ್ಲಿ ಸಂದಿರಬಹುದು. ಈ ಸಂಗತಿ. ಕವಿರಾಜಮಾರ್ಗದ ಅಂತರಿಕ ಪ್ರಮಾಣಗಳು ಮತ್ತು ಇವಕ್ಕೆ ಪೋಷಣೆ ನೀಡುವ ಸಂಜಾನ ಶಾಸನ (861)—ಇವುಗಳ ಆಧಾರದ ಮೇಲೆ, ಕವಿರಾಜಮಾರ್ಗ ಸು. 870ರ ಹತ್ತಿರದಲ್ಲಿ ರಚಿತವಾಗಿದೆ ಎಂದು ಈ ಲೇಖಕನು ತೀರ್ಮಾನಿಸಿದ್ದಾನೆ. ಈ ಕಾಲವನ್ನು 860ಕ್ಕಿಂತ ಹಿಂದೆ ಹಾಕುವುದು ಆಧಾರರಹಿತವಾಗುತ್ತದೆ.

ಕವಿಜಿಹ್ವಾಬಂಧನಕ್ಕೂ ಹದಿನೈದನೆಯ ಶತಾಬ್ದದ ಈಶ್ವರ ಕವಿಯ ಅದೇ ಹೆಸರಿನ ಗ್ರಂಥಕ್ಕೂ ಯಾವ ಸಂಬಂಧವೂ ಕಂಡುಬರುವುದಿಲ್ಲ'' ಎಂದು ಶಾಸ್ತ್ರಿಗಳು ಹೇಳುವರಾದರೂ (ಪು. 586). ಈ ಹೆಸರಿನ ಗ್ರಂಥ ಬೇರೆ ಯಾವುದೂ ಇಲ್ಲವಾಗಿ, ಕುಮುದೇಂದುವಿನ ಗಮನದಲ್ಲಿ ಈಶ್ವರ ಕವಿಯ ಗ್ರಂಥವೇ ಇದ್ದಿರಬೇಕು ಎಂಬ ಅನುಮಾನವಾಗುತ್ತದೆ.

ಈಗ ಸಿಕ್ಕಿರುವ 'ಭೂವಲಯ'ದ ಹಸ್ತಪ್ರತಿ ಅರ್ವಾಚೀನವಾದ ಕಾಗದದ ಪ್ರತಿ. ಇದರಲ್ಲಿ ಇದು ಲಿಖಿತವಾದ ಕಾಲವನ್ನು ಹೇಳಿಲ್ಲ. ಭೂವಲಯದಲ್ಲಿ ಕಂಡುಬರುವ ಮಲ್ಲಿಕಬ್ಬೆಯ ಪ್ರಶಸ್ತಿಯ ಬಗೆಗೆ ಚರ್ಚಿಸಿ, "ಈ ಪ್ರಶಸ್ತಿ ಮೂಡಬಿದ್ರಿಯ 'ಮಹಾಬಂಧ'ದ ಪ್ರತಿಯಿಂದ ತೆಗೆದುಕೊಂಡು ಸೇರಿಸಿರಬೇಕು. ಇದರಲ್ಲಿ ಭೂವಲಯದ ಪ್ರತಿಯನ್ನು ದಾನ ಮಾಡಿದಂತೆ ಹೇಳಿಲ್ಲ" ಎಂದು ತಿಳಿಸಿ, ಈ ಮಹಾಬಂಧದ ಪ್ರತಿಯ ಕಾಲ ಸು. 1116, 1136 ಎಂದು ತೀರ್ಮಾನಿಸಿ, ಮಹಾಬಂಧದ ಮಲ್ಲಿಕಬ್ಬೆಯ ಪ್ರಶಸ್ತಿ ಭೂವಲಯಕ್ಕೂ ಅನ್ವಯಿಸುತ್ತದೆ ಎಂದಿದ್ದಾರೆ; ಮತ್ತು. "ಇಂದ್ರನಂದಿ (ಕ್ರಿ.ಶ. 930) ಮತ್ತು ಕ್ರಿ.ಶ. 1120 ರೊಳಗಾಗಿ ಭೂವಲಯ ರಚಿತವಾಗಿರಬೇಕು'' ಎಂದೂ ಹೇಳುತ್ತಾರೆ.

ಹೀಗೆ, ಕಾಲ ನಿರ್ಣಯ ವಿಚಾರದಲ್ಲಿ ಡಾ॥ ಶ್ರೀಕಂಠಶಾಸ್ತ್ರಿಗಳ ಮೇಲ್ಕಂಡ ಹೇಳಿಕೆಗಳಲ್ಲಿ ಒಂದಕ್ಕೊಂದಕ್ಕೆ ಹೊಂದಿಕೆಯೇ ಇಲ್ಲವಾದ್ದರಿಂದ ಅವರ ನಿಲವು ಖಚಿತವಾಗಿಲ್ಲ ಎನ್ನಬೇಕಾಗುತ್ತದೆ.

ಯಾವುದೇ ಕೃತಿಯಲ್ಲಿ ಭಾಷಾ ಪ್ರಯೋಗಗಳ ಆಂತರಿಕ ಪ್ರಮಾಣಗಳನ್ನು ಅಲ್ಲಗಳೆಯುವಂತಿಲ್ಲ. ಮೇಲೆ ಉದ್ಧರಿಸಿರುವ 170 ನೆಯ ಪದ್ಯದಲ್ಲಿನ 'ಶಾನೆ' (ಬಹಳ, ತುಂಬ, ಅನೇಕ, ಎಂಬ ಅರ್ಥಗಳ, ಸಾಕಷ್ಟು ಅರ್ವಾಚೀನವೆನ್ನಬಹುದಾದ, ಮೈಸೂರು ಪ್ರಾಂತದ) ಪದಪ್ರಯೋಗ; ಇತರ ನಡುಗನ್ನಡ, ಹೊಸಗನ್ನಡ ಪ್ರಯೋಗಗಳು,–ಇವು ಭೂವಲಯದ ಕಾಲವನ್ನು 11 – 12 ಶತಕಗಳಷ್ಟು ಪ್ರಾಚೀನ ಎನ್ನುವುದಕ್ಕೆ ತೀರ ವಿರುದ್ಧ ಸಾಕ್ಷ್ಯಗಳಾಗುತ್ತವೆ.

ಈಗ ನಮಗೆ ತಿಳಿದುಬಂದಿರುವಮಟ್ಟಿಗೆ ದೇವರಾಜನ 'ಸೊಬಗಿನ ಸೋನೆ'ಯೆ (ಕ್ರಿ. ಶ. 1410) ಪ್ರಥಮ ಸಾಂಗತ್ಯ ಗ್ರಂಥ. ಶಿಶುಮಾಯಣನ

‘ತ್ರಿಪುರದಹನ ಸಾಂಗತ್ಯ’ವನ್ನೇ ಮೊದಲ ಕೃತಿ ಎಂದು ಭಾವಿಸಿ, ಕವಿಚರಿತೆಕಾರರು ಇದಕ್ಕೆ ಕೊಟ್ಟಿರುವ ಕಾಲವನ್ನು (ಕ್ರಿ. ಶ. 1232) ನಿಶ್ಚಿತ ಎಂದುಕೊಂಡರೂ, ಸಾಂಗತ್ಯದ ಛಂದಸ್ಸಿನ ಕೃತಿಯಾದ ‘ಭೂವಲಯ’ವನ್ನು 12ನೆಯ ಶತಮಾನಕ್ಕಿಂತ ಹಿಂದಕ್ಕೆ ಒಯ್ಯಲಾಗದು. ಇನ್ನೂ ಈಚಿನದು (14–15 ಶತಕಕ್ಕೆ ಸೇರಿದ್ದು) ಎಂದರೂ ತಡೆಯುತ್ತದೆ.

ಸಾಹಿತ್ಯ ಚರಿತ್ರೆಯಲ್ಲಿ ಕೃತಿಯ ಕಾಲ ನಿರ್ಣಯವೂ ಮುಖ್ಯವಾದ್ದರಿಂದ ಇಷ್ಟು ಬೆಳಸಬೇಕಾಯಿತು. ಸಾಮಗ್ರಿಯ ಅಭಾವದಿಂದ ಕೃತಿಯ ಪರಿಚಯ ಮಾಡಿಕೊಡಲು ಸಾಧ್ಯವಿಲ್ಲವಾಗಿದೆ.

ಅಭಿಲಷಿತಾರ್ಥ ಚಿಂತಾಮಣಿ (ಅಥವಾ ‘ಮಾನಸೋಲ್ಲಾಸ’): ಇದರ ಕರ್ತೃ ಕಲ್ಯಾಣದ ಚಾಲುಕ್ಯವಂಶದ ಮೂರನೆಯ ಸೋಮೇಶ್ವರ (ಕ್ರಿ. ಶ. 1126–1139). ಈತ ಈ ಗ್ರಂಥವನ್ನು 1129ರಲ್ಲಿ ರಚಿಸಿದನು. ಈ ಗ್ರಂಥವನ್ನು ಬರೆದದ್ದರಿಂದ ಅವನಿಗೆ ‘ಸರ್ವಜ್ಞ ಚಕ್ರವರ್ತಿ’ ಎಂಬ ಬಿರುದು ಬಂದಂತೆ ಕಾಣುತ್ತದೆ. ಆ ಕಾಲದಲ್ಲಿ ರೂಢಿಯಲ್ಲಿದ್ದ ಶಾಸ್ತ್ರಗಳ ಮತ್ತು ಕಲೆಗಳ ಬಗೆಗೆ ಅನೇಕ ಉಪಯುಕ್ತ ವಿಚಾರಾಂಶಗಳ ಒಂದು ಬೃಹತ್‌ಕೋಶ ಈ ಗ್ರಂಥ. ಗ್ರಂಥದಲ್ಲಿಯೇ ‘ಕಾಮಧೇನುರಿದಂ ಶಾಸ್ತ್ರಂ’ ಎಂಬ ಮಾತಿದೆ. ‘ಮಾನಸೋಲ್ಲಾಸಂ ಶಾಸ್ತ್ರಂ ವಿಶ್ವೋಪಕಾರಕಂ’ ಎಂಬ ಸೋಮೇಶ್ವರನ ಇನ್ನೊಂದು ಮಾತು ‘ಲೋಕೋಪಕಾರ’ವನ್ನು ನೆನಪಿಗೆ ತರುತ್ತದೆ. ಗ್ರಂಥದ ಹೆಸರಾದರೂ ಅರ್ಥಪೂರ್ಣವಾಗಿಯೇ ಇದೆ: ‘ಬಯಸಿದ ಪ್ರಯೋಜನವನ್ನು ದೊರಕಿಸಿಕೊಡುವ ಚಿಂತಾಮಣಿ’, ‘ಮನಸ್ಸಿಗೆ ಉಲ್ಲಾಸ ನೀಡುವ ಗ್ರಂಥ’. ತಿಳಿವಳಿಕೆ, ರಂಜನೆ–ಎರಡೂ ಇದರ ಗುರಿ. ಈ ಕೃತಿ ಸಂಸ್ಕೃತ ಭಾಷೆಯಲ್ಲಿದ್ದರೂ ಭಾರತಕ್ಕೆ, ವಿಶ್ವಕ್ಕೆ, ಕನ್ನಡ ಚಕ್ರವರ್ತಿಯ, ಕನ್ನಡ ನಾಡಿನ, ಕಾಣಿಕೆ ಎಂಬ ಕಾರಣದಿಂದಲಾದರೂ ಕನ್ನಡಿಗರು ಅತ್ಯವಶ್ಯವಾಗಿ ಗಮನಿಸಬೇಕಾದ, ಸಾಧ್ಯವಾದರೆ ಪರಿಚಯಮಾಡಿಕೊಳ್ಳಬೇಕಾದ, ಅಪೂರ್ವ ಗ್ರಂಥ. ನಿಜಗುಣರ ‘ವಿವೇಕ ಚಿಂತಾಮಣಿ’ಗೆ ಸ್ಫೂರ್ತಿಕೊಟ್ಟಿರಬಹುದಾದ (?) ಗ್ರಂಥ.

ಈ ಗ್ರಂಥದ 100 ಅಧ್ಯಾಯಗಳಲ್ಲಿರುವ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಅರ್ಥಶಾಸ್ತ್ರ ಮುಂತಾದ 100 ವಿಷಯಗಳನ್ನು ಕುರಿತ ವಸ್ತುನಿರೂಪಣೆಯಲ್ಲಿ ಸಮಕಾಲೀನ ಕರ್ನಾಟಕ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಮೇಲೆ ಬೆಳಕು ಚೆಲ್ಲುವ ಅಧಿಕಾರವಾಣಿ ಕೇಳಬರುತ್ತದೆ. ಕನ್ನಡ ಶಾಸ್ತ್ರ

ಸಾಹಿತ್ಯವನ್ನು ಕುರಿತ ನಮ್ಮ ಈ ಗ್ರಂಥದ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳ ಭಾಗ ಎಂದರೆ, ಕನ್ನಡ ಛಂದಸ್ಸಿನ ತ್ರಿಪದಿ, ಷಟ್ಪದಿ, ಕಂದಪದ್ಯ, ಪದ್ದಲೀ (ಪದ್ಧಡೀ), ಓವೀ, ಧವಳದ ಹಾಡು–ಎಂಬ ಛಂದಸ್ಸಿನ ಪ್ರಕಾರಗಳ ವಿಷಯ, ಇವುಗಳ ‹ವಿನಿಯೋಗ'ದ ಬಗೆಗೆ ಸೋಮೇಶ್ವರನು ನೀಡುವ ನಿರ್ದೇಶಗಳು, ಇವನ್ನು ಉಳ್ಳ ಭಾಗ. ಇವುಗಳ ಸಾರಾಂಶ ಇಷ್ಟು : "ತ್ರಿಪದಿಯನ್ನು ಧಾನ್ಯವನ್ನು ಒರಳಲ್ಲಿ ಹಾಕಿ ಕುಟ್ಟುವಾಗಲೂ (=ಕಂಡನ), ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಾಗಲೂ ಹಾಡಬೇಕು, ಕಥನ ಕಾವ್ಯದಲ್ಲಿ ಷಟ್ಪದಿಯನ್ನು ಬಳಸಬೇಕು, ವಿವಾಹ ಕಾಲದಲ್ಲಿ ಧವಲವನ್ನು ಆಲಾಪಿಸಬೇಕು, ಮಂಗಲ ಗೀತವನ್ನು ಉತ್ಸವ ಕಾಲದಲ್ಲಿ ಉಪಯೋಗಿಸಬೇಕು, ಮಹಾರಾಷ್ಟ್ರದ ಸ್ತ್ರೀಯರು ಒನಕೆವಾಡಾಗಿ ಓವಿಯನ್ನು ಉಪಯೋಗಿಸುತ್ತಾರೆ..." ಎಂದು ಮುಂತಾಗಿ, "ಇಂಥ ಛಂದಸ್ಸನ್ನು ಇಂಥ ಕೆಲಸಕ್ಕೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಹೊಸ ತಿಳಿವಳಿಕೆಯನ್ನು ನೀಡುತ್ತವೆ".[20] ಗಂಗರಸ ಸೈಗೊಟ್ಟ ಶಿವಮಾರನ ಕವಿತಾಗುಣವನ್ನು (ಕ್ರಿ. ಶ. ಸು. 800) ಹೊಗಳುವ ಒಂದು ಶಾಸನ ಪದ್ಯದಲ್ಲಿ, ಅವನ 'ಗಜಾಷ್ಟಕ' 'ಓವನಿಗೆಯುಂ ಒನಕೆವಾಡುಂ ಅದುದು' ಎಂದು ಹೇಳಿದೆ. ಮಾನಸೋಲ್ಲಾಸದಲ್ಲಿ ಹೇಳಿರುವ ಒನಕೆವಾಡಾದ 'ಓವೀ' ಎಂಬ ರಚನೆ ಈ 'ಓವನಿಗೆ'ಯೇ ಇರಬೇಕು ; ಇದು ತ್ರಿಪದಿ ಛಂದಸ್ಸಿನಲ್ಲಿ ಇದ್ದಿರಬಹುದು.

ವಿವೇಕಚಿಂತಾಮಣಿ : ಸಾಹಿತ್ಯದ ರಸವಂತಿಕೆ, ಕಲೆಯ ಚೆಲುವಿಕೆ, ಸರ್ವಧರ್ಮ ಸಮನ್ವಯ ದೃಷ್ಟಿ, ಯೋಗದ ಅನುಭಾವ, ಬಹುಶ್ರುತನಾದ ಮೇಧಾವಿಯ ಸರ್ವಜ್ಞತ್ವ, ದೈವಭಕ್ತಿ, ಲೋಕೋಪಕಾರ ನಿಷ್ಠೆ–ಇವೆಲ್ಲ ಗುಣಗಳೂ ನಿಜವಾಗಿ ಒಬ್ಬ ವ್ಯಕ್ತಿಯಲ್ಲಿ ಮೈಗೂಡಿ ಬೆಳಗುವುದು ತುಂಬ ವಿರಳ. ಈ ಗುಣಗಣವನ್ನು ನಿಜವಾಗಿಸಿಕೊಂಡ ಮಹಾ ವ್ಯಕ್ತಿ ನಿಜಗುಣ ಶಿವಯೋಗಿ. "ನಿಜಗುಣ ಶಿವಯೋಗಿ ಕನ್ನಡನಾಡಿನ ಅದ್ಭುತ ವ್ಯಕ್ತಿಗಳಲ್ಲಿ ಒಬ್ಬನು. ಅಗಾಧ ವಿದ್ವತ್ತೆಯಿಂದಲೂ ದೀರ್ಘ ತಪಶ್ಚರ್ಯೆಯಿಂದಲೂ ಜ್ಞಾನದ ತುತ್ತತುದಿಯನ್ನೇರಿ ಕೆಳಗಿಳಿದು ಬಂದು ತರತರದ ಗದ್ಯಪದ್ಯದಲ್ಲಿ ಕನ್ನಡ ಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟವನು...ನಿಜಗುಣದಲ್ಲಿ ಎಂದರೆ ಆತ್ಮಸ್ವರೂಪದಲ್ಲಿ ನೆಲೆನಿಂತ ಶಿವಯೋಗಿ".[21] ಷಡಕ್ಷರದೇವ ಮುಂತಾದ ವೀರಶೈವ ಕವಿಗಳು ಇವರನ್ನು ಹೊಗಳಿರುವುದರಿಂದಲೂ, ತಮ್ಮ ಗ್ರಂಥಗಳಲ್ಲಿ

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿರುವುದರಿಂದಲೂ ನಿಜಗುಣರು ವೀರಶೈವರೆಂಬ ಬಗೆಗೆ ಸಂದೇಹವಿಲ್ಲ. ನಿಜಗುಣರನ್ನು ಶುದ್ಧಾದ್ವೈತಿ ಎಂದು ಬಲವಾಗಿ ಸಾಧಿಸಲು 'ವಿವೇಕ ಚಿಂತಾಮಣಿ'ಯಲ್ಲಿ ಅದ್ವೈತ ವೇದಾಂತ ಪರವಾದ ಹೇಳಿಕೆಗಳನ್ನು ಮೊತ್ತಮೊದಲಿಗೆ ಮುದ್ರಿತವಾದ ಪ್ರತಿಯಲ್ಲಿ* ಒಬ್ಬರು ವಿದ್ವಾಂಸರು ಸೇರಿಸಿರುವರೆಂಬ ಈಚಿನ ಸಂಶೋಧನೆಯ ತೀರ್ಮಾನವನ್ನು ಒಪ್ಪಿಕೊಂಡರೂ, 'ಇಂತುಪಾಧಿಗೆ ಸತ್ಯ। ವೆಂತು ಘಟಿಸುವುದು ವೇ।ದಾಂತ ಮತದಲ್ಲಿ ಪೇಟ್ಟಿಂತೆ ಸರ್ಪಮಂ। ಭ್ರಾಂತಿಮಯವೆಂದು ತಿಳಿ ಪುತ್ರ' ('ಅನುಭವಸಾರ'), 'ಅದ್ವೈತತತ್ವವನು ಪ್ರಕಟಿಸುವೆನು ಬೋಧಗತಿಯಿಂದ' ಎಂಬಂಥ ಕವಿಯ ನಿಸ್ಸಂದಿಗ್ಧವಾದ ಹಲವು ಹೇಳಿಕೆಗಳಿಂದಲೇ ನಿಜಗುಣರು ವೀರಶೈವನಿಷ್ಠರಾದರೂ ಅದ್ವೈತತತ್ತ್ವದಲ್ಲಿ ಅಚಲವಾದ ಶ್ರದ್ಧೆಯುಳ್ಳವರು ಎಂಬುದು ಸ್ವಯಂವೇದ್ಯ.

ನಿಜಗುಣರ ಜೀವನ ವೃತ್ತಾಂತದ ವಿವರಗಳು ಖಚಿತವಾಗಿ ತಿಳಿದು ಬಂದಿಲ್ಲ. ಅವರು ಮೈಸೂರಿಗೆ ದಕ್ಷಿಣದಲ್ಲಿರುವ ಕೊಳ್ಳೇಗಾಲದ ಬಳಿಯಿರುವ ಶಂಭುಲಿಂಗನ ಬೆಟ್ಟದ ಸುತ್ತಮುತ್ತಿನ ನಾಡಿಗೆ ಅರಸರಾಗಿದ್ದು ಬಳಿಕ ವೈರಾಗ್ಯ ಹೊಂದಿ, ಆ ಬೆಟ್ಟದಲ್ಲಿಯೇ ತಪಸ್ಸುಮಾಡಿ, ಶಿವಯೋಗ ಸಮಾಧಿಯಲ್ಲಿ ನೆಲಸಿ, ಶಿವೈಕ್ಯರಾದರೆಂದು ಪ್ರವಾದವಿದೆ. ಇವರ ಕೃತಿಗಳಲ್ಲಿ 'ಶಂಭುಲಿಂಗನ' ಅಂಕಿತವಿರುವುದರಿಂದಲೂ, ಕೃತಿಗಳಲ್ಲಿಯೇ ಕವಿ ತಮ್ಮ ವಿಷಯವಾಗಿ ಹೇಳಿಕೊಂಡಿರುವ ಸಂಗತಿಗಳಿಂದಲೂ ಈ ಪ್ರವಾದಗಳಿಗೆ ಬೆಂಬಲ ದೊರೆಯುತ್ತದೆ. ನಿಜಗುಣಯೋಗಿ ಯಾವ ನಾಡಿಗೆ ಅರಸರಾಗಿದ್ದರು, ಅವರ ವಂಶ ಯಾವುದು, ಎಷ್ಟು ಕಾಲ ರಾಜ್ಯವಾಳಿದರು, ವಿರಕ್ತರಾದದ್ದಕ್ಕೆ ಕಾರಣವೇನು, ಎಂಬಿವೇ ಮುಂತಾದ ಅವರ ಜೀವನ ಚರಿತ್ರೆಯ ಘಟ್ಟಗಳನ್ನು ಗುರುತಿಸಿ ತಿಳಿಯಹೇಳಲು ಸ್ಪಷ್ಟವಾದ ಶಾಸನ ಮುಂತಾದ ಚಾರಿತ್ರಿಕ ಆಧಾರಗಳು ಇಲ್ಲ. ಆದರೆ, ಕವಿಯ ಮಾತಿನಲ್ಲಿ, ಅದರಲ್ಲಿಯೂ ಯೋಗಿಯಾದ ಕವಿಯ ಪ್ರಾಮಾಣಿಕ ವಚನದಲ್ಲಿ ವಿಶ್ವಾಸವಿಡದಿರಲು ಕಾರಣವಿಲ್ಲ. 'ಕೈವಲ್ಯ ಪದ್ಧತಿ'ಯ ಒಂದು ಹಾಡಿನಲ್ಲಿ–

---

* ಬೆಂಗಳೂರು ಸಿದ್ಧಾಂತಿ ಸುಬ್ರಮಣ್ಯ ಶಾಸ್ತ್ರಿಗಳಿಂದ 'ಸಂಪ್ರದಾಯ ಶುದ್ಧವಾಗಿ' ಪರಿಶೋಧಿತವಾಗಿ, ಬೆಂಗಳೂರು ವಿಚಾರ ದರ್ಪಣ ಮುದ್ರಾಕ್ಷರ ಶಾಲೆಯಲ್ಲಿ 1863 ರಲ್ಲಿ ಮುದ್ರಿತವಾದ ಪ್ರತಿ.

"ಪರವಿದ್ಯೆಯೆಂಬ ಕಮಲ'ವನಿತೆ'ಯುಂಟು, ಅಗಲದ ಪರಿತೋಷವೆಂಬ 'ಮೋಹದ ಅಣುಗ' ನುಂಟು, ವಿರತಿಯೆಂಬ ಅನುಕೂಲ 'ಜನ' ಮುಂಟು, ಕ್ಷಮೆಯೆಂಬ 'ಚರ'ನುಂಟು, ಶಾಂತಿಯೆಂಬ 'ಸಖಿಸ ಸರಸ' ಮುಂಟು ‖ ನುತ ಭಕ್ತಿಯೆಂಬ 'ಮಾತೆ'ಯುಂಟು, ಸುಚರಿತ್ರ ವೆಂಬ 'ಪಿತ'ನುಂಟು, ಸತ್ಯವೆಂಬ 'ಕುವರಿ'ಯುಂಟು, ಹಿತವಾದ ನಂಬುಗೆಯೆಂಬ 'ಆತ್ಮ-ಜನರಸಿ'ಯುಂಟು, ಮತಿಯೆಂಬ '[ಗೇ?]ಹ'ಮುಂಟು, ವಿಚಾರವೆಂಬ 'ಕ್ಷೇತ್ರ' ಮುಂಟು‖ 'ದಾಸಿಯುಂಟು ಹಿಂಸೆಯೆಂಬ, ದಾಸನುಂಟು ಅಸ್ತೇಯುವೆಂಬ, ಲೇಸನೀವ ಧರ್ಮವೆಂಬ 'ವಾಹನ'ಮುಂಟು ಭಾಸುರಮೈತ್ರಾದಿಯೆಂಬ 'ಪೌತ್ರ'ರುಂಟು, ಮುಕ್ತಿಯೆಂಬ 'ದೇಶ' ಮುಂಟು, ಶಂಭುಲಿಂಗವೆಂಬ 'ಗುರು'ತನಗುಂಟು‖"

— ಎಂದು, ಅವರು ಅರಸರಾಗಿದ್ದ ಕಾಲದಲ್ಲಿ ತಮ್ಮೊಡನಿದ್ದ ಅರಸಿ, ದೇಶ, ಜನ (ಪ್ರಜೆ), ಗೇಹ (ಅರಮನೆ), ಮಗ ಸೊಸೆ ಮೊಮ್ಮಕ್ಕಳು, ದಾಸ ದಾಸೀ ಜನ ಮುಂತಾದ ಪರಿವಾರ, ಮುಂತಾದುವನ್ನು ತೊರೆದದ್ದಕ್ಕೆ ವಿಷಾದಪಡದೆ, ಅವುಗಳಿಗಿಂತ ಅತಿಶಯುವಾದ ಭೋಗ ಭಾಗ್ಯಗಳು ತಮಗೆ ಈಗ ಉಂಟು ಎನ್ನುವುದರ ಮೂಲಕ ನಿಜಗುಣರು ತಮ್ಮ ಪೂರ್ವ ಚರಿತ್ರೆಯನ್ನೇ ಸ್ಪಷ್ಟವಾಗಿ ಸೂಚಿಸಿದ್ದಾರೆ.

ಪರಂಪರಾನುಗತವಾಗಿ ಸಾಗಿ ಬಂದು ಜನಮನದಲ್ಲಿ ಸ್ಥಿರವಾಗಿ ನೆಲಸಿ ಬಲ್ಲವರ ಬಾಯಿಂದ ಹೊರಬಂದ ಹೇಳಿಕೆಗಳನ್ನು ಅವಲಂಬಿಸಿ, ನಿಜಗುಣರ ಜೀವನ ಚರಿತ್ರಾಂಶಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು :

"(1) ಶ್ರೀನಿಜಗುಣರು ಅವತಾರಿಪುರುಷರು ; (2) ಕೊಳ್ಳೇಗಾಲ ಪ್ರಾಂತದ ಕಿರುನಾಡಿನ ಅರಸರಾಗಿದ್ದರು ; (3) ಅರಮನೆಯಲ್ಲಿ ಜಂಗಮರ ಅನಾದರ ಕಂಡು ವೈರಾಗ್ಯ ತಾಳಿದರು ; (4) ಸ್ವಾದಿಯ ರಾಜ್ಯದಲ್ಲಿ ಗುರುವಿನಿಂದ ದೀಕ್ಷೆ ಪಡೆದರು ; (5) ಗುರುವಿನ ಕರುಣೆಪಡೆದು ಶಂಭುಲಿಂಗನ ಬೆಟ್ಟದಲ್ಲಿ ಶಿವಯೋಗಾನುಷ್ಠಾನ ಮಾಡಿದರು ; (6) ದೇಶಾಟನೆ ಮಾಡಿ ಅನೇಕ ಪವಾಡಗಳನ್ನು ತೋರಿ ಭಕ್ತರನ್ನು ಉದ್ಧರಿಸಿದರು, ಜನತೆಗೆ ಸತ್ಯದ ದಾರಿ ತೋರಿದರು ; (7) ಬಾಹ್ಯಪೂಜೆಗಿಂತಲೂ ಮಿಗಿಲಾಗಿ ಅಭ್ಯಂತರ ಲಿಂಗಾನುಸಂಧಾನ ಮಾಡಿ ಶಿವಯೋಗಾರೂಢರಾದರು ; (8) ಹಠಯೋಗ ಸಾಧನೆಯಿಂದ ಅನೇಕ ಯೋಗ ಸಿದ್ಧಿಗಳನ್ನು ಪಡೆದರು ; (9) ಅನನ್ಯ ನಿಷ್ಠೆಯ ಸೇವೆಯಿಂದ ಗುರುವಿನ ಅನುಗ್ರಹ ಪಡೆದರು ; (10) ಸಕಲಾಗಮ ಪುರಾಣೇತಿಹಾಸಗಳನ್ನು ಆದ್ಯಂತವಾಗಿ ಅಭ್ಯಾಸಿಸಿ ಸ್ವಾಧ್ಯಾಯ-ಮನನಗಳಿಂದ ಪಾಂಡಿತ್ಯವನ್ನು ಪಡೆದರು ; (11) ಸಂಸ್ಕೃತದಲ್ಲಿಯ ತತ್ತ್ವಶಾಸ್ತ್ರಗಳ ಸಾರವನ್ನೇ ಅಚ್ಚಗನ್ನಡದಲ್ಲಿ ಪಾಕವಿಟ್ಟು ಜನಸಾಮಾನ್ಯರ ಅನಿಮಿತ್ತ ಬಂಧುವಾದರು."[22]

ವಿಶ್ವಾಸಾರ್ಹವಾದ ಲಿಖಿತ ಪ್ರಮಾಣಗಳು ದೊರೆಯುವವರೆಗೆ ಮೊದಲ ಎಂಟು ಅಂಶಗಳ ಕೆಲವು ವಿವರಗಳ ಬಗೆಗೆ ಅನುಮಾನ ಪ್ರಮಾಣವೇ ಆಧಾರ;

ಅವುಗಳ ತಾತ್ಪರ್ಯದ ಬಗೆಗೆ ಕವಿಯ ಮಾತೇ ಪ್ರಮಾಣ. ಕೊನೆಯ ಎರಡು ಅಂಶಗಳ ಯಥಾರ್ಥತೆಯನ್ನು-ಅವರ ಕೃತಿಗಳಾದ (1) ಅನುಭವಸಾರ, (2) ಅರುವತ್ತುಮೂವರ ತ್ರಿಪದಿ, (3) ಕೈವಲ್ಯ ಪದ್ಧತಿ, (4) ಪರಮಾನುಭವ ಬೋಧೆ, (5) ಪರಮಾರ್ಥ ಪ್ರಕಾಶಿಕೆ, (6) ವಿವೇಕಚಿಂತಾಮಣಿ,– ಇವೇ ಸಾರಿಹೇಳುತ್ತವೆ.

ನಿಜಗುಣರ ಗುರು ಯಾರು ಎಂಬ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ನಿಜಗುಣರ ಕೃತಿಗಳಲ್ಲಿ ನಿರಾಭಾರಿ ದೇಶಿಕ, ಚೆನ್ನಸದಾಶಿವ ಯೋಗಿ, ಗುರುಶಂಭುಲಿಂಗ, ಎಂಬ ಮೂರು ಹೆಸರುಗಳು ಗುರುಸೂಚಕವಾಗಿವೆ. "ತೋಂಟದ ಸಿದ್ಧಲಿಂಗ ಶಿವಯೋಗಿಗಳೇ ನಿರಾಭಾರಿ ದೇಶಿಕವರೇಣ್ಯರು, ಶ್ರೀ ನಿಜಗುಣರ ಗುರುಗಳ ಗುರು-ಪರಮಗುರುಗಳು. ಶ್ರೀಜಗುನಿಮರುಳ ದೇವರು ನಿರಾಭಾರಿ ದೇಶಿಕರು, ಶ್ರೀ ನಿಜಗುಣರ ಪ್ರಸಾದಿ ಸ್ಥಲದ ಜ್ಞಾನೋಪದೇಶ-ದೇಶಿಕರು. ಶ್ರೀ ಶಂಭುಲಿಂಗ ದೇಶಿಕರು ಶ್ರೀ ನಿಜಗುಣರಿಗೆ ವಿಶೇಷ ವೀರಶೈವದೀಕ್ಷೆಯನ್ನು ಕರುಣಿಸಿದ ಶ್ರೀ ಸದ್ಗುರುವು. ಈ ಗುರುಪರಂಪರೆಯನ್ನು ಅವರು 'ವಿವೇಕಚಿಂತಾಮಣಿ'ಯ ಪೀಠಿಕೆಯಲ್ಲಿ 'ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮ ಪರ್ಯಂತವಾದ ಗುರುಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಸಿ' ಎಂದು ಹೇಳಿ ಸ್ಪಷ್ಟಪಡಿಸಿದ್ದಾರೆ" ಎಂದು ಆಧಾರಗಳೊಡನೆ ಚರ್ಚಿಸಿ ಜಿ. ಎಂ. ಉಮಾಪತಿಶಾಸ್ತ್ರಿಗಳು ಹೇಳಿರುವುದು[23] ಒಪ್ಪಬಹುದಾಗಿ ಕಾಣುತ್ತದೆ. ನಿಜಗುಣರ ಕಾಲವೂ ಇದೇ ರೀತಿ ಭಿನ್ನಾಭಿಪ್ರಾಯಕ್ಕೆ ಗುರಿಯಾಗಿದೆ. ಇದೇ ವಿದ್ವಾಂಸರು ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ, 'ವಿವೇಕಚಿಂತಾಮಣಿ' ಬೇರೆ ಭಾಷೆಗಳಿಗೆ ಭಾಷಾಂತರವಾಗಿರುವ ಸಂಗತಿಯನ್ನು ಇತರ ಆಧಾರಗಳೊಂದಿಗೆ ಮುಖ್ಯ ಆಧಾರವಾಗಿ ಹಿಡಿದು– "ವಿವೇಕಚಿಂತಾಮಣಿಯು ಮೊಟ್ಟಮೊದಲು 17ನೆಯ ಶತಮಾನದ ಪ್ರಾರಂಭದಲ್ಲಿ (ಸು. 1604) (ಶಾಂತೇಶ್ವರ ಶಿವಯೋಗಿಯಿಂದ) ಮರಾಠಿಯಲ್ಲಿ, ನಂತರ 17ನೆಯ ಶತಮಾನದ ಮಧ್ಯದಲ್ಲಿ (ಸು. 1652)(ತಿರುವಣ್ಣಾಮಲೆಯ ಶಿವಪ್ರಕಾಶಸ್ವಾಮಿಗಳಿಂದ) ತಮಿಳಿನಲ್ಲಿ, ಆಮೇಲೆ 18ನೆಯ ಶತಮಾನದ ಕೊನೆಯಲ್ಲಿ (ಲಿಂಗರಾಜನಿಂದ) ಸಂಸ್ಕೃತದಲ್ಲಿ ಭಾಷಾಂತರಗೊಂಡಿದೆ. ಶಾಂತೇಶ್ವರ ಶಿವಯೋಗಿ 1550 ಸುಮಾರಿಗೆ ಇದ್ದವನು ಎಂದು ಗಣಿಸಿದರೆ 'ವಿವೇಕಚಿಂತಾಮಣಿ' ಆ

ಕಾಲಕ್ಕಿಂತಲೂ ಸು. ನೂರು ವರ್ಷ ಮುಂಚಿತವಾಗಿಯಾದರೂ ರಚಿತವಾಗಿರಬೇಕು. ಆದುದರಿಂದ ನಿಜಗುಣ ಶಿವಯೋಗಿಗಳ ಕಾಲವು 1450 ರ ಸುಮಾರಿಗೆ ನಿಲ್ಲುತ್ತದೆ'' ಎಂದೂ ; "ಸಂಸ್ಕೃತದಲ್ಲಿದ್ದ ವೇದಾಂತ-ಶಿವಸಿದ್ಧಾಂತ ಶಾಸ್ತ್ರಗಳನ್ನು ತಿಳಿಗನ್ನಡದ ಮೂಲಕ ಪ್ರಚಾರಕ್ಕೆ ತರುತ್ತಿದ್ದ 15ನೆಯ ಶತಮಾನದ ಪರಿಸರದಲ್ಲಿ ನಿಜಗುಣ ಶಿವಯೋಗಿಗಳ ಕೃತಿಗಳು ರೂಪುಗೊಂಡುವೆಂದು ನಿರಾಬಾಧವಾಗಿ ಹೇಳಬಹುದಾಗಿದೆ''ಎಂದೂ ; ನಿಜಗುಣರ ಗುರುಗಳ ಗುರು ಎನ್ನಲಾದ ತೋಂಟದ ಸಿದ್ಧಲಿಂಗಯತಿಗಳ ಕಾಲವನ್ನು (ದಿವಂಗತ ಎಂ.ಆರ್. ಶ್ರೀ. ನಿರ್ಧರಿಸಿದ್ದಂತೆ) 1470–1555 ಎಂದು ಗ್ರಹಿಸಿ "ಶ್ರೀನಿಜಗುಣ ಶಿವಯೋಗಿಗಳ ಕಾಲವನ್ನು ಕ್ರಿ.ಶ. 1500 ಎಂದು ನಿಸ್ಸಂಶಯವಾಗಿ ಗ್ರಹಿಸಬಹುದು'' ಎಂದೂ ಅಭಿಪ್ರಾಯಪಟ್ಟಿದ್ದಾರೆ. ಆಧಾರ ಪೂರ್ವಕ ಮಾಡಿರುವ ಈ ತೀರ್ಮಾನಗಳು ಕವಿಚರಿತೆಕಾರರು ಮಾಡಿರುವ 1500 ಎಂಬ ಊಹೆಯ ಕಡೆಗೇ ಸಾಗಿಬಂದಿವೆ.

ವಿವೇಕಚಿಂತಾಮಣಿ : ಈ ಗ್ರಂಥ ಒಂದು ವಿಶ್ವಕೋಶದಂತಿದೆ ಎಂಬ ಮಾತನ್ನು ಅದರ ವಿಮರ್ಶೆಮಾಡಿರುವ ಎಲ್ಲ ವಿದ್ವಾಂಸರೂ ಆಡಿದ್ದಾರೆ. ಈ ಬಗೆಗೆ ಭಿನ್ನಾಭಿಪ್ರಾಯವಿರದು. ಇಲ್ಲಿನ ಅಲ್ಪಾವಕಾಶದಲ್ಲಿ ಇದರ ಸಮಗ್ರ ಪರಿಚಯವನ್ನು ಮಾಡಿಕೊಡುವುದೆಂದರೆ, ಕನ್ನಡಿಯಲ್ಲಿ ಆನೆಯ ಪ್ರತಿಬಿಂಬವನ್ನು ತೋರಿಸುವ ಸಾಹಸವಾಗುವುದು. ಈ ಗ್ರಂಥದ ಹತ್ತು ಪರಿಚೇದಗಳಲ್ಲಿ ನಿರೂಪಿತವಾಗಿರುವ ಸುಮಾರು 1500 ಕ್ಕೂ ಮಿಕ್ಕ ವಿಷಯಗಳ ಪಟ್ಟಿಯೇ ಅಚ್ಚಿನ ಎಂಟು ಹತ್ತುಪುಟಗಳಾಗುವುವು. ಕೇವಲ ಪರಿಚ್ಛೇದಗಳ ವಿಷಯ ಸ್ವರೂಪವನ್ನು ಮಾತ್ರ ಉಲ್ಲೇಖಿಸಿ, ನಿಜಗುಣರ ವಿಷಯ ನಿರೂಪಣಾ ಪದ್ಧತಿಗೆ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುವುದು ಸಾಧ್ಯ. ಇದಕ್ಕೆ ಮುಂಚೆ, ನಿಜಗುಣರ ಮಾತಿನಲ್ಲಿಯೇ ಕೃತಿ ಸ್ವರೂಪ ಹೇಗೆ ಬಿಂಬಿತವಾಗಿದೆ ಎಂಬುದನ್ನು ನೋಡಬಹುದು :

'ಶಿಮದನೇಕ ಲೋಕಹಿತಮಾಗಿರೆ ವೇದಪುರಾಣ ಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕ ಚಿಂತಾಮಣಿಯೆಂಬ ಸಲ್ವ ಪೆಸರಿಟ್ಟು ಮಹಾಕವಿತಾ ಪ್ರಬಂಧಮಂ ಪೇಳ್ವೆ' ಎಂಬ ನಿಜಗುಣರ ಹೇಳಿಕೆಯಲ್ಲಿ 'ಮಹಾಕವಿತಾ ಪ್ರಬಂಧ' ಎಂಬ ಒಂದು ಮಾತನ್ನು ಹೊರತಂ ಪಡಿಸಿದರೆ, ಆ ಕಾಲದಲ್ಲಿ ಪ್ರಚಲಿತವಿದ್ದ 'ವಿಶ್ವ ವಿಷಯ ಕೋಶ' ಇದು

ಎನ್ನಲಡ್ಡಿಯಿಲ್ಲ. "ಸ್ವಕಪೋಲ ಕಲ್ಪಿತವಲ್ಲದ ಸಾರತರಮಪ್ಪ ಸತ್ಯಾರ್ಥಂಗಳನ್ನೇ ಸಂಗ್ರಹಿಸಿ, ಮುನ್ನುಳ್ಳ ಮಣಿಪುಂಜಮುಂ ರಂಜನೆಗೈದು ತರವರಿದು ಸರಂಗೊಳಿಸಿ ನವೀನ ಕಂಠಾಭರಣವೆಸಸುವಂತೆ ಮುಮುಕ್ಷು ಜನಂಗಳೀ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಿಹವೆಂದರಸಿ ಬಳಲದಭಿವ್ಯಕ್ತಮಾದಲ್ಲಿಯೇ ಸಲ್ಲೀಲೆಯಿಂಪರಿದು ಕೃತಾರ್ಥರಾಗಲೆಂದು ನಿಜಗುಣ ಶಿವಯೋಗಿ 'ಬೆಳುಗನ್ನಡ'ಮಾದ ವಚನ ರಚನೆಗಳಿಂ ವಿವೇಕ ಚಿಂತಾಮಣಿಯೆಂಬ ಪ್ರಕರಣಮಂ ಪೇಳ್ದನ್".

ಪರಿಚ್ಛೇದಗಳ ವಿಷಯ ಸೂಚನೆ : (1) ವೇದಾದಿ ಸಕಲ ಶಾಸ್ತ್ರಾರ್ಥ ನಿರ್ಣಯಂ, (2) ಪರತರಶಿವ ಸಿದ್ಧಾಂತ ಪದ್ಧತಿ (ಅಥವಾ ಶಿವಾಗಮಾರ್ಥ ವರ್ಣನಂ), (3) ಅಜಾಂಡಾದಿಕಂ (ಅಥವಾ ನಾಗಲೋಕ ಸ್ಥಿತಿವರ್ಣನಂ), (4) ಧಾರುಣಿಯ ವಿಚಿತ್ರತೆ (ಜಂಬೂದ್ವೀಪ ಸ್ಥಿತಿವರ್ಣನಂ), (5) ದ್ವೀಪಕದಂಬಂಗಳ್, ಅಂಬುಧಿಗಳ್ (ಮರ್ತ್ಯಲೋಕ ಸ್ಥಿತಿ ವರ್ಣನಂ), (6) ಊರ್ಧ್ವ ಲೋಕಂಗಳ್ (ದೇವಲೋಕ ಸ್ಥಿತಿ ವರ್ಣನಂ), (7) ಊರ್ಧ್ವಲೋಕ ಸ್ಥಿತಿ ವರ್ಣನಂ, (8) ಊರ್ಧ್ವ ಪ್ರಕೃತಿಯಿನಾದ ತತ್ವಾದಿಕ (ಶುದ್ಧಭುವನ ಸ್ಥಿತಿ ವರ್ಣನಂ, (9) ಜೀವರ ಭುವನ—ಕರ್ಮಫಲ (ಭುವನಾಂತರ ಪ್ರಾಪ್ತಿ ಪ್ರಕಾರವರ್ಣನಂ), (10) ಕಾಲಕ್ರಮ ವರ್ಣನಂ.

4ನೆಯ ಪರಿಚ್ಛೇದದ ಸುಮಾರು 130 ವಿಷಯಗಳಲ್ಲಿ ಉದಾಹರಣಾರ್ಥ ಕೆಲವು ವಿಷಯಾಂಶಗಳನ್ನು ಗಮನಿಸಬಹುದು (ಈ ಪರಿಚ್ಛೇದದಲ್ಲಿ ಕಾವ್ಯಶಾಸ್ತ್ರ, ನಾಟ್ಯಶಾಸ್ತ್ರ, ಸಂಗೀತ ಶಾಸ್ತ್ರ, ಕಾಮಶಾಸ್ತ್ರ, ಇವುಗಳ ವಿವರಣೆ ಪ್ರಮುಖವಾಗಿದೆ.) :

ಭಾರತ ವರ್ಷಂ, ಷಟ್ ಚಕ್ರವರ್ತಿಗಳು, ಅಷ್ಟೈಶ್ವರ್ಯಗಳು, ಅಷ್ಟಭೋಗಂಗಳು, ಸಪ್ತ ಸಂತಾನಂಗಳು ; ರಾಜ ಲಕ್ಷಣ ; ಛಂದಸ್ಸು ; ಅಲಂಕಾರಗಳು ; ಮಹಾಕಾವ್ಯ ವರ್ಣಾದಿಗಳು ; ಕಾವ್ಯ ರೀತ್ಯಾದಿಗಳು ; ಶಬ್ದ ದೋಷಂಗಳು ; ಕಾವ್ಯ ಭೇದಗಳು ; ಗಮಕಿಗಳು, ವಾದಿಗಳು, ವಾಗ್ಮಿಗಳು ; ಸ್ಥಾಯಿಭಾವಂಗಳು, ಆಲಂಬನ ವಿಭಾವಂಗಳು, ಉದ್ದೀಪನ ವಿಭಾವಂಗಳು, ಸಂಚಾರೀಭಾವಂಗಳು ; ನವರಸೋತ್ಪತ್ತಿ : ದಶಕಾಮಾವಸ್ಥೆಗಳು ; ಸ್ವರೋತ್ಪತ್ತ್ಯಾದಿಕ್ರಮ, ದಶವಿಧನಾದಗಳು, ಸಪ್ತಸ್ವರೋತ್ಪತ್ತಿಸ್ಥಾನ ; ಸ್ವರದಿಂ ಶ್ರುತಿ ಸಮುತ್ಪತ್ತಿ, ಶ್ರುತಿಗಮಕ ದೇಶೀಗಮಕಂಗಳು ; ರಾಗೋತ್ಪತ್ತಿ ಲಕ್ಷಣ, ಗ್ರಾಮಾದಿಗಳು ; ರಾಗ ಜಾತಿಗಳು, ರಾಗಾಂಗಗಳು, ಪ್ರಸಿದ್ಧ ಮೂವತ್ತೆರಡು ರಾಗಂಗಳು, ಇತ್ಯಾದಿ

ಅಲಂಕಾರಗಳು : ಸಮಾಸೋಕ್ತಿ, ಪರ್ಯಾಯೋಕ್ತಿ, ಆಕ್ಷೇಪ, ಉಪಮೇಯೋಪಮೆ...ಸ್ಮೃತಿ ಸಾಮ್ಯಯೋಗಿತೆ,...ವಾಚ್ಯಲಿಂಗ...ಸತ್ಯ ಸಂಗತಿ...ಭಾವಿಕ, ಉದಾತ್ತವೆಂಬ ಅರವತ್ತೈದು ಅಲಂಕಾರಗಳು.

ಗಮಕಿಗಳು : ಮತ್ತಂ ತಾನಮಾನಂದೋರಿ, ವಿಶ್ರಮಣವರಿದು, ಪದನಂ ವ್ಯಕ್ತಿಗೈದು, ಕೇಳ್ವರಂ ಕಿವಿಗೊಳಿಸಿ, ಮೃದುಮಧುರ ವರ್ಣೋಚ್ಚಾರಂ ಮಾಳ್ಪ ಗಮಕಿಗಳಿಂ.

'ಶ್ರೀ ನಿಜಗುಣರು ಈ ಲಘು ವಿಶ್ವಕೋಶವನ್ನು ರಚಿಸಲು ಹಲವಾರು ಮೂಲಗಳಿಂದ ವಿಷಯುಗಳನ್ನು ಸಂಗ್ರಹಿಸಿರುವರು. ಮುಖ್ಯವಾಗಿ ಉಪ ನಿಷತ್ತು, ಸ್ಮೃತಿ, ಆಗಮ, ತಂತ್ರ, ಪುರಾಣಗಳ ಸಂಸ್ಕೃತ ಗದ್ಯ-ಪದ್ಯಗಳ ಲಲಿತವಾದ ಭಾಷಾಂತರವನ್ನು ಹಾಗು ಕನ್ನಡ ಪುರಾತನೋಕ್ತಿಗಳ ಸಾರ ಸಂಗ್ರಹವನ್ನು ಈ ಕೃತಿಯಲ್ಲಿ ಸಾದರಪಡಿಸಿದ್ದಾರೆ...ನಿಜಗುಣರು ಕೆಲವು ಆಕರಗ್ರಂಥಗಳನ್ನು ಉಲ್ಲೇಖಿಸಿರುವರು. ವಾತೂಲ, ಶಾರದಾತಿಲಕ, ಮಂತ್ರ ದೇವತಾ ಪ್ರಕಾಶಿಕೆ, ಪ್ರಪಂಚಸಾರ ಮೊದಲಾದ ಮಂತ್ರಶಾಸ್ತ್ರ ಗ್ರಂಥಗಳ ಹೆಸರುಗಳನ್ನು ಹೇಳಿರುವರು."[25]

ಭೋಜರಾಜನ 'ಸಮರಾಂಗಣ ಸೂತ್ರಧಾರ' (1000-1055), ಲಕ್ಕಣ ದಂಡೇಶನ (1400-1470) ಶಿವತತ್ವ ಚಿಂತಾಮಣಿ, ಮಗ್ಗೆಯ ಮಾಯಿದೇವನ (1430) 'ಪಂಚೀಕರಣ', ತೋಂಟದ ಸಿದ್ಧಲಿಂಗರ 'ಷಟ್‌ಸ್ಥಲ ಜ್ಞಾನಸಾರಾಮೃತ'— ಈ ಕೃತಿಗಳಿಂದ ವಿಶೇಷವಾಗಿ ಪ್ರಭಾವಿತರಾಗಿರ ಬಹುದು ಎಂದು ಕಂಡುಬರುತ್ತದೆ, ಶಂಕರಾಚಾರ್ಯರ ಉಲ್ಲೇಖವಿದೆ; ಶಾಂಕರ ಭಾಷ್ಯದ ಮೇಲಣ 'ವಿವರಣ ಟೀಕೆ'ಯ ಪ್ರಸ್ತಾಪವೂ ಇದೆ. ಪ್ರಥಮ ಪರಿಚ್ಛೇದವು ಬಹುಮಟ್ಟಿಗೆ ಅದ್ವೈತವೇದಾಂತ ಶಾಸ್ತ್ರದ ವಿವರಣೆಗೇ ಮೀಸಲಾಗಿದೆ. ಚಾರ್ವಾಕ, ಬೌದ್ಧ, ಜೈನ ಈ ಮೂರು ಅವೈದಿಕ ದರ್ಶನ ಗಳನ್ನು ಪ್ರಸ್ತಾಪಿಸಿದ ನಿಜಗುಣರು ತಮ್ಮ ಕಾಲಕ್ಕೂ ಬಹಳ ಹಿಂದೆಯೇ ಶ್ರೀ ರಾಮಾನುಜರು ಮತ್ತು ಶ್ರೀ ಮಧ್ವಾಚಾರ್ಯರು, ಇವರಿಂದ ಸ್ಥಾಪನೆ ಗೊಂಡ ವಿಶಿಷ್ಟಾದ್ವೈತ ದ್ವೈತ ಸಿದ್ಧಾಂತಗಳನ್ನು ವಿವರಿಸುವುದು ಹಾಗಿರಲಿ, ಹೆಸರಿಸದಿರುವುದು ಕೂಡ ಸೋಜಿಗವಾಗಿ ಕಾಣುತ್ತದೆ. ಈ ಪರಿಚ್ಛೇದದ ಕೊನೆಯಲ್ಲಿ ಜೀವನ್ಮುಕ್ತನ ಸ್ವರೂಪವನ್ನು ತಿಳಿಸುವಾಗ, 'ದ್ವೈತಭಾವವಳಿದು ಆತ್ಮಾರಾಮನಪ್ಪ' ಜೀವನ್ಮುಕ್ತನು 'ಕಲ್ಪಿತದ ದ್ವೈತ ಪರಶ್ರುತಿ ವಾಕ್ಯ ವೈಖರೀ ವಿಷಯುದೊಳಲಸನಪ್ಪಂ' ಎಂದು ಹೇಳಿರುವುದು ನಿಜಗುಣರ ಅದ್ವೈತನಿಷ್ಠೆಯನ್ನು ಸ್ಪಷ್ಟಗೊಳಿಸಿದೆ. ಉಳಿದೆರಡು ಸಿದ್ಧಾಂತಗಳನ್ನು ಉಲ್ಲೇಖಿಸದಿರಲು ಈ ಏಕೈಕ ಅದ್ವೈತ ನಿಷ್ಠೆಯೇ ಕಾರಣವಾಗಿರಬಹುದು.

ಕನ್ನಡ ಶಾಸ್ತ್ರಸಾಹಿತ್ಯದಲ್ಲಿ 'ವಿವೇಕ ಚಿಂತಾಮಣಿ'ಗೆ ಒಂದು ಉನ್ನತವಾದ ಗೌರವಸ್ಥಾನ ಸಲ್ಲತಕ್ಕದ್ದಾಗಿದೆ.

ಅಡಿ ಟಿಪ್ಪಣಿಗಳು

1 ಆರ್. ನರಸಿಂಹಾಚಾರ್ : ಕವಿಚರಿತೆ-I, 1972 ; ಪು. 6-8
2 ಡಿ. ಎಲ್. ನರಸಿಂಹಾಚಾರ್ : 'ಶಬ್ದಮಣಿದರ್ಪಣ'ದ ಪರಿಷ್ಕೃತ ಮುದ್ರಣ. 2ನೆಯ ಆವೃತ್ತಿ, 1964 ; ಪ್ರಸ್ತಾವನೆ, ಪು. vii
3 ನಿಟ್ಟೂರು ನಂಜಯ್ಯನ ಟೀಕೆಯಿರುವ ಶಬ್ದಮಣಿದರ್ಪಣವನ್ನು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿದೆ (1920). ಸಂಪಾದಕರ ಹೆಸರನ್ನು ಹಾಕಿಲ್ಲ.
4 ಲಿಂಗಣಾರಾಧ್ಯನ ವೃತ್ತಿಯಿರುವ ಈ ಶಬ್ದಮಣಿದರ್ಪಣದ ಪ್ರತಿಯನ್ನು ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಹೊರತಂದಿದೆ (1939). ಸಂ. ಎ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷಯ್ಯಂಗಾರ್ ; ಪ್ರಧಾನ ಸಂ. ಎ. ಶಂಕರಕೆದಿಲಾಯ.
5 ಡಿ. ಕೆ. ಭೀಮಸೇನರಾಯರು ಧಾರವಾಡದ ಕನ್ನಡ ಸಂಶೋಧನೆಯ ಆಶ್ರಯದಲ್ಲಿ ಕೊಟ್ಟ ಒಂದು ಉಪನ್ಯಾಸದಲ್ಲಿ ಈ ಸಂಗತಿಗಳನ್ನು ವಿವರಿಸಿದ್ದಾರೆ. 'ಶಬ್ದಮಣಿದರ್ಪಣದ ಪಾಠಾಂತರಗಳು' ಎಂಬ ಹೆಸರಿನಲ್ಲಿ ಈ ಉಪನ್ಯಾಸ ಪ್ರಕಟವಾಗಿದೆ. (1951)
6 ಬರ್ನೆಲ್ : 'The Aindra School of Grammarians', p. 58 (ಐಂದ್ರವೈಯಾಕರಣ ಪಂಥ). (ಆರ್. ನರಸಿಂಹಾಚಾರ್ಯರು ಈತನ ಹೇಳಿಕೆಯನ್ನು ಕರ್ಣಾಟಕ ಶಬ್ದಾನುಶಾಸನದ ಪೀಠಿಕೆಯಲ್ಲಿ ಉದ್ಧರಿಸಿದ್ದಾರೆ) (ಪು. 19)
7 ಡಿ. ಕೆ. ಭೀಮಸೇನರಾವ್ : 'ಶಬ್ದಮಣಿದರ್ಪಣದ ಪಾಠಾಂತರಗಳು' ; 1951; ಪು. 85
8 ಎಂ. ಎಂ. ಕಲಬುರ್ಗಿ : 'ಕೇಶಿರಾಜ ಕಂಡ ಅನುಪಲಬ್ಧ ಭಾರತಗಳು' ; ಪ್ರಬುದ್ಧ ಕರ್ಣಾಟಕ, ಸಂಪುಟ 54-4 ; 1973, ಪು. 5
9 ಆರ್. ನರಸಿಂಹಾಚಾರ್ : ಕರ್ಣಾಟಕ ಕವಿಚರಿತೆ-II, 1972 ; ಪು. 306
10 ಆರ್. ನರಸಿಂಹಾಚಾರ್ (ಸಂ) : 'ಭಟ್ಟಾಕಲಂಕದೇವಕೃತ ಶಬ್ದಾನುಶಾಸನಂ,' 1923 ; ಪೀಠಿಕೆ, ಪು. 17
11 ಎ. ಎನ್. ನರಸಿಂಹಯ್ಯ : 'ಕವಿ ಭೀಮನು ಯಾರು ?' – 'ಸಂಭಾವನೆ', 1941 ; ಪು. 187, 191
12 ಎನ್. ಬಸವಾರಾಧ್ಯ : 'ಕನ್ನಡದಲ್ಲಿ ನಿಘಂಟು ಶಾಸ್ತ್ರ' ; 'ಚಿನ್ನದ ಬೆಳಸು', ಕನ್ನಡ ಸಾಹಿತ್ಯ ಪರಿಷತ್ತು, 1970 ; ಹೊಂದೆನೆ–3, ಪು. 44

13 ಎಸ್. ಜಿ. ನರಸಿಂಹಾಚಾರ್ ಮತ್ತು ಮಂ. ಆ. ರಾಮಾನುಜಯ್ಯಂಗಾರ್ (ಸಂ.) : 'ಸೂರ್ಯಕವಿಕೃತಂ ಕವಿಕಂಠಹಾರಂ' ; ಕಾವ್ಯಕಲಾ ನಿಧಿ ಗ್ರಂಥ ಮಾಲೆ, ಮೈಸೂರು ; 1902 ; ಪೀಠಿಕೆ, ಪು. 2
14 ಆರ್. ನರಸಿಂಹಾಚಾರ್ : ಕವಿ ಚರಿತೆ. I ; ಪು. 170
15 ಎ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷಯ್ಯಂಗಾರ್ (ಸಂ.) 'ನಾಗವರ್ಮ ಕೃತಮಪ್ಪ ಅಭಿಧಾನ ವಸ್ತುಕೋಶಂ' ; ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥ ಮಾಲೆ (3), 1933 ; ಮುನ್ನುಡಿ, ಪು. iv
16 ಮೇಲಿನದೇ : ಪು. vii-viii
17 ಆರ್. ನರಸಿಂಹಾಚಾರ್ : ಕವಿ ಚರಿತೆ, II ; 1972 ; ಪು. 110
18 ಎ. ಎನ್. ನರಸಿಂಹಯ್ಯ (ಸಂ.) : 'ಕಾಶಕೃತ್ಸ್ನ ಶಬ್ದಕಾಲಾಪ ಧಾತು ಪಾಠ' ; ಡೆಕ್ಕನ್ ಕಾಲೇಜು, ಪುಣೆ ; 1952 ; ಪೀಠಿಕೆಯಿಂದ ಆಯ್ದ ವಾಕ್ಯಗಳು.
19 ಎಸ್. ಶ್ರೀಕಂಠಶಾಸ್ತ್ರೀ : ''ಕುಮುದೇಂದು ಕವಿಯ 'ಭೂವಲಯ'' (ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಅರ್ಪಿಸಿದ 'ಅಭಿವಂದನೆ' ಸಂಪುಟದಲ್ಲಿ ಪ್ರಕಟಿತ ; 1956; ಪುಟಗಳು 562-589.
20 ಡಿ. ಎಲ್. ನರಸಿಂಹಾಚಾರ್ : ''ಮಾನಸೋಲ್ಲಾಸ'ದಲ್ಲಿ ಛಂದಸ್ಸು" (ಪ್ರಬುದ್ಧ ಕರ್ಣಾಟಕ, ಸಂ, 42-2, 1973 ; ಪು. 72).
21 ರಂ. ಶ್ರೀ. ಮುಗುಳಿ : ಕನ್ನಡ ಸಾಹಿತ್ಯ ಚರಿತ್ರೆ, 1953 ; ಪು. 334.
22 ಪ್ರೊ. ಜಿ. ಎಂ. ಉಮಾಪತಿ ಶಾಸ್ತ್ರೀ (ಸಂ.) : 'ವಿವೇಕ ಚಿಂತಾಮಣಿ' ; ಪ್ರಕಾಶಕರು : ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ, 1969 : ಪ್ರಸ್ತಾವನೆ, ಪು. 11
23 ಮೇಲಿನದೇ : ಪು. 211
24 ಮೇಲಿನದೇ : ಪು. 106-7, 120, 206-7,
25 ಮೇಲಿನದೇ : ಪು. 205

ಧಾರ್ಮಿಕ ಶಾಸ್ತ್ರಗ್ರಂಥಗಳು

ಹಿನ್ನೆಲೆ

ಕನ್ನಡ ನಾಡು ಅನೇಕ ಮತಧರ್ಮಗಳ ಕೂಡಲಸಂಗಮ; ಸರ್ವಧರ್ಮ ಸಮನ್ವಯದ ಪ್ರಯೋಗಶಾಲೆ. ಬೌದ್ಧ ಜೈನ ಧರ್ಮಗಳು ಕನ್ನಡ ನಾಡನ್ನು ಪರಿಸುವುದಕ್ಕೆ ಮುಂಚೆ ಇಲ್ಲಿ ವೈದಿಕ ಧರ್ಮ ಬಲವಾಗಿ ಬೇರೂರಿತ್ತು. ಸಿಂಧೂ ನದಿಯ ಬಯಲಿನ ಹರಪ್ಪ-ಮೊಹೆಂಜೋದಾರೋ ಸ್ಥಳಗಳ ಸಂಸ್ಕೃತಿ ಆರ್ಯರ ವೈದಿಕ ಸಂಸ್ಕೃತಿ ಎಂದು ತೀರ ಇತ್ತೀಚಿನ ಪುರಾತತ್ತ್ವ ಸಂಶೋಧನ ವಿದ್ವಾಂಸರೂ ಕೆಲವು ಇತಿಹಾಸತಜ್ಞರೂ ಹೇಳತೊಡಗಿದ್ದರೂ, ಆ ಸಂಸ್ಕೃತಿಯ ಅವಶೇಷಗಳನ್ನು ಮೊದಲು ಅಗೆದು ತೆಗೆದು ಸಂಶೋಧನೆ ನಡಸಿದ ಕನಿಂಗ್ ಹ್ಯಾಮ್ (1880), ಆರ್.ಡಿ. ಬ್ಯಾನರ್ಜಿ (1922), ಸರ್ ಜಾನ್ ಮಾರ್ಷಲ್ (1924) ಮೊದಲಾದ ಪಾಶ್ಚಾತ್ಯ ಹಾಗೂ ದೇಶೀಯ ವಿದ್ವಾಂಸರು ಅದು ನಿಸ್ಸಂಶಯವಾಗಿ ದ್ರಾವಿಡ ಸಂಸ್ಕೃತಿ ಎಂದು ಅಭಿಪ್ರಾಯಪಟ್ಟು, ಆ ಸಂಸ್ಕೃತಿಯಲ್ಲಿ ಶಿವ-ಪಶುಪತಿಯ ಪೂಜೆಯಿತ್ತು ಎಂದು ವಾದಿಸಿದ್ದಾರೆ. ತಮಿಳು ನಾಡಿನಲ್ಲಿ ಮತ್ತು ಕಾಶ್ಮೀರಗಳಲ್ಲಿ ಶೈವ ಸಂಸ್ಕೃತಿಯೇ ಪ್ರಾಚೀನ ಎಂಬುದು ಪ್ರಸಿದ್ಧವಾದ ಸಂಗತಿ. ದ್ರಾವಿಡ ಭಾಷೆಗಳ ಹಾಗೂ ದೇವನಾಗರಿಯ ಲಿಪಿಗಳು ಮೂಲ ಬ್ರಾಹ್ಮೀ ಲಿಪಿಯಿಂದ ಹುಟ್ಟಿ ವಿಕಾಸಗೊಂಡಿರುವ ಸಂಗತಿಯಂತೂ ನಿರ್ವಿವಾದವಾಗಿ ಸ್ಥಾಪಿತವಾಗಿದೆ. ಕೆಲವು ವಿದ್ವಾಂಸರು ಈ ಬ್ರಾಹ್ಮೀಲಿಪಿಗೂ ಹರಪ್ಪ-ಮೊಹೆಂಜೋದಾರೋ ಪ್ರದೇಶದ ಮುದ್ರೆಗಳ ಮೇಲೆ ಕಂಡುಬಂದ ಲಿಪಿಗೂ ಸಂಬಂಧ ಕಲ್ಪಿಸಲು ಪ್ರಯತ್ನಪಟ್ಟಿದ್ದಾರೆ. ತೀರ ಇತ್ತೀಚಿನ ಪಾಶ್ಚಾತ್ಯ ವಿದ್ವಾಂಸರೊಬ್ಬರು ಆ ಲಿಪಿಗಳ ಭಾಷೆಯನ್ನು ಓದುವ ಪ್ರಯತ್ನ ನಡಸಿ, ಅವರಲ್ಲಿ (ಮೈಲಿಗೆಗೆ ವಿರುದ್ಧಾರ್ಥದ) 'ಮಡಿ' ಎಂಬ ಕನ್ನಡದ ಮಾತನ್ನೇ ಓದಿ, ಈ ಭಾಷೆ ಪುರಾತನ ದ್ರಾವಿಡಭಾಷೆ ಎಂದಿದ್ದಾರೆ. ದಕ್ಷಿಣ ಭಾರತದ ದ್ರಾವಿಡ ಭಾಷೆಗಳಲ್ಲದೆ ದ್ರಾವಿಡ ಭಾಷೆಯ ಪ್ರಭೇದಗಳು

ಮಧ್ಯಭಾರತ ಮತ್ತು ಆಫ್ಘಾನೀಸ್ಥಾನಗಳಲ್ಲಿ ಇಂದಿಗೂ ಕೆಲವು ಗುಡ್ಡಗಾಡು ಜನವರ್ಗಗಳಲ್ಲಿ ಜೀವಂತವಾಗಿರುವುದನ್ನು ಭಾಷಾಶಾಸ್ತ್ರಜ್ಞರುಸ್ಥಾಪಿಸಿದ್ದಾರೆ. ಈ ಸಂಗತಿಗಳನ್ನೆಲ್ಲ ಸಮನ್ವಯಮಾಡಿ ಹೇಳಬಹುದಾದರೆ, ಆರ್ಯಸಂಸ್ಕೃತಿಗಿಂತಲೂ ಭಿನ್ನವಾದ ದ್ರಾವಿಡ ಶೈವಧರ್ಮೀಯ ಸಂಸ್ಕೃತಿ ದಕ್ಷಿಣಭಾರತದಲ್ಲಿಯೂ ಅದರ ಭಾಗವಾದ ಕರ್ನಾಟಕದಲ್ಲಿಯೂ ಬಹು ಪುರಾತನ ಕಾಲದಲ್ಲಿ ಇದ್ದೀತೇನೋ ಎಂಬ ಅನುಮಾನಕ್ಕೆ ಅವಕಾಶವಿಲ್ಲದೆ ಇಲ್ಲ. ಆದರೆ, ಕನ್ನಡ ನಾಡಿನಲ್ಲಿ ದೊರಕಿರುವ ಪ್ರಾಚೀನ ಶಾಸನಗಳ ಆಧಾರದಮೇಲೆ ಹೇಳುವುದಾದರೆ, ವೈದಿಕ-ಜೈನಧರ್ಮಗಳ ಪ್ರಸಾರ ಮಾತ್ರ ನಮಗೆ ಗೋಚರವಾಗುತ್ತದೆ. ನೃಪತುಂಗನ ಕಾಲದಲ್ಲಿ ವೈದಿಕಗಳಾದ ಶೈವ-ವೈಷ್ಣವ ಧರ್ಮಗಳೆರಡೂ ಪ್ರಚುರವಾಗಿದ್ದರೂ, ಆದಿ ಗ್ರಂಥವಾದ ಕವಿರಾಜಮಾರ್ಗದ ಮೇಲೆ ಬಿದ್ದಿರುವುದು 'ವೀರನಾರಾಯಣ'ನ ಮುದ್ರೆ !

ಕನ್ನಡ ನಾಡಿನಲ್ಲಿ ಬೌದ್ಧಮತೀಯನಾದ ಅಶೋಕ ಚಕ್ರವರ್ತಿಯ (ಕ್ರಿ.ಪೂ. 3ನೆಯ ಶತಮಾನ) ಶಾಸನಗಳು ಸಿಕ್ಕಿರುವುದರಿಂದ, ಇಲ್ಲಿ ಜೈನಧರ್ಮ ವಿಶೇಷವಾಗಿ ಪ್ರಚಾರಕ್ಕೆ ಬರುವ ಮುನ್ನ ಬೌದ್ಧ ಧರ್ಮವು ಪ್ರಚಾರದಲ್ಲಿದ್ದಿತೆಂದು ತಿಳಿದುಬರುತ್ತದೆ. ಶಾತವಾಹನರೂ ಅವರ ತರುವಾಯ ರಾಜ್ಯವಾಳಿದ ಕದಂಬರೂ ವೈಧಿಕ ಧರ್ಮವನ್ನು ಅವಲಂಬಿಸಿದ್ದರು. ಈ ಕಾಲದಲ್ಲಿ ಬೌದ್ಧ ಧರ್ಮದ ಪ್ರಾಬಲ್ಯ ಕುಗ್ಗಿ, ಕಾಲಕ್ರಮದಲ್ಲಿ ಹೇಳಹೆಸರಿಲ್ಲದಾಯಿತು. ಬೌದ್ಧರೂ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿರಬೇಕೆಂದೂ, ಅವರೇ ಕನ್ನಡದ ಆದಿ ಕವಿಗಳೆಂದೂ, ವೈದಿಕ ಧರ್ಮವು ಪ್ರಬಲವಾಗಿ ತಲೆಯೆತ್ತಿದಾಗ ಅವು ನಷ್ಟವಾಗಿರಬಹುದೆಂದೂ ದಿವಂಗತ ಟಿ. ಎಸ್. ವೆಂಕಣ್ಣಯ್ಯನವರು ಊಹೆ ಮಾಡಿದ್ದಾರೆ. ಅದು ನಿಜವಾದರೆ, ನಷ್ಟವಾಗಿರುವ ಗ್ರಂಥರಾಶಿಯಲ್ಲಿ ಕೆಲವಾದರೂ ಬೌದ್ಧ ಧರ್ಮವನ್ನು ಕುರಿತು ಕನ್ನಡದಲ್ಲಿ ರಚಿತವಾದ ಗ್ರಂಥಗಳಾಗಿದ್ದಿರಬಹುದು. ಈ ವಿಷಯದಲ್ಲಿ ನಿಶ್ಚಿತವಾಗಿ ಹೇಳಲು ಯಾವ ಪ್ರಮಾಣವೂ ಇಲ್ಲ.

ಕನ್ನಡ ನಾಡಿನಲ್ಲಿ ಬೌದ್ಧ ಧರ್ಮವು ಕಣ್ಮರೆಯಾಗುವುದಕ್ಕೆ ರಾಜಾಶ್ರಯ ಪಡೆದ ಜೈನ ಧರ್ಮವೂ ಇಲ್ಲಿ ಬಲಗೊಂಡು, ದಿನದಿನಕ್ಕೆ ಏಳಿಗೆ ಹೊಂದುತ್ತಿದ್ದುದೂ ಒಂದು ಮುಖ್ಯ ಕಾರಣ.

ಅಖಂಡ ಭಾರತದಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲಿಯೂ ವೈದಿಕ ಧರ್ಮ ಬಹಳ ಪ್ರಾಚೀನ ಕಾಲದಿಂದಲೂ ನೆಲೆ ನಿಂತಿದ್ದ ಧರ್ಮವಾಗಿದ್ದರೂ, ಹತ್ತನೆಯ ಶತಮಾನಕ್ಕೆ ಪೂರ್ವದಲ್ಲಿ ವೈದಿಕ ಧರ್ಮದವರು ಕನ್ನಡ ಗ್ರಂಥ ಗಳನ್ನು ರಚಿಸಿರುವುದು ತಿಳಿದುಬಂದಿಲ್ಲ. ವೈದಿಕ ಧರ್ಮ ಗ್ರಂಥಗಳೆಲ್ಲವೂ ಪ್ರಾಯಶಃ ಸಂಸ್ಕೃತದಲ್ಲಿಯೆ ರಚಿತವಾದವು. ನೆಲೆನಿಂತ ಧರ್ಮವನ್ನು ಪ್ರಚಾರ ಮಾಡಬೇಕಾದ ಅಗತ್ಯ ವೈದಿಕ ಧರ್ಮದವರಿಗೆ ಇರಲಿಲ್ಲ. ಅಲ್ಲದೆ, ಈ ಕಾಲದಲ್ಲಿ ವೈದಿಕ ಧರ್ಮಾವಲಂಬಿಗಳು ಜ್ಞಾನಕ್ಕಿಂತ ಕರ್ಮಾಚರಣೆಗೆ ಪ್ರಾಧಾನ್ಯ ಕೊಟ್ಟಿದ್ದರು. ಜನಸಾಮಾನ್ಯದಲ್ಲಿ ಧರ್ಮಜಾಗೃತಿ ಉಂಟು ಮಾಡಬೇಕೆಂಬ ಆಸಕ್ತಿಯೆ ಅವರಿಗೆ ಇರಲಿಲ್ಲ. ಅಲ್ಲದೆ, ದೊರೆಗಳೇ ವೈದಿಕ ಮತದ ಅನುಯಾಯಿಗಳಾದದ್ದರಿಂದ, ಅದರ ಉಳಿವಿಗೆ ಧಕ್ಕೆ ತಟ್ಟುವ ಸಂಭವ ವಿರಲಿಲ್ಲ. ಜೈನರೂ, ಅನಂತರ ವೀರಶೈವರೂ ಕನ್ನಡದಲ್ಲಿ ಗ್ರಂಥರಚನೆ ಮಾಡ ತೊಡಗಿದ ಮೇಲೆ ಅವರನ್ನನುಸರಿಸಿ ವೈದಿಕ ಧರ್ಮದ ಉಳಿವಿನಲ್ಲಿ ಆಸಕ್ತರಾ ದವರು ; ಆ ಧರ್ಮದ ಬೇರೆ ಬೇರೆ ಪಂಥಗಳಿಗೆ ಸೇರಿದವರು, ಕನ್ನಡದಲ್ಲಿ ಧಾರ್ಮಿಕ ಶಾಸ್ತ್ರ ಗ್ರಂಥಗಳ ರಚನೆಗೆ ಮನಸ್ಸು ಕೊಟ್ಟರು.*

ಇಲ್ಲಿ ಒಂದು ವಿವರಣೆ ಅಗತ್ಯ : ಜಗತ್ತು-ಜಗದೀಶ್ವರ (ಪರಮಾತ್ಮ)– ಮಾನವ (ಜೀವಾತ್ಮ), ಇವುಗಳ ಪರಸ್ಪರ ಸಂಬಂಧದ ಜಿಜ್ಞಾಸೆ ಪ್ರಪಂಚದ ಎಲ್ಲ ಧರ್ಮಗಳಿಗೂ ಮೂಲಭೂತವಾದ ಸಂಗತಿ. ಈ ಸಂಬಂಧದ ವಿವರಣೆ ಯಲ್ಲಿ ಅಭಿಪ್ರಾಯ ಭೇದಗಳು ಕಂಡುಬರುತ್ತವೆ. ಈ ಅಭಿಪ್ರಾಯ ಭೇದವೆ 'ಮತ'. 'ಧರ್ಮ'ದ ಅರ್ಥದ ಹರಹು ತುಂಬ ವಿಶಾಲ; ಬಹುಮಟ್ಟಿಗೆ ಎಲ್ಲ ಧರ್ಮಗಳಿಗೂ ಅನ್ವಯಿಸತಕ್ಕದ್ದು. ಸೃಷ್ಟಿಕರ್ತ ಉಂಟು ಎಂಬುದು

---

*ಸಾಹಿತ್ಯ ಚರಿತ್ರೆಯ ಈ ಗ್ರಂಥಮಾಲೆಯ ಇತರ ಸಂಪುಟಗಳಲ್ಲಿ ಪರಿಚಯ ಮಾಡಿ ಕೊಟ್ಟಿರುವ ಕೃತಿಗಳಲ್ಲಿ ಲೀಲಾವತಿ, ಇಂಥ ಕೆಲವು ಕಾವ್ಯಗಳನ್ನು ಹೊರತು ಪಡಿಸಿದರೆ– ಮೂಲಕ ಧರ್ಮವನ್ನೋ ಭಕ್ತಿಯನ್ನೋ ನೀತಿಯನ್ನೋ ಉಪದೇಶ ಮಾಡುವುದೇ ನಮ್ಮ ಕವಿಗಳ ಗುರಿಯಾಗಿತ್ತು ಎಂಬುದು ವಾಚಕರಿಗೆ ವೇದ್ಯವಾಗುತ್ತದೆ. ಆದಿಪುರಾಣದಲ್ಲಿ ಕಾವ್ಯಧರ್ಮವನ್ನೂ ಧರ್ಮವನ್ನೂ ಅರಿಯಬಹುದೆಂದು ಪಂಪ ಸಾರಿ ಹೇಳಿದ ; ಮುಂದಿನ ಕವಿಗಳಿಗೆ ಮಾದರಿಯಾದ. ಕಾವ್ಯಗಳ ಪರಿಚಯ ಮಾಡಿ ಕೊಡುವಾಗ ಆಯಾ ಕೃತಿಯಲ್ಲಿ ಕಂಡುಬರುವ ಧಾರ್ಮಿಕ ವಿಷಯದ ಪ್ರಸ್ತಾಪ ಪ್ರಾಸಂಗಿಕವಾಗಿಯಾದರೂ ಬಂದಿರು ತ್ತದೆ. ಆದ್ದರಿಂದ, ಇಲ್ಲಿ ಪ್ರಾತಿನಿಧಿಕವಾದ ಶಾಸ್ತ್ರ ಗ್ರಂಥಗಳನ್ನು ಬಲು ಸಂಕ್ಷೇಪವಾಗಿ ಪರಿಚಯ ಮಾಡಿಕೊಡಲಾಗುವುದು.

ಎಲ್ಲ ಧರ್ಮಗಳ ಒಂದು ಕಲ್ಪನೆ; ಆ ಕರ್ತನನ್ನು ಶಿವ, ವಿಷ್ಣು, ಅಲ್ಲಾ, ಎಂದಾಗ ಮತಭೇದ ಉಂಟಾಗುತ್ತದೆ. ಹೀಗೆ, 'ಮತದ ಅರ್ಥದ ಹರಹು ಸಂಕುಚಿತ. ಮೋಕ್ಷ ಎಲ್ಲ ಧರ್ಮಗಳಲ್ಲೂ ಉಂಟು, ಅದರ ಸ್ವರೂಪದ ವಿವರಣೆ, ಅದರ ಸಾಧನೆಗೆ ಹಿಡಿಯಬೇಕಾದ ವಿಧಾನ, ಈ ಸಂಬಂಧದ ಕರ್ಮಾಚರಣೆ, ಮುಂತಾದವು ಮತದಿಂದ ಮತಕ್ಕೆ ಬೇರೆಬೇರೆಯಾಗುತ್ತವೆ; ನೀತಿನಿಯಮಗಳೂ ಕೆಲಮಟ್ಟಿಗೆ ವ್ಯತ್ಯಾಸ ಹೊಂದಿರುತ್ತವೆ. ಧಾರ್ಮಿಕ ಶಾಸ್ತ್ರಗ್ರಂಥಗಳು ಮುಖ್ಯವಾಗಿ 'ಮತ'ದ ವಿಷಯಗಳನ್ನು ವಿವರಿಸುತ್ತವೆ.

ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಸಾಹಿತ್ಯ ಚರಿತ್ರೆಯನ್ನು ಜೈನರ ಯುಗ, ವೀರಶೈವ ಯುಗ, ಬ್ರಾಹ್ಮಣ ಯುಗ ಎಂದು ವಿಭಾಗ ಮಾಡಿರುವುದು ಕೆಲವು ವಿದ್ವಾಂಸರಿಗೆ ಒಪ್ಪಿಗೆಯಾಗದಿದ್ದರೂ, ಈ ಅಧ್ಯಾಯದ ವಿಷಯ ನಿರೂಪಣೆಯಲ್ಲಿ ಆ ವಿಭಾಗ ಕ್ರಮವನ್ನು ಅನುಸರಿಸುವುದು ಉಚಿತವಾಗಿದೆ; ಅನಿವಾರ್ಯವೂ ಆಗಿದೆ.

ಹೀಗೆ, ಕಾವ್ಯ, ಕಾವ್ಯಶಾಸ್ತ್ರ, ಮತಧರ್ಮ ಶಾಸ್ತ್ರ, ಲೌಕಿಕಶಾಸ್ತ್ರ—ಈ ಎಲ್ಲ ಬಗೆಯ ಗ್ರಂಥಗಳ ರಚನೆಗೂ ಜೈನರೇ ಶ್ರೀಕಾರ ಹಾಕಿದವರು. ಕಾವ್ಯಶಾಸ್ತ್ರ ಮುಂತಾದ ಗ್ರಂಥ ವಿಭಾಗಗಳಲ್ಲಿ ಜೈನರು ಮಾಡಿರುವ ಕೆಲಸವನ್ನು ಆಯಾ ಪ್ರಕರಣದಲ್ಲಿ ಗಮನಿಸಿದೆ. ಜೈನರು ರಚಿಸಿರುವ ಧಾರ್ಮಿಕ ಶಾಸ್ತ್ರ ಗ್ರಂಥಗಳನ್ನು ಮೊದಲು ಪರಿಚಯ ಮಾಡಿ ಕೊಡಲಾಗುವುದು.

ಜೈನಮತ ಗ್ರಂಥಗಳು

ಕನ್ನಡದಲ್ಲಿ ಗ್ರಂಥರಚನೆ ಮಾಡಿರುವ ಮುಖ್ಯ ಜೈನ ಕವಿಗಳೆಲ್ಲರೂ ಸಮಂತಭದ್ರ (ಸು. ಕ್ರಿ.ಶ. 400), ಕವಿಪರಮೇಷ್ಠಿ (ಸು. 550), ಪೂಜ್ಯಪಾದ (ಸು. 600) ಎಂಬ ಮೂವರು ಜೈನ ಕವಿಗಳನ್ನು ಹೊಗಳಿದ್ದಾರೆ. ಉದಾಹರಣೆಗೆ, ಪಂಪನು ತನ್ನ 'ಆದಿ ಪುರಾಣ'ದಲ್ಲಿ—

ಶ್ರೀಮತ್ ಸಮಂತಭದ್ರ
ಸ್ವಾಮಿಗಳ, ಜಗತ್ಪ್ರಸಿದ್ಧ ಕವಿ ಪರಮೇಷ್ಠಿ
ಸ್ವಾಮಿಗಳ, ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ

–ಎಂದು ಸ್ತೋತ್ರ ಮಾಡಿದ್ದಾನೆ. ಸಮಂತಭದ್ರನ ಸಂಸ್ಕೃತ ಪ್ರಾಕೃತ ಗ್ರಂಥಗಳಿಗೆ ಪಳಗನ್ನಡದಲ್ಲಿ ವ್ಯಾಖ್ಯಾನಗಳು ರಚಿತವಾಗಿವೆ. ಈತನು ಕನ್ನಡದಲ್ಲಿ ಗ್ರಂಥರಚನೆ ಮಾಡಿರುವುದು ತಿಳಿದುಬಂದಿಲ್ಲ. ಕವಿ ಪರಮೇಷ್ಠಿ ತ್ರಿಷಷ್ಟಿ (63) ಶಲಾಕಾಪುರುಷ ಪುರಾಣವನ್ನೂ ಮತ್ತು ಕಲ್ಯಾಣಕಾರಕ ಎಂಬ ವೈದ್ಯ ಗ್ರಂಥವನ್ನೂ, ಪೂಜ್ಯಪಾದನು ಜೈನೇಂದ್ರ ವ್ಯಾಕರಣವನ್ನೂ ಬರೆದಿದ್ದಾರೆ. ಇವರು ಕೂಡಾ ಕನ್ನಡದಲ್ಲಿ ಗ್ರಂಥರಚನೆ ಮಾಡಿದಂತೆ ತಿಳಿದುಬಂದಿಲ್ಲ. ಆದರೆ, ಆಮೇಲಿನ ಜೈನ ಧಾರ್ಮಿಕ ಸಾಹಿತ್ಯದ ಮೇಲೆ ಈ ಮೂವರ ಪ್ರಭಾವಮುದ್ರೆ ಬಿದ್ದಿದೆ.

24 ಮಂದಿ ತೀರ್ಥಂಕರರ ಪುರಾಣಗಳನ್ನು ಒಳಗೊಂಡ 'ಮಹಾಪುರಾಣ'ದಲ್ಲಿನ ಪೂರ್ವ ಪುರಾಣವನ್ನು ನೃಪತುಂಗನ ಕಾಲದಲ್ಲಿನ ಜಿನಸೇನಾಚಾರ್ಯನು ಪದ್ಯಕಾವ್ಯ ರೂಪದಲ್ಲಿ ರಚಿಸಿದನು ; ತರುವಾಯ ಗುಣಭದ್ರನು ಉತ್ತರ ಪುರಾಣವನ್ನು ರಚಿಸಿದನು. ಅವನು ತನ್ನ ಉತ್ತರ ಪುರಾಣದಲ್ಲಿ ಜಿನಸೇನನು ತನ್ನ ಕೃತಿಯನ್ನು ಕವಿ ಪರಮೇಷ್ಠಿ ಹಿಂದೆ ರಚಿಸಿದ್ದ 'ಗದ್ಯಕಥೆ' ಯನ್ನು ಅಧರಿಸಿ ಬರೆದನೆಂದು ಹೇಳಿದ್ದಾನೆ. ಕವಿರಾಜಮಾರ್ಗದಲ್ಲಿ ಗದ್ಯ ಪದ್ಯ ಸಂಮಿಶ್ರವಾದ ಗದ್ಯಕಥೆ ಎಂಬ ಕನ್ನಡ ಕಾವ್ಯ ಪ್ರಕಾರವನ್ನು ಚಿರಂತನಾಚಾರ್ಯರು ನಿಗದಿಸುತ್ತಿದ್ದರು ಎಂಬ ಮಾತು ಬರುತ್ತದೆ. ಕವಿ ಪರಮೇಷ್ಠಿಯ ಗದ್ಯಕಥೆ (ತ್ರಿಷಷ್ಟಿ ಶಲಾಕಾಪುರುಷ ಪುರಾಣ) ಸಂಸ್ಕೃತದಲ್ಲಿಯೇ ಇದ್ದಿರಬೇಕು ; ಕನ್ನಡದಲ್ಲಿದ್ದಿರಬಹುದೇ ಎಂದು ಅನುಮಾನಪಡಲು ಅವಕಾಶವಿದೆ. ಈ ಗದ್ಯಕಥೆ ಜಿನಸೇನನಿಗೆ ಆಧಾರ ಗ್ರಂಥವಾಗಿಯೂ, ಚಾವುಂಡರಾಯ ಪುರಾಣಕ್ಕೆ ಸ್ಫೂರ್ತಿ ನೀಡಿದ ಗ್ರಂಥವಾಗಿಯೂ ಇರುವುದರಿಂದ ಅತ್ಯಂತ ಗಮನಾರ್ಹವಾಗಿದೆ.

ಸಂಸ್ಕೃತದಲ್ಲಿ ಕನ್ನಡ ವ್ಯಾಕರಣವನ್ನು ಬರೆದ ಭಟ್ಟಾಕಳಂಕನು (ಕ್ರಿ.ಶ. 1604) ತನ್ನ ಶಬ್ದಾನುಶಾಸನದಲ್ಲಿ ಕರ್ಣಾಟಕ ಭಾಷೆಯ ಪ್ರಾಶಸ್ತ್ಯವನ್ನು ಹೇಳುವಾಗ–ಈ ಕರ್ಣಾಟಕ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ ; ಏಕೆಂದರೆ ಈ ಭಾಷೆಯಲ್ಲಿಯೇ ತೊಂಬತ್ತಾರು ಸಾವಿರ ಗ್ರಂಥ ಸಂಖ್ಯೆಯುಳ್ಳ ಚೂಡಾಮಣಿಯೆಂಬ ತತ್ತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನವು ದೊರೆಯುತ್ತದೆ–ಎಂದು ಬರೆದಿದ್ದಾನೆ. ದೇವಚಂದ್ರನ (ಕ್ರಿ.ಶ. 1760) ಹೇಳಿಕೆಯಿಂದ ಈ ಶಾಸ್ತ್ರ ವ್ಯಾಖ್ಯಾನ ಗ್ರಂಥವು ಕನ್ನಡದಲ್ಲಿದ್ದುದಾಗಿಯೂ ಅದನ್ನು

ಬರೆದವನು ತುಂಬುಲೂರಿನಲ್ಲಿ ಹುಟ್ಟಿದ ತುಂಬುಲೂರು ನಾಮಾಚಾರ್ಯನೆಂದೂ ತಿಳಿದು ಬರುತ್ತದೆ. ಈತನ ಕಾಲ ಸು. 650. ಚೂಡಾಮಣಿಯಂಥ ಒಂದು ಬಹು ದೊಡ್ಡ ಶಾಸ್ತ್ರಗ್ರಂಥ ನಷ್ಟವಾಗಿರುವುದು ದುರ್ದೈವದ ಸಂಗತಿ.

ಚಾವುಂಡರಾಯನ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತುಂಬ ಪ್ರಸಿದ್ಧವಾದುದು. ಇವನು ಶ್ರವಣಬೆಳ್ಗೊಳದ ಜಗತ್ಪ್ರಸಿದ್ಧವಾದ ಗೋಮಟೇಶ್ವರ ಏಕಶಿಲಾ ಮೂರ್ತಿಯನ್ನು ನಿಲ್ಲಿಸಿದ ಮಹಾನುಭಾವ; ಗಂಗ ವಂಶದ ದೊರೆ(974-984) ರಾಚಮಲ್ಲನ ಸೇನಾನಾಯಕ ಮತ್ತು ಮಂತ್ರಿ; ಕವಿ ರನ್ನನಿಗೆ ಆಶ್ರಯದಾತ; ಮಹಾದಾನಿ; ಗುರು ನೇಮಿಚಂದ್ರನ 'ಗೊಮ್ಮಟಸಾರ'ಕ್ಕೆ 'ವೀರಮಾರ್ತಾಂಡ' ಎಂಬ ವೃತ್ತಿ(ವಿವರಣೆ)ಯನ್ನು ಬರೆದಿದ್ದಾನೆ. ಇವನ ಪ್ರಸಿದ್ಧವಾದ ಗ್ರಂಥ 'ತ್ರಿಷಷ್ಟಿಲಕ್ಷಣ ಮಹಾಪುರಾಣ' ಅಥವಾ 'ಚಾವುಂಡರಾಯ ಪುರಾಣ'. ಜೈನ ಧರ್ಮದ ಮಹಾಪುರುಷರಾದ 63 ಮಂದಿಯಲ್ಲಿ 24 ಮಂದಿ ತೀರ್ಥಂಕರರು. ಇವರ ಚರಿತ್ರೆಯೆ ಕೃತಿಯ ಮುಖ್ಯವಸ್ತು.* ಇವರೊಂದಿಗೆ–12 ಜನ ಚಕ್ರವರ್ತಿಗಳು, 9 ಜನ ನಾರಾಯಣರು, 9 ಜನ ಪ್ರತಿನಾರಾಯಣರು, 9 ಜನ ಬಲಭದ್ರರು ಸೇರಿ 63 (ತ್ರಿಷಷ್ಟಿ) ಜನ. ಇವರ ವಿವರಪೂರ್ಣ ವರ್ಣನೆಯುಳ್ಳ ಗ್ರಂಥವನ್ನು 'ಪ್ರಥಮಾನುಯೋಗ ಶಾಸ್ತ್ರ'ಎಂದು ನಿರ್ದೇಶಿಸಲಾಗಿದೆ. ತೀರ್ಥಂಕರರ ಜನ್ಮಜನ್ಮಾಂತರ ಕಥೆಗಳಿಗೆ ಹಾಸುಹೊಕ್ಕಾಗಿ ಹೊಂದಿ

---

* ಎಲ್ಲ ಬಗೆಯ ಕರ್ಮಗಳನ್ನೂ, ಅವುಗಳ ಫಲರೂಪವಾದ ಸಂಸಾರಬಂಧನವನ್ನೂ ಗೆದ್ದವನು 'ಜಿನ'ಎನ್ನಿಸಿಕೊಳ್ಳುವನು. ಇವನು ಜೀವನ್ಮುಕ್ತ. ಎಂದರೆ ಜೀವಂತವಾಗಿರುವಾಗಲೇ ಮೋಕ್ಷವನ್ನು ಪಡೆದವನು. ಇವನು ಸರ್ವಜ್ಞ ಅಥವಾ ಕೇವಲಿ. ಸರ್ವಜ್ಞತ್ವವನ್ನು (ಪೂರ್ಣಜ್ಞಾನ) ಕೇವಲಜ್ಞಾನ ಎಂದೂ ಕರೆಯಲಾಗಿದೆ. ಜೀವನ್ಮುಕ್ತರಾದ ಕೇವಲಿಗಳಲ್ಲಿ ಸಾಮಾನ್ಯ ಕೇವಲಿ, ತೀರ್ಥಂಕರ ಕೇವಲಿ ಎಂದು ಎರಡು ವರ್ಗ. ಸಾಮಾನ್ಯ ಕೇವಲಿಗಳು ತಮ್ಮ ಮುಕ್ತಿಯನ್ನು ಮಾತ್ರ ಸಾಧಿಸುವರು; ತೀರ್ಥಂಕರ ಕೇವಲಿಗಳು ಸಂಸಾರಿಗಳಾದ ಇತರ ಜೀವರಿಗೂ ಮುಕ್ತಿ ಮಾರ್ಗವನ್ನು ತೋರಿಸಿಕೊಡುವರು. ತೀರ್ಥಂಕರರನ್ನು ಅರ್ಹಂತರೆಂದೂ ಹೇಳಲಾಗುವುದು; ಪರಮೇಷ್ಠಿ, ವೀತರಾಗ ಎಂಬವು ಇನ್ನೆರಡು ಹೆಸರುಗಳು. ಇವರು ಜಗತ್ತನ್ನು ಉದ್ಧಾರಮಾಡುವ ಧರ್ಮತೀರ್ಥವನ್ನು ನಿರ್ಮಾಣಮಾಡತಕ್ಕವರು, ಅಥವಾ ಸಂಸಾರಿಗಳನ್ನು ಸಂಸಾರಸಾಗರದಿಂದ ದಾಟಿಸತಕ್ಕವರು. ಇವರು ಇಪ್ಪತ್ತುನಾಲ್ಕು ಮಂದಿ, ಋಷಭದೇವನು ಆದಿ ತೀರ್ಥಂಕರ; ವರ್ಧಮಾನ ಮಹಾವೀರನು ಇಪ್ಪತ್ತನಾಲ್ಕನೆಯವನು,

ಕೊಂಡಂತೆ ಜೈನಧರ್ಮದ ಮುಖ್ಯತತ್ತ್ವಗಳ ನಿರೂಪಣೆ ಇರುವುದರಿಂದ ಚಾವುಂಡರಾಯ ಪುರಾಣವನ್ನು ಜೈನಧರ್ಮದ ಕೈಪಿಡಿ ಎನ್ನಬಹುದು. ಕನ್ನಡದಲ್ಲಿ ತ್ರಿಷಷ್ಟಿ ಶಲಾಕಾಪುರುಷರನ್ನು ಕುರಿತ ಮೊದಲ ಗ್ರಂಥವಾಗಿ ಇರುವುದಲ್ಲದೆ, ಈಗ ದೊರೆತಿರುವ ಹಳಗನ್ನಡ ಗದ್ಯಗ್ರಂಥಗಳಲ್ಲಿ ಇದೇ ಮೊದಲನೆಯದು. (ಇದರ ರಚನೆಯಕಾಲ ಕ್ರಿ.ಶ. 978). ಕನ್ನಡ ಗದ್ಯ ಶೈಲಿಯ ಬೆಳವಣಿಗೆಯಲ್ಲಿನ ಆರಂಭಾವಸ್ಥೆಯನ್ನು ಕನ್ನಡಿಸುವ ಈ ಕೃತಿಗೆ ಭಾಷಾ ದೃಷ್ಟಿಯಿಂದಲೂ ಒಂದು ಮುಖ್ಯಸ್ಥಾನವಿದೆ. 'ಲೋಕೋಪಕಾರ' ವೆಂಬ ಶಾಸ್ತ್ರ ಗ್ರಂಥವನ್ನು ಬರೆದವನ ಹೆಸರೂ ಚಾವುಂಡರಾಯನೆಂದಿರು ವುದರಿಂದ, ಇವನನ್ನು ಒಂದನೆಯ ಚಾವುಂಡರಾಯ ಎಂದು ಕರೆಯ ಬಹುದು.

ಪಂಪ. ರನ್ನ, ಪೊನ್ನ, ಜನ್ನ, ಶಿವಕೋಟಿ ಮುಂತಾದ ಕವಿಗಳು ತಮ್ಮ ಕಾವ್ಯಗಳ ಮೂಲಕ ಜೈನ ಧರ್ಮವನ್ನು ಬಹಳ ಚೆನ್ನಾಗಿಯೇ ಪ್ರತಿಪಾದನೆ ಮಾಡಿದರು. ಬಹುಶಃ ಈ ಕಾರಣದಿಂದಲೇ ಇರಬಹುದು, 2-3 ಶತಮಾನ ಗಳ ಕಾಲದ ಈ ಅವಧಿಯಲ್ಲಿ ಜೈನಾಗಮವನ್ನು ಶಾಸ್ತ್ರಪದ್ಧತಿಯಲ್ಲಿ ವಿವರಿಸುವ ಅಗತ್ಯ ಕಂಡುಬರಲಿಲ್ಲವೆಂದು ಕಾಣುತ್ತದೆ. ವೀರಶೈವರು ತಮ್ಮ ಮತಧರ್ಮವನ್ನು 14-15ನೆಯ ಶತಮಾನಗಳಲ್ಲಿ ವಿವರಿಸತೊಡಗಿದಾಗ, ಈ ಕಾರ್ಯಕ್ರಮಕ್ಕೆ ಪ್ರತಿಕ್ರಿಯೆಯಾಗಿಯೋ ಅಥವಾ ಪೈಪೋಟಿಯಾಗಿಯೋ ಎಂಬಂತೆ ಜೈನರು ತಮ್ಮ ಶಾಸ್ತ್ರವನ್ನು ಜನತೆಯ ತಿಳಿವಳಿಕೆಗಾಗಿ ವಿವರಿಸತೊಡಗಿ ದಂತೆ ಕಾಣುತ್ತದೆ. ಕಥೆಗಳ, ಪುರಾಣಗಳ, ಮೂಲಕ ಧರ್ಮಪ್ರಸಾರಕಾರ್ಯ ಮುಂದುವರಿದೇ ಇತ್ತು. ಎಲ್ಲ ಮತಧರ್ಮಗಳ ಪ್ರಚಾರಕಾರ್ಯದಲ್ಲಿಯೂ 'ಪ್ರಭುಸಂಮಿತ' (ಶಾಸ್ತ್ರರಚನೆ), 'ಮಿತ್ರಸಂಮಿತ' (ಪುರಾಣ, ಕಥೆ) 'ಕಾಂತಾಸಂಮಿತ' (ಕಾವ್ಯ)–ಈ ಮೂರು ವಿಧಾನಗಳನ್ನೂ ಬಳಸಿಕೊಳ್ಳು ವುದನ್ನು ಕಾಣುತ್ತೇವೆ. ಒಂದೊಂದು ಕಾಲದಲ್ಲಿ ಒಂದೊಂದಕ್ಕೆ ಪ್ರಾಧಾನ್ಯ. 14ನೆಯ ಶತಮಾನದಲ್ಲಿ ಮತ್ತು ಆ ತರುವಾಯ ಜೈನಧರ್ಮ ಶಾಸ್ತ್ರಗ್ರಂಥ ರಚನೆ ವಿಶೇಷವಾಗಿ ನಡೆಯಿತು.

ರತ್ನಕರಂಡಕ : ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ –ಇವು ಜೈನಧರ್ಮದಲ್ಲಿ ಮೋಕ್ಷಸಾಧಕಗಳು. ಇವು 'ರತ್ನತ್ರಯ'ಎಂದು ಪ್ರಸಿದ್ಧವಾಗಿವೆ. ಆಯತವರ್ಮನೆಂಬ ಜೈನಕವಿ (ಸು. 1400) ತನ್ನ

'ಕನ್ನಡ ರತ್ನಕರಂಡಕ' ಎಂಬ ಚಂಪೂಕೃತಿಯಲ್ಲಿ ಈ ರತ್ನತ್ರಯವನ್ನು ವರ್ಣಿಸಿದ್ದಾನೆ. ಇದರ ಸಂಕ್ಷಿಪ್ತ ನಿರೂಪಣೆ ಹೀಗಿದೆ :

ತತ್ತ್ವದ ರುಚಿ ಸಮ್ಯಕ್ತ್ವಂ, ತತ್ತ್ವಂಗಳಂ ಒಳ್ಳಿತಾಗಿ ಅರಿವುದು ಬೋಧಂ ।
ತತ್ತ್ವಂ ತನ್ನೊಳ್ ನೆರೆದಿರೆ, ಸತ್ತ್ವಂಗಳಂ ಓವಿ ಕಾವುದು ಅದುವೆ ಚರಿತ್ರಂ ॥

ಎಲ್ಲ ಧರ್ಮಗಳಲ್ಲಿ ಇರುವಂತೆ–ಅಥವಾ, ಇರುವುದಕ್ಕಿಂತ ಹೆಚ್ಚಾಗಿ ಎಂದರೂ ಸಲ್ಲುವುದು–ಜೈನಧರ್ಮದಲ್ಲೂ ವೈರಾಗ್ಯಕ್ಕೆ ಪ್ರಾಧಾನ್ಯ. ವೈರಾಗ್ಯವುಂಟಾಗದಿದ್ದರೆ ಮೋಕ್ಷದ ಕಡೆಗೆ ಮನಸ್ಸು ತಿರುಗುವುದೂ ಇಲ್ಲ. ಇತರ ಜೈನ ಕವಿಗಳು ಬಳಸಿರುವ ಉಪಮಾನಗಳನ್ನೇ ಬಳಸಿಕೊಂಡು, ಈ ಕವಿ ವೈರಾಗ್ಯದ ತಿರುಳಾದ ಸಂಸಾರದ ನಿಸ್ಸಾರತೆಯನ್ನೂ ನಶ್ವರತೆಯನ್ನೂ ಹೀಗೆ ವರ್ಣಿಸಿದ್ದಾನೆ.

ಜಳಬುದ್ಬುದದಿಂ ಕ್ಷಣಿಕಂ, ಜಳಧರ ನಿವಹಂಗಳಿಂದಂ ಅಧ್ರುವಂ, ಉಳ್ಕಂ– ।
ಗಳ ರಂಜನೆಯಂತೆ ಅಚಿರಂ, ಬಳಸಿದ ಬಂಧುಗಳುಂ ಒಡಲುಂ ಒಡವೆಯುಂ ಎಂತುಂ॥

[ಜಳಬುದ್ಬುದ = ನೀರಿನ ಗುಳ್ಳೆ ; ಜಳಧರನಿವಹ = ಮೋಡಗಳ ಗುಂಪು ; ಉಳ್ಕ = ಉಲ್ಕೆ, ಪೊರಕೆ ನಕ್ಷತ್ರ (ಧೂಮ ಕೇತು) ; ಅಚಿರ = ಕ್ಷಣಿಕ : ಬಳಸಿದ = ಸುತ್ತಲೂ ಇರುವ.]

ಸಂಸಾರ (ಎಂದರೆ ಜನ್ಮಜನ್ಮಾಂತರ) ಕಾರಣಗಳು :

ಸಂಸಾರ ಕಾರಣಂಗಳ್—ಹಿಂಸಾರುಚಿ, ಕಳವು, ಪುಸಿ, ಪರಸ್ತ್ರೀಗಮನಂ ।
ಮಾಂಸ ಮಧು ಮದ್ಯಸೇವನೆ—ಸಂಶಯಮೇಂ, ದುಃಖಕಾರಣಂಗಳ್ ಇವು ಇನಿತುಂ॥

ಪರಮಾಗಮಸಾರ : ಇದೇ ಕಾಲದಲ್ಲಿದ್ದ ಚಂದ್ರಕೀರ್ತಿ ಎಂಬವನು 132 ಕಂದವೃತ್ತ ಪದ್ಯಗಳಿಂದ ಕೂಡಿರುವ 'ಪರಮಾಗಮಸಾರ'ಎಂಬ ಗ್ರಂಥದಲ್ಲಿ ಆತ್ಮಸ್ವರೂಪ, ವೈರಾಗ್ಯ, ಮುಂತಾದ ವಿಷಯಗಳನ್ನು ನಿರೂಪಿಸಿದ್ದಾನೆ.

ಶುದ್ಧಾತ್ಮನ ಸ್ವರೂಪ :

ನೀರೊಳಗೆ ಪುಟ್ಟಿ ಪದ್ಮಂ ನೀರೊಳ್ ತಾಂ ಮುಟ್ಟದಂತೆ, ನಿಜ ಶುದ್ಧಾತ್ಮಂ ।
ಸಾರಂ ಅಣಂ ಅಲ್ಲದ ಈ ಸಂಸಾರದೊಳ್ ಒಂದಿರ್ದುಂ ಒಂದಂ–ಅಮಳಂ, ಅಮೂರ್ತಂ ॥

[ಅಣಂ = ಸ್ವಲ್ಪವೂ ; ಒಂದು = ಸೇರಿಕೊಂಡಿರು ; ಅಮಳಂ = ಪರಿಶುದ್ಧ ; ಅಮೂರ್ತ = ನಿರಾಕಾರ.]

ದ್ವಾದಶಾನುಪ್ರೇಕ್ಷೆ : 'ಪ್ರೇಕ್ಷೆ' ಎಂದರೆ 'ಕಾಣುವುದು'. 'ಅನು ಪ್ರೇಕ್ಷೆ' ಎಂಬ ಪಾರಿಭಾಷಿಕ ಪದಕ್ಕೆ 'ಕಂಡುಕೊಳ್ಳುವುದು', 'ಭಾವನೆ', 'ಚಿಂತನೆ' ಎಂದು ಅರ್ಥ. ಅನುಪ್ರೇಕ್ಷೆಗಳು 12 :

(1) ಅನಿತ್ಯತ್ವ (ಎಲ್ಲವೂ ನಶ್ವರ ಎಂಬ) ಭಾವನೆ ; (2) ಅಶರಣತ್ವ (ಹುಟ್ಟು ಸಾವುಗಳಿಗೆ ಹೆದರಿ ಮರೆಹೋಗಲು ಎಡೆಯಿಲ್ಲ ಎಂಬ) ಭಾವನೆ ; (3) ಸಂಸಾರ ಭಾವನೆ–ಕರ್ಮದ ಬಂಧನಕ್ಕೆ ಒಳಗಾದ, ಚತುರ್ಗತಿ ರೂಪವಾದ, ಸಂಸಾರದ ಸ್ವರೂಪ ವನ್ನು ಭಾವಿಸುವುದು ; (4) ಏಕತ್ವ ಭಾವನೆ – ತಾನು ಒಂಟಿ, ತನ್ನ ಇಹಪರ ಜೀವನಕ್ಕೆ ತಾನೊಬ್ಬನೇ ಹೊಣೆ, ಎಂದು ತನ್ನ ಒಂಟಿಗತನವನ್ನು ಕುರಿತು ಚಿಂತಿಸುವುದು ; (5) ಅನ್ಯತ್ವ ಭಾವನೆ–ತಾನು ಬೇರೆ, ದೇಹ ಧನ ಬಂಧುವರ್ಗವೇ ಬೇರೆ ಎಂದು ಭಾವಿ ಸುವುದು ; (6) ಶರೀರ ಅಶುಚಿ ಎಂಬ ಅಶೌಚ ಭಾವನೆ ; (7) ಆಸ್ರವ ಭಾವನೆ–ಪುಣ್ಯ ಪಾಪಗಳು ತನ್ನೊಳಗೆ ಹರಿದು ಬಂದು ಬಂಧನವಾಗುವುದು ಎಂಬ ಎಣಿಕೆ ; (8) ಸಂವರ ಭಾವನೆ–ಕರ್ಮದ ಒಳ ಹರಿವನ್ನು ತಡೆಯುವ ಬಗೆಯನ್ನು ಕುರಿತು ಯೋಚಿಸುವುದು ; (9) ನಿರ್ಜರಾಭಾವನೆ–ಜೀವಕ್ಕೆ ಅಂಟಿಕೊಂಡ ಕರ್ಮವನ್ನು ಕ್ಷಯಿಸುವಂತೆ ಮಾಡುವ ಬಗೆಗೆ ಚಿಂತನೆ ; (10) ಲೋಕ ಭಾವನೆ–ಲೋಕ, ಅದರಲ್ಲಿನ ಷಟ್‌ದ್ರವ್ಯಗಳು (ಜೀವ, ಅಜೀವ, ಧರ್ಮ ಅಧರ್ಮ, ಆಕಾಶ, ಕಾಲ), ಸ್ಥಿರ ; ಇವಕ್ಕೆ ಸೃಷ್ಟಿಕರ್ತ ಇಲ್ಲ, ಎಂಬ ಲೋಕಸ್ವರೂಪ ಭಾವನೆ ; (11) ಬೋಧಿ ದುರ್ಲಭತ್ವ ಭಾವನೆ – 'ರತ್ನತ್ರಯ' ಸಂಪಾದನೆ ಅತಿ ಕಷ್ಟಸಾಧ್ಯ ಎಂಬ ಭಾವನೆ ; (12) ಧರ್ಮಭಾವನೆ–ಜಿನ ಮಾರ್ಗದಲ್ಲಿ ನಡೆದು ಮುಕ್ತಿ ಪಡೆಯುವುದೆ ಪರಮಧರ್ಮ ಎಂಬ ಭಾವನೆ.

ಮೇಲೆ ವಿವರಿಸಿರುವ ಅನುಪ್ರೇಕ್ಷೆಗಳ ವಿಷಯವಾಗಿ ಕಲ್ಯಾಣಕೀರ್ತಿ (1439) 74 ಪದ್ಯಗಳ 'ಅನುಪ್ರೇಕ್ಷೆ' ಎಂಬ ಗ್ರಂಥವನ್ನೂ, ವಿಜಯಣ್ಣನು (1448) 'ದ್ವಾದಶಾನುಪ್ರೇಕ್ಷೆ' ಎಂಬ ಗ್ರಂಥವನ್ನೂ ಬರೆದಿದ್ದಾರೆ. 'ಅನು ಪ್ರೇಕ್ಷೆ'ಯಿಂದ ಒಂದು ಪದ್ಯ :

ವಿಲಸದಿಂದ್ರಿಯ ಪಾಟವಂ । ನೆಲಸಿದಂಗದ ಸೌಷ್ಠವಂ
ತೊಳಪ ಮಿಂಚಿನ ರೀತಿಯಿಂ । ತೊಲಗಿಪೋಹುದು ಜೀವನೇ.

ವಿಜಯಣ್ಣನ ಗ್ರಂಥ ಸಾಂಗತ್ಯದ ಮಟ್ಟಿನಲ್ಲಿ ಬರೆದಿದೆ. ನಡುನಡುವೆ ವೃತ್ತಗಳೂ ಕಂದಗಳೂ ಉಂಟು.

'ಅನ್ಯತ್ವಾನುಪ್ರೇಕ್ಷೆ'ಯ (ಕೆಳಗಿನ) ಎರಡು ಪದ್ಯಗಳಿಂದ, ಮೇಲೆ ಕೊಟ್ಟಿರುವಂತೆ ಶಾಸ್ತ್ರವಿಷಯಗಳ ಪಟ್ಟಿಗೂ ಕವಿಯ ಬರವಣಿಗೆಗೂ ಇರುವ ವ್ಯತ್ಯಾಸವನ್ನು ಕಾಣಬಹುದು :

ನಿನ್ನ ನಚ್ಚಿದ ದೇಹ ಹೆಂಡಿರು ಮಕ್ಕಳು । ನಿನ್ನ ಧನವ ತಿನ್ನುವರು ।
ನಿನ್ನನಂತಕ ಬಂದೆಳೆದೊಯ್ವ ವೇಳೆಯೊಳ್ । ನುಣ್ಣನೆ ಕೆಲಕೆ ಸಾರುವರು ॥
ಜೀವನು ಪೋಗೆ ತತ್‌ಕ್ಷಣದಲ್ಲಿ ಹೆಣನೆಂದು । ಓವದೆ ಸುಡುವರು ಬೇಗ ।
ತೀವಿದ ಗುಣವಿಲ್ಲದಿರೆ ನಡೆವೆಣನೆಂಬ । ರೀವಿಧ ನೋಡಿರೆ ದೇಹ ॥

ಕವಿಯು ಹೆಸರು ಗೊತ್ತಿಲ್ಲದ 'ದ್ವಾದಶಾನುಪ್ರೇಕ್ಷೆ' (ಸು. 1500) ಎಂಬ ಗದ್ಯಗ್ರಂಥವೊಂದಿದೆ. ಅದರಲ್ಲಿ, 'ಅಧ್ರುವಾನುಪ್ರೇಕ್ಷೆ'ಯ ವಿವರಣೆಯನ್ನು ನೋಡಿ :

"ನಗರಾದಿ ಸ್ಥಾನಂಗಳುಂ ಪದವಿಗಳುಂ ಸಿಂಹಾಸನಾದಿಗಳುಂ ಪುತ್ರಕಳತ್ರ ಮಿತ್ರಾದಿಗಳೊಳಪ್ಪ ಪ್ರೀತಿ–ಇವು ಮೊದಲಾದುವು ಜೀವಕ್ಕೆ ನಿತ್ಯವಲ್ಲವೆಂದು ಚಿಂತಿಸುವುದು ಅಧ್ರುವಾನುಪ್ರೇಕ್ಷೆ". (ಕವಿಚರಿತೆ, ಸಂ. II, ಪು. 537).

ವೀರಶೈವ ಧಾರ್ಮಿಕ ಶಾಸ್ತ್ರಗ್ರಂಥಗಳು

ವೀರಶೈವ ಮತದ ಪ್ರಾಚೀನತೆ, ವೀರಶೈವ ಮತದ ಸ್ಥಾಪಕರು, ವೀರಶೈವವು ವೈದಿಕವೆ ಅವೈದಿಕವೆ,–ಮುಂತಾದವು ತೊಡಕಿನ ಪ್ರಶ್ನೆಗಳು. ಬಸವಾದಿ ಶಿವಶರಣರು ವೀರಶೈವ ಧರ್ಮವನ್ನು ಕನ್ನಡ ವಚನಗಳಲ್ಲಿ ಪ್ರತಿಪಾದಿಸುವುದಕ್ಕೆ ಮುಂಚೆಯೇ ಪಂಚಾಚಾರ್ಯರು (ರೇವಣಸಿದ್ಧರು, ಮರುಳಸಿದ್ಧರು, ಏಕೋರಾಮ, ವಿಶ್ವೇಶ್ವರರು, ಪಂಡಿತಾರಾಧ್ಯರು) ವೀರಶೈವತತ್ತ್ವಗಳನ್ನು ಪ್ರತಿಪಾದಿಸಿದ್ದಿರಬೇಕು ಎಂಬ ಅಭಿಪ್ರಾಯವುಂಟು. ಇವರು ಕನ್ನಡಿಗರೇ ? ಕನ್ನಡದಲ್ಲಿ ವಚನಗಳನ್ನು ಬರೆದಿದ್ದರೇ ? ಎಂಬ ಪ್ರಶ್ನೆಗಳಿಗೆ ಉತ್ತರವಿಲ್ಲ. ವಿರಳವಾಗಿ ದೊರೆಯುವ ಕೆಲವು ಕನ್ನಡ ವಚನಗಳು ಪಂಚಾಚಾರ್ಯಕೃತ ಎಂಬ ಊಹೆಯೂ ಉಂಟು. (ಎಂ. ಆರ್. ಶ್ರೀ. : 'ವಚನಧರ್ಮಸಾರ', ಪು. 7ರ ಅಡಿ ಟಿಪ್ಪಣಿ). "ಸ್ವಪ್ರಭಾನಂದ ಶಿವಾಚಾರ್ಯ ಪ್ರಣೀತ 'ಶಿವಾದ್ವೈತಮಂಜರೀ', ಶಿವಯೋಗಿ ಶಿವಚಾರ್ಯಪ್ರಣೀತ 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥಗಳಲ್ಲಿ ಕ್ರಮವಾಗಿ ಷಟ್ಸ್ಥಲ, ಏಕೋತ್ತರಶತಸ್ಥಲಗಳ ವಿವರಣೆಗಳಿವೆ. ರೇವಣಸಿದ್ಧರು ಅಗಸ್ತ್ಯರಿಗೆ ಉಪದೇಶಿಸಿದ ಏಕೋತ್ತರ ಶತಸ್ಥಲವನ್ನೇ ತಾನು ಸಂಗ್ರಹಿಸಿರುವುದಾಗಿ ಶಿವಾಚಾರ್ಯನು ಹೇಳುವುದರಿಂದ, ಶೈವಸಿದ್ಧಾಂತದ ಒಂದು ಶಾಖೆ ಷಟ್ಸ್ಥಲ ಏಕೋತ್ತರ ಶತಸ್ಥಲಗಳನ್ನು ಪ್ರತಿಪಾದಿಸುವುದಾಗಿ ಮತ್ತೊಂದು ಪಂಗಡದ ಶೈವಾಚಾರ್ಯರಿಂದ ಪ್ರಸಿದ್ಧಿಗೆ ಬಂದಿರಬೇಕು."[1] ಪಂಚಾಚಾರ್ಯರು ವಚನಕಾರರಂತೆ ವಿಚಾರವಾದಿ

ಗಳಾಗಿರಲಿಲ್ಲ, ಸಮಾಜ ಸುಧಾರಕರಾಗಿರಲಿಲ್ಲ ; ಜನಸಾಮಾನ್ಯದೊಂದಿಗೆ ಬೆರೆಯುವ ಅವರು ಕನ್ನಡದ ಅಭಿಮಾನಿಗಳಾಗಲು ಸಾಧ್ಯವೇ ಇರಲಿಲ್ಲ ; ಹೇಳಿ ಕೇಳಿ ಅವರು ಸಂಸ್ಕೃತಾಭಿಮಾನಿಗಳು ; ಅವರ ಪಂಥದವರು ನಿರ್ಮಿಸಿದ ಗ್ರಂಥಗಳೂ ಸಂಸ್ಕೃತದವೇ. ಶಿವಶರಣರ ವಚನಗಳು ಈ ಗ್ರಂಥಗಳನ್ನು ಅನುಸರಿಸಿ ಬರೆದವಲ್ಲ. ಶೈವಸಿದ್ಧಾಂತದ ಒಂದು ಶಾಖೆಯಲ್ಲಿ ಪ್ರಚಲಿತವಿದ್ದ ಆ ಷಟ್‌ಸ್ಥಲ ಸಿದ್ಧಾಂತವನ್ನು ಸಂಸ್ಕೃತ ಗ್ರಂಥಗಳ ರೂಪದಲ್ಲಿ ನಿರೂಪಿಸಿದಂತೆ, ವಚನಕಾರರು ತಮ್ಮ ಸಾಧನಾಕ್ರಮದಲ್ಲಿ ಅವುಗಳನ್ನು ಅಳವಡಿಸಿಕೊಂಡು, ಅನುಭವಸಿದ್ಧವಾದ ಸಿದ್ಧಾಂತಗಳಾಗಿ ಪ್ರತಿಪಾದಿಸಿದರು. ಕನ್ನಡ ನಾಡಿನಲ್ಲಿ ಕ್ರಿ. ಶ. 11–12ನೆಯ ಶತಮಾನಗಳಲ್ಲಿ ದುರಾಚಾರಕ್ಕೂ ದುಷ್ಟಪದ್ಧತಿಗಳಿಗೂ ಜೋತುಬಿದ್ದು ಸಮಾಜವನ್ನು ಪಾಪಕೂಪದಲ್ಲಿ ಕೆಡವಿದ್ದ 'ಕಾಳಾಮುಖಿ'ಮೇ ಮುಂತಾದ ಶೈವಪಂಥಗಳ ಮೇಲೆ ಉಗ್ರ ಕದನವನ್ನು ಹೂಡಿ, ಸಮಾಜವನ್ನು ಉದ್ಧಾರಮಾಡಿ, ಧರ್ಮರಕ್ಷಣೆ ಮಾಡಿದ ಶ್ರೇಯಸ್ಸು ವಚನಕಾರರಾದ ಶಿವಶರಣರಿಗೆ – ಮುಖ್ಯವಾಗಿ ಬಸವ, ಚೆನ್ನಬಸವ, ಅಲ್ಲಮಪ್ರಭು, ಇವರಿಗೆ–ಸಲ್ಲತಕ್ಕದ್ದು. ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ರೂಪಗೊಂಡು, ಕಾಲಕ್ರಮದಲ್ಲಿ ಅವ್ಯವಸ್ಥಿತವಾಗಿ ಚೆದರಿಹೋಗಿದ್ದ, ವಚನವಾಙ್ಮಯರಾಶಿಯನ್ನು ಜೀರ್ಣೋದ್ಧಾರ ಮಾಡಿದ ಶ್ರೇಯಸ್ಸು ವಚನಗಳ ಸಂಕಲನಕಾರರಿಗೆ ಸೇರಿದ್ದು. ಈ ಕಾರ್ಯ 15ನೆಯ ಶತಮಾನದಲ್ಲಿ ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ (1419–1446), ಹಾಗೂ ತೋಂಟದ ಸಿದ್ಧಲಿಂಗ ಯತಿಗಳ ಕಾಲದಲ್ಲಿ (ಸು. 1470)– ಅವರ ನೇತೃತ್ವದಲ್ಲಿ – ನಡೆಯಿತು. ಈ ಸಂಕಲನ ಅಥವಾ 'ಸಂಪಾದನೆ'ಯ ಕಾರ್ಯವನ್ನು ನಿರ್ವಹಿಸಿದವರಲ್ಲಿ – ಮಿಶ್ರಸ್ತೋತ್ರದ ವಚನ ಮತ್ತು ಬಸವಸ್ತೋತ್ರದ ಸಂಕಲನಕಾರ 'ಸಂಪಾದನೆಯ ಚೆನ್ನಂಜೆದೇವ' 'ಏಕೋತ್ತರಶತಸ್ಥಲ'ದ ಸಂಕಲನಕಾರನಾದ ಮಹಲಿಂಗದೇವ, 'ಏಕೋತ್ತರಸ್ಥಲ'ದ ಜಕ್ಕಣಾರ್ಯ, 'ಲಿಂಗಲೀಲಾ ವಿಲಾಸ ಚಾರಿತ್ರ'ದ ಕಲ್ಲಮಠದ ಪ್ರಭುದೇವರು, ಇವರುಗಳು ಪ್ರಮುಖರಾಗಿ ಕಂಡುಬರುತ್ತಾರೆ. ಇಂಥ ಸಂಕಲನ ಕಾರ್ಯಗಳಲ್ಲಿ 'ಶೂನ್ಯಸಂಪಾದನೆ' ಎಂದು ಪ್ರಸಿದ್ಧವಾಗಿರುವ ಸಂಕಲನಗ್ರಂಥ ವಿಶಿಷ್ಟವಾದದು. 'ಶೂನ್ಯಸಂಪಾದನೆ' ಕೇವಲ ವಚನಗಳ ಸಂಕಲನವಷ್ಟೇ ಅಲ್ಲ ; 'ಅನುಭವಮಂಟಪ'ದ ಆಧ್ಯಾತ್ಮಿಕ ಕಾರ್ಯಕಲಾಪಗಳ ನಾಟಕೀಯ ನಿರೂಪಣೆ ; ಅನುಭವ ನಿವೇದನದಲ್ಲಿ ಪಾಲುಗೊಂಡ ಶರಣರ ಜೀವನಚರಿತ್ರೆ ;

ವಾದಸಂವಾದಗಳ ಮೂಲಕ ನಡೆದ ವಚನಮಂಜರಿಯ ವಿವರಣೆ, ವ್ಯಾಖ್ಯಾನ; ಈ ಎಲ್ಲ ಕಾರ್ಯಕಲಾಪಗಳ ಕೇಂದ್ರವ್ಯಕ್ತಿ, ಶೂನ್ಯಸಿಂಹಾಸನವನ್ನು ಅಲಂಕರಿಸಿದ್ದ ಅಧಿಪತಿ ಅಲ್ಲಮಪ್ರಭು. ಚಾಮರಸನ ಪ್ರಭುಲಿಂಗಲೀಲೆಯ ವಸ್ತುವಿನ್ಯಾಸಕ್ಕೂ ಶೂನ್ಯಸಂಪಾದನೆಯ ನಿರೂಪಣ ತಂತ್ರಕ್ಕೂ ಹತ್ತಿರದ ಹೋಲಿಕೆಯಿದೆ ಎಂಬ ಅಭಿಪ್ರಾಯವಿದೆ. ಈ ಅಪೂರ್ವಕೃತಿಯ 4 (ಅಥವಾ 5) ಪರಿಷ್ಕರಣಗಳು ನಡೆದಿವೆ ; ಇವು ನಡೆದದ್ದು ಸುಮಾರು 100 ವರ್ಷಗಳ ಅವಧಿಯಲ್ಲಿ. ಇವುಗಳ ಆನುಪೂರ್ವಿಯ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಎಂ. ಚಿದಾನಂದ ಮೂರ್ತಿಯವರು ಈ ವಿಚಾರ ವನ್ನು ಪರಿಶೀಲಿಸಿ, 'ಶೂನ್ಯಸಂಪಾದನೆ' ಎಂಬ ಹೆಸರಿನಲ್ಲಿ ನಡೆದಪರಿಷ್ಕರಣ–ಸಂಕಲನಗಳು ನಾಲ್ಕು ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

1. ಶಿವಗಣಪ್ರಸಾದಿ ಮಹದೇವಯ್ಯನ ಶೂನ್ಯಸಂಪಾದನೆ. (ಸು. 1400). "..... ಇದೇ ಮೊದಲನೆಯ ಶೂನ್ಯಸಂಪಾದನೆ. ಇದರಲ್ಲಿ ಬರುವ ಸಿದ್ಧರಾಮನ ಸಂಗತಿ ಯನ್ನು ಪ್ರಭುಲಿಂಗಲೀಲೆಯು ಅನುಸರಿಸಿ ಅಲ್ಲಮನ ವೃತ್ತಾಂತವನ್ನು ಮಾರ್ಪಡಿಸಿರುವು ದರಿಂದ ಈ ಕೃತಿ ಪ್ರಭುಲಿಂಗಲೀಲೆಗಿಂತ ಹಿಂದಿನದು."

2. "ಹಲಗೆಯದೇವರಶೂನ್ಯಸಂಪಾದನೆ. (ಸು. 1500). "...ಹಲಗೆಯದೇವರು ಬಹುಶಃ ಲಿಂಗಲೀಲಾವಿಲಾಸ ಚಾರಿತ್ರವನ್ನು ಅನುಸರಿಸಿ ಸಿದ್ಧರಾಮನಿಗೆ ದೀಕ್ಷೆಯಾದ ವಿಷಯವನ್ನು ತಮ್ಮ ಶೂನ್ಯಸಂಪಾದನೆಯಲ್ಲಿ ಹೊಸದಾಗಿ ಸೇರಿಸಿಕೊಂಡಿರುವುದರಿಂದ ಸು. 1430 ಕ್ಕಿಂತ ಈಚಿನದು...ಸು. 500ರಲ್ಲಿ ಹಲಗೆಯ ದೇವರು ತಮ್ಮ ಶೂನ್ಯ ಸಂಪಾದನೆಯನ್ನು ಬರೆದಿರಬಹುದು".

3, 4. ಗುಮ್ಮಾಳಾಪುರದ ಸಿದ್ಧಲಿಂಗಯತಿ ಮತ್ತು ಗೂಳೂರು ಸಿದ್ಧವೀರಣ್ಣೊಡೆ ಯರ ಶೂನ್ಯಸಂಪಾದನೆಗಳು. (ಸು. 1530, 1550).

"ಮೊದಲನೆಯವನು ಹದಿನೈದನೆಯ ಶತಮಾನದ ಕೊನೆಯಲ್ಲಿದ್ದ ತೋಂಟದ ಸಿದ್ಧಲಿಂಗಯತಿಯ ಶಿಷ್ಯ, ಎರಡನೆಯವನು ಪ್ರಶಿಷ್ಯ. ಆದ್ದರಿಂದ ಅವರ ಕೃತಿಗಳು ಕ್ರಮವಾಗಿ ಸು. 1530ರಲ್ಲಿಯೂ. ಸು, 1550ರಲ್ಲಿಯೂ ಹುಟ್ಟಿರಬಹುದು."[2]

ಮೇಲೆ, 'ಶೂನ್ಯ ಸಂಪಾದನೆ' ಎಂಬ ಶಿವಶರಣರ ವಚನಗಳ ವಿಶಿಷ್ಟ ಸ್ವರೂಪದ ಸಂಕಲನಗ್ರಂಥಗಳ ಹುಟ್ಟು, ಸ್ವರೂಪ, ಸಂಕಲನಕಾರರು–ಈ ಬಗಗೆ ಸಂಕ್ಷೇಪವಾಗಿ ಹೇಳಿದೆ. ವೀರಶೈವ ವಾಙ್ಮಯದಲ್ಲಿ 'ಶೂನ್ಯ ಸಂಪಾದನೆ' ಎಂಬ ಮಾತು ಸಂಕಲನಕಾರರು ಕೊಟ್ಟದ್ದಲ್ಲ. 'ಶೂನ್ಯ', 'ಶೂನ್ಯ ಸಿಂಹಾಸನ', ಈ ಮಾತುಗಳು ವಚನಕಾರರಿಗೆ ತೀರ ಪರಿಚಿತವಾಗಿ

ಪ್ರಂಥವು. ಇಂಥ ಅನೇಕ ಪಾರಿಭಾಷಿಕ ಪದಗಳನ್ನು—ಅಚ್ಚಗನ್ನಡದವನ್ನು ಕೂಡ (ಉದಾ, ಬೆಳಕು = ಜ್ಯೋತಿ, ಅರಿವು = ಜ್ಞಾನ, ಬಯಲು = ಶೂನ್ಯ, ಮುಂತಾದವು)—ವಚನಕಾರರು ಟಂಕಿಸಿ, ಧಾರ್ಮಿಕ ಶಾಸ್ತ್ರ ಸಾಹಿತ್ಯ ನಿರ್ಮಾಣದಲ್ಲಿ ಸಂಸ್ಕೃತವನ್ನೇ ಪೂರ್ತಿಯಾಗಿ ಅವಲಂಬಿಸದೆ ಕನ್ನಡ ನುಡಿಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಪ್ರಯೋಗದ ಮೂಲಕ ತೋರಿಸಿಕೊಟ್ಟರು ; ಒಳ್ಳೆಯ ಪದ್ಧತಿಯನ್ನು ಬಳಕೆಗೆ ತಂದರು. [ಆದರೆ, 'ಶೂನ್ಯ ಸಂಪಾದನೆ' ಎಂಬ ಮಾತೇನೋ ಸಂಸ್ಕೃತವೇ ! ವಚನಕಾರರು ವೈದಿಕ ವಾಙ್ಮಯದಲ್ಲಿ ಬಳಸಿದ್ದ ಸಂಸ್ಕೃತ ಪಾರಿಭಾಷಿಕ (ಶಾಸ್ತ್ರೀಯ) ಶಬ್ದಗಳನ್ನು ಧಾರಾಳವಾಗಿ ಬಳಸಿಕೊಳ್ಳಲು ಹಿಂದೆಗೆದಿಲ್ಲ.] "ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ಶೂನ್ಯ ಎಂಬ ಮಾತನ್ನು ಅಷ್ಟಾವರಣಗಳ ಬೆಲೆಯನ್ನರಿತು ಷಟ್‌ಸ್ಥಲ ಮಾರ್ಗವಾಗಿ ಉಪಾಸನೆ ಮಾಡಿದ ಸಾಧಕನಿಗೆ ಸಾಧನೆಯ ಅಂತ್ಯದಲ್ಲಿ ಒದಗುವ ಬ್ರಹ್ಮ ಸಾಕ್ಷಾತ್ಕಾರ ಎಂಬ ಅರ್ಥದಲ್ಲಿ, ಆ ಸಾಕ್ಷಾತ್ಕಾರದ ಅನುಭವ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಅಷ್ಟೇ ಅಲ್ಲ, ಸೃಷ್ಟಿಪೂರ್ವದ ಪರವಸ್ತುವನ್ನೂ ಶೂನ್ಯವೆಂದೇ ನಿರ್ದೇಶಿಸುತ್ತಾರೆ. ಅದನ್ನು ಅಚ್ಚಗನ್ನಡ ಶಬ್ದ 'ಬಯಲು' ಎಂದೂ ನಿರ್ದೇಶಿಸುತ್ತಾರೆ[3]". ಇಂಥ ಪದಗಳ ಬಳಕೆಯ ಪದ್ಧತಿಯನ್ನು ಕೆಲವು ವಚನಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು :

"ಆದಿ ಅನಾದಿ ಇಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು, ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರನೊಬ್ಬನೇ ಇದ್ದೆಯಲ್ಲ, ಇಲ್ಲದಂತೆ."

"ಬೀಜ ವೃಕ್ಷದಂತೆ ನೀನಿಪ್ಪೆಯಯ್ಯ. ನಿರಾಕಾರವೇ ಮೂರ್ತಿಯಾಗಿ, ಮೂರ್ತಿಯೇ ನಿರಾಕಾರವಾಗಿ, ಇವೆಲ್ಲವನುಳಿದು ಬಯಲಾಗಿಪ್ಪೆ ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ದೇವಾ."

"ಶ್ರುತಿತತಿಯ ಮಸ್ತಕದ ಅತಿಶಯದ ಬೆಳಗಿನೊಳು ಸಕಲ ಲೋಕಂಗಳು ಬೆಟ್ಟವಾಗಿ ಒಸರುವ ಸಾನಂದ ಬೆಳಗು ಬಿಂದುಗಳಾಗಿ ಬೆಳಗುತಿದ್ದಿತು ಬ್ರಹ್ಮ ಯೋಗಿನಾಥಾ."

"ಶರೀರವುಳ್ಳನ್ನಕ್ಕ ನೆಳಲಿಲ್ಲದಿರಬಾರದು. ಭೂಮಿಯುಳ್ಳನ್ನಕ ಆಕಾಶವಿಲ್ಲದೆ ಇರಬಾರದು. ನಾಮವುಳ್ಳನ್ನಕ್ಕ ನೀನಿಲ್ಲದೆ ಇರಬಾರದು. ಗುಹೇಶ್ವರ ಲಿಂಗವು ಶಕ್ತಿಗೊಳಗಾಯಿತ್ತಾಗಿ. ಬಚ್ಚಬರಿಯ ಬಯಲೆಂಬುದಕ್ಕೆ ಉಪಮಾನವಿಲ್ಲ."*

---

* ಉದಾಹರಿಸಿದ ವಚನಗಳನ್ನು 'ವಚನಶಾಸ್ತ್ರ ಸಾರ'-1 (ಪೂರ್ವಾರ್ಧ) ದಿಂದ (ಸಂ. ಫ. ಗು. ಹಳಕಟ್ಟಿ, 1931 ; ಪು. 2, 3, 4) ಆಯ್ದುಕೊಳ್ಳಲಾಗಿದೆ.

ಶೂನ್ಯ ಸಂಪಾದನೆ ಶಿವಶರಣರ ವಚನಗಳ ಸಂಕಲನ ಎಂದು ಹೇಳಿತಷ್ಟೆ. ಈ ಸಂಕಲನದಲ್ಲಿ ಸೇರ್ಪಡೆಯಾಗದ ವಚನಗಳೂ ಅಸಂಖ್ಯಾತವಾಗಿವೆ. ಈ ವಚನಗಳನ್ನು ರಚಿಸಿದ (ಅಥವಾ ಹೇಳಿದ, ಹಾಡಿದ) ವಚನಕಾರರನ್ನು ಅವರ ಅಂಕಿತಗಳಿಂದ ಗುರುತಿಸಬಹುದು. ಇಲ್ಲಿ ಕೆಲವು ಪ್ರಮುಖ ವಚನಕಾರರ ಹೆಸರುಗಳನ್ನು (ಅವರ ಅಂಕಿತದೊಂದಿಗೆ) ಸ್ಮರಿಸಬಹುದು : ದೇವರ ದಾಸಿಮಯ್ಯ (ರಾಮನಾಥ), ಬಸವಣ್ಣ (ಕೂಡಲ ಸಂಗಮದೇವ), ಚೆನ್ನ ಬಸವಣ್ಣ (ಕೂಡಲ ಚೆನ್ನ ಸಂಗಮದೇವ), ಅಲ್ಲಮಪ್ರಭು (ಗುಹೇಶ್ವರ),* ಮಹಾದೇವಿಯಕ್ಕ (ಚೆನ್ನಮಲ್ಲಿಕಾರ್ಜುನ), ಸಿದ್ಧರಾಮ (ಕಪಿಲಸಿದ್ಧ ಮಲ್ಲಿಕಾರ್ಜುನ), ಚೌಡಯ್ಯ (ಅಂಬಿಗರ ಚೌಡಯ್ಯ), ತೋಂಟದ ಸಿದ್ಧಲಿಂಗಯತಿ (ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ), ಸಕಳೇಶ ಮಾದರಸ (ಸಕಳೇಶ್ವರ ದೇವ).

ಶಿವಶರಣರ "ವಚನಗಳು ಶಾಸ್ತ್ರವೂ ಅಹುದು ; ಸಾಹಿತ್ಯವೂ ಅಹುದು."[4] ಈ ಎರಡು ಪ್ರಧಾನ ಲಕ್ಷಣಗಳನ್ನು ಗಮನದಲ್ಲಿರಿಸಿಕೊಂಡು ವಚನಗಳನ್ನು ಪರಿಶೀಲಿಸಿದರೆ, ಸಾಹಿತ್ಯ ಗುಣವುಳ್ಳ (ಅಥವಾ ಕಾವ್ಯಗುಣ ಎನ್ನಬಹುದು) ವಚನಗಳಲ್ಲಿ 'ವಿಶ್ವವ್ಯಾಪ್ತಿಯುಳ್ಳ ಧರ್ಮದ ತಿರುಳನ್ನು' ಗುರುತಿಸಬಹುದು ; ಸಮಾಜ ಸುಧಾರಣೆಯ ಕಳಕಳಿಯನ್ನು ಕಾಣಬಹುದು ; ಭಕ್ತಜೀವದ ಅಂತರಂಗದ ಹೋರಾಟದ ಮೊರೆ-ಕರೆಗಳನ್ನು ಆಲಿಸಬಹುದು ; ಲೋಕಾನುಭವದ ಸೂಕ್ತಿಸುಧೆಯನ್ನು ಸವಿಯಬಹುದು ; ಅನುಭಾವದ ಅಂತರ್ವಾಣಿಯನ್ನು ಕೇಳಬಹುದು. ಇಂಥ ವಚನಗಳಲ್ಲಿ ಭಾಷೆ ಕಾವ್ಯೋಚಿತವಾಗಿ ರೂಪಗೊಂಡಿರುತ್ತದೆ. ಇವು ಎಲ್ಲ ಕಾಲದ ಎಲ್ಲ ಜನಕ್ಕೂ ರುಚಿಸುವಂಥವು. ವೀರಶೈವ ಧರ್ಮದ ಶಾಸ್ತ್ರಭಾಗಕ್ಕೆ ಸಂಬಂಧಪಟ್ಟ ವಚನಗಳು ವೀರಶೈವರಿಗೂ ವೀರಶೈವ ಮತದ ತತ್ತ್ವಗಳನ್ನು ತಿಳಿಯಬೇಕೆಂಬ ಕುತೂಹಲಿಗಳಿಗೂ ಬೇಕಾದವು, ಬೆಲೆಯುಳ್ಳವು. ಇಲ್ಲಿ ಆ ತತ್ತ್ವಗಳಲ್ಲಿ ಮೂಲಭೂತವಾದವನ್ನು ತಿಳಿಸಿ, ಅವುಗಳನ್ನು ವಚನಗಳು ಹೇಗೆ ಪ್ರತಿ

---

* ಎಂ. ಚಿದಾನಂದಮೂರ್ತಿಯವರು ಅಲ್ಲನ ಅಂಕಿತ 'ಗೋಗೇಶ್ವರ' (ಗೊಗ್ಗೇಶ್ವರ) ಎಂದಿದ್ದು, ಕಾಲಕ್ರಮದಲ್ಲಿ ಗೋಗೇಶ್ವರ>ಗೋಹೇಶ್ವರ>ಗುಹೇಶ್ವರ ಎಂದು ಮಾರ್ಪಾಟಾಗಿದೆ ಎಂದು ವಾದಿಸಿದ್ದಾರೆ. ('ಸಂಶೋಧನ ತರಂಗ'–2 : 'ಗೋಗೇಶ್ವರ (ಗೊಗ್ಗೇಶ್ವರ)–ಅಲ್ಲಮನ ಅಂಕಿತ', ಎಂಬ ಲೇಖನ.)

ಪಾದಿಸುತ್ತವೆ ಎಂಬುದನ್ನು ತೋರಿಸಲು ಕೆಲವು ಉದಾಹರಣೆಗಳನ್ನು ಕೊಡಲಾಗುವುದು.

ವೀರಶೈವದಲ್ಲಿ 'ಷಟ್‌ಸ್ಥಲ ಸಿದ್ಧಾಂತ' (ಇದನ್ನು ಕನ್ನಡದಲ್ಲಿ 'ಆರುನೆಲೆ' ಎನ್ನಬಹುದು)* ಅದರ ನೆಲೆಗಟ್ಟು. ಶಿವೈಕ್ಯಪದವನ್ನು ಬಯಸುವ ಮುಮುಕ್ಷುವಿನ ಸಾಧನ ಪಥದ ಸೋಪಾನ ಮಾರ್ಗ. ಈ ಆರು ನೆಲೆಗಳಲ್ಲಿ ನಿಂತು ಶಿವಪದಕ್ಕೆ ಏರುವುದಕ್ಕೆ ಅಧಿಕಾರ ಬೇಕು. ಆ ಅಧಿಕಾರವನ್ನು ದೊರಕಿಸಿಕೊಳ್ಳಲು ಸಾಧನಪಥದಲ್ಲಿ ಶ್ರದ್ಧೆ, ಆಸಕ್ತಿಗಳನ್ನು ಬೆಳಸಿಕೊಳ್ಳಬೇಕು ; ಚಿತ್ತ ಶುದ್ಧಿಯನ್ನು ಪಡೆದುಕೊಳ್ಳಬೇಕು. ಇದು ಸಾಧ್ಯವಾಗಬೇಕಾದರೆ ಕೆಲವು ಪೂರ್ವ ಸಿದ್ಧತೆಗಳೂ ಆಚರಣೆಗಳೂ ಅಗತ್ಯ. ಇವನ್ನು 'ಅಷ್ಟಾವರಣ' ಎಂದು ಕರೆಯಲಾಗಿದೆ. ಇದರಲ್ಲಿ ಬಾಹ್ಯ, ಅಭ್ಯಂತರ ಎಂದು ಎರಡು ವಿಧ. ಬಾಹ್ಯ ಅಷ್ಟಾವರಣಗಳ ವಿವರಗಳು ಹೀಗಿವೆ: ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ, ಮತ್ತು ಮಂತ್ರ. ಇವುಗಳಲ್ಲಿ ಒಂದೆರಡನ್ನು ಅರಿಯೋಣ :

ಗುರು : ಗುರು ವೀರಶೈವ ದೀಕ್ಷೆಕೊಟ್ಟು ಜ್ಞಾನೋಪದೇಶಮಾಡತಕ್ಕವನು. ಶಿಷ್ಯರೊಂದಿಗೆ ಮಠದಲ್ಲಿ ಇರತಕ್ಕವನು. ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು ಎಂದು 3 ವಿಧ. ಗುರು ಶಾಸ್ತ್ರಜ್ಞ ; ಷಟ್‌ಸ್ಥಲಜ್ಞಾನಿ. "ಹುಟ್ಟುವಾಗ ಭವಿಯಾಗಿರುವ (ಭವಿ = ವೀರಶೈವ ದೀಕ್ಷೆ ಪಡೆದಿಲ್ಲದವನು, ಮೋಕ್ಷಕ್ಕೆ ಅವಕಾಶವಿಲ್ಲದವನು) ಮಗುವನ್ನು ಲಿಂಗಧಾರಣದಿಂದ ಭಕ್ತನನ್ನಾಗಿ ಮಾಡಬೇಕು."

"ಶಿವಭಕ್ತರಲ್ಲಿ ಗರ್ಭೋತ್ಪತ್ತವಾದ ಶಿಶುವಿಂಗೆ ಪಾದೋದಕದಿಂದ (ಪಾದೋದಕ = ಗುರುವಿನ ಪಾದ ತೊಳೆದ ನೀರು) ಜಳಕವ ಮಾಡಿಸುವುದು. ವಿಭೂತಿಯ ಪಟ್ಟವಂ ಕಟ್ಟಿ ಕೊರಳಲ್ಲಿ ಲಿಂಗಸಾಹಿತ್ಯವಂ (ಸಾಹಿತ್ಯ = ಸಹಿತತೆ, ಜೊತೆಗೂಡಿರುವುದು) ಮಾಡಿ, ಪ್ರಸಾದದ ಎಣ್ಣೆ ಬೆಣ್ಣೆ ಹಾಲುತುಪ್ಪವನೆರೆದು ಸಲಹುವುದೆ ಆಚಾರ."

— ಚೆನ್ನಬಸವಪುರಾಣ

---

* ಷಟ್‌ಸ್ಥಲಸಿದ್ಧಾಂತಕ್ಕೂ ಅದ್ವೈತ ಸಿದ್ಧಾಂತದ ಬ್ರಹ್ಮೋಪಾಸನ ಪ್ರಕರಣದಲ್ಲಿ ಹೇಳುವ 'ಸಪ್ತಭೂಮಿಕೆ'ಗಳಿಗೂ (ಏಳನೆಯದಾದ ತುರೀಯಾತೀತ ಭೂಮಿಕೆಯನ್ನು ಬಿಟ್ಟರೆ ಇವು ಆರೇ) ಹೋಲಿಕೆಯುಂಟೇ ಎಂಬುದು ವಿಚಾರಾರ್ಹ.

ಲಿಂಗ : ಕಲ್ಲಿನಿಂದ ಕಡೆದ ಸ್ಥಾವರಲಿಂಗವಲ್ಲ. ಲಿಂಗ ಎಂದರೆ ಪರವಸ್ತು, ಪರಮಾತ್ಮ; ಸತ್ ಚಿತ್ ಆನಂದ ಸ್ವರೂಪ. ಇದರಲ್ಲಿ ಮೂರು ವಿಧ: ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ. ವೀರಶೈವರಿಗೆ ಇಷ್ಟಲಿಂಗ ಮುಖ್ಯ; ದೇಹದ ಮೇಲೆ ಯಾವಾಗಲೂ ಧರಿಸಿಕೊಂಡಿರ ಬೇಕು. ಪೂಜಾಕಾಲದಲ್ಲಿ ಎಡ ಅಂಗೈ ಮೇಲಿಟ್ಟು ಪೂಜಿಸತಕ್ಕದ್ದು. ಒಂದು ವಚನ :

"ಬಯಲ ಮೂರ್ತಿಯಮಾಡಿ, ತನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು. ಬಯಲ ಮೂರ್ತಿಯ ಅಮೂರ್ತಿಯಮಾಡಿ ಎನ್ನ ಪ್ರಾಣದೊಳಗೆ ಇರಿಸಿದನಯ್ಯಾ ಶ್ರೀಗುರು. ಬಯಲು ಬಯಲನೇ ಬಯಸಿ, ಬಯಲೆಂದೆನಿಸಿ, ಎನ್ನ ಭಾವದಲ್ಲಿರಿಸಿದ ನಯ್ಯಾ ಶ್ರೀಗುರು. ಇದು ಕಾರಣ, ಎನ್ನ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ, ನಾನು ಅಂಗಲಿಂಗ ಸಂಬಂಧಿಯಾದೆನಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ."

ಜಂಗಮ : ಜಂಗಮ ಎಂಬ ಪದದ ಅರ್ಥ 'ಚರಿಸುತ್ತಿರುವುದು', 'ಚರಿಸುತ್ತಿರುವವನು' ಎಂದು. ಈತನೂ ಗುರುವೆ. ಅನುಭವಿ; ಜ್ಞಾನ ಸಂಪನ್ನ. ಒಂದುಕಡೆ ನಿಲ್ಲತಕ್ಕವನಲ್ಲ. ಸದಾ ಸಂಚಾರಿ. ಮತಪ್ರಚಾರ, ಶಾಸ್ತ್ರಬೋಧೆ, ಜ್ಞಾನೋಪದೇಶಗಳಲ್ಲಿ ನಿರತ. ಭಕ್ತರು ಜಂಗಮನ ನಿರೀಕ್ಷೆಮಾಡುತ್ತಿದ್ದು, ಬಂದಾಗ ಆತನ ಸತ್ಕಾರವನ್ನು ಮಾಡಬೇಕು. ಜಂಗಮ ಸೇವೆಯನ್ನು 'ದಾಸೋಹ' (<ದಾಸೋಽಹಂ=ನಾನು ನಿನ್ನ ದಾಸ) ಎಂದು ಕರೆದಿದೆ.

ವೀರಶೈವ ಮತದಲ್ಲಿ ಗುರು-ಲಿಂಗ-ಜಂಗಮ ಕೈಂಕರ್ಯಕ್ಕೆ 'ತ್ರಿವಿಧ ದಾಸೋಹ' ಎಂದು ಶಾಸ್ತ್ರದ ಮಾತು. ವಿಭೂತಿ ರುದ್ರಾಕ್ಷಿಗಳ ಧಾರಣೆ ಎಲ್ಲ ಶೈವರಲ್ಲೂ ಉಂಟು; ವೀರಶೈವರಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ.

ಮಂತ್ರ : '(ಓಂ) ನಮಶ್ಶಿವಾಯ' ಎಂಬುದು ಪಂಚಾಕ್ಷರಿ, ಷಡಕ್ಷರಿ, ಮಂತ್ರ; ಗುರು ಶಿಷ್ಯನಿಗೆ ಉಪದೇಶಮಾಡತಕ್ಕದ್ದು.

ಷಟ್‌ಸ್ಥಲಸಿದ್ಧಾಂತ

"ಷಟ್‌ಸ್ಥಲಸಿದ್ಧಾಂತದ ಪ್ರಕಾರ ಪರವಸ್ತುವೊಂದೇ ಲಿಂಗ, ಅಂಗ (ಎಂದರೆ, ಪರಮಾತ್ಮ ಜೀವಾತ್ಮರುಗಳೆಂದು) ಎಂದು ವಿಂಗಡವಾಯಿತು. ಪ್ರವೃತ್ತಿ ಮಾರ್ಗದಲ್ಲಿ ಅಂತಃಕರಣಗಳೂ ಇಂದ್ರಿಯಗಳೂ ದೇಹವೂ ಜೀವಾತ್ಮನಿಗೆ ತಪ್ಪದೆ ಬರುವುವಾದರೂ ಅವುಗಳಿಂದ ಬಿಡುಗಡೆಹೊಂದುವುದಕ್ಕೆ

ತಕ್ಕ ಉಪಾಯವನ್ನು ಪರಮಾತ್ಮನು ಜೊತೆಯಲ್ಲಿಯೇ ಕಲ್ಪಿಸಿಕೊಟ್ಟಿರುವನು. ಲಿಂಗ ಅಂಗ ಇವು ಪರಸ್ಪರ ಅಗಲಿರುವುದು ಸಾಧ್ಯವೇ ಇಲ್ಲ. ಅಂಗದ ಜೊತೆಯಲ್ಲಿಯೇ ಲಿಂಗ ತಕ್ಕ ರೀತಿ ಪರಿಣಾಮಹೊಂದುತ್ತ ಅಂಗದಿಂದ ಸೇವೆ ಮಾಡಿಸಿಕೊಳ್ಳುವುದಕ್ಕೂ ಇದ್ದೇ ಇರುತ್ತದೆ. ಪರವಸ್ತುವಿನಲ್ಲಿರುವ ಶಕ್ತಿಯು ಒಂದು ಭಾಗ ಅಂಗದಲ್ಲಿ ಸೇರಿಕೊಂಡು ಭಕ್ತಿ ಎಂಬ ಹೆಸರಿನಿಂದ ವ್ಯವಹರಿಸಲ್ಪಡುವುದು. ಲಿಂಗವನ್ನು ಆಶ್ರಯಿಸಿದ ಶಕ್ತಿಗೆ ಶಕ್ತಿಯೆಂದೇ ಹೆಸರು. ಸೃಷ್ಟಿ ಕ್ರಮದಲ್ಲಿ ಕಾರಣತನು ಒದಗಿದಾಗ ಅಂಗ ಯೋಗಾಂಗವಾಗಿ, ಸೂಕ್ಷ್ಮತನುವಿನಲ್ಲಿ ಭೋಗಾಂಗವಾಗಿ, ಸ್ಥೂಲತನುವಿನಲ್ಲಿ ತ್ಯಾಗಾಂಗವಾಗಿ ಪರಿಣಾಮ ಹೊಂದಿತು. ಈ ತನುಗಳಲ್ಲಿ ಕ್ರಮವಾಗಿ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗಗಳಾಗಿ ಲಿಂಗ ಪರಿಣಾಮಹೊಂದಿ ಸೇವೆಮಾಡಿಸಿಕೊಳ್ಳಲು ಸಿದ್ಧವಾಗಿದೆ. ಅಂಗ ಇಳಿದುಬಂದ, ಪುನಃ ಭಕ್ತಿಯ ಸಹಾಯದಿಂದ ಏರಿಹೋಗುವ, ಆರು ಮೆಟ್ಟಿಲುಗಳೇ ಷಟ್‌ಸ್ಥಲಗಳು. ಪ್ರವೃತ್ತಿ ಕ್ರಮದಲ್ಲಿ ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಹೇಶ ಮತ್ತು ಭಕ್ತ ಎಂಬವು ಮೆಟ್ಟಿಲುಗಳು... ದೀಕ್ಷಾಸಂಸ್ಕಾರವಾಗಿ ಸಂಸಾರಲೋಲನಾದ ಜೀವಾತ್ಮನು ಸಂಸಾರವಿಮುಖನಾದ ಶುದ್ಧಾತ್ಮನಾಗಿ ಭಕ್ತನೆನಿಸಲು ನಿವೃತ್ತಿ ಕ್ರಮದಲ್ಲಿ ಭಕ್ತಸ್ಥಲದಿಂದ ಮೇಲಕ್ಕೆ ಏರುತ್ತ ಹೋಗುತ್ತಾನೆ..."[5] ಈ ಷಟ್‌ಸ್ಥಲದ ಪ್ರತಿಯೊಂದು ಮೆಟ್ಟಿಲಿನಲ್ಲಿಯೂ ಆರು ಒಳಪಂಗಡಗಳನ್ನು ಮಾಡಿ, 36 ಸ್ಥಲಗಳನ್ನು ಕಲ್ಪಿಸಲಾಗಿದೆ. ಹೀಗೆಯೇ ಈ 36 ಒಳಸ್ಥಲಗಳನ್ನು ವಿಭಜಿಸಿ 216 ಸ್ಥಲಗಳನ್ನು ಮಾಡಿರುವುದೂ ಉಂಟು. ಇನ್ನೊಂದು ಬಗೆಯ ವಿಂಗಡಣೆಯ ಪ್ರಕಾರ ಅಂಗಸ್ಥಲ ಲಿಂಗಸ್ಥಲಗಳನ್ನು 101 ಸ್ಥಲಗಳಾಗಿ ವಿಂಗಡಿಸಿದ್ದಾರೆ ಷಟ್‌ಸ್ಥಲ ಶಾಸ್ತ್ರಕಾರರು. ಷಟ್‌ಸ್ಥಲ, ಏಕೋತ್ತರಶತ (101) ಸ್ಥಲ— ಈ ಕ್ರಮಗಳು ಹೆಚ್ಚು ಪ್ರಸಿದ್ಧವಾಗಿವೆ.

ಈ ಎಲ್ಲ ಸ್ಥಲಗಳ ವಿಷಯ ಪ್ರತಿಪಾದನೆಯನ್ನು ಅಲ್ಲಮ ಪ್ರಭುವಿನಿಂದ ಮೊದಲ್ಗೊಂಡು ಅನೇಕ ಶಿವಶರಣರೂ ಇತರ ಕವಿಗಳೂ ತಮ್ಮ ವಚನಗಳಲ್ಲೂ ಕೃತಿಗಳಲ್ಲೂ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಅವರಲ್ಲಿ ಮುಖ್ಯರಾದವರ* ಸಂಕ್ಷಿಪ್ತ ಪರಿಚಯ :

---

* ಈ ಎಲ್ಲ ವಚನಕಾರರ ಸಂಬಂಧವಾದ ಹೆಚ್ಚಿನ ವಿವರಗಳನ್ನು ಆರ್. ನರಸಿಂಹಾಚಾರ್ಯರ ಕವಿಚರಿತೆಯ ಸಂಪುಟಗಳಿಂದ ಸಂಗ್ರಹಿಸಿದೆ. ಈಚೆಗೆ ನಡೆದಿರಬಹುದಾದ ಸಂಶೋಧನೆಗಳನ್ನು ಗಮನಿಸುವ ಗೋಜಿಗೆ ಹೋಗಿಲ್ಲ.

ಅಲ್ಲಮಪ್ರಭು (ಸು. 1160) : ಈತನು ಷಟ್‌ಸ್ಥಲ ಜ್ಞಾನ ಚಾರಿತ್ರ, ಶೂನ್ಯಸಂಪಾದನೆ, ಮಂತ್ರಗೋಪ್ಯ, ಸೃಷ್ಟಿಯವಚನ, ಬೆಡಗಿನವಚನ, ಮಂತ್ರಮಾಹತ್ಮ್ಯ, ಕಾಲಜ್ಞಾನವಚನ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಎಂ. ಆರ್. ಶ್ರೀ. ಯವರು ಅಲ್ಲಮನನ್ನು 'ಪರಮಜಂಗಮ' ವರ್ಗದವನು, 'ಪರಶಿವ ಮೂರ್ತಿ' ಸಮಾನ ಎಂದಿದ್ದಾರೆ. "ಶ್ರೀಮದ್ದೇಶಿಕ ಷಟ್ಸ್ಥಲ ಚಕ್ರವರ್ತಿ ಬ್ರಹ್ಮಾನಂದ ಪರಶಿವಮೂರ್ತಿ ವಿರಕ್ತಶಿಖಾಮಣಿ ಮಾಯಾ ಕೋಳಾಹಳ ಪ್ರಭುದೇವರು" ಎಂದು ಕೆಲ ವೀರಶೈವಕವಿಗಳು ಈತನನ್ನು ಹೊಗಳಿದ್ದಾರೆ. ಇವನನ್ನು ಕುರಿತು 'ಪ್ರಭುದೇವರ ರಗಳೆ' (ಹರಿಹರ), ಪ್ರಭುಲಿಂಗಲೀಲೆ (ಚಾಮರಸ), ಪ್ರಭುಗೀತೆ (ಮಗ್ಗೆಯಮಾಯಿದೇವ; 1430), ಪ್ರಭುದೇವರ ಪುರಾಣ (ಹರೀಶ್ವರ: 1606), ಪ್ರಭುನಟನ ತಾರಾವಳಿ (ಮರಿರಾಜವಟ್ಟೀಶ : 1650) ಎಂಬ ವಿವಿಧ ಪ್ರಕಾರಗಳ ಕೃತಿಗಳು ರಚಿತವಾಗಿವೆ. ಈತ ಬಸವೇಶ್ವರರು ಸ್ಥಾಪಿಸಿದ ಅನುಭವಮಂಟಪದ ಶೂನ್ಯಸಿಂಹಾಸನವನ್ನು ಅಲಂಕರಿಸಿದ್ದು, ಆ ಕಾಲದ ಎಲ್ಲ ಶಿವಶರಣರ ಗೌರವಕ್ಕೆ ಪಾತ್ರನಾಗಿದ್ದನು. ಈತ ಪರಮ ವೈರಾಗ್ಯಮೂರ್ತಿ.

ಬಸವೇಶ್ವರ : ಇವರ ವಿಚಾರವನ್ನು ಕನ್ನಡಿಗರಿಗೆ ಪರಿಚಯಮಾಡಿ ಕೊಡಬೇಕಾದದ್ದು ಅನಗತ್ಯ. ಈಚಿನ ದಿನಗಳಲ್ಲಿ ಈತ ವಿಶ್ವವಿಖ್ಯಾತ ವ್ಯಕ್ತಿ ಯಾಗಿದ್ದಾನೆ. ಬಿಜ್ಜಳನ (1156–1167) ಮಂತ್ರಿ. ವೀರಶೈವ ಮತ ಪ್ರವರ್ತಕ. ಜನ್ಮಸ್ಥಳ ಇಂಗಳೇಶ್ವರದ ಬಾಗೇವಾಡಿ. ಇವರ ಸೋದರಿಯ ಮಗನೇ ಚೆನ್ನಬಸವ. ಹಿಂದಿನ ಮತ್ತು ಇಂದಿನ ಕಾಲಗಳಲ್ಲಿ ಬಸವೇಶ್ವರರನ್ನು ಕುರಿತು ಹುಟ್ಟಿರುವಷ್ಟು ಗ್ರಂಥಗಳು ಬಹುಶಃ ಬೇರೆ ಯಾವ ಕನ್ನಡ ಗ್ರಂಥ ಕರ್ತನ ವಿಷಯವಾಗಿಯೂ ಹುಟ್ಟಿಲ್ಲ ಎಂದರೆ ಅತ್ಯುಕ್ತಿಯಾಗದು. ಇವರ ವಿಷಯವಾಗಿ ಹುಟ್ಟಿರುವ ಪ್ರಾಚೀನ ಕೃತಿಗಳು : ಬಸವರಾಜ ದೇವರ ರಗಳೆ (ಹರಿಹರ), ಬಸವಪುರಾಣ (ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥ ; ಕನ್ನಡ ದಲ್ಲಿ ಭೀಮಕವಿ), ಮಲಬಸವ ಚಾರಿತ್ರ, ಬಸವಶತಕ, ಬಸವಸ್ತೋತ್ರದ ತ್ರಿವಿಧಿ, ಬಸವ ಸ್ತೋತ್ರ ರಚನೆ, ಇತ್ಯಾದಿ. ಭಕ್ತಿಸಾಧನೆಯಲ್ಲಿ ಅಗ್ರಗಣ್ಯ ರೆನಿಸಿ, 'ಭಕ್ತಿಭಂಡಾರಿ' ಎಂದು ಪ್ರಸಿದ್ಧರಾದವರು. ಸಮಾಜ ಸುಧಾರಕರು. ಜಾತಿಭೇದ, ಲಿಂಗಭೇದ, ವರ್ಗಭೇದಗಳನ್ನು ತೊಡೆದುಹಾಕಲು ಪ್ರಯತ್ನಿಸಿ, ಯಶಸ್ವಿಯಾದ ಮಹಾಪುರುಷ.

ಮಹಾಲಿಂಗದೇವ (ಸು. 1425) : ಈತನು 'ಏಕೋತ್ತರ ಶತಸ್ಥಲ', ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರವಚನದ ಟೀಕು, ಇವುಗಳನ್ನು ಬರೆದಿದ್ದಾನೆ. ಇವನ ಶಿಷ್ಯ ಜಕ್ಕಣಾರ್ಯನು ವಿಜಯನಗರದ ಪ್ರೌಢದೇವರಾಯನಲ್ಲಿ (1419–1446) ದಂಡೇಶನಾಗಿದ್ದನು.

ಜಕ್ಕಣಾರ್ಯ : ಈತನು 'ಏಕೋತ್ತರ ಶತಸ್ಥಲ'ವನ್ನು ರಚಿಸಿದ್ದಾನೆ. ಮೇಲೆ ಹೇಳಿದ ಮಹಾಲಿಂಗದೇವನ ಶಿಷ್ಯ.

ಮಗ್ಗೆಯ ಮಾಯಿದೇವ (1430): ಈತ ಅನುಭವಸೂತ್ರ, ಪ್ರಭುಗೀತೆ, ಏಕೋತ್ತರ ಶತಸ್ಥಲ ಷಟ್ಪದಿ, ಷಟ್ಸ್ಥಲ ಗದ್ಯ, ಶತಕತ್ರಯ, ವಚನಗಳು, ಇವನ್ನು ಬರೆದಿದ್ದಾನೆ. ಈತ ಐಪುರದ ಸೋಮನಾಥದೇವರ ಭಕ್ತ. ಈತನ 'ಏಕೋತ್ತರ ಶತಸ್ಥಲ ಷಟ್ಪದಿ' ಗ್ರಂಥ ದೊರಕಿಲ್ಲವೆಂದು ಕವಿಚರಿತ್ರೆಯಿಂದ ತಿಳಿದುಬರುತ್ತದೆ. ಷಟ್‌ಸ್ಥಲ ವಿಚಾರವಾಗಿ ಷಟ್ಪದಿಯಲ್ಲಿ ರಚಿತವಾದ ಒಂದು ಅಪೂರ್ವ ಗ್ರಂಥ ಸಿಕ್ಕದಿರುವುದು ಒಂದು ದೊಡ್ಡ ಕೊರತೆ.

ತೋಂಟದ ಸಿದ್ಧೇಶ್ವರ (ಸು. 1476) : ಈತನಿಗೆ ತೋಂಟದ ಸಿದ್ಧಲಿಂಗ ಯತಿ ಎಂಬ ಹೆಸರೂ ಉಂಟು. ಕಗ್ಗೆರೆಯ ಬಳಿಯ ನಾಗಿಣೀ ನದಿಯ ತೀರದಲ್ಲಿ ತೋಟದೊಳಗೆ ಬಹಳಕಾಲ ಶಿವಯೋಗದಲ್ಲಿ ಇದ್ದುದರಿಂದ ಈತನಿಗೆ 'ತೋಂಟದ' ಎಂಬ ವಿಶೇಷಣ ಬಳಕೆಗೆ ಬಂದಿತು. ಇವನು ತುಮಕೂರು ಜಿಲ್ಲೆ ಕುಣಿಗಲಿಗೆ ಸಮೀಪದಲ್ಲಿರುವ ಎಡೆಯೂರಿನಲ್ಲಿ ಸಮಾಧಿ ಹೊಂದಿದನು. ಈತನು ತನ್ನ ಕಾಲದಲ್ಲಿ ಬಹಳ ಪ್ರಸಿದ್ಧನಾದ ಗುರುವಾಗಿದ್ದು, ದೊಡ್ಡ ಶಿಷ್ಯಮಂಡಲಿಯನ್ನು ಹೊಂದಿದ್ದನು. ಇವನ ಭಕ್ತರು ಕೆಲವರು ಸೇರಿ ಇವನಿಗೆ ಎಡೆಯೂರಿನಲ್ಲಿ ಒಂದು ಕಲ್ಲುಮಠವನ್ನು ಕಟ್ಟಿಸಿಕೊಟ್ಟರು. ಈತನ ಸ್ಮಾರಕವಾಗಿ ಕಟ್ಟಿದ ಸಿದ್ಧಲಿಂಗೇಶ್ವರ ದೇವಾಲಯದ ಪ್ರಾಕಾರದಲ್ಲಿ ಬರೆದಿರುವ ಶಿಲಾಶಾಸನದಲ್ಲಿ ಈತನ ಮಹಿಮೆಯನ್ನು ಕೊಂಡಾಡಿದೆ. ಅದರಲ್ಲಿ ಈತನ ಬಗೆಗೆ–ಜ್ಞಾನಕ್ರಿಯಾಸ್ವರೂಪ, ಸರ್ವಾಂಗಲಿಂಗಿ, ಷಟ್‌ಸ್ಥಲಜ್ಞಾನಿ, ಅಷ್ಟಾವರಣಾಲಂಕರಣ, ದ್ವೈತಾದ್ವೈತತಿಮಿರ ಮಾರ್ತಾಂಡ, ಎಂಬ ವಿಶೇಷಣಗಳನ್ನು ಹೇಳಿದೆ. ಈತನನ್ನು ಕುರಿತು ಹಲವು ಗ್ರಂಥಗಳು ಹುಟ್ಟಿವೆ. ಈತನ ಕೃತಿ 'ಷಟ್‌ಸ್ಥಲಜ್ಞಾನಸಾರಾಮೃತ'.

ಇವರಲ್ಲಿ 701 ವಚನಗಳಿವೆ. ವಚನಗಳ ಅಂಕಿತ 'ಮಹಾಲಿಂಗಗುರುಶಿವ ಸಿದ್ಧೇಶ್ವರ'. ಇದರಲ್ಲಿ ಷಟ್‌ಸ್ಥಲಸಿದ್ಧಾಂತವನ್ನು ವಿಸ್ತಾರವಾಗಿ ನಿರೂಪಿಸಿದೆ. ಉದಾಹರಣೆಗಾಗಿ ಒಂದು ವಚನ :

''ಉದಯಕಾಲದೊಳೆದ್ದು ಹೂಪತ್ರೆಗಳ ಕೊಯ್ದೆಂದು ಹೊರ ಉಪಚಾರ ಮಾಡುವುದೆಲ್ಲ ಬರಿಯ ಭಾವದ ಬಳಲಿಕೆ ನೋಡಾ. ಅಳಲದೆ ಬಳಲದೆ ಆಯಾಸಬಡದೆ ಒಳಗಣ ಜ್ಯೋತಿಯ ಬೆಳಗಿನ ಕಳೆಯ ಕಮಲವ ಪೂಜಿಸಬಲ್ಲ ಶರಣಂಗೆ ಬೆಳಗಾಗಿ ಎದ್ದು ಪೂಜಿಸಿಹೆನೆಂಬ ಕಳವಳವೇನು ಹೇಳಾ ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.''

ಗುಬ್ಬಿ ಮಲ್ಲಣ್ಣ (ಸು. 1475) : 'ಭಾವಚಿಂತಾರತ್ನ' ಎಂಬ ವಾರ್ಧಿಕ ಷಟ್ಪದಿಯ ಕಾವ್ಯದಿಂದಾಗಿ ಮಲ್ಲಣಾರ್ಯನ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹವೆನಿಸಿದೆ. ಅವನ ಪಿತಾಮಹನೆ ಈ ಮಲ್ಲಣ್ಣ ; ತೋಂಟದ ಸಿದ್ಧಲಿಂಗಯತಿಯ ಶಿಷ್ಯ. ಈತನು 'ಗಣಭಾಷ್ಯರತ್ನಮಾಲೆ' ಎಂಬ ವಚನಗ್ರಂಥವನ್ನೂ, 'ವಾತುಲತಂತ್ರ' ಎಂಬ ಶೈವಾಗಮಕ್ಕೆ ಕನ್ನಡದಲ್ಲಿ ಟೀಕೆಯನ್ನೂ ಬರೆದಿದ್ದಾನೆ. 'ಗಣಭಾಷ್ಯರತ್ನಮಾಲೆ'ಯಲ್ಲಿ ಅಂಗಸ್ಥಲ 44, ಲಿಂಗಸ್ಥಲ 57, ಈ 101 ಸ್ಥಲಗಳಲ್ಲಿ ವೀರಶೈವರು ಆಚರಿಸಬೇಕಾದ ಆಚರಣೆಗಳನ್ನು ವಿವರಿಸಿದ್ದಾನೆ. ಗ್ರಂಥದ ಬಗೆಗೆ ಕವಿಯ ಪ್ರಶಸ್ತಿ ವಾಕ್ಯಗಳು: ''ಇದು ಪರಮವೀರಶೈವಸಿದ್ಧಾಂತ ತತ್ವಜ್ಞಾನ, ಇದು ವೀರಶೈವ ಪ್ರತಿಷ್ಠಾಸ್ಥಾಪನಾಚಾರ್ಯ, ಇದು ದಿವ್ಯವೇದಾಂತಶಿರೋಮಣಿ, ಇದು ಸಮಸ್ತ ಶಾಸ್ತ್ರಮುಖ್ಯಮುಖದರ್ಪಣ'' ಇತ್ಯಾದಿ. ಗ್ರಂಥರಚನೆಯ ಉದ್ದೇಶ ಗಮನಾರ್ಹ : ''ಬಸವರಾಜದೇವರು, ಚೆನ್ನಬಸವದೇವರು, ಪ್ರಭುದೇವರು, ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ನೂರೊಂದರಲ್ಲಿ ನಡೆದು ನುಡಿದ ವಚನಗಳು ಸ್ಥಲಭಿನ್ನವಾಗಿರ್ದೊಡೆ ಚಂದವಲ್ಲೆಂದು ಕಂಠಮಾಲೆಯ ಕೋದು ಹಣಿಗೆಯಚಿಡು ಸೇರಿಸಿದೆನು ನಿಮ್ಮ ಕಾರುಣ್ಯದ ಶಿಶು ಗುಬ್ಬಿಯ ಮಲ್ಲಣ್ಣಗಳು." ಅಲ್ಲದೆ, ''ವರವೇದಶಾಸ್ತ್ರಪುರಾಣಾಗಮೇತಿಹಾಸಾದಿ ನಾನಾ ಧರ್ಮಶಾಸ್ತ್ರೋಕ್ತಗ್ರಂಥಗಳಿಂ ಆದ್ಯರ ವಚನಂಗಳಿಂ ನೂರೊಂದು ಸ್ಥಲಮಾಗೆ ಸೇರಿಸಿದಂ ಗುಬ್ಬಿಯ ಮಲ್ಲಣ್ಣಗಳ್'' ಎಂಬ ಮಾತಿನಿಂದ ಗ್ರಂಥಸ್ವರೂಪ ಪರಿಚಯವಾಗುತ್ತದೆ. ಇದು ಸಂಸ್ಕೃತ ಪ್ರಮಾಣವಾಕ್ಯಸಹಿತವಾದ, ನಡುನಡುವೆ ವಿವರಣೆಗಳುಳ್ಳ, ಏಕೋತ್ತರಶತಸ್ಥಲ ವಿಷಯಕವಾದ ವಚನಗಳ ಸಂಕಲನಗ್ರಂಥ ಎಂದು ಹೇಳಬಹುದು.

ಪದ್ಯರೂಪದ ಗ್ರಂಥಗಳು

ಶಿವತತ್ತ್ವ ಚಿಂತಾಮಣಿ : ಇದರ ಕರ್ತೃ ಲಕ್ಕಣ್ಣ ದಂಡೇಶ. ಇವನು ವಿಜಯನಗರದ ದೊರೆ ಪ್ರೌಢದೇವರಾಯನ ಆಳಿಕೆಯಲ್ಲಿ (1419–1446) ಅವನ ಮಂತ್ರಿಯಾಗಿಯೂ ಆಪ್ತ ಮಿತ್ರನಾಗಿಯೂ ಇದ್ದನು. ಅನೇಕ ಶಾಸನಗಳು ಈ ಅಂಶವನ್ನು ಸ್ಥಿರಪಡಿಸಿವೆ. ಶಿವತತ್ತ್ವ ಚಿಂತಾಮಣಿಯಲ್ಲಿ 2121 ವಾರ್ಧಿಕ ಷಟ್ಪದಿಗಳಿವೆ. ಪ್ರತಿಪದ್ಯವೂ 'ವಿಮಲ ಚರಣಾಂಬುಜಕ್ಕೆ ಶರಣು' ಎಂದು ಮುಗಿಯುವುದು ಶತಕಗಳ ಪದ್ಧತಿಯನ್ನು ನೆನಪಿಗೆ ತರುತ್ತದೆ. ಇದರಲ್ಲಿ–ನಿತ್ಯಾನಿತ್ಯವಸ್ತು ವಿವರಣ, ಸಕಲ ನಿಷ್ಕಲ ವಿಚಾರ, ಶಿವನ 25 ಲೀಲೆಗಳು, ಭುವನಕೋಶ, ಶಿವಲೋಕ ವರ್ಣನೆ, ಶಿವನಂದೀಶ ಸಂವಾದ, ಬಸವ ಚರಿತ, ಗಣಪ್ರಶಂಸೆ, ಧರ್ಮಾಧರ್ಮ ವಿವರಣ, ಪಂಚಾಕ್ಷರೀಭಸಿತ ರುದ್ರಾಕ್ಷಿಗಳ ಮಾಹಾತ್ಮ್ಯ, ಲಿಂಗಧಾರಣ, ಶಿವಪೂಜಾವಿಧಿ, ಪಾದೋದಕ ಪ್ರಸಾದ ಮಹಿಮೆ, ಶಿವಾಧಿಕ್ಯ, ಮಾಹೇಶ್ವರಾಚರಣೆ, ಷಟ್‌ಸ್ಥಲ, ಇವೇ ಮುಂತಾದ ವಿಷಯಗಳು ಪ್ರತಿಪಾದಿತವಾಗಿವೆ. "ಇದು ವೀರಶೈವ ಸಿದ್ಧಾಂತ ತಂತ್ರದ ಸೂತ್ರ, ಇದು ಸಕಲ ವೇದಾಗಮದ ಶಿಖಾಸೂತ್ರ, ಇದು ಪರಮ ನಿರ್ವಾಣ ಪರಿಪದವೆನಿಪ ಶಾಂಭವೀಯ ಯೋಗದ ಸೂತ್ರ" ಎಂದು ಗ್ರಂಥದ ವಿಷಯ ನಿರೂಪಣೆಯ ಬಗೆಗೆ ಕವಿಯ ಮಾತು, ಹಾಗೂ ಅದರ ಹೆಸರು, ಗ್ರಂಥದಲ್ಲಿ ವೀರಶೈವ ತತ್ತ್ವ ಪ್ರತಿಪಾದನೆಗೆ ಪ್ರಾಧಾನ್ಯವಿದೆಯೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಕೃತಿ, "ವೀರಶೈವಕ್ಕೆ ಸಂಬಂಧಿಸಿದ್ದು. ಇದರಲ್ಲಿ ಬಾರದ ತಾತ್ತ್ವಿಕ ಮತ್ತು ಚಾರಿತ್ರಿಕ ವಿಷಯವಿಲ್ಲ... ವೀರಶೈವ ವಿಶ್ವಕೋಶವನ್ನು ಒಂದೇ ಗ್ರಂಥದಲ್ಲಿ ಒದಗಿಸಿಕೊಡಬೇಕೆಂಬ ಹೇತು ಇದಕ್ಕೆ ಪ್ರೇರಕವಾಗಿದೆ. 'ಶಿವತತ್ತ್ವ ಚಿಂತಾಮಣಿ' ಎಂಬ ಹೆಸರೂ ಸಾರ್ಥಕವಾಗಿದೆ. ಲಕ್ಕಣ್ಣನಲ್ಲಿ ಚರಿತ್ರಕಾರ ಕವಿಯ ಶಕ್ತಿಯಿದೆ".[6] ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ' ಕೆಲವು ವಿಷಯಗಳಲ್ಲಿ ಇದಕ್ಕೆ ಋಣಿಯಾಗಿದೆ ಎಂಬುದು ಗಮನಾರ್ಹ. ಲಕ್ಕಣ್ಣ ದಂಡೇಶನು ತನ್ನ ಕೃತಿಯಲ್ಲಿ 18 ವೀರಶೈವ ಪುರಾಣ ಲಕ್ಷಣಗಳನ್ನು ವಿವರಿಸಿದ್ದು 'ವೀರಶೈವ ಪುರಾಣ ಪ್ರವರ್ತಕ' ಎಂಬ ಪ್ರಶಸ್ತಿಗೆ ಪಾತ್ರನಾಗತಕ್ಕವನು. ಗುರುರಾಜ ಚಾರಿತ್ರದ ಸಿದ್ಧನಂಜೇಶನು ಲಕ್ಕಣನ ಕೃತಿಯನ್ನು 'ಶಾಸ್ತ್ರ' ಎಂದೇ ಎಣಿಸಿದ್ದಾನೆ.

ವೀರಶೈವಾಮೃತ ಪುರಾಣ : ಗುಬ್ಬಿಯ ಮಲ್ಲಣಾರ್ಯ (1513) ಇದರ ಕರ್ತೃ. ಮೇಲೆ ತಿಳಿಸಿದ ಗುಬ್ಬಿ ಮಲ್ಲಣ್ಣನ ಮೊಮ್ಮಗ. ತನ್ನ ಕಾಲದಲ್ಲಿ ಉಭಯಭಾಷಾ ಕವಿ ಎಂದೂ ಬಸವಪುರಾಣದ ಅರ್ಥವನ್ನು ಹೇಳುವುದರಲ್ಲಿ ಸಮರ್ಥನೆಂದೂ ಪ್ರಸಿದ್ಧನಾಗಿದ್ದನು. ಆದ್ದರಿಂದ 'ಬಸವ ಪೌರಾಣದ ಮಲ್ಲಣಾರ್ಯ' ಎಂದು ಹೆಸರು ಹೊಂದಿದ್ದನು. ಚೇರಮನು ತನ್ನ ಚೇರಮ ಕಾವ್ಯದಲ್ಲಿ "ವೇದಾಂತ ಸಿದ್ಧಾಂತ ಲಕ್ಷಣ ವೈದ್ಯ ಭರತ ಸಾಮುದ್ರಿಕ ಜ್ಯೋತಿಷಾಲಂಕಾರ ಸರಸಗೀತಂ । ವಾದ್ಯ ಶಕುನ ಸದ್ವ್ಯಾಕರಣ ಸೂಪ ರತಿ ಶಾಸ್ತ್ರ"ಗಳಲ್ಲಿ ಮಲ್ಲಣಾರ್ಯ ಪರಿಣತನಾಗಿದ್ದನೆಂದು ಹೊಗಳಿದ್ದಾನೆ. ಇವನ ಕೃತಿಗಳು : 'ಭಾವಚಿಂತಾರತ್ನ' ಮತ್ತು 'ವೀರಶೈವಾಮೃತ ಪುರಾಣ' ; ಎರಡೂ ವಾರ್ಧಿಕ ಷಟ್ಪದಿಯಲ್ಲಿ ರಚಿತವಾಗಿವೆ. ಭಾವಚಿಂತಾರತ್ನ ಪಂಚಾಕ್ಷರೀ ಮಹಿಮೆಯನ್ನು ಬೋಧಿಸುವ ಕಾವ್ಯ. ವೀರಶೈವಾಮೃತ ಪುರಾಣ ಮತ ಶಾಸ್ತ್ರ ಗ್ರಂಥ. 7099 ಪದ್ಯಗಳುಳ್ಳ ಈ ಬೃಹತ್ ಗ್ರಂಥದಲ್ಲಿ ವೀರಶೈವ ಸಿದ್ಧಾಂತವು ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಅಲ್ಲದೆ, ಶಿವನ 25 ಲೀಲೆ ಗಳು, ಶಿವಶರಣರ ಕಥೆಗಳು, ಮುಂತಾದ ಅನೇಕ ಇತರ ವಿಷಯಗಳೂ ಈ ಗ್ರಂಥದಲ್ಲಿ ಅಡಕವಾಗಿವೆ. ಆದ್ದರಿಂದ, ಇದರಲ್ಲಿ ಕಾವ್ಯಕವಿತ್ವ, ಶಾಸ್ತ್ರ ಕವಿತ್ವ–ಇವೆರಡರ ಸಂಗಮವನ್ನು ಕಾಣಬಹುದು, "ಶಿವತತ್ವ ಚಿಂತಾಮಣಿ ಸಿದ್ಧಾಂತ ಪ್ರಧಾನವಾಗಿದ್ದರೆ ಇದು ಚರಿತ್ರಪ್ರಧಾನವಾಗಿದೆ... ಈ ಗ್ರಂಥ ಬಹು ವಿಷಯಗರ್ಭಿತವಾದ ವೀರಶೈವ ಕೋಶವಾಗಿದೆಯೆಂದೂ ಇದರಲ್ಲಿಯ ಕವಿತಾಶಕ್ತಿ, ಪದ್ಯರಚನಾಶಕ್ತಿ, ಭಾಷಾಶೈಲಿಗಳು ಸತ್ಕವಿಗೆ ಶೋಭಿಸುವಷ್ಟು ಚೆನ್ನಾಗಿವೆಯೆಂದೂ ಹೇಳಬಹುದು."[7]

ವೀರಶೈವ ಸಿದ್ಧಾಂತಕ್ಕೂ ವೈದಿಕ ಮತಗಳಿಗೂ ಇರುವ ಸಂಬಂಧದ ಬಗೆಗೆ ವಿದ್ವಾಂಸರ ಅಭಿಪ್ರಾಯವನ್ನು ಗಮನಿಸಿ, ಈ ಪ್ರಕರಣವನ್ನು ಮುಗಿಸ ಬಹುದು.

"ಪ್ರಸಾದಿಸ್ಥಲದ ವಚನಗಳನ್ನು ಭಗವದ್ಗೀತೆಯ ತತ್ವಗಳಿಗೆ ಸರಿಹೋಲಿಸಬಹುದು... ಪ್ರಾಣಲಿಂಗಿ ಸ್ಥಲದಲ್ಲಿ ಯೋಗಶಾಸ್ತ್ರದ ತತ್ವಗಳು ಒಳಗೊಂಡಿವೆ...ವಚನಕಾರರಲ್ಲಿ ದ್ವೈತಾ ದ್ವೈತ ಮೊದಲಾದ ಯಾವತರದ ಕಲಹಗಳು ಕಂಡುಬರುವುದಿಲ್ಲ...ಹ್ಯಾಗೆ ಜೈನಬೌದ್ಧರು ವೇದಮತವನ್ನು ತಿರಸ್ಕರಿಸಿಬಿಟ್ಟರೋ ಹಾಗೆ ವಚನಕಾರರು ಅದನ್ನು ಬಿಟ್ಟುಕೊಟ್ಟರೆಂದು ಹೇಳಲಿಕ್ಕೆ ಬರಲಾರದು. ಅವರ ತತ್ವಗಳೆಲ್ಲ ವೇದಾಗಮೋಪನಿಷತ್ತುಗಳಿಂದಲೇ ತೆಗೆದು ಕೊಂಡವಿರುತ್ತವೆ. ಮತ್ತು ಅವರ ವಚನಗಳಲ್ಲಿ ಅವುಗಳಲ್ಲಿಯ ಅವತರಣಗಳು ತುಂಬಿ

ಹೊರಗಿರುತ್ತವೆ...ವಚನಕಾರರು ಸ್ವತಂತ್ರ ವಿಚಾರದವರಿದ್ದು, ವೇದಾಗಮೋಪನಿಷತ್ತುಗಳ ತತ್ವಗಳ ಮೇಲಿಂದ ತಮ್ಮದೊಂದು ಸಿದ್ಧಾಂತವನ್ನೆ ಏರ್ಪಡಿಸಿದ್ದಾರೆ. ಇದಕ್ಕೆ ಷಟ್‌ಸ್ಥಲ ಸಿದ್ಧಾಂತವೆಂದು ಹೆಸರು...ಇದರಲ್ಲಿ ಪ್ರವೃತ್ತಿನಿವೃತ್ತಿಮಾರ್ಗಗಳ ಸಮ್ಮೇಳನವೂ, ಭಕ್ತಿಜ್ಞಾನ ವೈರಾಗ್ಯದ ಸಮಾವೇಶವೂ, ಯೋಗಾಭ್ಯಾಸ ನೈತಿಕ ತತ್ತ್ವಗಳ ಸಂಘಟನೆಯೂ ಉಂಟಾಗಿ, ಒಂದು ಆಶ್ಚರ್ಯಕರವಾದ ಸಿದ್ಧಾಂತವಾಗಿರುವುದು."

—ಎಂದು ಫ. ಗು. ಹಳಕಟ್ಟಿಯವರು ಅಭಿಪ್ರಾಯಪಟ್ಟಿದ್ದರೆ, ಎಂ. ಆರ್. ಶ್ರೀನಿವಾಸಮೂರ್ತಿಯವರ ಅಭಿಪ್ರಾಯ ಹೀಗಿದೆ :

''ಷಟ್‌ಸ್ಥಲ ಸಿದ್ಧಾಂತದಲ್ಲಿ ದ್ವೈತ ವಿಶಿಷ್ಟಾದ್ವೈತ ಮತ್ತು ಅದ್ವೈತ ಮೂರೂ ಸೇರಿಕೊಂಡಿವೆ. ಅಂಗಲಿಂಗಗಳ ಸ್ವರೂಪವನ್ನು ವಿವರಿಸುವಾಗ ಒಂದೇ ಆದ ಪರವಸ್ತು ಸ್ವಲೀಲೆಯಿಂದ ಲಿಂಗಸ್ಥಲ ಮತ್ತು ಅಂಗಸ್ಥಲ ಎಂದಾಯಿತು ಎಂದು ಹೇಳಿದೆ. ಕಡೆಗೆ ಮುಕ್ತಿಯ ಸ್ಥಿತಿಯಾದರೂ ಏನು ? ತಾನು ಪ್ರತ್ಯೇಕವಾಗಿ ಉಳಿದು ಆನಂದಾನುಭವವನ್ನು ಮಾಡುವುದಲ್ಲ, ತಾನು ಎಲ್ಲಿಂದ ಹೊರಬಿದ್ದನೋ ಅಲ್ಲಿಯೇ ಐಕ್ಯವಾಗುವುದು. ಆದುದರಿಂದ ಮೊದಲಿನಲ್ಲೂ ಅದ್ವೈತ, ಕೊನೆಯಲ್ಲೂ ಅದ್ವೈತ ; ಮಧ್ಯದಲ್ಲಿ ದ್ವೈತ ಮತ್ತು ವಿಶಿಷ್ಟಾದ್ವೈತಗಳು ಕಂಡುಬರುತ್ತವೆ.''

ಆದರೆ, ವಚನಕಾರರಲ್ಲಿಯೇ ಮತಭೇದವಿದೆ. ಬಸವ, ಅಲ್ಲಮ, ಅಕ್ಕ—ಇವರು ಅದ್ವೈತದ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಕೆಲವರು 'ದ್ವೈತಾದ್ವೈತ' ಎಂದಿದ್ದಾರೆ. "ಇದನ್ನು ಸಾಮರಸ್ಯದ ಸಿದ್ಧಾಂತವೆಂದು ಕರೆದರೆ ತಪ್ಪಾಗಲಾರದು" ಎನ್ನುವಷ್ಟು ಸರಳವೂ ಅಲ್ಲ ವಿಚಾರ. ಸಾಧಕನ ಅನುಭವದ ನೆಲೆ ಎಲ್ಲಿ ಎನ್ನುವುದನ್ನು ಅವಲಂಬಿಸಿರತಕ್ಕದ್ದು ದ್ವೈತಾದ್ವೈತಾದಿ ಭಾವಗಳು. ಅದ್ವೈತಸಿದ್ಧಾಂತಿಗಳಾದ ಶಂಕರಾಚಾರ್ಯರ ಸ್ತೋತ್ರಗಳಲ್ಲಿ ಹಲವು ದ್ವೈತದ ನೆಲೆಯಲ್ಲಿ ನಲಿಯುವುದಿಲ್ಲವೆ ? ಈ ಸಂದರ್ಭದಲ್ಲಿ, ತೋಂಟದ ಸಿದ್ಧಲಿಂಗ ಯತಿಯ ಬಗೆಗೆ 'ದ್ವೈತಾದ್ವೈತತಿಮಿರಮಾರ್ತಾಂಡ' ಎಂಬ ಶಾಸನದ ಮಾತನ್ನೂ ಗಮನಿಸಬಹುದು.

ವೈದಿಕ ಶಾಸ್ತ್ರ ಗ್ರಂಥಗಳು (ಅದ್ವೈತ, ದ್ವೈತ, ವಿಶಿಷ್ಟಾದ್ವೈತ) :

ವೈದಿಕಮತಾನುಯಾಯಿಗಳು ಮೊದಮೊದಲು ಕನ್ನಡ ಗ್ರಂಥ ರಚನೆಗೆ ಮನಸ್ಸು ಕೊಟ್ಟಿರಲಿಲ್ಲವೆಂದೂ, ಜೈನರೂ ವೀರಶೈವರೂ ಕನ್ನಡದಲ್ಲಿ ಗ್ರಂಥ ರಚನೆ ಮಾಡುತ್ತಿದ್ದುದು ವೈದಿಕಮತೀಯರಿಗೆ ಒಂದು ವಿಧದಲ್ಲಿ ಪ್ರಚೋದನೆ

ನೀಡಿ ಅವರು ಗ್ರಂಥ ರಚನೆಗೆ ತೊಡಗಿರಬಹುದೆಂದೂ ಈ ಹಿಂದೆ ಗಮನಿಸಿದ್ದಾಗಿದೆ. ಸಂಸ್ಕೃತ ಭಾಷೆಯಲ್ಲಿದ್ದ ವೈದಿಕ ಮತದ ಗ್ರಂಥಗಳ ಅಧ್ಯಯನ ಅಧ್ಯಾಪನಗಳೆಲ್ಲವೂ ಸಂಸ್ಕೃತವನ್ನು ಬಲ್ಲ ಬ್ರಾಹ್ಮಣ ವರ್ಣದವರಿಂದಲೇ ಸಾಗುತ್ತಿತ್ತು. ವೈದಿಕ ಧರ್ಮದ ಶಾಸ್ತ್ರ ಗ್ರಂಥಗಳ ರಚನೆ ಕನ್ನಡದಲ್ಲಿಯೂ ನಡೆಯತೊಡಗಿದಾಗ, ಅದನ್ನು ನಿರ್ಮಾಣ ಮಾಡುವ ಕಾರ್ಯವೂ ಅವರಿಂದಲೇ ನಡೆದದ್ದು ಸಹಜವೂ ಅನಿವಾರ್ಯವೂ ಆಗಿ ಪರಿಣಮಿಸಿದ ಒಂದು ಚಾರಿತ್ರಿಕ ಸಂಗತಿ.

ಅದ್ವೈತಮುನಿ ಗುಣಗಳ್ಳ : ವೈದಿಕ ಧರ್ಮವನ್ನು ಆಧರಿಸಿ ಮುಖ್ಯವಾಗಿ ಮೂರು ಪಂಥಗಳು ಕನ್ನಡ ನಾಡಿನಲ್ಲಿ ಜೈನ, ವೀರಶೈವ, ಮುಂತಾದ ಇತರ ಮತಗಳೊಂದಿಗೆ ಪ್ರಚಾರಕ್ಕೆ ಬಂದವು. ರಾಮಾನುಜಾಚಾರ್ಯರೂ (11–12 ನೆಯ ಶತಕಗಳು), ಮಧ್ವಾಚಾರ್ಯರೂ (13ನೆಯ ಶತಕ) ತಮ್ಮ ಮತಗಳನ್ನು ಪ್ರಚಾರ ಮಾಡುವುದಕ್ಕೆ ಬಹು ಮುಂಚಿನಿಂದಲೂ ಅದ್ವೈತ ಮತ ಕನ್ನಡ ನಾಡಿನಲ್ಲಿ ಪ್ರಚುರವಾಗಿತ್ತು. ಆದರೂ, ಇದು ಜನಸಾಮಾನ್ಯದ ದರ್ಶನವಾಗಿದ್ದಿತು ಎಂದು ಹೇಳಲು ಸಾಧ್ಯವಿಲ್ಲ. ಮೇಲೆ ಸೂಚಿಸಿದಂತೆ, ಸಂಸ್ಕೃತದ ವಿದ್ಯೆಯಲ್ಲಿ ಪಾರಂಗತರಾದ ಬ್ರಾಹ್ಮಣ ವರ್ಗದಲ್ಲಿ ಮಾತ್ರ ಪ್ರಚುರವಾಗಿತ್ತು ಎಂದು ತೋರುತ್ತದೆ. ಆದಿಕವಿ ಪಂಪನ ಪೂರ್ವಿಕರೂ, ಬಸವೇಶ್ವರರೂ ಹುಟ್ಟಿದ 'ಕಮ್ಮೆ' ಕುಲ ಅದ್ವೈತ ನಿಷ್ಠವಾದ ಶೈವ ಸಂಪ್ರದಾಯಕ್ಕೆ ಸೇರಿದ್ದೆಂದು ಊಹಿಸಬಹುದಾಗಿದೆ. ಆದರೆ, ಕನ್ನಡ ವಾಙ್ಮಯದಲ್ಲಿ ಅದ್ವೈತದ ಸ್ಪಷ್ಟವಾದ ಉಲ್ಲೇಖ ದೊರೆಯುವುದು 1071ರ, ಗುಣಗಳ್ಳ (ಅದ್ವೈತ ಮುನಿ) ವಿಷಯಕವಾದ, ಒಂದು ಶಾಸನದ ಪದ್ಯಗಳಲ್ಲಿ. ಈ ಕೆಲವು ಪದ್ಯಗಳು ಗಮನಾರ್ಹ :

ಜ್ಞಾನಮೆ ನಾಂ, ನಿನಗೆ ಒಡಲ್ ಎಸೆ–
ವಾನಂದಂ ತೋರ್ಪುವೆಲ್ಲಂ ಎನ್ನ ನೆಟಿಲ್, ಮ–
ತ್ತೇನುಂ ಬೇಡುಲ್ಲ–ಎಂಬನ್, ಇ–
ಳಾನುತನ್ ಅದ್ವೈತಶೇಖರಂ ಗುಣಗಳ್ಳಂ.

ಮುಕ್ತಿಶ್ರೀಸತಿಗನುರಕ್ತಂ, ಸಂಸಾರ ವಿ–
ರಕ್ತಂ, ನಿರ್ವಿಷಯಂ, ನಿರಪೇಕ್ಷಂ, ಶುಚಿ, ಜೀವ–
ನ್ಮುಕ್ತಂ, ನಿರ್ವಾಣಿ, ಗುಣಗಳ್ಳಂ.

ಅಱಿವು, ಅಣ್ಮು, ವೈರಾಗ್ಯಂ, ತಱಿಸಲವು, ಅಭ್ಯಾಸಂ,
ನೆಱೆ ಭಕ್ತಿ ಶಾಂತಿ ಧೃತಿ ತುಷ್ಟಿಯೆಂಬಿವ-
ರ್ಕೆಱೆವಟ್ಟಾಗಿರ್ದಂ ಗುಣಗಳ್ಳಂ.*

[ನೆೞ(ಳ)ಲ್ = ನೆರಳು, ಪ್ರತಿಬಿಂಬ; ಹುರುಳಿಲ್ಲದ್ದು, ಎಂದರೆ ಮಾಯೆ, ಮಿಥ್ಯೆ. ತೋರ್ಪುವೆಲ್ಲಂ = ತೋರಿಕೆ; ಕಣ್ಣಿಗೆ ಕಾಣಿಸುವ ಸರ್ವಸ್ವವೂ; ದೃಶ್ಯಪ್ರಪಂಚವೆಲ್ಲವೂ (Appearance). ಇಳಾನುತನ್ = ಪ್ರಪಂಚದ ಹೊಗಳಿಕೆಗೆ ಪಾತ್ರನಾದವನು. ಮುಕ್ತಿಶ್ರೀಸತಿಗನುರಕ್ತಂ = ಮೋಕ್ಷದಲ್ಲಿ ಪ್ರೀತಿಯುಳ್ಳವನು. ನಿರ್ವಿಷಯಂ = ಪ್ರಾಪಂಚಿಕ (ಇಂದ್ರಿಯ) ಸುಖವನ್ನು ಅನುಭವಿಸದವನು. ಜೀವನ್ಮುಕ್ತಂ = ಜೀವಂತನಾಗಿದ್ದುಕೊಂಡೇ ಮೋಕ್ಷಪದವಿಯನ್ನು ಪಡೆದವನು. ನಿರ್ವಾಣಿ = ನಿರ್ವಾಣ (= ಮೋಕ್ಷ) ಹೊಂದಿದವನು. ಅರಿವು = ಜ್ಞಾನ, ಅಣ್ಮು = ಶೌರ್ಯ. ತರಿಸಲವು = ನಿಶ್ಚಿತ(ಬುದ್ಧಿ), ನಿರ್ಣಯ, ತೀರ್ಮಾನ. ಎಱೆ(ರೆ)ವಟ್ಟಾಗಿರು = ಆಶ್ರಯವಾಗಿರು.]

ಮೇಲಿನ ಪದ್ಯದಲ್ಲಿ ಅದ್ವೈತ ಸಿದ್ಧಾಂತದ ಮುಖ್ಯ ಪ್ರಮೇಯಗಳೆಲ್ಲ ಬಂದಿವೆ. ವಚನಸಾಹಿತ್ಯ ತಲೆದೋರುವುದಕ್ಕೂ ಮುಂಚೆ ವಿಶೇಷಾರ್ಥಗಳಲ್ಲಿ 'ತೋರ್ಪುವೆಲ್ಲಂ', 'ನೆೞಲ್', 'ಅರಿವು', ತರಿಸಲವು– ಈ ಕನ್ನಡ ಪದಗಳು ಬಳಕೆಯಾಗಿರುವುದು ಗಮನಾರ್ಹ.

ಚಂದ್ರಚೂಡಾಮಣಿ ಶತಕ :

ಕವಿಚರಿತೆಕಾರರು ಚಂದ್ರಚೂಡಾಮಣಿ ಶತಕದ ವಿಚಾರವಾಗಿ ಬರೆಯುತ್ತಾ, ಅದರ ಕರ್ತೃವೂ, (ಅದರಲ್ಲಿನ ಒಂದು ಪದ್ಯದಿಂದ ತಿಳಿದುಬರುವಂತೆ) ಉದಯಾದಿತ್ಯನ 'ಸಂಧಿವಿಗ್ರಹಿಲಲಾಮ'ನಾಗಿದ್ದ ನಾಗವರ್ಮನೂ ಚಾಳುಕ್ಯರಾಜ ಭುವನೈಕಮಲ್ಲನ (1069–1070) ದಂಡನಾಯಕನ ಕಾಲದಲ್ಲಿ ಬಹಳ ಪ್ರಸಿದ್ಧನಾಗಿದ್ದ ಅದ್ವೈತಿ ಗುಣಗಳ್ಳ ನಾಗವರ್ಮಾಚಾರ್ಯನೂ ಒಬ್ಬನೇ ವ್ಯಕ್ತಿ ಎಂದು ಊಹಿಸುತ್ತಾರೆ. ಇದು ನಿಶ್ಚಿತ ಎಂದಾದರೆ, ಚಂದ್ರಚೂಡಾಮಣಿ ಶತಕದ 'ನಾಗವರ್ಮ'ನಿಗೇ–ಕವಿಚರಿತೆಕಾರರು ಹೇಳುವಂತೆ– 'ಗುಣಗಳ್ಳ' ಎಂಬ ಬಿರುದಿದ್ದು, ಆತ ಮಹಾಪಂಡಿತನೂ ಅದ್ವೈತಿಯೂ ಆಗಿದ್ದನೆಂದು ಹೇಳಬಹುದು. ಚಂದ್ರಚೂಡಾಮಣಿ ಶತಕ ಪ್ರಧಾನವಾಗಿ

---

* ಈ ಪದ್ಯಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕನ್ನಡ ಬಾವುಟ'ದಿಂದ ಉದ್ಧರಿಸಲಾಗಿದೆ. ಈ ಪದ್ಯಗಳು ಶಿಕಾರಿಪುರದ 129 ನೆಯ ಶಾಸನದವು ಎಂದು ಕವಿಚರಿತೆಯಿಂದ ತಿಳಿದುಬರುತ್ತದೆ.

ವೈರಾಗ್ಯವನ್ನು ಬೋಧಿಸುವ ಗ್ರಂಥ. ವೈರಾಗ್ಯ ಸಾಧಾರಣವಾಗಿ ಎಲ್ಲ ಮತಗಳೂ ಒಪ್ಪಿಕೊಂಡಿರುವ ಮೋಕ್ಷಸಾಧಕವಾದ, ನಿವೃತ್ತಿಮಾರ್ಗದ ಲಕ್ಷಣ. ಈ ಶತಕದಲ್ಲಿ ಶಾಸನ ಪದ್ಯಗಳಲ್ಲಿ ಕಂಡುಬರುವಂಥ ಅದ್ವೈತದ ಮುಖ್ಯ ತತ್ತ್ವಗಳ ಪ್ರಸ್ತಾಪವಿಲ್ಲ. ಆದ್ದರಿಂದ, ಕವಿಚರಿತೆಕಾರರ ಊಹೆ ಸರಿಯಲ್ಲ ಎನ್ನುವ ಎ. ವೆಂಕಟಸುಬ್ಬಯ್ಯನವರ ವಾದವನ್ನೂ ಗಮನಿಸ ಬೇಕಾಗುತ್ತದೆ. ಇದು ಹೇಗಿದ್ದರೂ, ಮತ್ತೇಭವಿಕ್ರೀಡಿತ ವೃತ್ತದಲ್ಲಿ ಬರೆ ದಿರುವ ಕನ್ನಡದ ಈ ಮೊದಲ ಶತಕಗ್ರಂಥ ಅದ್ವೈತವನ್ನು ಪ್ರತಿಪಾದಿಸ ದಿದ್ದರೂ ಶೈವಸಂಪ್ರದಾಯದ ಅದ್ವೈತಿಯಿಂದ ರಚಿತವಾಗಿದೆ ಎಂದು ಹೇಳಲಡ್ಡಿಯಿಲ್ಲ. ಅದ್ವೈತದಲ್ಲಿ ಭಕ್ತಿಗಿಂತ ಜ್ಞಾನವೈರಾಗ್ಯಗಳಿಗೆ ಪ್ರಾಶಸ್ತ್ಯ ಹೆಚ್ಚು. ಚಂದ್ರಚೂಡಾಮಣಿ ಶತಕಕ್ಕೆ 'ಜ್ಞಾನಸಾರ' ಎಂಬ ಇನ್ನೊಂದು ಹೆಸರು ಇರುವುದೂ ಗಮನಾರ್ಹ. ವೈರಾಗ್ಯವಿಲ್ಲದೆ ತತ್ತ್ವಜ್ಞಾನ ಸಿದ್ಧಿಸು ವುದಿಲ್ಲ.

ವೈರಾಗ್ಯಸಾರದ ಒಂದು ಪದ್ಯ :

ನರೆಯಿಂದಂ ತೆರೆಯಿಂದಂ ಆದ ಸೆರೆಯಿಂದಂ ಮುಪ್ಪಿನೊಳ್ ಜೆಲ್ವುಗೆ-
ಟ್ಟಿರುತುಂ, ವ್ಯಾಧಿಯೊಳಾಗಳುಂ ನವೆಯುತುಂ, ತಳ್ತಿರ್ದ ದಾರಿದ್ರ್ಯದೊಳ್
ಪೊರಳುತ್ತಿರ್ದುಂ, ಅದೆಂತುಂ ಅಳಿಪೆಂದುಂ ಪೋಗದು ; ಆ ಕುತ್ತಮಂ
ಹರಿಪ ಒಂದೌಷಧಿಯಂ ದಯೆಗೆಯ್ ಶ್ರೀ ಚಂದ್ರಚೂಡಾಮಣೀ.

[ನರೆ = ನರೆಗೂದಲು ; ತೆರೆ = ಚರ್ಮದ ಸುಕ್ಕು ; ತಳ್ತಿರ್ದ = ಕೂಡಿಕೊಂಡಿರುವ ; ಅಳಿಪು = ಆಶೆ ; ಕುತ್ತ = ರೋಗ ; ಹರಿಪ = ಹೋಗಲಾಡಿಸುವ.]

ನಿಜಗುಣ ಶಿವಯೋಗಿಗಳು 'ವಿವೇಕ ಚಿಂತಾಮಣಿ'ಯಲ್ಲಿ ಅದ್ವೈತ ತತ್ತ್ವವನ್ನು ವಿವರಿಸಿರುವುದರ ಜೊತೆಗೆ, ಅದ್ವೈತ ಪರವಾದ ಹಾಡುಗಳನ್ನೂ ರಚಿಸಿದ್ದಾರೆ. ಈ ವಿಚಾರವನ್ನು ಹಿಂದೆ ಪ್ರಸ್ತಾಪಿಸಿದೆ. ಶಾಸ್ತ್ರಶುದ್ಧವಾಗಿ, ವಿಸ್ತಾರವಾಗಿ, ಕಾವ್ಯಗುಣವೂ ಉಳ್ಳ ಪದ್ಯಕೃತಿಯಲ್ಲಿ ಮೊತ್ತಮೊದಲಿಗೆ ಅದ್ವೈತದ ಸಿದ್ಧಾಂತವನ್ನೂ ಆ ಮಾರ್ಗದಲ್ಲಿ ಅದ್ವೈತ ಸಿದ್ಧಿಗೆ-ಎಂದರೆ, ಜೀವನ್ಮುಕ್ತಿಗೆ-ಕೈಕೊಳ್ಳಬೇಕಾದ ಸಾಧನಾ ಕ್ರಮವನ್ನೂ ಹೃದಯಂಗಮ ವಾದ ತಿಳಿಗನ್ನಡದಲ್ಲಿ ನಿರೂಪಿಸಿದ ಕೀರ್ತಿ 'ಅನುಭವಾಮೃತ'ದ ರಂಗನಾಥನಿಗೆ ಸಲ್ಲುತ್ತದೆ.

ಮಹಲಿಂಗರಂಗನ 'ಅನುಭವಾಮೃತ'

ರಂಗನಾಥ ಮಹಲಿಂಗರಂಗನೆಂದೇ ಕನ್ನಡಿಗರಿಗೆ ಚಿರಪರಿಚಿತ. ಗ್ರಂಥದಿಂದ ಕವಿಯ ವಿಚಾರ ಹೆಚ್ಚಾಗಿ ತಿಳಿದುಬರುವುದಿಲ್ಲ. ಗ್ರಂಥಾರಂಭದಲ್ಲಿ (ಪ. 2), "ಶ್ರೀ ಗುರುವಿನುಪದೇಶದಿಂದನುರಾಗವುದಿಸಲು ರಂಗನಾಥನು ಯೋಗಿ ಜನರಹುದೆನಲು ಪೇಳಿದನನುಭವಾಮೃತವ" ಎಂದು ಹೇಳಿಕೊಂಡಿರುವುದರಿಂದ, ಇವನ ಹೆಸರು ರಂಗನಾಥ ಎಂಬುದು ನಿಶ್ಚಿತ. ಮಹಾಲಿಂಗರಂಗ ಎಂಬುದು ತಂದೆಯ ಹೆಸರು. 'ಅನುಭವಾಮೃತವೆಂಬ ಗ್ರಂಥವ ಮನವೊಲಿದು ಮಹಲಿಂಗರಂಗನು ವಿನುತ ಶ್ರೀಗಿರಿಮಲ್ಲಿಕಾರ್ಜುನನಂಕಿತವ ಮಾಡಿ ರಚಿಸಿದನು' ಎಂದಿರುವುದರಿಂದ ಅವನು ಈ ಹೆಸರಿನಿಂದಲೂ ಪ್ರಸಿದ್ಧನಾಗಿರಬೇಕು. ತಾನು 'ಸಹವಾಸಿ' ವಂಶದವನೆಂದೂ ತನ್ನ ಗುರು ಸಹಜಾನಂದನೆಂದೂ ಕವಿ ಹೇಳಿಕೊಂಡಿದ್ದಾನೆ. ಬಳಕೆಗೆ ಬಂದಿರುವ ರಂಗಾವಧೂತ ಎಂಬ ಹೆಸರು ಗ್ರಂಥದಲ್ಲಿ ಕಂಡುಬಂದಿರುವುದಿಲ್ಲ. "ರಂಗಾವಧೂತನೆಂಬುದು ಇವನು ಯೋಗಿಯಾದ ಮೇಲೆ ಪ್ರಚಾರಕ್ಕೆ ಬಂದಿರಬೇಕು...ಇವನು ತುರಿಯಾಶ್ರಮವನ್ನು ಸ್ವೀಕರಿಸುವುದಕ್ಕೆ ಮುನ್ನವೇ ಅನುಭವಾಮೃತವನ್ನು ಬರೆದಿರಬೇಕು... ಆಮೇಲೆ ಸಹಜಾನಂದ ಗುರುವಿನಲ್ಲಿ ಆಶ್ರಮವನ್ನು ಸ್ವೀಕರಿಸಿರಬೇಕು"[8] ಎಂಬ ಅಭಿಪ್ರಾಯಕ್ಕೆ ವಿರುದ್ಧವಾಗಿ, ಯೋಗಿಯ ಬ್ರಹ್ಮಾನುಭೂತಿಯ ಸುಖವನ್ನು ಗೃಹಸ್ಥನ ಸಂಭೋಗಸುಖಕ್ಕೆ ಹೋಲಿಸಿರುವುದರಿಂದಲೂ (ಅ. 10-26, 27) ಸಂನ್ಯಾಸಾಶ್ರಮವನ್ನು ಸೂಚ್ಯವಾಗಿ ಜರೆದಿರುವುದರಿಂದಲೂ ಈತ ಪೂರ್ತಿಯಾಗಿ ಗೃಹಸ್ಥಾಶ್ರಮಿಯಾಗಿದ್ದನೆಂಬ ಅಭಿಪ್ರಾಯವೂ ವ್ಯಕ್ತಪಟ್ಟಿದೆ.[9] ಶ್ರೀ ಶಂಕರಾನಂದಯೋಗೀಶ್ವರರೆಂಬವರು ತಮ್ಮ ಗ್ರಂಥಗಳಲ್ಲಿ "ಶ್ರೀಸದಾನಂದ ಗುರು ಮಹಲಿಂಗರಂಗ ಯತಿವರೇಣ್ಯ" ಎಂದು ಉಲ್ಲೇಖ ಮಾಡಿದ್ದಾರೆ. ಈ ಮಹಲಿಂಗರಂಗ ರಂಗನಾಥನೇ ಆಗಿರುವ ಪಕ್ಷಕ್ಕೆ, ಅನುಭವಾಮೃತವನ್ನು ಬರೆದಮೇಲೆ ಅವನು ಯತಿಯಾಗಿ ಸದಾನಂದ ಎಂಬ ಹೆಸರನ್ನು ತಳೆದಿರಬಹುದು; ಇವನ ಸ್ಥಳ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಉಚ್ಚಂಗಿದುರ್ಗದ ಪ್ರಾಂತ ಎಂದು ಗ್ರಂಥಾಧಾರದಿಂದ ತೋರಿಬರುತ್ತದೆ—ಎಂಬ ಊಹೆಗಳೂ ಇವೆ.[10] ಕವಿಚರಿತೆಕಾರರು ರಂಗನಾಥನ ಕಾಲವನ್ನು 1675 ಎಂದು ನಿರ್ಣಯಿಸಿದ್ದಾರೆ.

ರಂಗನಾಥನ ಹೆಸರಿನ 'ನಾಥ' ಎಂಬ ಪದದ ಸುಳುಹು ಹಿಡಿದು, ಡಿ. ಕೆ. ಭೀಮಸೇನರಾಯರು (ತಮ್ಮ 'ಅನುಭವಾಮೃತವೂ ಹರಿಕಥಾಮೃತ

ಸಾರವೂ' ಎಂಬ ಲೇಖನದಲ್ಲಿ) ಒಂದು ಹೊಸ ಸಂಗತಿಯನ್ನು ಶೋಧನೆ ಮಾಡಿರುವುದು ಗಮನಾರ್ಹವಾಗಿದೆ: "ರಂಗನಾಥನು ನಾಥಸಂಪ್ರದಾಯದ ಬ್ರಾಹ್ಮಣನಾಗಿರಬೇಕು. ರಂಗನಾಥನು ಅನುಭವಾಮೃತವನ್ನು ಮಹಾರಾಷ್ಟ್ರ ಕವಿ ಮುಕುಂದರಾಜನ 'ವಿವೇಕಸಿಂಧು'ವನ್ನು ಆಧರಿಸಿ ಬರೆದಂತೆ ಕಾಣುತ್ತದೆ. ವಿವೇಕಸಿಂಧುವಿಗೂ ಅನುಭವಾಮೃತಕ್ಕೂ ಅನೇಕ ಕಡೆಗಳಲ್ಲಿ ಹೋಲಿಕೆಗಳಿವೆ. ಮುಕುಂದರಾಜನು ಹದಿಮೂರನೆಯ ಶತಮಾನದ ಕವಿ. ನಾಥ ಪಂಥವನು. ವಿವೇಕಸಿಂಧುವನ್ನು 'ಶಂಕರೋಕ್ತೀ ವರೀ। ಮಿಾ ಬೋಲಿಲೋ ಮರಾಠಿ ವೈಖರೀ' ಬರೆದಿರುವುದಾಗಿ ಹೇಳಿರುವುದರಿಂದ, ಶ್ರೀಮತ್ ಶಂಕರಾಚಾರ್ಯರ ಅದ್ವೈತವನ್ನೇ ತನ್ನ ಗ್ರಂಥದಲ್ಲಿ ಪ್ರತಿಪಾದಿಸಿರುವನೆಂದು ಗೊತ್ತಾಗುತ್ತದೆ," ಎಂದು ತಿಳಿಸಿ, ಗುರುವಿಗೆ ಪ್ರಾಶಸ್ತ್ಯ, ಯೋಗಕ್ಕೆ ಮಹತ್ವ, ನಾಥಪಂಥದ ಸಂಬಂಧ, ವಿಷಯ ನಿರೂಪಣೆ ಗುರುಶಿಷ್ಯ ಸಂವಾದ ರೂಪದಲ್ಲಿರುವುದು, ಮೋಕ್ಷ ಸಾಧನೆಗೆ ಅಧಿಕಾರ ಸಂಪನ್ನತೆ, ಫಲಶ್ರುತಿ— ಈ ಅಂಶಗಳು ಇಬ್ಬರಲ್ಲಿಯೂ ಕಂಡುಬರುತ್ತವೆ ಎಂದಿದ್ದಾರೆ. ಅವರು ಗಮನಿಸಿರುವ ಇನ್ನೊಂದು ಮುಖ್ಯ ಸಮಾನಾಂಶ, ಇಬ್ಬರೂ ದೇಶಭಾಷೆಗೆ ಕೊಟ್ಟಿರುವ ಅಭಿಮಾನಪೂರ್ಣ ಮಹತ್ವ: "ಜ್ಞಾನಸಂಪಾದನೆಯಿಂದ ಆತ್ಮನ ಸ್ವರೂಪವನ್ನು ತಿಳಿಯಬೇಕಾಗಿದ್ದಲ್ಲಿ ಸಂಸ್ಕೃತವಾದರೇನು ಮರಾಠಿಯಾದರೇನು ?" ಎಂದು ಮುಕುಂದರಾಜ ಕೇಳಿದ ಪ್ರಶ್ನೆಯನ್ನೇ, ರಂಗನಾಥನೂ—"ಲಲಿತವಹ ಕನ್ನಡದ ನುಡಿಯುಲಿ। ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ?" (ಪ. 1–5) ಎಂದು ಹಾಕಿದ್ದಾನೆ. ಭೀಮಸೇನ ರಾಯರು ತಮ್ಮ ಅದೇ ಲೇಖನದಲ್ಲಿ ಅನುಭವಾಮೃತಕ್ಕೂ ಜಗನ್ನಾಥದಾಸರ ಹರಿಕಥಾಮೃತಸಾರಕ್ಕೂ ಇರುವ ಹೋಲಿಕೆಗಳನ್ನು ದೃಷ್ಟಾಂತಗಳಿಂದ ತೋರಿಸಲು ಪ್ರಯತ್ನಪಟ್ಟಿದ್ದಾರೆ; ಜಗನ್ನಾಥದಾಸರು ಅನುಭವಾಮೃತ ದಿಂದ ಪ್ರಭಾವಿತರಾಗಿದ್ದಿರಬೇಕು ಎಂದು ತರ್ಕಿಸಿದ್ದಾರೆ. ಅದೇ ಲೇಖನದ ಬೇರೊಂದು ಕಡೆ ಅವರು (ಪು. 107–108) ವೇದ, ಉಪನಿಷತ್ತು, ಭಗವದ್ಗೀತೆ – ಇವು ಎಲ್ಲ ವೇದಾಂತ ಗ್ರಂಥಗಳಿಗೂ ಸಮಾನ ಆಕರಗಳೆಂದು ಹೇಳಿ, "ರಂಗನಾಥರೂ ಜಗನ್ನಾಥದಾಸರೂ ತಮ್ಮ ತಮ್ಮ ಕೃತಿಗಳಲ್ಲಿ ಉಪ ನಿಷದ್ವಾಕ್ಯಗಳನ್ನೂ ಭಾವಗಳನ್ನೂ ಗೀತೆಯ ವಾಕ್ಯಗಳನ್ನೂ ಅಭಿಪ್ರಾಯ ವನ್ನೂ ಕನ್ನಡಿಸಿದ್ದಾರೆ" ಎಂಬ ಮಾತನ್ನೂ ಆಡಿದ್ದಾರೆ. ರಾಯರು ಉಲ್ಲೇಖಿಸಿರುವ ಇಬ್ಬರ ದೃಷ್ಟಾಂತಪದ್ಯಗಳಲ್ಲಿ ಭಾವಸಾಮ್ಯವು ಬಹಳ

ಸ್ಫುಟವಾಗಿ ಕಂಡುಬರುತ್ತದೆ; ಉಕ್ತಿಸಾಮ್ಯವಂತೂ ಇಲ್ಲವೇ ಇಲ್ಲ. ಮುಗಳಿಯವರೂ ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇವರಿಬ್ಬರ ಕೃತಿಗಳ ನಡುವಣ ಹೋಲಿಕೆಯನ್ನು ಗುರುತಿಸಿರುವರಾದರೂ, ಒಬ್ಬರ ಮೇಲೆ ಇನ್ನೊಬ್ಬರ ಪ್ರಭಾವವು ಬಿದ್ದಿರುವ ಸಂದರ್ಭವನ್ನು ಸೂಚಿಸಿಲ್ಲ. ಒಟ್ಟಿನಲ್ಲಿ ವಿಚಾರಮಾಡಿ ನೋಡಿದರೆ, ಮುಕುಂದರಾಜ–ರಂಗನಾಥರ ಕೃತಿಗಳಲ್ಲಿಯಾಗಲಿ, ರಂಗನಾಥ–ಜಗನ್ನಾಥ ದಾಸರ ಕೃತಿಗಳಲ್ಲಿಯಾಗಲಿ, ಕಂಡುಬರುವ ಸಾದೃಶ್ಯ ಸಂಪತ್ತಿಗೆ ಮೂಲಗ್ರಂಥಗಳು ಸಮಾನವಾಗಿರುವುದೇ ಕಾರಣ ಎನ್ನಿಸುತ್ತದೆ. 'ನಾಥ' ಎಂಬ ಹೆಸರು ಕೆಲವು ಹೆಸರುಗಳ ಕೊನೆಯಲ್ಲಿ ಸರ್ವಸಾಮಾನ್ಯ. ಇಷ್ಟರಿಂದಲೇ ರಂಗನಾಥ ನಾಥಸಂಪ್ರದಾಯದವನು ಎನ್ನಲಾಗದು. ರಂಗನಾಥ ತಾನು ಸಹವಾಸಿ ವಂಶದವನು ಎಂದು ಸ್ಪಷ್ಟಪಡಿಸಿದ್ದಾನೆ; ಮುನ್ನ "ಉಪನಿಷದರ್ಥವನು ಸಂಪನ್ನಮತಿಗಳು ಪೇಳ್ದುದನೆ ನಾ ಕನ್ನಡಿಸಿದೆನು" ಎಂದೂ ತಿಳಿಸಿ, ತಾನು ಸಂಸ್ಕೃತ ಮೂಲಗಳಿಗೆ ಋಣಿಯಾಗಿರುವುದನ್ನು ಒಪ್ಪಿಕೊಂಡಿದ್ದಾನೆ. ಚಿದಾನಂದಾವಧೂತನು ತನ್ನ 'ಜ್ಞಾನಸಿಂಧು'ವನ್ನು ರಂಗನಾಥನ ಕೃತಿಯನ್ನು ಅನುಸರಿಸಿ ಬರೆದಿರುವುದು ಸ್ಪಷ್ಟಗೋಚರವಾಗಿರುವ ಹಾಗೆ, ರಂಗನಾಥನು ತನ್ನ ಕೃತಿಯನ್ನು ಮರಾಠಿಯ 'ವಿವೇಕ ಸಿಂಧು'ವನ್ನು ಅನುಸರಿಸಿ ಬರೆದಿರುವುದಾಗಲಿ ಜಗನ್ನಾಥದಾಸರು ರಂಗನಾಥನ ಕೃತಿಯನ್ನು ಓದಿ ಪ್ರಭಾವಿತರಾಗಿರುವುದಾಗಲಿ ಸ್ಪಷ್ಟಗೋಚರವಾಗಿಲ್ಲ.

ವ್ಯಾಸರು ತಮ್ಮ ಪುತ್ರ ಶುಕರಿಗೆ ಉಪದೇಶ ಮಾಡಿದಂತೆ ರಚಿಸಿರುವ ಈ ಗ್ರಂಥದಲ್ಲಿ, ಶುಕರು ಹಾಕುವ ಪ್ರಶ್ನೆಗಳಿಗೆ ವ್ಯಾಸರು ಕೊಡುವ ಉತ್ತರಗಳಲ್ಲಿ ಅದ್ವೈತ ತತ್ತ್ವದ ಪ್ರತಿಪಾದನೆ ತುಂಬ ಹೃದಯಂಗಮವಾದ ರೀತಿಯಲ್ಲಿ ಸಾಗಿದೆ. ಶುಕ ಪ್ರಶ್ನೆಗಳನ್ನು ಗಮನಿಸಿದರೆ, ಗ್ರಂಥದ ಹತ್ತು ಅಧ್ಯಾಯಗಳಲ್ಲಿ ಪ್ರತಿಪಾದಿತವಾಗಿರುವ ವಿಷಯದ ಸ್ವರೂಪ ಪರಿಚಯವಾಗುತ್ತದೆ. ಕೆಲವು ಪ್ರಶ್ನೆಗಳು :

'ಬ್ರಹ್ಮವೆಂದೊಡದೇತಿಹುದು ? ತಿಳಿವ ಚಂದವಾವುದು ? ತಿಳಿಯೆ ಫಲವೇನು ?' (ಅಧ್ಯಾಯ ಪದ್ಯ 1–13).

'ಜೀವ ಪರಮರ ಪರಿಯದೆಂತೈ ? ಎರಡು ತನುವೆಂತಾಯಿತೊಬ್ಬಗೆ ? ದೊರಕಿತೆಂತದ್ವೈತ ನಿಜಸುಖ ?' (3–19)

'ಮಾಯೆಯು ಚೆಂದವಾವುದು ? ಜೀವ ಜಗವಾರಿಂದಲಾದುದು, ಅವಾದ ಪರಿಯೆಂತು ?' (4–5)

'ಸಹಜಾನಂದವೆಂತೈ ಭ್ರಮಿಸಿತೀ ಮಾಯಾಪ್ರಬಂಧಕೆ ? ಜೀವತ್ವದಾರೋಪಣ ವದೆಂತಾಯ್ತು ?' (5–47)

'ಪರಮಾತ್ಮ ಪದವನು ತಿಳುಹಬೇಕು. (7-4)

'ಎಂತು ಹಮ್ಮಿನ ರೂಪು ? ಜೀವರು ಅದೆಂತು ದೇಹದೊಳಿರ್ಪರು ? ಅವರಿಗದೆಂತು ಬಂದುದು ಜೀವತನದ ಆರೋಪವದು ಬರಿದೆ ? ಎಂತು ಜೀವನ್ಮುಕ್ತಿಯಾಗುವುದು ? ಜಗದ ಏಕತ್ವ ಮೋಕ್ಷವದೆಂತು ?' (9–4)

'ವಿಷಮವಹ ಸಂಸಾರವಾರಿಗೆ ?' (10–41)

ರಂಗನಾಥನು ಅತ್ಯಂತ ಗಹನವಾದ ತತ್ತ್ವಗಳನ್ನು ಮನಮೆಚ್ಚುಗೆಯಾಗುವಂಥ ಉಪಮಾನಗಳಿಂದಲೂ ದೃಷ್ಟಾಂತಗಳಿಂದಲೂ ತಿಳಿಗನ್ನಡದಲ್ಲಿ ಹೇಗೆ ಪ್ರತಿಪಾದಿಸುತ್ತಾನೆ ಎಂಬುದನ್ನು ಒಂದೆರಡು ಉದಾಹರಣೆಗಳಿಂದ ಅರಿಯಬಹುದು :

ದೇಹ, ಧನ, ಮಡದಿ ಮಕ್ಕಳು ಶಾಶ್ವತವಲ್ಲ :

ಬುದ್ಧಿವಂತನು ಗಳಿಸಿದರ್ಥವು । ಬಿದ್ದುಹೋಹುದು ಕಡೆಗೆ ಮರಳಿನ
ಗದೆಗೆತ್ತಿದ ನೀರ ತೆರದಲಿ ; ಮಡದಿ ಮಕ್ಕಳನು ।
ಉದ್ಧರಿಸಿ ಸಲಹಿದರೆ ಸಂಗಡ । ಲೆದ್ದುಬಾರರು ಯಮಪುರಕ್ಕೆ ; ತನು ।
ಹದ್ದುಕಾಗೆಯ ಪಾಲದಾರಿಗೆ ಬಿದ್ದ ಪಾಡೆಂದ ॥

ಮಾಯೆಯ ಸ್ವರೂಪ :

ನೀಲರುಚಿಯಭ್ರದಲಿ, ದೀಪ । ಜ್ವಾಲೆಯೊಳು ಕಾಳಿಕೆಯು, ಮತ್ತೆ ಚ-
ಥಾಳಿಸುವ ಚಂದ್ರಮನ ನಡುವೆ ಕಳಂಕ ತೋರ್ಪಂತೆ !
ಕಾಳೆನಿಪ ಪುಸಿಮಾಯೆ ಬ್ರಹ್ಮದೊ । ಳಾಳಿ ಹೊಕ್ಕಾಶ್ರಯಿಸಿ ಮೆರೆವುದು ;
ಹೇಳಲೇನದು ಮಿಥ್ಯ ; ತಥ್ಯದವೋಲು ತೋರುವದು ॥

ಪರಬ್ರಹ್ಮ ಸ್ವರೂಪ :

ಗ್ರಾಮ–ದೇಶ–ದ್ವೀಪದಲ್ಲಿಹ । ವ್ಯೋಮವೊಂದೇ ಪರಿಯಲಿರ್ಪಂ- ।
ತೀ ಮನುಜ ಪಶು ಪಕ್ಷಿ ತರು ಲತೆ ದೇವ ದೈತ್ಯರಲಿ ॥
ಭೂಮಿ ಮೊದಲಾಗಿರ್ದ ಭೂತ । ಸ್ತೋಮದಲಿ ಮಣಿಗಣದ ಸೂತ್ರದ ।
ನೇಮದಲಿ ಸಮನಾಗಿ ತೋರುವುದೇ ಪರಬ್ರಹ್ಮ ॥

ನಿಜವಾದ ಜೀವನ್ಮುಕ್ತನ ಸ್ವರೂಪ :

ಆವನೊಬ್ಬ ಗೃಹಸ್ಥಧರ್ಮದಿ । ವ್ಯಾವಹಾರಿಕನಾಗಿ, ಮಿಗೆ ಸ- ।
ದ್ಭಾವ ಶಮೆ ದಮೆ ಶಾಂತಿ ವೈರಾಗ್ಯಗಳನಳವಡಿಸಿ ।
ಜೀವ ಪರಮಾತ್ಮೈಕ್ಯ ಪದವನು । ಭಾವಿಸುತ್ತಹನವನೆ ಸಂನ್ಯಾ- ।
ಸಾವಲಂಬನನವನೆ ಜೀವನ್ಮುಕ್ತ ನೋಡೆಂದ ॥

ವಿಷಯ ಸುಖದಲ್ಲಿ ಮುಳುಗಿ ಕೊಬ್ಬಿ ಕುರುಡಾಗಿರುವವನನ್ನು—"ಮೊದಲೆ ಮರ್ಕಟ, ಮೇಲೆ ಮದ್ಯದ ಮದವದೇಯ ಒಡಿದಿರಲು ವೃಶ್ಚಿಕ ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲಿ" ಕಾಣುವ ಕಪಿಗೆ ಹೋಲಿಸಿರುವಂಥ, ಮನಸ್ಸಿಗೆ ನಾಟುವಂಥ ಉಪಮಾನಗಳೂ; "ಎತ್ತು ತೆಂಗಿನಕಾಯ ಬಲ್ಲುದೆ? ಕತ್ತೆಯರಿವುದೆ ಕಸ್ತೂರಿಯ? ನೆರೆ ಬುತ್ತಿಗಳ್ಳರಿಗೇಕೆ ಸತ್ಯವ್ರತ ಸದಾಚಾರ? ದತ್ತಪುತ್ರನಿಗೇತಕ್ಕೆ ಪಿತೃಭಕ್ತಿ? ಪರಿಮಳ ಸುಗಂಧ ವನಿತಾಸಕ್ತರಿಗೆ ಪರತತ್ತ್ವ ಚಿಂತೆಯದೇಕೆ?" ಎಂಬಂಥ, ವರ್ಣಿತ ವಿಷಯವನ್ನು ಪುಷ್ಟಿಗೊಳಿಸುವ ದೃಷ್ಟಾಂತ ವಾಕ್ಯಮಾಲೆಗಳೂ; ಸ್ವಾಭಾವೋಕ್ತಿಗಳೂ—ನೀರಸವಾಗಬಹುದಾದ ತತ್ತ್ವವಿಚಾರದ ಈ ಕೃತಿಗೆ ಕಾವ್ಯದ ರುಚಿಯನ್ನು ಒದಗಿಸಿವೆ.

ಅದ್ವೈತತತ್ತ್ವ ಅನುಭವದ ವಿಷಯ; ಜೀವಂತವಾಗಿರುವಾಗಲೇ ಮುಕ್ತಿಯ ಸುಖವನ್ನು ಅನುಭವಿಸುವ ಪರಿಯನ್ನು ತೋರುವ 'ದರ್ಶನ'. (ಜೈನ ಧರ್ಮದ ಜಿನರೂ ಜೀವನ್ಮುಕ್ತರು.) ಈ ಅನುಭವದ (ಅಂತಃಕರಣ) ಪ್ರಮಾಣವನ್ನು ರಂಗನಾಥ ಅನೇಕ ಕಡೆ ಒತ್ತಿಹೇಳಿರುವುದರಿಂದಲೂ, ಗ್ರಂಥದಲ್ಲಿ ಕವಿಯ ಲೋಕಾನುಭವ ವ್ಯಾಪಿಸಿಕೊಂಡಿರುವುದರಿಂದಲೂ ಅದಕ್ಕೆ 'ಅನುಭವಾಮೃತ' ಎಂಬ ಹೆಸರು ಸಾರ್ಥಕವಾಗಿದೆ.

ಜ್ಞಾನಸಿಂಧು: ಇದನ್ನು ಬರೆದಾತ ಚಿದಾನಂದಾವಧೂತ. ಅನುಭವಾಮೃತವನ್ನು ಅನುಸರಿಸಿ ಬರೆದ ಕಾರಣ, ಈ ಕವಿಯ ಕಾಲವನ್ನು 1750 ಎಂದು ಕವಿಚರಿತೆಕಾರರು ಹೇಳುತ್ತಾರೆ. ಇವನ ಇತರ ಕೃತಿಗಳು: ಕಾಮವಿಡಂಬನ, ದೇವೀಮಾಹಾತ್ಮ್ಯ, ಚಿದಾನಂದರ ವಚನ, ಪಂಚೀಕರಣ, ತತ್ತ್ವಚಿಂತಾಮಣಿ; ಕಡೆಯವು ಎರಡು ಅದ್ವೈತಕ್ಕೆ ಸಂಬಂಧಪಟ್ಟವು. ಸಾಂಖ್ಯಯೋಗದಲ್ಲಿ ವಿವರಿಸುವ 'ಪಂಚೀಕರಣ' ತತ್ತ್ವದ ವಿಷಯ ಅನುಭವಾಮೃತ ಹಾಗೂ ಜ್ಞಾನಸಿಂಧುಗಳಲ್ಲಿಯೂ ನಿರೂಪಿತವಾಗಿದೆ. 'ಜ್ಞಾನಸಿಂಧು' 49 ಅಧ್ಯಾಯಗಳ, 3021 ಭಾಮಿನೀ ಷಟ್ಪದಿ ಪದ್ಯಗಳ ದೊಡ್ಡ ಗ್ರಂಥ. ಇದರಲ್ಲಿ ಅದ್ವೈತ ವೇದಾಂತ ಅನುಭವಾಮೃತದಲ್ಲಿ ಹೇಳಿರುವುದಕ್ಕಿಂತ ಹೆಚ್ಚು ವಿಸ್ತಾರವಾಗಿ ಹೇಳಿದೆ. ಅದರಷ್ಟು ಪ್ರಸಿದ್ಧವಾದ ಕೃತಿಯಲ್ಲ. "ತಾನೆ ತನ್ನನು ತಿಳಿದು ತಾನೇ ತಾನೆಯಾಗಿಯೆ ತನ್ನನುಭವ ತುಂಬಿಕೊಂಡಿರಲು ಜ್ಞಾನಸಿಂಧುವು ಎಂಬ ಹೆಸರಾಯ್ತು" ಎಂದು ಕವಿ ಹೇಳಿಕೊಂಡಿದ್ದಾನೆ. ತಾನು ವ್ಯಾಕರಣಕ್ಕೆ ಗಮನ

ಕೊಟ್ಟಿಲ. ಎಂದು ಒಪ್ಪಿಕೊಂಡಿದ್ದಾನೆ. ಇವನ ಪದ್ಯರಚನೆಯ ಶೈಲಿ ರಂಗನಾಥನ ಶೈಲಿಯಹಾಗೆ ಲಲಿತವಾಗಿಲ್ಲ. (ರಂಗನಾಥನ ಕೃತಿಯಲ್ಲೂ ಅಶುದ್ಧ ಶಬ್ದರೂಪಗಳು ಹಲಕೆಲವು ಉಂಟು.)

ವೇದಾಂತ ಬೋಧಕ ಶತಕಗಳು : ವೈರಾಗ್ಯಪರವಾದ ಚಂದ್ರಚೂಡಾಮಣಿ ಶತಕವನ್ನು ಬಿಟ್ಟರೆ, ಅದ್ವೈತಿಗಳು ಬರೆದ ಶತಕಗಳು ವಿರಳ. ಆದ್ದರಿಂದ, ವೇದಾಂತಕ್ಕೇ ಮೀಸಲಾದ 'ಸದಾಶಿವಶತಕ', ನೀತಿಯೊಂದಿಗೆ ವೇದಾಂತವನ್ನೂ ಬೋಧಿಸುವ 'ಪ್ರಾಣೇಶ್ವರ ಶತಕ' ಇವು ಗಮನಾರ್ಹವೆನಿಸುತ್ತವೆ. ಇವನ್ನು ಬರೆದಾತ ಮೈಸೂರು ಅರಸುಗಳ ಮನೆತನಕ್ಕೆ ಸೇರಿದ ಶಾಲ್ಯದ ಕೃಷ್ಣರಾಜ. ಇವನ ಮೂರು ಕೃತಿಗಳಲ್ಲಿ ಹೇಳಿರುವ ರಚನಾಕಾಲಗಳ ಆಧಾರದಿಂದ, ಈತನ ಕಾಲವನ್ನು 1775 ಎಂದು ಗೊತ್ತುಮಾಡಬಹುದು. ಈತ ಬಹುಭಾಷಾಪಂಡಿತ ; ಅನೇಕ ಕೃತಿಗಳನ್ನು ರಚಿಸಿದ್ದಾನೆ.

ಗದ್ಯರೂಪದ ಪ್ರಕರಣ ಗ್ರಂಥಗಳು : ಮೇಲೆ ಹೇಳಿದ ಕೃಷ್ಣರಾಜನ 'ಅನುಭವರಸಾಯನ' ಗುರುಶಿಷ್ಯ ಸಂವಾದ ರೂಪದಲ್ಲಿ ಅದ್ವೈತವೇದಾಂತವನ್ನು ಬೋಧಿಸುತ್ತದೆ. ಹೆಚ್ಚು ಕಡಮೆ, ಇದೇ ಕಾಲದಲ್ಲಿ ವಾಸುದೇವ ಯತಿಗಳು 'ವಿವೇಕಸಾರವನ್ನು' ಕನ್ನಡದಲ್ಲೂ(?), 'ವಾಸುದೇವಮನನ' ಎಂಬ ಗ್ರಂಥವನ್ನು ಸಂಸ್ಕೃತದಲ್ಲೂ ರಚಿಸಿದ್ದಲ್ಲದೆ, ಅನೇಕಮಂದಿ ಶಿಷ್ಯರಿಗೆ ವೇದಾಂತ ಬೋಧೆ ಮಾಡಿದರು. ಇವರ ವಂಶಿಕರೂ ಶಿಷ್ಯರೂ ಆದ ವೆಂಕಟದಾಸ ಎಂಬವರು 'ಅಖಂಡಾನಂದ ಸ್ವರೂಪ' ಎಂಬ ಗ್ರಂಥವನ್ನೂ, ಇವರ ಸೋದರಳಿಯನೂ ವಾಸುದೇವಯತಿಗಳ ಮೊಮ್ಮಗನೂ ಆದ ತಿಮ್ಮಪ್ಪದಾಸ ಎಂಬವರು 'ಪರಬ್ರಹ್ಮ ಪ್ರಕಾಶಿಕೆ' ಎಂಬ ಗ್ರಂಥವನ್ನೂ ರಚಿಸಿದ್ದಾರೆ. ವಾಸುದೇವಾರ್ಯರು ಗೃಹಸ್ಥಾಶ್ರಮದಲ್ಲಿದ್ದು, ಸಂನ್ಯಾಸಾಶ್ರಮ ಸ್ವೀಕರಿಸಿದರು. ಈ ಮೂವರ ಸ್ಥಳವೂ ಚಿಕ್ಕನಾಯಕನಹಳ್ಳಿ. ಅಲ್ಲಿ ವಾಸುದೇವಯತಿಗಳು ಸಮಾಧಿಯಾದ ಸ್ಥಳದಲ್ಲಿ ಕಟ್ಟಿದ್ದ ಬೃಂದಾವನ ಈಗಲೂ ಇದೆ.

ವಾಸುದೇವರ ಸಂಸ್ಕೃತ ಗ್ರಂಥವನ್ನು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಕನ್ನಡಕ್ಕೆ ಅನುವಾದ ಮಾಡಿದ್ದಾರೆ (1897). ವಾಸುದೇವಯತಿಗಳನ್ನು ಕುರಿತು ದೊಡ್ಡಬೆಲೆ ಶಾಸ್ತ್ರಿಗಳು ಬರೆದಿರುವ ಗದ್ಯವಾಕ್ಯದ ಸ್ವರೂಪ : "ಪೂರ್ವಕಾಲದೊಳು ವಾಸುದೇವ ಯತೀಶ್ವರರೆಂಬದಾಗಿ ಭೂಲೋಕದೊಳ

ವತರಿಸಿ ನಿಖಿಲಯೋಗಾನುಷ್ಠಾನ ಗರಿಷ್ಠರಾಗಿ ಪ್ರಪಂಚದಲ್ಲಿ ಅನಿತರ ಸಾಧಾರಣವಾದ ಯಶಸ್ಸನ್ನು ಪಡೆದು ಅವ್ಯಾಜ ಕರುಣಾಂತರಂಗರಾದುದರಿಂದಲೇ ಜನನ ಮರಣ ಪ್ರವಾಹರೂಪಕವಾಗಿರುವ ಘೋರವಾದ ಸಂಸಾರ ಸಾಗರದೊಳು ಮುಳುಗಿ ದಡವನ್ನು ಕಾಣದೆ ಕಂಗೆಟ್ಟು ಕಷ್ಟಪಡುತಲಿರುವ ಲೋಕವನ್ನುದ್ಧಾರವಾಡಲೋಸುಗ ಪರಮಪುರುಷಾರ್ಥಸಾಧಕತಮವಾಗಿರುವ ಜ್ಞಾನಸಂಪಾದನಕ್ಕೋಸ್ಕರ 'ಮನನ'ವೆಂಬ ಹೆಸರುಳ್ಳ ಅನ್ವಾಯ್ಯದೃಶವಾದ ಗ್ರಂಥವನ್ನು ವಿರಚಿಸಿದರು".

ಧಾರ್ಮಿಕ ವಿಚಾರಗಳನ್ನು ಜನರಲ್ಲಿ ಪ್ರಚಾರ ಮಾಡಲು ಕೀರ್ತನೆಗಳನ್ನು ಬಿಟ್ಟರೆ, ಪದ್ಯಕ್ಕಿಂತ ಗದ್ಯ ಮೇಲು ಎಂಬ ಗ್ರಹಿಕೆ ಚಿಕ್ಕದೇವರಾಜ ಒಡೆಯರ ಕಾಲದಲ್ಲೇ ಪ್ರಾರಂಭವಾದಂತೆ ಕಾಣುತ್ತದೆ. ಅವರ 'ಬಿನ್ನಪ' ಇದಕ್ಕೆ ಉದಾಹರಣೆ. ಇದು ವಿಶಿಷ್ಟಾದ್ವೈತ ಪರವಾದ ಕೃತಿ. ಇದರ ಮೇಲು ಪಂಕ್ತಿಯನ್ನೇ ಇತರರೂ ಅನುಸರಿಸಿದಂತೆ ಕಾಣುತ್ತದೆ. ಚಿಕ್ಕುಪಾಧ್ಯಾಯನು ಅನೇಕ ಗದ್ಯ ಗ್ರಂಥಗಳನ್ನು ರಚಿಸಿದ್ದಾನೆ. ಅದ್ವೈತ ವಿಚಾರವಾಗಿ ಆ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳು ಹುಟ್ಟದಿದ್ದರೂ, ವೆಂಕಟದಾಸ ತಿಮ್ಮಪ್ಪದಾಸರ ಗ್ರಂಥಗಳೂ, ಅವಕ್ಕೂ ಹಿಂದೆ ಅವಧೂತ ಶಿವಯೋಗಿ ರಚಿಸಿದ 'ಕೈವಲ್ಯಾನಂದಸಾರ' (ಅಥವಾ ಆನಂದ ಕಲ್ಲೋಲ) (ಸು. 1750) ಮುಂತಾದ ಗ್ರಂಥಗಳೂ ಶಾಸ್ತ್ರಗ್ರಂಥ ರಚನೆ ಕ್ರಮೇಣ ಪದ್ಯದಿಂದ ಗದ್ಯಕ್ಕೆ, ತಿರುಗುತ್ತಿದ್ದುದಕ್ಕೆ ದಿಕ್ಸೂಚಿಯಾಗಿವೆ.

ಅದ್ವೈತಪರ ಕೀರ್ತನೆಗಳು (ಹಾಡುಗಳು) :

ಅದ್ವೈತವನ್ನು ಹಾಡುಗಳ ರೂಪದ ಕನ್ನಡ ಕೃತಿಗಳಲ್ಲಿ ಪ್ರತಿಪಾದಿಸುವವರ ಒಂದು ಪರಂಪರೆಯೂ ಇದೆ, ಕನ್ನಡ ನಾಡಿನಲ್ಲಿ. ಹಾಡಿನ ರೂಪದಲ್ಲಿ ಅದ್ವೈತ ಸಿದ್ಧಾಂತವನ್ನು ಬೋಧೆಮಾಡ ಹೊರಟವರಲ್ಲಿ ಮೊದಲಿಗರೆಂದರೆ ನಿಜಗುಣ ಶಿವಯೋಗಿಗಳು. ಅದ್ವೈತ ಪರವಾದ ಇವರ ರಚನೆಗಳಲ್ಲಿ ಶಿವ ಭಕ್ತಿಗೆ ಮಾತ್ರ ಸ್ಥಾನ. ಇವರ ತರುವಾಯ ನಮ್ಮ ಗಮನಕ್ಕೆ ಬರುವವರು ಬಿಜಾಪುರ ಜಿಲ್ಲೆಯ ಕಾಖಂಡಕಿಯ ಮಹೀಪತಿ ದಾಸರು (ಸು. 1610–1680). ಇವರು ಮಾಧ್ವಮತಾನುಯಾಯಿಗಳಾದರೂ ಅದ್ವೈತಾನುಭವ

ವನ್ನು ಎತ್ತಿ ಹಿಡಿದವರು. ಆದರೆ, ಸಿದ್ಧಾಂತಬೋಧೆ ವಾಚ್ಯವಾಗಿ ಎಲ್ಲೂ ಪ್ರಕಟವಾಗಿಲ್ಲ. ಇನ್ನೊಬ್ಬ ಗಮನಾರ್ಹ ವ್ಯಕ್ತಿಗಳೆಂದರೆ, ಶಿಶುನಾಳದ ಷರೀಫ ಸಾಹೇಬರು (ಸು. 1850). ಇವರು ಮಹಮ್ಮದೀಯ ಮತಸ್ಥರಾದರೂ ವೈದಿಕ ಮತಕ್ಕೆ ಆಕರ್ಷಿತರಾಗಿ, ಅದ್ವೈತಿಗಳಾಗಿದ್ದ ಗುರು ಗೋವಿಂದಭಟ್ಟರ ಶಿಷ್ಯರಾದರು. ಅವರ ರಚನೆಗಳ ಮುದ್ರಿಕೆ ಶಿಶುನಾಳೇಶ. ೧೯ನೆಯ ಶತಮಾನಕ್ಕೆ ಸೇರಿದ ಕೈವಾರದ ನಾರಾಣಪ್ಪನವರು, ವೇದಾಂತಿ ಶಿವರಾಮ ಶಾಸ್ತ್ರಿಗಳು ('ಶಂಕರಾನಂದ ತತ್ವ')–ಇವರೂ ಇದೇ ಪರಂಪರೆಗೆ ಸೇರುತ್ತಾರೆ. ಇವರ ಕೃತಿಗಳಲ್ಲಿ ಅದ್ವೈತದ ವಿಚಾರ ಕೃತಿಯ ಒಡಲಲ್ಲಿ ಆತ್ಮರೂಪದಲ್ಲಿ ಅಡಗಿಕೊಂಡು ಬೋಧೆಯಾಗುವುದಾದರೂ, ಇವನ್ನು ಪೂರ್ತಿಯಾಗಿ ಶಾಸ್ತ್ರಗ್ರಂಥಗಳೆಂದು ಪರಿಗಣಿಸುವುದು ಸರಿಯಲ್ಲವೆಂದು ಕಾಣುತ್ತದೆ. ಈ ಕೃತಿಸಮುದಾಯವನ್ನು ಶಾಸ್ತ್ರಲೇಪವುಳ್ಳ ಗೇಯಸಾಹಿತ್ಯ' ಎಂದು ನಿರ್ದೇಶಿಸಬಹುದು.

'ಪರಬ್ರಹ್ಮ ಪ್ರಕಾಶಿಕೆ'ಯ ಕರ್ತೃವಾದ ತಿಮ್ಮಪ್ಪದಾಸರು (ಸು. 1850) ಬಹುಮಟ್ಟಿಗೆ ಬೇರೆಯಾಗಿ ನಿಲ್ಲುತ್ತಾರೆ. ಏಕೆಂದರೆ, ಇವರ ಅನೇಕ ಕೀರ್ತನೆಗಳಲ್ಲಿ ಅದ್ವೈತ ಸಿದ್ಧಾಂತ ತನ್ನ ಪರಿಭಾಷೆಯ ಪರಿಕರದೊಂದಿಗೆ ಎದ್ದುಕಾಣುವ ಮಟ್ಟಿಗೆ ಪ್ರತಿಪಾದಿತವಾಗಿದೆ. ವಿಶೇಷವಾಗಿ ಇವರ ಅಷ್ಟೋತ್ತರ ಶತ (108) ಪೂಜಾ ವಿಧಾನ ಕೀರ್ತನೆಗಳಲ್ಲಿ* ಅದ್ವೈತದ ಮುಖ್ಯ ತತ್ತ್ವಗಳೆಲ್ಲವೂ ಕೀರ್ತನೆಗಳನ್ನು ಶಾಸ್ತ್ರಶುಷ್ಕವೆನಿಸದಂತೆ ಆಶ್ಚರ್ಯಕರವಾದ ರೀತಿಯಲ್ಲಿ ಪ್ರಕಾಶಗೊಂಡಿವೆ. ಪರಮಾತ್ಮನು ಜೀವಾತ್ಮನನ್ನು ಸಂಬೋಧಿಸಿ–"ಹೇ ಜೀವ, ಹೆದರದಿರು, ಬ್ರಹ್ಮನಿಗಾನು ಮೊದಲು ಪೇಳಿದ ಮಾರ್ಗವ ಪೇಳ್ವೆ" ಎಂದು ತೊಡಗಿ, ಅದ್ವೈತ ಸಿದ್ಧಾಂತದ ಸಾರವನ್ನೇ ಬೋಧಿಸುವ ರೀತಿಯಲ್ಲಿ 'ಅಭಯ' ಎಂಬ ಕೀರ್ತನೆಯೊಂದು ರಚಿತವಾಗಿದೆ. ಉದಾಹರಣೆಯಾಗಿ ಒಂದು ಚರಣ :

ಹುರಿದ ಬೀಜವ ನೋಡಲು । ಆಕಾರವಾಗಿ । ಯಿರುವದು; ಯಿದ ಬಿತ್ತಲು ।
ತಿರುಗಿ ಪುಟ್ಟಿ ತೋರುವದೆ ? । ತಿಳಿಯೆ ಮಾಯೆಯನು, ಬಾಧೆ ।
ಬರುವದೇನೈ? ಭದ್ರವಾಗಿರು । ಭೋಗಿಸುತಿರು ॥ ೫ ॥

---

* ಈ ಕೀರ್ತನೆಗಳ ಸಂಕಲನ 'ಅರ್ಚನ' ಎಂಬ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಕಟನೆಯಾಗಿ ಅಚ್ಚಾಗಿದೆ (1971).

["ಧಾನ್ಯದ ಬೀಜವನ್ನು ಹುರಿದರೆ ಅದರ ಆಕಾರ ಕೆಡದೆ ಇದ್ದ ಹಾಗೆಯೇ ಇರುತ್ತದೆ. ಅದನ್ನು ಬಿತ್ತಿದರೂ ಅದು ಮತ್ತೆ ಮೊಳೆಯುವುದಿಲ್ಲ. ಹಾಗೆಯೇ, ಜೀವಾತ್ಮ ಸ್ವರೂಪದ ಚರಾಚರ ಜಗತ್ತೆಲ್ಲವೂ ಮಾಯೆ ಎಂಬ ಜ್ಞಾನವುಂಟಾದರೆ, ಮಾಯೆಯ ಪ್ರಭಾವ (ಹುರಿದ ಬೀಜದಂತೆ) ನಿಷ್ಫಲವಾಗುತ್ತದೆ. ನಿನಗೆ ಈ ಜ್ಞಾನವಿರುವುದರಿಂದ, ಸುರಕ್ಷಿತವಾಗಿರು ; ಪ್ರಪಂಚವನ್ನು ಭೋಗಿಸುತ್ತಿರು." (ತತ್ತ್ವಜ್ಞಾನಿ ಭೋಗಗಳನ್ನು ಭೋಗಿಸಿದರೂ ಭೋಗಿಸಿದ ಹಾಗಲ್ಲ ಎಂದು ತಾತ್ಪರ್ಯ).]

ವಿಶಿಷ್ಟಾದ್ವೈತ :

ಶ್ರೀ ರಾಮಾನುಜಾಚಾರ್ಯರು ಕನ್ನಡನಾಡಿನ ಮೇಲುಕೋಟೆಯಲ್ಲಿ ಬಂದು ಕೆಲ ಕಾಲ ಅಲ್ಲಿ ತಂಗಿದ್ದು ಶ್ರೀವೈಷ್ಣವ ಧರ್ಮ ಇಲ್ಲಿ ಬೇರೂರಲು ಕಾರಣಕರ್ತರಾದರು. ಅನಂತರ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿಯೂ, ವಿಜಯನಗರದ ಅರಸರ ಕಾಲದಲ್ಲಿಯೂ ಶ್ರೀವೈಷ್ಣವ ಮತಕ್ಕೆ ರಾಜವಂಶದ ಆಶ್ರಯವಿತ್ತು. ಈ ಯಾವ ಕಾಲದಲ್ಲಿಯೂ ಶ್ರೀವೈಷ್ಣವ ಪಂಥದವರು ಕನ್ನಡದಲ್ಲಿ ಯಾವ ಕೃತಿಯನ್ನೂ ರಚಿಸಿದಂತೆ ಕಂಡುಬರುವುದಿಲ್ಲ. ಶ್ರೀವೈಷ್ಣವರ ಒಲವೆಲ್ಲಾ ಅವರ ತಾಯ್ನುಡಿಯಾದ ತಮಿಳಿನ ಕಡೆಗೂ, ಆಳ್ವಾರರು ಮುಂತಾದವರ ತಮಿಳು ರಚನೆಗಳ ಕಡೆಗೂ ತಿರುಗಿದ್ದುದರಿಂದ ಕನ್ನಡದಲ್ಲಿ ಕೃತಿರಚನೆಗೆ ಅವರು ಮನಸ್ಸು ಕೊಡಲಿಲ್ಲವೆಂದು ಕಾಣುತ್ತದೆ. ಮೈಸೂರಿನ ದೊರೆಯಾದ ಚಿಕ್ಕದೇವರಾಜ ಒಡೆಯರು (1672-1704) ಶ್ರೀವೈಷ್ಣವ ಮತದಲ್ಲಿ ನಿಷ್ಠೆಯುಳ್ಳವರಾದರೂ ಕನ್ನಡದ, ತಮ್ಮ ಕನ್ನಡ ಪ್ರಜೆಗಳ, ಪ್ರೇಮಿಗಳಾಗಿದ್ದುದರಿಂದ ಆ ಮತ ತತ್ತ್ವಗಳನ್ನು ತಮ್ಮ ಪ್ರಜಾಕೋಟಿಯಲ್ಲಿ ಪ್ರಚಾರಮಾಡುವ ಸಲುವಾಗಿ ತಾವೇ ಕೃತಿರಚನೆ ಮಾಡಿದ್ದಲ್ಲದೆ, ಆಸ್ಥಾನದಲ್ಲಿದ್ದ ವಿದ್ವಾಂಸರಿಂದಲೂ ಇತರರಿಂದಲೂ ಕೃತಿರಚನೆ ಮಾಡಿಸಿದರು. ಹೀಗೆ, ಈ ದೊರೆಯ ಪ್ರೋತ್ಸಾಹದಿಂದ ಸೃಷ್ಟಿಯಾದ ಕನ್ನಡ ಕೃತಿಗಳ ಸಂಖ್ಯೆ ವಿಪುಲವಾಗಿಯೇ ಇದ್ದು, ಒಂದಲ್ಲ ಒಂದು ರೀತಿಯಲ್ಲಿ ಧಾರ್ಮಿಕ ವಿಷಯಕ್ಕೆ (ಭಕ್ತಿ, ನೀತಿ, ಪುರಾಣ, ಕ್ಷೇತ್ರಮಾಹಾತ್ಮ್ಯ ಇತ್ಯಾದಿ) ಸಂಬಂಧಪಟ್ಟಿದ್ದರೂ, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಕನ್ನಡದಲ್ಲಿ ತಿಳಿಯ ಹೇಳುವ ಗ್ರಂಥಗಳು ಕೇವಲ ಮೂರು ಮಾತ್ರ : 'ಚಿಕ್ಕದೇವರಾಜ ಬಿನ್ನಪ', 'ಸಾತ್ವಿಕ ಬ್ರಹ್ಮವಿದ್ಯಾವಿಲಾಸ', ಮತ್ತು 'ತತ್ವತ್ರಯ ವಿವರಣ'.

ಚಿಕ್ಕದೇವರಾಜ ಬಿನ್ನಪ:* ಇದು ಗದ್ಯಗ್ರಂಥ. ಮೇಲುಕೋಟೆಯ ಚೆಲುವನಾರಾಯಣನಲ್ಲಿ ಬಿನ್ನವಿಸಿಕೊಂಡಂತೆ ರಚಿಸಿದ 30 ಬಿನ್ನಪಗಳಿವೆ. ಇವರಲ್ಲಿ ವಿಶಿಷ್ಟಾದ್ವೈತಮತದ ತತ್ತ್ವಸಾರವು ನಿರೂಪಿತವಾಗಿದೆ. ಗ್ರಂಥಾರಂಭದಲ್ಲಿ—

"ಪ್ರಜೆಗಳ್ಗೆ ಪರಗತಿಯಂ ಸಂಪಾದಿಸವೇಳ್ಪುದೆಂದಾರಯ್ದು, ಪಿಂತಣ್ಗೆ ಎಸಿತಾನುಂ ಪಾಪಿಗಳಾದೊಡಂ ಆವ ಜಾತಿಯೊಳ್ ಪುಟ್ಟಿರ್ದೊಡಂ ಈಗಳುಂ ತತ್ವಜ್ಞಾನದಿಂ ತನ್ನೊಳ್ ಭಕ್ತಿಗೆಯ್ದು ನಂಬಿದವರ್ಗೆ ಮುಕ್ತಿ ತಪ್ಪದೆಂದೆಣಿಸಿ ಅಕ್ಕರಮನರಿಯದ ಒಕ್ಕಲಿಗರ್ಗಂ ಪೆಣ್ಗಳ್ಗಂ ಸಕ್ಕದದಿಂ ತತ್ವಜ್ಞಾನಮಪ್ಪುದರಿದು ಎಂದು ಎಲ್ಲರುಂ ಅರಿವಂತೆ ಕನ್ನಡ ವಾತಿನೊಳಂ ಮೇಲ್ನುಡಿಗಳಿಂದೆ ಅಖಿಲ ತತ್ವಾರ್ಥಗಳಂ ಸಂಗತಿಗೊಳಿಸಿ ತಾಂ ತನ್ನ ಕುಲದೇವತೆಯುಪ್ಪ ಯಾದವಗಿರಿ ನಾರಾಯಣ ನಡಿದಾವರೆಗಳ್ಗೆ ಬಿನ್ನಪಂಗೆಯ್ವ ನೆವದೊಳ್ ಮೂವತ್ತು ಬಿನ್ನಪಂಗಳಂ ಪವಣ್ಗೆಯ್ದಂ."

ಗದ್ಯವು ಹಳಗನ್ನಡದಲ್ಲಿ ಪ್ರೌಢಶೈಲಿಯಲ್ಲಿ ಬರೆದಿರುವುದರಿಂದ ಗ್ರಂಥ ಎಷ್ಟರಮಟ್ಟಿಗೆ ಜನಸಾಮಾನ್ಯಕ್ಕೆ ಹಿಡಿಸುತ್ತದೆ ಎಂಬುದು ಸಂದೇಹಾಸ್ಪದ.‡

ಪ್ರತಿ ಬಿನ್ನಪದ ಮೊದಲಲ್ಲೂ ಆ ಬಿನ್ನಪದಲ್ಲಿ ವಿವರಿಸಿರುವ ವಿಷಯವನ್ನು ಸಾರರೂಪವಾಗಿ ಕಂದಪದ್ಯದಲ್ಲಿ ತಿಳಿಸಿದೆ. ಈ ಮೂವತ್ತು ಪದ್ಯಗಳ ಸಾರಾಂಶವನ್ನು ಪರಿಚಯಮಾಡಿಕೊಂಡರೆ, ಗ್ರಂಥ ವಿಷಯವನ್ನು ಪರಿಚಯ ಮಾಡಿಕೊಂಡಂತಾಗುತ್ತದೆ. ಈ ಸಾರಾಂಶವನ್ನು ಕೆಳಗೆ ಕೊಟ್ಟಿದೆ :—

ಶ್ರೀಮನ್ನಾರಾಯಣನು ಅರ್ಚಾವತಾರಗಳನ್ನು (ಪೂಜಾಮೂರ್ತಿ ರೂಪಗಳನ್ನು) ಧರಿಸಿರುವುದು ಭಕ್ತರ ಅನುಗ್ರಹಾರ್ಥ. ಆತನೇ ಜಗತ್ ಕಾರಣ, ಈ ಕಾರಣ ವಸ್ತುವನ್ನು ತಿಳಿಯಕೂಡದೆಂಬ ಅಡ್ಡಿಯನ್ನು ಆತನೇ ಪರಿಪರಿಸಿದ್ದಾನೆ. ಅದು ತಿಳಿಯುವುದು ವೇದ ಶಾಸ್ತ್ರಗಳಿಂದಲೇ. ವೇದಶಾಸ್ತ್ರ ಸಿದ್ಧವಾಗಿ, ನಾರಾಯಣನಿಗೆ ಶರೀರವಾದ ಜಗತ್ತು ಮಿಥ್ಯೆಯಲ್ಲ, ಸತ್ಯ. ಕನಸಿನ ವಸ್ತುಗಳು ಆ ಕಾಲದಲ್ಲಿ ಸತ್ಯವಾಗಿರುವಂತೆ ಜಗತ್ತೂ ಸತ್ಯವೇ. ಜಗತ್ಸೃಷ್ಟಿ ವಿಷಮವಾಗಿದ್ದರೂ ಸೃಷ್ಟಿಕರ್ತನಾದ ಜಗದೀಶ್ವರ ವಿಷಮನಲ್ಲ, ನಿರ್ದಯನಲ್ಲ. ಚಿತ್ ಅಚಿತ್ ವಸ್ತು ಶರೀರಕನಾದ ಜಗದೀಶ್ವರ ಒಬ್ಬನೇ ; ಅವನೇ ಮೂರೂ ತೆರನ ಕಾರಣ—ಇದು ಹತ್ತು ಬಿನ್ನಪಗಳ ಸಾರ. ಹತ್ತರಿಂದ ಹದಿನೆಂಟರವರೆಗಿನ

* ಚಿಕ್ಕ ದೇವರಾಜರ ಹೆಸರಿನಲ್ಲಿರುವ ಈ ಗ್ರಂಥವನ್ನೂ, ಗೀತ ಗೋಪಾಲವನ್ನೂ ತಿರುಮಲಾರ್ಯನೇ ದೊರೆಯ ಅಂಕಿತದಲ್ಲಿ ರಚಿಸಿರಬಹುದೆಂದು ಕವಿಚರಿತೆಕಾರರು ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.

‡ ಈ ಗ್ರಂಥದ ಹೊಸಗನ್ನಡ ಅನುವಾದವನ್ನು ಜಿ. ಪಿ. ರಾಜರತ್ನಂ ಅವರು ಒದಗಿಸಿರುವುದು (1950), ಸಾಮಾನ್ಯರಿಗೆ ಅನುಕೂಲವಾಗಿದೆ.

ಬಿನ್ನಪಗಳಲ್ಲಿ – ಜೀವತತ್ತ್ವ ಸ್ವರೂಪ, ತತ್ತ್ವ ಸೃಷ್ಟಿಕ್ರಮ, ಬ್ರಹ್ಮಾಂಡ ಸೃಷ್ಟಿ ಪ್ರಕಾರ, ಬ್ರಹ್ಮಾಂಡದಲ್ಲಿನ 14 ಲೋಕಗಳ ನೆಲೆ, ಭೂಮಂಡಲದ ಪರಿಮಾಣ, ಸುಖಾನುಭವಸ್ಥಾನಗಳಾದ ಸ್ವರ್ಗಗಳ ಸ್ವರೂಪ, ದುಃಖಾನುಭವಸ್ಥಾನಗಳಾದ ನರಕಗಳ ಸ್ಥಿತಿ, ಶ್ರೀ ನಾರಾಯಣನಲ್ಲಿ ಭಕ್ತಿಯಿಡುವುದರಿಂದ ಕ್ರೂರವಾದ ಪಾಪಫಲಗಳ ಪರಿಹಾರ; ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ಶ್ರೇಷ್ಠ; ಮೋಕ್ಷ ಪಡೆಯುವ ಮಾರ್ಗವನ್ನು ಸಾತ್ವಿಕಶಾಸ್ತ್ರಗಳಿಂದ ತಿಳಿಯಬೇಕು; ಪಂಚರಾತ್ರಾಗಮ ತಂತ್ರವೇ ತಂತ್ರಗಳಲ್ಲಿ ಪ್ರಮಾಣಭೂತವಾದದ್ದು; ಮೋಕ್ಷಸಾಧಕವಾದ ವಿಷಯ ವಿರಕ್ತಿ ಅಸಾಧ್ಯವಲ್ಲ; ಕೇವಲ ಕರ್ಮದಿಂದ ಮುಕ್ತಿಯಿಲ್ಲ; ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವ ಭಗವಂತನು ಮೋಕ್ಷಾರ್ಥಿಗಳಿಗೆ ಮೋಕ್ಷ ಪ್ರದಾಯಕ; ಶ್ರೀಮನ್ನಾರಾಯಣನೊಬ್ಬನೇ ರಕ್ಷಣ ಸಾಮರ್ಥ್ಯವುಳ್ಳವನು; ಮೋಕ್ಷಾರ್ಥಿ ತನ್ನ ದೋಷ ದೌರ್ಬಲ್ಯಗಳಿಂದ ಖಿನ್ನನಾಗದೆ ಭಗವಂತನ ಗುಣ ಸ್ಮರಣೆ ಮಾಡುತ್ತ ಧೈರ್ಯ ಹೊಂದಿರಬೇಕು; ಸಂಸಾರದ ಬೇರನ್ನು ಜಗದೀಶ್ವರನೇ ಕತ್ತರಿಸುವನು; ಶ್ರೀಮನ್ನಾರಾಯಣನ ದಿವ್ಯರೂಪವು ಮುಕ್ತರಿಂದ ಭೋಗ್ಯವಾಗಿದೆ; ಪರವಾಸುದೇವನ ಉಳಿಗದ ಭಾಗ್ಯ ಮುಕ್ತರಿಗೆ ಪರಮಭೋಗ್ಯ.

ಮೋಕ್ಷವೆಂದರೆ ಅದ್ವೈತದಲ್ಲಿ ಇರುವಂತೆ ನಿರ್ಗುಣ ಬ್ರಹ್ಮದ ಅನುಭವ ಅಲ್ಲ. ದಿವ್ಯರೂಪವುಳ್ಳ ಭಗವಂತನ ಸಾನ್ನಿಧ್ಯದ ಭಗವದನುಭವ. ಇದರ ಪ್ರಾಪ್ತಿಗೆ ಭಗವಂತನ ಕೃಪೆ ಅಗತ್ಯ. ಇದಕ್ಕೆ ಮಾರ್ಗ 'ನೀನೆಗತಿ' ಎಂದು ಮರೆಹೋಗುವುದು. ಇದೇ ಶರಣಾಗತಿ; ಪ್ರಪತ್ತಿ ಮಾರ್ಗ. ವಿಶಿಷ್ಟಾದ್ವೈತದ ಸಾರ.

ದ್ವೈತಸಿದ್ಧಾಂತ : ದ್ವೈತಸಿದ್ಧಾಂತದ ಪ್ರವರ್ತಕರಾದ ಶ್ರೀ ಮಧ್ವಾಚಾರ್ಯರು ಬೋಧಿಸಿದ ತತ್ತ್ವಗಳನ್ನು ಹರಿದಾಸರು ಜನಸಾಮಾನ್ಯಕ್ಕೆ ಮುಟ್ಟಿಸಲು ಹಾಡನ್ನು ಒಂದು ಪರಿಣಾಮಕಾರಿ ಸಾಧನವನ್ನಾಗಿ ಮಾಡಿಕೊಂಡರು. ಹರಿದಾಸರ ಕೀರ್ತನೆಗಳು 'ದೇವರನಾಮ'ಗಳೆಂದೂ ಪ್ರಸಿದ್ಧವಾಗಿವೆ. ದ್ವೈತದಲ್ಲಿ ಪರಮಾತ್ಮ (ಈಶ್ವರ) ಜೀವಾತ್ಮರು (ಜೀವರು) ಎಂದೆಂದೂ ಬೇರೆ ಬೇರೆಯೇ; ಹಾಗೆಯೇ ಜೀವ-ಜಡ ಬೇರೆ ಬೇರೆ; ಈಶ್ವರ-ಜಡ ಬೇರೆ ಬೇರೆ; ಜೀವ-ಜೀವರು ಬೇರೆ ಬೇರೆ; ಜಡದಲ್ಲೂ ಮತ್ತೆ ಭೇದ ಕಲ್ಪನೆ. ಈ ಭೇದ ಕಲ್ಪನೆಯಿಂದಾಗಿ ಮಧ್ವಮತ ದ್ವೈತ (ಎರಡರ ನಡುವಣ ಭೇದಗಣನೆ) ಎನ್ನಿಸಿಕೊಂಡಿದೆ. ಈ ಭೇದಪಂಚಕವಲ್ಲದೆ,–ಹರಿಸರ್ವೋತ್ತಮತ್ವ, ಜಗತ್‌ಸತ್ಯತ್ವ, ದೇವತಾ ತಾರತಮ್ಯ, ಇವು ದ್ವೈತಸಿದ್ಧಾಂತದ ಉಳಿದ ಮುಖ್ಯ ಮೂಲತತ್ತ್ವಗಳು. ಹೀಗಿರುವುದರಿಂದ, ದ್ವೈತದಲ್ಲಿ ವಿಷ್ಣು (ಹರಿ) ಭಕ್ತಿಗೂ, ವಿಷ್ಣು (ಹರಿ) ನಾಮ ಸಂಕೀರ್ತನೆಗೂ ಸರ್ವ

ಪ್ರಾಧಾನ್ಯ. ಆದ್ದರಿಂದ, ಈ ಮುಖ್ಯ ತತ್ತ್ವಗಳನ್ನು ನಾಮಸಂಕೀರ್ತನ ಮೂಲಕ ಪ್ರಸಾರ ಮಾಡುವವರು ಹರಿದಾಸರೆನಿಸಿದರು ; ಹರಿನಾಮಗಳನ್ನು ಸ್ಮರಿಸುತ್ತ, ಹರಿಭಕ್ತಿಯನ್ನು ಬೆಳಗುವ ಅವರ ಕೀರ್ತನೆಗಳು 'ದೇವರ ನಾಮ' ಗಳು ಎಂದು ಪ್ರಸಿದ್ಧವಾದುವು. ಹರಿದಾಸ ಸಾಹಿತ್ಯವೆಲ್ಲ ದೇವರ ನಾಮಗಳೇ ಎಂದರೂ ತಪ್ಪಾಗದು. ಈ ವಿಶಾಲವಾದ ಅರ್ಥದ ಹರಹಿನ ಹಿನ್ನೆಲೆಯಲ್ಲಿ ವಿವೇಚಿಸಿದರೆ, ಹರಿದಾಸ ಸಾಹಿತ್ಯವೆಲ್ಲವನ್ನೂ 'ದ್ವೈತಸಿದ್ಧಾಂತ ಶಾಸ್ತ್ರ' ವೆಂದೇ ಪರಿಗಣಿಸಬೇಕಾಗುತ್ತದೆ. ಆದರೆ, ಎಲ್ಲ ಹರಿದಾಸರ ಕೃತಿಗಳೂ ಮೇಲ್ಕಂಡ ಎಲ್ಲ ತತ್ತ್ವಗಳನ್ನೂ ತಮ್ಮ ಕಕ್ಷೆಯಲ್ಲಿ ಒಳಗೊಂಡಿಲ್ಲ. ವಿಭಜನೆ ಮಾಡಿ ಪರಿಶೀಲಿಸಿದರೆ, ಹರಿದಾಸರ ಕೃತಿಗಳಲ್ಲಿ ಬಹು ಸಂಖ್ಯೆಯವು ಭಕ್ತಿ ಪ್ರಧಾನವಾದವು. ಪುರಂದರದಾಸರ ಕೀರ್ತನೆಗಳಲ್ಲಿ ಭಕ್ತಿಯ ಜೊತೆಗೆ ಜ್ಞಾನ ವೈರಾಗ್ಯಗಳ ಪ್ರಾಚುರ್ಯವನ್ನೂ, ಅಲ್ಲಲ್ಲಿ ದ್ವೈತ ತತ್ತ್ವಗಳ ಸ್ಪಷ್ಟ ನಿರೂಪಣೆ ಯನ್ನೂ ಕಾಣುತ್ತೇವೆ. ಪುರಂದರ ದಾಸರ ಕೃತಿ ಸಮುದಾಯವನ್ನು ಒಟ್ಟಿ ನಲ್ಲಿ 'ಪುರಂದರೋಪನಿಷತ್ತು' ಎಂದು ವ್ಯವಹರಿಸುವುದು ಅವರ ರಚನೆಗಳ ಶಾಸ್ತ್ರ ನಿಷ್ಠೆಯನ್ನೇ ವ್ಯಕ್ತಪಡಿಸುತ್ತದೆ. ಆದ್ದರಿಂದ, ಇಲ್ಲಿ ಪುರಂದರದಾಸ ರನ್ನು ಪ್ರಾತಿನಿಧಿಕವಾಗಿ ಪರಿಗಣಿಸಿ, ಅವರ ಕೃತಿಗಳಲ್ಲಿ ದ್ವೈತಪ್ರತಿಪಾದನೆ ಹೇಗೆ ಮೂಡಿಬಂದಿದೆ ಎಂಬುದನ್ನು ಕೆಲವು ನಿದರ್ಶನಗಳ ಮೂಲಕ ವಿಶದ ಪಡಿಸಲಾಗುವುದು.

"ಮಧ್ವಮತದ ಸಿದ್ಧಾಂತದ ಪದ್ಧತಿ। ಬಿಡಬೇಡಿ ಬಿಡಬೇಡಿ। ಹರಿ ಸರ್ವೋತ್ತಮನಹನೆಂಬ ಜ್ಞಾನವ। ತಾರತಮ್ಯದಲಿ ತಿಳಿವ ಮಾರ್ಗವಿದು" ಎಂಬ ಕೀರ್ತನೆಯಲ್ಲಿ ಪುರಂದರದಾಸರು ಮಧ್ವಮತದ ಹಿರಿಮೆ, ಹರಿಸರ್ವೋ ತ್ತಮತ್ವ, ಹರಿಸರ್ವೋತ್ತಮತ್ವವನ್ನು ಅರಿಯಲು ಪರಿವಾರ ದೇವತೆಗಳಲ್ಲಿ ತಾರತಮ್ಯಜ್ಞಾನದ ಅಗತ್ಯ ಇವನ್ನು ತಿಳಿಸಿದ್ದಾರೆ. ಮಧ್ವಮತ 'ಸತುಶಾಸ್ತ್ರ' (ಸತ್‌ಶಾಸ್ತ್ರ) ; ಅದಕ್ಕೆ ಸಮನಾದದ್ದು ಬೇರೆ ಇಲ್ಲ. ಮಧ್ವಾಚಾರ್ಯರು ಹನುಮನ, ಭೀಮನ, ಅವತಾರ. "ಪರಮತ ಖಂಡಿಸಿ ಪಂಡಿತರು ಪೇಳಿದ ಪುರಂದರ ವಿಠಲನ ಮತವೆ ಹನುಮನ ಮತವು." ಭಕ್ತಿಪಂಥದಲ್ಲಿ ಏಕದೇವೋ- ಪಾಸನೆ ಅನಿವಾರ್ಯವಾದ ಒಂದು ಅಗತ್ಯ ಸಾಧನಾಕ್ರಮ ; ಈ ಬಗೆಗೆ ಎರಡು ಮಾತಿಲ್ಲ. ಭಕ್ತಿಯಲ್ಲಿ ಮುಖ್ಯವಾಗಿ ಶಿವಭಕ್ತಿ, ವಿಷ್ಣುಭಕ್ತಿ–ಪ್ರಮುಖ. ಹರಿಪಾರಮ್ಯವನ್ನು ಎತ್ತಿಹಿಡಿಯಬೇಕಾದರೆ ಹರನನ್ನು ಕೆಳಕ್ಕಿಳಿಸಲೇಬೇಕು !

ಕೆಳಕ್ಕಿಳಿಸುವಲ್ಲಿಯೂ ಹರನಿಗೆ ಒಂದು ಮೇಲಿನ ಪದವಿಯನ್ನು ಕೊಟ್ಟೇ ಇಳಿಸಿದೆ ಮಧ್ವಮತ. ಹರ ಹರಿಯ ಪರಮಭಕ್ತನಾಗುತ್ತಾನೆ. "ಭಕುತರೊಳಗೆಲ್ಲ ಚಂದ್ರಶೇಖರಗೆ ಸರಿಯಿಲ್ಲ" ಎಷ್ಟು ಭಕ್ತಿ ಭಕ್ತನಲ್ಲಿ ಅಳವಡಬೇಕಾದರೆ ಈಶ್ವರನ ಅನುಗ್ರಹವಾಗಲೇಬೇಕು. ಆದ್ದರಿಂದ, ಮಧ್ವಮತದಲ್ಲಿ ಶಿವನ ಪೂಜೆ, ಪ್ರಾರ್ಥನೆಗಳಿಗೆ, ಮುಖ್ಯಸ್ಥಾನವಿದೆ. ಇತರ ಹರಿದಾಸರಂತೆ ಪುರಂದರ ದಾಸರೂ ಅತ್ಯಂತ ಭಕ್ತಿಯಿಂದಲೇ ಈಶ್ವರ ಸ್ತುತಿಮಾಡಿದ್ದಾರೆ, ನಾಲ್ಕಾರು ಕೀರ್ತನೆಗಳಲ್ಲಿ. 'ಚಂದ್ರಚೂಡ ಶಿವಶಂಕರ ಪಾರ್ವತಿರಮಣ ನಿನಗೆ ನಮೋ ನಮೋ' ಎಂಬ ಕೀರ್ತನೆಯಲ್ಲಿ ಶಂಕರನನ್ನು ಬಗೆ ಬಗೆಯಲ್ಲಿ ಕೊಂಡಾಡಿ ಕೊನೆಗೆ, "ಕೊರಳಲಿ ಭಸ್ಮ ರುದ್ರಾಕ್ಷಿಯ ಧರಿಸಿದ ಪರಮ ವೈಷ್ಣವನು ನೀನೆ। ಗರುಡ ಗಮನ ಶ್ರೀ ಪುರಂದರ ವಿಠಲನ ಪ್ರಾಣಪ್ರಿಯನು ನೀನೆ" ಎಂದಿರುವುದು ಮಧ್ವಸಿದ್ಧಾಂತಕ್ಕೆ ಅನುಸಾರವಾಗಿಯೇ ಇದೆ. "ಹರಿಯೆ ಗತಿ ಸಿರಿವಿರಿಂಚಿ ಶಿವರಿಗೆ, ನರಹರಿಯೆ ಗತಿ ಸುರಪತಿ ಸುರರಿಗೆ." ಮಧ್ವಸಿದ್ಧಾಂತದ ಕೆಲವು ಮುಖ್ಯ ತತ್ವಗಳನ್ನು ಒಂದು ಕೀರ್ತನೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ ದಾಸವರ್ಯರು. ಅದರಿಂದ ಕೆಲವು ಚರಣಗಳನ್ನು ಕೆಳಗೆ ಉದ್ಧರಿಸಿದೆ; ಅದರಲ್ಲಿ ದೇವತೆಗಳ ತಾರತಮ್ಯದ (ಮೇಲು-ಕೀಳು ಪದವಿಗಳ) ವಿವರಣೆ ಇದೆ:

ಸತ್ಯ-ಜಗತಿದು, ಪಂಚಭೇದವು, ನಿತ್ಯ ಶ್ರೀ ಗೋವಿಂದನ।
ಕೃತ್ಯ ತಿಳಿದು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಪ ॥
ಜೀವ-ಈಶಗೆ ಭೇದ ಸರ್ವತ್ರ. ಜೀವ-ಜೀವಕೆ ಭೇದವು।
ಜೀವ-ಜಡರೊಳು ಭೇದ, ಜಡರೊಳು ಭೇದ, ಜಡ-ಪರಮಾತ್ಮಗೆ (ಭೇದ) ॥ ೧ ॥

* * * * *

ದಕ್ಷ-ಸಮ-ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರು।
ಕಕ್ಷ; ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು ॥ ೪ ॥

ದೇವ ಇಂದ್ರನಿಗಧಿಕ ಮಹರುದ್ರ ದೇವರಿಗೆ ಸಮಗರುಡನು।
ಕೇವಲವು ಈ ಶೇಷ-ರುದ್ರರು; ದೇವಿ ಹೆಚ್ಚು ಸರಸ್ವತೀ ॥ ೫ ॥

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು।
ವಾಯು ಮುಕ್ತಗೆ ಕೋಟಿಗುಣದಿಂದಧಿಕ; ಶಕ್ತಳು ಶ್ರೀರಮಾ ॥ ೬ ॥

ಅನಂತಗುಣದಿಂ ಲಕುಮಿಗಧಿಕನು ಶ್ರೀಪುರಂದರ ವಿಠಲನು।
ಘನರು ಸಮರೂ ಇಲ್ಲ ಜಗದೊಳು ಹನುಮಹೃತ್ವಾಸಗೆ ॥ ೭ ॥

ಮಧ್ವಸಿದ್ಧಾಂತದ ಅಂಗೋಪಾಂಗಗಳಾದ ನವವಿಧಭಕ್ತಿ, ಹರಿನಾಮ ಸಂಕೀರ್ತನೆ, ಗುರುಮಹಿಮೆ, ಪೂಜಾವಿಧಾನ, ಭಕ್ತಿ–ಭಕ್ತ ಮಾಹಾತ್ಮ್ಯ, ತೀರ್ಥಕ್ಷೇತ್ರ ಮಾಹಾತ್ಮ್ಯ, ತುಲಸೀಮಹಾತ್ಮ್ಯ, ಏಕಾದಶೀಮಹಾತ್ಮ್ಯ, ಮುಂತಾದ ವಿಚಾರಗಳನ್ನು ಪುರಂದರದಾಸರು ಕೀರ್ತನ, ಉಗಾಭೋಗ, ಸೂಳಾದಿ–ಈ ರಚನಾ ಪ್ರಕಾರಗಳಲ್ಲಿ ನಿರೂಪಣೆ ಮಾಡಿದ್ದಾರೆ. ಇವುಗಳಲ್ಲಿ ಸಿದ್ಧಾಂತ ಶಾಸ್ತ್ರಲಕ್ಷಣ ಮೇಲುಗೈಯಾಗಿ, ಸಾಹಿತ್ಯಗುಣ ಕೆಳಕ್ಕಿಳಿಯುತ್ತದೆ.

ಹರಿಕಥಾಮೃತಸಾರ : ಮೇಲೆ ಹೇಳಿದ ನವವಿಧಭಕ್ತಿಗಳಲ್ಲಿ ಹರಿಕಥಾ ಶ್ರವಣವೂ ಒಂದು. ಅನೇಕ ಸಂಸ್ಕೃತ ಗ್ರಂಥಗಳನ್ನೂ ಕೀರ್ತನೆಗಳನ್ನೂ ರಚಿಸಿರುವ ಜಗನ್ನಾಥದಾಸರು (1728–1809) 'ಹರಿಕಥಾಮೃತಸಾರ'ವೆಂಬ ಸರಳಸುಂದರ ಶೈಲಿಯ ಜನಪ್ರಿಯ ಕೃತಿಯನ್ನು ರಚಿಸಿದ್ದಾರೆ. ಹರಿಕಥಾಮೃತ ಸಾರವು ಸುಮಾರು ಸಾವಿರ ಸಂಖ್ಯೆಯ ಭಾಮಿನಿ ಷಟ್ಪದಿ ಪದ್ಯಗಳನ್ನುಳ್ಳ ಗಣ್ಯ ಪ್ರಮಾಣದ ಕೃತಿ. ಇದಕ್ಕೂ ರಂಗನಾಥನ ಅನುಭವಾಮೃತಕ್ಕೂ ಇರಬಹುದಾದ ಹೋಲಿಕೆಯನ್ನು ಕುರಿತು ಈ ಹಿಂದೆಯೇ ಪ್ರಸ್ತಾವಿಸಿದೆ. ಇದರಲ್ಲಿ ಮಧ್ವ ಸಿದ್ಧಾಂತದ ನಿರೂಪಣೆ ವಿವರಪೂರ್ಣವಾಗಿ, ಶಾಸ್ತ್ರಸಮ್ಮತವಾಗಿ, ನಡೆದಿದೆ. "ತತ್ತ್ವವನ್ನು ತಿಳಿಸಿ ಹೇಳುವಲ್ಲಿ ಸಾಹಿತ್ಯದೃಷ್ಟಿ ಮಾತ್ರವಲ್ಲ, ಅನಭಿಜ್ಞನಿಗೂ ತಿಳಿಸಿಕೊಡಬೇಕೆಂಬ ಉದ್ದೇಶವು ಈ ಗ್ರಂಥದಲ್ಲಿದೆ. ಬಹು ಭಾಗದಲ್ಲಿ ಇದು ಶಾಸ್ತ್ರಜಡವಾಗಿದ್ದರೂ ಇದರ ವಿವೇಚನೆಯ ಸೊಗಸು, ಸಾದೃಶ್ಯಗಳ ಔಚಿತ್ಯ, ಚಿತ್ತವನ್ನು ಎಳೆದುಕೊಂಡು ಹೋಗುತ್ತವೆ''.[11] ರಂಗನಾಥನಂತೆಯೆ ಇವರ ಕನ್ನಡದ ಕೆಚ್ಚು ಕೆಳಗಿನ ಪದ್ಯದಲ್ಲಿ ಪ್ರಕಟವಾಗಿದೆ :

> ಭಾಸ್ಕರನ ಮಂಡಲವ ಕಂಡು ನಮಸ್ಕರಿಸಿ ಮೋದಿಸದೆ ದ್ವೇಷದಿ ।
> ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ॥
>
> ಸಂಸ್ಕೃತವಿದಲ್ಲೆಂದು ಕುಹಕ ತಿ । ರಸ್ಕರಿಸಲೇನಹುದು ಭಕ್ತಿಪು |
> ರಸ್ಕರದಿ ಕೇಳ್ವರಿಗೆಯೊಲಿವನು ಪುಷ್ಕರಾಕ್ಷ ಸದಾ ॥

ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಇವು ಒಂದೇ ಉಪಾಸ್ಯದೈವತದ ಸಾಕ್ಷಾತ್ಕಾರದ ಭಿನ್ನಮಾರ್ಗಗಳು. ಮತದಲ್ಲಿ ಭೇದವೇ ಹೊರತು ಗುರಿಯಲ್ಲಲ್ಲ. ಮೂರು ಮಾರ್ಗಗಳನ್ನು ಸಮನ್ವಯ ದೃಷ್ಟಿಯಿಂದ ನೋಡುವುದು ಒಳ್ಳಿತು.

ಈ ದೃಷ್ಟಿಯನ್ನು ಪ್ರತಿಪಾದಿಸುವ ವೆಂಕಟದಾಸರ 'ಅಖಂಡಾನಂದ ಸ್ವರೂಪ'* ಗ್ರಂಥವಾಕ್ಯಗಳಿಂದ ಈ ಪ್ರಕರಣವನ್ನು ಮುಗಿಸಬಹುದು :

"ದ್ವೈತವೆಂದರೆ ಮಾಯಾದಿ ಪ್ರಪಂಚ. ವಿಶಿಷ್ಟಾದ್ವೈತವೆಂದರೆ ಅದ ವಿಚಾರಿಸಿ ಶ್ರುತ್ಯರ್ಥಗಳಿಂ ನಿಶ್ಚೈಸುವ ಸಾಧನ. ಅದ್ವೈತವೆಂದರೆ, ಆ ಸಾಧನದಿಂ ಮೊದಲು ಆಭರಣದಂತೆ ತೋರಿದ ಸ್ವರ್ಣವಿಕಾರವ ಕರಗಿಸಿದಲ್ಲಿ ಘಟ್ಟಿಯೇ ಹ್ಯಾಗೋ ಹಾಗೆ ಸಾಧ್ಯವೆಂಬ ವಸ್ತುವು ತಾನೇಯಾಗಿ ಇವಿಷ್ಟೂ ತನ್ನಲ್ಲಿ ಕಲ್ಪಿತವಾದ್ದರಿಂ, ಪ್ರಸಿಯೆಂದು ತದ್ವೈತ್ತಿಯಂ ಕಳೆದು ತಾನಪ್ಪುದೇ ಅದ್ವೈತವಾದ್ದರಿಂದ ಈ ದ್ವೈತಾದ್ವೈತ ವಿಶಿಷ್ಟಾದ್ವೈತ ಮೂರಕ್ಕೂ ಯೇಕಾರ್ಥವೆಂದು ತಿಳಿವುದು. ಮತ್ತು ಮೂರೂ ಒಂದೇಯೆಂಬುದಕ್ಕೆ ಆಕಾಶದೃಷ್ಟಾಂತದಿಂದ ಒಂದು ಆಕಾಶವೇ– "ಆಕಾಶಾತ್ ವಾಯುಃ, ವಾಯೋರಗ್ನಿಃ, ಅಗ್ನೇರಾಪಃ, ಅಬ್ಧ್ಯಃ ಪೃಥ್ವೀ," ಎಂಬ ವಾಕ್ಯದಿಂದ ಒಂದು ಆಕಾಶವೇ ಪರಂಪರಯಾ ಪೃಥ್ವ್ಯಾದಿಯೂ ತಾನೇಯಾಗಿ, ತತ್ಕರಣವೂ ಆಗಿ, ತದ್ವಾಕ್ಯವೂ ಆಗಿ, ತದಾಧಾರವೂ ಆಗಿ, ತದ್‌ವ್ಯತಿರಿಕ್ತವೂ ಆಗಿ, ಏಕವಾಗಿ, ಪೃಥ್ವ್ಯಾದಿ ಉಪಾಧಿಯಿಂದ ಅನೇಕವೂ ಆಗಿ, ಆ ತನ್ನ ಅಂಶದಿಂದಾದ ಉಪಾಧಿಗಳು ತಾನೇಯಾಗಿರುವಂತೆ, ಒಂದು ಬ್ರಹ್ಮವೇ ದ್ವೈತಾದ್ವೈತ ವಿಶಿಷ್ಟಾದ್ವೈತ ಸಕಲವೂ ಎಂದು ತಿಳಿವುದು."

ಅಡಿ ಟಿಪ್ಪಣಿಗಳು

1 ಎಂ. ಆರ್. ಶ್ರೀನಿವಾಸಮೂರ್ತಿ : 'ವಚನ ಧರ್ಮಸಾರ', ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥ ಮಾಲೆ, 1942 ; ಪು. 6

2 ಎಂ. ಚಿದಾನಂದಮೂರ್ತಿ : 'ಶೂನ್ಯ ಸಂಪಾದನೆಯನ್ನು ಕುರಿತು', ಮೋಹನ ಪ್ರಕಾಶನ, ಮೈಸೂರು, 1962 ; ಪು. 58–59

3 ಮೇಲಿನದೇ : ಪು. 29–30

4 ಬಿ. ಎಂ. ಶ್ರೀಕಂಠಯ್ಯ : 'ಮುನ್ನುಡಿ', 'ವಚನ ಧರ್ಮಸಾರ', 1942

5 ಎಂ. ಆರ್. ಶ್ರೀನಿವಾಸಮೂರ್ತಿ : 'ವಚನ ಧರ್ಮಸಾರ', ಪು. 133–135

6 ರಂ. ಶ್ರೀ. ಮುಗಳಿ : 'ಕನ್ನಡ ಸಾಹಿತ್ಯ ಚರಿತ್ರೆ', 1953 ; ಪು. 359

---

* ಗ್ರಂಥ ಅಪ್ರಕಟಿತ. ಎರಡು ಕಾಗದದ ಪ್ರತಿಗಳು (KB 158, KB 161) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇವೆ. (ಪ್ರತಿಯ ಎರವಲು–ಸಂಸ್ಥೆಯ ನಿರ್ದೇಶಕರ ಕೃಪೆಯಿಂದ).

7 ಮೇಲಿನದೇ : ಪು. 340

8 ಡಿ. ಕೆ. ಭೀಮಸೇನರಾವ್ : 'ಶಬ್ದಮಣಿ ದರ್ಪಣದ ಪಾಠಾಂತರಗಳು ಮತ್ತು ಅನುಭವಾಮೃತವೂ ಹರಿಕಥಾಮೃತಸಾರವೂ' : ಪು. 91

9 ಹೊಸಕೆರೆ ಚಿದಂಬರಯ್ಯ (ಸಂ) : 'ಮಹಲಿಂಗರಂಗ ಕವಿಯ ಅನುಭವಾಮೃತ'; ಎಸ್. ಎಸ್. ಎನ್. ಬುಕ್ ಡಿಪೋ, ಬೆಂಗಳೂರು : 3 ನೆಯ ಮುದ್ರಣ, 1969 ಮುನ್ನುಡಿ, ಪು. 8

10 ಮೇಲಿನದೇ

11 ರಂ. ಶ್ರೀ. ಮುಗಳಿ : 'ಕನ್ನಡ ಸಾಹಿತ್ಯ ಚರಿತ್ರೆ', ಪು. 304

ಲೌಕಿಕ ಶಾಸ್ತ್ರಗ್ರಂಥಗಳು

ನಿಜಗುಣ ಶಿವಯೋಗಿಗಳು 'ವಿವೇಕ ಚಿಂತಾಮಣಿ'ಯಲ್ಲಿ ಲೌಕಿಕಶಾಸ್ತ್ರವನ್ನು 'ಲೌಕಿಕವೇ ಧನ್ವಂತರ್ಯಾದಿಗಳಿಂದುಕ್ತವಾದ ಆಯುರ್ವೇದ, ದಂಡನೀತಿ ಮೊದಲಾದ ದೃಷ್ಟ ಫಲಂಗಳಂ ನಿರ್ಧರಿಸುತ್ತಿರ್ಕುಂ' ಎಂಬ ವಿವರಣೆಯಿಂದ ಲಕ್ಷಣಿಸಿದ್ದಾರೆ. ಅರ್ಥ, ಕಾಮ-ಈ ಫಲಸಿದ್ಧಿಗಳನ್ನು ಕೊಡತಕ್ಕವು ಲೌಕಿಕಶಾಸ್ತ್ರಗಳೆಂದು ಪ್ರಾಚೀನರ ದೃಷ್ಟಿಯಿಂದ ನಾವು ವಿವರಿಸಬಹುದು. ಈ ಬಗೆಯ ಶಾಸ್ತ್ರಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು ಶಾಸ್ತ್ರಜ್ಞರಾದ ಕನ್ನಡಿಗರ ರಚಿಸಿದ್ದಾರೆ. ನಾವು ಈ ವರೆಗೆ ಸಮೀಕ್ಷಿಸಿದ ಶಾಸ್ತ್ರ ಗ್ರಂಥಗಳು ಶುದ್ಧ ಕಾವ್ಯ ಸೃಷ್ಟಿಗೆ ಬಗೆಬಗೆಯಲ್ಲಿ ಸಹಾಯಕವಾದ್ದರಿಂದ ಅವುಗಳಲ್ಲಿ ಹೆಚ್ಚಾಗಿಯೋ ಕಡಮೆಯಾಗಿಯೋ ಕಾವ್ಯಾಂಶ ಕಂಡುಬರುತ್ತದೆ. ಆಯಾ ಪ್ರಕರಣಗಳಲ್ಲಿ ಉದ್ಧರಿಸಿದ ಉದಾಹರಣ ಪದ್ಯಗಳಿಂದ ಈ ಸಂಗತಿ ವಾಚಕರಿಗೆ ಸ್ಪಷ್ಟವಾಗಿರಬೇಕು. ಆಯುರ್ವೇದ, ಜ್ಯೋತಿಷ, ಕಾಮಶಾಸ್ತ್ರ ಇತ್ಯಾದಿ ಪ್ರಾಚೀನಶಾಸ್ತ್ರ ಗ್ರಂಥಗಳಲ್ಲಿ ಕಾವ್ಯಾಂಶವನ್ನು ಹುಡುಕುವುದೆಂದರೆ, 'ಮರದಿಂದೊಳೆ ಮಾದು ಫಳಮನರಸಿದಂತೆಯೆ' ('ಗುಡ್ಡದ ಮೇಲೆ ಮಾದಳ ಹಣ್ಣನ್ನು ಹುಡುಕಿಕೊಂಡು ಹೋದಂತೆಯೇ') ಸರಿ. ಪ್ರಯೋಜನ ದೃಷ್ಟಿಯಿಂದ ನೋಡುವುದಾದರೆ, ವೈದ್ಯಶಾಸ್ತ್ರ ಗ್ರಂಥಗಳಿಂದ ಬಹುಶಃ ಇಂದೂ ಪ್ರಯೋಜನ ಪಡೆಯಬಹುದೇನೋ. ವೈದ್ಯ ವಿಶಾರದರು ಇವುಗಳನ್ನು ಸಂಶೋಧನ ದೃಷ್ಟಿಯಿಂದ ಪರಾಮರ್ಶೆಮಾಡುವುದು ಅಗತ್ಯ. ಪಾಕಶಾಸ್ತ್ರ ಗ್ರಂಥಗಳನ್ನು ನಮ್ಮ ನಾಡಿನ ಗೃಹಿಣಿಯರು ಗಮನಿಸಿ, ಬಳಕೆ ತಪ್ಪಿದ 'ಹಳೆಯ ರುಚಿ'ಗಳನ್ನು 'ಹೊಸರುಚಿ'ಗಳಾಗಿ ರೂಢಿಗೆ ತರಬಹುದಲ್ಲವೆ? ಜ್ಯೋತಿಷ್ಯ–ಶಕುನಗಳಲ್ಲಿ ನಮ್ಮ ಜನಕ್ಕೆ ಇನ್ನೂ ನಂಬಿಕೆ ಇದೆಯಾದ್ದರಿಂದ ಆ ಸಂಬಂಧದ ಶಾಸ್ತ್ರಗಳನ್ನು ಅಧ್ಯಯನ ಮಾಡುವವರೂ ಇದ್ದಾರು. 'ಜನವಶ್ಯ'ದಂಥ ಕಾಮಶಾಸ್ತ್ರ ಗ್ರಂಥವನ್ನು ಕುತೂಹಲವುಳ್ಳವರು ಓದಿಕೊಳ್ಳಬಹುದು. ಅಶ್ವವೈದ್ಯ ಗೋವೈದ್ಯಗಳನ್ನು ಕಡೆಗಣಿಸಬೇಕಾಗಿಲ್ಲ; ಗೋವೈದ್ಯವಂತೂ ಹಳ್ಳಿಗಾಡಿನ ಜನಕ್ಕೆ ಕೆಲವು

ಸುಲಭ ವೈದ್ಯಕ್ಕೆ ದಾರಿತೋರಿಸೀತು. (ಇವನ್ನು ಹೊಸಗನ್ನಡದಲ್ಲಿ ಅನುವಾದ ಮಾಡಿಸಿ ಪ್ರಕಟಿಸುವ ಕೆಲಸ ಆಗಬೇಕು.)ಹೀಗೆ 'ದೃಷ್ಟ ಫಲ'ಗಳನ್ನು ಕೊಡತಕ್ಕ ಶಾಸ್ತ್ರಗ್ರಂಥಗಳಲ್ಲಿ ಆಯ್ದ ಕೆಲವನ್ನು ಮಾತ್ರ ಇಲ್ಲಿ ಬಹು ಸಂಕ್ಷೇಪವಾಗಿ ಪರಿಚಯಮಾಡಿಕೊಡಲಾಗುವುದು.

ವೈದ್ಯಶಾಸ್ತ್ರ : (i) ಸಾಮಾನ್ಯ ವೈದ್ಯ: ಈ ಶಾಸ್ತ್ರದಲ್ಲಿ ಸುಮಾರು 30 ಗ್ರಂಥಗಳು ಹುಟ್ಟಿರುವುದು ಅದರ ಸರ್ವಜನೋಪಯುಕ್ತತೆಯನ್ನು ಸಾರಿ ಹೇಳುತ್ತದೆ. ಸಾಮಾನ್ಯ ವೈದ್ಯವರ್ಗದಲ್ಲಿಯೇ ಸುಮಾರು 15 ಗ್ರಂಥಗಳು ಗೋಚರಕ್ಕೆ ಬರುತ್ತವೆ. ಇವುಗಳಲ್ಲಿ, ಕೀರ್ತಿವರ್ಮನ ಗೋವೈದ್ಯವನ್ನು (ಸು. 1100) ಬಿಟ್ಟರೆ, ಜಗದ್ದಳ ಸೋಮನಾಥನ (ಸು. 1175) 'ಕಲ್ಯಾಣಕಾರಕ' ವೇ ಅತ್ಯಂತ ಪ್ರಾಚೀನವಾದದ್ದು. ಇದು ಪೂಜ್ಯಪಾದನ ಸಂಸ್ಕೃತ ಮೂಲ ಗ್ರಂಥದ ಅನುವಾದ. ದೊರಕಿರುವ ಅಸಮಗ್ರ ಹಸ್ತಪ್ರತಿ ಯಲ್ಲಿ, ಪೀಠಿಕಾ ಪ್ರಕರಣ, ಪರಿಭಾಷಾ ಪ್ರಕರಣ ಮತ್ತು ರಕ್ತ ಪಿತ್ತ, ಷೋಡಶಜ್ವರ. ಅತಿಸಾರ ಗ್ರಹಣೀ, ಉದರ ರೋಗ, ಕ್ಷಯ, ಗುಲ್ಮರೋಗ, ಈ ರೋಗಗಳ ನಿದಾನ ಮತ್ತು ಚಿಕಿತ್ಸಾ ಕ್ರಮಗಳನ್ನು ವಿವರಿಸುವ 8 ಅಧ್ಯಾಯ ಗಳಿವೆ. "ಬಾಹಟ, ಸಿದ್ಧಸಾರ, ಚರಕ, ಎಂಬ ವೈದ್ಯ ಗ್ರಂಥಗಳಿಗಿಂತ ಪೂಜ್ಯ ಪಾದನ ಕಲ್ಯಾಣಕಾರಕವು ಉತ್ಕೃಷ್ಟವಾದುದೆಂದೂ ಅದರಲ್ಲಿ ಹೇಳಿರುವ ಚಿಕಿತ್ಸೆ ಮದ್ಯಮಾಂಸ ಮಧುವರ್ಜಿತವೆಂದೂ'[1] ಗ್ರಂಥಕಾರನು ತಿಳಿಸಿದ್ದಾನೆ. ಪೂಜ್ಯಪಾದರು ಜೈನರಾದ್ದರಿಂದ ಪ್ರಾಣಿ ಹಿಂಸೆಗೆ ಅವಕಾಶಕೊಡುವ ಮಾಂಸ ಮಧು (ಜೇನು) ಇವುಗಳ ಸೇವನೆಯನ್ನು ನಿಷೇಧಿಸಿರುವುದು ಗಮನಾರ್ಹ. ಮದ್ಯಪಾನ ಜೈನ ಧರ್ಮದಲ್ಲಿಯೇ ನಿಷಿದ್ಧ. ಜ್ವರದ ಚಿಕಿತ್ಸಾ ಕ್ರಮವನ್ನು ಹೀಗೆ ತಿಳಿಸಿದೆ : 'ಜ್ವರದ ಆದಿಯೊಳ್ ಉಪವಾಸಂ ; ಜ್ವರ ಮಧ್ಯಮದಲ್ಲಿ ಗಂಜಿ, ಪೇಳ್ವ ಕಷಾಯಂ ; ಜ್ವರಪಾಕದೊಳ್, ಅಸ್ತಮಿತ ಜ್ವರದೊಳ್, ಮಲಹರಣಂ ; ಇನಿತು ಇವು ಆರೋಗ್ಯಕರಂ'. ಶ್ರೀಧರದೇವ (1500), ರಸರತ್ನಾಕರದ ಸಾಳ್ವ, ಈ ಇಬ್ಬರು ಜೈನ ಕವಿಗಳೂ ವೈದ್ಯಗ್ರಂಥಗಳನ್ನು ಬರೆದಿದ್ದಾರೆ. ಶ್ರೀಧರದೇವನ 'ವೈದ್ಯಾಮೃತ' ಚಂಪೂ ರೂಪದಲ್ಲಿರುವುದು ಗಮನಾರ್ಹ. ಸಾಳ್ವನ ಗ್ರಂಥ ಸಾಂಗತ್ಯದಲ್ಲಿದೆ.

(ii) ವಿಷವೈದ್ಯ—ಮೊದಲನೆಯ ಮಂಗರಾಜನು (ಸು. 1360) ಖಗೇಂದ್ರಮಣಿದರ್ಪಣ' ಎಂಬ ವಿಷವೈದ್ಯ ಗ್ರಂಥವನ್ನು ಬರೆದಿದ್ದಾನೆ.

ಇವನೂ ಜೈನಮತೀಯ. 'ಗುಣಸಿಧುಖಗೇಂದ್ರಮಣಿದರ್ಪಣವಿಾ ಕೃತಿ ರಚಿತವಾಯ್ತು ಮಂಗಪ್ರಭುವಿಂ' ಎಂದು ಕವಿಯ ಹೇಳಿಕೆ. ಗ್ರಂಥದಿಂದ ಮಂಗರಸನು ವಿಜಯನಗರ ರಾಜ್ಯ ಸಂಸ್ಥಾಪಕನಾದ ಒಂದನೆಯ ಹರಿಹರನ ಕಾಲದಲ್ಲಿ (1336-1357) ಇದ್ದನೆಂದು ತಿಳಿಯಬರುತ್ತದೆ. ಆದ್ದರಿಂದ ಕವಿಯ ಕಾಲವನ್ನು ಸು. 1350 ಎಂದು ಇಟ್ಟುಕೊಳ್ಳಬಹುದು. ಗ್ರಂಥ ರಚನೆಯ ಉದ್ದೇಶವನ್ನು ತಿಳಿಸುವ ಈ ಪದ್ಯ ಗಮನಾರ್ಹ :

ಮರನಂ ಗಾಳಿಯುಂ ದೂಳಿಯುಂ ರಜನಿಯುಂ ನೀರಾಟಮುಂ ಬೇಟಮುಂ
ಸುರೆಯುಂ ಸೂಳೆಯುಂ ವಿಟಾಜವಿಕರಂ ಕೊಂಡಾಡಿ ಬೆಂಡಾಗದೀ
ಧರೆಯೊಳ್ ಸರ್ವಜನೋಪಕಾರಮೆನಲ್ ಈ ಮಂತ್ರೌಷಧಿವ್ರಾತಮಂ
ನಿರುತಂ ಭಾವಿಸಿ ಪೇಳ್ವ ಮಾನವನೆ ತಾಂ ದೇವಂ ಧರಾಚಕ್ರದೊಳ್

ಶೃಂಗಾರರಸ ಪ್ರಧಾನವೂ 18 ವರ್ಣನೆಗಳಿಂದ ಕೂಡಿದ್ದೂ ಆದ ಕಾವ್ಯಗಳನ್ನು ರಚಿಸುವುದಕ್ಕಿಂತ ಜನೋಪಕಾರಕವಾದ (ವೈದ್ಯ) ಶಾಸ್ತ್ರಗ್ರಂಥರಚನೆ ಮೇಲೆಂದು ಕವಿಯ ಅಭಿಪ್ರಾಯ. ಉಪಯುಕ್ತವಾದ ಶಾಸ್ತ್ರಗ್ರಂಥರಚನೆ ಎಲ್ಲ ಕಾಲದಲ್ಲಿಯೂ ಅಗತ್ಯ. ಕಾವ್ಯರಚನೆ ವ್ಯರ್ಥವೆನ್ನುವ ಮಾತು ಪಕ್ಷಪಾತದಿಂದ ಕೂಡಿದ್ದು ಎಂಬಲ್ಲಿ ಸಂದೇಹವಿಲ್ಲ.

ಖಗೇಂದ್ರಮಣಿ ಎಂದರೆ ಗರುಡರತ್ನ. ಈ ರತ್ನದ ಪ್ರಯೋಗದಿಂದ ವಿಷಸರ್ಪಗಳು ಕಚ್ಚಿದರೆ ಆ ವಿಷವನ್ನು ತೆಗೆಯಬಹುದೆಂಬ ನಂಬಿಕೆಯಿದೆ ಈ ಗ್ರಂಥದಲ್ಲಿ ವಿಷಸರ್ಪ ಮಾತ್ರವಲ್ಲದೆ, ಸ್ಥಾವರ ಜಂಗಮ ಕೃತಕ ಎಂಬ ಮೂರು ಪ್ರಕಾರಗಳಲ್ಲಿ ಅಡಕವಾಗುವ ನಾನಾ ಬಗೆಯ ವಿಷಗಳ ಲಕ್ಷಣಗಳನ್ನೂ, ಮಂತ್ರ ತಂತ್ರ ಔಷಧ ಪ್ರಯೋಗಗಳಿಂದ ವಿಷವನ್ನು ಪರಿಹರಿಸುವ ಚಿಕಿತ್ಸಾ ವಿಧಾನಗಳನ್ನೂ ಹದಿನಾರು ಅಧಿಕಾರಗಳಲ್ಲಿ ವಿವರಿಸಿದೆ. ವಿಷಯ ನಿರೂಪಣೆಗೆ ಸಂಸ್ಕೃತ ವರ್ಣವೃತ್ತಗಳನ್ನೂ ಕಂದಗಳನ್ನೂ ಬಳಸಿದೆ. ಸಂಸ್ಕೃತಭಾಷೆಯಲ್ಲಿರುವ 'ಕಾಶ್ಯಪ ಸಂಹಿತೆ' ಅಥವಾ 'ಗರುಡಪಂಚಾಕ್ಷರೀಕಲ್ಪ' ಎಂಬ ಗ್ರಂಥಕ್ಕೂ ಈ ಗ್ರಂಥಕ್ಕೂ ಕೆಲವು ಕಡೆಗಳಲ್ಲಿ ಹೋಲಿಕೆ ಕಂಡುಬಂದಿದೆ. ಆದರೆ, "ಲೋಕಾರೋಗ್ಯ ನಿಮಿತ್ತವಾಗಿ ಈ ಗ್ರಂಥವನ್ನು ತಿಳಿದವರು ಮೊದಲು ಹೇಳಿದರು. ಎಲ್ಲ ಜನಕ್ಕೂ ತಿಳಿಯುವಂತೆ ಕನ್ನಡದಲ್ಲಿ ನೀನು ಹೇಳಬೇಕು" ಎಂದು ಭವ್ಯರು ಕೇಳಿಕೊಂಡದ್ದರಿಂದ ಈ ಗ್ರಂಥವನ್ನು ರಚಿಸಿರುವುದಾಗಿಯೂ ಪೂಜ್ಯಪಾದ ಮುಂತಾದ ಹಲವು ಪ್ರಾಚೀನ ವೈದ್ಯ

ಗ್ರಂಥಗಳಿಂದ ವಿಷಯ ಸಂಗ್ರಹಮಾಡಿ ಜಿನಾಗಮೋಕ್ತ ಕ್ರಮದಿಂದ ಜೀವಹಿತವಾದ ವಿಷಪ್ರತೀಕಾರವನ್ನು ಹೇಳುವೆನೆಂದೂ ಕವಿ ತಿಳಿಸಿರುತ್ತಾನೆ. ಆದ್ದರಿಂದ ಖಗೇಂದ್ರಮಣಿದರ್ಪಣ ಕನ್ನಡದ ಮೊತ್ತಮೊದಲಿನ ಸ್ವತಂತ್ರ ವೈದ್ಯಗ್ರಂಥವೆಂದು ಹೇಳಬಹುದು.

ಮೇಲ್ಕಂಡ ವೈದ್ಯಗ್ರಂಥಗಳಲ್ಲದೆ, ತಿಮ್ಮರಾಜ ಗೌಡನ 'ಸ್ತ್ರೀವೈದ್ಯ' (1750), ವ್ರಣವೈದ್ಯ, ಬಾಲವೈದ್ಯ (ಬಾಲಗ್ರಹ ಚಿಕಿತ್ಸೆ), ಅಭಿನವ ಚಂದ್ರ (ಸು. 1400) ಮತ್ತು ಬಾಚರಸರ (ಸು. 1500) ಅಶ್ವವೈದ್ಯ, ಕೀರ್ತಿವರ್ಮನ ಗೋವೈದ್ಯ (ಸು. 1100)–ಮುಂತಾದ ಬಗೆಬಗೆಯ ವೈದ್ಯಶಾಸ್ತ್ರ ಗ್ರಂಥಗಳು ರಚಿತವಾಗಿರುವುದು ಹೆಮ್ಮೆಪಡಬೇಕಾದ ಸಂಗತಿ.

ಗಜಶಾಸ್ತ್ರ ಪಯುಶಾಸ್ತ್ರಗಳು ವೈದ್ಯಶಾಸ್ತ್ರಗಳಿಗಿಂತ ಭಿನ್ನವಾದುವು. ಉದಾಹರಣೆಗೆ, ಗಂಗರಾಜನಾದ ಸೈಗೊಟ್ಟ ಶಿವಮಾರನು 'ಶಿವಮಾರಮತ' ಎಂಬ ಗಜಶಾಸ್ತ್ರವನ್ನೂ 'ಗಜಾಷ್ಟಕ'ವನ್ನೂ ಬರೆದಂತೆ ನಗರದ ಒಂದು ಶಾಸನದಿಂದ ತಿಳಿದು ಬರುತ್ತದೆ. (ಶಾಸನದ ಕಾಲ ಸು. 1077). 'ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ ಶಿವಮಾರ ಮತಮೆಂದು ಗಜಶಾಸ್ತ್ರಮಾಡಿ, ಮತ್ತಂ—

ಏವೇಳ್ವುದೊ ಶಿವಮಾರಮ । ಹೀವಳಯಾಧಿಪನ ಸುಭಗ ಕವಿತಾಗುಣಮಂ ।
ಭೂವಳಯದೊಳ್ ಗಜಾಷ್ಟಕ । ಮೋವನಿಗೆಯುಂ ಒನಕೆವಾಡುಮಾದುದೆಪೇಳ್ಗೆಂ ॥

ಶಿವಮಾರಮತವೆಂಬ ಹೆಸರಿನಲ್ಲಿ ಬರೆದ ಗಜಶಾಸ್ತ್ರವು ಗದ್ಯವೋ ಪದ್ಯವೋ ಹೇಳಲು ಆಧಾರವಿಲ್ಲ. ಶಿವಮಾರನ ಕವಿತಾ ಗುಣವನ್ನು ಮೇಲಿನ ಪದ್ಯದಲ್ಲಿ ಹೊಗಳಿರುವುದರಿಂದ ಅದು ಪದ್ಯರೂಪದಲ್ಲಿ ಇದ್ದಿರಬೇಕು. 'ಗಜಾಷ್ಟಕ' (ಗಜಸಂಬಂಧವಾದ ಎಂಟು ಪದ್ಯಗಳ ಗುಚ್ಛ) ಓವನಿಗೆಯೂ ಒನಕೆವಾಡೂ (ಒನಕೆಯಿಂದ ಕುಟ್ಟುವಾಗ ಹಾಡುವ ಹಾಡು) ಆಯಿತು ಎಂದಿರುವುದರಿಂದ ಅದು ಕನ್ನಡದಲ್ಲಿ – ಬಹುಶಃ ತ್ರಿಪದಿ ಛಂದಸ್ಸಿನಲ್ಲಿ—ರಚಿತವಾದ ಹಾಡಾಗಿದ್ದಿರಬೇಕು. 'ಓವನಿಗೆ' ಎಂಬ ಮಾತು ಅದರ ಪ್ರತ್ಯೇಕ ಲಕ್ಷಣವನ್ನು ಸೂಚಿಸುತ್ತದೆ. ಓವನಿಗೆ ಎಂದರೆ ಆನೆಯನ್ನು ಆಕರ್ಷಿಸಿ, ಕೆಡಹಿ, ಕಟ್ಟಿಹಾಕುವ ಒಂದು ಸಾಧನ, ಉಪಾಯ, ಎಂದು ಅರ್ಥಮಾಡಲಾಗಿದೆ. ಆದ್ದರಿಂದ, "ಶಿವಮಾರನ ಗಜಾಷ್ಟಕ ಆನೆ ಹಿಡಿಯುವವರ 'ಓವನಿಗೆ' ಯಾಗಿಯೂ ಧಾನ್ಯಕುಟ್ಟುವವರ 'ಒನಕೆವಾಡು' ಆಗಿಯೂ ಬಳಕೆಗೆ ಬರಬೇಕಾಗಿದ್ದರೆ

ಸಂಸ್ಕೃತ ಭಾಷೆ ಛಂದಸ್ಸುಗಳಲ್ಲಿ ರಚಿತವಾಗಿದ್ದಿರಲು ಸಾಧ್ಯವಿಲ್ಲ. ಕನ್ನಡ ಜಾನಪದ ಸಾಹಿತ್ಯಕ್ಕೆ ಸೇರಿಹೋದ 'ಓವನಿಗೆ' ಎಂಬ ಗೀತಪ್ರಕಾರ ಕನ್ನಡ ಎಂಬುದರಲ್ಲಿ ಸಂದೇಹವಿರದು."[2] ಸು. ಕ್ರಿ.ಶ. 800ರಲ್ಲಿ ರಚಿತವಾಗಿರಬಹುದಾದ 'ಶಿವಮಾರಮತ' ಹಾಗೂ 'ಗಜಾಷ್ಟಕ'ಗಳು ಲೌಕಿಕಶಾಸ್ತ್ರ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದವು ಎಂಬ ಸಂಗತಿ ಗಮನಾರ್ಹ.

ಸೂಪಶಾಸ್ತ್ರ : ಸೂಪಶಾಸ್ತ್ರ ಎಂದರೆ ಪಾಕಶಾಸ್ತ್ರ. ಇಬ್ಬರು ಮೂವರು ಈ ವಿಷಯವಾಗಿ ಗ್ರಂಥರಚನೆ ಮಾಡಿದ್ದಾರೆ. ಚಾವುಂಡರಾಯನ 'ಲೋಕೋಪಕಾರ'ದಲ್ಲಿ ಪಾಕಶಾಸ್ತ್ರದ ಅಧ್ಯಾಯವಿದೆ. ಪ್ರಸಿದ್ಧವಾದದ್ದು ಮೂರನೆಯ ಮಂಗರಸನ (ಸು. 1508) ಸೂಪಶಾಸ್ತ್ರ.

'ಜಯನೃಪ ಕಾವ್ಯ' ಮುಂತಾದ ಹಲವು ಪುರಾಣ ಕಥೆಗಳನ್ನು ಕಾವ್ಯರೂಪದಲ್ಲಿ ಬರೆದಿರುವ ಕವಿಯೊಬ್ಬನು 'ಸೂಪಶಾಸ್ತ್ರ'ದ ರಚನೆಗೆ ಮನಸ್ಸು ಕೊಟ್ಟಿದ್ದು ಕುತೂಹಲ ಹುಟ್ಟಿಸುವ ವಿಷಯ. ಇದು ವಾರ್ಧಕ ಷಟ್ಪದಿಯಲ್ಲಿದ್ದು, 356 ಪದ್ಯಗಳನ್ನೊಳಗೊಂಡ 6 ಅಧ್ಯಾಯಗಳ ಗ್ರಂಥ. ಕವಿ, "ಷಡ್ರಸವಿಪಾಕಮನೆನ್ನ ಬಲ್ಲಂದದಿಂ ಪೇಳ್ವೆನು ; ಸಂಸ್ಕೃತ ಸೂಪಶಾಸ್ತ್ರದೊಳು ಎನಗೆ ಅರಿವನಿತ ತೆಗೆದು ಕನ್ನಡದಿ ಬರೆದೆನು, ನಳ ಭೀಮ ಗೌರಿಮತದೊಳು ಪೇಳ್ವೆನು" ಎಂದಿದ್ದಾನೆ. ಗ್ರಂಥದಲ್ಲಿ ನಿರೂಪಿತವಾಗಿರುವ ವಿಷಯಗಳು: ಪಿಷ್ಟಪಾಕ (ಹಿಟ್ಟಿನ ಅಡಿಗೆ), ಪಾನಕ, ಕಳಮಾನ್ನ (ಬತ್ತದ ಅಕ್ಕಿಯ ಅನ್ನ) ಪಾಕ, ಶಾಕ (ಕಾಯಿಪಲ್ಯ) ಪಾಕ, ಇತ್ಯಾದಿ. ಗ್ರಂಥ ರಚನೆಗೆ ಕಾರಣವೇನು ? "ಜೀವಿಗಳ ತನುರಕ್ಷಣೆಗೆ ರಸ ರೂಪ ಗಂಧ ಶಬ್ದ ಸ್ಪರ್ಶ ಭೋಗಂಗಳ ಎಸಕವೇ ಮುಖ್ಯಂ; ಆ ಪಂಚ ವಿಧ ವಿಷಯಗಳ ಭೋಗೋಪಭೋಗಂಗಳೊಳಗೆ ರಸನೇಂದ್ರಿಯಂ ತುಷ್ಟಿ ಪಡೆಯಲಿಪ ಪರಸೌಖ್ಯ ಮುಸುಕುವುದು ನಿಜಂ; ಅದರಿಂ ಆ ಭೋಜ್ಯ ವಸ್ತುವಂ ಹಸನಾಗಿ ಪಾಕಮಂ ಮಾಳ್ಪ ವಿವರದ ಶಾಸ್ತ್ರಮಂ ಮನಂಗೊಂಡು ಪೇಳ್ವೆಂ" ಎಂಬ ವಿವರಣೆಯಲ್ಲಿ ಗ್ರಂಥರಚನೆಯ ಉದ್ದೇಶ ಸ್ಪಷ್ಟವಾಗಿದೆ. ಕವಿಯದು ಅನುಭವದ ಮಾತು. ಮನುಷ್ಯನ ಜಿಹ್ವಾಚಾಪಲ್ಯ (ತಿಂಡಿ ತಿನಿಸುಗಳ ಬಯಕೆ, ಹಾಗೂ ವಾಚಾಳಿತನ) ಅವನ ಮುಪ್ಪಿನಲ್ಲಿ ಕೂಡ ಅವನ ಏಕೈಕ ಬಲ್ಮೆಯಾಗಿ ಅವನಿಗೂ ಇತರರಿಗೂ ಕಾಟವಾಗಿರುತ್ತದೆ! ಇನ್ನು ಹರೆಯದವರ ಮಾತು ಹೇಳಲೇಬೇಕಿಲ್ಲ! ಸರ್ವ ಕಾಲದಲ್ಲೂ ಸರ್ವರಿಗೂ ಉಪಯುಕ್ತವಾದ ಇಂಥ ಶಾಸ್ತ್ರವನ್ನು ಇಂದಿನವರೂ

ಓದಿಕೊಂಡು ನಾಲಗೆಯ ಚಪಲವನ್ನು ತೀರಿಸಿಕೊಳ್ಳಬಹುದು. ಕವಿ ಜೈನನಾದ್ದರಿಂದ ಗ್ರಂಥದಲ್ಲಿ ವಿವರಿಸಿರುವ ಭಕ್ಷ್ಯಭೋಜ್ಯ ಪಾನಕಾದಿ ವಿವರಗಳೆಲ್ಲ ಸಸ್ಯಾಹಾರಿಗಳಿಗೆ ಸಂಬಂಧಿಸಿದ್ದು ಎಂದು ಬೇರೆ ಹೇಳಲೇಬೇಕಾಗಿಲ್ಲ. ಕೇವಲ ಒಂದು ಭಕ್ಷ್ಯದ ತಯಾರಿಕೆಯ ವಿಧಾನದ ಉದಾಹರಣೆಯಿಂದಲೇ ತೃಪ್ತಿಪಡಬೇಕಾಗಿದೆ :

ಹುರಿದ ತೆಂಗಾಯಿ, ನಸುಬೆಂದ ಬೇಳೆಯ ಹೆಸರು,
ಹುರಿದು ಬೇಯಿಸಿದ ಸೊಜ್ಜಿಗೆ—ಇವನು ಕೂಡಿ ಸ-
ಕ್ಕರೆಯಿಕ್ಕಿ, ಕರ್ಪೂರವನು ತಳಿದು, ಪಿಂಡಮಂ ಮಾಡಿಯೇ ಸಣ್ಣನಾಗಿ ।
ಅರೆದಕ್ಕಿಯೊಳಗದ್ದಿ, ಹೊಚ್ಚಹೊಸ ತುಪ್ಪದೊಳು
ಹಿರಿದು ಹಸನಾಗಿ ಬೇಯಿಸಿ, ತೆಗೆದು ತುಪ್ಪವಿಡೆ,
'ಘುರಿವಿಳಂಗಾಯ್' ಎಂದು ಪೆಸರ್ವಡೆದು ನಾಲಗೆಯ
ಕೊನೆಗೆ ಪೀಯೂಷವಾಯ್ತು ॥

ಜ್ಯೋತಿಷ : ಜ್ಯೋತಿಷ ಶಾಸ್ತ್ರದ ವ್ಯಾಪ್ತಿಯಲ್ಲಿ ಪ್ರಶ್ನಶಾಸ್ತ್ರ, ಸಾಮುದ್ರಿಕ, ಶಕುನಶಾಸ್ತ್ರ, ನಾಡೀಶಾಸ್ತ್ರ, ಸ್ವಪ್ನಫಲ, ಮುಂತಾದ ಶಾಸ್ತ್ರಗಳನ್ನು ಸಮಾವೇಶ ಮಾಡಬಹುದು. ವಾಸ್ತವವಾಗಿ, ಇವು ದೃಷ್ಟಫಲಗಳನ್ನು ಕೊಡತಕ್ಕ 'ಉಪಯುಕ್ತ' ಶಾಸ್ತ್ರಗಳಲ್ಲ; 'ಅದೃಷ್ಟ' ಫಲಗಳನ್ನು ತಿಳಿಸತಕ್ಕವು. ಆದರೆ, ಜ್ಯೋತಿಷದಲ್ಲಿ, ಕರ್ಮಾನುಷ್ಠಾನ ನಿಷ್ಠರಿಗೆ ಶುಭಾಶುಭ ತಿಥಿ ವಾರ ನಕ್ಷತ್ರ ಮುಹೂರ್ತಾದಿಗಳ ವಿವರಗಳನ್ನು ತಿಳಿಸುವ ಭಾಗವೂ, ಜಾತಕ ರಚನೆ ಪಂಚಾಂಗ ರಚನೆ ಗ್ರಹಣ ವಿಚಾರ ಮುಂತಾದ ಇಂದಿಗೂ ಉಪಯುಕ್ತವಾಗಿರುವ ವಿಷಯಗಳನ್ನು ತಿಳಿಸುವ ವಿಚಾರಗಳೂ ಇರುವುವಾದ್ದರಿಂದ, ಕೆಲವು ಜ್ಯೋತಿಷ ಗ್ರಂಥಗಳು ಧಾರ್ಮಿಕ ವಿಧಿಗಳಲ್ಲಿ ನಂಬಿಕೆಯಿರುವವರಿಗೆ ಅಗತ್ಯವಾಗಿವೆ.

ಜ್ಯೋತಿಷ ಗ್ರಂಥಗಳಲ್ಲಿ ಶ್ರೀಧರಾಚಾರ್ಯನ (1049) 'ಜಾತಕ ತಿಲಕ'ವೇ ಮೊದಲಗ್ರಂಥ. (ಲೋಕೋಪಕಾರದಲ್ಲೂ ಜ್ಯೋತಿಷ ವಿಚಾರವಿದೆ). ಇವನು ಜೈನ ಮತೀಯ; ಬೆಳುವಲ ನಾಡಿನ ನರಗುಂದ ಪ್ರಾಂತದವನ್ನು 'ವಾಕ್‌ಶ್ರೀವರ', 'ಗದ್ಯಪದ್ಯ ವಿದ್ಯಾಧರ' ಇತ್ಯಾದಿ ಬಿರುದುಗಳುಳ್ಳವನ್ನು ತನ್ನ ಕೃತಿಯನ್ನು 'ಜೋಯಿಸಗಬ್ಬ' ಎಂದು ತಿರಸ್ಕರಿಸಬೇಡಿ ಎಂದು ಕೇಳಿಕೊಳ್ಳುತ್ತಾನೆ. "ಮುನ್ನ ಆರು ಜಾತಕಮುಂ ಕನ್ನಡದಿಂ ವ್ಯಕ್ತಮಾಗೆ ಪೇಳ್ದನ್ವಿತರಿಲ್ಲ, ಇನ್ನುಂ ಪೇಳ್ದಪರಿಲ್ಲ, ಉತ್ಪನ್ನಂ ಶ್ರೀಧರನೆ ಪೇಳು ೦" ಎಂದು

ಹೆಮ್ಮೆಯಿಂದ ಗ್ರಂಥ ಪ್ರಾಶಸ್ತ್ಯವನ್ನು ಹೇಳಿಕೊಂಡಿದ್ದಾನೆ. ಗ್ರಂಥ ವಿಷಯವನ್ನು ಅವನೇ ಹೀಗೆ ನಿರೂಪಿಸಿದ್ದಾನೆ :

ಪಿರಿಯಕ್ಕರ : ತರದಿಂ ಸಂಜ್ಞೆ, ಬಳಾಬಳಾವಧಾನಂ, ಜನ್ಮ, ತಿರ್ಯಗ್ ಜನ್ಮಂ, ಅರಿಷ್ಟಾರಿಷ್ಟ ಹರಣಂ, ಆಯುರ್ದಾಯಂ, ದಶಾಂತರ್ದಶೆ, ಅಷ್ಟಕವರ್ಗಂ, ಕರ್ಮಜೀವನಂ, ಧರಣೀ ನಾಥನಾಭಸಂ, ಚಂದ್ರ-ದ್ವಿ-ತ್ರಿ-ಗೇಹಾದಿ ದೀಕ್ಷಾಯೋಗಂ, ರಾಶಿ ಫಳೋತ್ಕರಂ, ವಿಲಗ್ನಭಾವ, ತ್ರ್ಯಂಶತಿ ಲಕ್ಷಣ, ದೃಷ್ಟ ಫಳಾನಿಷ್ಟಂ, ಸ್ತ್ರೀಜಾತಕಂ, ॥

ಮನುಜರ ನಿರ್ಯಾಣ ಪ್ರಾಪ್ತಿ ನಷ್ಟಜಾತಕ, ಮೆನಿಪ್ಪ ಭೇದದಿಂ ಅಖಿಳಾ ।
ವನಿಯೊಳ್ ನೆಗಳ್ದಿಪ್ಪತ್ತನಾಲ್ಕುಮಧಿಕಾರದಿಂದೆ ಜಾತಕ ತಿಳಕಂ ॥

ಕಾವ್ಯ ಕವಿತ್ವ, ಶಾಸ್ತ್ರಕವಿತ್ವ, ಶಾಸ್ತ್ರಕವಿತ್ವ ರಚನೆಗೆ ಬೇಕಾದ ಪ್ರತಿಭೆ-ಈ ಬಗೆಗೆ ಶ್ರೀಧರನು ಹೇಳಿರುವ ಮನನೀಯ ವಾಕ್ಯಗಳನ್ನು ಈ ಗ್ರಂಥದ ಮೊದಲಿನಲ್ಲೀ ಗಮನಿಸಿದ್ದೇವೆ. (ನೋಡಿ : ಪುಟ 3-4).

ಜ್ಯೋತಿಷದ ಪ್ರಯೋಜನವನ್ನು ಕುರಿತು–"ಭವಬದ್ಧ ಶುಭಾಶುಭ ಕರ್ಮವಿಪಾಕದ ಫಲಮಂ ಅರಿಪ್ಪುಗುಂ ಜ್ಯೋತಿರ್‌ಜ್ಞಾನಂ ; ಅದೆಂತೆನೆ, ಕತ್ತಲೆವನೆಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆರದಿಂ". ಶಾಸ್ತ್ರ ವಿಚಾರವನ್ನು ಆಕರ್ಷಕವಾದ ಶೈಲಿಯಲ್ಲಿ ಹೇಳಬಹುದು ಎಂಬುದಕ್ಕೆ 'ಜಾತಕ ತಿಲಕ' ತಿಲಕಪ್ರಾಯವಾದ ಗ್ರಂಥ.

ಸುಮಾರು 1300 ರಲ್ಲಿದ್ದ ರಟ್ಟಕವಿಯ 'ರಟ್ಟಮತ' ಎಂಬ ಗ್ರಂಥವೂ ಜ್ಯೋತಿಷ ವಿಷಯಕವಾದುದು. ಈಗ ಸಿಕ್ಕಿರುವಷ್ಟು ಗ್ರಂಥ ಅಸಮಗ್ರ. ವಿವಿಧ ಛಂದೋಬಂಧಗಳಿಂದಲೂ, ಮಳೆಯ ಕುರುಹು, ಮೇಘಲಕ್ಷಣ, ಮಿಂಚಿನ ಲಕ್ಷಣ, ಬಿತ್ತುವ ಶಕುನ, ಮುಂತಾದ ಬೇಸಾಯ ಸಂಬಂಧದ ವಿಷಯಗಳನ್ನು ಒಳಗೊಂಡ ಈ ಗ್ರಂಥ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ.

ಮದನ ತಿಲಕ : ಚಂದ್ರರಾಜನೆಂಬ ಬ್ರಾಹ್ಮಣಕವಿಯಿಂದ (ಸು. 1040) ರಚಿತವಾದ ಈ ಗ್ರಂಥ ವಾತ್ಸಾಯನನ ಕಾಮಶಾಸ್ತ್ರವನ್ನು ಅನುಸರಿಸಿ ಬರೆದದ್ದು ; ದೊರೆತಷ್ಟು ಗ್ರಂಥ ಅಸಮಗ್ರವಾಗಿದೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ವಾಕ್ಯವನ್ನು ಉದಾಹರಿಸಿ, ಪುತ್ರೋದಯವು ಕಾಮಸುಖದ ಫಲವಾದ್ದರಿಂದ, ವಂಶದ ಏಳಿಗೆಯನ್ನು ಬಯಸುವವನು ಮಾನಿನಿಗೆ

ವಿರಾಗವಾಗದಂತೆ ಅವಳ ಮನಸ್ಸನ್ನು ಒಲಿಸಿಕೊಂಡು ಸುಖಿಸಬೇಕೆಂದು ಕವಿ ಸಲಹೆ ಮಾಡಿದ್ದಾನೆ. ಧರ್ಮಕ್ಕೆ ಅವಿರುದ್ಧವಾಗಿ, ಧರ್ಮಪತ್ನಿಯ ಸಹವಾಸದಲ್ಲಿ ದಾಂಪತ್ಯ ಸುಖವನ್ನು ವಂಶಾಭಿವೃದ್ಧಿಗಾಗಿ ಅನುಭೋಗಿಸಬೇಕೆಂದು ಹೇಳಿ, ಆ ಬಗೆಗೆ ಅನುಸರಿಸಬೇಕಾದ ವಿಧಿ ನಿಷೇಧಗಳನ್ನು ತಿಳಿಸುವ ಕಾಮಶಾಸ್ತ್ರವನ್ನು ಕಡೆಗಣ್ಣಿನಿಂದ ನೋಡಬೇಕಾಗಿಲ್ಲ. ಈ ಪದ್ಯವನ್ನು ಗಮನಿಸಿ :

ಪರವಧುವಂನಪುಂಸಕಿಯರಂ ಗುರುಭಾರ್ಯೆಯರಂ ಮುನೀಂದ್ರಸೌಂ
ದರಿಯರಂ ಅಂತ್ಯಜಾತಿಯವಳಂ ವ್ರತಮುಳ್ಳಳಂ ಅಂಗಹೀನೆಯಂ
ತಿರಿವವಳಂ ಕುಲಕ್ಷಯೆಯುಂ ಆ ಕೊಡಗೂಸುಗಳಂ ವಿದಗ್ಧಂ ಆ-
ದರದೊಳೆ ಕೂಡಲುಂ ಬಯಸಿ ನೋಡಲುಂ ಆಗದು ಕೂರ್ತು ಬಂದೊಡಂ

ಚಂದ್ರರಾಜನು ತನ್ನ ಗ್ರಂಥದಲ್ಲಿ ವಿವಿಧ ಛಂದಸ್ಸುಗಳ ಪ್ರಯೋಗ ಮಾಡಿರುವುದರಿಂದ ಛಂದಶ್ಶಾಸ್ತ್ರದೃಷ್ಟಿಯಿಂದಲೂ ಈ ಗ್ರಂಥ ಗಮನಾರ್ಹವಾಗಿದೆ.

ಗಣಿತ ಶಾಸ್ತ್ರ, ರತ್ನಶಾಸ್ತ್ರ ಮುಂತಾದ ಬಗೆಬಗೆಯ ಶಾಸ್ತ್ರವಿಷಯಕ ಗ್ರಂಥಗಳೂ ಕನ್ನಡದಲ್ಲಿ ರಚಿತವಾಗಿವೆ. ಅನೇಕ ಸಂಗೀತ ಶಾಸ್ತ್ರಜ್ಞರು ಕನ್ನಡಿಗರಾದರೂ ಸಂಗೀತ ಶಾಸ್ತ್ರಗ್ರಂಥಗಳು ಸಾಧಾರಣವಾಗಿ ಸಂಸ್ಕೃತದಲ್ಲಿ ರಚಿತವಾಗಿವೆ. ಕನ್ನಡದಲ್ಲಿ ರಚಿತವಾಗಿರುವವು ವಿರಳ. (ಅನುಬಂಧದಲ್ಲಿ ವಿವರಗಳನ್ನು ಕೊಟ್ಟಿದೆ). ದಾಕ್ಷಿಣಾದಿ ಸಂಗೀತ 'ಕರ್ಣಾಟಕ ಸಂಗೀತ' ಎಂದು ಪರಿಗಣಿತವಾಗಿರುವುದು, ಪುರಂದರದಾಸರು 'ಕರ್ಣಾಟಕ ಸಂಗೀತ ಪಿತಾಮಹ' ಎಂದು ಪ್ರಸಿದ್ಧರಾಗಿರುವುದು – ಇಷ್ಟರಿಂದ ಮಾತ್ರ ನಾವು ತೃಪ್ತರಾಗಬೇಕಾಗಿದೆ. ಇದ್ದುದರಲ್ಲಿ ತೃಪ್ತಿಪಡುವುದು ವಿವೇಕಿಗಳ ಲಕ್ಷಣ. ಹಿಂದೆ ಆದ ಕೊರತೆಯನ್ನು ಆಧುನಿಕ ಸಂಗೀತ ಶಾಸ್ತ್ರಜ್ಞರು ಸಂಸ್ಕೃತ ಶಾಸ್ತ್ರಗ್ರಂಥಗಳ ಕನ್ನಡ ಅನುವಾದಗಳ ಮೂಲಕವೂ ಸ್ವತಂತ್ರ ರಚನೆಗಳ ಮೂಲಕವೂ ತಕ್ಕಮಟ್ಟಿಗೆ ತುಂಬಿಕೊಡುತ್ತಿರುವುದು ಆಶಾದಾಯಕವಾಗಿದೆ.

ಸಿಂಹಭೂಪಾಲನು 'ಲಾಸ್ಯರಂಜನೀ' ಎಂಬ ನಾಟ್ಯ ವಿಷಯಕವಾದ ಗ್ರಂಥವನ್ನು ಕನ್ನಡದಲ್ಲಿ ಪದ್ಯರೂಪದಲ್ಲಿ ಬರೆದಿರುವುದಾಗಿ ತಿಳಿದುಬರುತ್ತದೆ. ಯಕ್ಷಗಾನದ ಮೇಲೆ ಶಾಸ್ತ್ರೀಯ ಗ್ರಂಥಗಳು ರಚನೆಯಾಗಿವೆ.

ಸಮಾಪ್ತಿವಾಕ್ಯ

ಶಾಸ್ತ್ರಸಾಹಿತ್ಯವನ್ನು ಕುರಿತು ಒಂದೇ ಕಡೆ ಗ್ರಂಥರೂಪದಲ್ಲಿ ಸಮೀಕ್ಷೆ ನಡೆಸಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಪ್ರಕಾರದಲ್ಲಿ ಇದೇ ಮೊದಲನೆಯ ಗ್ರಂಥ ಎಂದು ನಾನು ತಿಳಿದಿದ್ದೇನೆ. ಆದ್ದರಿಂದ, ಗ್ರಂಥ ರಚನೆಯಲ್ಲಿ ಕುಂದುಕೊರತೆಗಳು, ಏರುಪೇರು ಕಂಡುಬಂದರೆ ಆಶ್ಚರ್ಯವಿಲ್ಲ. ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿರಿಸಿಕೊಂಡು ಕೂಡಿದಮಟ್ಟಿಗೂ ಸರಳವಾಗಿ ವಿಷಯ ನಿರೂಪಣೆ ಮಾಡಲು ಪ್ರಯತ್ನಿಸಿದೆ. ಉದ್ಧರಿಸಿದ ಪದ್ಯಗಳಲ್ಲಿ ಓದುಗರ ಸೌಕರ್ಯಕ್ಕಾಗಿ ಪದಗಳ ಸಂಧಿಗಳನ್ನು ಬಿಡಿಸಿ ತೋರಿಸಿದೆ; ಇದರಿಂದ, ಪದ್ಯದ ಛಂದಸ್ಸಿಗೆ ಅನಿವಾರ್ಯವಾಗಿ ಊನ ತಟ್ಟುವಂತಾಗಿದೆ. ಪದ್ಯದಲ್ಲಿ ರಳ, ಶಕಟರೇಫ, ಈ ಹಳಗನ್ನಡ ಅಕ್ಷರಗಳ ಪ್ರಯೋಗ ಇದ್ದ ಕಡೆ ಅವನ್ನು ಬಿಟ್ಟುಬಿಟ್ಟಿದೆ. ಸಾಧ್ಯವಾದಮಟ್ಟಿಗೂ ಕಠಿನವಾದ ಪದಗಳಿಗೆ ಅರ್ಥವನ್ನು ಕೊಟ್ಟಿದೆ.

ಪುಟಸಂಖ್ಯೆಯ ವಿಷಯದಲ್ಲಿ ಈ ಸಾಹಿತ್ಯಚರಿತ್ರೆಯ ಸಂಪಾದಕರಾದ ಡಾ॥ ಜಿ. ಎಸ್. ಶಿವರುದ್ರಪ್ಪನವರು ನನಗೆ ಧಾರಾಳವಾದ ಗರಿಷ್ಠಮಿತಿಯನ್ನು ಕಲ್ಪಿಸಿಕೊಟ್ಟಿದ್ದರೂ, ಕಡೆಯ ಎರಡು ಪ್ರಕರಣಗಳಲ್ಲಿ ಗ್ರಂಥ ಪರಿಚಯವಿವರ ಸಾಲದು ಎನ್ನಿಸಬಹುದು. ಅನೇಕ ಗ್ರಂಥಗಳನ್ನು ಗಮನಿಸಲೂ ಸಾಧ್ಯವಾಗಿಲ್ಲ. ಓದುಗರು ಅನುಬಂಧದ ಗ್ರಂಥಪಟ್ಟಿಕೆಯ ಮೇಲೆ ಕಣ್ಣಾಡಿಸಿ ತೃಪ್ತಿಪಟ್ಟುಕೊಳ್ಳಬೇಕು.*

ಶಾಸ್ತ್ರಸಾಹಿತ್ಯಕ್ಷೇತ್ರದಲ್ಲಿ ಈವರೆಗೆ ನಡೆದಿರುವ ಸಂಶೋಧನೆಯ ಫಲಿತವನ್ನೆಲ್ಲಾ—ನನ್ನ ಗಮನಕ್ಕೆ ಬಂದಮಟ್ಟಿಗೆ—ವಿಷಯ ನಿರೂಪಣೆಯಲ್ಲಿ ಅಳವಡಿಸಿಕೊಂಡಿದ್ದೇನೆ. ಬಲ್ಲವರು ಈ ವಿಶೇಷವನ್ನು ಗುರುತಿಸಬಹುದು.

---

* ಈ ಪಟ್ಟಿಯನ್ನು ಕೂಡಿದಮಟ್ಟಿಗೂ ಸಮಗ್ರವಾಗಿ ತಯಾರಿಸುವಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಸಂಶೋಧನ ಸಹಾಯಕರಾದ ಶ್ರೀ ಎಸ್. ಶಿವಣ್ಣ, ಶ್ರೀ ಶೇಷಶಾಸ್ತ್ರಿ, ಮತ್ತಿತರರು, ಸಹಾಯಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಡಾ॥ ಪ್ರಭುಶಂಕರ್, ಉಪನಿರ್ದೇಶಕ ಶ್ರೀ ಆರ್. ಎಲ್. ಅನಂತರಾಮಯ್ಯ, ಇವರು ಅಚ್ಚಾಗುತ್ತಿರುವ 'ಗ್ರಂಥಸೂಚಿ'ಯ ಮುದ್ರಿತ ಫಾರಮ್ಮುಗಳನ್ನು ಕಳಿಸಿಕೊಟ್ಟು ಉಪಕರಿಸಿದ್ದಾರೆ. ಇವರಿಗೆಲ್ಲರಿಗೂ ನನ್ನ ಕೃತಜ್ಞತೆಯ ವಂದನೆಗಳು.

ಗ್ರಂಥ ಸಮೀಕ್ಷೆಯಲ್ಲಿ, 20ನೆಯ ಶತಮಾನದವರೆಗೆ ರಚಿತವಾಗಿರುವ ಗ್ರಂಥಗಳನ್ನು ಮಾತ್ರ ಗಮನಿಸಲಾಗಿದೆ. ಈ ಶತಮಾನದಲ್ಲಿ ರಚಿತವಾದ, ಗಮನಾರ್ಹವಾದ ಕೆಲವು ಗ್ರಂಥಗಳನ್ನು ಮಾತ್ರ ಅನುಬಂಧದ ಪಟ್ಟಿಯಲ್ಲಿ ಹೆಸರಿಸಿದೆ.

ಈ ಬಗೆಯ ಗ್ರಂಥರಚನೆಗೆ ಆರ್. ನರಸಿಂಹಾಚಾರ್ಯರ ಕವಿಚರಿತೆಯ ಸಂಪುಟಗಳು ಇಂದೂ ಮುಂದೂ ಅಮೂಲ್ಯವಾದ ಆಕರ ಗ್ರಂಥಗಳು. ಇತರ ಅನೇಕ ಗ್ರಂಥಗಳಿಂದ ಲೇಖನ ಕಾರ್ಯದಲ್ಲಿ ಉಪಕೃತನಾಗಿದ್ದೇನೆ. ಈ ಎಲ್ಲ ಗ್ರಂಥಗಳ ನಾಮ ನಿರ್ದೇಶವನ್ನು ಅಡಿಟಿಪ್ಪಣಿಗಳಲ್ಲಿ ಕಾಣಬಹುದು.

19ನೆಯ ಶತಮಾನದಿಂದ ಈಚೆಗೆ ಆಧುನಿಕ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಗಮನಾರ್ಹವಾಗಿ ಗ್ರಂಥರಚನೆ ಆಗುತ್ತಿದೆ. ಅವುಗಳನ್ನು ಸಮೀಕ್ಷೆ ಮಾಡಲು ಪ್ರತ್ಯೇಕ ಗ್ರಂಥವೇ ಆಗಬೇಕು.

ಈ ಗ್ರಂಥವನ್ನು ಓದುವ ವಾಚಕರಲ್ಲಿ ಶಾಸ್ತ್ರಸಾಹಿತ್ಯವನ್ನು ಓದುವ ಅಭಿರುಚಿ ಹುಟ್ಟುವಂತಾದರೆ ಸಾಕು. ಈ ಗ್ರಂಥವನ್ನು ಬರೆದದ್ದು ಸಾರ್ಥಕವೆನಿಸುವುದು.


ಶಾಸ್ತ್ರಜ್ಞಾನ

ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ ನೀತಿ ಮೆಲ್ಪಾತು ಮು-
ಕ್ತಿಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಟ್ಕುಂತಲ್ಲದಡೆ ಆ ಶಾಸ್ತ್ರದಿಂ
ದುಸ್ಸಿತ್ರೀಚಿಂತನೆ ದುರ್ಮುಖಂ ಕಲಹಂ ಉದ್‌ಗರ್ವಂ ಮನಂಗೊಂಡೊಡಾ
ಶಾಸ್ತ್ರಂಶಸ್ತ್ರಮೆ, ಶಾಸ್ತ್ರಿ ಶಸ್ತ್ರಿಕನಲಾ ! ರತ್ನಾಕರಾಧೀಶ್ವರಾ !

—ಶೃಂಗಾರಕವಿ ಹಂಸರಾಜ : ರತ್ನಾಕರಾಧೀಶ್ವರ ಶತಕ

ಅಡಿ ಟಿಪ್ಪಣಿಗಳು

1 ಆರ್. ನರಸಿಂಹಾಚಾರ್ : ಕವಿಚರಿತೆ, ಸಂ. I ಪು. 305
2 ಎಂ. ವಿ. ಸೀತಾರಾಮಯ್ಯ : 'ಓವನಿಗೆ' ('ಕರ್ಣಾಟಕ ಭಾರತಿ', ಧಾರವಾಡ, ಸಂಪುಟ 6–4, 1974)



ಚಿತ್ರ 1. ಹಾರಬಂಧ


[ಸೂಚನೆ : ಸ್ರಗ್ಧರಾವೃತ್ತದ ಪದ್ಯವನ್ನು ಹೂವಿನ ಹಾರದ 8 ಹೂವುಗಳಲ್ಲಿ ಹಂಚಿದೆ. ಈ ವೃತ್ತದ ಪ್ರತಿ ಸಾಲಿನಲ್ಲಿಯೂ 21 ಅಕ್ಷರಗಳಿರುತ್ತವೆ. ಒಂದು ಪಂಕ್ತಿಯ ಅಕ್ಷರಗಳನ್ನು 3 ಹೂವುಗಳಲ್ಲಿ ಹಂಚಿದೆ. ಒಂದು ಹೂವಿಗೆ 7 ಅಕ್ಷರಗಳು. ಆದರೆ, ಚಿತ್ರದಲ್ಲಿ 5 ಅಕ್ಷರಗಳು ಮಾತ್ರ ಇವೆ. ನಡುವಣ ಅಕ್ಷರ ಹೂವಿನ 3 ಅಕ್ಷರಗಳ ಉಚ್ಚಾರಣೆಯೊಂದಿಗೆ ಪುನರಾವೃತ್ತಿಯಾಗುವುದರಿಂದ,5 ಅಕ್ಷರಗಳು 7 ಆಗುತ್ತವೆ. ನಮ್ಮ ಬಲಗಡೆಯಿಂದ ಓದನ್ನು ಪ್ರಾರಂಭಿಸಬೇಕು.] ಋಣ : 'ನರಪತಿ ವಿಜಯ' (10 ನೆಯ ಪುಟದ ಎದುರಿನ ಚಿತ್ರ).

ಬಾಹ್ಯಪ್ರಪಂಚ ದರ್ಶನ
(ಇಂದ್ರಿಯಗಳ ಮೂಲಕ)

ಶಾಸ್ತ್ರ—ಕಲೆ

- (ನೋಡಿ : ಹೇಳುವುದು)
  ನೋಟ, ಕಾಣ್ಕೆ ; ದರ್ಶನ (ಯೋಗ)
  - ಧ್ಯಾನಪೂರ್ವಕ (ವಿಶಿಷ್ಟ) :
    'ದರ್ಶನ' ಮಾಡುವವನು–
    ದಾರ್ಶನಿಕ, ದ್ರಷ್ಟಾರ, ಋಷಿ
    ಪ್ರಮಾಣ : ಅಂತಃಕರಣ
    - ಗುರಿ : ಸತ್ಯಾನ್ವೇಷಣೆ
    - ಫಲ :
      ಉಪದೇಶ (ಹೇಳುವುದು)
      ದರ್ಶನ ಶಾಸ್ತ್ರ
      ಮತಧರ್ಮ ಶಾಸ್ತ್ರ
      ನೀತಿಶಾಸ್ತ್ರ ಇತ್ಯಾದಿ
  - ಧ್ಯಾನರಹಿತ (ನೈಸರ್ಗಿಕ) :
    ದರ್ಶನ ಮಾಡುವವನು–
    ಶಾಸ್ತ್ರಕಾರ, ವಿಜ್ಞಾನಿ
    ಪ್ರಮಾಣ, ಪ್ರತ್ಯಕ್ಷ
    - ಗುರಿ : ಸತ್ಯಾನ್ವೇಷಣೆ
    - ಫಲ :
      ಪ್ರಾಚೀನ ಶಾಸ್ತ್ರಗಳು
      ಆಧುನಿಕ ವಿಜ್ಞಾನ
      ಯಂತ್ರ ಶಾಸ್ತ್ರ
      ಇತ್ಯಾದಿ
- (ನೋಡಿ : ಮಾಡುವುದು)
  ಕರ್ಮ ; ಸೃಷ್ಟಿ (ಪ್ರಯೋಗ)
  - ಸೃಷ್ಟಿಪೂರ್ವಕ ಕ್ರಿಯೆ
    - ನೋಡಿದ್ದನ್ನು–
      (ಜನಜೀವನ, ಇತ್ಯಾದಿ)
      –ನಿರ್ಮಾಣ ಮಾಡುವವನು :
      ನಿರ್ಮಾಪಕ, ಕಲೆಗಾರ
      - ಗುರಿ : ಸೌಂದರ್ಯಾನುಭವ, ಆತ್ಮಸಂತೋಷ
      - ಫಲ :
        - ತನಗಾಗಿ (ಆತ್ಮತೃಪ್ತಿ)
          - ಮಾತಿನ ಮೂಲಕ :
            ಕಾವ್ಯ ; ಗೇಯಪ್ರಬಂಧ
          - ಇತರ ಸಾಧನಗಳ
            ಮೂಲಕ :
            ಶುದ್ಧ ಸಂಗೀತ,
            ಚಿತ್ರ, ಶಿಲ್ಪ,
            ಇತ್ಯಾದಿ
        - ಇತರರ ಪ್ರಯೋಜನಕ್ಕಾಗಿ
          - ಉಪಯುಕ್ತ
            ಕಲೆಗಳು
            (ಆಂಶಿಕ
            ಕಲೆಗಳು)
            (ಗೃಹ, ಮರದ
            ಮುಟ್ಟುಗಳು, ಆಭರಣ, ಇತ್ಯಾದಿ)
          - ವಾಸ್ತುಶಿಲ್ಪ,
            ಯಂತ್ರಗಳು,
            ನಗರ ನಿರ್ಮಾಣ,
            ಇತ್ಯಾದಿ
  - ಸೃಷ್ಟಿರಹಿತ ಕ್ರಿಯೆ :
    ನಿತ್ಯಜೀವನದ ಎಲ್ಲ
    ಕಾರ್ಯಕಲಾಪಗಳು

ಚಿತ್ರ 2.


ಅನುಭವ ಸಾಧನ
5 ಜ್ಞಾನೇಂದ್ರಿಯ (ಬುದ್ಧೀಂದ್ರಿಯ)ಗಳು
ಶ್ರೋತ್ರಂ ಕಿವಿ (ಶಬ್ದ)
ತ್ವಕ್ ಚರ್ಮ (ಸ್ಪರ್ಶ)
ಚಾಕ್ಷುಷೀ ಕಣ್ಣು (ರೂಪ)
ಜಿಹ್ವಾ ನಾಲಗೆ (ರಸ)
ನಾಸಿಕಾ ಮೂಗು (ಗಂಧ)
5 ಕರ್ಮೇಂದ್ರಿಯ (ಕರಣೇಂದ್ರಿಯ)ಗಳು
ಪಾಯುಃ
ಉಪಸ್ಥಂ
ಹಸ್ತ ಕೈ
ಪಾದಂ ಅಡಿ
ವಾಕ್ ಮಾತು
ಅಂತಃಕರಣ
ಮನಸ್ಸು
ಬುದ್ಧಿ
ಚಿತ್ತ
ಹೃದಯ
ಜೀವ ಆತ್ಮ
ಪಾಕ್ + ವಿಚಾರ
ಭಾವ(ನೆ) + ವಾಕ್
ಜ್ಞಾನಪ್ರಕಾಶ
ಶಾಸ್ತ್ರ (ಗ್ರಂಥ)
ಜ್ಞಾನಾನುಭವ
ಪಾರಮಾರ್ಥಿಕ
ಲೌಕಿಕ
(ವೇದ, ಉಪನಿಷತ್, ಜೈನಪುರಾಣ, ಇತ್ಯಾದಿ)
(ವ್ಯಾವಹಾರಿಕ)
ಭಾವಪ್ರಕಾಶ
ಸಾಹಿತ್ಯ (ಕಲೆ)
ರಸಾನುಭವ
ಧಾರ್ಮಿಕ
ಲೌಕಿಕ
ಇತರ ಕಲೆಗಳು
ಮೋಕ್ಷ
(ಆತ್ಯಂತಿಕ ಸುಖ–ಬ್ರಹ್ಮಾನಂದ)–ಬ್ರಹ್ಮಾನಂದ ಸಹೋದರ

ಚಿತ್ರ 3.

ಪ್ರಸಿದ್ಧ ಸಂಸ್ಕೃತ ಅಲಂಕಾರಶಾಸ್ತ್ರ ಗ್ರಂಥಗಳು ಮತ್ತು ಆಲಂಕಾರಿಕರು

ಅಪ್ಪಯ್ಯದೀಕ್ಷಿತ	:	1. ಕುವಲಯಾನಂದ, 2. ಚಿತ್ರ ಮೀಮಾಂಸಾ
ಅಭಿನವಗುಪ್ತ	:	1. ಅಭಿನವಭಾರತೀ (ಭರತನ ನಾಟ್ಯಶಾಸ್ತ್ರದ ಮೇಲಿನ ವ್ಯಾಖ್ಯಾನ, 2. ಕಾವ್ಯಕೌತುಕ ವಿವರಣ (ದೊರೆತಿಲ್ಲ) ; 3. ಧ್ವನ್ಯಾಲೋಕ ಲೋಚನ (ಆನಂದವರ್ಧನ ಧ್ವನ್ಯಾಲೋಕದ ಮೇಲಿನ ವ್ಯಾಖ್ಯಾನ).
ಅಮೃತಾನಂದ (ಯೋಗಿ)	:	ಅಲಂಕಾರ ಸಂಗ್ರಹ (=ಅಮೃತಾ ನಂದೀಯ).
ಆನಂದವರ್ಧನ	:	ಧ್ವನ್ಯಾಲೋಕ.
ಉದ್ಭಟ	:	1. ಕಾವ್ಯಾಲಂಕಾರ ಸಾರಸಂಗ್ರಹ (ಇದಕ್ಕೆ ಪ್ರತಿ ಹಾರೇಂದು ರಾಜನ ವ್ಯಾಖ್ಯಾನವಿದೆ). 2. ಭಾಮಹ ವಿವರಣ (ದೊರೆತಿಲ್ಲ).
ಕುಂತಕ	:	ವಕ್ರೋಕ್ತಿ ಜೀವಿತ.
ಕ್ಷೇಮೇಂದ್ರ	:	1. ಔಚಿತ್ಯ ವಿಚಾರಚರ್ಚೆ ; 2. ಕವಿಕಂದಾಭರಣ.
ಜಗನ್ನಾಥ	:	1. ಚಿತ್ರಮೀಮಾಂಸಾಖಂಡನ ; 2. ರಸಗಂಗಾಧರ
ಜಯದೇವ	:	ಚಂದ್ರಾಲೋಕ
ದಂಡೀ	:	ಕಾವ್ಯಾದರ್ಶ
ಧನಂಜಯ	:	ದಶರೂಪಕ
ಭರತ	:	ನಾಟ್ಯಶಾಸ್ತ್ರ
ಭಾನುದತ್ತ	:	1. ರಸತರಂಗಿಣೀ ; 2. ರಸಮಂಜರೀ.
ಭಾಮಹ	:	ಕಾವ್ಯಾಲಂಕಾರ.
ಭೋಜರಾಜ	:	1. ಶೃಂಗಾರ ಪ್ರಕಾಶ ; 2. ಸರಸ್ವತೀಕಂಠಾಭರಣ
ಮಮ್ಮಟ	:	ಕಾವ್ಯಪ್ರಕಾಶ
ಮಹಿಮಭಟ್ಟ	:	ವ್ಯಕ್ತಿವಿವೇಕ
ರಾಜಶೇಖರ	:	ಕಾವ್ಯಮೀಮಾಂಸಾ
ರುದ್ರಟ	:	ಕಾವ್ಯಾಲಂಕಾರ
ರುದ್ರಭಟ್ಟ	:	ಶೃಂಗಾರ ತಿಲಕ
ರುದ್ರಭಟ್ಟ	:	ರಸಕಲಿಕಾ

ರುಯ್ಯಕ	:	1. ಅಲಂಕಾರ ಸರ್ವಸ್ವ ; 2. ನಾಟಕ ವಿಮಾಂಸಾ (ದೊರೆತಿಲ್ಲ) ; 3. ಸಾಹಿತ್ಯ ಮಿಮಾಂಸಾ
ರೂಪಗೋಸ್ವಾಮಿ	:	1. ಉಜ್ವಲ ನೀಲಮಣಿ ; 2. ಭಕ್ತಿ ರಸಾಮೃತ ಸಿಂಧು
ಲೊಲ್ಲಟ	:	ಭರತನಾಟ್ಯಶಾಸ್ತ್ರ ವ್ಯಾಖ್ಯಾನ (ದೊರೆತಿಲ್ಲ)
ವಾಗ್ಭಟ I	:	ವಾಗ್ಭಟಾಲಂಕಾರ
ವಾಗ್ಭಟ II	:	ಕಾವ್ಯಾನುಶಾಸನ
ವಾಮನ	:	ಕಾವ್ಯಾಲಂಕಾರ ಸೂತ್ರ ವೃತ್ತಿ
ವಿದ್ಯಾನಾಥ	:	ಪ್ರತಾಪರುದ್ರಯಶೋಭೂಷಣ (= ಪ್ರತಾಪ ರುದ್ರೀಯ)
ವಿಶ್ವನಾಥ	:	ಸಾಹಿತ್ಯ ದರ್ಪಣ
ಶಂಕುಕ	:	ಭರತನಾಟ್ಯಶಾಸ್ತ್ರ ವ್ಯಾಖ್ಯಾನ (ದೊರೆತಿಲ್ಲ)
ಶಾರದಾತನಯ	:	ಭಾವಪ್ರಕಾಶ
ಶಾರ್ಙ್ಗದೇವ	:	ಸಂಗೀತರತ್ನಾಕರ
ಸಂತ ಅಕ್ಬರ್‌ಷಹ	:	ಶೃಂಗಾರಮಂಜರೀ
ಸಾಗರನಂದೀ	:	ನಾಟಕಲಕ್ಷಣರತ್ನಕೋಶ
ಸಿಂಗಭೂಪಾಲ	:	ರಸಾರ್ಣವಸುಧಾಕರ (= ಸಿಂಗಭೂಪಾಲೀಯ)
ಹೇಮಚಂದ್ರ	:	ಕಾವ್ಯಾನುಶಾಸನ

ಶಾಸ್ತ್ರ ಗ್ರಂಥಸೂಚಿ

[‡ ಈ ಚಿಹ್ನೆ ಹಾಕಿರುವ ಹೆಸರಿನ ಗ್ರಂಥ ಪ್ರಕಟವಾಗಿದೆ.]

೧ ಅಲಂಕಾರ ಶಾಸ್ತ್ರ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
1	‡ಅಪ್ರತಿಮ ವೀರ ಚರಿತೆ	ತಿರುಮಲಾರ್ಯ	ಸು. 1645	
2	ಅಪ್ರಸ್ತುತ ಪ್ರಶಂಸಾ ಶತಕ	ಶಾಲ್ಯದ ಕೃಷ್ಣರಾಜ	1748-75	
3	‡ಉದಯಾದಿತ್ಯಾಲಂಕಾರ	ಉದಯಾದಿತ್ಯ (?)	ಸು. 1150	
4	‡ಕವಿರಾಜಮಾರ್ಗ	ಶ್ರೀವಿಜಯ	ಸು. 860	ಪ್ರಥಮ ಅಲಂಕಾರ ಗ್ರಂಥ
5	‡ಕರ್ಣಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ	ಚಾವಲಿ ರಾಮಸ್ವಾಮಿಶಾಸ್ತ್ರಿ	1885	
6	‡ಕರ್ಣಾಟಕ ಚಂದ್ರಾಲೋಕ	ಸಿದ್ಧಾಂತಿ ಶಿವಶಂಕರ ಶಾಸ್ತ್ರೀ	1897	
7	‡ ,, ,,	ಅಕ್ಕಲೆ ನರಸಿಂಹ ಶಾಸ್ತ್ರೀ	1905	
8	‡ಕಾವ್ಯಾವಲೋಕನ	3ನೆಯ ನಾಗವರ್ಮ	1050	
9	‡ಕುವಲಯಾನಂದ	ಜಾಯೇಂದ್ರ	ಸು. 1750	
10	‡ನರಪತಿ ವಿಜಯ	ಅಳಿಯ ಲಿಂಗರಾಜ	1867	
11	ನವರಸಾಲಂಕಾರ	ತಿಮ್ಮ	ಸು. 1600	
12	ಪ್ರಭುಸೇನೀಯ (?) (ಅಥವಾ ಪ್ರಭುಸೇನನ ಅಲಂಕಾರ)	ಪ್ರಭುಸೇನ (?)	ಸು. 800 —	ಜಯಕೀರ್ತಿಯ ಛಂದೋನುಶಾಸನದಲ್ಲಿ ಹೇಳಿದೆ.
13	ಮಾಧವಾಲಂಕಾರ	ಮಾಧವ	ಸು. 1500	
14	ರಸಕಲಿಕೆ	ರುದ್ರಭಟ್ಟ (?)	ಸು. 1218	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
15	ರಸಮಂಜರಿ	ಜಾಯೇಂದ್ರ	ಸು. 1750	
16	‡ರಸರತ್ನಾಕರ	ಸಾಳ್ವ	ಸು. 1550	
17	‡ಶೃಂಗಾರ ರತ್ನಾಕರ	ಕವಿಕಾಮ	ಸು. 1150-1200	
18	‡ಶಾರದಾ ವಿಲಾಸ	ಸಾಳ್ವ	ಸು. 1550	
19	‡ಶ್ರೀ ಲಕ್ಷ್ಮೀನೃಸಿಂಹ ಸ್ತೋತ್ರ	ಎಸ್. ಎನ್. ನರಹರಯ್ಯ	1919	

ಈಚಿನ ಕೆಲವು ಗ್ರಂಥಗಳು

1	‡ಅಲಂಕಾರ ಶಾಸ್ತ್ರ	ಕೌಲಗಿ ಶೇಷಾಚಾರ್ಯ	ಪಿ. ವಿ. ಕಾಣೆ ಅವರ ಗ್ರಂಥದ ಅನುವಾದ
2	‡ಅಲಂಕಾರ ಶಾಸ್ತ್ರ	ಬಿ. ಕೆ. ಶಿವರಾಮಯ್ಯ	
3	‡ಆನಂದವರ್ಧನನ ಕಾವ್ಯಮೀಮಾಂಸೆ	ಕೆ. ಕೃಷ್ಣಮೂರ್ತಿ	
4	‡'ಕನ್ನಡ ಕೈಪಿಡಿ'– ಅಲಂಕಾರ ಶಾಸ್ತ್ರಭಾಗ	ಕಾನಕಾನಹಳ್ಳಿ ವರದಾಚಾರ್ಯರು ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು	
5	‡ಜೀವನ ಸೌಂದರ್ಯ ಮತ್ತು ಸಾಹಿತ್ಯ	ಡಿ. ವಿ. ಗುಂಡಪ್ಪ	
6	‡ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು	ರಂ. ಶ್ರೀ. ಮುಗಳಿ	
7	‡ಭಾರತೀಯ ಕಾವ್ಯ ಮೀಮಾಂಸೆ	ತೀ. ನಂ. ಶ್ರೀಕಂಠಯ್ಯ	
8	‡ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ	ಎಂ. ವಿ. ಸೀತಾರಾಮಯ್ಯ	
9	‡ಸಾಹಿತ್ಯ	ಮಾಸ್ತಿ ವೆಂಕಟೇಶ ಅಯ್ಯಂಗಾರ್	
10	‡ಸಾಹಿತ್ಯ	ರವೀಂದ್ರನಾಥ ಠಾಕೂರ್	
11	‡ಸಾಹಿತ್ಯ ಶಾಸ್ತ್ರ	ಕರ್ಪೂರ ಶ್ರೀನಿವಾಸರಾಯರು	
12	‡ಸಂಸ್ಕೃತ ಅಲಂಕಾರ ಶಾಸ್ತ್ರ ಗ್ರಂಥಗಳ ಕನ್ನಡ ಅನುವಾದಗಳು	ಕೆ. ಕೃಷ್ಣಮೂರ್ತಿ	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಮ, ಮುಂತಾದ ವಿವರಗಳು
೩.	ಛಂದಸ್ಸು			
1	ಕವಿಜಿಹ್ವಾಬಂಧನ	ಈಶ್ವರ ಕವಿ	ಸು. 1500	
2	ಗುಣಗಾಂಕಿಯ (?)	ಗುಣಗಾಂಕ	9ನೆಯ ಶ.	
3	ಛಂದೋವಿಚಿತಿ (ಅಥವಾ), ಕರ್ನಾಟ ಛಂದೋಮತ (?)	2 ನೆಯ ನಾಗವರ್ಮ (?)	(?)	ನೋಡಿ : ಕರ್ನಾಟಕ ಕವಿಚರಿತೆ, ಅನುಬಂಧ II, ಪು. 43
4	‡ಛಂದೋಂಬುಧಿ	ನಾಗರ್ಮ-I (?)	? 990	
5	‡ಛಂದೋನುಶಾಸನ	ಜಯಕೀರ್ತಿ	11ನೆಯ ಶ.	
6	‡ಛಂದಸ್ಸಾರ	ಗುಣಚಂದ್ರ	1650	
7	‡ನಂದಿ ಛಂದಸ್ಸು (ನಂದಿಛಂದೋರ್ಣವ)	ವೀರಭದ್ರ	1846	
8		ಪೂರ್ವದ ನಾಗವರ್ಮ		
9	‡ಮಾನಸೋಲ್ಲಾಸ (ಅಥವಾ) ಅಭಿಲಷಿತಾರ್ಥ ಚಿಂತಾಮಣಿ	ಸೋಮೇಶ್ವರ(III)	1129	
10	ವೃತ್ತರತ್ನಾಕರದ ಟೀಕೆ			ನೋಡಿ : ಕರ್ಣಾಟಕ ಕವಿಚರಿತೆ, ಸಂ. III ಪು. 325
11	ಷಟ್ಪ್ರತ್ಯಯ	ಶಾಲ್ಯದ ಕೃಷ್ಣರಾಜ	1775	ನೋಡಿ ಪು. 124
	ಈಚಿನ ಕೆಲವು ಗ್ರಂಥಗಳು			
12	‡ಒಂದನೆಯ ನಾಗವರ್ಮ	ಸಂ. ವಿ. ಸೀತಾ ರಾಮಯ್ಯ	1973	
13	‡ಕನ್ನಡ ಛಂದಸ್ಸು (ಲ್ಯಾಟಿನ್ ಭಾಷೆಯಲ್ಲಿ)	ಚಾತೆಲೋನ	1869	ನೋಡಿ : ಎಲ್. ಬಸವರಾಜ : ಕನ್ನಡ ಛಂದಸ್ಸಂಪುಟ-ಅರಿಕೆ, ಪು. iii
14	‡ಕರ್ನಾಟಕ ಛಂದೋಲಂಕಾರ-ಸಾಹಿತ್ಯ ಲಕ್ಷಣ	ಚಾವಲಿ ರಾಮಸ್ವಾಮಿ ಶಾಸ್ತ್ರಿ	1885	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
15	‡ಕನ್ನಡ ಭಾಷೆಯ ಛಂದಸ್ಸು (Prosody of the Kannada Language)	ನರಸಿಂಹ ಮಾಧವ ಮಹಿಷಿ	1893	
16	ಕರ್ನಾಟಕ ಛಂದೋಮಂಜರಿ ?			
17	‡ಕನ್ನಡ ಕೈಪಿಡಿ :			
	i) ಕರ್ನಾಟಕ ಛಂದಸ್ಸು	ಟ. ಶ್ರೀನಿವಾಸ ರಾಘವಾಚಾರ್ಯ	1927	
	ii) ಕನ್ನಡ ಛಂದಸ್ಸಿನ ಚರಿತ್ರೆ	ಬಿ. ಎಂ. ಶ್ರೀಕಂಠಯ್ಯ		
18	‡ಕನ್ನಡ ನುಡಿಗನ್ನಡಿ ಮತ್ತು ಛಂದೋಮಂಜರಿ	ಎಂ. ಪಿ. ಪೂಜಾರ	1928	
19	‡ಕನ್ನಡ ಛಂದಸ್ಸು	ಟಿ. ವಿ. ವೆಂಕಟಾಚಲಶಾಸ್ತ್ರಿ		
20	ಕಂನಡ ಕವಿತಾ ಪದ್ಧತಿಯು	ತೂರಮುರಿ ಗಂಗಾಧರ ಮಡಿವಾಳೇಶ್ವರ	1885	
21	‡ಛಂದಸ್ಸಾರ	ಧೋಂಡೋ-ನರಸಿಂಹ ಮುಳಬಾಗಿಲ	1890	
22	‡ಛಂದೋಮಾಲಿಕೆ	ಶ್ರೀನಿವಾಸ ರಾಘವಾಚಾರ್ಯ	1895	
23	ಛಂದೋದರ್ಪಣ	ಕವೀಶ್ವರ ನರಸಪ್ಪ	1926	
24	‡ಛಂದೋವಿಕಾಸ	ಡಿ. ಎಸ್. ಕರ್ಕಿ	1956	
25	ಛಂದಸ್ಸಾರ	ಗರಣಿವ್ಯೆ, ಕೃಷ್ಣಾಚಾರ್ಯ, ತಿಮ್ಮಣ್ಣಾಚಾರ್ಯ		
26	ಶ್ರೀ ನರಸಿಂಹರಾಜ ಕರ್ನಾಟಕ-ಛಂದೋರಾಜಂ	ಜೆ. ರಘುಪತ್ಯಾಚಾರ್ಯ	1926	
27	‡ಷಟ್ಪದಿ ವಂಶ ವಿಕಾಸ	ಬಸವಪ್ಪ ಚೆನ್ನಪ್ಪ ಪಟ್ಟೇದ	1952	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
3	**ವ್ಯಾಕರಣ**			
1	‡ಆಲೋಕ	ಎಚ್. ಎಸ್. ಬಿಳಿಗಿರಿ	?	
2	ಕವಿರಾಜ ಮಾರ್ಗ : ಕೆಲವು ವ್ಯಾಕರಣಾಂಶಗಳು	ಶ್ರೀವಿಜಯ	ಸು. 860	
3	‡ಕರ್ಣಾಟಕ ವ್ಯಾಕರಣೋಪನ್ಯಾಸ ಮಂಜರಿ	ಆರ್. ರಘುನಾಥ ರಾವ್ (ಮ. ಸು. 1924)	1894	
4	‡ಕನ್ನಡ ವ್ಯಾಕರಣ ಸಾರವು	ಸಿ. ಕ್ಯಾಂಬೆಲ್	1849	
5	‡ಕನ್ನಡ ಬಾಲವ್ಯಾಕರಣ	ಜೆ. ಕಾಯಿಜ್	1868	
6	‡ಕನ್ನಡ ಕೈಪಿಡಿ	ಧೋಂಡೋ ನರಸಿಂಹ ಮುಳಬಾಗಿಲ (1848–1898)	1890	
7	‡ಕನ್ನಡ ಮಧ್ಯಮ ವ್ಯಾಕರಣ	ತೀ. ನಂ. ಶ್ರೀಕಂಠಯ್ಯ		
8	ಕರ್ಣಾಟಕ ವಾಗ್ವಿಧಾಯಿನಿ	ಮ· ರಾಮಸ್ವಾಮಿ ಶಾಸ್ತ್ರೀ	1890	
9	ಕನ್ನಡ ವಚನ ಕೌಮುದಿ	ಸಂಜೀವ ರಾಮ ಕೃಷ್ಣಯ್ಯ	1885	
10	ಕನ್ನಡ ಕೈಪಿಡಿ ಎಂಬ ಕನ್ನಡ ವ್ಯಾಕರಣ	(ಸಂ) ಸೇಡಿಯಾಪು ಕೃಷ್ಣಭಟ್ಟ	1891	
11	ಕನ್ನಡ ವ್ಯಾಕರಣ ಸಂಗ್ರಹವು	Bangalore School Book Society	1841	
12	ಧಾತು ಮಂಜರಿ	ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ	1882	ನೋಡಿ : ಗ್ರಂಥ ಕರ್ತರ ಚರಿತ್ರಕೋಶ
13	‡ನುಡಿಗಟ್ಟು ಎಂಬ ಹೊಸಗನ್ನಡ ಸಂಕ್ಷಿಪ್ತ ವ್ಯಾಕರಣವು	ಧೋಂಡೋ ನರಸಿಂಹ ಮುಳಬಾಗಿಲ	1890	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
14	ಪದ್ಯ ಕಾವ್ಯ ವ್ಯಾಕರಣ (ಕಂದ ಪದ್ಯ)	ಮುನಿಷಿ ಶ್ರೀನಿವಾಸಯ್ಯ	1867	
15	ಪದ್ಯ ಕಾವ್ಯ ವ್ಯಾಕರಣ	ವರದರಾಜ-ಯ್ಯಂಗಾರ್ (ಮುನಷಿ ಶ್ರೀನಿವಾಸಯ್ಯ : ಗದ್ಯದಲ್ಲಿ ಟಿಪ್ಪಣಿ)	1867	
16	‡ಭಾಷಾಭೂಷಣ	೩ನೆಯ ನಾಗವರ್ಮ	ಸು. 1050	
17	‡ವರ್ಣನಾತ್ಮಕ ವ್ಯಾಕರಣ	ಎಚ್. ಎಸ್. ಬಿಳಿಗಿರಿ	1971	
18	ವ್ಯಾಕರಣ	ನಯಸೇನ	?	
19	‡ವ್ಯಾಕರಣ ಸಂಗ್ರಹಂ	ಹೆಸರಘಟ್ಟದ ಹೊನ್ನಪ್ಪ	1890	
20	ವ್ಯಾಕರಣ ಸಂಗ್ರಹವೆಂಬ ಹೊಸಗನ್ನಡ ವ್ಯಾಕರಣವು	ಪುಟ್ಟಪರ್ತಿ ಶೇಷಾಚಾರ್ಯ	1897	3ನೆಯ ಆವೃತ್ತಿ
21	ಶಬ್ದಸ್ಮೃತಿ	೩ನೆಯ ನಾಗವರ್ಮ	ಸು. 1050	
22	‡ಶಬ್ದಮಣಿದರ್ಪಣ	ಕೇಶಿರಾಜ		
	i) ವ್ಯಾಖ್ಯಾನ	ನಿಟ್ಟೂರು ನಂಜಯ್ಯ		
	ii) ,,	ಲಿಂಗಣಾರಾಧ್ಯ		
23	ಶಬ್ದಾನುಶಾಸನ	ಭಟ್ಟಾಕಲಂಕ	1604	
24	ಶಬ್ದಮಂಜರಿ	ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ	1882	ನೋಡಿ ಗ್ರಂಥ ಕರ್ತರಚರಿತ್ರಕೋಶ
25	‡ಶಬ್ದಾನುಶಾಸನ ಪ್ರಕಾಶಿಕೆ	ಕುಂಡಲ ಗಿರಿಯಾಚಾರ್ಯ (1865-1904)	1905 (?)	
26	ಶಬ್ದಾದರ್ಶ	ಬಿ. ಮಲ್ಲಪ್ಪ (1832-1907)	1897	ಪ್ರಥಮ ಮುದ್ರಣ
27	‡ಶಬ್ದಮಣಿದರ್ಪಣ ಸಂಗ್ರಹ	ಎಸ್. ಆರ್. ಮಳಗಿ	1970	
28	,,	ಎಂ. ಎಂ. ಕಲಬುರ್ಗಿ	1974	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ ಮುಂತಾದ ವಿವರಗಳು
29	‡ಶಬ್ದಮಣಿದರ್ಪಣ ಸಂಗ್ರಹ	ಎಂ. ದೊಡ್ಡ ಸ್ವಾಮಿ	1973	
30	‡ಸಂಕ್ಷೇಪ ವ್ಯಾಕರಣ ಸೂತ್ರಗಳು	ರೆವರೆಂಡ್ ಜಾರ್ಜ್ ಫರ್ಡಿನೆಂಡ್ ಕಿಟೆಲ್ (1832–1903)	1866	
31	‡ಸಂಸ್ಕೃತ-ಕನ್ನಡ ಶಬ್ದ ವ್ಯುತ್ಪತ್ತಿ	ಪಾಂಡುರಂಗ ಪೇಟಕರ (1851–1879)		
32	ಸಂಸ್ಕೃತ-ಕನ್ನಡ ಶಬ್ದ ವ್ಯುತ್ಪತ್ತಿ	ಚಿಂತಾಮಣಿ ಪೇಠಕರ ಪಾಂಡುರಂಗ ವೆಂಕಟೇಶ	1880	
33	ಹಳಗನ್ನಡ ನುಡಿಗನ್ನಡಿ	ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ	1882	ನೋಡಿ : ಗ್ರಂಥ ಕರ್ತರ ಚರಿತ್ರಕೋಶ
34	‡ಹಳಗನ್ನಡ ವ್ಯಾಕರಣ ಸೂತ್ರಗಳು	ರೆವರೆಂಡ್ ಜಾರ್ಜ್ ಫರ್ಡಿನೆಂಡ್ ಕಿಟೆಲ್	1866	
35	‡ಹಳಗನ್ನಡ ವ್ಯಾಕರಣ (ಕನ್ನಡ ಕೈಪಿಡಿಯ ಮೊದಲ ಭಾಗ)	ಟಿ. ಶ್ರೀನಿವಾಸ ರಾಘವಾಚಾರ್ಯ ಬಿ. ಕೃಷ್ಣಪ್ಪ	1927	
36	‡ಹೊಸಗನ್ನಡ ನುಡಿ ಗನ್ನಡಿ	ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ	1882	ನೋಡಿ : ಗ್ರಂಥ ಕರ್ತರ ಚರಿತ್ರಕೋಶ
37	A Grammar of the Karnata Language	(Willum barey)	1817	ಕಲ್ಕತ್ತಾದ ಸೆರಾಂ ಪೂರ್ ಪ್ರೆಸ್ಸಿನಲ್ಲಿ ಮುದ್ರಿತ. ಕನ್ನಡದಲ್ಲಿ ಮೊತ್ತಮೊದಲು ಅಚ್ಚಾದ ಗ್ರಂಥ
38	‡A Grammar of the Kannada Language	ರೆವಿರೆಂಡ್ ಜಾರ್ಜ್ ಫರ್ಡಿನೆಂಡ್ ಕಿಟೆಲ್ (1832-1903)	1866	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
39	Grammar of Karnataka Language	ಜಾನ್ ಮೆಕೆರೆಲ್	1820	ಉದಾಹರಣೆಗಳು ಕನ್ನಡ ಲಿಪಿ
40	Elementary Grammar of the Kannada Language	Thomas Hudson	1859	

4 ಭಾಷಾಚರಿತ್ರೆ

1	ಕನ್ನಡ ಭಾಷಾ ಚರಿತ್ರೆ (ಕನ್ನಡ ಕೈಪಿಡಿಯ ನಾಲ್ಕನೆಯ ಭಾಗ)	ಟಿ. ಎಸ್. ವೆಂಕಣ್ಣಯ್ಯ	1936	
2	Comparitive Grammar of the Dravidian Languages	Cald well	Dates ?	
3	Grammar of old Kannada Inscriptions	A. N. Narasimhaiah	Dates ?	
4	Grammar of old Kannada Inscriptions	G. S. Gai		

5 ನಿಘಂಟು

1	‡ಅಭಿಧಾನ ವಸ್ತುಕೋಶ	2ನೆಯ ನಾಗವರ್ಮ	ಸು. 1050	
2	‡ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ	2ನೆಯ ನಾಗವರ್ಮ	ಸು. 1050	
3	ಅಕಾರಾದಿ ವೈದ್ಯ ನಿಘಂಟು	ಅಮೃತ ನಂದಿ	ಸು. 1050	
4	‡ಅಭಿನವ ಮಂಗಾಭಿಧಾನ	ಅಭಿನವ ಮಂಗರಾಜ (2ನೆಯ) ಮಂಗರಸ	1398	ಪ್ರ. 1952
5	ಅಕ್ಷರಾದಿ ನಿಘಂಟು	ಶಾಲ್ಯದ ಕೃಷ್ಣರಾಜ	1748	
6	ಅಕಾರಾದಿ ನಿಘಂಟು	ಲಕ್ಷ್ಮಣ ಪಂಡಿತ	1775	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
7	‡ಅಮರಕೋಶವೆಂಬ ನಾಮಲಿಂಗಾನು ಶಾಸನ	ಸಂ : ಲ್ಯೂಯಿ ರೈಸ್	ಸು. 500	ಪ್ರ. 1883
8	ಅಮರಕೋಶ (ಕನ್ನಡ ಟೀಕೆ)	ಚಿಂತಕುಂಟಿ ಚೇಲಮಯ್ಯ ಮತ್ತು ಮಹಾದೇವಪ್ಪ	1851	ವಿಶೇಷ: ಅಚ್ಚಿನಲಿಪಿ ಕನ್ನಡ-ತೆಲುಗು ರೂಪಗಳಿಗೆ ಮಧ್ಯಸ್ಥ
9	ಇಂದ್ರ ದೀಪಿಕಾ ನಿಘಂಟು	ಕರ್ತೃ ತಿಳಿಯದು	?	ಅಚ್ಚಾಗಿಲ್ಲ
10	ಏಕಾಕ್ಷರ ನಿಘಂಟು	ಕರ್ತೃ ತಿಳಿಯದು	?	ಅಚ್ಚಾಗಿಲ್ಲ
11	‡ಕರ್ಣಾಟಕ ಶಬ್ದಸಾರ	ಕರ್ತೃ ತಿಳಿಯದು	ಸು. 1400	
12	‡ಕರ್ಣಾಟಕ ನಿಘಂಟು	ಕರ್ತೃ ತಿಳಿಯದು	ಸು. 1400	
13	‡ಕಬ್ಬಿಗರ ಕೈಪಿಡಿ	ಲಿಂಗಮಂತ್ರಿ	1530	ಪ್ರ. ಕರ್ನಾಟಕ ಕಾವ್ಯಮಂಜರಿ 1893
14	ಕರ್ನಾಟಕ ಶಬ್ದಮಂಜರಿ	ವಿರಕ್ತ ತೋಂಟದಾರ್ಯ	1560	
15	‡ಕರ್ಣಾಟಕ ಸಂಜೀವನ	ಶೃಂಗಾರ ಕವಿ	ಸು. 1600	
16	‡ಕವಿ ಕಂಠಹಾರ	ಸೂರ್ಯ ಕವಿ	1640	
17	ಕನ್ನಡ-ಕನ್ನಡ ನಿಘಂಟು		1890	
18	‡ಕನ್ನಡ-ಇಂಗ್ಲೀಷ್ ನಿಘಂಟು	ರೆ॥ ರೀವ್	1824	ಕಲ್ಲಚ್ಚಿನಲ್ಲಿ ಮುದ್ರಿತ
19	‡ಕನ್ನಡ-ಇಂಗ್ಲೀಷ್ ನಿಘಂಟು	ರೆ॥ ರೀವ್	1832	
20	ಕನ್ನಡ-ಇಂಗ್ಲೀಷ್ ನಿಘಂಟು	ಡ್ಯಾನಿಯಲ್ ಸ್ಯಾಂಡರ್‌ಸನ್	1858	
21	‡ಕನ್ನಡ-ಇಂಗ್ಲೀಷ್ ನಿಘಂಟು	ಜಾನ್ ಗ್ಯಾರೆಟ್	1871	
22	‡ಕರ್ನಾಟಕ ಶಬ್ದಕಲ್ಪ ದ್ರುಮ	ರಾಮಸ್ವಾಮಿ ಶಾಸ್ತ್ರೀ ಮತ್ತು ಹೆಸರುಘಟ್ಟದ ಹೊನ್ನಪ್ಪ	1885	
23	‡ಕರ್ಣಾಟ ಭಾಷಾಕರಂ	ಜಯರಾಯಾಚಾರ್ಯ	1891	
24	‡ಕನ್ನಡ-ಇಂಗ್ಲೀಷ್ ನಿಘಂಟು	ರೆ॥ ಎಫ್. ಕಿಟೆಲ್	1893	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
25	‡ಕಾಶಕೃತ್ಸ್ನ ಶಬ್ದಕಲಾಪ ಧಾತುವ್ಯಾಖ್ಯಾ	ಕವಿ ಚೆನ್ನವೀರ	ಸು. 1500	
26	‡ಕಿಸಂಪಾರ್ ಗ್ಲಾಸರಿ	ನರಸಿಂಗರಾವ್	1891	
27	ಕೋಶ ಪ್ರತಿ ಕೋಶದ ನಿಘಂಟು	ಕರ್ತೃ ತಿಳಿಯದು	?	ಅಚ್ಚಾಗಿಲ್ಲ
28	ಗಣಿತೋದ್ಭವ ವರ್ಗಕೋಶ	ಶಿವಯೋಗಿ ಶ್ರೀ ಮತ್ಸತ್ಯಾಶ್ರಮಿ ಸಾಧು	1890	ಮಾದರಿ : ಏಕೋದೇವಃ ; ದ್ವಿತೀಯಃ ವಿಭಕ್ತಿಃ ; ಇತ್ಯಾದಿ
29	‡ಚತುರಾಸ್ಯ ನಿಘಂಟು	ಚತುರಾಸ್ಯ ಬೊಮ್ಮರಸ	ಸು. 1450	ಪ್ರ. 1893 ಕ. –ಕಾವ್ಯಮಂಜರಿ
30	‡ಚಾಮುಂಡಿಕಾ ಲಘು ನಿಘಂಟು	ಮುಮ್ಮಡಿ ಕೃಷ್ಣರಾಜ ಒಡೆಯರು	1848	
31	ತತ್ತ್ವಷಿನಯ ನಿಘಂಟು	ಕರ್ತೃ ತಿಳಿಯದು	1895	ಅಚ್ಚಾಗಿಲ್ಲ
32	ಧನಂಜಯ ನಿಘಂಟು	ಕರ್ತೃ ತಿಳಿಯದು	?	ಅಚ್ಚಾಗಿಲ್ಲ
33	‡ಧನ್ವಂತರೀಯ ನಿಘಂಟು	ಕರ್ತೃ ತಿಳಿಯದು	ಸು. 1500	
34	ಧನಂಜಯ ನಿಘಂಟು	ಕನ್ನಡ ಟೀಕೆ ; ತೋಪಿನಕೆರೆ ರಾಯಣ್ಣ	1889	
35	‡ಧಾತುಪಾಠ ; ಪ್ರಯೋಗಸಾರ ; ಱಟಿ ಕುಳ ಶಬ್ದಗಳು	ಕೇಶಿರಾಜ	1260	
36	‡ನಾಚಿರಾಜೀಯ	ನಾಚಿರಾಜ	ಸು. 1300	
37	‡ನಾನಾರ್ಥ ಕಂದ	ಚೆನ್ನಕವಿ	ಸು. 1600	ಪ್ರ. 1884
38	‡ನಾನಾರ್ಥ ರತ್ನಾಕರ (ಸಟೀಕಾ)	ದೇವೋತ್ತಮ	ಸು. 1600	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
39	ನಾನಾರ್ಥ ಶಬ್ದಾವಳಿ ಮತ್ತು ಸಂಜ್ಞಾರ್ಥಗಳು	ಬೋಳಾರ ರಾಮಕೃಷ್ಣಯ್ಯ	1895	
40	‡ಪದ್ಯ ನಾನಾರ್ಥ	ಕರ್ತೃ ತಿಳಿದಿಲ್ಲ	ಸು. 1600 ?	
41	ಮದನಾರಿ ವೈದ್ಯ ನಿಘಂಟು	ಕನ್ನಡ ಟೀಕೆ : ತೋಪಿನಕೆರೆ ರಾಯಣ್ಣ	1889	
42	‡ರನ್ನ ಕಂದ	ಕವಿ ರನ್ನ	10ನೆಯ ಶತಮಾನ	
43	ಶಬ್ದಮಂಜರಿ	ತೋಂಟದಾರ್ಯ	1540	ಟೀಕು: ಹೆಸರುಘಟ್ಟದ ಹೊನ್ನಪ್ಪ
44	‡ಶಬ್ದಾಗಮ (ಅಥವಾ ಶಬ್ದರತ್ನಾಕರ)	ಕರ್ತೃ ತಿಳಿದಿಲ್ಲ	ಸು. 1600	
45	‡ಶಬ್ದಾರ್ಥ ಮಂಜರಿ	ಚಂದ್ರಸಾಗರ ವರ್ಣಿ	1810	
46	ಶಬ್ದ ಮಂಜರಿ	ಕೃಷ್ಣಮಾಚಾರ್ಯ	1830	ಈ ಕೃತಿ ದೊರಕಿಲ್ಲ
47	‡ಶಬ್ದ ಸಂಗ್ರಹವು	ಗುರುರಾವ್ ವಿಠಲ	1874	
48	‡ಶಬ್ದ ಮಂಜರಿ	ಗಂಗಾಧರ ಮಡಿವಾಳೇಶ್ವರ ತುರಮರಿ	1869	
49	ಶಬ್ದಮಂಜರಿ ಕೋಶವು			

ಈಚಿನ ಕೆಲವು ನಿಘಂಟುಗಳು

50	ಊಟ ಕುಳ ನಿಘಂಟು	ಕನ್ನಡ ಸಾಹಿತ್ಯ ಪರಿಷತ್ತು ರಚಿಸಿದ್ದು	1930	ಅಪ್ರಕಟಿತ
51	‡ಔಷಧಿ ಕೋಶಂ	ಸಂ॥ ಎ. ವೆಂಕಟ-ರಾವ್ ಎಚ್. ಶೇಷ-ಅಯ್ಯಂಗಾರ್	1940	
52	ಕನ್ನಡ ನಿಘಂಟುಗಳ ನಿಘಂಟು	ಕನ್ನಡ ಸಾಹಿತ್ಯ ಪರಿಷತ್ತು ರಚಿಸಿದ್ದು	1930	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
53	‡ಕನ್ನಡ ನಿಘಂಟು	ಮಚ್ಚಿಮಲೆ ಶಂಕರ ನಾರಾಯಣರಾವ್	1951	
54	‡ಕನ್ನಡ-ಕನ್ನಡ ಶಬ್ದಕೋಶ	ಎಚ್. ವಿ. ರಮಾ ಕಾಂತರಾವ್	1952	
55	,,	ಗುರುನಾಥ ಜೋಶಿ ಮತ್ತು ಜಿ. ಅಶ್ವತ್ಥ ನಾರಾಯಣರಾವ್		
56	‡ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು			(ಪೂರ್ತಿಯಾಗಿ ಸಿದ್ಧವಾಗಿ, ಪ್ರಕಟವಾಗಿಲ್ಲ. ಈವರೆಗೆ.. ಭಾಗಗಳು ಮಾತ್ರ ಪ್ರಕಟವಾಗಿವೆ.)
57	ಕರ್ಣಾಟಕ ಶಬ್ದ ರತ್ನಾಕರ	ನರಸಿಂಹ ಶಾಸ್ತ್ರಿ ಕೊಳನಾಡು, ವಿಟ್ಲ	1950	ಹ. ಪ್ರ. ಕ. ಸಾ. ಪರಿಷತ್ತು
58	‡ಕನ್ನಡ ಜಾನಪದ ಶಬ್ದ ಕೋಶ	ಸಂ. ಬಿ. ಎಸ್. ಗದ್ದಗೀ ಮಠ	1956	
59	‡ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು	ಆರ್. ಎಸ್. ರಾಮ ರಾವ್	1960	
60	ಕನ್ನಡ ಸಮಾನಾರ್ಥ ಕೋಶ	ಜಿ. ಎಂ. ಹನ ಸೋಗೆ	1974	
61	‡ಕುಮಾರವ್ಯಾಸ ಭಾರತ ನಿಘಂಟು	ಎಸ್. ಕೆ .ಕುಲಕರ್ಣಿ		
62	ಜಗನ್ನಾಥ ವಿಜಯದ ನಿಘಂಟು	ಸೋ. ಅಯ್ಯಶಾಸ್ತ್ರಿ	1854	ಹ. ಪ್ರ. ಕ.ಸಾ. ಪರಿಷತ್ತು
63	ತಿರುಮಕೂಡಲು ಶಾಮಣ್ಣನವರ ನಿಘಂಟು		1920	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿದೆ
64	ಪಂಡಿತ ಪ್ರಭಣ್ಣನವರ ನಿಘಂಟು		ಸು. 1929	
65	ಪಂಡಿತ ನಿಘಂಟು -	ವಿ. ಡಿ. ಪಂಡಿತ್	1913	
66	‡ಪಂಪಭಾರತದ ನಿಘಂಟು			ಕ. ಸಾ. ಪರಿಷತ್ತು
67	‡ಪಂಪರಾಮಾಯಣ ನಿಘಂಟು			,,

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
68	ಮಠದ ರುದ್ರಯ್ಯನವರ ನಿಘಂಟು		1918	ಕ. ಸಾ. ಪ. ನಲ್ಲಿದೆ ಪ್ರಕಟವಾಗಿಲ್ಲ
69	ಶಬ್ದಾರ್ಥ ಸಂಗ್ರಹ	ಟಿ. ಕೆ. ಅನಂತ ನಾರಾಯಣ	1933	ಹಸ್ತಪ್ರತಿ : ಕ.ಸಾ. ಪರಿಷತ್ತು
70	‡ಶಿವಾನುಭವ ಶಬ್ದ ಕೋಶ	ಫ. ಗು. ಹಳಕಟ್ಟಿ	1943	
71	‡ಶ್ರೀ ಕೃಷ್ಣರಾಜ ಕರ್ಣಾಟ ಭಾಷಾರತ್ನಾಕರಂ	ರಘುಪತ್ಯಾಚಾರ್ಯ	1923	
72	ಷಟ್ಪದೀ ಕಾವ್ಯಗಳ ನಿಘಂಟು	ಕನ್ನಡ ಸಾಹಿತ್ಯ ಪರಿಷತ್ತು ರಚಿಸಿದ್ದು	1930	ಅಪ್ರಕಟಿತ
73	‡ಸಮಯ ಸಂಜೀವಿನೀ	ರಾಮಾಭಾರ್ಯ ; ತುಪಾಕಿ ಸುಬ್ಬಣ್ಣಾ ಚಾರ್ಯ	1889	(ಸಮಾನಾರ್ಥಕ ನಾನಾರ್ಥಕ ಶಬ್ದಗಳು)
74	‡ಸಚಿತ್ರ ಕನ್ನಡ-ಕನ್ನಡ ಕಸ್ತೂರಿ ಕೋಶ	ಪಂಡಿತ. ಜಿ. ಎ. ಕವಲಿ	1957	
75	‡ಸಿರಿಗನ್ನಡ ಅರ್ಥಕೋಶ	ಶಿವರಾಮ ಕಾರಂತ	1940	

[ಮೇಲ್ಕಂಡ ಪಟ್ಟಿಯಲ್ಲಿ ಇಂಗ್ಲೀಷ್-ಕನ್ನಡ, ಸಂಸ್ಕೃತ-ಕನ್ನಡ, ಹಿಂದಿ-ಕನ್ನಡ, ಮುಂತಾದ ಅನ್ಯಭಾಷಾ ಕನ್ನಡ ನಿಘಂಟುಗಳನ್ನು ಸೇರಿಸಿಲ್ಲ.]

6 ವೈದ್ಯಶಾಸ್ತ್ರ

೧ ಸಾಮಾನ್ಯ

1	ಕಲ್ಯಾಣಕಾರಕ	ಜಗದ್ದಳ ಸೋಮನಾಥ	1175	
2	ಗಂಧಕ ತೈಲಾದಿ ಪ್ರಯೋಗಗಳು	??	??	
3	ದೇವರ ವೈದ್ಯ (ಸರಳ ಗದ್ಯ)			
4	ಬಾಹಟೋಕ್ತಗಣಪಾಠ (ಶ್ಲೋಕ-ಟೀಕು)	??	??	
5	ಮೂತ್ರರೋಗದ ಔಷಧಿ	??	??	
6	ವೈದ್ಯ ಸಾಂಗತ್ಯ	ಸಾಳ್ವ	1550	
7	ವೈದ್ಯ ಶಾಸ್ತ್ರ	ಅಜ್ಞಾತ	1500	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
8	‡ವೈದ್ಯಸಾರ ಸಂಗ್ರಹ	ಚೆನ್ನರಾಜ (ದೊರೆಯ ಹೆಸರಿನಲ್ಲಿ: ಲೇಖಕ-ಯಳಂದೂರು ನರಸಿಂಹಶಾಸ್ತ್ರೀ)	1570	
9	ವೈದ್ಯ ಚಿಂತಾಮಣಿ (ಕನ್ನಡ ಭಾಷ್ಯ)	ವಲ್ಲಭೇಂದ್ರ (ಅಮರೇಶ್ವರನ ಮಗ)		
10	ವೈದ್ಯ ಸಂಹಿತಾರ್ಣವ	ವೀರರಾಜ	1720	
11	ವೈದ್ಯಕಂದ	ಬ್ರಹ್ಮ (ಬೊಮ್ಮಯ್ಯ)	1720	
12	ವೈದ್ಯಸಾರ (ಗದ್ಯ)			
13	ವೈದ್ಯ ನಿಘಂಟು (ಔಷಧಿಗಳ ತಯಾರಿಕೆಯ ವಿಧಾನಗಳು)	??	??	
14	ವೈದ್ಯಾಮೃತ	ಶ್ರೀಧರ ದೇವ	1500	
೨	ವಿಷ ವೈದ್ಯ			
15	‡ಖಗೇಂದ್ರ ಮಣಿದರ್ಪಣ	ಮಂಗರಾಜ I	1360	
16	ವಿಷ ಚಿಕಿತ್ಸೆ			ಹಸ್ತಪ್ರತಿ ಲಿಖಿತವಾದ ಕಾಲ. 1892
೩.	ಸ್ತ್ರೀ ವೈದ್ಯ			
17	ಸ್ತ್ರೀ ವೈದ್ಯ	ತಿಮ್ಮರಾಜ ಗೌಡ	1750	
೪	ಬಾಲವೈದ್ಯ			
18	ಬಾಲಗ್ರಹ ಚಿಕಿತ್ಸೆ			
19	ಬಾಲ ಚಿಕಿತ್ಸೆ			
20	ಮಕ್ಕಳ ಚಿಕಿತ್ಸೆ ಮತ್ತು ಮಂತ್ರೌಷಧ ಸಂಗ್ರಹ			
೫.	ವ್ರಣ ವೈದ್ಯ			
21	ವ್ರಣ ಚಿಕಿತ್ಸೆ (ಗದ್ಯ)			
೬.	ಯಂತ್ರ ಮಂತ್ರ ಚಿಕಿತ್ಸೆ			

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
೭.	ಗಜಶಾಸ್ತ್ರ-ಗಜವೈದ್ಯ			
22	ಗಜಾಷ್ಟಕ	ಸೈಗೊಟ್ಟ ಶಿವಮಾರ	ಸು. 800	ಉಲ್ಲೇಖ ಮಾತ್ರ
23	ಹಸ್ತ್ಯಾಯುರ್ವೇದ	ವೀರಭದ್ರರಾಜ	ಸು. 1600	
೮.	ಅಶ್ವಶಾಸ್ತ್ರ-ಅಶ್ವವೈದ್ಯ			
24	‡ಅಶ್ವವೈದ್ಯ	ಅಭಿನವಚಂದ್ರ		
25	,,	ಬಾಚರಸ	1500	
26	ಹಯಶಾಸ್ತ್ರ	ರಾಮಚಂದ್ರ	1625	
27	ಹಯಸಾರ ಸಮುಚ್ಚಯ	ಪದ್ಮಣ ಪಂಡಿತ	1627	
೯.	ಗೋವೈದ್ಯ			
28	ಗೋವೈದ್ಯ	ಕೀರ್ತಿವರ್ಮ	1175	
೭.	ಪಾಕಶಾಸ್ತ್ರ			
1	ಪಾಕಶಾಸ್ತ್ರ (ಗದ್ಯ)	ಭೀಮಸೇನ	?	
2	‡ಸೂಪಶಾಸ್ತ್ರ	,,	?	
3	ಸೂಪಶಾಸ್ತ್ರದ ಟೀಕು	,,	?	
4	‡ಸೂಪಶಾಸ್ತ್ರ	ಮಂಗರಸ III	1508	
೮.	ಗಣಿತ ಶಾಸ್ತ್ರ			
1	ಕನ್ನಡ ಲೀಲಾವತಿ (ಕ್ಷೇತ್ರ ಗಣಿತ)	ಬಾಲ ವೈದ್ಯದ ಚೆಲುವ		
2	ಕೇಶವನ ಗಣಿತ	—		
3	ಗಣಿತ ಸಾರ	ಸಿಂಹರಾಜ	1650	
4	ಭಾಸ್ಕರ ಗಣಿತ	—		
5	ಬೇಹಾರ ಗಣಿತ	ಭಾಸ್ಕರ		
6	ಮಹಾವೀರಾಚಾರ್ಯನ ಗಣಿತಕ್ಕೆ-ಟೀಕೆ	ದೈವಜ್ಞವಲ್ಲಭ	1700	
7	‡ವ್ಯವಹಾರ ಗಣಿತ, ಕ್ಷೇತ್ರ ಗಣಿತ, ಲೀಲಾವತಿ, ಮುತ್ತಿನ ಚಿಪ್ಪಿನ ಗಣಿತ, ಮುಂ,	ರಾಜಾದಿತ್ಯ	1190	
8	ಕ್ಷೇತ್ರ ಗಣಿತ	ತಿಮ್ಮರಸ	1700	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ. ಮುಂತಾದ ವಿವರಗಳು
೯ ಜ್ಯೋತಿಷ				
೧ ಸಾಮಾನ್ಯ				
1	ಅಬ್ಧಿಕಲ್ಪ			
2	ಅಕ್ಷರ ಕೇವಲಿ ನಿಮಿತ್ತ (ಗದ್ಯ)			
3	ಅದ್ಭುತ ಕಾಲಜ್ಞಾನವು	ಸಿದ್ಧಸಂಜೀಶ (ಸಂ) ಸಿದ್ಧಾಂತಿ ಶಿವಬಸವಶಾಸ್ತ್ರಿ	1926	
4	ಕೃಷ್ಣಮಿಶ್ರೀಯ ದಶಾ ಭುಕ್ತಿನಿರ್ಣಯ	ಸಂಸ್ಕೃತಮೂಲ ಕನ್ನಡಟೀಕೆ		
5	ಕುರುಬ ರಟ್ಟ ಸೂತ್ರವು	ರಟ್ಟಕವಿ (ಸಂ) ಅಬಾಜಿ ರಾಮ-ಚಂದ್ರ ಸಾವಂತ	1897	
6	ಜಾತಕ ತಿಲಕ	ಶ್ರೀಧರಾಚಾರ್ಯ	1049	
7	ಜಾತಕ ಫಲ ವಿವರ			ಭಾಮಿನಿ ಷಟ್ಪದಿ
8	ಜ್ಯೋತಿಷ-ಚಂಪೂ (ನರಪಿಂಗಲೀಯ ನಿಮಿತ್ತ)			
9	ಜ್ಯೋತಿಷ್ಯ ರಟ್ಟಶಾಸ್ತ್ರ	(ಸಂ) ಕರಿಬಸಯ್ಯ ಸೋಮಯ್ಯ, ಸಂಸ್ಕೃತಮೂಲ, ಕನ್ನಡ ಅನುವಾದ		ವಿಚಾರ ಷಟ್ಪದಿ ಮಳೆಯ ವಿಚಾರ
10	ದಿವಾಕರ ಪದ್ಧತಿ ಪ್ರದೀಪಿಕಾ (ಶ್ಲೋಕ-ಟೀಕು)	ತಿಮ್ಮಾರಾಯ		
11	ನರ ಪಿಂಗಲಿ	ಮಾಧವ ದೇವ	1450	
12	,, (ಟೀಕೆ)			
13	,, (ಶಕುನವು)	(ಸಂ) ತೋಟದ ಕೆರೆರಾಮಣ್ಣ	1887	
14	‡ನಕ್ಷತ್ರ ಚೂಡಾಮಣಿ (ಗದ್ಯ)	(ಟೀಕೆ) ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ	1923	(ಬಾನ ನಕ್ಷತ್ರಗಳ ಋತುಮತಿ ವಿಚಾರ)

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
15	ಪಂಚದಶ ಮುಹೂರ್ತ (ಕಂದ)			
16	ಪ್ರತಿಭಾಗೀ (ಕನ್ನಡ ವ್ಯಾಖ್ಯಾನ) (ಶ್ಲೋಕ-ಟೀಕು)			(ಕರಣ ಗ್ರಂಥ : ಪಂಚಾಂಗ ಮಾಡುವ ಕ್ರಮ)
17	‡ಬೃಹಜ್ಜಾತಕ ಟೀಕೆ	ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ	1914	
18	ಮಾರ್ಕಂಡೇಯ ಜ್ಯೋತಿಷ ಪುರಾಣ	ಬೇಟೆರಾಯ	1750	
19	ಮೇಘಮಾಲಾ	ಸಂ. ಬಾದಾಮಿ ಕೆ. ಲಿಂಗೋಪಂತ್		ಪರ್ಜನ್ಯವಿಷಯ ಅಪೂರ್ವ ಪ್ರಾಚೀನ ಗ್ರಂಥವು
20	‡ರಟ್ಟಮತ	ಅರ್ಹದ್ದಾಸ	1300	
21	ರಟ್ಟನ ಜಾತಕ		1600	
22	‡ರಮಲ ಶಾಸ್ತ್ರ	ಬಾಲಕೃಷ್ಣ ಮಲ್ಹಾರಲಾಡ	1897	ಜಾತಕರಚನೆಗೆ ಅನುಕೂಲವಾದ ಜ್ಯೋತಿಷ ವಿಷಯಗಳು
23	ಲಘುಲಂಪಾಕ ಗ್ರಂಥ	ಎಸ್. ರಾಮಸ್ವಾಮಿ ಶಾಸ್ತ್ರಿ	1892	ಸಂಕೀರ್ಣ ಜ್ಯೋತಿಷ ವಿಚಾರಗಳು
24	ವಿದ್ಯಾ ಮಾಧವೀಯ (ಸಟೀಕು)			ಸಂಸ್ಕೃತಮುಹೂರ್ತ ಶಾಸ್ತ್ರದ ಕನ್ನಡ ಟೀಕೆ

2 ಪ್ರಶ್ನ ಜ್ಯೋತಿಷ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
1	‡ಕೇರಳ ಪ್ರಶ್ನ ಗ್ರಂಥ ಸಂಸ್ಕೃತ	ಸಿದ್ಧಾಂತಿ ಶಿವಶಂಕರಶಾಸ್ತ್ರಿ –(ಕನ್ನಡ ತಾತ್ಪರ್ಯ)	1883	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
2	ಜಿನೇಂದ್ರಮಾಲಾ (ಪ್ರಶ್ನಶಾಸ್ತ್ರ)			
3	ನಂದಿಕೇಶ್ವರ ಅಕ್ಷರ ಪ್ರಶ್ನೆ (ಗದ್ಯ)			
4	ಪ್ರಶ್ನ ಚಿಂತಾಮಣಿ (ಶ್ಲೋಕ-ಟೀಕು ವಚನ)			
	3 ಸಾಮುದ್ರಿಕ			
1	ಸಾಮುದ್ರಿಕ ಲಕ್ಷಣ (ಗದ್ಯ)		1600	
2	‡ಸಾಮುದ್ರಿಕ ಶಾಸ್ತ್ರ	ಸಿದ್ಧಾಂತಿ ಶಿವಶಂಕರಶಾಸ್ತ್ರಿ	1883	ಹರಗೌರೀ ಸಾಮುದ್ರಿಕ, ವರಾಹ ಮಿಹಿರ ಸಾಮುದ್ರಿಕ ಗರ್ಗಸಾಮುದ್ರಿಕ
3	ಸಾಮುದ್ರಿಕ ಶಾಸ್ತ್ರ ಸಾರ ಸಂಗ್ರಹ	ರಾಮಸೂರಿ (?)		
	4 ಶಕುನಶಾಸ್ತ್ರ			
1	ಪಂಚ ಪಕ್ಷಿಯ ಶಕುನ			
2	‡ಪಂಚ ಪಕ್ಷಿ ಪ್ರಶ್ನಶಾಸ್ತ್ರ	ದೊರೆಸ್ವಾಮಯ್ಯ	1895	
3	ಶಕುನ ಸಾರ	ಲಕ್ಷ್ಮಣಾಂಕ	1500	
4	ಶಕುನ ಪ್ರಪಂಚ	ಚಾಕರಾಜ	1500	
5	ಶಕುನಗಳು		1600	
	5 ನಾಡೀಶಾಸ್ತ್ರ			
1	ನಾಡೀಸ್ವರ ಶಾಸ್ತ್ರ (ಗದ್ಯ)	ಗಿರಿಯಾಚಾರ್ಯ		ಚಂದ್ರ ಸೂರ್ಯ ನಾಡಿಗಳಿಂದ ಶುಭಾ ಶುಭಫಲ
2	ಸ್ವರ ಚಿಂತಾಮಣಿ (ಶ್ಲೋಕ-ಟೀಕು)			ಚಂದ್ರ ಸೂರ್ಯ ನಾಡಿಗಳಿಂದ ಶುಭಾ ಶುಭಫಲ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
	೯ ಸ್ವಪ್ನಫಲ			
1	‡ಸ್ವಪ್ನಫಲ ಚಿಂತಾಮಣಿ	ನಂಜುಂಡ ಶಾಸ್ತ್ರೀ		
2	‡ಸ್ವಪ್ನಫಲ ಚಿಂತಾಮಣಿ	ದೊಡ್ಡಬೆಲೆ ನಾರಾಯಣಶಾಸ್ತ್ರಿ		(ಕನ್ನಡ ಟೀಕೆ-ತಾತ್ಪರ್ಯ)
3	ಸ್ವಪ್ನಾಧ್ಯಾಯದ ಟೀಕು (ಶ್ಲೋಕ-ಟೀಕು)			
	೧೦ ಕಾಮಶಾಸ್ತ್ರ			
1	‡ಅನುಭವ ಮುಕುರ	ಜನ್ನ	1200-1230	
2	ಅಂಗಜ ಬೋಧೆ		1650	
3	ಕಕ್ಕೋಕ ಶಾಸ್ತ್ರ			
4	ಕಕ್ಕೋಕ ಶಾಸ್ತ್ರ ಟೀಕೆ		1600	
5	ಕಾಮಶಾಸ್ತ್ರ (ಗದ್ಯ)			
6	‡ಜನವಶ್ಯ	ಕಲ್ಲರಸ	1450	
7	‡ಮದನತಿಲಕ	ಚಂದ್ರರಾಜ	1079	
8	‡ಮನ್ಮಥವಿಜಯ (ಚಂಪೂ)	ಕವಿಮಲ್ಲ		ನಾಯಕ-ನಾಯಿಕಾ ವಿಚಾರ
9	ರತಿರಹಸ್ಯದ ಟೀಕು			
	೧೧. ಜ್ಞಾನಕೋಶ			
1	‡ಲೋಕೋಪಕಾರ	ಚಾವುಂಡರಾಯ	1025	
2	‡ವಿವೇಕ ಚಿಂತಾಮಣಿ	ನಿಜಗುಣಶಿವಯೋಗಿ	1500	
3	‡ಸಿರಿಭೂವಲಯ	ಕುಮುದೇಂದು (ಸಂ) ಕರ್ಲಮಂಗಲ ಶ್ರೀಕಂಠಯ್ಯ	ಸು 1200–1300	ಭಾಗಗಳು 1-2 ಪ್ರಕಟಿತ
	೧೨. ಸಂಕೀರ್ಣ (ಇತರ ಕೆಲವು ಶಾಸ್ತ್ರಗಳು)			
1	ಅಮರಕೋಶಕ್ಕೆ ವ್ಯಾಖ್ಯಾನ			
2	ಅಮರಕೋಶ ಟೀಕೆ	ಲಕ್ಷ್ಮಣಶಾಸ್ತ್ರಿ		
3	ಖಡ್ಗಶಾಸ್ತ್ರ (ಮಲ್ಲವಿದ್ಯೆ, ಧನುರ್ವಿದ್ಯೆ, ಕತ್ತಿವರಿಸೆ, ಇತ್ಯಾದಿ)–(ಶ್ಲೋಕ ಟೀಕು)			

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
4	ಖಡ್ಗ ಶಾಸ್ತ್ರ ಟೀಕೆ			
5	ಜಲಶಿಲ್ಪ (ಜಲವಸತಿ ಕಂಡು ರಟ್ಟ (?) ಹಿಡಿಯುವುದು)			
6	ಧನಶಿಲ್ಪ (ಗುಪ್ತನಿಧಿಯನ್ನು ಕಂಡುಹಿಡಿಯುವುದು)			
7	‡ನ್ಯಾಯದೀಪಿಕಾರತ್ನ ಟೀಕೆ	ವೇದಾಂತ ರಾಘವಾಚಾರ್ಯ		
8	‡ಭಾರತ ತಾತ್ಪರ್ಯ ಟೀಕೆ	ವಾದಿರಾಜ		
9	‡ಮುಲ್ಲಾ ಶಾಸ್ತ್ರ			
10	ಯೋಗ ತಾರಾವಳಿ			
11	‡ಯೋಗ ರತ್ನಾಕರ			
12	ರತ್ನಶಾಸ್ತ್ರ	ಬಾಲವೈದ್ಯದ ಚೆಲುವ	1715	
13	ವಾಸ್ತುಶಾಸ್ತ್ರ (ಶ್ಲೋಕ-ಟೀಕು) (ಮನೆಕಟ್ಟುವ ಲಕ್ಷಣ)			
14	ಶತಕತ್ರಯ ಟೀಕೆ			
15	‡ಶಬ್ದಮಣಿ ದರ್ಪಣ ವ್ಯಾಖ್ಯಾನ	ನಿಟ್ಟೂರು ನಂಜಯ್ಯ		
16	‡ಶಬ್ದಮಣಿ ದರ್ಪಣ ವಾಖ್ಯಾನ	ಲಿಂಗಣಾರ್ಯ		
17	ಶಾಬರ ಮಂತ್ರ (ಯಂತ್ರ-ಮಂತ್ರಾದಿಗಳು)	?		
18	‡ಸೌಂದರ್ಯಲಹರಿಯ ಟೀಕೆ	ಜಕ್ಕಣಾಮಾತ್ಯ	18ನೆಯ ಶತಮಾನ	
19	ಹೂಜಿ-ಬಟ್ಟಲ ಮಹತ್ವ			

13. ಸಂಗೀತ, ನಾಟ್ಯ

1	ಅಭಿಲಷಿತಾರ್ಥ ಚಿಂತಾಮಣಿ	ಸೋಮೇಶ್ವರ III	1127-1138	
2	ಕನ್ನಡ ಸಂಗೀತ ರತ್ನಾಕರ (?)	ಅಜ್ಞಾತ ಕರ್ತೃ		

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
3	ಗಾನವಿದ್ಯಾ ರಹಸ್ಯ ಪ್ರಕಾಶಿನಿ		19ನೆಯ ಶತಮಾನ	
4	ಚತುರ್ದಂಡಿ ಪ್ರಕಾಶಿಕೆ	ವೆಂಕಟಮುಖಿ	17ನೆಯ ಶತಮಾನ	
5	ಬೃಹದ್ದೇಶಿ	ಮತಂಗ (?)	ಸು. 9-10ನೆಯ ಶತಮಾನ	
6	ರಸಿಕಜನ ಮನೋಲ್ಲಾಸಿನಿ ಸಾರಸಂಗ್ರಹ (ಭರತಶಾಸ್ತ್ರ)	(ಸಂ.) ವೆಂಕಟ ಸುಂದರಾಸಾನಿ	1908	
7	ರಾಗಮಾಲಾ	ಪುಂಡರೀಕ ವಿಠಲ		
8	ರಾಗಮಂಜರೀ	,,	ಸು. 16-17ನೆಯ ಶತಮಾನ	
9	ವಿವೇಕ ಚಿಂತಾಮಣಿ (ಸಂಗೀತಕ್ಕೆ ನಾಟ್ಯಶಾಸ್ತ್ರಕ್ಕೆ ಸಂಬಂಧಪಟ್ಟ 4ನೆಯ ಅಧ್ಯಾಯ)	ನಿಜಗುಣ ಶಿವಯೋಗಿ	1500	
10	ಷಡ್‌ರಾಗ ಚಂದ್ರೋದಯ	ಪುಂಡರೀಕ ವಿಠಲ	ಸು. 16-17ನೆಯ ಶತಮಾನ	
11	ಸಂಗೀತ ರತ್ನಾಕರ	ಶಾರ್ಙ್ಗದೇವ	13ನೆಯ ಶತಮಾನ	
12	ಸಂಗೀತಸಾರ	ವಿದ್ಯಾರಣ್ಯಯತಿ	14ನೆಯ ಶತಮಾನ	
13	ಸಂಗೀತ ಕಲಾನಿಧಿ	ಕಲ್ಲಿನಾಥ	ಸು. 1440	
14	ಸಂಗೀತ ಸುಧಾ	ಗೋವಿಂದ ದೀಕ್ಷಿತ	17ನೆಯ ಶತಮಾನ	
15	ಸಂಗೀತ ಸುಬೋಧಿನಿ	ಕರಿಗಿರಿರಾಯರು	19ನೆಯ ಶತಮಾನ	
16	ಸಂಗೀತ ಸಮಯಸಾರ	ಪಾರ್ಶ್ವದೇವ	12ನೆಯ ಶತಮಾನ	
17	ಸಂಗೀತ ಚೂಡಾಮಣಿ	ಜಗದೇಕಮಲ್ಲ II,	1138-1155	
18	ಸ್ವರ ಮೇಳ ಕಳಾನಿಧಿ	ರಾಮಾಮಾತ್ಯ	ಸು. 1550	

14 ಧಾರ್ಮಿಕ-ಶಾಸ್ತ್ರ ಗ್ರಂಥಗಳು

1 ಜೈನ

1	‡ಅನುಪ್ರೇಕ್ಷೆ	ಕಲ್ಯಾಣ ಕೀರ್ತಿ	1439	
2	ಆಚಾರಸಾರ (ವ್ಯಾಖ್ಯಾನ)	ವೀರನಂದಿ		
3	‡ಕನ್ನಡ ರತ್ನ ಕರಂಡಕ (ರತ್ನತ್ರಯ ವಿಚಾರ)	ಆಯತವರ್ಮ	ಸು. 1400	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
4	ಕರ್ಮಪ್ರಕೃತಿ	ಅಜ್ಞಾತ	1400	
5	ಗದ್ಯಕಥೆ	ಕವಿ ಪರಮೇಷ್ಠಿ	ಸು. 550	ಉಲ್ಲೇಖ ಮಾತ್ರ
6	ಗೊಮ್ಮಟಸಾರ ; ಅಮಿತಗತಿ ಶ್ರಾವಕಾಚಾರಗಳಿಗೆ ಟೀಕೆ	ಕೇಶವವರ್ಣಿ	1359	
7	ಚಿಕ್ಕ ಶ್ರಾವಕಾಚಾರ	ಅಜ್ಞಾತ	1400	
8	ಚೂಡಾಮಣಿ ವ್ಯಾಖ್ಯಾನ	ತುಂಬಲೂರು ನಾಮಾಚಾರ್ಯ (ಶ್ರೀ ವರ್ಧದೇವ)	ಸು. 650	ಉಲ್ಲೇಖ ಮಾತ್ರ
9	‡ಜಿನಮುನಿತನಯ	ನೂತ್ನ ನಾಗಚಂದ್ರ	1650	
10	‡ಜೈನಧರ್ಮ ಪರಿಭಾಷೆ	ಪಂಡಿತ ಮಹಾದೇವ ಪ್ರಭಾಕರ ಪೂಜಾರ	1884	
11	ತತ್ವಾರ್ಥ ಸೂತ್ರಕ್ಕೆ ಕನ್ನಡ ಟೀಕೆ	ದಿವಾಕರಣಂದಿ	1062	
12	ತತ್ವಾರ್ಥ	ಬಾಲಚಂದ್ರ	1170	
13	ತ್ರಿಭುವನ ಕೋಶ	ಅಜ್ಞಾತ	1400	
14	‡ತ್ರಿಲೋಕನ ಶತಕ	ರತ್ನಾಕರ	1557	
15	‡ತ್ರೈಲೋಕ್ಯ ಚೂಡಾಮಣಿ (ಶತಕ)			
16	ದ್ರವ್ಯ ಸಂಗ್ರಹ ಸೂತ್ರಕ್ಕೆ ಟೀಕೆ	ಬಾಳಚಂದ್ರ ಪಂಡಿತ	1273	
17	‡ನಿಗಮ ಸಾರಾಮೃತ	ಪದ್ಮನಾಭ ಮಹಾರಾಜಾಮೃತ	1880	
18	ಪರಮಾತ್ಮ ಪ್ರಕಾಶಿಕೆ	ಬಾಲಚಂದ್ರ	1170	
19	‡ಪರಮಾಗಮಸಾರ	ಚಂದ್ರಕೀರ್ತಿ	1400	
20	ಪಂಚಾಸ್ತಿಕಾಯ	ಪದ್ಮಪ್ರಭ	1300	
21	ಪ್ರಾಭೃತಕ ತ್ರಯ	ಬಾಲಚಂದ್ರ	1170	
22	(ಪೂಜ್ಯಪಾದರ) ಸಮಾಧಿ ಶತಕಕ್ಕೆ ಟೀಕೆ	ಮೇಘಚಂದ್ರ	1148	
23	‡ಮಹಾಪುರಾಣ	ಪಂಡಿತ ಬ್ರಹ್ಮಸೂರಿ ಪದ್ಮರಾಜ	1850	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
24	ಲೋಕಸ್ವರೂಪ	ಸಿಂಹರಾಜ	1650	
25	ಶಾಸ್ತ್ರಸಾರ (ಗ್ರಂಥ ಸಿಕ್ಕಿಲ್ಲ)	ವೃತ್ತವಿಲಾಸ	1360	
2	ವೀರಶೈವ			
1	ಅಷ್ಟಾವರಣ ಸ್ತೋತ್ರ ತ್ರಿವಿಧಿ	ಸಿದ್ಧರಾಮ		
2	‡ಅನುಭವ ಮುದ್ರೆ (ವೀರಶೈವ ಸಿದ್ಧಾಂತ)	ಶಾಂತಮಲ್ಲ	1650	
3	ಅಷ್ಟಾವರಣ ತಿಲಕ	ಮಹಮೂರ್ತಿ	1772	
4	‡ಏಕೋತ್ತರ ಶತಸ್ಥಲ	ಮಹಾಲಿಂಗದೇವ	1425	
5	‡ಕೈವಲ್ಯ ಕಲ್ಪವಲ್ಲರಿ (ಅಧ್ಯಾತ್ಮ ಸುಖಬೋಧೆ)	ಸಪ್ಪಣ್ಣ	1700	
6	‡ಗಣ ಭಾಷ್ಯ ರತ್ನಮಾಲೆ	ಗುಬ್ಬಿಯ (ಮಲ್ಲಣ್ಣ) ಮಲ್ಲಣಾರ್ಯ	1475	
7	‡ತ್ರಿವಿಧಿ	ಕರಸ್ಥಲದ ನಾಗಿದೇವ	1430	
8	‡ದೀಕ್ಷಾ ಬೋಧೆ	ಕೆರೆಯ ಪದ್ಮರಸ		
9	ನೀತಿ ವೇದಾಂತ	ಮುರಿಗೆಯ ಶಾಂತವೀರ	1700	
10	‡ನೂರೊಂದು ಸ್ಥಲ	ಜಕ್ಕಣಾರ್ಯ	1430	
11	ಪರಮ ಮೂಲ ಷಟ್‌ಸ್ಥಲ ಜ್ಞಾನವಚನ	ಚಿಕ್ಕವೀರಯ್ಯ	1300	
12	ಪರಮತ ಖಂಡನ	ನೀಲಕಂಠಾರಾಧ್ಯ	1500	
13	ಪಂಚಬ್ರಹ್ಮೋದಯ ಭಾಷ್ಯ	ಸಾಸಲ ಚಿಕ್ಕಣಾರಾಧ್ಯ	1450	
14	ಪದ್ಯ ಗಣಸಹಸ್ರಧಾಮ	ನರಸಾರ್ಯ	1600	(ಬ್ರಾಹ್ಮಣ ಕವಿ ಎಂದು ಕವಿಚರಿತೆ)
15	‡ಪ್ರಭುದೇವರ ಷಟ್‌ಸ್ಥಲ ಜ್ಞಾನ ಚಾರಿತ್ರ ವಚನದ ಟೀಕೆ (ಷಟ್‌ಸ್ಥಲ ವಿವೇಕ)	ಮಹಾಲಿಂಗದೇವ	1425	
16	ಪ್ರಾಣಲಿಂಗಶತಕ	ಗುರುವ	1700	ವೀರಶೈವ ಸಿದ್ಧಾಂತ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
17	‡ಮುಕ್ತ್ಯಂಗನೆಯ ಕಂಠಮಾಲೆ	ಸ್ವತಂತ್ರ ಸಿದ್ಧ ಲಿಂಗೇಶ್ವರ	1480	
18	‡ಲಿಂಗಲೀಲಾವಿಲಾಸ ಚಾರಿತ್ರ [ಪ್ರಭುದೇವರ ಮಂತ್ರ ಗೋಪ್ಯದ ಟೀಕೆ]	ಕಲ್ಲು ಮಠದ ಪ್ರಭುದೇವರು	1430	
19	ವಚನಗಳು	ಕರಸ್ಥಲದ ನಾಗಿದೇವ	1430	
20	‡ವೀರಶೈವಾಮೃತ ಪುರಾಣ	ಗುಬ್ಬಿಯ ಮಲ್ಲಣಾರ್ಯ	1513	
21	ವೈಷ್ಣವ ವಾದ ಖಂಡನ	ನಂಜನಾಥಾಚಾರ್ಯ	1500	
22	ಶಿವಶರಣರ ವಚನಗಳು			ಶೂನ್ಯ ಸಂಪಾದನೆಗಳು (5 ?)
23	ಶಿವಯೋಗ ರತ್ನಾಕರ	ಹುಬ್ಬಳ್ಳಿಯ ಸಂಗಯ್ಯ	1700	
24	‡ಶಿವತತ್ವ ಚಿಂತಾಮಣಿ			
25	‡ಶಿವಾಧವ ಶತಕ	ಮಗ್ಗೆಯ ಮಾಯಿದೇವ	1430	
26	‡ಷಡಕ್ಷರ ಕಂದ	ಕೊಂಡಗೊಳಿ ಕೇಶಿರಾಜ		
27	‡ಷಟ್ಸ್ಥಲ ಜ್ಞಾನ ಸಾರಾಮೃತ	ತೋಂಟದ ಸಿದ್ಧಲಿಂಗಯತಿ	1470	
28	ಷಟ್ಸ್ಥಲ ತಿಲಕ	ಸಿದ್ಧರಾಮಯೋಗಿ	1656	
29	ಷಟ್ಸ್ಥಲ ಸಿದ್ಧಾಂತಸಾರ	ಮೈಲಾರ ಬಸವಲಿಂಗ		
30	‡ಸ್ವತಂತ್ರ ಸಿದ್ಧ ಲಿಂಗೇಶ್ವರರ ವಚನ	ಸ್ವತಂತ್ರ ಸಿದ್ಧ-ಲಿಂಗೇಶ್ವರ	1480	
	೩. ವೈದಿಕ			
1	‡ಅನುಭವಸಾರ	ನಿಜಗುಣ ಶಿವಯೋಗಿ	1500 (?)	
2	‡ಅನುಭವಾಮೃತ	ರಂಗನಾಥ(ಮಹಲಿಂಗರಂಗ)	1675	
3	‡ಅನುಭವರಸಾಯನ	ಶಾಲ್ಯದಕೃಷ್ಣರಾಜ	1175	
4	ಅಖಂಡಾನಂದ ಸ್ವರೂಪ	ವೆಂಕಟದಾಸ	1750	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
5	ಅರ್ಥ ಪಂಚಕ (ಅನುವಾದ)	ಚಿಕ್ಕುಪಾಧ್ಯಾಯ	1672	
6	‡ಕನ್ನಡ ಪಂಚೀಕರಣ ವೇದಾಂತ	ನಿರ್ವಾಣ ಶಿವಯೋಗಿ	1893	
7	‡ಕೈವಲ್ಯ ಪದ್ಧತಿ	ನಿಜಗುಣ ಶಿವಯೋಗಿ	1500 (?)	
8	‡ಕೈವಲ್ಯಾನ್ವಯಸಾರ	ಅವಧೂತ ಶಿವಯೋಗಿ	1750	
9	ಗಾಯತ್ರ್ಯರ್ಥ ಬೋಧಿನಿ	ಉ. ಮಂಗೀಶಯ್ಯ	1865	ಕಲ್ಲಚ್ಚು
10	ಚಂದ್ರ ಚೂಡಾಮಣಿ ಶತಕ (ಅದ್ವೈತ)	ನಾಗವರ್ಮಾಚಾರ್ಯ		
11	ಚಿದಖಂಡಾನುಭವ ಸಾರ	ಚಿದಾನಂದ	1725	
12	‡ಜೀವೇಶ್ವರ ಸಾಂಗತ್ಯ ತತ್ವದ ಸೊಬಗಿನ ಸೋನೆ	ಗೋಪಾಲಾರ್ಯ ಶಿಷ್ಯ	1750	
13	ತತ್ವತ್ರಯ ವಿವರಣ (ವಿಶಿಷ್ಟಾದ್ವೈತ)	ಶ್ರೀ ಶೈಲಾರ್ಯ	1700	ಅನುವಾದ (?)
14	ತತ್ವದ ಸೊಬಗಿನ ಸೋನೆ			
15	‡ತತ್ವ ಚೌಪದ (ಅದ್ವೈತ)	ಪರಮದೇವ	1777	
16	ತತ್ತ್ವದ ಕೀರ್ತನೆಗಳು	ಗುರುಕೃಷ್ಣ		
17	‡ತತ್ತ್ವದ ಪದಗಳು (ಅದ್ವೈತ)	ಶಿಶುನಾಳ ಷರೀಫ್ ಸಾಹೇಬರು		
18	‡ತತ್ತ್ವಾನು ಸಂಧಾನ (ವೇದಾಂತ)	ಭೀಮಾವಧೂತ	1899	
19	ತತ್ವಚಿಂತಾಮಣಿ	ಚಿದಾನಂದಾವಧೂತ	1750	
20	ತಿರುವೇಂಗಡಾಚಾರ್ಯಶತಕ	ಕೇಶವ	1750	
21	‡ನಿಜದೀಪಿಕಾರತ್ನ	ಶಾಲ್ಯದ ಕೃಷ್ಣರಾಜ	1775	
22	‡ಪರಮಾರ್ಥಗೀತೆ	ನಿಜಗುಣ ಶಿವಯೋಗಿ	1500 (?)	
23	ಪರಮಾನುಭವಬೋಧೆ	ನಿಜಗುಣ ಶಿವಯೋಗಿ	1500 (?)	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
24	ಪಂಚೀಕರಣ	ಚಿದಾನಂದಾವಧೂತ	1750	
25	ಪರಬ್ರಹ್ಮ ಪ್ರಕಾಶಿಕೆ	ತಿಮ್ಮಪ್ಪದಾಸ	1850	
26	‡ಪೌರುಷ ಪ್ರಕಾಶವೆಂಬ ಶ್ರೀ ಜ್ಞಾನವಾಸಿಷ್ಠ ಸಾರವು	ನರಸಿಂಹ ಪೌರಾಣಿಕ	1898	
27	‡ಪ್ರಶ್ನೋತ್ತರ ರತ್ನ ಮಾಲಿಕೆ	ಮೈಸೂರು ಸಿ. ಶಿವ ಶಂಕರ ಶಾಸ್ತ್ರಿ	1899	
28	ಪ್ರಶ್ನೋತ್ತರ ರತ್ನಮಾಲಿಕೆ	ಶಿವಕೋಟಿಯ ಕನ್ನಡ ಟೀಕೆ	ಪ್ರಾಚೀನ ?	ಹಸ್ತಪ್ರತಿ. ಸು. 12ನೇ ಶತಮಾನ
29	ಪ್ರಾಣೇಶ್ವರ ಶತಕ	ಶಾಲ್ಯದ ಕೃಷ್ಣರಾಜ	1775	
30	ಭಗವದ್ಗೀತೆ	ನಾಗರಸ	1650	ಅನುವಾದ
31	ಭಗವದ್ಗೀತೆ (ಮಧ್ವಭಾಷ್ಯಾನುಸಾರ)	ನೈರಕ್ಷರಸುಕುಕ್ಷಿ	1750	
32	‡ಭಗವದ್ಗೀತಾ	ಚಾರ್ಲ್ಸ್ ವಿಲ್ಸನ್ ಗ್ಯಾರೇಟ್ ಜಾನ್	1846–48	
32a	‡ಬ್ರಹ್ಮಾನಂದ ಬೋಧೆ	ಮೈಸೂರು ವೇದಾಂತ ಶಿವರಾಮ ಶಾಸ್ತ್ರಿಗಳು		
33	ಬಿನ್ನಪ (ವಿಶಿಷ್ಟಾದ್ವೈತ)	ಚಿಕ್ಕದೇವರಾಜ	1672-1704	ಗದ್ಯಪದ್ಯ
34	ಮಹೀಪತಿ ದಾಸರ ಕೀರ್ತನೆಗಳು	ಮಹೀಪತಿದಾಸ	ಸು. 1610-80	
35	ಮನಸ್ಮೃತಿಯು	ಅನುವಾದ (ಟೀಕೆಯೊಡನೆ) ಭಾಗವತ ಕೃಷ್ಣಾಜಿ ಬಿಷ್ಟೋ	1884	
36	ಯಜುರ್ವೇದ ಭಾಷ್ಯಕ್ಕೆ ಟೀಕೆ	ಗುರುಸಂಜ	1500	
37	‡ವಿವೇಕಾಭರಣ	ಶಾಲ್ಯದ ಕೃಷ್ಣರಾಜ	1775	
38	ವೇದಾಂತ ವಿವೇಕಸಾರ	ವಾಸುದೇವಾರ್ಯ	1750	ವಾಸುದೇವಯತಿ ಕೃತ ಸಂಸ್ಕೃತ ಗ್ರಂಥದ ಕನ್ನಡ ಅನುವಾದ

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
39	‡ವೇದಾಂತ ಮುಕ್ತಿಮಾರ್ಗ	ಮೈಸೂರು-ವೇದಾಂತ ಶಿವರಾಮ ಶಾಸ್ತ್ರಿಗಳು	?	
40	‡ಶಂಕರಾನಂದ ತತ್ತ್ವ	– ,, –	?	
41	‡ಶ್ರೀ ವಾಸುದೇವ ಮನನ	ದೊಡ್ಡಬೆಲೆ ನಾರಾಯಣ ಶಾಸ್ತ್ರಿ	1897	
42	ಸದಾಶಿವ ಶತಕ	ಶಾಲ್ಯದ ಕೃಷ್ಣರಾಜ	1775	
43	ಸಾತ್ವಿಕ ಬ್ರಹ್ಮ ವಿದ್ಯಾ ವಿಲಾಸ	ಚಿಕ್ಕುಪಾಧ್ಯಾಯ	1672	
44	ಸಾತ್ವಿಕ ಬ್ರಹ್ಮ ವಿದ್ಯಾ ವಿಲಾಸ	ರಂಗರಾಜ	1650	ಅನುವಾದ (ಗದ್ಯ)
45	‡ಹದಿಬದೆಯ ಧರ್ಮ	ಹೊನ್ನಮ್ಮ	1680 (ಸು)	
46	‡ಹರಿ ಕಥಾಮೃತಸಾರ (ಹರಿಸ್ತುತಿ, ದ್ವೈತ ವೇದಾಂತ ಬೋಧಕ)	ಜಗನ್ನಾಥದಾಸ		
47	‡ಹಿಂದೂಧರ್ಮ ಶಾಸ್ತ್ರವು	ಚಿನ್ನಮುಳಗುಂದ ಹಣಮಂತ ವೆಂಕಟೇಶ	1896	
48	‡ಜ್ಞಾನಸಿಂಧು	ಚಿದಾನಂದಾವಧೂತ	1750	

15. ನೀತಿಶಾಸ್ತ್ರ

1	‡ಅರ್ಧೇಂದು ಮೌಳಿಶತಕ	ಗುಮ್ಮಟಾರ್ಯ	1500	
2	ಅನುಭವ ಶತಕ	ಶಾಂತವೃಷಭೇಶ	1700	
3	‡ಅಪರಾಜಿತೇಶ್ವರ ಶತಕ ಮತ್ತು ಹಾಡುಗಳು ; ರತ್ನಾಕರಾಧೀಶ್ವರ ಶತಕ	ರತ್ನಾಕರವರ್ಣಿ	1557	
4	‡ಕಾಮಂದಕ ನೀತಿ	ಚಿಕ್ಕುಪಾಧ್ಯಾಯ	1672	
5	‡ಚಿನ್ಮಯ ಚಿಂತಾಮಣಿ	ಸಿಂಹರಾಜ	1650	
6	ನೀತಿ ಕಂದಗಳು	ಬೊಪ್ಪಣ ಪಂಡಿತ	1180	

ಕ್ರಮ ಸಂಖ್ಯೆ	ಗ್ರಂಥದ ಹೆಸರು	ಕವಿಯ ಹೆಸರು	ಕಾಲ	ವಿಷಯ, ಮುಂತಾದ ವಿವರಗಳು
7	ನೀತಿ ಬೋಧಕ ಪದ್ಯಗಳು	ಬಿರುದುಗಳುಳ್ಳ ಕೆಲವು ಕವಿಗಳು	1500	
8	ನೀತಿ ರಸಾಯನ ಶತಕ	,,	1500	
9	‡ನೀತಿ ಸಾರ	ಜ್ಞಾನೇಶ್ವರ ಪಂಡಿತ	1895	
10	‡ನೀತಿ ಮಂಜರಿ	ಆರ್. ನರಸಿಂಹಾಚಾರ್ (1860-1936)	1896	ತಮಿಳು, ಇತಿಹಾಸ ಪುರಾಣಗಳಿಗೆ ಆಯ್ದವು
11	‡ನೀತಿವಾಕ್ಯ ಮಂಜರಿ	,,	1887	
12	ನೀತಿ ವಾಕ್ಯಾಮೃತಕ್ಕೆ ಟೀಕೆ	ಸೋಮದೇವ... (ಟೀಕೆ-ನೇಮನಾಥ)	1100	ಹಸ್ತಪ್ರತಿ
13	ಪಾರ್ವತೀವಲ್ಲಭ ಶತಕ, ಮುಂತಾದ ಕೆಲವು ಶತಕಗಳು	ವೀರಭದ್ರರಾಜ	1530	
14	‡ಮರಣ ಮಣಿದರ್ಪಣ ಶತಕ	ಶಾಂತಾಚಾರ್ಯ	1700	
15	ಶೀಲ ಸಂಪಾದನೆ	ಪಾಲ್ಕುರಿಕೆ ಸೋಮ	?	
16	‡ಸರ್ವಜ್ಞನ ವಚನಗಳು (ನೀತಿಪದ ಪದ್ಯಗಳು)	ಸರ್ವಜ್ಞ	1600 (?)	
17	‡ಸಿದ್ಧ–ನೀತಿ	ಸಿದ್ದಪ್ಪ	1700	
18	ಸುವಿಚಾರ ಚರಿತೆ	ನೇಮಿವ್ರತಿ	1650	
19	‡ಸೋಮೇಶ್ವರ ಶತಕ	ಪಾಲ್ಕುರಿಕೆ ಸೋಮ	?	

16. ಪತ್ರಿಕೋದ್ಯಮ ಶಾಸ್ತ್ರ

1	ಪತ್ರಿಕಾ ನಿಘಂಟು	ಸಂ. ಎಲ್. ಗುಂಡಪ್ಪ	?	
2	ಪತ್ರಿಕೆಗಳ ಚರಿತ್ರೆ, ಕರ್ತವ್ಯ ಪ್ರಭಾವ	ಡಿ. ವಿ. ಜಿ. (1889–1975)	1928	

17. ಶಿಲ್ಪಶಾಸ್ತ್ರ

1	ಶಿಲ್ಪಸಾರ	ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿ	1948	ಭಾಮಿನೀ ಷಟ್ಪದಿ

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಒಂದು ಸಾವಿರ ವರ್ಷಕ್ಕೂ ಮೀರಿದ ಕನ್ನಡ ಸಾಹಿತ್ಯದ ಇತಿಹಾಸವನ್ನು ಸರಳವಾಗಿ, ನಿರ್ದುಷ್ಟವಾಗಿ ಮತ್ತು ಆಕರ್ಷಕವಾಗಿ, ಸಾಮಾನ್ಯರಿಗೆ ಪರಿಚಯ ಮಾಡಿಕೊಡ ಬೇಕೆಂಬುದೇ ಈ ಸಂಪುಟಗಳ ಉದ್ದೇಶ. ಇಲ್ಲಿ 'ಸಾಮಾನ್ಯರು' ಎಂದರೆ, ವಿದ್ವಾಂಸರಲ್ಲದ, ಆದರೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಬಗೆಗೆ ತಕ್ಕಮಟ್ಟಿಗೆ ಆಸಕ್ತಿ-ಅಭಿರುಚಿ ಯನ್ನುಳ್ಳ ಓದುಗರು ಎಂದು ಅರ್ಥ.

ಈ ಹತ್ತು ಸಂಪುಟಗಳ ವಿಶೇಷವೆಂದರೆ, ಇಡೀ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಚಂಪೂ, ಶಾಸ್ತ್ರ ಸಾಹಿತ್ಯ, ವಚನ, ಷಟ್ಪದಿ ಹೀಗೆ ಪ್ರಮುಖವಾದ ಸಾಹಿತ್ಯ ರೂಪಗಳನ್ನು ಮೂಲಮಾನವನ್ನಾಗಿ ಮಾಡಿಕೊಂಡು ಬರೆದದ್ದು ಇದೇ ಮೊದಲು. ಮತ್ತು ಈ ಬರವಣಿಗೆ ಸಾಧ್ಯವಾದಮಟ್ಟಿಗೆ ಇದುವರೆಗೂ ಉಪಲಬ್ಧವಾದ ಸಾಮಗ್ರಿಯನ್ನು ಬಳಸಿ ಕೊಳ್ಳುವುದಲ್ಲದೆ, ಕೆಲವು ಸಂಪುಟಗಳಲ್ಲಿ ಹೊಸ ದೃಷ್ಟಿಕೋನವನ್ನೂ ಪ್ರತಿಪಾದಿಸುವಂತೆ ರಚಿತವಾಗಿದೆ. ಈ ಹತ್ತು ಕಿರು ಸಂಪುಟಗಳನ್ನು ಓದಿದ ಯಾರಿಗಾದರೂ, ಕನ್ನಡ ಸಾಹಿತ್ಯದ ಸಾಧನೆಯ ಪರಿಚಯ ತಕ್ಕಮಟ್ಟಿಗೆ ಆಗುವುದೆಂಬುದರಲ್ಲಿ ಅನುಮಾನವಿಲ್ಲ.

ಸಂಪುಟಗಳ ವಿವರ

ಸಂಪುಟ	1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ	2	ಶಾಸನ ಮತ್ತು ಗದ್ಯ	...	ಹಾ. ಮಾ. ಜಯದೇವ್
ಸಂಪುಟ	3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ	4	ಚಂಪೂ ಕವಿಗಳು	...	ಪಿ. ವಿ. ನಾರಾಯಣ
ಸಂಪುಟ	5	ವಚನ ಸಾಹಿತ್ಯ	...	ಎಂ. ಚಿದಾನಂದ ಮೂರ್ತಿ
ಸಂಪುಟ	6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ದಪ್ಪ
ಸಂಪುಟ	7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ	8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ	9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ	10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು